# ಕ್ರೈಸ್ತ ಸಭಾ ಪತ್ರವು.

(ಮಾಸ ಮಾಸಕ್ಕೆ ಪ್ರಕಟವಾಗುವಂಥಾದ್ದು.)

## ೧೦ನೇ ಪುಸ್ತಕವು.

K. UNIV. BIBL. TÜBINGEN

MANGALORE
Basel Mission Book & Tract Depository
1877

Ci XIV 114

ಅದೃಶ್ಯವಾದ ಪೆಟ
ಅವಿಶ್ವಾಸಿಯ ಭಂ
ಆಕಳನ್ನು ದುಡಿ
ಉತ್ತಮವಾದ
ಉತ್ತರಗಳು
ಕೆಳ್ಳನ ಜಾಡೆ ತೆಗೆ
ಕುಚೋದ್ಯಗಾರನ
ಕ್ರಿಸ್ತನ ಜನ್ಮೋತ್ಸ
ಗಾಯನ ದೇವರ
ಚೆಂದಾದಾರರಿಗೆ
ಚಿನ್ನದ ಹರಳುಗ
ಜ್ಞಾನಿಯಾಗಿದ್ದ
ದಾತೃತ್ವಶೀಲ
ದುಸ್ಸಂಗತಿ
ನಿಜ ಸುಖ.
ನಿನ್ನ ಭಯಹಸ್ತ
ಹೋಗಲಿ
ಪರೋಪಕಾರಿ
ಪೂರ್ವದಲ್ಲಿ ಆ
ಪ್ರಶ್ನೆ (ಒಂದು)

# ಅನುಕ್ರಮಣಿಕೆ.


ಪುಟ.

ಅದಹ್ಯವಾದ ಪೆಠಾರಿ . . . . ೫೦
ಅವಿಶ್ವಾಸಿಯ ಭಯ . . . . ೨೬
ಆಕಳನ್ನು ದುಡಿದು ಕೊಂಡ ಹುಡುಗ . ೧೦೦
ಉತ್ತಮುವಾದ ಪ್ರಸಂಗ . . . ೩೦
ಉತ್ತರಗಳು . . ೩೦. ೬೯. ೮೧. ೧೦೪. ೧೨೯
ಕಳ್ಳನ ಜಾಡೆ ತೆಗೆದ ಯುಕ್ತಿ . . ೧೧೨
ಕುಚೋದ್ಯಗಾರನೊಬ್ಬನ ಅವಸಾನ . ೨
ಕ್ರಿಸ್ತನ ಜನ್ಮೋತ್ಸವಕ್ಕೆ . . . ೬೧
ಗಾಯನ ದೇವರು . . . . ೧೨೧
ಚಂದಾದಾರರಿಗೆ. . . . . ೧೩೨
ಚಿನ್ನದ ಹರಳುಗಳು . . . . ೯೦
ಜ್ಞಾನಿಯಾಗಿದ್ದ ಒಕ್ಕಲಿಗ . . . ೬೪
ದಾತೃತ್ವಶೀಲ . . . . ೩೯
ದುಸ್ಸಂಗತಿ . . . . . ೬೮
ನಿಜ ಸುಖ. . . . . . ೯೮
ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ ೭೪. ೮೬. ೧೦೧. ೧೧೩. ೧೨೫. ೧೩೬
ಪರೋಪಕಾರಿಯಾದ ಒಕ್ಕಲಿಗನೊಬ್ಬನು ೯೮
ಪೂರ್ವದಲ್ಲಿ ಆದ್ದೊಂದು ತೀರ್ಪಿನ ಮಾತು ೧೩೩
ಪ್ರಶ್ನೆ (ಒಂದು) . . . . . ೧೧೧

ಪುಟ.

ಪ್ರಶ್ನೆಗಳು . . . ೬. ೪೩. ೬೯. ೯೮. ೧೨೪
ಪ್ರಾರ್ಥನೆಗೆ ಕೇಡು . . . . ೧೩೫
ಬುದ್ಧಿಮಾತು (ಎರಡು) . . . ೧೨೪
ಮಹಾ ಪ್ರೀತಿಯ ಕಾರ್ಯ. . . ೧೨೭
ಮಿತ್ರನ್ ಗೀತಗಳು (ಎರಡು) . . ೯೭
ಮಿತ್ರನ ಹಬ್ಬ (ಕನ್ನಡ ಜಿಲ್ಲೆಯ) . . ೭೮
ಮುದಿ ಮೊಖಲ್ . ೩. ೧೩. ೨೮. ೪೦. ೫೫. ೬೫
ಯಾರ ತಪ್ಪು . . . . . ೯೧
ವಿಪರೀತ ಪರೀಕ್ಷೆ . . . . ೬೭
ವಿವಿಧ ವರ್ತಮಾನಗಳು ೬. ೧೬. ೩೧. ೪೩. ೫೭. ೬೯. ೮೧. ೯೩. ೧೦೪. ೧೧೭. ೧೨೯. ೧೪೧
ಸಂತೋಷಂ ಪರಮಂ ಧನಂ ೨೫. ೩೭. ೪೯. ೬೧. ೭೩. ೮೫
ಸಂಭಾವಣೆ . . . . . ೬೨
ಸತ್ಕ್ರೈಸ್ತರ ದಿಕ್ಕು . . . . ೧
ಸತ್ಯವೆಂಬದು ಸದ್ಭಕ್ತರ ಲಕ್ಷಣ . . ೧೩
ಸತ್ಯವೇದದ ಗಣಿತವಿದ್ಯೆ . . . ೧೧೧
ಸನ್ಮಿತ್ರನಾದವನೊಬ್ಬನು . . . ೫೩
ಹೊಲದಲ್ಲಿ ಬಚ್ಚಿಟ್ಟ ದ್ರವ್ಯ . . . ೯೮. ೧೦೯

# ಕ್ರೈಸ್ತಸಭಾಪತ್ರ

ಪುಸ್ತಕ ೯. JANUARY 1877. ಅಂಕೆ ೭.

ಅಡಕವು: ಪ್ರಾರ್ಥನಾಬೋಧಕಶಾಸ್ತ್ರಸಾರವು—ಈಗಿನ ಕಾಲದ ಅವಿಶ್ವಾಸಿಗಳಾದ ಪಂಡಿತರ ವಿದ್ಯಾತಿಶಯವು — ಅನ್‍ಸಲ್ಮೊ—ಡಿಲ್ಲಿ — ಪಾಪನು ತಪ್ಪದವನೋ? ದಪ್ಪದವನೋ? —ಉತ್ತರಗಳು—ಹೊಸ ಪ್ರಶ್ನೆಗಳು— ವಿವಿಧ ವರ್ತಮಾನಗಳು.

## ಪ್ರಾರ್ಥನಾಬೋಧಕಶಾಸ್ತ್ರಸಾರವು.

(೬ನೇ ಪಾನಿನಿಂದ ಮುಂದೆ.)

ಪ್ರಾರ್ಥನೆಗೆ ಅಂಗಳವೆಂಬಂತಾದ ಆಯತ್ತವಾಗೋಣವು (ಸನ್ನಾಹವು) ಏನೆಂತ ದೇವಾಲಯದ ಅಂಗಳದಲ್ಲಿ ನಡೆಯುತ್ತಿದ್ದದನ್ನು ನೋಡಿ ತಿಳುಕೊಳ್ಳ ಬಹುದು. ಆ ಅಂಗಳದಲ್ಲಿ ದೊಡ್ಡ ದಹನಬಲಿಪೀಠವು, ಅದಕ್ಕೂ ಪವಿತ್ರ ಗೃಹಕ್ಕೂ ನಡುವೆಯಲ್ಲಿ ದೊಡ್ಡ ಗಂಗಾಳವು ಇತ್ತು. ಆ ಗಂಗಾಳವು ಯಾವಾಗಲೂ ನೀರಿನಿಂದ ತುಂಬಿತ್ತು. ಪವಿತ್ರ ಗೃಹವನ್ನು ಪ್ರವೇಶಿಸುವ ಮೊದಲು ಯಾಜಕರು ಅದರಲ್ಲಿ ತಮ್ಮ ಹಸ್ತ ಪಾದಾದಿಗಳನ್ನು ತೊಳಕೊಳ್ಳ ಬೇಕಿತ್ತು. ಹಾಗೆಯೇ ನಾವೂ ಎಲ್ಲಾ ಪಾಪದ ಕಸವನ್ನೂ ಕಳಂಕವನ್ನೂ ತೊಳದು, ತೆಗೆದಾಕಿ, ಶುದ್ಧರಾಗಿ, ಪ್ರಾರ್ಥನೆ ಮಾಡುವದಕ್ಕಾಗಿ ದೇವರ ಗೊಡವೆಯನ್ನು ಹುಡುಕಿ, ಆತನ ಸನ್ನಿಧಿಗೆ ಬರ ಬೇಕು. ತಮ್ಮನ್ನು ತೊಳಕೊಂಡ ಮೇಲೆ ಯಾಜಕರು ಪವಿತ್ರ ವಸ್ತ್ರಾಲಂಕಾರವನ್ನು ಹಾಕಿ ಕೊಂಡಂತೆ, ನಾವು ಸಹಾ ಪವಿತ್ರ ವಸ್ತ್ರಾಲಂಕಾರ ಧರಿಸಿ ಕೊಂಡು ಬರ ಬೇಕು. ಈ ಪವಿತ್ರ ವಸ್ತ್ರಾಲಂಕಾರವು ಯೇಸು ಕ್ರಿಸ್ತನ ನೀತಿಯೇ. ಈ ನೀತಿಯನ್ನು ಆತನು ಪಾಪನಿವಾರಣಾರ್ಥಕ ಮರಣವನ್ನು ತಾಳಿದ್ದರಲ್ಲಿಯೇ ದೊರಕಿಸಿದ್ದಾನೆ. ಯಾಜಕರು ದೊಡ್ಡ ದಹನಬಲಿಪೀಠದಲ್ಲಿ ಅರ್ಪಣೆಯಾದ್ದರ ಆಧಾರದಿಂದ ಮಾತ್ರ ಪವಿತ್ರ ಗೃಹದಲ್ಲಿ ಶೇರ ಬಹುದಿತ್ತು. ಹಾಗೆಯೇ ನಾವು ಸಹಾ ಯೇಸುವು ನಮಗೋಸ್ಕರ ಅರ್ಪಣೆಯಾದ್ದರ ಆಧಾರದಿಂದ ಮಾತ್ರವೇ ಪ್ರಾರ್ಥಿಸುವವರಾಗಿ ದೇವರ ಸನ್ನಿಧಿಗೆ ಬರ ಬಹುದು.

ಯಾಜಕರು ಅರ್ಪಿಸುತ್ತಿದ್ದ ಯಜ್ಞಗಳಲ್ಲಿ ಕೇವಲಾಂಗಹೋಮ, ಪಾಪಯಜ್ಞ, ದಾನಯಜ್ಞ, ಇವು ಮೂರು ಮುಖ್ಯವಾದವುಗಳಾಗಿದ್ದವು. ಯಾಜಕರೂ ಪ್ರಜೆಗಳೂ ಇವುಗಳನ್ನು ಸರಿಯಾಗಿ ಅರ್ಪಿಸುತ್ತಿದ್ದ ಪಕ್ಷದಲ್ಲಿ ಮಾತ್ರ ಪವಿತ್ರ ಗೃಹದಲ್ಲಿ ಪ್ರವೇಶಿಸುವದಕ್ಕೆ ಅಡ್ಡಿಯಿಲ್ಲದ ಮಾರ್ಗವಿತ್ತು. ಸದರಿ ಯಜ್ಞಗಳು ಮುಂಗುರ್ತುಗಳಾಗಿ ಸೂಚಿಸಿದ ಕಾರ್ಯಗಳು ನಮ್ಮಲ್ಲಿ ಆಗದ ಪಕ್ಷಕ್ಕೆ ನಾವು ಸರಿಯಾಗಿ ಪ್ರಾರ್ಥಿಸಲಾರೆವು.

ಕೇವಲಾಂಗಹೋಮಗಳು ಕೇವಲವಾಗಿ, ಅಂದರೆ ಪೂರ್ಣವಾಗಿ, ದಹನವಾಗ ಬೇಕಿತ್ತು. ನಿತ್ಯ ಹೋಮಗಳು, ಅಂದರೆ ದಿನದಿನಕ್ಕೆ ಎರಡಾವರ್ತಿ ಪ್ರಾತಃಕಾಲಕ್ಕೂ ಸಾಯಂಕಾಲಕ್ಕೂ ಅರ್ಪಣೆಯಾದವುಗಳು, ಅಂಥಾ ಕೇವಲಾಂಗಹೋಮಗಳಾಗಿದ್ದವು. ಅನುದಿನ ಪ್ರಾತಃಕಾಲಕ್ಕೂ ಸಾಯಂಕಾಲಕ್ಕೂ ಒಂದೊಂದು ಕುರಿಮರಿ ಹೋಮವಾಗಿ, ಪೂರ್ಣ ಸಾಂಗೋಪಾಂಗವಾಗಿ ದಹನವಾಗುತ್ತಿತ್ತು. ನಾವು ನಮ್ಮನ್ನೂ ನಮ್ಮ ಸರ್ವಸ್ವವನ್ನೂ ಕೇವಲವಾಗಿ ಕರ್ತನಿಗೆ ಒಪ್ಪಿಸಿ ಕೊಟ್ಟು, ಅರ್ಪಣೆ ಮಾಡ ಬೇಕೆಂಬದು ಆ ಕೇವಲಾಂಗಹೋಮಗಳಲ್ಲಿ ಕಾಣಿಸಿ ಅದೆ. ನಮ್ಮ ಈ ತರದ ಅರ್ಪಣೆ ವಿಶೇಷವಾಗಿ ಆದಿತ್ಯವಾರಗಳಲ್ಲಿಯೂ ನಮ್ಮ ಹಬ್ಬದಿನಗಳಲ್ಲಿಯೂ ಆಗ ತಕ್ಕದಾಗಿದೆ. ಸಬ್ಬತ್ ದಿನಗಳಲ್ಲಿ ಎರಡೆರಡು, ಹಬ್ಬಗಳಲ್ಲಿ ಹೆಚ್ಚು, ಅನೇಕವಾದರೂ ಸಹಾ, ಕುರಿಮರಿಗಳು ಹಾಗೆ ಕೇವಲಾಂಗ ಹೋಮಗಳಾಗಿ ಅರ್ಪಣೆಯಾಗ ಬೇಕಿತ್ತು. ಅದೇ ಪ್ರಕಾರ ನಾವು ಸಹಾ ಆದಿತ್ಯವಾರಗಳಲ್ಲಿಯೂ ನಮ್ಮ ಕ್ರೈಸ್ತ ಹಬ್ಬದಿನಗಳಲ್ಲಿಯೂ ಹೆಚ್ಚು ಚುರುಕಾಗಿಯೂ ಹೆಚ್ಚು ಹೊತ್ತಾಗಿಯೂ ಪ್ರಾರ್ಥಿಸಿ, ಕರ್ತನ ದರ್ಶನ ಹುಡುಕಿ, ನಮ್ಮನ್ನು ಆತನಿಗೆ ಒಪ್ಪಿಸಿ ಕೊಳ್ಳ ತಕ್ಕದು. ಆದರೆ ಕೇವಲಾಂಗ ಹೋಮಗಳ ಬೆಂಕಿಯು ಎಂದಿಗೂ ಆರಿ ಹೋಗದೆ, ನಿತ್ಯಾ ಹಗಲಿರುಳಲ್ಲಿ ಉರಿಯುತ್ತಿರ ಬೇಕಿತ್ತು. ಅದರಂತೆ ಪ್ರಾರ್ಥನಾಸಕ್ತಿಯೂ ಪವಿತ್ರಾತ್ಮನ ಪ್ರೇರಣೆಯೂ ನಮ್ಮಲ್ಲಿ ನಿತ್ಯಾ ಬಲವಾಗಿರ ಬೇಕು. ಯಾವಾಗಾದರೂ ಒಮ್ಮೆ ಮಾತ್ರವಲ್ಲಾ, ಯಾವಾಗಲೂ, ಎಡೆಬಿಡದೆ ನಾವು ಪ್ರಾರ್ಥಿಸುವವರಾಗಿರ ಬೇಕು, ಅಂದರೆ ನಮ್ಮ ಇಡೀ ಮನೋಭಾವವು ಪ್ರಾರ್ಥಿಸುವಂಥ ಪ್ರಕಾರದಲ್ಲಿರ ಬೇಕು. ಆ ಬೆಂಕಿಯಾರಿ ಹೋಗದ ಹಾಗೆ ನೋಡ ಬೇಕಾಗಿದ್ದ ಯಾಜಕನು ಬಿಡದೆ ಬೆಂಕಿಯ ಬದೀಲಿ ನಿಂತು ಕೊಂಡಿರ ಬೇಕೆಂಬ ಮಾತಿದ್ದಿಲ್ಲಾ: ಆರದ ಹಾಗೆ ನೋಡಿ ಮಾಡಿದರೆ, ಬೇರೆ ಕೆಲಸಗಳಿಗೂ ಹೋಗಿ ಕೈ ಹಾಕಲಿಕ್ಕೆ ಅವನಿಗೇನೂ ಅಡ್ಡಿಯಿದ್ದಿಲ್ಲಾ. ಹಾಗೆ ನಾವು ಸಹಾ ಬೇಕಾದ ಜಂಬರಕ್ಕೆ ಹೋಗಿ, ಬೇಕಾದ ಕೆಲಸಗಳನ್ನು ಸಾಗಿಸ ಬಹುದು. ಯಾವಾಗಲೂ ಕೈಗಳನ್ನು ಜೋಡಿಸಿ ಕೊಂಡು, ನಿಂತು ಕೊಂಡು, ಅಥವಾ ಮೊಣಕಾಲೂರಿ ಕೊಂಡು ಇರ ಬೇಕೆಂಬುವ ಮಾತಿಲ್ಲವೇ ಇಲ್ಲಾ. ಪ್ರಾರ್ಥನಾಭಾವ ಎಂಬ ಉರಿ ಮನಸ್ಸಿನಲ್ಲಿ ಆರದೆ ಇದ್ದೇ ಇರ ಬೇಕಷ್ಟೇ. ಆ ಬೆಂಕಿಯಾರಿ ಹೋಗದ ಹಾಗೆ ಯಾಜಕನು ಆಗಾಗ್ಯೆ ಬೇಕಾದಂತೆ ಹೊಸ ಕಾಷ್ಠವನ್ನು ಹಾಕುತ್ತಿದ್ದ ಹಾಗೆ, ನಾವು ಸಹಾ. ಆಗಾಗ್ಯೆ ಹೆಚ್ಚಿನ ಆಸಕ್ತಿಯಿಂದ ಮೇಲೆ ನೋಡಿ, ಕರ್ತನ ದರ್ಶನವನ್ನು ಬಯಸಿ, ಪ್ರಾರ್ಥನಾಭಾವದ ಬಲವನ್ನು ಪೋಷಿಸಿ, ಹೆಚ್ಚಿಸ ಬೇಕು.

ಆದರೆ ಕೇವಲಾಂಗಹೋಮಗಳ ಹೊರ್ತಾಗಿ ದಾನಯಜ್ಞಗಳು ಸಹಾ ಆ ದೊಡ್ಡ ಯಾಗಪೀಠದಲ್ಲಿ ಅರ್ಪಣೆಯಾಗ ಬೇಕಾಯಿತು. ಒಬ್ಬ ಇಸ್ರಯೇಲ್ಯನಿಗೆ ಏನಾದರೂ ಸಂತೋಷದ್ದು ಸಂಭವಿಸಿ, ದೇವರ ಉಪಕಾರಗಳನ್ನು ನೆನಸಿ, ದೇವರನ್ನು ಮಹಿಮೆ ಪಡಿಸ ಬೇಕೆಂಬ ಮನಸ್ಸು ಹುಟ್ಟಿದ ಪಕ್ಷದಲ್ಲಿ ದೇವರಿಗೆ ದನಕರುವನ್ನಾಗಲಿ, ಆಡುಕುರಿಯನ್ನಾಗಲಿ ದಾನಯಜ್ಞವೆಂತ ತಂದು, ಅರ್ಪಣೆ ಮಾಡ ಬೇಕಿತ್ತು. ಅಂಥಾ ಕೃತಜ್ಞತಾಭಾವದ ದಾನಯಜ್ಞಗಳನ್ನು ನಾವು ಸಹಾ ಅರ್ಪಿಸ ಬೇಕು. ಯೆಹೂದ್ಯರು ದಾನಯಜ್ಞಗಳನ್ನು ಮಾಡದೆ ಹೋದದಾದರೆ, ಅಥವಾ ಮಾಡಿದರೂ, ಕ್ರಮದ ಪ್ರಕಾರ ಮಾಡಲಿಲ್ಲವಾದರೆ, ದೇವಮಂದಿರ ಅವರಿಗೆ ಅಪ್ರವೇಶ್ಯವಾಗಿ ಹೋಗುತ್ತಿತ್ತು. ಅದರಂತೆ ನಾವು ಸಹಾ ದೇವರ ಉಪಕಾರಗಳನ್ನು ನೆನಸಿ, ಮನಃಪೂರ್ವಕ ಸ್ತೋತ್ರಾರ್ಪಣೆ ಮಾಡದ ಪಕ್ಷಕ್ಕೆ ದೇವರ ಸನ್ನಿಧಿಗೆ ಬಂದು, ಸರಿಯಾಗಿ ಪ್ರಾರ್ಥಿಸಲಾರೆವು. ಕೃತಜ್ಞತಾಭಾವವೂ ಸ್ತೋತ್ರವೂ ಕೂಡಿರದ ಪ್ರಾರ್ಥನೆಯಲ್ಲಿ ಸಾರವೂ ಫಲವೂ ಇಲ್ಲಾ. "ಸ್ತೋತ್ರಾರ್ಪಣೆ ಮಾಡುವವನು ನನ್ನನ್ನು ಘನ ಪಡಿಸುತ್ತಾನೆ. ಮತ್ತು ಅದೇ ನಾನು ನನ್ನ ರಕ್ಷಣ್ಯವನ್ನು ತೋರಿಸುವ ಮಾರ್ಗವಾಗಿದೆ."

ಚೆನ್ನಾಗಿ ಪ್ರಾರ್ಥಿಸಲಿಕ್ಕೆ ಕೂಡದ ಪಕ್ಷಕ್ಕೆ, ದೇವರನ್ನು ಸ್ತುತಿಸಿ ಕೊಂಡಾಡಿದರೆ, ಮುಚ್ಚಿದಂತಿದ್ದ ದಿವದ ಬಾಗಲು ತೆರೆದ್ದಾಗಿ, ಪ್ರಾರ್ಥಿಸಲಿಕ್ಕೆ ಕೂಡುವದು. ದೇವರನ್ನು ಕೊಂಡಾಡಲಿಕ್ಕೆ ಬೇರೆ ಕಾರಣ ನಿನಗೆ ಕಾಣದಿದ್ದರೆ, ಆತನು ನಿನ್ನನ್ನು ಮನುಷ್ಯನಾಗಿಯೂ ಸರ್ವಾಂಗ ಸಂಪೂರ್ಣನಾಗಿಯೂ ಕ್ರೈಸ್ತನಾಗಿಯೂ ಹುಟ್ಟಿಸಿದಕ್ಕಾಗಿಯೂ, ನಿನಗೆ ಘಾಳಿ, ನೀರು, ಅಶನವಸನ ಒದಗಿಸಿ, ನಿನ್ನನ್ನು ಕಾಪಾಡಿ ಸಲಹುತ್ತಾ ಬರುವದಕ್ಕಾಗಿಯೂ ಕೊಂಡಾಡು. ಬರೀ ನೀರು, ಘಾಳಿ ಇದಕ್ಕಾದರೂ ನೀನು ಅಯೋಗ್ಯನಲ್ಲವೋ? ಹಾಗಾದ ಮೇಲೆ ಅದನ್ನಾದರೂ ನೆನಸಿದರೆ, ದೇವರನ್ನು ಕೊಂಡಾಡಲಿಕ್ಕೆ ನ್ಯಾಯವಿಲ್ಲವೋ? ವಿನಯಪೂರ್ವಕವಾಗಿ ದೇವರನ್ನು ಕೊಂಡಾಡ ತಿಳಿದವನು ಪ್ರಾರ್ಥಿಸಲಿಕ್ಕೂ ತಕ್ಕವನಾಗಿದ್ದಾನೆ.

ಪಾಪಯಜ್ಞಗಳು ಎಲ್ಲಾ ಯಜ್ಞಗಳಲ್ಲಿ ಮುಖ್ಯವಾದವುಗಳಾಗಿದ್ದವು. ಅವು ಬೀಗದ ಕೈ ಎಂಬ ಹಾಗೆ ಮಂದಿರದ ಬಾಗಲನ್ನು ತೆರೆದು ಕೊಡುತ್ತಿದ್ದವು. ಯೆಹೋವನ ಸನ್ನಿಧಿಗೆ ಬರಲಿಕ್ಕೆ ಅವೇ ಯಾಜಕರಿಗೂ ಪ್ರಜೆಗಳಿಗೂ ಆಸ್ಪದವನ್ನು ಕೊಟ್ಟವು. ಯಾಜಕರೂ ಪ್ರಜೆಗಳೂ ಪಾಪಿಗಳಾಗಿ ಯೆಹೋವನ ಸನ್ನಿಧಿಗೆ ಬರಲಿಕ್ಕೆ ಅಯೋಗ್ಯರೇ ಆಗಿದ್ದರು; ಆದರೆ ಪಾಪಯಜ್ಞಾಂಗಗಳ ರಕ್ತವು ಅವರ ಅಯೋಗ್ಯತೆಯನ್ನು ಮುಚ್ಚಿ, ಅಂದರೆ ಮರೆ ಮಾಡಿ ಬಿಟ್ಟು, ಅವರಿಗೆ ಬರಲಿಕ್ಕೆ ದಾರಿ ಬಿಡಿಸಿ ಕೊಡುವಂಥಾದ್ದಾಗಿತ್ತು. ಪ್ರಧಾನಯಾಜಕನಾದರೂ ದೊಡ್ಡ ಪಾಪಯಜ್ಞಾರ್ಪಣಾದಿನದಲ್ಲಿ ಅತಿ ಪವಿತ್ರ ಗೃಹವನ್ನು ಪ್ರವೇಶಿಸುವದಕ್ಕಿಂತ ಮುಂಚೆ ತನಗಾಗಿಯೂ ಉಳಿದ ಯಾಜಕರೆಲ್ಲರಿಗಾಗಿಯೂ ಒಂದು ಪಾಪಯಜ್ಞವನ್ನು ಮಾಡ ಬೇಕಿತ್ತು. ಆ ಪಾಪಯಜ್ಞದ ಆಧಾರದಿಂದ ಮಾತ್ರ ಅವನು ಯೆಹೋವನ ದರ್ಶನವನ್ನು ಅತಿಪವಿತ್ರ ಗೃಹದಲ್ಲಿ ಹೊಂದ ಬಹುದಿತ್ತು. ಆ ಪಾಪಯಜ್ಞವು ಪ್ರಜೆಗಾಗಿಯೂ ಯಾಜಕರಿಗಾಗಿಯೂ ಮಾತ್ರವಲ್ಲಾ, ಯಜ್ಞಪೀಠಕ್ಕಾಗಿಯೂ ಪವಿತ್ರ ಗೃಹಕ್ಕಾಗಿಯೂ ಅತಿಪವಿತ್ರ ಗೃಹಕ್ಕಾಗಿಯೂ ಶುದ್ಧೀಕರಣದ ಹೋಮವಾಗಿತ್ತು. ಜನರ ಪಾಪಗಳ ಸಂಬಂಧದಿಂದ ಸಮಸ್ತವು ಅಶುದ್ಧವೆಂಬ ಗಣನೆಯಲ್ಲಿತ್ತು. ಆ ಪಾಪನಿವಾರಣಾರ್ಥಕ ಯಜ್ಞದ ಬಲ ಮಾತ್ರದಿಂದ ಎಲ್ಲರೂ ಎಲ್ಲವೂ ಪುನೀತ ಸ್ಥಿತಿಗೆ ಬಂದ ಹಾಗಾಯಿತು.

ಆ ಕ್ರಮವು ಇಂದಿಗೂ ಅದೆ. ಆದರೆ ಆ ಕಾಲದ ಪಾಪನಿವಾರಕ ಯಜ್ಞಕ್ಕೂ ನಮಗೀಗಿದ್ದದಕ್ಕೂ ಹೆಚ್ಚುಕಡಿಮೆಯುಂಟು. ನಮಗಿದ್ದದು ಕಡೇದೂ ಶ್ರೇಷ್ಠವಾದಂಥಾದ್ದೂ, ಎಲ್ಲಾ ಯಜ್ಞಗಳ ಬುಡವೂ ತುದಿಯೂ ಸಂಪೂರ್ತಿಯೂ ಆದಂಥಾದ್ದೂ ಯೇಸು ಕ್ರಿಸ್ತನೆಂಬ ಯಜ್ಞಾಂಗವೇ. ಈ ಯಜ್ಞಾಂಗ ಅರ್ಪಣೆಯಾದ್ದರಲ್ಲಿ ಸದಾಕಾಲಕ್ಕೆ ಸಿದ್ಧಿಯಾಗಿ, ಎಲ್ಲಾ ಯಜ್ಞಗಳು ತೀರಿ, ಆತನಲ್ಲಿ ವಿಶ್ವಾಸವನ್ನಿಟ್ಟವರಿಗೆ ನೀತಿನಿರ್ಣಯವೂ ವಿಮೋಚನೆಯೂ ಆಗಿದೆ. ಈ ಪಾಪನಿವಾರಕ ಯಜ್ಞವು ಮಾತ್ರ ನಮಗೆ ದೇವರ ಮುಂದೆ ಬರಲಿಕ್ಕೆ ಆಧಾರವಾಗಿರುತ್ತದೆ. ಇಸ್ರಯೇಲ್ಯರು ಮಟ್ಟಮೊದಲು ಪಾಪಯಜ್ಞಾಂಗವನ್ನು ತಂದು, ಅದರ ತಲೇ ಮೇಲೆ ಕೈಗಳನ್ನಿಟ್ಟು, ಪಾಪವನ್ನು ಅರಿಕೆ ಮಾಡ ಬೇಕಿದ್ದಂತೆ ನಾವು ಸಹಾ ನಮ್ಮ ಪಾಪಗಳನ್ನು ಅರಿಕೆ ಮಾಡಿ, ಮರಣಕ್ಕೆ ಕೇವಲ ಪಾತ್ರರಾಗಿದ್ದೇವೆಂತಲೂ ತಿಳುಕೊಂಡು, ಅರಿಕೆ ಮಾಡಿ, ನಿಜ ವಿಶ್ವಾಸದಿಂದ ಯೇಸುವಿನ ಪಾಪನಿವಾರಕ ಮರಣವನ್ನು ನಮ್ಮಾಧಾರವೆಂತಲೂ ನಮ್ಮ ಪುಣ್ಯವೆಂತಲೂ ಮಾಡಿ ಕೊಂಡು, ಹಿಡುಕೋ ಬೇಕು. ಯೇಸುವಿನ ರಕ್ತದಲ್ಲಿ ನಮಗೆ ಶುದ್ಧೀಕರಣವಾದ ಪಕ್ಷ ಮಾತ್ರದಲ್ಲಿ ನಾವು ದೇವರ ಸನ್ನಿಧಿಯನ್ನು ಶೇರಿ, ನಮ್ಮ ಪ್ರಧಾನಯಾಜಕನಾದಾತನ ನಾಮದಲ್ಲಿ ಪ್ರಾರ್ಥಿಸಿ ಬೇಡಿ ಕೊಳ್ಳಲಾಗುವದು. ಯಾಜಕರಲ್ಲದ ಬೇರೆ ಜನರು, ಯಾರಾದರೂ ಸೈ, ಪವಿತ್ರ ಗೃಹದಲ್ಲಿ ಪ್ರವೇಶ ಮಾಡ ಬಾರದಿತ್ತು; ಆದರೆ ಕ್ರಿಸ್ತನು ತನ್ನಲ್ಲಿ ನಂಬಿ, ತನಗೆ ಹೊಂದಿ ಕೊಂಡವರೆಲ್ಲರನ್ನು ತನ್ನ ಆತ್ಮಾರ್ಪಣೆಯ ಬಲದಿಂದ ದೇವರ ಯಾಜಕ

ರಾಗಿರ ಮಾಡಿದ್ದಾನೆ. ಆತನ ನಿತ್ಯ ಪ್ರಧಾನಯಾಜಕವೃತ್ತಿಯ ಆಧಾರದಿಂದ ನಾವೆಲ್ಲರು ಅತಿ ಪವಿತ್ರ ಗೃಹವನ್ನು ಶೇರಿ, ದೇವರ ಕೃಪಾಸನದ ಮುಂದೆ ಆತನ ದರ್ಶನ ಹೊಂದ ಬಹುದು.

(ಮುಂದೆ ಸಾಗಿಸಲ್ಪಡುವದು.)

## ಈಗಿನ ಕಾಲದ ಅವಿಶ್ವಾಸಿಗಳಾದ ಪಂಡಿತರ ವಿದ್ಯಾತಿಶಯವು.

ತಾವು ಪರಿಶೋಧನೆಗಳನ್ನು ಮಾಡಿ ಕಂಡುಕೊಂಡ ನೂತನ ಸಂಗತಿಗಳೂ, ಮಾಡಿ ಕೊಂಡ ಅನುಭವಗಳೂ, ಘಳಿಸಿ ಕೊಂಡ ವಿದ್ಯಾಸಂಪತ್ತೂ ಕೇವಲ ಅಪೂರ್ವವೆಂತಲೂ ಮಹಾತಿಶಯವೆಂತಲೂ ಅವಿಶ್ವಾಸಿಗಳೂ ನಾಸ್ತಿಕರೂ ಆದಂಥಾ ವಿದ್ವಾಂಸರು ಈಗಿನ ಕಾಲದಲ್ಲಿ ಭಾವಿಸಿ ಕೊಂಡಿದ್ಧಾರೆ. ದೇವರ ವಾಕ್ಯದ ಸಂಗತಿಗಳು ಬರೇ ಅಜ್ಜಿಕಥೆಗಳೇ: ತಮ್ಮ ಮಾತು ತತ್ವಜ್ಞಾನಾಮೃತವೇ; ದೇವವಾಕ್ಯದ ಆಧಾರದ ಮೇಲೆ ವಿಶ್ವಾಸಿಗಳು ನಂಬುವಂಥ ಸಂಗತಿಗಳೆಲ್ಲವನ್ನು ತಾವು ತಮ್ಮ ವಿದ್ಯಾಬಲದಿಂದ ಜರಿದು, ಪುಡಿ ಪುಡಿ ಮಾಡಿ ಬಿಡ ತಕ್ಕವರು; ಬರೇ ಚಿಕ್ಕ ಮಿಂಚುಬುಳು ಎಂಬಂತಾದ ಕ್ರೈಸ್ತಭಕ್ತರ ಜ್ಞಾನವೂ ಅನುಭವವೂ ತಮ್ಮ ವಿದ್ಯಾಸಂಪತ್ತೆಂಬ ಸೂರ್ಯನ ಪ್ರಕಾಶದಲ್ಲಿ ಅಣಗಿ, ಏನಿಲ್ಲವೆಂಬಂತೆ ಕಾಣದೆ ಹೋಗುವದು; ದೇವರ ಪಾಲನೆ ಇಲ್ಲದೆ ತಾವು ಬಾಳುವ ಹಾಗೆ ತಮ್ಮಲ್ಲಿ ಬೇಕಾದ ಸಂಗ್ರಹವೂ ವೈನವೂ ಎಲ್ಲವೂ ಯಥೇಷ್ಟ ಉಂಟು ಎಂಬದಾಗಿ ಬಾಯಿ ಬಿಟ್ಟು, ಕ್ರೈಸ್ತಭಕ್ತರನ್ನೂ ಕ್ರಿಸ್ತನಾಥನನ್ನೂ ಮಾತ್ರವಲ್ಲಾ, ಸೃಷ್ಟಿಕರ್ತನನ್ನಾದರೂ ತಾತ್ಸಾರ ಮಾಡಿ, ಮಹಾ ವಿದ್ಯಾಹಂಕಾರಿಗಳಾಗಿರುತ್ತಾರೆ. ಆದರೆ ಚನ್ನಾಗಿ ವಿಚಾರಿಸಿ, ಈ ವಿದ್ಯಾಹಂಕಾರಿಗಳೆಂಬ ಹಕ್ಕಿಗಳ ಗರಿಗಳನ್ನು ಮಾತ್ರವಲ್ಲಾ ತತ್ತಿಗಳನ್ನೂ ನೋಡಲಿಕ್ಕೆ ಹೋದರೆ, ಅವರ ಅಹಂಕಾರಕ್ಕೆ ವಿಶೇಷ ನ್ಯಾಯವೇನೂ ಕಾಣದು. ಬಿಸಿ ನೀರಿನಲ್ಲಿ ಬೆಣ್ಣೆ ಕರಗಿ, ಕೋಳೀ ಮೊಟ್ಟೆಯ ಲೋಳೆ ಘಟ್ಟಿಯಾಗಿ ಹೋಗುವದು ಎಂತ ಅವರು ಹೇಳ ಬಲ್ಲರು ಎಂಬದಕ್ಕೆ ಸಂಶಯವಿಲ್ಲಾ. ಆದರೆ ವಿಠಲಭಟ್ಟರ ಅಳಿಯ ಮಂಗೇಶಯ್ಯನ ತೊತ್ತು ಪುಕ್ಕಿಯಾದರೂ ಅಷ್ಟು ತಿಳಿದು, ಹೇಳ್ಯಾಳು. ಪರಂತು ಒಂದೇ ಬಿಸಿ ನೀರಿನಲ್ಲಿ ಬೆಣ್ಣೆ ಕರಗಿ ಹೋಗುವದಕ್ಕೂ, ಮೊಟ್ಟೇ ಲೋಳೆ ಘಟ್ಟಿಯಾಗಲಿಕ್ಕೂ ಕಾರಣವೇನೆಂತ ಕೇಳಿದರೆ, ಆ ತೊತ್ತು ಜವಾಬು ಕೊಡಲಾರದೆ ಹೋದಾಳು; ಆದರೆ ಯಾವನೊಬ್ಬ ವಿದ್ವಾಂಸನಿಗೂ ಅದೇ ಪ್ರಶ್ನೆ ಹಾಕಿ ಕೇಳಿರಿ! ಏನು ಜವಾಬು ಕೊಟ್ಟಾನು? ನೋಡುವಾ! ವಿದ್ವಾಂಸನಾದರೂ ಬಿಸಿ ನೀರಿನಲ್ಲಿ ಬೆಣ್ಣೆ ಕರಗುವದು, ಮೊಟ್ಟೇ ಲೋಳೆ ಘಟ್ಟಿಯಾಗುವದು ಎಂಬದನ್ನು ಹೇಳಲಿಕ್ಕೆ ಕೂಡುವದಲ್ಲದೆ, ಕಾರಣವೇನೆಂತ ಹೇಳಲರಿಯನು. ಅಂಥ ಅತ್ಯಲ್ಪ ಸಂಗತಿಯ ಕಾರಣ ವಿಚಾರವು ವಿದ್ವಾಂಸರ ಗೊತ್ತನ್ನು ಮೀರುವಂಥಾದ್ದಾಗಿರಲಾಗಿ, ಅಷ್ಟು ವಿದ್ಯಾಹಂಕಾರಕ್ಕೆ ಆಸ್ಪದವೂ ನ್ಯಾಯವೂ ಎಲ್ಲಿ? ವಿದ್ಯಾಹಂಕಾರಕ್ಕೆ ಆಸ್ಪದವಿಲ್ಲವೇ ಇಲ್ಲಾ, ನ್ಯಾಯವಂತೂ ಇಲ್ಲಾ. ಮೂರ್ಖರಿಗೆ ಅಹಂಕಾರಕ್ಕೂ ನಾಸ್ತಿಕ್ಯಕ್ಕೂ ಆಸ್ಪದ ಕಂಡರೂ, ಸದ್ವಿದ್ವಾಂಸರಿಗೆ ಅದಕ್ಕೆ ಎಂದೂ ಆಸ್ಪದ ಕಾಣದು.*

---

## ಅನ್ಸಲ್ಮೊ.

(೭೫ನೇ ಪುಟದಿಂದ ಮುಂದೆ.)

ಅನ್ಸಲ್ಮೊ ಯ್ಯೂಸುಫನ ಮನೆಯಲ್ಲಿ ಸುಮಾರು ಒಂದು ವರುಷ ಇದ್ದ ಮೇಲೆ ಒಂದಾನೊಂದು ದಿವಸ ಆ ಮುದುಕನು ನಗುಮೋರೆ ಮಾಡಿ ಕೊಂಡು, ಅವನ ಬಳಿಗೆ ಬಂದು, ಹೇಳಿದ್ದೇ

*ವಿದ್ವಾಂಸಿಕೆಯಲ್ಲಿ ವಿಶೇಷವೇನೂ ಇಲ್ಲವೆಂಬದು ಹಿಂದಿನ ವಿವರದ ಅಭಿಪ್ರಾಯವಲ್ಲಾ.—ಕ್ರೈ. ಸ. ಕ.

ನಂದರೆ: "ನಿನಗೆ ಬಹು ಶುಭ ವರ್ತಮಾನ ತಂದಿದ್ದೇನೆ: ನಿನಗೊಂದು ಒಳ್ಳೇ ಚಾಕ್ರಿ ಗೊತ್ತು ಹಚ್ಚಿದ್ದೇನೆ. ಶುಭ್ರ ದುಸ್ತು ಹಾಕಿ ಕೊಂಡು, ನಿನ್ನ ಕಿನ್ನರಿಯನ್ನು ತಕ್ಕೊಂಡು, ನನ್ನ ಸಂಗಡ ಪೇಟೆಗೆ ಬಾ!" ಅನ್‍ಸಲ್ಮೊ ಅವನ ಅಪ್ಪಣೆ ಕೇಳಿ, ಅವನ ಸಂಗಡ ಹೋಗಲಿಕ್ಕೆ ತಯಾರಾದ ಬಳಿಕ ಇಬ್ಬರು ಪೇಟೆಗೆ ಹೊರಟರು. ನಾಲ್ಕೈದು ನಿಮಿಷ ಮಾತ್ರ ಮಾತಾಡುತ್ತಾ ನಡೆದು ಹೋದ ಮೇಲೆ ಅರಮನೆಯಂತಿದ್ದಂಥಾ ಒಂದು ದೊಡ್ಡ ಮನೆಗೆ ಮುಟ್ಟಿದರು. ಆ ಮನೆಯನ್ನು ಶೇರಿ, ಬಹಳ ಅಲಂಕೃತವಾಗಿದ್ದಂಥಾ ಕೋಣೆಯಲ್ಲಿ ಮನೇ ಯಜಮಾನನ ಭೇಟಿ ಮಾಡಿದರು. ಮುಸಲಮಾನನಾಗಿದ್ದ ಆ ಗೃಹಸ್ಥನು ದೇಶಜಾತಿರಿವಾಜಿನ ವಸ್ತ್ರಾದಿಗಳನ್ನು ಧರಿಸಿ ಕೊಂಡು, ವಿಚಿತ್ರವಾದ ಮಂಚದಲ್ಲಿ ಕುಳಿತು, ಮುತ್ತು ವಜ್ರಗಳಿಂದ ಖಚಿತವಾಗಿದ್ದ ಚಿನ್ನದ ಗುಡುಗುಡಿಯ ಚಿಲಂಬಿಯಲ್ಲಿದ್ದ ಒಳ್ಳೇ ಪರಿಮಳದ ಗುಡಾಖ್ ಶೇದುತ್ತಾ, ತನ್ನ ಬದೀಲಿಯ ಚಿಕ್ಕ ಮೇಜಿನ ಮೇಲಿಟ್ಟಿದ್ದ ಬೆಳ್ಳಿಯ ಪಾತ್ರೆಯಿಂದ ಕಾಫೀ ಕಷಾಯವನ್ನು ಆಗಾಗ್ಯೆ ಗುಟುಕುಗುಟುಕಾಗಿ ಕುಡಿಯುತ್ತಾ, ಹುಕ್ಕದ ಧಮ್ಮು ಬಿಡುತ್ತಾ ಇದ್ದನು.

ಪರಸ್ಪರ ಕ್ಷೇಮಲಾಭಾತಿಶಯಗಳ ಪ್ರಸ್ತಾಪವಾದನಂತರ ಆ ತುರ್ಕನು ಅನ್‍ಸಲ್ಮೋನನ ಕಡೆಗೆ ಮುಖ ಮಾಡಿ—"ನಿನ್ನ ಗಾಯನ ಬಹು ಬೇಶ್ ಎಂತ ಕೇಳಿದ್ದೇನೆ; ಹೌದೋ? ನಿನ್ನ ಕಿನ್ನರಿಯನ್ನು ಬಾರಿಸಿ, ಒಂದಿಷ್ಟು ಗಾಯನ ಮಾಡು! ಕೇಳೋಣಾ!" ಎಂಧೇಳಿದ್ದಕ್ಕೆ ಅನ್‍ಸಲ್ಮೋ—"ಸಾಹೇಬರ ರಾಗಗಳು ನನಗೆ ಬರುವದಿಲ್ಲಾ; ಬೇಕಾದರೆ ಇತಾಲ್ಯ ರಾಗಗಳನ್ನು ಹಾಡ್ಯೇನು," ಅನ್ನಲಾಗಿ, ಆ ತುರ್ಕರವನು—"ಚಿಂತಿಲ್ಲಾ, ಖುಷಿ ಇದ್ದದನ್ನೇ ಹಾಡು!" ಎಂಧೇಳಿದ್ದಕ್ಕೆ ಅನ್‍ಸಲ್ಮೊ ತನ್ನ ದುಃಖಾವಸ್ಥೆಗೆ ಒಪ್ಪಿದ ಒಂದು ಗೀತವನ್ನು ಸಪೂರ ಆರ್ತ ಸ್ವರವೆತ್ತಿ ಹಾಡುತ್ತಾ ಬಾರಿಸಿ, ಗಾಯನ ಮಾಡಿದನು. ತುರ್ಕನು ಹುಕ್ಕೆಯನ್ನು ಶೇದುತ್ತಾ ಹುಡುಗನ ಗಾಯನ ಲಾಲಿಸಿದನು. ಗಾಯನ ಮುಗಿದ ಮೇಲೆ ಹುಡುಗನ ಬೆನ್ನಿಗೆ ತಟ್ಟಿ—"ಶಹಬಾಸ್, ಶಹಬಾಸ್! ನೀನು ಹುಷಾರ! ನಿನ್ನ ಗಾಯನ ಬಹಳ ಬೇಶ್, ಯ್ಯೂಸುಫ್ ನಿನ್ನ ವಿಷಯದಲ್ಲಿ ಹೇಳಿದ್ದು ಖರೆ; ನಿನ್ನ ಗುಣಗಳ ಮಾತೆಲ್ಲಾ ಹಾಗೆಯೇ ಇದ್ದರೆ, ಬೇಶ್!" ಎಂಧೇಳಿ, ಎದ್ದು, ಒಳ ಕೊಠಡಿಗೆ ಹೋಗಿ, ಸ್ವಲ್ಪ ಹೊತ್ತಿನ ಮೇಲೆ ನೂರು ಭಂಗಾರದ ನಾಣ್ಯಗಳನ್ನು ತಂದು, ಯ್ಯೂಸುಫನ ಕೈಯಲ್ಲಿ ಲೆಖ್ಖ ಮಾಡಿ ಕೊಟ್ಟನು. ಯ್ಯೂಸುಫ್ ಆ ಹಣವನ್ನು ಸಾನಂದನಾಗಿ ನೋಡಿ, ತಾನು ತಕ್ಕೊಂಡು ಬಂದಿದ್ದ ಚರ್ಮದ ಚೀಲದಲ್ಲಿ ಹಾಕಿ, ಬಹಳವಾಗಿ ಹಿಗ್ಗಿ ಕೊಂಡು, ಮುಪ್ಪಿನ ಕಾರಣದಿಂದ ಸ್ವಲ್ಪ ಬಗ್ಗಿ ಕೊಂಡಿದ್ದ ಬೆನ್ನನ್ನು ಆದಷ್ಟು ನೀಟಾಗಿರಿಸಿ, ಹಣ್ಣಾದ ಗಡ್ಡವನ್ನು ತುಲಾಯಿಸಿ, ತುರ್ಕರವನಿಗೆ—"ಹಜರತ್ ಈ ವ್ಯಾಪಾರದಲ್ಲಿ ಸಾಹೇಬರು ಒಳ್ಳೇ ಲಾಭ ಮಾಡಿ ಕೊಂಡರು; ಸಾಹೇಬರಿಗಲ್ಲದೆ ಮತ್ತ್ಯಾರಿಗೂ ಈ ಹುಡುಗನನ್ನು ಅಪ್ಪಫ್ಫದಲ್ಲಿ ನಾನು ಕೊಡುತ್ತಿದ್ದಿಲ್ಲಾ" ಎಂಧೇಳಿ, ಅನ್‍ಸಲ್ಮೋನನಿಗೆ— "ಎಲಾ ಹುಡುಗಾ! ನಿನ್ನ ಪುಣ್ಯದಿಂದ ನಿನಗೆ ಬಹಳ ಒಳ್ಳೆಯವರಾದ ಈ ಸಾಹೇಬರ ಆಶ್ರಯ ಶಿಕ್ಕಿತು; ನನ್ನ ಹೆಸರಿಗೆ ನಾಚಿಕೆ ಹತ್ತಿಸಬೇಡಾ! ಕೇಳಿದಿಯಾ? ಅಷ್ಟು ಕ್ರಯಕ್ಕೆ ನೀನು ತಕ್ಕವನೆಂತ ತೋರಿಸಿ ಕೊಡುವದು ಈಗ ನಿನ್ನ ಕೆಲಸವಾಗಿರುತ್ತದೆ. ಹುಶಾರಾಗಿರು! ಸಲಾಮ್! ಪಿತೃಗಳ ದೇವರು ನಿನ್ನನ್ನಾಶೀರ್ವದಿಸಿ ಕಾಪಾಡಲಿ!" ಎಂಧೇಳಿ, ತನ್ನ ವಿರೂಪವಾದ ಟೋಪಿಯನ್ನು ಇಟ್ಟುಕೊಂಡು, ಕೈಯಲ್ಲಿ ಕೋಲನ್ನು ಹಿಡುಕೊಂಡು, ತನ್ನ ಮನೆಗೆ ಹೊರಟು ಹೋದನು.

ಅನ್‍ಸಲ್ಮೋನನನ್ನು ಕೊಂಡು ಕೊಂಡ ತುರ್ಕರವನ ಹೆಸರು ಅಖ್ಮೆದ್. ಎಂಬದೇ ಅಖ್ಮೆದ್ ಆ ಪಟ್ಣದಲ್ಲಿ ಬಹಳ ಐಶ್ವರ್ಯವಿದ್ದ ದೊಡ್ಡ ಸಾವಕಾರನಾಗಿದ್ದನು. ಅನ್‍ಸಲ್ಮೋನನನ್ನು ಮುಖ್ಯವಾಗಿ ಇತಾಲಿಕ ಭಾಷೆಯಲ್ಲಿಯೂ ಫ್ರೆಂಚ ಭಾಷೆಯಲ್ಲಿಯೂ ಆಗುತ್ತಿದ್ದ ಬರಹಾನ್ನ ಕೆಲಸಕ್ಕೆ ಹಚ್ಚಿ ಕುಂದ್ರಿಸಿ

ದನು. ಆದರೆ ಬರಹಾನ್ನ ಕೆಲಸವಿಲ್ಲದ ಸಮಯದಲ್ಲಿ ಅನ್‍ಸಲ್ಮೊ ಮೇಜಿನ ಕೆಲಸ ಸಹಾ ನೋಡಿ, ಊಟಕ್ಕೆ ತಯಾರು ಮಾಡುವ ಇತರ ಚಾಕ್ರಿಯವರಿಗೆ ಸಹಾಯ ಮಾಡ ಬೇಕಾಯಿತು. ಅವನ ಕೆಲಸವು ಯಾವತ್ತು ಆಯಕಟ್ಟನದಾಗಿ, ಯಜಮಾನನಿಗೆ ಮೆಚ್ಚಿಕೆ ಹುಟ್ಟಿಸುವಂಥಾದ್ದಾಯಿತು.

ಆ ತುರ್ಕರವನು ಅವನನ್ನು ಕೊಂಡು ಕೊಂಡ ದಿನದಲ್ಲಿ ನಾಲ್ಕು ಜನರು ಮಾತ್ರ ಮೇಜಿಗೆ ಕೂತು ಕೊಂಡು, ಊಟ ಮಾಡಿದರು. ಯಾರಂದರೆ: ಅಭ್ಮಿದನೂ ಅವನ ಹೆಂಡತಿಯಾದ ಫತಿಮಳೂ ಎರಡು ಮಂದಿ ಖಾಸ ಮಕ್ಕಳೂ. ಹುಡುಗನಿಗೆ ಒಂಭತ್ತು, ಹುಡುಗಿಗೆ ಆರು ವರುಷ ಪ್ರಾಯವಿತ್ತು. ಮುಸುಕು ಹಾಕಿ ಕೊಂಡಿದ್ದ ಸಾನಿ ಮೇಜಿಗೆ ಕೂತು, ಮುಸುಕನ್ನು ತೆಗೆದು, ಅನ್‍ಸಲ್ಮೋನನ್ನು ಊಟವಾಗುವಾಗ ತಾತ್ಪರ್ಯವಿಟ್ಟು ನೋಡುತ್ತಿದ್ದಳು. ಹುಡುಗರಿಬ್ಬರು ಸಹಾ ಹೊಸ ಆಳನ್ನು ಕಂಡು, ಮರ್ಯಾದೆಯಾಗಿ ಸಲಾಮ್ ಮಾಡಿ, ಮೇಜಿಗೆ ಕೂತು, ಪರಿಶೋಧಕಭಾವದಿಂದ ಅವನನ್ನು ನೋಡುತ್ತಿದ್ದರು. ಮೊದಲಿನ ಸರ್ತಿಗಾದರೂ ಅನ್‍ಸಲ್ಮೊ ಮೇಜಿನ ಕೆಲಸವೆಲ್ಲವನ್ನು ಜಾಗ್ರತೆಯಾಗಿಯೂ ಬಹು ಅಂದವಾಗಿಯೂ ಮಾಡಿ ತೀರಿಸಿದನು. ಅವನು ಕೈಸನ್ನೆ, ಕಣ್ಣಸನ್ನೆ ಮುಂತಾದ್ದನ್ನು ನೋಡಿ, ಯಜಮಾನರ ಮುಖಭಾವದಿಂದಲಾದರೂ ಅವರ ಅಪೇಕ್ಷೆಯೇನೆಂತ ತಿಳುಕೊಳ್ಳ ಬೇಕೆಂದಿರುವವನಾಗಿ, ಬಹು ಜಾಗ್ರತೆಯಿಟ್ಟು ಕೆಲಸವನ್ನು ನಡಿಸಿದ ಕಾರಣ ಅಭ್ಮಿದನು ಅಂದೇ ಹುಡುಗನ ಮೇಲೆ ತನ್ನ ಮನಸ್ಸಿನಲ್ಲಿ ಬಹಳ ಸಂತೋಷ ಪಟ್ಟು, ಅವನಲ್ಲಿ ಪ್ರೀತಿಭಾವವನ್ನು ಸಹಾ ಇಡಲಾರಂಭಿಸಿದನು.

ಅನ್‍ಸಲ್ಮೊ ಮಾಡಿದ ಗಾಯನವನ್ನು ಆ ಸಾನಿ ತನ್ನ ಕೋಣೆಯಲ್ಲಿ ಕೇಳಿ ಇದ್ದಳು; ಆದರೆ ಗಾಯಕನು ಯಾರೆಂತ ಮೊದಲು ತಿಳಿದಿದ್ದಿಲ್ಲಾ; ಊಟದಲ್ಲಿ ಅನ್‍ಸಲ್ಮೋನನೇ ಎಂತ ತಿಳುಕೊಂಡಾಗ, ಆಕೆ ಅವನಿಗೆ—"ನೀನು ಬಾರಿಸಿ ಹಾಡಿದ್ದು ಬಹಳ ಮನೋಹರವಾಯಿತು. ನೀನು ಇನ್ನೊಮ್ಮೆ ಬಾರಿಸಿ ಹಾಡು" ಎಂದು ಹೇಳಿದ್ದಕ್ಕೆ ಅವನು ಮೊದಲು ಹಾಡಿದ್ದ ಗೀತಕ್ಕಿಂತ ಇನ್ನು ಚೆಲುವಾದ್ದೊಂದು ಹಾಡಿದನು. ಆ ಗೀತವು ಹೆತ್ತವರಿಗೂ ಮಕ್ಕಳಿಗೂ ಇರುವ ಪರಸ್ಪರ ಮಮತೆಯನ್ನು ವರ್ಣಿಸುವಂಥಾದ್ದು. ಅಭ್ಮಿದನೂ ಅವನ ಸತಿ ಸುತೆ ಸುತರೂ ಬಹು ಉಲ್ಲಾಸವಾಗಿ ಲಾಲಿಸಿದರು. ರಾಗ ತೀರಿದಾಗ ಚಿಕ್ಕ ಅಲದ್ದೀನನು—"ವಹವ್ವಾ! ಈ ರಾಗ ಎಷ್ಟೋ ಇಂಪು! ಗೀತದ ಅರ್ಥ ಸಹಾ ತಿಳಿದರೆ, ಆದೀತು" ಎಂಥೇಳಿದನು. ಅದಕ್ಕೆ ಅವನ ತಂಗಿ—"ಹೌದು, ನಾನೂ ಹಾಗೆಯೇ ಹಾಡ ಬೇಕೆಂದಿರುತ್ತೇನೆ; ಆದರೆ ನನಗೆಂದೂ ಅಷ್ಟು ಇಂಪಾಗಿ ಬಾರದು" ಎಂದು ಪ್ರತ್ಯುತ್ತರವಾಗಿ ಹೇಳಿ, ತನಗೆ ಪಾಠವಾದ ಒಂದು ಚಿಕ್ಕ ಪದವನ್ನು ಹಾಡಿದಳು. ಅಭ್ಮಿದನು ತನ್ನ ಮಕ್ಕಳ ಸಂತೋಷ ನೋಡಿ, ಮುತ್ತೂ ಸಂತೋಷ ಪಟ್ಟು, ಹೇಳಿದ್ದೇನಂದರೆ: "ನನ್ನ ಮುದ್ದು ಮಗಳೇ! ನಿಮಗೆ ಕಲಿತು ಕೊಳ್ಳ ಮನಸ್ಸಿದ್ದರೆ, ಅನ್‍ಸಲ್ಮೊ ಕಲಿಸಿ ಕೊಟ್ಟಾನು. ಕಲಿತು ಕೊಳ್ಳಿರಿ!"

ಅಂದೇ ಆ ಹುಡುಗರಿಬ್ಬರು ಅನ್‍ಸಲ್ಮೋನನನ್ನು ಸ್ನೇಹಿಸಲಾರಂಭಿಸಿ, ದಿನ ಹೋಗುತ್ತಾ ಅವನನ್ನು ಹೆಚ್ಚೆಚ್ಚಾಗಿ ಪ್ರೀತಿ ಮಾಡುವವರಾದರು. ಅವರಿಗೂ ಅವನಿಗೂ ಒಳ್ಳೇ ಸ್ನೇಹ ಬಿದ್ದು ಹೋದ್ದರಿಂದ, ಅನ್‍ಸಲ್ಮೋನನಿಗೆ ಆ ತುರ್ಕರವನಲ್ಲಿಯೂ ಸುಖವೂ ಸಂತೋಷವೂ ತಪ್ಪಲಿಲ್ಲಾ.

ಅನ್‍ಸಲ್ಮೊ ಕೆಲವು ವಾರಗಳು ಅಭ್ಮಿದನಲ್ಲಿ ದಾಸನಾಗಿದ್ದನಂತರ ಅಭ್ಮಿದನು ತನ್ನ ಕುಟುಂಬ ಸಮೇತನಾಗಿ ನಾಡಿನಲ್ಲಿದ್ದ ಹೊಸ ತೋಟಕ್ಕೆ ಹೋದನು. ಅನ್‍ಸಲ್ಮೋನನನ್ನೂ ಕರಕೊಂಡು ಹೋದನು. ಒಂದು ಗುಡ್ಡದ ಅಡಿಯಲ್ಲಿದ್ದಂಥಾ ಬಹು ವಿಸ್ತಾರವಾಗಿದ್ದಂಥ ಹಿತ್ತಲಿನಲ್ಲಿ ಒಂದು ಸುಂದರವಾದ ರಂಗುಮಹಲೂ ನೋಟಕ್ಕೆ ಅತಿ ರಮ್ಯವಾದ ರಾಜವನದಂಥಾ ತೋಟವೂ ಇತ್ತು. ಈ ತೋಟವು ಕಿರುಸಂಪಿಗೆ, ಜಾಜಿ ಗಿಡ, ಮರುಗ, ಲಾವಂಚ, ದೊಡ್ಡ ಪತ್ರೆ, ಶಾವಂತಿಗೆ, ಮಲ್ಲಿಗೆ,

ಗುಲಾಬಿ ಇತ್ಯಾದಿ ಪುಷ್ಪಗಿಡಗಳಿಂದಲೂ, ದಾಳಿಂಬ, ಅಂಜೂರ ಮೊದಲಾದ ಸವಿ ಫಲಗಳನ್ನು ಫಲಿಸುವ ವೃಕ್ಷಗಳಿಂದಲೂ ತುಂಬಿತ್ತು. ತೋಟದ ಎದುರಿದ್ದ ಹಿಪ್ಪಲಿ ಗಿಡಗಳ ಸಾಲುಗಳಲ್ಲಿ ರೇಶ್ಮೇ ಹುಳಗಳ ಗೂಡುಗಳು ಕೊಂಬೆಗಳಲ್ಲೆಲ್ಲಿಯೂ ಚಿನ್ನದ ಹಣ್ಣುಗಳಂತೆ ಶೋಭಿಸುವಂಥವುಗಳಾಗಿ ತೂಗ್ಯಾಡುತ್ತಿದ್ದವು. ತೋಟಕ್ಕೆ ಬದೀಲಿ ತಗಲಿ ಇದ್ದ ಇಪ್ಪೇ ತೋಪಿನಲ್ಲಿ ಒಂದು ಗಾಣವಿತ್ತು. ಅದರಿಂದ ಅಭ್ಮಿದನು ಗುಲಾಮರ ಕೈಯಿಂದ ಎಣ್ಣೆ ತೆಗಿಸುತ್ತಿದ್ದನು.

ಆ ವನದ ರಂಗುಮಹಲಿನಲ್ಲಿ ಮುಟ್ಟಿದ ದಿನ ಸಾಯಂಕಾಲಕ್ಕೆ ಅಭ್ಮಿದನು ತನ್ನ ಸತಿ ಸುತೆ ಸುತ ರೊಡನೆ ಅನ್‌ಸಲ್ಮೋನನನ್ನೂ ಕರ ಕೊಂಡು, ತನ್ನ ದಾಸ ದಾಸಿಯರನ್ನು ನೋಡಲಿಕ್ಕಾಗಿ ಹಿತ್ತಲಿ ನಲ್ಲೆಲ್ಲಾ ತಿರುಗಾಡಿದನು. ಹಗಲೆಲ್ಲಾ ಕಷ್ಟ ಮಾಡಿ ದಣಿದು ಕೊಂಡಿದ್ದ ಗುಲಾಮರು ತಮ್ಮ ಕು ಸಿನೀ ಹತ್ತರ ಕೂಡಿ ಕೊಂಡು, ರಾತ್ರೀ ಊಟಕ್ಕೆ ತಯಾರು ಮಾಡುತ್ತಿದ್ದರು. ಅವರ ಹತ್ತರ ಹು ಡುಗರನ್ನು ಬಿಟ್ಟು ಅಭ್ಮಿದನೂ ಅವನ ಹೆಂಡತಿಯೂ ನಾಡನ್ನೆಲ್ಲಾ ನೋಡ ಬೇಕೆಂತ ಆ ಗುಡ್ಡವನ್ನೇರಿ ಹೋದರು. ಹುಡುಗನೂ ಹುಡುಗಿಯೂ ತೋಟದಲ್ಲಿ ಓಡ್ಯಾಡುತಾ ಹಾರ್ಯಾಡುತಾ ಮಿಂಚು ಹುಳಗಳನ್ನೂ ಪತಂಗಗಳನ್ನೂ ಹಿಡಿಯಲಿಕ್ಕೆ ಬೇಟೆಯಾಡುತಾ ಇದ್ದರು. ಅದೇ ಹೊತ್ತಿಗೆ ಒಂದು ಸಿಂಹವು ಘರ್ಜಿಸುತಾ, ತನ್ನ ಜೂಗು ಕೂದಲನ್ನು ನಿಲವರಿಸಿ ಕೊಂಡು, ಗುಡ್ಡದಿಂದ ಇಳಿದು ಓಡಿ ಬರುವಂಥಾದ್ದಾಯಿತು. ಆ ಭಯಂಕರ ಘರ್ಜನೆಯನ್ನು ಕೇಳಿ, ಸಿಂಹವನ್ನು ಕಂಡು, ಅಲ್ಲಿದ್ದವರೆಲ್ಲರು ಕುಸಿನಿಗೆ ಓಡೋದೇ ಮಾಡಿದರು. ತೀವ್ರವಾಗಿ ಓಡಲಿಕ್ಕೆ ತ್ರಾಣ ಸಾಲದಿದ್ದ ಹುಡುಗಿ ಅಲ್ಮೀರಳು ಹಿಂದುಳಿದು ಬಿದ್ದಳು. ಸಿಂಹವು ಅವಳ ಮೇಲೆ ಕುಪ್ಪಳಿಸಿ ಹಾರಲಿಕ್ಕೆ ತಯಾರಾಗುತ್ತಲೇ ಅನ್‌ಸ ಲ್ಮೊ ಕುಸಿನಿಯ ಒಲೆಯಿಂದ ಒಂದು ಕೊಳ್ಳಿಯನ್ನು ಹಿಡುಕೊಂಡು ಬೀಸುತಾ ಸಿಂಹದ ಎದುರಿಗೆ ಓಡಿ ಬರಲು, ಆ ಮೃಗೇಂದ್ರನು ಕೊಳ್ಳಿಗಂಜಿ ಕೊಂಡು, ಬಾಲ ಮುದರಿಸಿ ಕೊಂಡು, ಹತ್ತೆಂಟು ಅಡಿ ಹಿಂಜರಿದು, ಕಡೆಗೆ ಮತ್ತೂ ಭಯಂಕರವಾಗಿ ಘರ್ಜಿಸಿ, ಬೆಟ್ಟದ ಕಡೆಗೆ ಓಟ ಮಾಡಿ, ಓಡಿ ಹೋದನು.

ಅಷ್ಟರಲ್ಲಿ ಮಗಳ ಹಾಗೂ ಆಳುಗಳ ಬೊಬ್ಬಾಟ ಕೇಳಿ, ಘಾಬರಿಯಾಗಿ ಹಿಂದೆ ಓಡಿ ಬಂದ ಅಭ್ಮಿದನೂ ಫತಿಮಳೂ ಆ ಸಂಗತಿ ನಡೆದ ಜಾಗಕ್ಕೆ ಮುಟ್ಟಿದರು. ಇದ್ದಲ್ಲಿಯೇ ಇದ್ದು, ಅದು ರುವಾಯು ಹಿಡಿದವಳಂತೆ ಒಂದು ಹೆಜ್ಜೆಯಾದರೂ ಮುಂದಕ್ಕೆ ಇಡಲಾರದೆ ಅದರುತಾ ನಡುಗುತಾ ಇದ್ದ ಅಲ್ಮೀರಳು ಬಂದ ತಾಯಿಯನ್ನು ಕಾಣುತ್ತಲೇ ಅತ್ತತ್ತು ಅವಳ ಸೆರಗಿಗೆ ಓಡಿ ಬಂದಳು. ಫತಿ ಮಳು ತನ್ನ ಮುದ್ದು ಮಗಳನ್ನು ಅಪ್ಪಿಕೊಂಡು, ಆನಂದಬಾಷ್ಪಗಳನ್ನು ಸುರಿಸುತಾ ಮುದ್ದಿನ ಮೇಲೆ ಮುದ್ದು ಇಟ್ಟಳು. ಅಭ್ಮಿದನು ನಡೆದ ವಿವರವೆಲ್ಲವನ್ನು ಕೇಳಿ, ತಿಳುಕೊಂಡು, ಆಕಾಶಕ್ಕೆ ಕಣ್ಣೆತ್ತಿ, ಅನ್‌ಸಲ್ಮೋನನನ್ನು ಬಹು ಪ್ರೀತಿಭಾವವಾಗಿ ಆಲಿಂಗನ ಮಾಡಿದನು. ಅಲದ್ದೀನನು ತಂಗಿಯ ಕೆನ್ನೆ ಯನ್ನು ಬಹು ಅಕ್ಕರೆಯಾಗಿ ಸವರ್ಯಾಡಿ, ಅಂದದ್ದೇನಂದರೆ: "ಅನ್‌ಸಲ್ಮೊ ಇಲ್ಲವಾದ್ದಾದರೆ, ಸಿಂಹ ನಿನ್ನನ್ನು ಹಿಡಿದು ತಕ್ಕೊಂಡು ಹೋಗುತ್ತಿತ್ತು." ಯಜಮಾನ ಯಜಮಾನಿಯರಿಬ್ಬರು ಕೃತಜ್ಞತಾ ಭಾವಪೂರ್ವಕ ಸಂತೋಷಭರಿತರಾಗಿ, ಅನ್‌ಸಲ್ಮೋನನನ್ನು ಎಲ್ಲರ ಮುಂದೆ ಬಹಳವಾಗಿ ಹೊಗ ಳಿದರು. ಆ ರಾತ್ರಿ ಮಲಗಿ ಕೊಳ್ಳುವ ವೇಳೆಗೆ ಅನ್‌ಸಲ್ಮೊ ತನ್ನನ್ನು ಕಾಪಾಡಿ, ತನ್ನ ಮುಖಾಂತ ರವಾಗಿ ಯಜಮಾನನ ಮಗಳನ್ನು ಸಿಂಹದ ಬಾಯಿಗೆ ತಪ್ಪಿಸಿ ಉಳಿಸಿದ ದೇವರನ್ನು ಬಹಳ ಮನಃ ಪೂರ್ವಕವಾಗಿ ಪ್ರಾರ್ಥಿಸಿ, ಕೊಂಡಾಡಿದನು.

(ಮುಂದೆ ಸಾಗಿಸಲ್ಪಡುವದು.)

# ಡಿಲ್ಲಿ.



(ಡಿಲ್ಲಿಯೆಂಬ ಪಟ್ಟಣದ ನಕ್ಷೆ.)

ಹಿಂದುಸ್ಥಾನದ ಪ್ರಖ್ಯಾತ ಪುಣ್ಯಾಕ್ಷೇತ್ರಗಳಲ್ಲಿ ಕಾಶಿ ಮತ್ತು ರಾಮೇಶ್ವರ ಹ್ಯಾಗೆ ಶಿಖಾಮಣಿಗಳಾಗಿರುತ್ತವೋ ಹಾಗೆಯೇ ಪ್ರಶಸ್ತ ರಾಜಧಾನಿಗಳಲ್ಲಿ **ಡಿಲ್ಲಿ** ಎಂಬ ನಗರವು ವಿರಾಜಿಸುವಂಥಾದಾಗಿದೆ. ಪ್ರಸ್ತಾಪೋಚಿತವೆಂತ ತೋರುವಂಥಾ ಈ ನಗರರತ್ನಕ್ಕೆ ಸಂಬಂಧಿಸುವ ಕೆಲವು ಸಂಗತಿವಿಶೇಷಗಳ ವಿವರಕ್ಕೆ ಕ್ರೈ. ಸ. ಪತಕರು ಸಂತೋಷಪಟ್ಟಾರೆಂತ ನೆನಸಿ, ಅಂಥಾ ಕೆಲವು ಸಂಗತಿಗಳನ್ನು ಪ್ರಸ್ತಾಪ ಮಾಡಿ ವಿವರಿಸುತ್ತೇನೆ.

ವಿಕ್ಟೋರಿಯ ಮಹಾರಾಣಿಯವರ ಪ್ರತಿನಿಧಿಗಳಾಗಿ, ಹಿಂದುಸ್ಥಾನದ ರಾಜ್ಯಪರಿಪಾಲನೇ ಸರ್ವಾಧಿಪತಿಗಳಾಗಿರುವ ಲಿಟ್ಟನ್ ಪ್ರಭುಗಳು ಕಳದ ಅಗೊಸ್ತು ತಿಂಗಳಲ್ಲಿ ಒಂದು ರಾಯಸವನ್ನು ಹೊರಡಿಸಿ, ಪ್ರಕಟ ಮಾಡಿದ ಸಂಗತಿವಿಶೇಷದ ಸಾರಾಂಶವೇನಂದರೆ: ೧೮೭೭ನೇ ಇಸ್ವಿಯ ಜನವರಿ ೧ರಲ್ಲಿ ಒಂದು ರಾಜ ಒಡ್ಡೋಲಗ ಡಿಲ್ಲಿಯಲ್ಲಿ ನೆರೆದು ಮಹಾ ಅಪೂರ್ವ ದರಬಾರಾಗುವದು. ತಾವು ಹಿಂದುಸ್ಥಾನ ಸಾಮ್ರಾಜ್ಯಕಾರ್ಯಗಳಲ್ಲಿಟ್ಟಿರುವ ತಾತ್ಪರ್ಯವನ್ನೂ ತಮ್ಮ ಪ್ರಜಾಹಿತಚಿಂತಕ ಒಲುಮೆಯನ್ನೂ, ಹಾಗೂ ದೇಶದ ರಾಜರ ಪ್ರಜೆಗಳ ಮಮತಾಪೂರ್ವಕ ರಾಜಭಕ್ತಿಯ ವಿಷಯದಲ್ಲಿ ತಾವು ಹಿಡಿದಿರುವ ಸಂತೋಷಪೂರ್ವಕ ಭರವಸವನ್ನೂ ಕಾಣಿಸುವ ಬಗ್ಯೆ ವಿಕ್ಟೋರಿಯ ಮಹಾರಾಣಿಯವರು ತಮ್ಮ ನಾಮಾವಳಿಗೆ "ಹಿಂದುಸ್ಥಾನದ ಚಕ್ರವರ್ತಿನಿ" (Empress of India, ಕೈಸರ್ ಇ ಹಿಂದ್) ಎಂಬ ನೂತನ ನಾಮಧೇಯ ವಿಶೇಷವನ್ನು ಕೂಡಿಸಿಕೊಳ್ಳ ಚಿತ್ತೈಸಿದ್ದು ಆ ಒಡ್ಡೋಲಗದಲ್ಲಿ ಸಾರೋಣಾಗಿ, ಹಿಂದುಸ್ಥಾನ ಸಾಮ್ರಾಜ್ಯದಲ್ಲೆಲ್ಲಾ ಪ್ರಕಟಸೋಣಾಗುವದು.

ಹಿಂದೆ ಹೇಳಿದ ಮಹಾ ಶುಭಕಾರ್ಯಕ್ಕೆ ಹಿಂದುಸ್ಥಾನದ ರಾಜಪ್ರತಿನಿಧಿಗಳಾದ ಲಿಟ್ಟನ್ ಪ್ರಭುಗಳೂ ಇಂಗ್ಲಿಷ ಸರಕಾರದ ಕಡೆಯ ಇತರ ಎಲ್ಲಾ ಅಧಿಪತಿಗಳೂ ಆಯಾ ಇಲಾಖೆಗಳ ಮುಖ್ಯಸ್ಥರೂ ರಾಯಭಾರಿಗಳೂ ದೇಶೀಯ ರಾಜರೂ ಶ್ರೀಮಂತರೂ ಸರದಾರರೂ ತಮ್ಮ ತಮ್ಮ ಪರಿಚರ್ಯಾದಿಗಳ ಸಮೇತರಾಗಿ **ಡಿಲ್ಲಿ**ಗೆ ಮೆರೆಮೆರೆದು ಬಂದು ನೆರೆಯುವರು. ಅಂಥಾ ಸುಲಗ್ನಕ್ಕೆ ನೆರೆದ ಮಹಾ ರಾಜಸಭೆಯ ಕಾಲವೈಭವಾತಿಶಯಕ್ಕೆ ತಕ್ಕ ಅಟ್ಟಹಾಸ ಆಟೋಪ ಆಡಂಬರಗಳು ಕೇವಲ ಅತಿರಿಕ್ತವಾಗಿ ನಡೆದಾವು ಎಂಬುವ ಮಾತಿಗೆ ಸಂಶಯವಿಲ್ಲಾ. ಸದ್ಯಕ್ಕೆ ಕಮಲವೊಂದಾದರೂ ಇಲ್ಲದಂಥಾ ಸರೋವರದೋಪಾದಿಯಾಗಿರುವ ಡಿಲ್ಲಿ ರಾಜಧಾನಿ ಈ ಸುಲಗ್ನದಲ್ಲಿ ಒಂದು ಶುದ್ಧ ಸರೋಜಿನಿಯಂತಾಗಿ, ಹಿಂದುಸ್ಥಾನದ ಪಟ್ಣಗಳಲ್ಲಿ ತಿರಿಗಿ (ಆ ಶುಭಕಾರ್ಯೋತ್ಸವ ನಡೆಯುವ ಏಳೆಂಟು ದಿನವಾದರೂ) ಶೋಭಿಸುವದು.

೧೮೭೭ನೇ ಇಸ್ವಿಯಲ್ಲಿ ಆಗುವ ಈ ಸಂಗತಿ ೧೮೫೭ನೇ ಇಸ್ವಿಯಲ್ಲಿ ನಡೆದ ಕಾಟಕಾಯಿಯ ಸಂಗತಿಯನ್ನು ನೆನಪು ಹುಟ್ಟಿಸದೆ ಹೋಗದು. ಶಿಪಾಯಿಗಳು ಇಲ್ಲಿ ಅಲ್ಲಿ ದುಷ್ಪ್ರೇರಿತರಾಗಿ ದಂಗೆ ಎತ್ತಿ, ಎಡೆಯಾದ್ದಲ್ಲಿ ಮಹಾ ದ್ರೋಹದ ರಾಕ್ಷಸಕೃತ್ಯಗಳನ್ನು ನಡಿಸಿ, ಇಂಗ್ಲಿಷರನ್ನು ಹೊಡಧೊಡದು, ಹಿಂಸೆ

ಮಾಡಿ, ಮಹಮ್ಮದಶ್ಯಾ ಎಂಬ ಮುದಿ ಅರಸನನ್ನು "ಹಿಂದುಸ್ಥಾನದ ಭೂಚಕ್ರವರ್ತಿಯೇ" ಎಂತ ಡಿಲ್ಲಿಯ ಮಹಾರಾಜಪಟ್ಟಕ್ಕೆ ಕುಳ್ಳಿರಿಸಿದ್ದಾಗ, ೨೦ ವರುಷದ ಮೇಲೆ ವಿಕ್ಟೋರಿಯ ಮಹಾರಾಣಿಯವರೇ ಆ ಪಟ್ಟಕ್ಕೆ ಕೂತಾರೆಂತ ಯಾರು ತಿಳಿದು ತಿಳಿಸ ಬಹುದಿತ್ತು? ಸದರಿ ಮಹಮ್ಮದಶ್ಯಾ ೨೦ ವರುಷ (೧೮೩೭ನೇ ಇಸ್ವಿಯಿಂದ) ಇಂಗ್ಲಿಷರಾಧೀನನಾಗಿ, ಮತ್ತು ಹತ್ತೆಂಟು ದಿನ (೧೮೫೭ನೇ ಇಸ್ವಿಯ ಸಪ್ತಂಬರ ತಾರೀಖು ೨೦ರ ವರೆಗೆ ಇಂಗ್ಲಿಷರ ಅಧಿಕಾರ ಜರಿದು) ಸ್ವತಂತ್ರಿಯಾಗಿ ಡಿಲ್ಲಿಯ (ಮಹಾ ಮೊಗಲರ) ಗದ್ದಿಗೆಯಲ್ಲಿ ಕುಳ್ಳಿತಿದ್ದ ಬಳಿಕ ಇಂಗ್ಲಿಷರು ದಂಗೆಯವರನ್ನು ಸೋಲಿಸಿ, ಡಿಲ್ಲಿ ತಿರಿಗಿ ಸಾಧಿಸಿ ಹಿಡುಕೊಂಡು, ಮಹಮ್ಮದಶ್ಯಾನನ್ನು ದಾಕ್ಷಿಣ್ಯ ನೋಡಿ ಕೊಲ್ಲಿಸದೆ, ಪೈಗು ದೇಶಕ್ಕೆ ಗಡಿದಾಟಿಸಿ ಬಿಟ್ಟರು. ಅವನ ಪುತ್ರಪೌತ್ರರನ್ನು, ಅವರು ಇಂಗ್ಲಿಷರಿಗೆ ನಡಿಸಿದ್ದಕ್ಕೆ ಮುಯ್ಯಿಗೆ ಮುಯ್ಯಿಯನ್ನು ತೀರಿಸಿ, ಕೊಂದೇ ಕೊಂದು ಬಿಟ್ಟರು. ಆದ್ದರಿಂದ ಮಹಮ್ಮದಶ್ಯಾ ಮಹಾ ಮೊಗಲರ ವಂಶದ ಮಹಾರಾಜರಲ್ಲಿ ೧೭ನೆಯವನೂ ಕಡೆಯವನೂ ಆದನು.



(ಡಿಲ್ಲಿಯ ಕಡೇ ಅರಸನಾದ ಮಹಮ್ಮದಶ್ಯಾ).

ಡಿಲ್ಲಿಯ ಬೀದಿಗಳಿಗೂ ಮನೆ ಗೋಡೆಗಳ ಕಲ್ಲುಗಳಿಗೂ ಬಾಯಿಯಿದ್ದರೆ, ಅವು ಎಂಥೆಂಥಾ ಕಥೆಗಳನ್ನು ಹೇಳಿ ತಿಳಿಸ ಬಹುದಿತ್ತು! ೧೮೫೭ನೇ ಇಸ್ವಿಯಲ್ಲಿ ಇಂಗ್ಲಿಷರ ಅಧಿಕಾರ ಮುರಿದು, ದಂಗೆಯವರದು ಏರಲಿಕ್ಕೆ ಎಷ್ಟೋ ನರರಕ್ತವು ಚಲ್ಲಿ ಹೋಯಿತು! ಆ ಮೇಲೆ ದಂಗೆಯವರದು ಮುರಿದು, ಇಂಗ್ಲಿಷರದು ತಿರಿಗಿ ಸ್ಥಾಪನೆಯಾಗಲಿಕ್ಕೆ ಎಷ್ಟೋ ಜನರು ಹತವಾದರು! ಮತ್ತು ಎಷ್ಟೋ

ಜನರು ಈ ಕಾಟಕಾಯಿಯ ಸಂಬಂಧದಿಂದ ದುಃಖಾಕ್ರಾಂತರಾಗಿ ಹೋಗಿದ್ದಾರು! ಹಾಗೂ ಇಂಗ್ಲಿಷರು ಮಹಾರಾಷ್ಟ್ರರನ್ನು ೧೮೦೩ನೇ ಇಸ್ವಿಯಲ್ಲಿ ಜಯಿಸಿ, ಡಿಲ್ಲಿಯನ್ನು ಮೊದಲಿನ ಸರ್ತಿ ಹಿಡಿದ ಸಮಯದಲ್ಲಿಯೂ, ಮಹಾರಾಷ್ಟ್ರದವರು ಅದನ್ನು ಸಾಧಿಸಿ ಕೊಂಡ ಸಮಯದಲ್ಲಿಯೂ, ಫಾರ್ಸಿಸ್ಥಾನದ ಅರಸನಾಗಿದ್ದ ನಾದಿರ್‌ಶ್ಯಾ ಅದನ್ನು ಹಿಡಿದು, ಸುಮಾರು ೩೦,೦೦೦ ನಿವಾಸಿಗಳನ್ನು ಹತ ಮಾಡಿಸಿ, ಎಲ್ಲಾ ಸೂರೆ ಮಾಡಿ, ಹೇರಳ ದ್ರವ್ಯಗಳನ್ನು ಕೊಳ್ಳೆ ಹಿಡಿದಾಗಲೂ, ಔರಂಗಜೇಬನ ಕಾಲದಲ್ಲಿಯೂ, ಬಾಬರನು ಅದನ್ನು ಹಿಡು ಕೊಂಡು, ಮಹಾ ಮೊಗಲರ ಸಾಮ್ರಾಜ್ಯದ ರಾಜಧಾನಿಯಾಗ ಮಾಡಿದಾಗಲೂ, ಹಿಂದುಸ್ಥಾನದ ಮಹಾ ಮೊಗಲರ ವಂಶಸ್ಥರ ಹಿರಿಯನೂ ಕೇವಲ ನರವ್ಯಾಘ್ರನೂ ಆಗಿದ್ದ ತೀಮುರ್‌ಲಂಗ ಅದನ್ನು ಗೆದ್ದು, ಸುಲಿಗೆ ಮಾಡಿದ ಸಮಯದಲ್ಲಿಯೂ ಎಷ್ಟೆಷ್ಟೋ ಹಾನಿ, ಎಷ್ಟೆಷ್ಟೋ ಅಶ್ರುಧಾರೆಯೂ ರಕ್ತಧಾರೆಯೂ, ಎಷ್ಟೆಷ್ಟೋ ಗೋಳಾಟ ಆ ಪಟ್ಟದಲ್ಲಿ ಆಗಿದ್ದೀತು! ಅದನ್ನೆಲ್ಲಾ ನೆನಸಿ ಕೊಂಡರೆ, ಈ ಪಟ್ಟರಾಣಿ ಒಂದು ಮಹಾ ಗೋರಿಯೇ ಸೈ ಎಂತ ಹೇಳ ತಕ್ಕದಾಗಿ ಕಂಡೀತು.

ಆದರೆ ಈಗಿನ ಕಾಲಕ್ಕೂ ಆ ಮೊಗಲರ ಕಾಲಕ್ಕೂ ಇರುವ ಹೆಚ್ಚುಕಡಿಮೆ ಕಂಡು ಬರುವಂತೆ, ಆ ಮೊಗಲ ರಾಜರಲ್ಲಿ ಕೆಲವರ ವಿಷಯ ಇನ್ನು ಸ್ವಲ್ಪ ವೃತ್ತಾಂತಗಳನ್ನು ಬರ ಕೊಡುತ್ತೇನೆ.

ತೀಮುರ್‌ಲಂಗನು ಜಿಂಗಿಸಖಾನನ ಬೆನ್ನಿನವರಲ್ಲಿ ಒಬ್ಬನಾಗಿ, ಪಶ್ಚಿಮ ತುರ್ಕಿಸ್ಥಾನದ ಮಧ್ಯದಲ್ಲಿರುವ "ಸಮರ್ಕಂದ" ಎಂಬ ಪಟ್ಟವನ್ನು ತನ್ನ ರಾಜಧಾನಿಯಾಗಿರಿಸಿ, ಹೆಬ್ಬುಲಿ ತನ್ನ ಗುಹೆಯಿಂದ ಮೃಗಬೇಟೆಗೆ ಹೊರಡುತ್ತಿರುವಪ್ಪಂದ ಅಲ್ಲಿಂದ ಇಡೀ ೩೫ ವರುಷ ಎಲ್ಲಾ ದಿಕ್ಕುಗಳಿಗೆ ಅಭಿಯೋಗ ಮಾಡುತ್ತಾ, ಪರರಾಜ್ಯಗಳನ್ನು ಸಾಧಿಸಿ ಕೊಂಡು, ಲೂಟಿ ಸೂರೆ ಮಾಡುತ್ತಾ ಇದ್ದನು. ಸುಮಾರು ೮ ಲಕ್ಷ ದಂಡಿನವರ ನಾಯಕನಾಗಿ, ಒಂದು ಮಹಾ ತುಫಾನೋ ಒಂದು ಜಲಪ್ರಳಯವೋ? ಎಂಬಂತೆ ಹಿಂದುಸ್ಥಾನ, ಚೀನ ದೇಶ, ವಿಲಾಯತಿಗೆ ಶೇರಿದ ಶೀಮೆಗಳನ್ನಾದರೂ ಒಳ ನುಗ್ಗಿ, ಏನೂ ಉಳಿಯದಂತೆ ಸುಲಿಗೆ ಮಾಡುತ್ತಿದ್ದನು. ಸುಲುಕೊಂಡ ದ್ರವ್ಯಾದಿಗಳನ್ನು ಸಮರ್ಕಂದಕ್ಕೆ ಒಯ್ಯಿಸಿ, ತನ್ನ ಉಗ್ರಾಣ ಖಜಾನೆಗಳಲ್ಲಿ ಅಗಣ್ಯ ದ್ರವ್ಯಗಳನ್ನು ಸಂಚಿಸಿದನು. ಡಿಲ್ಲಿಯನ್ನು ಹಿಡಿದು ಸೂರೆ ಮಾಡಿದ್ದಲ್ಲಿ ಹೇರಳ ನಿವಾಸಿಗಳನ್ನು ಪ್ರಾಣಹಿಂಸೆ ಮಾಡಿಸಿ, ಉಳಿದವರನ್ನು ಗುಲಾಮರೆಂತ ಶೆರೆ ಹಿಡಿದು, ಕೊಳ್ಳೆಗಳನ್ನು ಅವರ ಕೈಯಿಂದ ಹೊರಿಸಿ, ತನ್ನ ರಾಜಧಾನಿಗೆ ಮೈಯಿಸಿ ಮುಟ್ಟಿಸಿದನು. ಬಂದ ದಾರಿಯಲ್ಲೂ ಹೋದ ದಾರಿಯಲ್ಲೂ ಕಂಡ ಶೀಮೆ ಊರುಗಳನ್ನೆಲ್ಲಾ ತೀರಾ ಬೋಳು ಮಾಡಿಸಿ ಬಿಟ್ಟನು. ಅವನ ದ್ರವ್ಯಾಶಾಮಾರಿತನಕ್ಕೆ ಅವನ ಕ್ರೂರತನವು ಜೋಡಾಗಿತ್ತು. ಕಾಳಗದಲ್ಲಿ ಮಾತ್ರವಲ್ಲಾ ಖುಷಾಲಿಗೂ ನರಪ್ರಾಣಹಿಂಸೆ ಮಾಡುತ್ತಿದ್ದನು. ಒಮ್ಮೆ ೪,೦೦೦ ಮಂದಿ ಆರ್ಮೀನ್ಯ ರಾಹುತರನ್ನು ಸಜೀವವಾಗಿ ಹುಗಿಸಿ ಬಿಟ್ಟನು. ಬಗ್ದಾದ್ ಪಟ್ಟವನ್ನು ಸಾಧಿಸಿ ಕೊಂಡ ಸಂತೋಷಕ್ಕೆ ೯೦,೦೦೦ ಜನರ ಕಪಾಲಗಳಿಂದ ಒಂದು ತೋರಣವನ್ನು ಕಟ್ಟಿಸಿದನು. ೧೪೦೫ನೇ ಇಸ್ವಿಯಲ್ಲಿ ೭೦ ವರುಷದವನಾಗಿ ಈ ಕೊಳ್ಳೆಗಾರ ಶಿಖಾಮಣಿ ಮೃತ್ಯುವಿನ ಕೊಳ್ಳೆಯಾದನು.

ತೀಮುರ್‌ಲಂಗನ ಉತ್ತರಾಧಿಕಾರಿಗಳಲ್ಲಿ ೬ನೆಯವನಾಗಿದ್ದ ಬಾಬರನು ಕೊಳ್ಳೆಗಾಗಿ ಮಾತ್ರವಲ್ಲಾ ರಾಜ್ಯಸಂಪತ್ತಿಗಾಗಿಯೂ ಹಿಂದುಸ್ಥಾನವನ್ನು ಹೊಕ್ಕು, ಡಿಲ್ಲಿ ಸಾಧಿಸಿ ಕೊಂಡು, ಡಿಲ್ಲಿಯಲ್ಲಿ ತನ್ನ ಗದ್ದಿಗೆಯನ್ನಿರಿಸಿ, ಮಹಾ ಮೊಗಲರ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಬಾಬರನ ಮೊಮ್ಮಗನಾದ ಹ್ಯುಮಾಯುನನ ಮಗನಾದ ಅಕ್ಬರನು (೧೫೫೬ನೆಯಿಂದ ೧೬೦೫ನೇ ಇಸ್ವಿಯ ವರೆಗೂ ಆಳಿ) ಬಾಬರನಿಗಿಂತ ಕೀರ್ತಿಗೊಂಡ ಜಯಶಾಲಿಯೂ ಬಲಾಢ್ಯನೂ ಆಗಿದ್ದದಲ್ಲದೆ,

ದಯ, ನ್ಯಾಯ, ವಿವೇಕ ಮೊದಲಾದ ಗುಣಗಳಿಂದ ಸಂಯುಕ್ತನಾಗಿ, ಪರಮತದ್ವೇಷಿಯಾಗಿರದೆ, ಸರ್ವಜನಹಿತಚಿಂತಕ ರಾಜಶಿಖಾಮಣಿಯಾಗಿದ್ದನು. ಅವನ ಮಗನಾದ ಸೆಲಿಮನು (ಜಿಹಾಂಗೀರ) ಆಗಲಿ ಶ್ಯಾಜಿಹಾನ್ ಎಂಬ ಮೊಮ್ಮಗನು ಆಗಲಿ ಯಾವ ವಿಚಾರದಲ್ಲ್ಯಾದರೂ ಅವನಿಗೆ ಈಡಾಗದೆ ಹೋದ ಬಳಿಕ, ಅವನ ೪ ಮಂದಿ ಮರಿಮಗಂದಿಯರಲ್ಲಿ (ಅಂದರೆ ಶ್ಯಾಜಿಹಾನನ ೪ ಮಂದಿ ಮಗಂದಿಯರಲ್ಲಿ ಒಬ್ಬನಾದ ಔರಂಗಜೇಬನ ಕಾಲದಲ್ಲಿ (೧೬೫೮ನೆಯಿಂದ ೧೭೦೭ನೇ ಇಸ್ವಿಯ ವರೆಗೂ) ಮೊಗಲರ ಸಾಮ್ರಾಜ್ಯವಿನ್ನೊಮ್ಮೆ ಶೋಭಿಸುವಂಥಾದ್ದಾಯಿತು. ಔರಂಗಜೇಬನು ಬಹಳ ಕುಟಿಲನೂ ಯುಕ್ತಿಶಾಲಿಯೂ ಆಗಿ, ಮಹಾ ಸೋಪಾಯಸ್ಥನಾಗಿದ್ದನು. ಈತನ ಗದ್ದಿಗೆ ಶುದ್ಧ ಭಂಗಾರದ್ದೂ ನವರತ್ನಖಚಿತವೂ ಆಗಿ, ೮ ಕೋಟಿ ರೂಪಾಯಿಯಷ್ಟು ಬೆಲೆಯುಳ್ಳದ್ದಾಗಿತ್ತು. ಕೆಂಪು ಕಣೋಜ್ಜೆಯ ಶಿಲೆಯಿಂದ ಕಟ್ಟಿದ್ದ ಲೋಕಪ್ರಸಿದ್ಧವಾದ ಅವನ ರಾಜಮಂದಿರದ ಮತ್ತು ಅದಕ್ಕೆ ಕೂಡಿದ್ದ ವನಾದಿಗಳ ಸುತ್ತಳತೆ ೧½ ಮೈಲು ಆಗಿತ್ತು. ಅದಕ್ಕೆ ಶೇರುವ ಹೆಬ್ಬಾಗಲಿನ ಮೇಲೆ ಒಂದು ಶಾಸನವಿತ್ತಂತೆ. ಆ ಶಾಸನದ ಅರ್ಥವೇನಂದರೆ: “ಸ್ವರ್ಗವೆಂಬುವಂಥಾದ್ದು ಇರುವದಾದರೆ, ಅದು ಇಲ್ಲಿಯೇ, ಇಲ್ಲಿಯೇ, ಇಲ್ಲಿಯೇ ಇರಬೇಕು.”

ಔರಂಗಜೇಬ ಬಹು ಸ್ವಮತಾಭಿಮಾನಿಯಾಗಿ, ಹಿಂದುಗಳನ್ನು ನಯಭಯಗಳಿಂದ (ಮುಖ್ಯವಾಗಿ ಭಯದಿಂದ) ಮಹಮ್ಮದನ ಮತದಲ್ಲಿ ಶೇರಿಸ ಬಹಳ ಎತ್ತುಗಡೆ ಮಾಡಿದನು. ಅವನ ಕಾಲದಲ್ಲಿ ಮಹಾರಾಷ್ಟ್ರರೂ ಶಿಕ್ಕರೂ ಡಿಲ್ಲಿಯ ಸಾಮ್ರಾಜ್ಯದೊಳ ನುಗ್ಗಿ, ಬಹು ತೊಂದರೆ ಕೊಡಲೆಸಗಿದರು.

ಈಗ ಈ ದೇಶದ ಕ್ರೈಸ್ತರ ಮೇಲೆ ಮುಸಲಮಾನರು ಆಗಲಿ, ಬ್ರಾಹ್ಮಣರು ಆಗಲಿ ಅಲ್ಲಾ, ಕ್ರೈಸ್ತರಾದವರೇ ಧೊರೆತನ ನಡಿಸಿ ಆಳುತ್ತಿರುವದು ಕ್ರೈಸ್ತರಿಗೆ ಬಹಳ ಸಂತೋಷಕ್ಕೆ ಕಾರಣವಾಗಿರ ತಕ್ಕದ್ದು. ಮತ್ತು ಕ್ರೈಸ್ತರ ಮೇಲೆ ಮಾತ್ರವಲ್ಲಾ, ಬ್ರಾಹ್ಮಣರ ಮೇಲೆಯೂ ಮುಸಲಮಾನರ ಮೇಲೆಯೂ ಕ್ರೈಸ್ತರಾದವರೇ ರಾಜ್ಯಾಧಿಕಾರ ನಡಿಸಲಿಕ್ಕೆ ದೈವಾನುಕೂಲವನ್ನು ಹೊಂದಿ, ಸಮರ್ಥರಾದ್ದು ಮಹದಾಶ್ಚರ್ಯದ ಸಂಗತಿ ಸರಿ. ಅದನ್ನು ನೆನಸಿ, ಕ್ರೈಸ್ತರೆಲ್ಲರು ಮಹಾದ್ಭುತ ಕಾರ್ಯಕರ್ತನಾದ ವಿಶ್ವರಾಜ ಕ್ರಿಸ್ತನಾಥನನ್ನು ಕೊಂಡಾಡ ತಕ್ಕದ್ದು. ಆತನು ಸದಾ ಸ್ತುತ್ಯ, ಸಂಕೀರ್ತ್ಯ, ವಂದನೀಯ, ಏಕ, ಮಹನ್ಮಹಿಮಾಮಾನ ಕರ್ತನೇ!

ಆದರೆ ಭೂಲೋಕದಲ್ಲಿ ಏನೇನಾದರೂ ಸ್ಥಿರವಲ್ಲಾ; ರಾಜ್ಯಪದವಿಯೂ, ಯಾವದಾದರೂ, ಸ್ಥಿರವಲ್ಲಾ; ಆದ್ದರಿಂದ “ಕದಲದ” ರಾಜ್ಯವನ್ನು, ಸ್ಥಿರ, ಅಖಂಡ ಪದವಿಯನ್ನು ಹೊಂದಲಿಕ್ಕಾಗಿ ಕರೆಯಲ್ಪಟ್ಟ ನಾವು ಅದನ್ನು ಹೊಂದುವ ಹಾಗೆ ಹೋರಾಡಿ, ಸಾಧಿಸಿ ಕೊಳ್ಳುತ್ತಿರೋಣ! ತಕ್ಕ ಸಾಧನೆಯಿಲ್ಲದೆ ಏನೂ ಆಗಲಿ ಲಾಭವಾಗದು.

ಆದರೆ ಈಗಿನ ಹಿಂದುಸ್ಥಾನದ ಮಹಾರಾಜ್ಯಾಧಿಕಾರಿಗಳು ಸರ್ವ ಜಾತಿಯವರಿಗೂ ಸಕಲ ಮತದವರಿಗೂ ದ್ವೇಷಿಗಳಾಗಿರದೆ, ಹಿತಚಿಂತಕರೂ ಉಪಕಾರಿಗಳೂ ಆಗಿರುವದರಿಂದ, ಸಕಲರು ಅವರಿಗೆ ಕಪಟವಿಲ್ಲದ ಭಕ್ತಿಯಿಂದ ಹೊಂದಿ ಕೊಂಡಿರ ತಕ್ಕದ್ದು. ಮತ್ತು ಕ್ರೈಸ್ತಸಭೆಯವರಿಗೆ ಅವರಲ್ಲಿ ವಿಶೇಷ ಉಪಕಾರಗಳು ಇರುವದರಿಂದ, ನೀತಿ, ನ್ಯಾಯ, ಸದ್ಧರ್ಮಾದಿಗಳು ಹೆಚ್ಚೆಚ್ಚಾಗಿ ವಿಕ್ಟೋರಿಯ ಭೂಚಕ್ರವರ್ತಿನಿಯವರ ರಾಜಾಸನದ ಅಸ್ತಿವಾರವೂ ಭೂಷಣವೂ ಆಗಿ, ಆಳುವಂಥವರೂ ಪ್ರಜೆಗಳೂ ಏಕ ಜಗದೀಶನೂ ಕ್ರೈಸ್ತ ಸಭಾಪತಿಯೂ ಆಗಿರುವ ಸದಾಸ್ವಾಮಿಯಾದ ಕ್ರಿಸ್ತನಾಥನ ದಯದಿಂದ ಒಬ್ಬರಿಗೊಬ್ಬರು ಸಹಾಯಕರಾಗಿ, ಪರಿಣಾಮದಲ್ಲಿ ಬಾಳುವಂತೆ ಈ ದೇಶದ ಕ್ರೈಸ್ತರೆಲ್ಲರು ಚಿಂತಿಸಿ ಪ್ರಾರ್ಥಿಸುತ್ತಾ ಬರ ತಕ್ಕದಾಗಿದೆ.

## ಪಾಪನು ತಪ್ಪದವನೋ? ದಪ್ಪದವನೋ?

ಏನೊಂದು ಪುಸ್ತಕವನ್ನು ಛಾಪಿಸುವಲ್ಲಿ ತಪ್ಪುಗಳು ಶೇರಿ ಹೋಗದ ಹಾಗೆ ಬಹು ಜಾಗ್ರತೆಯಾಗಿ ನೋಡಿ ಕೊಳ್ಳ ಬೇಕಾಗುತ್ತದೆ. ಮೊದಲಿನ ಹಾಳೆಯನ್ನು ("ಪ್ರೂಫ್ ಶೀಟನ್ನು") ನೋಡಿ ತಿದ್ದುವ ಅಭ್ಯಾಸ ಬಹಳವಿದ್ದಂಥವರ ಕಣ್ಣಿಗಾದರೂ ಶೇರಿ ಹೋದ ತಪ್ಪುಗಳು ಕಾಣದೆ ಹೋಗುವದುಂಟು. ಎಷ್ಟೋ ಜಾಗ್ರತೆಯಾಗಿ ನೋಡಿ, ಓದಿ ಕೊಂಡು, ತಿದ್ದಿದರೂ, ತಪ್ಪಾಗದೆ ಹೋಗುವದು ಅಪರೂಪವೇ. ಐದನೇ ಸೆಕ್ಸ್ತುಸ್ ಎಂಬ ಪೋಪನು ಪ್ರಕಟಿಸಿದ ಉಲ್ಗಾತ ಎಂಬ ಲತೀನ ಬೈಬಲಿನ ಛಾಪೆಯಲ್ಲಿ ಶೇರಿ ಹೋದ ಪುಷ್ಕಲ ತಪ್ಪುಗಳ ಕಾರಣದಿಂದ ಕೇವಲ ವಿಲಕ್ಷಣ ಗ್ರಂಥವಾಗಿ ಹೋಗಿ, ಛಾಪೇ ತಪ್ಪುಳ್ಳ ಪುಸ್ತಕಗಳಲ್ಲಿ ಮಿಂಚುವಂಥಾದ್ದಾಯಿತು. ಆ ಬೈಬಲ್ ಛಾಪೆಯಾಗುವ ಸಮಯದಲ್ಲಿ ಸದರಿ ಪೋಪನು ತಾನೇ ಕೂತು, ಹಾಳೆಗಳ ಒಂದೊಂದು ಪ್ರಥಮ ಪ್ರತಿಯನ್ನು ನೋಡಿ, ಓದಿ ಕೊಂಡು, ತಿದ್ದುತ್ತಿದ್ದನು; ಆದಾಗ್ಯೂ ಆ ಬೈಬಲಿನ ಛಾಪೆ ತಪ್ಪುಗಳಿಂದ ಪುಷ್ಕಲ ತೀವಿದ್ದಾಗಿ, ಒಂದು ದೋಷಸಂಗ್ರಹಶಿರೋಮಣಿಯಂತಾಯಿತು. ತಪ್ಪುಗಳನ್ನು ಮರೆ ಮಾಡಲಿಕ್ಕಾಗಿ ಆ ಯುಕ್ತಿಶಾಲಿ ಪೋಪನು ಅನಂತರ ಕಾಗದದ ಚಿಕ್ಕ ಚಿಕ್ಕ ಪಟ್ಟಿಗಳ ಮೇಲೆಯೂ ತಣಕೆಗಳ ಮೇಲೆಯೂ ತಿದ್ದಿದ್ದನ್ನು ಛಾಪಿಸಿ, ಆ ಪಟ್ಟಿಗಳನ್ನೂ ತಣಕೆಗಳನ್ನೂ ತಪ್ಪುಗಳ ಮೇಲೆ ಅಂಟಿಕ್ಕಿಸಿದನು. ಮೈ ತುಂಬ ಹುಣ್ಣಿಗೆ ಲೇಪಗಳನ್ನೂ ಮುಲಾಮುಗಳನ್ನೂ ಹಾಕಿ ಕೊಂಡು ಇರುವವನು ಹ್ಯಾಗೆ ಛಂದ ಕಾಣುತ್ತಾನೋ, ಹಾಗೆಯೇ ತೇಪೆಗಳಿಂದ ತೀವಿ, ವಿಲಕ್ಷಣವಾದ ಆ ಬೈಬಲು ಛಂದವೆಂತ ಕಾಣುವದು. ರೋಮಾಯರು ಪಾಷಂಡಿಗಳೆಂಧೇಳುವ ಇತರ ಕ್ರೈಸ್ತ ಸಭೆಯವರು ಕೋಟಿ ತೇಪೆ ಬಿದ್ದ ಆ ಬೈಬಲನ್ನು ನೋಡಿ, ರೋಮಾಯರ ಮಹಾ ಗುರುಮೂರ್ತಿಯಾದ ಪೋಪನ ಚಮತ್ಕಾರಕ್ಕೂ ಕೌಶಲ್ಯಾತಿಶಯಕ್ಕೂ ಹಿಗ್ಗಿ ಕೊಂಡು, ಚೋದ್ಯ ಪಟ್ಟು, ಪರಿಹಾಸ್ಯಗಳನ್ನು ಮಾಡಲಿಕ್ಕೆ ಹತ್ತಿದರು. ಆ ಪೋಪನ ನಾಸಾಕಮಲಕ್ಕೆ ಅವರ ಪರಿಹಾಸ್ಯಗಳ ವಾಸನೆ ಹತ್ತಿ ತಿಳಿದು ಬಂದದಕ್ಕೆ, ಅವನು ಆ ಛಾಪೆಯ ಪ್ರತಿಗಳನ್ನು ಇನ್ನು ಪ್ರಸಿದ್ಧ ಮಾಡ ಬಾರದು, ಪ್ರಸಿದ್ಧವಾದಂಥವುಗಳನ್ನು ತೆಗೆದು ಕೊಂಡವರ ಕೈಯಿಂದ ವಾಪಸು ಈಸಿಕೊಳ್ಳ ಬೇಕೆಂದು ಅಪ್ಪಣೆ ಕೊಟ್ಟನು. ಈ ಅಪ್ಪಣೇ ಮೇರೆಗೆ ಅವನ ಕಡೆಯವರು ಶತಪ್ರಯತ್ನ ಮಾತ್ರವಲ್ಲಾ ಅನುಕೂಲವಾದ್ದಲ್ಲಿ ಬಲಾತ್ಕಾರವನ್ನಾದರೂ ಮಾಡಿ, ಹೊರಟ ಪ್ರತಿಗಳನ್ನು ವಾಪಸು ಈಸಿಕೊಳ್ಳಲಿಕ್ಕೆ ಹತ್ತಿದರು. ಆದರೂ ಹೊರಟ ಪ್ರತಿಗಳೆಲ್ಲಾ ವಾಪಸು ಶಿಕ್ಕಲಿಲ್ಲಾ. ಕೆಲವುಗಳಾದರೂ ಇನ್ನು ಸದ್ಯಕ್ಕೂ ಉಳಿದಿದ್ದಾವೆ. ಇತ್ತಲಾಗೆ ಅಂಥಾದ್ದೊಂದು ಪ್ರತಿಗೆ ಲೈಲಮಿನಲ್ಲಿ ೬೩೦ ರೂಪಾಯಿ ಮುಟ್ಟಿತು. ಕೊಂಡು ಕೊಂಡವನು ಧನಿಕನಾಗಿ, ಅದನ್ನು ಬರೀ ಕೌತುಕಕ್ಕೂ ವಿನೋದಕ್ಕೂ ಇಟ್ಟು ಕೊಳ್ಳ ಬೇಕೆಂತ ಇಷ್ಟು ಕ್ರಯಕ್ಕೆ ತೆಗೆದು ಕೊಂಡನು. ಆ ಬೈಬಲಿನ ಛಾಪೆಗೆ ಒಂದು ಪೀಠಿಕೆಯನ್ನು ಸಹಾ ಬರದು, ಆ ಪೋಪನು ನಿರೂಪಿಸಿದ್ದೇನಂದರೆ: "ನಾವು ಈಗ ಛಾಪಿಸ ಹೋಗುವ ಬೈಬಲನ್ನು ಯಾರಾದರೂ ತಿರಿಗಿ ಛಾಪಿಸಿ, ಏನಾದರೂ ತಿದ್ದ ಬೇಕೆಂತ ಬೇರೆ ಮಾಡುವ ಪಕ್ಷಕ್ಕೆ ಅಂಥ ಮನುಷ್ಯ, ವಾ ಪುಸ್ತಕವರ್ತಕ, ವಾ ಪಂಡಿತ ಶಾಪಗ್ರಸ್ತನಾಗಿ ಸಭಾಬಹಿಷ್ಕೃತನೇ." ತಪ್ಪುಗಳಿಂದ ತೀವಿದ ಪುಸ್ತಕವನ್ನೂ ಸದರಿ ನಿರೂಪವನ್ನೂ ನೋಡಿ, ಆ ಕಾಲದವರು ಬಹು ಚೋದ್ಯ ಪಟ್ಟು, ಬಹಳ ವಿನೋದ ಮಾಡಿದರಂತೆ.

## ಉತ್ತರಗಳು.

(೭೮ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.—ಧಾರವಾಡದ ಒಬ್ಬ ಯೌವನಸ್ಥನು ಸಹ ತಕ್ಕಷ್ಟು ಸರಿಯಾದ ಉತ್ತರವನ್ನು ಬರದು ಕಳುಹಿಸಿದ್ದಾನೆ.)

6. ಆತ್ಮಿಕ ಜೀವವಿಲ್ಲದವರು.—ಪ್ರಕಟ. ೩, ೧.

7. ದಾನಿಯೇಲ್ ನೆಬುಕದ್ನೇಚರ್.—ದಾನಿಯೇಲ. ೨ನೇ ಸಂಧಿ.

8. ಮೋಶೆಯೂ ಪೌಲನೂ.—ಹೊರಡೋಣ. ೨, ೩. ಅಪೊ. ಕ್ರಿ. ೯, ೨೫.

9. ಪೇತ್ರನ ಭೇಟಿಗೆ ಬಂದ ಅನನೀಯನೂ ಸಫ್ಫೈರಳೂ ಹೊರಟು ಹೋಗದೆ, ಸತ್ತು ಹೋಗಿ, ಬಿಟ್ಟು ಹೋದರು.—ಅಪೊ. ಕ್ರಿ. ೫, ೧—೧೦.

10. ಪೇತ್ರನು ಸಜೀವವಾಗಿದ್ದ ಚೀಲದಿಂದ, ಅಂದರೆ ಮೀನಿನ ಬಾಯಿಯಿಂದ, ತೆಗದು ಕೊಂಡ ಹಣವನ್ನು ಕೊಟ್ಟು, ಮಂಡೆತೆರಿಗೆ ತೆತ್ತನು.—ಮತ್ತಾ. ೧೭, ೨೪—೨೭.

---

## ಹೊಸ ಪ್ರಶ್ನೆಗಳು.

11. ಈ ದೇಶದಲ್ಲಿ "ಮಂಗಾ!" ಎಂಬದು ಹ್ಯಾಗೋ ಹಾಗೆಯೇ ಜರ್ಮನ್ ದೇಶದಲ್ಲಿ "ಕತ್ತೇ ಮಂಡೇ!" ಎಂಬದು ರೂಢಿಯಾಗಿ ಬೈಯುವ ಮಾತಾಗಿದೆ. ಆದರೆ ಎಲ್ಲಿ ಕತ್ತೇ ಮಂಡೆಗಳಾದರೂ ಬಹು ಪ್ರಿಯವಾಗಿ ಹೋದ ಸಂಗತಿಯಾಯಿತು?

12. ಕಾರಿ ಬಿಡಲ್ಪಡುವ ಮಾತು ಯಾರಿಗೆ ಭಯಕ್ಕೆ ಕಾರಣ? ಆದರೆ ಯಾರಿಗೆ ಕಾರಿ ಬಿಡಲ್ಪಟ್ಟದು ಸಂತೋಷಕ್ಕೆ ಕಾರಣವಾಯಿತು?

13. ಗ್ರೀನಲಂದ ಮೊದಲಾದ ಉತ್ತರ ಧ್ರುವಸಮುದ್ರದ ಕಡೆಯ ದ್ವೀಪಾಂತರಗಳಲ್ಲಿ ವಾಸವಾಗಿರುವ ಎಸ್ಕಿಮೋಯರ ಹುಡುಗರು ಮಿಶ್ಯನೇರಿಗಳು ಕೊಟ್ಟ ಅಕ್ಷರಮಾಲೆ ಇತ್ಯಾದಿ ಪುಸ್ತಕಗಳನ್ನು ಹಶಿವೆಗೆ ತಿಂದು ಬಿಟ್ಟದ್ದುಂಟು. ಇವರು ಪುಸ್ತಕಗಳನ್ನು ತಿಂದ ಸಂಗತಿ ಯಾರನ್ನು ನೆನಪು ಹುಟ್ಟಿಸ ಬಹುದು?

14. ನಿತ್ಯಾ ಹಗಲಿರುಳು ತಮ್ಮತಾವನ್ನು ಬಿಡದೆ ನಿಂತಿದ್ದ ಆರು ಜೋಡು ಎತ್ತು ಯಾರಿಗಿತ್ತು?

15. ತನ್ನ ರಾಜಪೀಠವನ್ನೇರುವ ಮೊದಲು ಮರಣ ತಾಳಿದ ಮಹಾರಾಜನ ಹೆಸರೇನು?

---

## ವಿವಿಧ ವರ್ತಮಾನಗಳು.

ಕೇಳಿದರೆ ರೋಮಾಂಚವಾಗ ತಕ್ಕ ಮಹಾ ಭಯಂಕರ ವಿಪತ್ತು ಎರಡು ತಿಂಗಳ ಹಿಂದೆ ಬಂಗಾಳದಲ್ಲಿ ಸಂಭವಿಸಿತು. ಗಂಗಾ ಬ್ರಹ್ಮಪುತ್ರ ನದಿಗಳು ಬಡುಕೊಂಡು ತಂದ ಮಣ್ಣಿನಿಂದ ಉಂಟಾದ ಕೆಲ ದ್ವೀಪಗಳು ಅಲ್ಲಿ ಅವೆ. ಒಂದು ಮಧ್ಯರಾತ್ರಿ ಪ್ರಚಂಡ ತುಫಾನಾಗಿ ಸಮುದ್ರದ ದೊಡ್ಡ ತೆರೆ ಹೆಚ್ಚು ಕಡಿಮೆ ಇಪ್ಪತ್ತು ಅಡಿ ಎತ್ತರವಾದದ್ದು ಒಂದು ಕಡೆಯಿಂದ ಒಳ ನುಗ್ಗಿತು. ತುಫಾನು ತಿರುಗಿ ಮತ್ತೊಂದು ಕಡೆಯಿಂದ ನದಿಯ ನೀರು ಒಳಗೆ ಬಂತು. ಹೀಗೆ ೩,೦೦೦ ಚಚ್ಚೌಕ ಮೈಲು ವಿಸ್ತೀರ್ಣವಾದ ಪ್ರದೇಶಕ್ಕೆ ಜಲಪ್ರಳಯ ಬಂದು, ೨೧೫,೦೦೦ ಜನರು ನಾಶನವಾದರು; ಅನೇಕರು ಎತ್ತರ ಮರಗಳ ಮೇಲೆ ಹತ್ತಿ ಜೀವ ಉಳಿಸಿ ಕೊಂಡರು. ಮಧ್ಯಾಹ್ನಕ್ಕೆ ನೀರು ತಗ್ಗಿ ಹೋಗಿ, ಮರಗಳಲ್ಲಿದ್ದವರು ಕಳಗೆ ಬರುವ ಹಾಗಾಯಿತು. ದೇಶದಲ್ಲೆಲ್ಲಾ ಹೆಣಗಳ

ರಾಶಿ ಕೊಳೆತು ನಾರುವದರಿಂದ ವ್ಯಾಧಿಯುಂಟಾ ದೀತೋ ಎಂತ ಭಯುವದೆ. ಎರಡು ದಿನ ಆಹಾರಕ್ಕೆ ಏನೂ ಇಲ್ಲದೆ ಸುಮಾರು ಜನರು ಮೃತವಾದರು. ಕಡೆಗೆ ಹಗೆವುಗಳನ್ನು ತೆರೆಯಲಾಗಿ, ಯಥೇಷ್ಟ ಧಾನ್ಯಕಾಳು ಶಿಕ್ಕಿತು. ಜನರು ಹತ್ತಿಕೊಂಡ ಮರಗಳಲ್ಲಿ ವಿಷಜಂತುಗಳೂ ಹತ್ತಿಕೊಂಡವು; ಆದರೆ ಯಾರಿಗೂ ಕೇಡು ಮಾಡಲಿಲ್ಲವಂತೆ. ಜಗತ್ಪತಿಯಾದ ದೇವರ ಚಿತ್ತದ ಹೊರ್ತು ಒಂದು ಗುಬ್ಬಿಯಾದರೂ ನೆಲಕ್ಕೆ ಬೀಳದೆಂಬ ವಾಕ್ಯವು ಉಂಟಷ್ಟೇ. ಈ ವಿಪತ್ತಿನಿಂದಲೂ ಬೇರೆ ಶೀಮೆಗಳಲ್ಲಿಯ ದುರ್ಭಿಕ್ಷೆಯಿಂದಲೂ ಅವನೇ ನಮ್ಮ ಸಂಗಡ ಮಾತಾಡುತ್ತಾನೆ. ಅವನ ತ್ರಾಣವಾದ ಕೈಕೆಳಗೆ ನಮ್ಮನ್ನು ತಗ್ಗಿಸಿಕೊಳ್ಳುವಾ.

ಸೊಲ್ಲಾಪುರ ಅತ್ತಕಡೆಯ ಸಂಕಷ್ಟವನ್ನು ವರ್ಣಿಸುವದು ಪ್ರಯಾಸವಾಗಿದೆ: ಹೊಟ್ಟೆಗಿಲ್ಲದೆ ಮತ್ತು ವಾಂತಿಭೇದಿಯಿಂದ ಎಷ್ಟೋ ಜನ ಮೃತವಾದರು; ಕೆಲ ತಾಲೂಕುಗಳವರು ವಲಸೆ ತೆಗದು, ಹಲವರು ನಿಜಾಮನ ರಾಜ್ಯ ಪ್ರವೇಶ ಮಾಡಿದರು; ಸಾವಿರಾರು ಜನರು ಯಾವ ದಿಕ್ಕಿಗೆ ಹೋಗೋಣವೆಂದರಿಯದೆ, ಅಲೆದಾಡುತ್ತಿದ್ಧಾರೆ.

ಕರ್ನೂಲಿನಲ್ಲಿ ಉಪವಾಸ ಮಾಡಿ ಮರುಳರಾದ ಜನರು ಕೂಡಿ, ಭಂಡಸಾಲೆಗಳನ್ನು ಲೂಟಿ ಮಾಡುವವರಾದರು; ಬಂದೋಬಸ್ತಿಗೆ ಬಂದ ಪೊಲೀಸಿನವರ ಮೇಲೆಯೂ ಬಿದ್ದು, ಅನೇಕರಿಗೆ ಘಾಯ ಮಾಡಿದರು. ಆದ್ದರಿಂದ ಶಿಪಾಯರ ಫೌಜೂ ಪೊಲೀಸ ಫೌಜೂ ಅಲ್ಲಿಗೆ ರವಾನೆ ಮಾಡಿದ್ಧಾರೆ.

೧೮೬೦ನೇ ಇಸ್ವಿಯಲ್ಲಿ ನವಸೀಲಂದವೆಂಬ ದ್ವೀಪಗಳಲ್ಲಿ ೫೫,೨೭೫ ಜನ ಮವೋರಿಯರೂ (ಮೂಲ ನಿವಾಸಿಗಳು), ೯೯,೦೨೧ ಜನ ವಿಲಾಯತಿಯವರೂ ಇವರ ವಂಶದವರೂ ಇದ್ದರಂತೆ. ೧೮೭೨ನೇ ಇಸ್ವಿಯ ವರೆಗೆ ಅವರು ೩೬,೩೫೯ ಜನರಾದಷ್ಟು ಕಡಿಮೆಯಾಗುತ್ತಾ, ಇವರು ೨೬೬,೮೫೨ ಜನರಾದಷ್ಟು ಹೆಚ್ಚುತ್ತಾ ಬಂದರಂತೆ.

ರುಸ್ಯ ರಾಜ್ಯದ ಸರಹದ್ದಿನ ಕಡೆಯ ಕೋಟೆಗಳನ್ನು ತುರ್ಕರು ಬಂದೋಬಸ್ತು ಮಾಡುತ್ತಿದ್ಧಾರೆ. ಕ್ರೈಸ್ತರ ಮೇಲೆ ತಮಗಿರುವ ತಾತ್ಪರ್ಯವು ಎಂಥಾದ್ದೆಂತ ತುರ್ಕರು ಅರ್ಮೇನ್ಯ ದೇಶದ ಎರ್ ಜರುಮೆಂಬ ಪಟ್ಟಣದಲ್ಲಿಯೂ ಕಾಣಿಸಿದ್ಧಾರೆ. ಆ ಪಟ್ಟಣದ ತುರ್ಕರು ಕ್ರೈಸ್ತರ ಮೇಲೆ ಬಿದ್ದು, ೬೦೦ ಜನರನ್ನು ಕಡಿದು ಕಡಿದು, ಹೊಡದು ಹೊಡದು, ಕೊಂದು ಬಿಟ್ಟರಂತೆ.

ಪೋಪನು ತುರ್ಕರ ಸುಲ್ತಾನನ ಸಂಗಡ ಇತ್ತಲಾಗೆ ಹೆಚ್ಚಿನ ಸ್ನೇಹಾಚಾರದಲ್ಲಿ ಶೇರಿ, ಒಂದು ಒಪ್ಪಂದ ಮಾಡಿ ಕೊಂಡನಂತೆ. ಪೋಪನೂ ಸುಲ್ತಾನನೂ ಜೋಡು! ಚಲೋದಾಯಿತು! ಪಿಲಾತನೂ ಹೆರೋದನೂ ಕೂಡಿ, ಯೇಸುವನ್ನು ಉಪಚರಿಸಿದ ಸಂಗತಿಯಾಯಿತು.

ತಿರುವಾಂಕೋಡಿನಲ್ಲಿ ಸದ್ಯಾ ಆದ ಖಾನೆಸುಮಾರೀ ಲೆಖ್ಖದಿಂದ ೨,೩೧೧,೩೭೯ ನಿವಾಸಿಗಳಿದ್ಧಾರೆಂತ ತಿಳಿದು ಬಂತು; ಅವರಲ್ಲಿ ಕ್ರಿಸ್ತೀಯರು ೪೬೮,೫೧೮, ಅಂದರೆ ಐದರಲ್ಲಿ ಒಂದಂಶಕ್ಕಿಂತ ಹೆಚ್ಚು ಇದ್ಧಾರೆ.

ಕೊನ್ಸ್ತಂತಿನೊಪೊಲಿಯ ನಿವಾಸಿಗಳಲ್ಲಿ ಐದರಲ್ಲಿ ಎರಡಂಶ ಕ್ರಿಸ್ತೀಯರು, ಅಂದರೆ ೧೭೧,೦೦೦ ಮಂದಿ; ಮುಸಲ್ಮಾನರು ೧೮೩,೦೦೦. ತುರ್ಕಿ ರಾಜ್ಯದ ಯುರೋಪಿಯನ್ ಜಿಲ್ಲೆಗಳಲ್ಲಿ ಕ್ರಿಸ್ತೀಯರು ೪,೫೧೩,೦೦೦; ಮುಸಲ್ಮಾನರು ೩,೪೬೦,೦೦೦.

ಅಮೇರಿಕದ ತೀರದಲ್ಲಿ ಮಹಾ ತುಫಾನು ಉಂಟಾಗಿ ಹೆಚ್ಚು ಕಡಿಮೆ ೧೦೦ ಹಡಗಗಳು ಒಡೆದು, ಅನೇಕರು ಸತ್ತು ಹೋದರು.

ಜಾಪಾನಿನಲ್ಲಿ ಪೂರ್ವದ ಕಟ್ಟಳೆ ಏನಂದರೆ: ಐದೈದು ದಿವಸಕ್ಕೊಂದು ದಿನ ರಜೆ; ಈಗ ಈ ಕಟ್ಟಳೆ ನಿಲ್ಲಿಸಿ, ಶನಿವಾರ ಅರ್ಧ ದಿನ ಮತ್ತು ಆದಿತ್ಯವಾರವು ರಜದ ದಿನವಾಗಿರ ಬೇಕೆಂತ ಶೀಮೆಯಲ್ಲೆಲ್ಲಾ ಪ್ರಸಿದ್ಧ ಮಾಡೋಣವಾಯಿತು.

ಎಂಭತ್ತೊಂದು ಟನ್ (೧ ಟನ್ ಅಂದರೆ ೪ ಖಂಡಿ) ಹೊರುವ ಮಹಾ ಭೂತ ಫಿರಂಗಿಗೆ ಒಂದು ಸಾರಿ ಬಾರು ಮಾಡುವದಕ್ಕೆ ೩೦೦ ರೂಪಾಯಿ

ಖರ್ಚು ಮುಟ್ಟುತ್ತದೆ. ಒಂದು ಸರ್ತಿ ಹೊಡಿಯುವದಕ್ಕೆ ಒಂದು ಟನ್ ಲೋಹದ ಗುಂಡು ಬೇಕು. ಇಷ್ಟು ಖರ್ಚು ಭರ್ತಿಯಾಗುವದಕ್ಕೆ ಆ ಫಿರಂಗಿ ಎಷ್ಟು ಮಂದಿಯನ್ನು ಕೊಲ್ಲಬೇಕಾಗುವದು?

ಅಮೇರಿಕದ ಬ್ರುಕ್ಲಿನ್ ಎಂಬಲ್ಲಿ ಒಂದು ನಾಟಕಶಾಲೆಗೆ ಬೆಂಕಿತಾಗಿ, ೨೮೯ ಮಂದಿ ಸತ್ತುಹೋದರು.

ತಿನ್ನವೆಲ್ಲಿ ಜಿಲ್ಲೆಯಲ್ಲಿ ಒಬ್ಬ ಯೌವನಸ್ಥ ಹೆಂಗಸು, ಗಂಡನು ತೀರಿ ಹೋದ್ದರಿಂದ, ಬಹು ದುಃಖಸ್ಥಳಾಗಿ, ವೈರಾಗ್ಯ ಹಿಡಿದು, ನಾಲ್ಕು ತಿಂಗಳ ವರೆಗೆ ದಾನಧರ್ಮ ಮಾಡುತ್ತಾ ಇರುವವಳಾದಳು; ಒಂದು ದಿನ ತನ್ನ ಮನೆಯೊಳಗೆ ತಾನೇ ಹೊಂಡ ಅಗಿದು, ಅದರಲ್ಲಿ ಗಂಧದ ಕಟ್ಟಿಗೆ ಹಾಕಿ, ಉರಿ ಹಚ್ಚಿ, ರಾತ್ರೀ ವೇಳೆಯಲ್ಲಿ ಕದಗಳನ್ನೆಲ್ಲಾ ಮುಚ್ಚಿ ಕೊಂಡು, ಆ ಹೊಂಡದಲ್ಲಿ ತಾನಾಗಿ ಬಿದ್ದು, ಪ್ರಾಣ ತಕ್ಕೊಂಡಳಂತೆ.

ಇಡೀ ಲೋಕದಲ್ಲಿ ಎರಡು ಲಕ್ಷ ಹಬೆಯಂತ್ರಗಳು ಅವೆ; ಅವುಗಳ ಶಕ್ತಿ ಹನ್ನೆರಡು ಮಿಲ್ಲಿಯ ಕುದುರೆಗಳ ಶಕ್ತಿಗೆ ಅಥವಾ ನೂರು ಮಿಲ್ಲಿಯ ಮನುಷ್ಯರ ಶಕ್ತಿಗೆ ಸಮವಾಗಿದೆ.

ಸ್ಪೇನಿನಲ್ಲಿ ಸರಕಾರಕ್ಕೆ ಒಳಸಂಚು ಮಾಡಿದವರು ಕೆಲವರು ಶಿಕ್ಕರಂತೆ.

ಡಿಲ್ಲಿಯಲ್ಲಿ ಆಗಲಿಕ್ಕಿರುವ ಮಹಾ ದರಬಾರದಲ್ಲಿ ೬೬ ಮಂದಿ ದೇಶೀಯ ಮಹಾರಾಜರೂ ರಾಜರೂ, ೧೪೫ ಮಂದಿ ಮಹಾ ಶ್ರೀಮಂತರೂ ಕೂಡಿ ಬರುವರಂತೆ.

ಮದಗಸ್ಕರ ದ್ವೀಪದ ರಾಣಿ ಪ್ರಜೆಗಳಿಗೆ ಮದ್ಯಪಾನದಿಂದಾಗುವ ನಾನಾ ಕೇಡುಗಳನ್ನು ತಿಳೇಪಡಿಸಿ, ತನ್ನ ರಾಜ್ಯಧಾನಿಯಲ್ಲಿ ಸುತ್ತಮುತ್ತಲಿನ ದೇಶದಲ್ಲಿ ಮದ್ಯ ಮಾರ ಬಾರದೆಂದೂ, ಮಾರಿದರೆ ಶಿಕ್ಷೆಯಾಗುವದೆಂದೂ, ಆಜ್ಞೆ ಪ್ರಕಟಿಸಿದ್ಧಾಳೆ.

ಆರು ವರ್ಷ ಹಿಡಿದು ಹದಿನಾರು ವರ್ಷ ವರೆಗೆ ಪ್ರಾಯವುಳ್ಳ ಬಾಲವಿಧವೆಗಳು ಹಿಂದುಸ್ಥಾನದಲ್ಲಿ ಎಂಭತ್ತುಸಾವಿರ ಇದ್ಧಾರಂತೆ. ಈ ವಿಧವೆಗಳು ಮಾಡುವ ದುಷ್ಕರ್ಮಗಳಿಗೆ ಬಾಲವಿವಾಹಗಳು ಕಾರಣವಲ್ಲವೋ?

ಗೆದಲೆಗಳ ರಾಣಿ ಹುತ್ತದಲ್ಲೇ ಇದ್ದು, ಚಲಿಸದೆ ಮೊಟ್ಟೆ ಇಡುತ್ತಲೇ ಇರುತ್ತದೆ; ನಿಮಿಷ ಒಂದಕ್ಕೆ ಅರುವತ್ತು ಮೊಟ್ಟೆಗಳನ್ನು, ದಿನ ಒಂದಕ್ಕೆ ಎಂಭತ್ತು ಸಾವಿರದ ಮೇಲೆ ಮೊಟ್ಟೆಗಳನ್ನು ಇಡುತ್ತದೆ; ಇಡೀ ವರುಷಕ್ಕೆ ಈ ರಾಣಿಗೆ ಅದೇ ಕೆಲಸ.

ಕಲ್ಕತದಲ್ಲಿ ಒಬ್ಬ ಬ್ರಾಹ್ಮಣ ವಿಧವೆ ಸಂಭಾವಿತೆಯಾದವಳು ಸ್ನಾನ ಹೊಂದಿ ಕಿಸ್ತನ ಸಭೆಯನ್ನು ಸೇರಿದಳು.

ಖಾನಪುರದಲ್ಲಿ ಒಬ್ಬ ಬಂಗಾಳಿ ಬಾಬು ಅಸ್ವಸ್ಥವಾಗಿ ಆಸ್ಪತ್ರಿಯಲ್ಲಿರುವಾಗ್ಯೆ ಒಬ್ಬ ಬಂಗಾಳಿ ಕ್ರಿಸ್ತೀಯನು ದಿನಾಲೂ ಅವನನ್ನು ನೋಡುವದಕ್ಕೆ ಬರುತ್ತಿದ್ದನು. ಇವನಿಂದ ಅವನು ಕ್ರಿಸ್ತಧರ್ಮದ ಮುಖ್ಯ ಸಾರಾಂಶವನ್ನು ವಿವರವಾಗಿ ಕೇಳಿ ತಿಳುಕೊಂಡು, ನಂಬಿ, ಏನೂ ಸಂದೇಹ ಪಡದೆ ಅನೇಕ ಸಾಕ್ಷಿಗಳ ಮುಂದೆ ಸ್ನಾನ ಹೊಂದಿದನು.

ನ್ಯೂಬರ್ಲಿಯನ್ಸ ಎಂಬಲ್ಲಿ ಒಬ್ಬ ಕಥೋಲಿಕ ಪಾದರಿ ತನ್ನ ಸಭಾಕ್ರಮಗಳಿಗೆ ವಿರೋಧವಾಗಿ ವಿವಾಹ ಮಾಡಿ ಕೊಂಡಿದ್ಧಾನೆ; ಹೀಗೆ ಅವನೂ ಅವನ ಸಭೆಯವರಲ್ಲಿ ೧,೫೦೦ ಮಂದಿಯೂ ಪಾಷಂಡಿಗಳ ಲೆಖ್ಖದಲ್ಲಿ ಸೇರಿ, ಪೋಪನ ಶಾಪಕ್ಕೆ ಗುರಿಯಾಗುವವರಾದರು.

ಗ್ರೇಕ ದೇಶದ ಅಥೇನೆ ಪಟ್ಣದಲ್ಲಿ ಪ್ರೆಸಬಿತೆರಿಯನ ಮಿಶ್ಯನು ಗ್ರೇಕ ಕ್ರಿಸ್ತೀಯರೊಳಗೆ ಸುವಾರ್ತೆ ತಿಳಿಸುತ್ತಿದ್ಧಾರೆ; ಗ್ರೇಕರು ಅವರ ಕೆಲಸವನ್ನು ಅಟಕಾಯಿಸುವದಕ್ಕೆ ನಾನಾ ಪ್ರಕಾರ ಪ್ರಯತ್ನ ಮಾಡಿದರೂ ಸಾಧ್ಯವಾಗದೆ ಹೋದದರಿಂದ, ಮಿಶ್ಯನ ಪ್ರಾರ್ಥನಾಲಯಕ್ಕೆ ಯಾರೂ ಹೋಗದ ಹಾಗೆ, ಸಮೀಪದಲ್ಲಿ ತಾವೇ ಪ್ರಸಂಗ ಪ್ರಾರ್ಥನೆ ನಡಿಸುತ್ತಿದ್ಧಾರೆ. ಮತ್ತು ಗ್ರೇಕ ಸಭಾಸಂಘದವರು ಪ್ರೊತೆಸ್ತಂತರ ಬೋಧನೆಗೆ ಜಾಗ್ರತೆಯಾಗಿರ ಬೇಕೆಂದು ಪ್ರಸಿದ್ಧಿ ಮಾಡಿದ್ಧಾರೆ.

ಈ ವರುಷ ಬಹಳ ಬಹಳ ಮುಸಲ್ಮಾನರು ಮಕ್ಕ ಮದೀನಗಳಿಗೆ ಯಾತ್ರೆ ಮಾಡಿದರು; ಮುಂಚೆ ಎಂದಿಗೂ ಅಷ್ಟು ಮಂದಿ ಹೋದದ್ದಿಲ್ಲವಂತೆ.

Printed at the Basel Mission Press, Mangalore.

# ಕ್ರೈಸ್ತಸಭಾಪತ್ರ

ಪುಸ್ತಕ ೯. FEBRUARY 1877. ಅಂಕೆ ೮.

ಅಡಕವು: ಪ್ರಾರ್ಥನಾಬೋಧಕಶಾಸ್ತ್ರಸಾರವು—ಚಿನ್ನದ ಹರಳುಗಳು—ಅನ್‌ಸಲ್ಮೊ—ಮಹಾ ಕಳ್ಳತನದ ಸಂಗತಿ—ಉತ್ತರಗಳು—ಹೊಸ ಪ್ರಶ್ನೆಗಳು—ವಿವಿಧ ವರ್ತಮಾನಗಳು.

## ಪ್ರಾರ್ಥನಾಬೋಧಕಶಾಸ್ತ್ರಸಾರವು.

(೭೬ನೇ ಪಾನಿನಿಂದ ಮುಂದೆ.)

ಯಾಜಕರು ಪವಿತ್ರಗೃಹವನ್ನು ಶೇರಲಿಕ್ಕಿದ್ದ ಹೊತ್ತಿಗೆ ಅವರು ಯಾವ ಮದ್ಯಪಾನವನ್ನಾದರೂ ಮಾಡ ಬಾರದಿತ್ತು; ಮದ್ಯಪಾನ ಮಾಡಿ, ಪ್ರವೇಶಿಸಿದ್ದಾದರೆ, ಅವರು ಸಾಯಲೇ ಸಾಯ ಬೇಕಾಗಿತ್ತು. ಬರೇ ಐಂದ್ರಿಯಕ ಸಂತೋಷವೂ ಭೋಗಾದಿಗಳೂ ಕರ್ತನ ಸಮಕ್ಷಕ್ಕೆ ಆಗವು. ಅವು ಬೇರೆ ಸಮಯಕ್ಕೆ ದೋಷಗಳೆಂಬ ಲೆಖ್ಖಕ್ಕೆ ಬಾರದಿದ್ದರೂ, ಕರ್ತನ ಸನ್ನಿಧಿಗೆ ಬರುವ ವೇಳೆಗೆ ಆಗವು. ಲೌಕೀಕ ಆಶೆಗಳಿಂದಲೂ ಭೋಗಗಳಿಂದಲೂ ಆತ್ಮನಿಗೆ ಹತ್ತುವ ಅಮಲೂ ವಾಸನೆಯೂ ದೇವರಿಗೆ ಅಸಹ್ಯವಾಗಿದೆ. ಹೃದ್ಯುದ್ಧರು ಮಾತ್ರ ದೇವರ ದರ್ಶನಕ್ಕೆ ಯೋಗ್ಯರಾಗಿದ್ದಾರೆ. ಅವರಿಗೆ ಮಾತ್ರವೇ ದೇವರ ಸನ್ನಿಧಿಗೆ ಬಂದು, ಪ್ರಾರ್ಥಿಸಿ, ಬೇಡಿ ಕೊಂಡದನ್ನು ಹೊಂದಲಿಕ್ಕೆ ಮಾರ್ಗವಾಗುತ್ತದೆ.

ಹೃದ್ಯುದ್ಧರಾಗಿ ದೇವರ ಸನ್ನಿಧಿಯಲ್ಲಿ ಪ್ರಾರ್ಥಿಸಿ, ಬೇಡಿ ಕೊಳ್ಳ ಬೇಕು ಎಂಬುವ ಮಾತಲ್ಲದೆ, ನಾವೇ ದೇವರಿಗೆ ಪವಿತ್ರಗೃಹವಾಗಿರ ಬೇಕು ಎಂಬ ಮಾತು ಸಹ ಉಂಟು. ತಾನು ನಮ್ಮಲ್ಲಿ, ನಮ್ಮೊಳಗೆ ವಾಸ ಮಾಡ ಬೇಕೆಂಬದು ದೇವರ ಮನಸ್ಸಾಗಿದೆ. ಹೀಗಿರಲಾಗಿ ಇಸ್ರಯೇಲ್ಯರ ಮಧ್ಯದಲ್ಲಿದ್ದ ದೇವಾಲಯದಲ್ಲಿ ಇದ್ದದೂ ನಡೆಯುತ್ತಿದ್ದದೂ ನಮ್ಮೊಳಗೆ ಸಹ ಇರಲೂ ನಡೆಯುತ್ತಿರಲೂ ಬೇಕು. ಆ ದೇವಾಲಯದೊಳಗೆ ಒಂದು ಕಡೆಯಲ್ಲಿ "ಸಮ್ಮುಖದ ರೊಟ್ಟಿಗಳು" ಇಟ್ಟಿರುತ್ತಿದ್ದ ಚಿನ್ನದ ಮೇಜು ಇತ್ತು. ಅದರ ಮೇಲೆ ಹನ್ನೆರಡು ಗೋತ್ರಗಳ ಸಂಖ್ಯೆಗೆ ಒಪ್ಪುವಂಥಾದ್ದಾಗಿ, ಹನ್ನೆರಡು ರೊಟ್ಟಿ ಹನ್ನೆರಡು ಚಿನ್ನದ ಹರಿವಾಣಗಳಲ್ಲಿ ಪ್ರತಿ ಸಬ್ಬತ್ ದಿನ ಪ್ರಾತಃಕಾಲಕ್ಕೆ ಧೂಪಾರ್ಪಣೆಯೊಂದಿಗೆ ಇಡುವ ಪದ್ಧತಿಯಿತ್ತು. ಆ ರೊಟ್ಟಿ ಸಪ್ತಕವೆಲ್ಲಾ ನಿತ್ಯ ದಾನಯಜ್ಞವಾಗಿ ಆ ಮೇಜಿನ ಮೇಲೆ ಇದ್ದೇ ಇರುತ್ತಿತ್ತು. ಅದೇ ಪ್ರಕಾರ ನಮ್ಮ ಹೃದಯವು ನಮ್ಮ ಪ್ರಾಣವೂ ಜ್ಞಾನೇಂದ್ರಿಯಗಳೂ ಶಕ್ತಿಗಳೂ ಸಹಿತವಾಗಿ ಕರ್ತನಿಗೆ ನಿತ್ಯ ದಾನಯಜ್ಞವೆಂತ ಪ್ರತಿಷ್ಠೆಯಾಗಿ ಸಿದ್ಧವಾಗಿರ ಬೇಕು.—ಮತ್ತೊಂದು ಕಡೆಯಲ್ಲಿ ಏಳು ದೀಪಕ್ಕೆ ಏಳು ಕೈಯಿದ್ದಂಥ ಚಿನ್ನದ ದೀಪಸ್ತಂಭವು ಇತ್ತು. ಆ ದೀಪಗಳು ಬಿಡದೆ ನಿತ್ಯಾ ಉರಿಯುತ್ತಿರ ಬೇಕಿತ್ತು. ಆ ನಿತ್ಯ ದೀಪಗಳು ಸೂಚಿಸಿದ್ದೇನಂದರೆ: ದೇವರು ವಾಸವಾಗಿರುವಲ್ಲಿ ದೋಷವೂ ಕತ್ತಲೆಯೂ ಇರದೆ, ಬೆಳಕು ಇರ ಬೇಕು; ದೋಷಾದಿಗಳನ್ನು

ಪರಿಹರಿಸಿ, ದಿವ್ಯ ಕಾಂತಿಯನ್ನು ಹಬ್ಬಿಸುವ ಸಪ್ತವಿಧ ದಿವ್ಯಾತ್ಮನ ವ್ಯಾಪ್ತಿ ನಮ್ಮಲ್ಲಿ ಇದ್ದು, ಬಿಡದೆ ನಿತ್ಯ ಬಲಪೂರ್ಣವಾಗಿ ಸಾಗುತ್ತಿರ ಬೇಕು ಎಂಬದು.—ಮಧ್ಯದಲ್ಲಿ ಚಿನ್ನದ ಧೂಪಪೀಠವು ಇರಿಸಿತ್ತು. ಆ ಪೀಠದಲ್ಲಿ ಯಾಜಕರು ನಿತ್ಯ ಪ್ರಾತಃಕಾಲಕ್ಕೂ ಸಾಯಂಕಾಲಕ್ಕೂ ತಿರುಧೂಪವನ್ನು ಸುಡುತ್ತಿರ ಬೇಕಿತ್ತು. ಅದರಿಂದಾಗಿ ಏರುತ್ತಿದ್ದ ಪರಿಮಳವುಳ್ಳ ಧೂಪಧೂಮ ದೇವಾಲಯದಲ್ಲೆಲ್ಲಾ ಹಬ್ಬಿ, ನಮ್ಮ ಕಡೆಯಿಂದ ದೇವರ ಕಡೆಗೆ ಏರಿ ಹೋಗ ತಕ್ಕ ವಿಜ್ಞಾಪನೆಗಳ ಸಾದೃಶ್ಯವಾಗಿತ್ತು. ಆದರೆ ಕೇವಲಾಂಗಯಜ್ಞಪೀಠದ ಬೆಂಕಿಯಲ್ಲದೆ ಇತರ ಬೆಂಕಿ ಯಾವದಾದರೂ ಧೂಪಪೀಠಕ್ಕೆ ಬರ ಬಾರದಿತ್ತು. ಹಾಗೆಯೇ ಪರಿಪೂರ್ಣ ಆತ್ಮಾರ್ಪಣೆಯಿಂದ ಸಂಯುಕ್ತವಾದಂಥಾ ಪ್ರಾರ್ಥನೆ ಮಾತ್ರವೇ ದೇವರ ಸನ್ನಿಧಿಗೆ ಯುಕ್ತವಾಗಿ, ಸಮರ್ಪಕವಾಗಿದೆ.

ಅತಿಪವಿತ್ರಗೃಹದಲ್ಲಿ ದಶಾಜ್ಞೆಗಳು ಮಡಗಿದ್ದ ಸಾಕ್ಷಿಪೆಟ್ಟಿಗೆ ಇತ್ತು. ಅದರ ಮುಚ್ಚಳ ಎಂಬಂತಾಗಿದ್ದದು ಕೃಪಾಸನವೆನ್ನಿಸಿ ಕೊಂಡು, ದೇವರ ಆಸನವಾಗಿತ್ತು. ದೇವರು ತನ್ನಾಜ್ಞೆಗಳನ್ನು ಕಾಯುವಂಥವನೇ. ಆತನ ಆಜ್ಞೆಗಳನ್ನು ಕೈಕೊಳ್ಳುವವರು ಮಾತ್ರವೇ ಆತನ ಪ್ರಜೆಯಾಗಿ, ಆತನ ರಾಜ್ಯದಲ್ಲಿ ಆತನ ಆಶ್ರಯಿಗಳಾಗಿರುತ್ತಾರೆ.

ಒಂದು ಬಗೆಯಾಗಿ ಸದ್ವಿಶ್ವಾಸಿಗಳ ಸಭೆ ಅತಿಪವಿತ್ರಗೃಹವೆಂಬದಾಗಿದೆ; ಯಾಕಂದರೆ ಅವರಲ್ಲಿ ದೇವರು ಕ್ರಿಸ್ತ ಯೇಸುವಿನ ಸಹಿತ ಪವಿತ್ರಾತ್ಮನ ಮುಖಾಂತರವಾಗಿ ವಾಸ ಮಾಡುತ್ತಿದ್ದಾನೆ. ಮತ್ತೊಂದು ಬಗೆಯಲ್ಲಿ ದಿವವು ಅತಿಪವಿತ್ರಗೃಹವೆನ್ನಿಸಿ ಕೊಳ್ಳುವಂಥಾದ್ದು; ದಿವವು ದೇವರ ವಾಸಸ್ಥಾನ; ದಿವವು ನಿಜದೇವಾಲಯವೇ. ದಿವದಲ್ಲಿ ಯೇಸು ತಂದೆಯ ಬಲಪಾರ್ಶ್ವದಲ್ಲಿ ರಾಜಪೀಠಾರೂಢನಾಗಿದ್ದು, ನಮ್ಮ ಕಾರ್ಯಕರ್ತನಾಗಿ ನಮಗೋಸ್ಕರ ವಿಜ್ಞಾಪನೆ ಮಾಡುತ್ತಿದ್ದಾನೆ. ಅಲ್ಲಿಯ ರಾಜಾಸನದ ಮುಂದೆ ವಿಶ್ವಾಸಿಗಳೆಲ್ಲರು ಬರ ಬಹುದು; ಯಾಕಂದರೆ ಕ್ರಿಸ್ತನು ಅವರನ್ನು ಯಾಜಕತ್ವಕ್ಕೆ ಪ್ರತಿಷ್ಠಿಸಿ ಅಭಿಷೇಕಿಸಿದ್ದಾನೆ.

ಯಾಜಕರ ವೃತ್ತಿ ಮುಖ್ಯವಾಗಿ ಅರ್ಪಿಸೋದೂ ಪ್ರಾರ್ಥಿಸೋದೂ ಆಶೀರ್ವದಿಸೋದೂ ಆಗಿತ್ತು. ವಿಶ್ವಾಸಿಗಳ ವೃತ್ತಿ ಅದೇ. ತಮ್ಮನ್ನೇ ಅವರು ಅರ್ಪಣೆ ಮಾಡ ಬೇಕು, ಇಡೀ ನರಜಾತಿಯೂ ದೇವರಿಗೆ ಸಮರ್ಪಕವಾಗಿ, ಅರ್ಪಣೆಯಾಗುವಂತೆ ಅವರು ನೋಡಿ ಸಾಧಿಸ ತಕ್ಕದ್ದು. ತಮ್ಮನ್ನೂ ತಮ್ಮವರನ್ನೂ ತಮ್ಮ ಸಭೆಯನ್ನೂ ಇಡೀ ಲೋಕವನ್ನೂ ನೆನಸಿ, ಪ್ರಾರ್ಥಿಸಿ, ವಿಜ್ಞಾಪಿಸುವವರಾಗಿ, ಅವರು ಆಶೀರ್ವಾದವನ್ನು ಹೊಂದಿ, ಇತರರಿಗೂ ಆಶೀರ್ವಾದಕ್ಕೆ ಕಾರಣವಾಗುತ್ತಾರೆ; ದೇವಪ್ರಸಾದಿಗಳಾಗಿ ಲೋಕಕ್ಕೆ ಪ್ರಸನ್ನರಾಗಿರುತ್ತಾರೆ.

ಶುಭ್ರ ವಸ್ತ್ರಾದಿಗಳೂ ಸುಂದರ ನಡುಕಟ್ಟುಗಳೂ ಯಾಜಕರ ಉಡಿಗೆ ತೊಡಿಗೆಯಾಗಿದ್ದವು: ನಮ್ಮದೋ ರಕ್ಷಣ್ಯವೆಂಬ ವಸ್ತ್ರಾಲಂಕಾರವು ಕ್ರಿಸ್ತನ ನೀತಿಯೆಂಬ ಹೊದಿಗೆ. ಅಂಥಾದ್ದಾದ ಉಡಿಗೆ ತೊಡಿಗೆ ಇದ್ದವರು ಮಾತ್ರ ಯಾಜಕವೃತ್ತಿ ಸಾಗಿಸಿ ಪ್ರಾರ್ಥಿಸ ತಕ್ಕವರು.

ತಮ್ಮುದ್ಯೋಗಕ್ಕಾಗಿ ಯಾಜಕರಿಗೆ ಒಂದು ಪ್ರತ್ಯೇಕ ಪ್ರತಿಷ್ಠೆಯಾಗ ಬೇಕಿತ್ತು. ಆ ಪ್ರತಿಷ್ಠೆ ತಿರುತೈಲಾಭಿಷೇಕದಲ್ಲಿಯೂ ಯಜ್ಞಪಶುವಿನ ರಕ್ತಸಂಪ್ರೋಕ್ಷಣದಲ್ಲಿಯೂ ಆಗುತ್ತಿತ್ತು. ಬಲಗಡೆಯ ಕಿವಿಗೂ, ಕೈಕಾಲಿನ ಅಂಗುಷ್ಟಗಳಿಗೂ ಆ ರಕ್ತ ತಾಗಿಸುವ ಪದ್ಧತಿ ಅವರು ದೇವರ ಹೇಳಿಕೆಯಲ್ಲಿ ನಡಕೊಳ್ಳುವವರೂ ಉದ್ಯೋಗ ನಡಿಸುವವರೂ ಆಗಿರ ಬೇಕು ಎಂಬದನ್ನು ಸೂಚಿಸಿತು. ಹಾಗೆಯೇ ನಾವು ಸಹ ಪವಿತ್ರಾತ್ಮನೆಂಬ ತಿರುತೈಲಾಭಿಷೇಕ ಹೊಂದಿದವರಾಗಿ, ನಮ್ಮ ಜ್ಞಾನೇಂದ್ರಿಯಗಳನ್ನೂ ಕರ್ಮೇಂದ್ರಿಯಗಳನ್ನೂ ಸರ್ವಾಂಗವನ್ನೂ ದೇವಸೇವೆಗಿರಿಸಿ, ದೇವರ ನೀತಿಯಲ್ಲಿ ಉಪಯೋಗಿಸಿ, ಕಾಪಾಡಿ ಕೊಳ್ಳ ಬೇಕು.

ಪ್ರಧಾನಯಾಜಕನಿಗೆ ಅತಿ ಊಚು ವಸ್ತ್ರಾಲಂಕಾರವಲ್ಲದೆ ಒಂದು ಪದಕವೂ ಇತ್ತು. ಅದರಲ್ಲಿ ಹನ್ನೆರಡು ರತ್ನಗಳು ಕುಂದ್ರಿಸಿದ್ದವು. ಆ ರತ್ನವೊಂದೊಂದರಲ್ಲಿ ಇಸ್ರಯೇಲ್ಯ ಹನ್ನೆರಡು ಗೋತ್ರವೊಂದೊಂದರ ಹೆಸರು ಕೆತ್ತಿ ಬರದಿಟ್ಟಿತ್ತು. ಆ ಪದಕವನ್ನು ಎದೇ ಮೇಲಿರಿಸಿ, ಹೊತ್ತು ಕೊಂಡ ಪ್ರಧಾನಯಾಜಕನು ಹನ್ನೆರಡು ಗೋತ್ರಗಳನ್ನು ಎದೇ ಮೇಲೆ ಹೊತ್ತು ಕೊಂಡು, ನಿತ್ಯ ಜ್ಞಾಪ್ತಿಯಲ್ಲಿರಿಸಿ ಕೊಂಡ ಹಾಗಾಯಿತು. ಹಾಗೆಯೇ ಯೇಸು ಇಡೀ ನರಜಾತಿಯನ್ನು ತನ್ನ ಯಾಜಕಭಾವಪೂರ್ವಕ ಜ್ಞಾಪ್ತಿಯಲ್ಲಿರಿಸಿ ಕೊಂಡು, ಹೊತ್ತು ಕೊಂಡವನೇ. ಆತನ ಶಿಷ್ಯರು ಸಹ ಹಾಗೆಯೇ ಎಲ್ಲರನ್ನು ನೆನಸಿ ಕೊಂಡು, ಎಲ್ಲವರಿಗೋಸ್ಕರ ನಿತ್ಯ ವಿಜ್ಞಾಪನೆ ಮಾಡುವವರು. “ಯೆಹೋವನಿಗೆ ಪವಿತ್ರವಾದ್ದು” ಎಂಬ ಅರ್ಥವಾಗಲಿ, “ಯೆಹೋವನ ಪವಿತ್ರತ್ವ” ಎಂಬ ಅರ್ಥವಾಗಲಿ ಉಳ್ಳಂಥಾ ಶಾಸನವಿದ್ದ ಚಿನ್ನದ ಪಟ್ಟಿ ಸಹ ಪ್ರಧಾನಯಾಜಕನ ಕಿರೀಟದ ಮುಂಗಡೆಗೆ ಕಟ್ಟಿತ್ತು. ಹಾಗೆಯೇ ನಾವು ಸಹ ಕ್ರಿಸ್ತನ ಪವಿತ್ರತ್ವವನ್ನು ಹೊಂದಿ, ಪವಿತ್ರಾತ್ಮನ ವ್ಯಾಪ್ತೀ ಪ್ರಕಾಶವನ್ನು ಪ್ರತಿಬಿಂಬಿಸುವವರಾಗಿ, ಕ್ರಿಸ್ತನ ಮಹಿಮೆಯ ರೂಪಕ್ಕೆ ಹೆಚ್ಚೆಚ್ಚಾಗಿ ಅನುರೂಪವಾಗುತ್ತಾ, ದೇವರಿಗೆ ಪವಿತ್ರ ಕಾಣಿಕೆಯಾಗಿರ ಬೇಕು.

ದೇವಾಲಯದಲ್ಲಿ ದೇವಾರಾಧನೆಯಾಗುತ್ತಿದ್ದ ವೇಳೆಗೆ ತಿರುವಾದ್ಯವಾಗಿ, ಗಾಯನ ಸಂಕೀರ್ತನಗಳು ನಡೆಯುತ್ತಿದ್ದವು. ಕ್ರಿಸ್ತನಲ್ಲಿ ದೇವರಿಗೆ ಸಂಧಾನವಾಗಿ, ಅನ್ಯೋನ್ಯವಾದವರ ಹೃದಯವು ತಿರುವೀಣೆ ಎಂಬ ಹಾಗಾಗಿ, ದೇವರನ್ನು ವಾದ್ಯವಾಡಿ, ಸ್ತುತಿಸಿ, ಕೊಂಡಾಡ ತಕ್ಕದ್ದು. “ಕೀರ್ತನೆಗಳಿಂದಲೂ ಗೀತಗಳಿಂದಲೂ ಆತ್ಮಭಾವದ ಹಾಡುಗಳಿಂದಲೂ ಒಬ್ಬರ ಸಂಗಡಲೊಬ್ಬರು ಮಾತಾಡಿ ಕೊಂಡು, ಕರ್ತನಿಗೆ ಮನಃಪೂರ್ವಕವಾಗಿ ಹಾಡಿ, ಬಾರಿಸಿ, ಯಾವಾಗಲೂ, ಎಲ್ಲಾದಕ್ಕೋಸ್ಕರವೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿರಿ”. ಎಫೆ. ೫, ೧೯. ೨೦.

---

## ಚಿನ್ನದ ಹರಳುಗಳು.

೧. ನೋಹನ ಸೊಸೆಯರಾದ ಆ ಮೂರು ಜನ ಹೆಣ್ಣುಮಕ್ಕಳು ವಿವಾಹದ ಸಂಬಂಧದಿಂದ ನೋಹನ ಕುಟುಂಬದವರು ಆದಂಥಾದ್ದು ಅವರಿಗೆ ಮಹಾ ಲಾಭಕ್ಕೂ ಕಲ್ಯಾಣಕ್ಕೂ ಕಾರಣವಾಯಿತು. ಅವರು ನೋಹನ ಮಗಂದಿಯರಿಗೆ ಮದುವೆಯಾಗದೆ, ಬೇರೆ ಗಂಡಸರಿಗೆ ಮದುವೆಯಾದ್ದಾದರೆ, ಜಲಪ್ರಳಯದಲ್ಲಿ ಉಳಿಯದೆ, ಇತರರೆಲ್ಲರೊಡನೆ ಅಳಿದು ಹೋಗುತ್ತಿದ್ದರು. ಭಕ್ತಜನರ ಸಹವಾಸವೂ ನೆಂಟಸ್ತಿಕೆಯೂ ಅಷ್ಟು ಪ್ರಯೋಜನದ್ದಾಗಿ, ನಾಶಕ್ಕೆ ತಪ್ಪಿಸಿ ಕೊಂಡು, ಕಲ್ಯಾಣ ಹೊಂದಲಿಕ್ಕೆ ಕೈಗೂಡುವಂಥಾದ್ದಾದ್ದರಿಂದ ನೀನು ಸಹ ನಿನಗಾಗಲಿ, ಮಗನಿಗಾಗಲಿ, ಮಗಳಿಗಾಗಲಿ ಮದುವೆಯಾಗ ಬೇಕೆಂಬ ಮಾತಿದ್ದರೆ, ಭಕ್ತಿಹೀನ ಜನರ ನೆಂಟಸ್ತಿಕೆಗೆ ಅಂಜಿ ಕೊಂಡು, ಸದ್ಭಕ್ತರನ್ನು ಹುಡುಕಿ ನೋಡಿ, ಅವರ ಅನುಬಂಧ ಮಾಡಿಕೋ.

೨. ದೇವರ ಸೇವಕನಾದ ಮೋಶೆಗೆ ನೆಬೋ ಪರ್ವತವು ಎಂಥಾ ವಿಶೇಷ ಜಾಗವಾಯಿತೋ ಅಂಥಾ ವಿಶೇಷ ಜಾಗವು ಪ್ರತಿಯೊಬ್ಬ ಸತ್‌ಕ್ರೈಸ್ತನಿಗೆ ತಾನು ಸಾಯುವ ಹಾಸಿಕೆಯೇ ಆಗ ಬಹುದು. ಆ ನೆಬೋ ಪರ್ವತ ಹತ್ತಿ, ಮೋಶೆ ವಾಗ್ದತ್ತವಾದ ದೇಶವನ್ನು ನೋಡಿ, ಸಮಾಧಾನವಾಗಿ ತೀರಿ ಹೋಗಲಾಯಿತು. ಸದ್‌ಕ್ರೈಸ್ತನು ಹಾಗೆಯೇ ತಾನು ಸಾಯಲಿಕ್ಕೆ ಬಿದ್ದ ಹಾಸಿಕೆಯಲ್ಲಿ ವಾಗ್ದತ್ತವಾಗಿರುವ ಮೇಲಿನ “ಕಾನಾನ್” ನೋಡಿ, ಸಂತೋಷ ಸಮಾಧಾನ ಉಳ್ಳವನಾಗಿ ಇಹವನ್ನು ಬಿಟ್ಟು, ಪರವನ್ನು ಶೇರ ಬಹುದು.

---

# ಅನ್‌ಸಲ್ಮೊ

(೭೯ನೇ ಪುಟದಿಂದ ಮುಂದೆ.)

ಅನ್‌ಸಲ್ಮೊ ಅಂದಿನ ಸಾಯಂಕಾಲ ಸಂತೋಷಭರಿತನಾಗಿ ಮಲಗಿ ಕೊಂಡು, ಬಹು ಸೌಖ್ಯವಾಗಿ ನಿದ್ರೆ ಮಾಡಿ, ಮರುದಿನ ಬೆಳಿಗ್ಯೆ ನಿದ್ರೆ ತಿಳಿದು, ಹರ್ಷಿಸಿ, ಎದ್ದನು. ಅವನು ತೋಟಕ್ಕೆ ಹೋಗಿ, ಸೂರ್ಯೋದಯ ನೋಡಿದನು. ಸೂರ್ಯೋದಯವಾಗಲಿ ತೋಟದ ಪುಷ್ಪಗಳಾಗಲಿ ಕಂಡದ್ದೆಲ್ಲವು ಅವನಿಗೆ ಅಂದು ಅತಿ ರಮ್ಯವಾಗಿಯೂ ಕೇವಲ ನೂತನ ಆಶ್ಚರ್ಯವಾಗಿಯೂ ತೋರುವಂಥಾದ್ದಾಯಿತು. ಭಕ್ತಿಭಾವಪೂರ್ವಕವಾಗಿ ಪ್ರಾರ್ಥನೆ ಮಾಡಿ, ತನ್ನ ನಿತ್ಯ ಕೆಲಸಕ್ಕೆ ಹತ್ತಿದನು. ಭೋಜನಶಾಲೆಗೆ ಪುಷ್ಪಗಿಂಡಿ ಚಂಬುಗಳನ್ನು ಹೂವಿಟ್ಟು ತಯಾರು ಮಾಡುವ ಬಗ್ಯೆ ಹೂವುಗಳನ್ನು ಕಿತ್ತು ಕೂಡಿಸುತ್ತಿರುವಾಗ ಅವನ ಯಜಮಾನ ಅಭ್ಮಿದನು ಸಹ ತೋಟಕ್ಕೆ ಬಂದು, ಅನ್‌ಸಲ್ಮೋನನಿಗೆ ಆನಂದಮುಖನಾಗಿ ಸಲಾಮ್ ಮಾಡಿದನು. ಮತ್ತು "ಯುವಶೂರನೇ!" ಎಂಥೇಳಿ, ಬಹು ಪ್ರೀತಿಭಾವವಾಗಿ ಆವನ ಕೈ ಹಿಡಿದು, ಕರಕೊಂಡ್ಹೋಗಿ, ಒಂದಿಷ್ಟು ತಿರುಗಾಡಿದ ಮೇಲೆ ಸ್ವಲ್ಪ ತಡದು ಹೇಳಿದ್ದೇನಂದರೆ: "ಅತಿಪ್ರಿಯ ಅನ್‌ಸಲ್ಮೋ! ನಾನು ನಿನಗೆ ಬಹಳ ಕೃತಜ್ಞನೇ. ನನ್ನ ಮಗಳನ್ನು ಸಿಂಹದ ಬಾಯಿಗೆ ತಪ್ಪಿಸಿ, ಪ್ರಾಣವನ್ನುಳಿಸಿದಿ. ನಿನ್ನ ಧೈರ್ಯಸಾಹಸಗಳಿಲ್ಲದ ಪಕ್ಷಕ್ಕೆ ನನ್ನ ಮಗಳು ಸಿಂಹದ ಪಾಲಾಗುತ್ತಿತ್ತು. ಇನ್ನು ಮುಂದೆ ನೀನು ನನ್ನ ಮನೆಯ ದಾಸನಲ್ಲಾ, ಮಗನೇ ಆಗಿರಬೇಕು. ಇನ್ನು ನೀನು ಮೇಜಿಗೆ ಚಾಕ್ರಿ ಮಾಡದೆ, ನನ್ನ ಮತ್ತು ನನ್ನ ಸತಿ ಸುತೆ ಸುತರ ಸಂಗಡ ಮೇಜಿಗೆ ಕೂತು, ಭೋಜನ ಮಾಡ ಬೇಕು. ನಿನ್ನ ಉಡಿಗೆ ತೊಡಿಗಿಡುಗೆಗಳು ಸಹ ನಮ್ಮ ತರದವಾಗಿರ ಬೇಕು. ಎಲ್ಲಾ ವಿಷಯದಲ್ಲಿ ನಿನಗೂ ನನ್ನ ಖಾಸ ಮಗನಿಗೂ ಹೆಚ್ಚು ಕಡಿಮೆ ಕಾಣದಿರ ಬೇಕು. ನನ್ನ ಮಗ ಹ್ಯಾಗೋ ಹಾಗೆಯೇ ನೀನು ಸಹ ದೊಡ್ಡ ಸಾವುಕಾರನಾಗಿ, ಊರಿನ ಶ್ರೇಷ್ಠ ಗೃಹಸ್ಥರ ಪಂಕ್ತಿಯಲ್ಲಿ ಕುಳಿತುಕೊಳ್ಳ ಬೇಕು ಎಂತ ನನ್ನಪೇಕ್ಷೆ. ಆದರೆ ಹಾಗಾಗಲಿಕ್ಕೆ ಕೂಡುವ ಹಾಗೆ ನೀನು ಒಂದು ಮಾಡ ಬೇಕು, ಅಂದರೆ ನಮ್ಮ ಮತವನ್ನು ಶೇರಿ, ಮುಸಲ್ಮಾನನಾಗ ಬೇಕು. ಕೇಳಿದಿಯಾ? ಏನು?" ಅಂದನು.

ಆ ಮಾತನ್ನು ಕೇಳಿ, ಕ್ರೈಸ್ತಭಕ್ತಿಯುಳ್ಳ ಅನ್‌ಸಲ್ಮೋನನು ದಿಗಿಲು ಹಿಡಿದು, ನಡುಗಿ, ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ: "ಖಾವಂದರೇ! ನಿಮ್ಮ ದಾಸ ನಾನು; ನನ್ನ ಪ್ರಾಣವೇ, ಬೇಕಾದರೆ, ಕೇಳಿ ಕೊಳ್ಳಿರಿ, ಅದನ್ನು ಬಿಟ್ಟು ಕೊಡ ಸಿದ್ಧನಾಗಿದ್ದೇನೆ. ಆದರೆ ನನ್ನ ಕರ್ತನಾದ ಕ್ರಿಸ್ತನನ್ನು ನಾನು ಬೊಂಕಲಾರೆ; ಆತನಲ್ಲಿ ನಾನು ಇಟ್ಟಿರುವ ಪ್ರೀತಿಗೂ ವಿಶ್ವಾಸಕ್ಕೂ ಏನೇನಾದರೂ ನನ್ನನ್ನು ತೊಲಗಿಸದಿರಲಿ! ಸ್ವಮತತ್ಯಾಗಕ್ಕೆ ನಾನು ಸರ್ವದಾ ಸರ್ವಥಾ ಒಪ್ಪಿ ಕೊಳ್ಳೆನು, ಏನೇನು ಕೊಟ್ಟರೂ, ಸರ್ವ ಲೋಕವನ್ನಾದರೂ, ನಾನು ಒಪ್ಪಿ ಕೊಳ್ಳೆ. ನನ್ನ ಗತಿಯೂ ಆಶಾಬಂಧವೂ ಕ್ರಿಸ್ತನೇ. ಸಾಯುವ ತನಕ ಆತನನ್ನು ಬಿಡೆ."

ಅಭ್ಮಿದನು ಅಂದು ತನ್ನ ಹುಟ್ಟುಮಾತಿನಲ್ಲಿ ಮಾತಾಡದೆ, ಅನ್‌ಸಲ್ಮೋನನ ಹುಟ್ಟುಭಾಷೆಯಾದ ಇತಲ್ಯ ಭಾಷೆಯಲ್ಲೇ ಮಾತಾಡಿದನು. ಅವನು ತನ್ನ ಸ್ವಭಾಷೆಯನ್ನು ತ್ವರಿತವಾಗಿ ಏನು ತಬ್ಬಿಬ್ಬಾಗದೆ, ಬಹು ಸಾಫಾಗಿ ಆಡ ಬಲ್ಲವನು ಎಂತ ಮೊದಲು ತಿಳಿಯದಿದ್ದ ಅನ್‌ಸಲ್ಮೊ ಆದಕ್ಕೆ ಬಹಳ ಆಶ್ಚರ್ಯ ಪಟ್ಟನು.

ನಾನಾ ವಿಧವಾಗಿ ಅಭ್ಮಿದನು ಅನ್‌ಸಲ್ಮೋನನನ್ನು ಪುಸಲಾಯಿಸಿ ಇಚ್ಚಕವಾಡಿ, ಅಟಮರಿಸ ನೋಡಿದನು; ಆದರೆ ಆವನು ತೋರಿಸಿದ ಆಶೆಗಳೂ ಆಡಿದ ಇಚ್ಚಕದ ಮಾತುಗಳೂ ಯಾವತ್ತೂ

ಅನ್‌ಸಲ್ಮೋನನ ಮನಸ್ಸಿಗೆ ಹತ್ತದೆ, ಹಾರಿದ ಕಿಡಿ ನೀರಿಗೆ ಬಿದ್ದು ಆರುವಂತೆ, ಸಾರ್ಥಕವಾಗದೆ ಹೋದವು. ಅನ್‌ಸಲ್ಮೋನನು ಎಲ್ಲಾ ಸವಾಲಿಗೆ ತಕ್ಕ ಜವಾಬು ಕೊಟ್ಟದಲ್ಲದೆ, ಆ ತುರ್ಕರವನಿಗೆ ಬುದ್ಧಿ ಸಹ ಹೇಳಿದನು; ಹ್ಯಾಗಂದರೆ: "ನಾನು ತಮ್ಮ ಮಗಳನ್ನು ಸಿಂಹದ ಬಾಯಿಗೆ ತಪ್ಪಿಸಿದ್ದಕ್ಕಾಗಿ ತಾವು ನನಗೆ ಕೃತಜ್ಞರು; ಅಲ್ಲವೋ? ಹಾಗಾದರೆ ಕ್ರಿಸ್ತ ಯೇಸು ತನ್ನ ಪ್ರಾಣವನ್ನು ನನಗೋಸ್ಕರವೂ ಲೋಕಕ್ಕೋಸ್ಕರವೂ ಕೊಡುವಷ್ಟು ಪ್ರೀತಿಯಿಟ್ಟು, ಮಹಾ ಶ್ರಮೆ, ಮರಣ ಸಹ, ತಾಳಿದನೆಂಬದನ್ನು ನೆನಸಿ ಕೊಂಡು, ಆತನಿಗೆ ಕೃತಜ್ಞತೆ ತೋರಿಸ ತಕ್ಕದ್ದಲ್ಲವೋ? ಆತನು ನನ್ನನ್ನು ಒಂದು ಭಯಂಕರ ಮೃಗದ ಕ್ರೂರ ದವಡೆಗೆ ತಪ್ಪಿಸಿದ್ದಲ್ಲದೆ ನಿತ್ಯ ನರಕಾಗ್ನಿಗೂ ತಪ್ಪಿಸಿದ್ದಾನೆ. ಹಾಗಾದ ಮೇಲೆ ನಾನು ಆತನನ್ನು ಹ್ಯಾಗೆ ತಳ್ಳಿ ಬಿಡಲಿ? ಆತನನ್ನು ತಳ್ಳಿ ಬಿಟ್ಟರೆ, ಮಹಾ ದ್ರೋಹದ ಕಾರ್ಯವೂ ಮಹಾ ಅಪಕಾರದ ಸಂಗತಿಯೂ ಆಗದೋ?"

ಅಬ್ಮಿದನು ತಾನೇ ಮತಭ್ರಷ್ಟನಾದವನು, ಅಂದರೆ ಕ್ರೈಸ್ತ ಧರ್ಮ ತ್ಯಜಿಸಿ ಬಿಟ್ಟು, ಮಹಮ್ಮದನ ಮತವನ್ನು ಸೇರಿದವನು ಆಗಿದ್ದನು. ಆದರೆ ಅದು ಅನ್‌ಸಲ್ಮೋನನಿಗೆ ಗೊತ್ತಿದ್ದಿಲ್ಲಾ. ಅಬ್ಮಿದನ ಹೆತ್ತವರು ಒಳ್ಳೇ ಕ್ರೈಸ್ತಭಕ್ತರೇ ಆಗಿದ್ದರು; ಆದರೆ ಮಗನು ಒಂದು ಸಾರಿ ದ್ವೀಪಾಂತರ ವ್ಯಾಪಾರಕ್ಕಾಗಿ ಹಡಗ ಹತ್ತಿ ಸಮುದ್ರಕ್ಕೆ ಹೊರಟದ್ದ ಸಮಯದಲ್ಲಿ ಕಡಲ್ಗಳ್ಳರು ಅವನನ್ನು ಸೆರೆ ಹಿಡಿದು, ಕೊನ್‌ಸ್ತಂತಿನೊಪಲಿ ಪಟ್ಟಣದಲ್ಲಿ ಗುಲಾಮನಾಗಿ ಮಾರಿ ಬಿಟ್ಟರು. ಮಹತ್‌ಬಾರ ಸಾವುಕಾರನಾದ ಒಬ್ಬ ತುರ್ಕ ಯಜಮಾನನ ಮೆಹರ್ಬಾನಿಗೆ ಕ್ರಮೇಣ ಹೊಂದಿ, ಅವನ ಮಗಳ ಪ್ರೀತಿ ಪಡಕೊಂಡು, ಅವಳನ್ನು ಮದುವೆ ಮಾಡಿ ಕೊಂಡು, ಮಾವನ ವಿಶಿಷ್ಟ ಮನೆ ಮಾಲು ಅಸಲು ಆಸ್ತಿಗೆ ಬಾಧ್ಯಸ್ಥನಾಗುವ ಭಾವದಿಂದ ಸ್ವಮತತ್ಯಾಗಿಯಾಗಿ, ಮುಸಲ್ಮಾನನಾದನು.

ಅನ್‌ಸಲ್ಮೋನನ ಕ್ರೈಸ್ತ ಭಕ್ತಿಭಾವಬಲಪೂರ್ಣ ಉತ್ತರಗಳು ಅಬ್ಮಿದನ ಮನಸ್ಸಿಗೆ ಚನ್ನಾಗಿ ತಾಗಿ, ಅವನ ಮನಸ್ಸು ಬೇರೆಯಾಗುವ ಹಾಗೆ ಪ್ರೇರೇಪಿಸುವದಾಯಿತು. ಹೀಗಿರಲಾಗಿ ಅವನು ಕಡೆಗೆ ಹೇಳಿದ್ದೇನಂದರೆ: "ಅನ್‌ಸಲ್ಮೋನನೇ! ನೀನು ಕ್ರೈಸ್ತ ಮತವನ್ನು ಪರಿತ್ಯಾಗ ಮಾಡಿ, ಮಹಮ್ಮದ ಮತ ಸೇರ ಬೇಕೆಂತ ನಾನು ನಿನಗೆ ಇನ್ನು ಹೇಳುವದಿಲ್ಲಾ; ಆದರೆ ಈ ದೇಶದಲ್ಲಿ ಮಹಮ್ಮದಿ ಮಾರ್ಗವನ್ನು ಅನುಸರಿಸಿ ನಡೆಯದಿದ್ದರೆ, ಪರಿಣಾಮವಾಗದು; ನೀನು ಅಂತರಂಗದಲ್ಲಿ ಕ್ರೈಸ್ತನಾಗಿರಲಿಕ್ಕೆ ಏನೂ ಅಡ್ಡಿ ಇಲ್ಲಾ; ಆದರೆ ಬಹಿರಂಗದಲ್ಲಿ ಮಹಮ್ಮದಿ ಮಾರ್ಗವನ್ನು ಅನುಸರಿಸುವವನೆಂತ ಲೋಕಕ್ಕಾಗಿ ತೋರಿಸಿದರೆ, ಸೈ. ನಾನು ಆಲೋಚನೆ ಹೇಳಿ ಕೊಟ್ಟಂತೆ ನೀನು ನಡೆಯದಿದ್ದರೆ, ನಿನ್ನ ಕಾರ್ಯವು ಶುಭವಾಗಿ ಸಾಗದು; ನೀನು ಎಂದಿಗೂ ಪರಿಣಾಮಕ್ಕೆ ಬಂದು, ಐಶ್ವರ್ಯವಂತನಾಗಲಾರಿ; ಜನರು ನಿನ್ನನ್ನು ಹೇಸಿ, ದ್ವೇಷಿಸಿ, ಹಿಂಸಿಸುವರು; ಲೋಕಾಚಾರಕ್ಕಾದರೂ ನೀನು ಮಹಮ್ಮದಿ ಮತಸ್ಥನಾಗಿದ್ದರೆ, ನಿನಗೆ ಒಳ್ಳೇದಾಗುವದು."

ಆದಕ್ಕೆ ಅನ್‌ಸಲ್ಮೋನನು ಅಂದದೇನಂದರೆ: "ಖಾವಂದರೇ! ಹಾಗೆ ನಡಕೊಳ್ಳಲಾರೆ; ಅಂಥಾ ಕಪಟವು ನನಗೆ ಅಯೋಗ್ಯವೇ. ಅಂಥಾ ಸುಳ್ಳು ಮೋಸವೂ ನನಗೆ ದೂರವಾಗಿರಲಿ! ನಾವು ಪೂರ್ಣ ಮನಸ್ಸಾಗಿ ಪ್ರೀತಿಸುವ ಸ್ನೇಹಿತನೊಬ್ಬನನ್ನು ಇತರರ ಮುಂದೆ ಬೊಂಕುವದಾದೀತೇ? ನನ್ನ ಕರ್ತನೂ ರಕ್ಷಕನೂ ಆಗಿರುವ ಕ್ರಿಸ್ತನ ಪ್ರೀತಿಯನ್ನು ನಾನು ನೆನಸಿ ಕೊಳ್ಳುವಾಗ, ಆತನನ್ನು ಬೊಂಕ ಬೇಕೆಂಬ ಮಾತು ನನಗೆ ತಡೆಯಲಿಕ್ಕೆ ಕೂಡದ ದುಃಖವೇ. ನಾನು ಹುಟ್ಟುವದಕ್ಕಿಂತ ಮುಂಚೆ ಆತನು ತನ್ನಮೂಲ್ಯ ಜೀವವನ್ನು ನನಗಾಗಿ ಕೊಟ್ಟನು. ಅಂಥಾದ್ದಾದ ಆತನ ಪ್ರೀತಿಯ ಸಲುವಾಗಿ ನನ್ನಾತ್ಮನಲ್ಲಿ ಉರಿಯಾಗುತ್ತದೆ. ನಾನು ಚಿಕ್ಕ ಕೂಸಾಗಿದ್ದಾಗ ಸ್ನಾನದಲ್ಲಿ ಆತನಿಗೆ ಒಪ್ಪಿಸಲ್ಪಟ್ಟೆನು. ನನ್ನ ತಂದೆ ತಾಯಿಗಳು ಭಕ್ತಿಭಾವಪೂರ್ವಕವಾಗಿ ನನಗೋಸ್ಕರ ಪ್ರಾರ್ಥನೆ

ಮಾಡುತ್ತಿದ್ದರು, ಇನ್ನು ಸದ್ಯಕ್ಕೂ ಮಾಡುತ್ತಿದ್ದಾರು. ನಾನು ಚಿಕ್ಕತನದಾರಭ್ಯ ಆತನಲ್ಲಿ ವಿಶ್ವಾಸವಿಡುವ ಹಾಗೆ ಬೋಧನೆ ಕೊಟ್ಟು, ನನ್ನನ್ನು ಬೆಳಿಸಿದ್ದಾರೆ. ನಾನು ಆತನನ್ನು ಮರೆತರೆ, ನನ್ನ ಜೀವಾಂತ್ಯದ ವರೆಗೂ ನನಗೆ ಸಮಾಧಾನವಿರದು. ಭ್ರಷ್ಟ ದ್ರೋಹಿ ಯೂದನು ಮಾಡಿದಂತೆ ಮಾಡುವದಕ್ಕಿಂತ ನಾನು ಹುಟ್ಟದೆ ಇರುತ್ತಿದ್ದರೆ, ಒಳ್ಳೇದಾಗಿರುತ್ತಿತ್ತು. ಅಂಥಾ ದ್ರೋಹಿಯಾಗೆ! ಈ ಬಗೆಯು ನಿಮ್ಮ ಪ್ರಯತ್ನವೆಲ್ಲಾ ವ್ಯರ್ಥವೇ. ನಿಮ್ಮ ಎಲ್ಲಾ ಆಸ್ತಿಪಾಸ್ತಿ ನನಗೆ ಕೊಟ್ಟರೂ, ಕತ್ತಿಯಿಂದ ನನ್ನ ತಲೆ ಕಡಿದು ಹಾಕಿದರೂ, ನಾನು ಯೇಸುವನ್ನು ಬೊಂಕೆನು."

ಈ ಪ್ರಕಾರ ಜವಾಬು ಕೊಟ್ಟ ಅನ್‌ಸಲ್ಮೋನನ ಮಾತುಗಳು ಅಭ್ಮಿದನ ಹೃದಯಕ್ಕೆ ಭಲ್ಲೆಯಂತೆ ತಾಗಿ ತಿವಿದವು. ಕಡೆಗೆ ಅವನು ಹೇಳಿದ್ದೇನಂದರೆ: "ಹೆದರಿಕೊಳ್ಳ ಬೇಡ! ನಿನ್ನ ಭಕ್ತಿಗೆ ನಾನು ಮೆಚ್ಚಿದ್ದೇನೆ. ಇನ್ನು ಮುಂದೆ ನಾನು ಅಂಥಾ ಪ್ರಸ್ತಾಪ ಮಾಡಿ, ನಿನ್ನನ್ನು ವ್ಯಥೆ ಪಡಿಸಲಿಕ್ಕಿಲ್ಲಾ. ಸಮಾಧಾನವಾಗಿರು!"

ಇಷ್ಟು ಸಂಭಾಷಣೆಯಾದ ಬಳಿಕ ಅಭ್ಮಿದನು ಮುಖ ಸ್ವಲ್ಪ ಕಳೆಗುಂದಿ, ಮೆಲ್ಲ ಮೆಲ್ಲಗೆ ನಡೆದು, ತೋಟದಲ್ಲಿ ಆಲೋಚನಾಮಗ್ನನಾಗಿ ತಿರುಗಾಡುವವನಾದನು.

(ಸಮಾಪ್ತಿ ಬರುವ ಸರ್ತಿಗೆ.)

---

## "ಮಹಾ ಕಳ್ಳತನದ ಸಂಗತಿ"

ಎಂಬ ಗ್ರಂಥಸೂಚನೆಯಿದ್ದ ಚಿಕ್ಕ (೩ ಪೈಯ) ಪುಸ್ತಕವು ಛಾಪೆಯಾಗುತ್ತದೆಂತ ೭೬ನೇ ಪಾನಿನಲ್ಲಿ ತಿಳಿಸಿದ್ದಾಯಿತು. ಸದರಿ ಪುಸ್ತಕದ ಅಡಕವು ಎಂಥಾದ್ದೆಂತ ಕ್ರೈಸ್ತಸಭಾಪತ್ರಪಠಕರಿಗೆ ತಿಳಿದು ಬರುವಂತೆಯೂ, ಅವರು ಸಹ ಈ ಪುಸ್ತಕವನ್ನು ದೊರಕಿಸಿ, ಓದಿ ಕೊಂಡು, ಒಳ್ಳೇ ಉಪಯೋಗ ಮಾಡುವಂತೆಯೂ ಅದರ ಎರಡು ಕಡೆಯಿಂದ ಒಂದಿಷ್ಟನ್ನು ಹೆಕ್ಕಿ ಓದಲಿಕ್ಕೆ ಕೊಡ ತಕ್ಕದ್ದೆಂದು ಕಂಡಿತು.

"ಸೋಮಾರಿಯೆಂಬ ಹಕ್ಕಿ ಪಿಶಾಚನೆಂಬ ಬೇಡರವನಿಗೆ ಗುರಿಯಾಗದೆ ಹೋಗದು. ಆ ಹಕ್ಕಿಗೆ ಈ ಬೇಡನು ಚನ್ನಾಗಿ ಗುರಿ ಇಟ್ಟು, ಹೊಡದು ತಗಲಿಸ ಬಲ್ಲಾದವನೇ. ಖಾಲಿಯಾಳು ಸೈತಾನನ ಬಿಟ್ಟಿಯಾಳಾಗುತ್ತಾನೆ. ತನಗೆ ಖಾಲಿಯಾಗಿ ಶಿಕ್ಕಿದವನನ್ನು ಸೈತಾನನು ಹಿಡಿದು, ಚನ್ನಾಗಿ ಓಡ್ಯಾಡಿಸಿ, ಗೈಯಿಸುವನು. ಮೈಗಳ್ಳತನವು ಜೂಜಾಟ, ಕುಡಿದಾಟ, ಕಳ್ಳಾಟ, ಕಲಹ ಮೊದಲಾದ ಎಲ್ಲಾ ಕೆಟ್ಟತನಕ್ಕೂ ಪಂಚಮಹಾಪಾತಕಗಳಿಗಾದರೂ ಬುಡವಾಗುವಂಥಾದ್ದೇ. ಉಂಡಾಡಬಂಟರಿಗೆ ಕೆಲಸದಲ್ಲಿ ರುಚಿಯಿಲ್ಲಾ: ಅನ್ನಪಾನಾದಿಗಳಲ್ಲಿ ಮಹಾ ರುಚಿ! ತಮ್ಮ ನಾಸಾಗ್ರದ ಅಡಿಯ ಕೆಳಗಣ ಚಿಕ್ಕ ಬಿಲವನ್ನು ಒತ್ತಿ ತುಂಬಿಸಲಿಕ್ಕೆ ಮೈಗಳ್ಳರಿಗೆ ಹೆಂಡರ ಮಕ್ಕಳ ಉಡಿಗೆ ತೊಡಿಗೆಗಳಾದರೂ ಸಾಲವು. ಗೇಣುದ್ದ ಹೊಟ್ಟೆಯಲ್ಲಿ ದನಕರು, ಮನೆಮಾರು, ಹೊಲಪೊಲ, ಭೂಮಿಗೀಮಿ ಹಾಕಿ ಬಿಡುವ ಚಮತ್ಕಾರವು ಮೈಗಳ್ಳರ ಪರಾಕ್ರಮವೂ ಮುಖ್ಯ ವಿದ್ಯೆಯೂ ಆಗಿದೆ. "ಕುಡಿಕರೂ ಹೊಟ್ಟೆಬಾಕರೂ ಆದಂಥವರ ದರಬಾರಿನ ತುದಿ ದಾರಿದ್ರ್ಯವೇ; ಸುಸ್ತಿಗಾರನ ದುಸ್ತು ಹರಕುಪರಕು" ಎಂಬೀ ವಚನದಿಂದಲೂ ಮೈಗಳ್ಳತನದ ದೋಷವು ಬೇರೆ ದೋಷಗಳ ಸಖಿಯೆಂತ ಕಾಣುತ್ತದೆ. ಮಾಡಿಗೆ ಬಿದ್ದ ಹುಲ್ಲು, ಹುಳ ಮುಂತಾದ್ದು ಆಗಿ, ಕೊಳತು ಹೋಗುವಂತೆ, ಮೈಗಳ್ಳರು, ಕೆಟ್ಟ ಚಾಳಿಗಳೂ ವ್ಯಸನಗಳೂ ಹುಟ್ಟಿ, ನೀತಿಭ್ರಷ್ಟರಾಗಿ ಹೋಗುವರು."

"ಬಾಲ್ಯದಲ್ಲಿ ಸೋಮಾರಿತನವು ಒಂದು ಚಿಕ್ಕ ಚಿಗುರು ಎಂಬಂತೆ ಹುಡುಗರಲ್ಲಿ ಕಂಡು ಬಂದರೆ, ಅದನ್ನು ಚಿಮುಟಿ ತೆಗಥಾಕ ಬೇಕು. ಚಿಕ್ಕ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಎಳೇ ಹುಲಿ

ಮರಿ ಹೊಡದು, ಕೊಂದು ಬಿಡುವದು ಸುಲಭ: ಹೆಬ್ಬುಲಿಯಾದ ಮೇಲೆ ಹೊಡದು, ಕೊಂದು ಬಿಡುವ ಕೆಲಸ ಭಯಂಕರವೇ. ಹುಡುಗರಿಗೆ ಹೆತ್ತವರ, ಕಿರಿಯರಿಗೆ ಹಿರಿಯರ, ದುರ್ಗುಣಗಳು ಸಜಾತವಾಗಿದ್ಧಾವೆ, ಅಂದರೆ ಹುಡುಗರ ಸ್ವಭಾವ ಹುಟ್ಟುವಾಗಲೇ ದುಃಸ್ವಭಾವವಾಗಿದೆ, ದುರ್ಗುಣಗಳೆಂಬದು ಅವರಿಗೆ ಹುಟ್ಟುಗುಣವಾಗಿ ಹಿಡಿದಿರುವಂಥಾದ್ದಾಗಿದೆ. ಹುಟ್ಟುವಾಗಲೇ ಹಲ್ಲುಗಳ ಬುಡ ಹ್ಯಾಗೋ ಹಾಗೆಯೇ ಪಾಪಗಳ ಬೀಜ ಇದ್ದವರಾಗಿ ಬರುತ್ತಾರೆ. ಹೀಗಿರಲಾಗಿ ದುರ್ಗುಣದ ಸಂಗತಿಯನ್ನೂ ದುಷ್ಕರ್ಮಗಳನ್ನೂ ಹುಡುಗರಿಗೆ ಯಾರೂ ಹೇಳಿ ಅಥವಾ ತೋರಿಸಿ ಕೊಡದೆ ಇದ್ದದಾದರೂ, ಅವು ಹುಡುಗರಿಂದ ಆಗದೆ ಹೋಗುತ್ತಿದ್ದಿಲ್ಲಾ. ಕರಿ ಶಾಯಿಯಿಂದ ಕೆಂಪು ಅಕ್ಷರ ಬರೆಯಲಿಕ್ಕೆ ಬಂದೀತೇ? ಆಡಿನಲ್ಲಿ ಆನೆ, ನರಿಯಲ್ಲಿ ಹುಲಿ ಹುಟ್ಟೀತೇ? ಕಾಗೀ ಬಾಯಿಯಿಂದ ಕೋಗಿಲೇ ಸ್ವರ ಹೊರಟೀತೇ? ಎಮ್ಮೆಗೆಂದಾದರೂ ಹಂದಿ ತಾಯಿಯಾದೀತೇ? ಮೈಗಳ್ಳರು ಮಹಾ ಕಳ್ಳರೇ ಅಂತಾದ ಮೇಲೆ, ಮೈಗಳ್ಳರ ಸಹವಾಸವು ಮಹಾ ಕಳ್ಳರ ಸಹವಾಸವಂತಾಯಿತು. ಕಿರಿಯರು ದುಃಸಂಗದಲ್ಲಿ ಬೀಳದ ಹಾಗೆ ಹಿರಿಯರು ನೋಡಿ, ಅವರನ್ನು ಸತ್ಸಂಗಕ್ಕೆ ನಡಿಸಿ, ಶೇರಿಸ ಬೇಕು. ಹಾಗಾದರೆ ತಮ್ಮ ಸಹವಾಸವೇ ಕಿರಿಯರಿಗೆ ದುಸ್ಸಹವಾಸವಾಗಿರದಂತೆ ಹಿರಿಯರು ಮುಖ್ಯವಾಗಿ ನೋಡಿ ಕೊಂಡು, ಸರ್ವ ವಿಚಾರಗಳಲ್ಲಿ ಸತ್ಪಾತ್ರರಾಗಿ ನಡದು ಕೊಳ್ಳ ಬೇಕು. ಕೆಟ್ಟ ಮಾತು ಕಥೆ, ಕೆಟ್ಟ ಚಾಳಿ, ಕೆಲಸಗಳ್ಳತನದ ವಾಸನೆ ಮುಂತಾದ್ದು ಕಿರಿಯರಿಗೆ ತಮ್ಮ ಹಿರಿಯರಲ್ಲಿ, ಮಕ್ಕಳಿಗೆ ತಮ್ಮ ಹೆತ್ತವರಲ್ಲಿ ಕಾಣ ಬಾರದು. ಹುಡುಗರಿಗೆ ಮೈಗಳ್ಳರೂ ದುಸ್ಮಾನರೂ ಜಾರರೂ ಚೋರರೂ ಕಂಡರೆ, ಅವರಿಗೆ ದಿಗಿಲು ಹುಟ್ಟಿ ಹೋಗಿ, ರೋಮಾಂಚವಾಗ ಬೇಕು. **ಅರಸಾಗಿ ಆಳಾಗುವಂಥಾದ್ದು ಜೀವಕ್ಕೆ ಯಮನಂತೆ. ಆಳಾಗದೆ ಅರಸಾಗ ಬೇಕೆಂಬ** ಭಾವ ವಾಡಿಕೆಯಾಗಿ, ಒಂದು ಪ್ರಬಲವಾದ ಸೋಕುರೋಗದಂತಾಗಿರುತ್ತದೆ. ಈ ಭಾವವು ಆಗದ ಹೋಗದ ಕಾರ್ಯಕ್ಕೆ ಪೇಚಾಡಿ, ಬಾಯಿಗೆ ಮಣ್ಣು ಹಾಕಿ ಕೊಳ್ಳುವ ಭ್ರಾಂತಿಯೇ ಸೈ ಎಂಥೇಳ ತಕ್ಕದ್ದು. **ಆಳಾಗಿ ಅರಸಾಗ ಬೇಕೆಂಬ** ಮಾತು ಉಚಿತವೂ ವಾಜಿಬಿಯೂ ಆಗಿದೆ. ಈ ಮಾತಿನ ಪಾಠವನ್ನು ಹುಡುಗರಿಗೆ ಚನ್ನಾಗಿ ಮಾಡಿಸ ಬೇಕು. ಆಳಾಗಿ ಅರಸಾದವನು ಮಾನ್ಯನೇ. ಸಾರಾಂಶ: "ತಾಯಿಯಂತೆ ಕರು, ಅಪ್ಪನಂತೆ ಮಗ" ಎಂಬ ನೀತಿಯಿರಲಾಗಿ, ನಿನ್ನ ಹುಡುಗರು ಕೆಲಸಗಳ್ಳರೂ ನಿಷ್‌ಪ್ರಯೋಜಕರೂ ಆಗದ ಹಾಗೆ ನೀನು ಸಹ ಕೆಲಸಗಳ್ಳನೂ ನಿಷ್‌ಪ್ರಯೋಜಕನೂ ಆಗಿರ ಬಾರದು."

---

## ಉತ್ತರಗಳು.

(೮೬ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

11. ಸಮಾರ್ಯದಲ್ಲಿ. ೨. ಅರಸು. ೬, ೨೫.

12. ಕಾರಿ ಬಿಡಲ್ಪಡುವ ಮಾತು ಉಗುರುಬೆಚ್ಚಗೆಯಾಗಿರುವಂಥವರಿಗೆ ಭಯಕ್ಕೆ ಕಾರಣ. ಪ್ರಕಟ. ೩, ೧೪—೧೬; ಆದರೆ ಯೋನನಿಗೆ ಕಾರಿ ಬಿಡಲ್ಪಟ್ಟದು ಸಂತೋಷಕ್ಕೆ ಕಾರಣವಾಯಿತು. ಯೋನ. ೨, ೧೦.

13. ಎಸ್ಕಿಮೋಯರ ಹುಡುಗರು ಪುಸ್ತಕಗಳನ್ನು ತಿಂದು ಬಿಟ್ಟ ಸಂಗತಿ ಎಜೆಕಿಯೇಲನನ್ನೂ ಯೊಹಾನನನ್ನೂ ನೆನಪು ಹುಟ್ಟಿಸ ಬಹುದು. ಎಜೇಕಿ. ೩, ೧—೩; ಪ್ರಕಟ. ೧೦, ೮—೧೦.

14. ಸೊಲೊಮೋನನಿಗೆ. ೨. ದಿನಚರ್ಯ. ೪, ೩. ೪.

15. ಮಹಾರಾಜ ಕ್ರಿಸ್ತ ಯೇಸು. ಇಬ್ರಿ. ೧, ೩; ಲೂಕ. ೨೪, ೨೬.

---

## ಹೊಸ ಪ್ರಶ್ನೆಗಳು.

16. ಅದೇ ಹೆಸರು ಇದ್ದಂಥಾ ಮೂರು ಮಂದಿ ಸ್ತ್ರೀಯರು, ಒಬ್ಬಳಿಗಿಂತ ಒಬ್ಬಳು ದುಃಖಾಕ್ರಾಂತಳಾಗಿ, ಎಲ್ಲಿ ಕೂಡಿದ್ದರು?

17. ಸಂತಾನವಿಲ್ಲದೆ ತೀರಿ ಹೋದಂಥ ಮಗನೊಬ್ಬನೂ, ಅತಿ ಪೂರ್ವದಲ್ಲಿ ಆರಿ ಹೋದ ಸಂತಾನಕ್ಕೆ ತಂದೆಯಾದಂಥ ಮಗನೊಬ್ಬನೂ, ಇಂದಿನ ವರೆಗೂ ಉಳಿದ ಮಹಾ ಸಂತಾನಕ್ಕೆ ಜನಕನಾದಂಥ ಮಗನೊಬ್ಬನೂ ಇದ್ದಂಥಾ ಗೃಹಸ್ಥನ ಹೆಸರೇನು?

18. ನಿರ್ದೋಷಿಯನ್ನು ದೋಷಿಯಾದವನು ಶಿಕ್ಷಿಸಿದ ಮೇಲೆ ನಿರ್ದೋಷಿ ದೋಷಿಯನ್ನು ಶಿಕ್ಷಿಸಿದ ಸಂಗತಿ ಗೊತ್ತುಂಟೋ?

19. ಯಾವ ಹಬ್ಬಕ್ಕೆ ಆರು ತಿಂಗಳು ಹಿಡಿಯಿತು?

20. ಬಂದದಕ್ಕೆ ಅತಿ ಸಂತೋಷ ಪಟ್ಟಾಗ್ಯೂ, ಬಂದವನಿಗೆ ಮನೆಯ ಬಾಗಲನ್ನು ತೆಗಿಯದೆ ಹೋದ್ದು ಯಾರು?

(೭೮ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ ಮಂಗಳೂರ ಸಭೆಯ ಯೌವನಸ್ಥನೊಬ್ಬನೂ ಸರಿಯಾದ ಉತ್ತರಗಳನ್ನು ಬರದು ಕೊಟ್ಟನು.)

---

## ವಿವಿಧ ವರ್ತಮಾನಗಳು.

ಮದ್ರಾಸ ಗವರ್ನಮೆಂಟಿನವರು ಬರಗಾಲ ಬಿದ್ದ ದೇಶಗಳವರಿಗೆ ಸಹಾಯ ಮಾಡುವದಕ್ಕೆ ೮೮ ಲಕ್ಷ ರೂಪಾಯಿ ಖರ್ಚು ಮಾಡುವರು. ಸದ್ಯಕ್ಕೆ ೧೦೪೧೮೧೦ ಜನರು ಕೆಲಸ ಮಾಡಿ ಸಹಾಯ ಹೊಂದುತ್ತಿದ್ದಾರೆ.

ಜನವರಿ ತಿಂಗಳ ಆರಂಭದಲ್ಲಿ ಡಿಲ್ಲಿಯಲ್ಲಿ ಆದ ಮಹಾ ದರಬಾರು ಅಭೂತಪೂರ್ವಕ. ಲಾರ್ಡ್ ಲಿಟ್ಟನ್ ಪ್ರಭುಗಳೂ ಮದ್ರಾಸ ಮುಂಬಾಯಿ ಗವರ್ನರ್ ಧೊರೆಗಳೂ ಇನ್ನು ಬೇರೆ ಧೊರೆಗಳೂ ಹಾಂಗೂ ಹಿಂದುರಾಜರೂ ಸರದಾರರೂ ಪರದೇಶಗಳ ರಾಯಭಾರಿಗಳೂ ಸಮಾಗವಾದರು. ೧೫,೦೦೦ ದಂಡೂ ಇತ್ತು; ಲಾರ್ಡ್ ಲಿಟ್ಟನ್ ಪ್ರಭುಗಳ ಅಪ್ಪಣೇ ಮೇರೆಗೆ ಪ್ರಕಟಪತ್ರಿಕೆ ಓದೋಣಾದ ಮೇಲೆ ೧೦೧ ಫಿರಂಗಿ ಹಾರಿಸಲಾದವು; ತರುವಾಯ ಅವರು ತಾವೇ ಸಣ್ಣ ಭಾಷಣ ಮಾಡಿ ದರಬಾರನ್ನು ಮುಗಿಸಿದರು. ಈ ಮಧ್ಯೆ ನಡದ್ದೊಂದು ಸಂಗತಿ ಏನಂದರೆ ಲಿಟ್ಟನ್ ಪ್ರಭುಗಳು ಖಿಲಾತಿನ ಖಾನನ ಕೈಯಿಂದ ಒಂದು ಚಿಟಕಿ ನಶೆ ತೆಕ್ಕೊಂಡು, ಚಲೋ ನಶೆ ಎಂತ ಹೊಗಳಿ, ಹಾಕಿ ಕೊಂಡು ಬಹಳ ಶೀನಿದರಂತೆ.—ಲಾರ್ಡ್ ಲಿಟ್ಟನ್ ಪ್ರಭುಗಳು ಕೂಡಿ ಬಂದ ರಾಜರುಗಳಲ್ಲಿ ಒಬ್ಬೊಬ್ಬರಿಗೆ ಒಂದು ಬಿರುದಿನ ಬಿಲ್ಲೆ ಕೊಟ್ಟರು; ಆ ಬಿಲ್ಲೆಯು ಒಂದು ಪಾರ್ಶ್ವದಲ್ಲಿ ವಿಕ್ಟೋರಿಯ, ೧ನೆ ಜನವರಿ ೧೮೭೭ ಎಂತ, ಇನ್ನೊಂದು ಪಾರ್ಶ್ವದಲ್ಲಿ ಇಂಗ್ಲಿಷಿನಲ್ಲಿ ಎಮ್ಪ್ರೆಸ್ ಒಫ್ ಇಂಡಿಯ, ಪಾರಶಿಯಲ್ಲಿ ಕೈಸರ್ ಇ ಹಿಂದ್, ಹಿಂದುಸ್ಥಾನಿಯಲ್ಲಿ ಹಿಂದ್ ಕಾ ಕೈಸರ್ ಎಂತಲೂ ಮುದ್ರಿತವಾಗಿದೆ. ಮತ್ತು ಕಾಶ್ಮೀರದ ಮಹಾರಾಜ, ಸಿಂದಿಯ, ಹೋಳಕರ, ಜಯಪುರದ ಮಹಾರಾಜ ಇವರಿಗೆ ಬಹುಮಾನಸ್ಥಾನಗಳು ದಯೆ ಮಾಡೋಣಾದವು.

ಆ ಮಹೋತ್ಸವಕ್ಕೆ ಸಮಾರಂಭವಾಗುವಾಗಲೇ ಮಹಾ ಒಂದು ವಿಪತ್ತು ಸಹ ಸಂಭವಿಸಿತು; ಗವರ್ನರ್ ಜನರಲ್ ಧೊರೆಗಳವರ ಪರಿಜನರಲ್ಲಿ ಒಬ್ಬ ಸರದಾರನು ಆಡುತ್ತಿರುವಾಗ ಕುದ್ರೆಯ ಮೇಲಿನಿಂದ ಬಿದ್ದು ಸತ್ತು ಹೋದನು; ಮಹಾರಾಜರನ್ನೂ ಶ್ರೀಮಂತರನ್ನೂ ಅಲ್ಲಿಗೆ ಕರಸಿದರಷ್ಟೇ; ಈ ಮೃತ್ಯುವನ್ನು ಕರಿಸಿದವರು ಯಾರು? ಅವನು ಎಲ್ಲರ ಮೇಲೆ ಅಧಿಕಾರವುಳ್ಳವನು; ಬರ ಬೇಡ ಅನ್ನ ತಕ್ಕವರು ಯಾರು? ಮಹೋತ್ಸವಕಾಲದ ಸಂಭ್ರಮದಲ್ಲಿ ಸಹ ತಾನು

ಒಂದು ದಿನ ಎಲ್ಲ ಬಿಟ್ಟು ನಡಿಯ ಬೇಕೆಂಬದು ಮನುಷ್ಯನು ಸ್ಮರಣೆಯಲ್ಲಿಡ ಬೇಕು. “ನನಗೂ ಮರಣಕ್ಕೂ ಒಂದು ಅಡಿ ದೂರ ಮಾತ್ರವದೆ.” ಯಾವ ಕಾರ್ಯದಲ್ಲಿಯೂ ಪ್ರಾರ್ಥನೆ ದೇವರ ಆಶೀರ್ವಾದ ಬೇಡಿ ಕೊಳ್ಳುವದು ಮುಖ್ಯವಲ್ಲವೋ? ಇದು ಆ ದರಬಾರದ ಪ್ರಾರಂಭದಲ್ಲಿಯಾಗಲಿ ಸಮಾಪ್ತಿಯಲ್ಲಿಯಾಗಲಿ ಇರಲಿಲ್ಲ; ಚಕ್ರವರ್ತಿನಿಯವರ ಅಪೇಕ್ಷೇ ಮೇರೆಗೆ ದೇವಾರಾಧನೆ ಬಿಟ್ಟದಲ್ಲ; ಅವರು ಯಾವಾಗಲೂ ದೇವಾಶ್ರಯವನ್ನು ಮರತು ಬಿಡುವವರಲ್ಲ. ಕೂಡಿ ಬಂದಂಥಾ ಬೇರೆ ಬೇರೆ ಮತಗಳವರಾದ ರಾಜರಿಗೂ ಶ್ರೀಮಂತರಿಗೂ ಅಭ್ಯಂತರವಾದೀತೆಂತ ಉಪೇಕ್ಷಿಸಿದ್ದೋ? ಅದೂ ಆಗಿರ ಕೂಡದು; ಯಾಕಂದರೆ ಅವರಿಗೆ ಯಾವದೊಂದು ಮಹಾ ಕಾರ್ಯದಲ್ಲಿ ದೇವರ ಪೂಜೆ ನಾಮಸ್ಮರಣೆ ಇತ್ಯಾದಿ ಅವಶ್ಯವಾಗಿ ಬೇಕು. ಮತ್ತು ಚಕ್ರವರ್ತಿನಿಯವರು ತಮ್ಮ ಧರ್ಮಾನುಸಾರವಾಗಿ ನಡಕೊಂಡರೆ, ಅವರು ಬೇಡವನ್ನುವರೋ? ಬಿಶೊಪ್ ಗೆಲ್ ಧೊರೆ ಅಲ್ಲಿದ್ದರು. ಅವರಿಗೆ ಹೇಳಿ, ಪರಾತ್ಪರನಾದ ದೇವರಿಗೆ ಯೇಸುಸ್ವಾಮಿಯ ಹೆಸರಿನಲ್ಲಿ ಚಕ್ರವರ್ತಿನಿಯವರ ಮೇಲೆ, ಅವರ ಮಂತ್ರಿಗಳ ಮೇಲೆ, ದೇವರ ಆಶೀರ್ವಾದವಿರ ಬೇಕು ಎಂಬದಾಗಿ ಪ್ರಾರ್ಥನೆ ಮಾಡಿಸುತ್ತಿದ್ದರೆ, ಯಾರು ತಪ್ಪು ಹಿಡಿಯುತ್ತಿದ್ದರು? ಸರ್ವಾಧಿಪತಿಯವರ ಮನಸ್ಸಿಗೆ ದೇವಾರಾಧನೆಯಿಂದ ಆ ಮಹಾ ಕಾರ್ಯ ನಡಿಸುವದು ಉಚಿತವಾಗಿ ತೋರದ್ದರಿಂದಲೇ ಬಿಟ್ಟದಾಗಿರ ಬೇಕು.

ಈ ದರಬಾರಿನ ಸ್ಮರಣೆಗಾಗಿ ೧೫,೮೮೮ ಬಂದಿವಾನರಿಗೆ ಬಿಡುಗಡೆ ಮಾಡಲಾಯಿತು; ೧೦೦ ರೂಪಾಯಿ ಒಳಗಿನ ಸಾಲಸಂಬಂಧ ಶೆರೆಯಲ್ಲಿರುವವರಿಗೆ ಸರಕಾರದವರು ಅವರ ಸಾಲ ತೀರಿಸಿ ಬಿಟ್ಟು ಬಿಡುವರು; ಮತ್ತು ಬಹಳ ಮಂದಿ ಈ ದೇಶದ ಉದ್ಯೋಗಸ್ಥರಿಗೆ ಬಿರುದಿನ ಹೆಸರುಗಳನ್ನು ಕೊಟ್ಟು, ಸಂಬಳ ಹೆಚ್ಚಿಸಿ ಇನಾಮು ಮಾಡೋಣಾಗುವದು

ರಾಮಪುರದ ನವಾಬನು ಡಿಲ್ಲಿಯ ದರಬಾರಿಗೆ ೧೦೦ ಆನೆಗಳನ್ನು ಕಳುಹಿಸಿದ್ಧಾನೆ; ಅಲ್ಲಿ ಸಾವಿರದ ಮೇಲೆ ಆನೆಗಳು ಕೂಡಿ ಇದ್ದವು.

ಬ್ರಹ್ಮಸಮಾಜದವರ ಒಂದು ಪತ್ರಿಕೆಯಲ್ಲಿ ಜಾಪಾನಿನ ಬೌದ್ಧರು ಕ್ರಿಸ್ತಧರ್ಮವನ್ನು ವಿರೋಧಿಸುವದಕ್ಕೆ ತಮ್ಮ ಕಡೆಯಿಂದ ಪ್ರಸಂಗಿಗಳನ್ನು ಕಳುಹಿಸುವ ಆಲೋಚನೆಯಲ್ಲಿದ್ಧಾರೆಂದೂ, ಆ ಪ್ರಸಂಗಿಗಳು ಆಸಕ್ತರೂ ವಿದ್ಯಾಸಂಪನ್ನರೂ ಆಗಿದ್ದರೆ, ಅವರ ಪ್ರಯತ್ನ ಕೈಕೂಡುವದೆಂತಲೂ ಛಾಪಿಸಿಯದೆ. ಹೌದೋ ಏನೋ? ಆದಾಗ ಹೌದೆಂತ ಹೇಳ ಬಹುದು. ಈ ವರೆಗೆ ಬಂದ ಜಾಪಾನಿನ ವರ್ತಮಾನದ ಮೇಲೆ ಕ್ರಿಸ್ತಧರ್ಮ ಅಲ್ಲಿ ಪ್ರವರ್ತಿಸುವದಕ್ಕೆ ಅನುಕೂಲ ಹೆಚ್ಚುತ್ತಾ ಬರುತ್ತದೆಂತ ಕಂಡು ಬರುತ್ತದೆ.

ತಿರುವಾಂಕೋಡಿನ ಸುರ್ಯಾಣಿ ಕ್ರಿಸ್ತೀಯರೊಳಗೆ ಭಕ್ತಿ ಪುನರ್ಜೀವವಾದ ಸಂಗತಿ ಅನೇಕರಿಗೆ ನೆನಪಿರುವದು; ಆಗ್ಯೆ ಅವರೊಳಗೆ ಕೆಲವರು ತಾವು ಪ್ರವಾದಿಗಳು ಎಂತ ಅನ್ನಿಸಿ ಕೊಂಡು, ಇನ್ನು ೬ ವರುಷಗಳಲ್ಲಿ ಕರ್ತನು ಬರುವನು. ಇದಕ್ಕೆ ಗುರುತಾಗಿ ಕಳದ ಅಗೊಸ್ತು ತಿಂಗಳ ತಾರೀಕು ೧೨—೧೫ ಸರ್ವ ಲೋಕದಲ್ಲಿ ಕತ್ತಲಾಗುವದು ಎಂದು ಪ್ರಸಂಗಿಸುತ್ತಾ ಅನೇಕರನ್ನು ಮೋಸಗೊಳಿಸಿ, ತಮ್ಮ ಪಕ್ಷಕ್ಕೆ ಸೇರಿಸಿ ಕೊಂಡರು; ಆ ತಾರೀಕಿಗಿಂತ ಸ್ವಲ್ಪ ಮುಂಚೆ ಆ ಶೀಮೆಯ ಮಹಾರಾಜನಿಗೂ ವಿಕ್ಟೋರಿಯ ಚಕ್ರವರ್ತಿನಿಯವರಿಗೂ ತಂತಿಟಪ್ಪಾಲಿನಿಂದ ವರ್ತಮಾನ ಮುಟ್ಟಿಸಿದರು; (ಇವರಿಗೆ ಕಳುಹಿಸಿದ ವರ್ತಮಾನ ಮುಂಬಾಯಿಂದ ವಾಪಸು ಬಂತು.) ಆದರೆ ಅವರು ಕಾಲಜ್ಞಾನ ನುಡಿದಂತೆ ಕತ್ತಲೆ ಆಗಲಿಲ್ಲ; ಜನರೆಲ್ಲರು ಪರಿಹಾಸ್ಯ ಮಾಡಲಿಕ್ಕೆ ಪ್ರಾರಂಭಿಸಿದರು; ಈಗ ಆ ಪ್ರವಾದಿಗಳಲ್ಲಿ ಒಬ್ಬನು ತನ್ನ ಭ್ರಮೆಯಿಂದ ಎಚ್ಚತ್ತು ಮತ್ತೊಬ್ಬರನ್ನು ಎಚ್ಚರಿಸುವದಕ್ಕೆ ಸಾಕ್ಷಿ ಕೊಡುತ್ತಾನೆ. ಗೋಧಿ ಬಿತ್ತಿದ್ದಲ್ಲಿ ಊದರೆ ಬಿತ್ತಿದ ವೈರಿ ಇನ್ನೂ ಜೀವದಿಂದಿದ್ಧಾನೆಂಬದಕ್ಕೆ ಈ ಸಂಗತಿಯೂ ಉದಾಹರಣೆಯಾಗಿದೆ.

ವಿಶಾಖಪಟ್ಣದಲ್ಲಿ ಲಂಡನ ಮಿಶ್ಯನಿನ ಇಂಗ್ಲಿಷ ಶಾಲೆಯ ಉಪಾಧ್ಯಾಯನೊಬ್ಬನು ಕ್ರಿಸ್ತೀಯನಾದ ಕಾರಣದಿಂದ ಅವನು ತನ್ನ ಮಕ್ಕಳ ಪರಿಪಾಲಕನಾಗಿರ ಕೂಡದು, ಅವರ ಹತ್ತರ ಹೋಗಲೂ ಕೂಡದು ಎಂತ ಹೈಕೋರ್ಟಿನವರು ತೀರ್ಪು ಕೊಟ್ಟರು; ಅವನು ತನ್ನ ಮಕ್ಕಳನ್ನು ತರುವದಕ್ಕೆ ನ್ಯಾಯವಾಗಿ ಪ್ರಯತ್ನ ಮಾಡಿದ್ದಕ್ಕೆ ೫೦ ರೂಪಾಯಿ ಜುಲುಮಾನೆ ಆಯಿತು; ಈಗ ಆ ಮಕ್ಕಳು ಸಾಕಲಿಕ್ಕೂ ಏನೊಂದು ವಿದ್ಯೆ ಬುದ್ಧಿ ಕಲಿಸುವದಕ್ಕೂ ಸಾಮರ್ಥ್ಯವಿಲ್ಲದ ತಾಯಿಯ ಹತ್ತರವಿದ್ದಾರೆ; ಗಂಡನಿಗೆ ಸ್ನಾನವಾದ ನಂತರ ಸಹ ಅವನ ಸಂಗಡ ಇರುವದಕ್ಕೆ ಅವಳಿಗೆ ಪೂರ್ಣ ಮನಸ್ಸಿದ್ದರೂ ಸಂಬಂಧಿಕರು ವಿರೋಧ ಮಾಡಿದ್ದರಿಂದ ಅವಳು ಹಿಂದುಳಿದಳು. ಹಿಂದು ಜನರು ಕ್ರಿಸ್ತೀಯರಾಗುವಾಗ್ಯೆ ಮೊದಲೇ ಕಷ್ಟಗಳು ಬಹಳ; ಈ ಕಷ್ಟಗಳನ್ನು ಬ್ರಿತಿಷ ಕೋರ್ಟಿನವರು ಮತ್ತೂ ಹೆಚ್ಚಿಸಿದರೆ ಹ್ಯಾಗೆ?

ಅಹ್ಮದನಗರದಲ್ಲಿಯ ಅಮೇರಿಕನ್ ಮಿಶ್ಯನಲ್ಲಿ ಕಳೆದ ವರುಷ ೬೦ ಮಂದಿ ಸ್ನಾನ ಹೊಂದಿದರು; ಅಲ್ಲಿ ಘುನ ರಾಮಕೃಷ್ಣ ಮೋದಕ ಅಯ್ಯನವರು ಸಭಾಪಾಲಕರಾಗಿದ್ದಾರೆ.

ಒಂದು ಊರಿನಲ್ಲಿ ಒಂದು ದೊಡ್ಡ ಮರ ಕಡಿದು ಶಿಗಿಯುವದಕ್ಕೆ ಆರಂಭಿಸಿ, ಕೆಲ ಹಲಿಗೆ ಶಿಗಿದ ಮೇಲೆ ಒಂದು ಸಣ್ಣ ಬಿಲದಿಂದ ಒಂದು ಕಪ್ಪೆ ಮೆಲ್ಲಗೆ ತಲೆ ಹೊರಗೆ ಹಾಕುವದು ಕಂಡಿತು; ಅದನ್ನು ಹೊರಗೆ ತೆಗೆಯಲಾಗಿ ಸುಮಾರು ಮನುಷ್ಯನ ಅಂಗೈಯಷ್ಟು ದೊಡ್ಡದಾಗಿ ಚಪಟೆಯಾಗಿತ್ತು; ಅದಕ್ಕೆ ಕಣ್ಣು ಕಾಣುತ್ತಿದ್ದಿಲ್ಲಾ, ಆದರೂ ಚಲಿಸಲಾರಂಭಿಸಿತು; ಆ ಕಪ್ಪೆ ಅಲ್ಲಿ ಹ್ಯಾಗೆ ಬಂತೆಂಬದು ಮಹಾ ಆಶ್ಚರ್ಯ; ಖಂಡಿಯಲ್ಲಿ ಟೊಳ್ಳು ಎಲ್ಲಿಯೂ ಇರದೆ ಅದು ಅಖಂಡವೂ ಬಹಳ ಗಟ್ಟಿಯೂ ಆಗಿತ್ತು; ಮರದಲ್ಲಿ ಕಪ್ಪೆ ಇದ್ದ ಜಾಗ ನೋಡಿದರೆ, ನೆಲದಿಂದ ಸುಮಾರು ೫೦—೬೦ ಅಡಿ ಮೇಲಕ್ಕೆ ಇತ್ತು, ಅದು ಮರ ಸಣ್ಣದಾಗಿರುವಾಗ ಒಳಗೆ ಶೇರಿ, ಕಡೆಗೆ ಮರದ ಸಂಗಡಲೇ ಬೆಳದಿದ್ದೀತು; ಮರದ ಬೆಳವಣಿಗೆಯಿಂದ ನಿರ್ಣೈಸಿದರೆ, ಕಪ್ಪೆಗೆ ಸುಮಾರು ೧೦೦ ವರುಷ ಇದ್ದೀತು; ಇಷ್ಟು ಕಾಲ ಅದು ಏನು ತಿಂದು ಬದುಕಿತು?

ಹಳೆ ಒಡಂಬಡಿಕೆಯ ಚರಿತ್ರೆ ಪುರಾಣಗಳಂತೆ ಕಟ್ಟುಕಥೆಯಲ್ಲಾ, ಸತ್ಯವಾಗಿ ನಡೆದಂಥಾ ದೇವರ ಜನಾಂಗದ ಚರಿತ್ರೆ ಎಂಬದಕ್ಕೆ ಬಬಿಲೋನ ನಿನೆವೆ ಪಟ್ಣಗಳು ಇದ್ದ ಸ್ಥಳದಲ್ಲಿ ಶಿಕ್ಕಿದ ನಾನಾ ಶಾಸನಗಳಿಂದಲೂ ಲಿಪಿಗಳಿಂದಲೂ ಸಾಕ್ಷಿ ಶಿಕ್ಕುತ್ತದೆ; ಆ ಲಿಪಿಗಳಲ್ಲಿ ನಬೊಪೊಲಸರ್, ಅವನ ಮಗ ನೆಬುಕದ್ನೇಚರ್, ಏವಿಲ್ ಮೆರೋದೆಕ್ ಮುಂತಾದ ಅರಸರ ಹೆಸರು ಕಾಣುತ್ತವೆ. ಈ ಶಾಸನಾದಿಗಳ ಶೋಧನೇ ಕೆಲಸವು ಈಗಲೂ ನಡಿಯುತ್ತಾ ಅದೆ.

ಜರ್ಮನಿ ದೇಶದ ಜನಪದ ಕಳೆದ ೫೦ ವರುಷಗಳಲ್ಲಿ ಬಹಳ ಆಶ್ಚರ್ಯವಾಗಿ ವೃದ್ಧಿ ಪಡಿಯುವಂಥಾದ್ದಾಯಿತು; ಸದ್ಯಾ ಮಾಡಿದ ಲೆಖ್ಖದಲ್ಲಿ ೪೨,೬೨೬,೮೪೪ ಜನರಿದ್ದಾರೆಂತ ತಿಳಿಯಲಾಯಿತು; ಇದರಿಂದ ೭೧ನೆ ಇಸವಿಯಲ್ಲಿ ಲೆಖ್ಖ ಮಾಡಿದ ಮೇಲೆ ೪ ವರುಷಗಳಲ್ಲಿ ೧,೭೦೩,೭೪೯ ಮಂದಿ ಹೆಚ್ಚಾದರೆಂತ ಕಂಡು ಬರುತ್ತದೆ. ಐವತ್ತು ವರುಷಗಳಲ್ಲಿ ಜನಪದ ಸುಮಾರು ಇಮ್ಮಡಿ ಹೆಚ್ಚಾಯಿತು: ೧೮೧೬ನೆ ಇಸವಿಯಲ್ಲಿ ೨೩,೦೧೩,೨೧೧; ೩೭ನೆ ಇಸವಿಯಲ್ಲಿ ೩೦,೦೧೦,೭೧೧; ೫೦ನೆ ಇಸವಿಯಲ್ಲಿ ೩,೫೩,೩೪ ೫೩೮; ೭೧ನೆದರಲ್ಲಿ ೪,೧೦,೨೩,೧೯೫. ಇವರಲ್ಲಿ ಪ್ರೊತೆಸ್ತಂತರು ೨೬,೭೮೩,೪೫೮; ಕಥೊಲಿಕರು ೧೫,೩೬೭,೪೬೩.

ಇವಾನ್ಸ ಎಂಬವನೊಬ್ಬ ಅಮೇರಿಕದವನು ಹುಚ್ಚು ನಾಯಿ ಕಚ್ಚಿದ್ದಕ್ಕೆ ಒಂದು ನವೀನ ಚಿಕಿತ್ಸೆ ಇಂಗ್ಲಾಂಡಿಗೆ ತಂದಿದ್ದಾನೆ. ಅವನ ಹತ್ತರ ಒಂದು ಸಣ್ಣ ಕರೇ ಕಲ್ಲಿನ ಹರಳಿನಂಥಾದ್ದು ಅದೆ. ಅದನ್ನು ಮೊದಲು ಕುದಿಯುವ ಹಾಲಿನಲ್ಲಿಯೂ ನೀರಿನಲ್ಲಿಯೂ ಅದ್ದಿ ತರುವಾಯ ಘಾಯದ ಮೇಲಿಡುತ್ತಾನೆ. ಅದು ಬಿಮ್ಮಗೆ ಅಂಟಿಕೊಂಡು ನೋವು ಕೊಡುವದು; ಘಾಯದಿಂದ ರಕ್ತ ಹರಿಯುವ ವರೆಗೆ ಪದೇ ಪದೇ ತಾಗಿಸುತ್ತಾನೆ; ಅದು ಅಂಟಿ

ಕೊಂಡಿದ್ದ ಸಮಯದಲ್ಲಿ ಅದನ್ನು ಸರ್ವಥಾ ತೆಗಿಯಲಾಗುವದಿಲ್ಲಾ; ಆ ಕಲ್ಲಿನ ಹರಳು ಸ್ವತೇ ಬಿದ್ದಾಗ ಎಲ್ಲಾ ಪರಿಹಾರವಾಯಿತು, ಇನ್ನೇನೂ ಭಯವಿಲ್ಲವಂತೆ.

ತಂತಿಟಪ್ಪಾಲಿನ ಚಮತ್ಕಾರವು ಇನ್ನೂ ಬಾಲ್ಯಾವಸ್ಥೆಯಲ್ಲಿ ಅದೆ; ಅದು ಪುರುಷಪ್ರಾಯಕ್ಕೆ ಬಂದಾಗ ಏನಾಗಿರುವದೋ ಯಾರೂ ಈಗ ಹೇಳಲಾರರು. ಸದ್ಯಾ ಪರೀಸಿನಲ್ಲಿ ಹೊಸದೊಂದು ಯುಕ್ತಿ ಹಿಡಿದು ತೆಗೆದಿದ್ದಾರೆ; ತಂತಿಟಪ್ಪಾಲಿನಲ್ಲಿ ವರ್ತಮಾನಗಳನ್ನು ಕಳುಹಿಸುವಂತೆ ಮನುಷ್ಯ ತದ್ರೂಪ ನಕ್ಷೆ ಸಹ ಕಳುಹಿಸುತ್ತಾರೆ; ಪರೀಸಿನಿಂದ ಲಿಯೋನಿಗೆ ಈ ಪ್ರಕಾರ ಕಳುಹಿಸಿದ ಕಳ್ಳನ ನಕ್ಷೆಯನ್ನು ಅಲ್ಲಿಯ ಪೊಲೀಸಿನವರು ನೋಡಿ, ಅವನ ಗುರುತು ಹಿಡಿದರಂತೆ.

ನೋವೊಸ್ಕೊತಿಯದಲ್ಲಿ ೯ ವರುಷದ ಒಬ್ಬ ಹುಡುಗನು ಗಾಳ ಹಾಕುತ್ತಿರುವಾಗ್ಯೆ ಸುಮಾರು ೨೫ ಮಾರು ದೂರದಲ್ಲಿ ೮ ವರುಷದ ಒಬ್ಬ ಪೋರನು ನೀರೊಳಗೆ ಬಿದ್ದನು. ಆಗ್ಯೆ ಆ ಹುಡುಗನು ಅವನು ಎರಡು ಸಾರಿ ಮೇಲೆ ಬಂದು ಕೆಳಗೆ ಹೋಗುವದನ್ನು ನೋಡಿ, ಮಹಾ ಧೈರ್ಯದಿಂದ ಓಡಿ, ನೀರೊಳಗೆ ಹಾರಿ, ಶಳವು ಪ್ರತಿಕೂಲವಾಗಿದ್ದರೂ, ಈಜುತ್ತಾ ಅವನು ಇದ್ದಲ್ಲಿಗೆ ಹೋಗಿ, ಮುಳುಗಿ, ಅವನನ್ನು ಒಂದು ಕೈಯಿಂದ ಹಿಡಿದು, ಮೇಲಕ್ಕೆ ತಂದು, ಹತ್ತರವಿದ್ದ ಒಂದು ಸ್ತಂಭವನ್ನು ಹಿಡು ಕೊಂಡು ಕೂಗಲಾಗಿ, ಜನರು ಬಂದು, ಸಹಾಯ ಮಾಡಿದರು. ಥಳಿಯಿಂದಲೂ ದಣುವಿನಿಂದಲೂ ಆ ಹುಡುಗನು ಅರೆಪ್ರಾಣವಾದನು.

ಸ್ಪೇನಿನಲ್ಲಿಯೂ ಪೊರ್ತುಗಲ್‌ದಲ್ಲಿಯೂ ಮಹಾ ನೆರೆ ಬರುವಂಥಾದ್ದಾಯಿತು; ಸೆವಿಲ್ ಪಟ್ಣ ಅರ್ಧವಾಗಿ ನೀರು ತುಂಬಿ ಹೋಯಿತು.

ದಮಸ್ಕ ಪಟ್ಣದಲ್ಲಿಯೂ ಅದರ ಸುತ್ತಲಿನ ಪಾಳ್ಯದಲ್ಲಿಯೂ ಮೂರು ತಿಂಗಳಲ್ಲಿ ೧೨,೦೦೦ ಜನರು ಮುಖ್ಯವಾಗಿ ಮುಸಲ್ಮಾನರು ವಾಂತಿಭೇದಿಯಿಂದ ಸತ್ತು ಹೋದರು.

ಮಂಗಳೂರಿನಲ್ಲಿ ಶಿಡುಬುರೋಗ ಬಹಳ ಪ್ರಬಲವಾಗಿದೆ; ಕ್ರೈಸ್ತರೊಳಗೆ ಕೆಲವರು ಅದರಿಂದ ತೀರಿ ಹೋದರು.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

“ಅಳಿಯಸಂತಾನದಲ್ಲಿ” ಹುಟ್ಟಿ, ಬಳಿಕ ಕ್ರೈಸ್ತಸಭೆಯನ್ನು ಶೇರಿದವನೊಬ್ಬನು (-ಳು) ತಾನು ತೀರಿ ಹೋದ ಮೇಲೆ ತನ್ನಾಸ್ತಿ ತನ್ನ ಹೆಂಡತಿಗೆ (ಗಂಡನಿಗೆ) ಉಳಿದು ಬರ ಬೇಕು ಎಂಬ ಮನಸ್ಸು ಇರುವ ಪಕ್ಷಕ್ಕೆ ಅಳಿಯಂದಿಯರು ಮೊದಲಾದ ದಾಯಾದಿಗಳು ಅದನ್ನು ಅವಳಿಗೆ (-ನಿಗೆ) ತಪ್ಪಿಸಿ, ತಮಗೆ ಸಾಧಿಸಿ ಕೊಳ್ಳಲಿಕ್ಕೆ ಉಪಾಯವಾಗದಂತೆ ಒಂದು ಮೃತಿ ಪತ್ರದಲ್ಲಿ ತನ್ನಾಸ್ತಿಯನ್ನು ಅವಳಿಗೆ (-ನಿಗೆ) ಬರಕೊಡುವದು ಅವಶ್ಯವಾಗಿರುತ್ತದಂತೆ.

ಕ್ರಿಸ್ತುವಾರದಲ್ಲಿ (ದಶಂಬರ ೨೫ರಲ್ಲಿ) ಉಚ್ಚಿಲದಲ್ಲಿ ೮ ಜನರು ಸ್ನಾನ ಹೊಂದಿ, ಕ್ರೈಸ್ತಸಭೆಯನ್ನು ಶೇರಿದರು. ಉಡ್ಪಿಯಲ್ಲಿಯೂ ಅದೇ ದಿನದಲ್ಲಿ ೪೧ ಜನರು ಸ್ನಾನದಿಂದ ಸಭಾಂಗಗಳಾದರು. ಮತ್ತು ೩೧ನೇ ದಶಂಬರದಲ್ಲಿ ಮುದಂಬೈಲಿನಲ್ಲಿ ೩೦ ಜನರಿಗೆ ಸ್ನಾನವಾಯಿತು. ಕಳೆದ ವರುಷದಲ್ಲಿ ಉಡ್ಪಿತಾಣೆಗೆ ಶೇರಿದ ಸಭೆಗಳನ್ನು ಒಟ್ಟಿಗೆ ೧೧೭ ಮಂದಿ ಹೊಸಬರು ಸ್ನಾನ ಹೊಂದಿ ಶೇರಿದರು.—ಜನವರಿ ೬ಕ್ಕೆ ಉಡ್ಪಿಯಲ್ಲಿ ಎರಡನೇ ಸರ್ತಿಗೆ ಒಂದು ಮಿಶ್ಯನ್ ಹಬ್ಬವು ಆಗಿ ನಡೆಯಿತು.

ಬೆಲ್ಗ್ಯವೆಂಬ ದೇಶದ ಒಂದೂರಿನಲ್ಲಿ ಒಬ್ಬ (ರೋಮನ್) ಯೌವನಸ್ಥ ಪಾದ್ರಿ ಸುವಾರ್ತೆಗೆ ತಕ್ಕಷ್ಟು ಅನುಗುಣವಾಗಿ ಪ್ರಸಂಗ ಮಾಡಿ, ತನ್ನ ಸಭೆಯವರಿಗೆ ಬೋಧನೆ ಕೊಡಲೆಸಗಿದನು. ಸಭೆಯವರಿಗೆ ಮೆಚ್ಚಿಕೆಯಾಗಿ, ಅವನ ಮೇಲೆ ಹೆಚ್ಚಿನ ಪ್ರೀತಿ ಹುಟ್ಟಿ ಹೋಯಿತು. ಆದರೆ ಆ ದೇಶದ ಪ್ರಧಾನಾಧ್ಯಕ್ಷನು ಅವನು “ಪತಿತರ ಮಾರ್ಗಕ್ಕೆ” ಒಪ್ಪುವ ಪ್ರಸಂಗಗಳನ್ನು ಮಾಡಿ, ಸಭೆಯವರನ್ನು ಆ ಮಾರ್ಗಕ್ಕೆ ಪ್ರೇರಿಸಿ, ಎಳಕೊಳ್ಳಲಿಕ್ಕೆ ಸಾಕು ಎಂಬದಾಗಿ ಸುದ್ದಿ ಕೇಳಿ, ಅವನನ್ನು ಬೇರೆ ಊರಿಗೆ ವರ್ಗ ಮಾಡಿ ಕಳುಹಿಸಿದನು. ಅದಕ್ಕೆ

ಪಶ್ಚಾತ್ತಾಪ ಹುಟ್ಟಿ, ಆ ಸಭೆಯವರು ಪ್ರಧಾನಾಧ್ಯಕ್ಷನಿಗೆ ಅರ್ಜಿ ಬರಕೊಂಡು, ಆ ಗುರುವನ್ನು ತಮಗೆ ತಿರಿಗಿ ಬಿಟ್ಟು ಕೊಡ ಬೇಕೆಂತ ಬೇಡಿಕೊಂಡರು; ಪ್ರಧಾನಾಧ್ಯಕ್ಷನು ಅವರ ಬಿನ್ನಹ ಆಲೈಸದ ಕಾರಣ ಅವರು ಪ್ರಧಾನಾಧ್ಯಕ್ಷನ ಮೇಲೆ ಬೇಸರಗೊಂಡು, ಸುಮಾರು ೬೦೦ ಮಂದಿಯಾಗಿ ಅವನ ಅಧಿಕಾರ ತೊರೆದು, ರೋಮನ್ ಸಭೆಯನ್ನು ಬಿಟ್ಟು, ಪ್ರೊತೆಸ್ತಾಂತ ಬೋಧಕನೊಬ್ಬನನ್ನು ಇರಿಸಿ ಕೊಂಡು, ತಮಗೆ ಒಂದು ಪ್ರಾರ್ಥನಾಲಯ ಕಟ್ಟಿಸಿ ಕೊಳ್ಳುತ್ತಿದ್ದಾರೆ.

ರುಸ್ಯ, ಇಂಗ್ಲಂದ ಮೊದಲಾದ ವಿಲಾಯತಿಯ ದೇಶಗಳ ರಾಜ್ಯಾಧಿಕಾರಿಗಳು ಕೊನ್ಸ್ತಂತಿನೊಪೊಲಿಗೆ ರಾಯಭಾರಿಗಳನ್ನು ಕಳುಹಿಸಿ, ಇವರ ಮುಖಾಂತರ ತುರ್ಕ್ಯ ಸರಕಾರಕ್ಕೆ ಸಮಾಧಾನವೂ ಪರಿಣಾಮವೂ ಆಗುವಂತೆ ಆಲೋಚನೆ ಹೇಳಿ ಕೊಡಲಾಯಿತು. ಆದರೆ ತುರ್ಕರು ಒಪ್ಪಿಕೊಳ್ಳದವರು. ಆ ರಾಯಭಾರಿಗಳ ಕೂಟವು ಈಗ ಏನೂ ಸಫಲವಾಗದೆ ಅಗಲಿ ಹೋಯಿತು. ಇದರ ಮೇಲೆ ಆಗುವಂಥಾದ್ದೇನೆಂತ ಈಗ ಯಾರಿಂದಲೂ ಹೇಳಲಿಕ್ಕೆ ಕೂಡದು. ಇನ್ನು ಹ್ಯಾಗಾದರೂ ತುರ್ಕ್ಯ ಸಾಮ್ರಾಜ್ಯದಲ್ಲಿರುವ ಸರ್ವ ಕ್ರೈಸ್ತರನ್ನು ನಾವು ಜ್ಞಾಪಕ ಮಾಡಿ ಕೊಂಡು, ಅವರಿಗೋಸ್ಕರ ಪ್ರಾರ್ಥಿಸಲಿಕ್ಕೆ ಬಹಳ ಕಾರಣವದೆ; ಯಾಕಂದರೆ ಯಾವಾಗಾದರೂ ಅವರು ತುರ್ಕರ ದ್ವೇಷೋದ್ರೇಕಕ್ಕೆ ಗುರಿಯಾಗಿ, ಮಹಾ ಹಿಂಸೆಗೊಳಗಾಗಲಿಕ್ಕೆ ಸಾಕು ಎಂತ ಶಂಕಾಸ್ಪದ ತೋರುತ್ತದೆ. ಅದಲ್ಲದೆ ಸೆರ್ವ್ಯ ಬುಲ್ಗಾರ್ಯ ಮೊದಲಾದ ಶೀಮೆಗಳಲ್ಲಿ ಸದ್ಯಕ್ಕೆ ಹೊಸ ಹಿಂಸಾಗ್ನಿ ಹತ್ತದಿದ್ದರೂ, ಕ್ರೈಸ್ತರಿಗೆ ಅತ್ಯಂತ ಕಷ್ಟವೇ. ಯುದ್ಧದ ಸಂಬಂಧವಾಗಿ ಅನೇಕಾನೇಕರ ಮನೆ ಮಾಲು ಸಮಸ್ತವು ನಾಶನವಾಗಿ ಹೋಗಿದೆ. ಈಗಿನ ಹಿಮಕಾಲದಲ್ಲಿ ಏನೂ ಜೀವನೋಪಾಯ ಕಾಣದು. ಊರನ್ನು ಬಿಟ್ಟು, ಓಡಿ ಹೋದವರು ಪರದೇಶದಲ್ಲಿ ದಿಕ್ಕಿಲ್ಲದವರಾಗಿ ಬೇಡಿ ತಿನ್ನ ಬೇಕು. ಬುಲ್ಗಾರ್ಯ ಶೀಮೆ ಒಂದರಿಂದ ತುರ್ಕರ ಬಲಾತ್ಕಾರಾದಿಗಳಿಗೆ ಹೆದರಿ ಕೊಂಡು, ಪಲಾಯನ ಮಾಡಿದ ಹೆಣ್ಣು ಮಕ್ಕಳು ಮಾತ್ರ ೨ ಲಕ್ಷದ ಮೇಲೆ ಆಗಿ, ಪರದೇಶದಲ್ಲಿ ಪರರ ಧರ್ಮದಿಂದ ಕಾಲಕ್ಷೇಪ ಮಾಡ ಬೇಕು. ಇವರ ಸಹಾಯಕ್ಕೆ ನಾವು ಆ ಕಡೆಗೆ ನಮ್ಮ ಕೈ ನೀಡಲಿಕ್ಕೆ ಕೂಡದೆ, ನಾವು ಮೇಲೆಗಾದರೂ ಮುಗಿದ ಕೈ ಎತ್ತಿ, ಅವರಿಗೋಸ್ಕರ ಪ್ರಾರ್ಥಿಸೋಣ!

ತುರ್ಕರು ತಮ್ಮ ದೇಶದ ಕ್ರೈಸ್ತರಿಗೆ ಇನ್ನು ಮುಂದೆ ನ್ಯಾಯವಾಗಿಯೂ ದಯವಾಗಿಯೂ ನಡಿಸದಿದ್ದರೆ, ರುಸ್ಯರು ಅವರ ಮೇಲೆ ಏಳಲಿಕ್ಕೆ ಸಾಕು. ಆರು ದೊಡ್ಡ ರುಸ್ಯ ಸೇನಾಂಗಗಳು ಯುದ್ಧಕ್ಕೆ ತಯಾರಾಗಿದ್ದಾವಂತೆ. — ಅನೇಕ ಇಂಗ್ಲಿಷ್ ಸರದಾರರು ತುರ್ಕರ ದಳವನ್ನೂ ನೌಕಾಸೇನೆಯನ್ನೂ ಶೇರಿ, ತುರ್ಕರಿಗೆ ಸಹಾಯಕರಾದರಂತೆ.

ಕಳೆದ ತಿಂಗಳಲ್ಲಿ ಜರ್ಮನ್ ದೇಶದಲ್ಲಿಯೂ ಅದರ ಉತ್ತರ ಮತ್ತು ವಾಯುವ್ಯ ದಿಕ್ಕಿನ ಸಮುದ್ರದಲ್ಲಿಯೂ ಬಿರುಘಾಳಿಗಳೂ ತುಫಾನೂ ಉಂಟಾಗಿ, ಅನೇಕ ಹಡಗಗಳು ನಾಶವಾಗಿ ಹೋದವು.

ಇಂಗ್ಲಂದದಲ್ಲಿ ನೆರೆಗಳ ದೆಶೆಯಿಂದಲೂ ಹಿಮದಿಂದಲೂ ಅವಾಂತರವೂ ಹಾನಿಯೂ ಆಯಿತಂತೆ.

ಕರ್ದಿನಾಲನೂ ಪೋಪನ ಕರಣೀಕನೂ ಪ್ರಧಾನ ಮಂತ್ರಿಯೂ ಆಗಿದ್ದು, ೩ ತಿಂಗಳಿನ ಹಿಂದೆ ತೀರಿ ಹೋದ ಅಂತೊನೆಲ್ಲಿ ಮೃತಿಪತ್ರದಲ್ಲಿ ಪೋಪನ "ಮುಜೀಮುಖಾನೆಗೆ" ಬರ ಕೊಟ್ಟ ಬಹು ಬೆಲೆಯುಳ್ಳ ಅನೇಕ ಒಡವೆಗಳನ್ನಲ್ಲದೆ ೧೬೦ ಲಕ್ಷ ರೂಪಾಯಿಯಷ್ಟು ಸೊತ್ತನ್ನು ಸಹ ಕೂಡಿಸಿ, ಹಿಂದುಳಿಸಿ ಹೋದನಂತೆ. ಅವನು ಕೇವಲ ಬಡವರಲ್ಲಿ ಹುಟ್ಟಿ, ಇಷ್ಟು ಬಹಳ ಆಸ್ತಿಯನ್ನೆಲ್ಲಾ ಸಭಾಸೇವೆಗೆ ದೀಕ್ಷಾಬದ್ಧನಾದನಂತರದಲ್ಲಿ ಘಳಿಸಿ ಕೊಂಡವನು. ಲೌಕಿಕ ವಾಸನೆಯಿಲ್ಲದವರೆನ್ನಿಸಿ ಕೊಳ್ಳುವಂಥಾ ರೋಮನ್ ಅಧ್ಯಕ್ಷಾದಿ ಸಭಾನಾಯಕರು ಅಷ್ಟು ದ್ರವ್ಯಸಂಪನ್ನರಾಗುವಂಥಾದ್ದು ವಿಪರೀತವೇ.

Printed at the Basel Mission Press, Mangalore.

# ಕ್ರೈಸ್ತ ಸಭಾ ಪತ್ರ

ಪುಸ್ತಕ ೯. **MARCH 1877.** ಅಂಕೆ ೯.

**ಅಡಕವು:** ಕಣ್ಣು ಮೇಲಕ್ಕೆ, ಕೈ ಕೆಲಸಕ್ಕೆ— ಅನ್‌ಸಲ್ಮೊ— ಒಂದು ನೆರೆ— ಉತ್ತರಗಳು— ಹೊಸ ಪ್ರಶ್ನೆಗಳು— ವಿವಿಧ ವರ್ತಮಾನಗಳು.

## ಕಣ್ಣು ಮೇಲಕ್ಕೆ, ಕೈ ಕೆಲಸಕ್ಕೆ.

ದೇವರು ನಮಗೆ ಕೊಟ್ಟಿರುವ ಸಾಧನಗಳನ್ನೂ ವಸ್ತುಗಳನ್ನೂ ನಾವು ಅಲ್ಪವೆಂದೆಣಿಸಿ, ಜರಿದು ಬಿಡ ಬಾರದು; ಆದರೆ ಅವುಗಳಿಗೆನೇ ನೆಚ್ಚಿ, ಅತ್ಯಾಶೆ ಪಟ್ಟು, ಸೋತು ಹೋಗಲೂ ಬಾರದು: ಅವುಗಳನ್ನು ಕೊಟ್ಟ ದೇವರನ್ನು ನೋಡಿ, ನಂಬಿ, ಆತನು ಅನುಕೂಲಿಸಿ, ಆಶೀರ್ವದಿಸಿ, ಅವುಗಳನ್ನು ಕೆಲಸಕ್ಕೆ ಬರ ಮಾಡಿ, ಪ್ರಯೋಜನಕ್ಕೆ ಹತ್ತಿಸ ಬೇಕೆಂಬದಾಗಿ ಪ್ರಾರ್ಥಿಸಿ, ಅವುಗಳನ್ನು ಬಳಸ ತಕ್ಕದ್ದಾಗಿದೆ. ಅನ್ನಪಾನಗಳು ತಾವೇ ಅಲ್ಲಾ, ದೇವರು ಅನ್ನಪಾನಗಳಿಗೆ ಕೂಡಿಸಿ ಕೊಟ್ಟ ಶಕ್ತಿ ಮಾತ್ರವೇ ನಮಗೆ ತ್ರಾಣ ಕೊಟ್ಟು, ಪೋಷಿಸ ಬಹುದು. ದೇವರಿಲ್ಲದೆ ಯಥೇಷ್ಟ ಅನ್ನಪಾನಗಳು ಪೋಷಕಸಾಧನಗಳಲ್ಲಾ: ದೇವರ ದಯವಿದ್ದರೆ ಒಂದಿಷ್ಟು ರೊಟ್ಟಿಯಾಗಲಿ ಒಂದಿಷ್ಟು ಅನ್ನವಾಗಲಿ ಹಶಿವೆಯನ್ನು ಪರಿಹರಿಸಿ, ತೃಪ್ತಿ ಕೊಡ ಬಹುದು. ಹಾಗೂ ಒಂದಿಷ್ಟು ಸೊಪ್ಪು ಆಗಲಿ ಒಂದು ಮಾತ್ರೆಯಾಗಲಿ, ಬರೇ ಬೂದಿಯಾದರೂ ಹುಣ್ಣು ಒಣಗಿಸಿ, ವಾಶಿ ಮಾಡಿ, ರೋಗಗಳನ್ನು ಪರಿಹರಿಸ ಬಹುದು; ಆದರೆ ದೇವರ ಬಲದಿಂದಲ್ಲದೆ ಯಾವ ಯಾವ ಮೂಲಿಕೆಗಾದರೂ ಅಂಥಾ ಶಕ್ತಿಯಿರದು. ಹಾಗೂ ಹೂವು ಪರಿಮಳಿಸಿ, ಸಂತೋಷ ಪಡಿಸುವಂಥಾದ್ದು ದಿವ್ಯ ಬಲದಿಂದಲೇ. ಮಿತ್ರನೊಬ್ಬನು ಪ್ರೀತಿಭಾವ ಪೂರ್ವಕವಾಗಿ ಮಾತಾಡಿ, ಆದರಿಸಲಿಕ್ಕೆ ನೋಡ ಬಹುದು; ಆದರೆ ಅವನ ಮಾತು ವ್ಯರ್ಥವಾಗದೆ, ಆದರಿಸಿ, ಭಯ ಶೋಕಾದಿಗಳನ್ನು ಪರಿಹರಿಸಿ ಬಿಡ ತಕ್ಕಂಥಾದ್ದಾಗ ಬೇಕಾದರೆ, ದೇವರೇ ಅವನ ಆದರಣೆಗೆ ಬಲ ಕೊಡ ಬೇಕು. ಹೀಗಿರುವದರಿಂದ "ಕಣ್ಣು ಮೇಲಕ್ಕೆ, ಕೈ ಕೆಲಸಕ್ಕೆ" ಎಂಬ ಮಾತು ಪೂರ್ಣ ನ್ಯಾಯವೇ. ಕಣ್ಣು ಮೇಲೆ ಮಾಡಿ, ದೇವರನ್ನು ಪ್ರಾರ್ಥಿಸಿ, ಕೆಲಸಕ್ಕೆ ಕೈ ಹಾಕ ಬೇಕು. ಮೇಲೆ ನೋಡಿ, ದೇವರನ್ನು ಪ್ರಾರ್ಥಿಸಿ, ಸ್ತುತಿಸಿ, ಬೇಡಿ ಕೊಂಡು, ಕೈ ತುತ್ತು ಕೊಂಡು, ಬಾಯಿಗೆ ಹಾಕಿ, ಉಣ್ಣಲೂ ತಿನ್ನಲೂ ಬೇಕು. ಹಾಗೆ ಉಣ್ಣುವವನಿಗೆ ತುತ್ತು ಚನ್ನಾಗಿ ರುಚಿಯಾಗಿ, ಶೇರಿ, ಒಳ್ಳೇ ಕ್ಷೇಮಕ್ಕೂ ತೃಪ್ತಿಗೂ ಪುಷ್ಟಿಗೂ ಬಂದೀತು. ಮೇಲಕ್ಕೆ ದೃಷ್ಟಿಸಿ, ಪ್ರಾರ್ಥಿಸಿ, ಸೇವಿಸಿದ ಔಷಧವು ಬಲ ಹೊಂದಿ, ರೋಗವನ್ನು ಪರಿಹರಿಸಿ ಬಿಡುವದು. ಹಾಗೆ ಮಾಡದೆ, ಔಷಧ, ಧಾನ್ಯ ಮೊದಲಾದ ಸಾಧನಗಳನ್ನು ಕೊಡುವ ದೇವರನ್ನು ನೋಡದೆ, ನಂಬಿ

ಪ್ರಾರ್ಥಿಸದೆ, ಸಾಧನಗಳನ್ನೇ ದೇವರೆಂಬ ಹಾಗೆ ನೆಚ್ಚುವವರು ಶಾಪಗ್ರಸ್ತರೇ. ನೀನು ಉಣ್ಣುವಂಥಾದ್ದೂ ತಿನ್ನುವಂಥಾದ್ದೂ ಕುಡಿಯುವಂಥಾದ್ದೂ ಒಂದೊಂದು ತುತ್ತೂ, ಒಂದೊಂದು ಕವಳ, ಒಂದೊಂದು ತಟುಕೂ ತೃಪ್ತಿಗೂ ಕ್ಷೇಮಕ್ಕೂ ಒದಗಿ ಬರ ಬೇಕಾದರೆ, ದೇವರು ಅನುಗ್ರಹಿಸಿ ಅದಕ್ಕೆ ಬಲ ಕೊಡ ಬೇಕೆಂಬದು ನಿನಗೆ ಖಚಿತವಾಗಿರದ ಪಕ್ಷದಲ್ಲಿ, ನೀನು ವಸ್ತುವನ್ನು ಅಪದೈವೀಕರಿಸಿ ಕೊಳ್ಳುವವನಾಗಿರುತ್ತೀ. ನಿನಗೆ ಆಹಾರವಿರುವಷ್ಟಕ್ಕೆ ಆಧಾರವೂ ಧೈರ್ಯವೂ ಇರುವದು; ಆಹಾರ ಕಾಣದಿದ್ದರೆ, ಆಧಾರವೂ ಧೈರ್ಯವೂ ಕಾಣದು. ಹೊಟ್ಟೆಗಿಲ್ಲದಿದ್ದರೆ, ಗತಿಯಿಲ್ಲಾ: ಹೊಟ್ಟೆಗಿದ್ದರೆ, ಸದ್ಗತಿ ಎಂಬ ಹಾಗೆ ಭಾವಿಸಿ ಇರುವದು ಸಮವೇ? ಚೆಲೋದೇ? ಬಾಯಿಗೆ ಮುಕ್ಕಲಿಕ್ಕೆ ಇಲ್ಲದಿದ್ದರೆ, ದೇವರೂ ಇಲ್ಲಾ ಎಂಬ ಹಾಗೆ ಇರುವವನೂ ನಡಕೊಳ್ಳುವವನೂ ಮಹಾ ಅಪ್ರಬುದ್ಧನೂ ಕೇವಲ ಪಶುಭಾವದವನೂ ದುರ್ಗತನೂ ಅಲ್ಲವೋ?

ನಾನಾದರೆ ದೇವರು ಕೊಟ್ಟದನ್ನೂ ಇನ್ನೂ ದಯ ಪಾಲಿಸುವಂಥಾದ್ದನ್ನೂ ಕೃತಜ್ಞನಾಗಿಯೂ ನಂಬಿಕೆಯಾಗಿಯೂ ನೀತಿಭಕ್ತಿಪೂರ್ವಕವಾಗಿಯೂ ಅನುಭೋಗಿಸಿ, ಉಪಯೋಗಿಸುತ್ತಿರ ನೋಡಿ ಕೊಳ್ಳುತ್ತೇನೆ. ದೇವರು ಕೊಟ್ಟದು ವ್ಯರ್ಥವಾಗಿ ಹಾಳಾಗ ಬಾರದು; ಆದರೂ ದೇವರಲ್ಲಿ ನಂಬಿಕಿಲ್ಲದವನೂ, ಬರೀ ಸಾಧನಗಳನ್ನೂ ವಸ್ತುಗಳನ್ನೂ ನೆಚ್ಚುವವನೂ ಎಂಬ ಹಾಗಲ್ಲಾ, ದೇವರನ್ನು ಬೊಂಕದವನಾಗಿ, ಆತನಲ್ಲಿ ಪೂರ್ಣ ಭರವಸವಿಟ್ಟವನಾಗಿ ಎಲ್ಲವನ್ನು ಬಳಸುತ್ತೇನೆ. ದೇವರು ಏನೂ ಸಾಧನಗಳೂ ಸಾಹಿತ್ಯಗಳೂ ಇಲ್ಲದೆ ಸಹಾಯ ಮಾಡಿ, ಸಲಹಿ ಉಳಿಸ ಶಕ್ತನೇ. ಸೊಪ್ಪಾಗಲಿ, ಮೂಲಿಕೆಯಾಗಲಿ, ಮಾತ್ರೆಯಾಗಲಿ, ಚಿಕಿತ್ಸೆಯಾಗಲಿ, ಶೇಕವಾಗಲಿ, ಲೇಪವಾಗಲಿ ರೋಗಪರಿಹಾರಕ್ಕೆ ಸಾಲದು. ದೇವರೂ, ಆತನ ಚಿತ್ತವೂ ಅನುಗ್ರಹವೂ ಅನುಕೂಲವೂ ಯತ್ನವೂ ಇಲ್ಲದೆ ಯಾವ ಯಾವ ಸಾಧನಗಳೂ ಉಪಾಯಗಳೂ ಸಾರ್ಥಕವಾಗವು. ದೇವರ ದಯವಿಲ್ಲದವರು ಯಥೇಷ್ಟ ಉಂಡರೂ ತಿಂದರೂ ತೃಪ್ತರಾಗರು. ಮುಖ್ಯವೂ ಉತ್ತಮವೂ ಆದ ಸಾಧನೆ ಪ್ರಾರ್ಥನೆ ಎಂಬದೇ. ವಿಶ್ವಾಸವೇ ಪರಮ ಮಂತ್ರ. ದೇವರಲ್ಲಿ ವಿಶ್ವಾಸವಿಟ್ಟವನು ಇಷ್ಟಸಿದ್ಧಿ, ಸರ್ವಕಾರ್ಯಸಿದ್ಧಿ ಹೊಂದಿ, ಸರ್ವದಾ, ಸರ್ವಥಾ, ಸರ್ವತ್ರ ಪೂರ್ಣ ಕೃತಾರ್ಥನಾಗಿರ ಬಹುದು.

---

## ಅನ್‌ಸಲ್ಮೊ

(೯೪ನೇ ಪಾನಿನಿಂದ ಮುಂದೆ.)

ಅಷ್ಟರೊಳಗೆ ಅನ್‌ಸಲ್ಮೊ ತನ್ನ ಹೂಹೆಡಿಗೆ ತುಂಬಿಸಿ ಕೊಂಡು, ಅವರು ವಾಡಿಕೆಯಾಗಿ ಕೂಡ್ರುತ್ತಿದ್ದ ಭೋಜನಶಾಲೆಗೆ ಹೋದನು. ಘಾತಿಮಳು ಪ್ರಾತಃಕಾಲದ ಬಿಳೇ ದುಸ್ತನ್ನು ಹಾಕಿಕೊಂಡು, ತನ್ನ ಹುಡುಗರ ಸಂಗಡ ಅಲ್ಲೇ ಅವನನ್ನು ಕಾದು ಕೊಂಡಿದ್ದಳು. ಬಂದ ಅನ್‌ಸಲ್ಮೋನನ್ನು ನೋಡಿ, ಅವಳು—ಪ್ರಿಯ ಅನ್‌ಸಲ್ಮೋ! ನಿನ್ನೆ ನೀನು ಮಾಡಿದ ಸಾಹಸಕಾರ್ಯವು ಬಹು ಘನವೂ ಸ್ತುತ್ಯವೂ ಆಗಿದೆ; ನೀನು ಧೈರ್ಯಶಾಲಿಯಾಗಿ ಹೆದರಿ ಕೊಳ್ಳದೆ, ಕಂಟಕಕ್ಕೆ ಎದೆ ಕೊಟ್ಟು, ನನ್ನ ಬಾಲೆರತ್ನವನ್ನು ಸಿಂಹದ ಬಾಯಿಗೆ ತಪ್ಪಿಸಿ, ಪ್ರಾಣದಾನ ಮಾಡಿ ಉಳಿಸಿದ್ದೀ, ಅಂದಳು. ಆದಕ್ಕೆ ಅನ್‌ಸಲ್ಮೊ ಹೆಚ್ಚಿನ ಸಂಭಾಷಣೆಗೆ ಸಂತೋಷ ಪಟ್ಟು, ಅಂದದೇನಂದರೆ: ನಾನು ಮಾಡಿದ್ದು ನನ್ನ ಧೈರ್ಯವೂ ಸಾಹಸಕಾರ್ಯವೂ ಅಲ್ಲಾ: ಅದು ಕ್ರೈಸ್ತನಾದ ನನ್ನ ಧರ್ಮದ ಸಂಗತಿಯಾಯಿತಷ್ಟೇ; ಯಾಕಂದರೆ ನಮಗೋಸ್ಕರ ಹೊಣೆಯಾಗಿ ತನ್ನ ಪ್ರಾಣವನ್ನು ಅರ್ಪಿಸಿ ಕೊಟ್ಟ ಯೇಸು ಕ್ರಿಸ್ತನು ಹೇಳಿದ್ದೇನಂದರೆ: “ನಾನು ನಿಮ್ಮನ್ನು ಪ್ರೀತಿ ಮಾಡಿದ ಹಾಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿ ಮಾಡಿರಿ.” ನಾನು ಮಾಡಿದ್ದು ಆತನ ಅಪ್ಪಣೆಯಷ್ಟೇ!

ಫಾತಿಮಳು ಈ ಮಾತನ್ನು ಕೇಳಿ, ಆಶ್ಚರ್ಯಭರಿತಳಾಗಿ ಅಂದದೇನಂದರೆ: ಹೀಗಿದ್ದ ಮೇಲೆ ಕ್ರೈಸ್ತಧರ್ಮವು ಒಳ್ಳೇ ಧರ್ಮವಾಗಿ, ದೇವರಿಂದ ಬಂದದಾಗಿ, ಸತ್ಯವಾಗಿರ ಬೇಕು. ಅದಕ್ಕೆ ನಾನು ಮೆಚ್ಚಿದ್ದೇನೆ.—ಮತ್ತು ಮೌನಿಯಾಗಿ ಸುಮಾರು ಹೊತ್ತು ಆಲೋಚನಾಮಗ್ನಳಾಗಿ ಕುಳಿತು ಇದ್ದಳು. ಅವಳ ಮನಸ್ಸಿಗೆ ಮುಖ್ಯವಾಗಿ ಹಿಡಿದು ಹೋದ ಆಲೋಚನೆ ಏನಂದರೆ: ನಮ್ಮ ತುರ್ಕ ಮತಕ್ಕಿಂತ ಈ ಕ್ರೈಸ್ತ ಮತವು ಹ್ಯಾಗೂ ಅತ್ಯುತ್ತಮವೇ. ಮಹಮ್ಮದನು ಇತರ ಮತಸ್ಥರನ್ನು ಹಗೆ ಮಾಡಿ, ಹಿಂಸಿಸಿ, ಕೊಂದೇ ಕೊಂದು ಹಾಕ ಬೇಕೆಂದೂ, ಈ ಪ್ರಕಾರ ಒಂದು ತಟಕು ರಕ್ತವನ್ನು ಚಲ್ಲಿದರೆ, ಮೂರು ತಿಂಗಳು ರಮುಜಾನ ಮಾಡಿದ ಪುಣ್ಯ ಶಿಕ್ಕುವದೆಂತಲೂ ಪ್ರಸಂಗ ಮಾಡಿ, ಹೇಳಿ ಹೋಗಿದ್ದಾನೆ; ಆದರೆ ಕ್ರೈಸ್ತಮತಸ್ಥಾಪಕನಾದ ಈಸ ನಬಿಯು ಮಾತಿಗೆ ಅಂಥಾ ಮಾತು ಬಹಳ ವಿರೋಧವೇ. ಮಹಮ್ಮದನು ತನ್ನ ಮತವನ್ನು ಸ್ಥಾಪಿಸಿ ಪ್ರಬಲ ಪಡಿಸುವಂತೆ ಯುದ್ಧ, ಹಿಂಸೆ, ಹತ್ಯ ಬಲಾತ್ಕಾರಾದಿಗಳನ್ನು ನಡಿಸಿ ಹೋದನು: ಆದರೆ ಈಸ ನಬಿ ಸರ್ವರನ್ನು ಪ್ರೀತಿ ಮಾಡಿ, ತನ್ನ ಪ್ರಾಣವನ್ನಾದರೂ ಅವರಿಗೋಸ್ಕರ ಕೊಟ್ಟು ಬಿಟ್ಟನು. ಹೀಗಿರಲಾಗಿ ಈಸ ನಬಿ ಮಹಮ್ಮದನಿಗಿಂತ ಉತ್ತಮನೇ ಆಗಿರಲಿಕ್ಕೆ ಸಂದೇಹವಿಲ್ಲಾ ಎಂದಂದು ಕೊಂಡಳು.

ಕಡೆಗೆ ತನ್ನ ಮಗಳಿಗೆ—ಅನ್‌ಸಲ್ಮೊ ನಿನ್ನ ಪ್ರಾಣವನ್ನುಳಿಸಿದ್ದಕ್ಕೆ ನೀನು ಸಹ ಕೃತಜ್ಞತೆ ತೋರಿಸಿ, ಅವನ ಮಹೋಪಕಾರ ಮರೆತು ಬಿಡ ಬಾರದು ಎಂಥೇಳಿದ್ದಕ್ಕೆ, ಹುಡುಗಿ ಅವನ ಬಳಿಗೆ ಹೋಗಿ, ಪ್ರಿಯ ಅನ್‌ಸಲ್ಮೋ! ನೀನು ನನಗೆ ಮಾಡಿದ ಮಹಾ ಪ್ರೀತಿಕಾರ್ಯ ನಾನು ಮರೆತು ಹೋಗೆ. ಸಿಂಹಕ್ಕೆ ನನ್ನನ್ನು ತಪ್ಪಿಸಿದ್ದು ನೀನು. ನಿನಗೆ ಒಳ್ಳೇದಾಗಲಿ! ಪ್ರೀತಿಯಿರಲಿ! ಅಂದಳು.

ಬಳಿಕ ಫಾತಿಮಳು ಅನ್‌ಸಲ್ಮೋನನಿಗೆ ಅಂದದೇನಂದರೆ: ನಾನು ಚಿಕ್ಕ ಬಾಲೆಯಾಗಿದ್ದಾಗ, ಒಬ್ಬ ಕ್ರೈಸ್ತಳಾದ ದಾಸಿ ನನಗೆ ದಾದಿಯಾಗಿದ್ದಳು. ಅವಳು ನನಗೆ ಯೇಸು ಹುಟ್ಟಿದ ವೃತ್ತಾಂತವನ್ನೂ ಇತರ ಸಂಗತಿಗಳನ್ನೂ ಬಹಳ ಸಾರಿ ಹೇಳಿ ತಿಳಿಸಿದ್ದು. ಅವಳು ಬಹು ಒಳ್ಳೇ ಹೆಂಗಸು, ಭಕ್ತಳು, ಸಾಧ್ವಿ. ಅವಳು ಹೇಳುತ್ತಿದ್ದ ಕಥೆಗಳೂ ಸಂಗತಿಗಳೂ ಈಗಾದರೂ ನನ್ನ ನೆನಪಿಗೆ ಬರುತ್ತವೆ.

ಅವರ ಸಂಭಾಷಣೆ ಅಷ್ಟಕ್ಕೆ ನಡೆದಾಗ, ಅಭ್ಮ್ರಿದನೂ ಒಳಗೆ ಬಂದನು. ಅವನು ಬರುವ ಮೊದಲು ತೋಟದಲ್ಲಿ ವಿಹಾರ ಮಾಡಿ, ಹಿಡಿದು ಯೋಚಿಸುತ್ತಿದ್ದ ಮುಖ್ಯ ಆಲೋಚನೆ ಏನಂದರೆ: ನಾನೂ ಕ್ರೈಸ್ತನಾಗಿ ಹುಟ್ಟಿ, ತುರ್ಕರ ಕೈಯಲ್ಲಿ ಬಿದ್ದು, ಗುಲಾಮನಾಗಿ ಮತಭ್ರಷ್ಟನಾಗಿ ಹೋದೆ. ಈ ಭಕ್ತ ಹುಡುಗನು ಆಡಿದ ಮಾತು ನನಗೀಗ ಯಾಕೆ ಬಾಣದಂತೆ ತಾಗಿ, ನೋಯಿಸಿ, ಮನೋವ್ಯಥೆ ಕೊಡ ಬೇಕು? ಈ ಬಾಣ ತಾಗಿದ ಘಾಯ ಮಾದು, ನನಗೆ ತಿರಿಗಿ ಸಮಾಧಾನವಾಗ ಬೇಕಾದರೆ, ನಾನು ಕ್ರೈಸ್ತ ಮತವನ್ನು ಪುನಃ ಸ್ವೀಕರಿಸಿಕೋ ಬೇಕು. ಮನಸ್ಸಿನ ಶಾಂತಿಗೆ ಬೇರೆ ಮಾರ್ಗ ಕಾಣದು. ಆದ ಕಾರಣ ಒಂದು ಮಾಡುತ್ತೇನೆ; ಏನಂದರೆ: ಸ್ವದೇಶಕ್ಕೆ ತಿರಿಗಿ ಕೊಂಡು, ಕ್ರೈಸ್ತ ಸಭೆಯೆಂಬ ತಾಯಿಯ ಅಂಡೆ ಪುನಶ್ಚ ಶೇರುತ್ತೇನೆ. ಆದರೆ ನಾನು ಹೀಗಂದು ಕೊಂಡು ಹೋದರೆ, ನನ್ನ ಹೆಂಡತಿ ಫಾತಿಮಳು ನನ್ನನ್ನು ಬಿಡದೆ, ನನ್ನ ಸಂಗಡ ಬಂದಾಳೇ? ಬಹಳ ಕರಕರೆಯೂ ಹೋರಾಟವೂ ಆಗುವದು; ಆದರೆ ಏನಾದರೂ, ಆಕೆ ಒಡಂಬಟ್ಟು ಸಂಗಡ ಬರಲಿಕ್ಕಿಲ್ಲಾ. ಅವಳನ್ನು ಈ ಬಗ್ಯೆ ಪ್ರೇರಿಸಿ, ಮನಸ್ಸು ಹುಟ್ಟಿಸೋದು ಅಸಾಧ್ಯವೇ. ನಾನೊಬ್ಬನೇ ಹೋಗ ಬೇಕಾದೀತು; ಆದರೂ ಚಿಂತಿಲ್ಲಾ: ಹೋಗ ಬೇಕು; ಹ್ಯಾಗೂ ಹೋಗ ಬೇಕು; ಹೋಗುತ್ತೇನೆ. ಆದರೆ ಅವಳನ್ನು ಬಿಟ್ಟು ಹೋಗುತ್ತೇನಂದರೆ, ಮಕ್ಕಳನ್ನು ಸಹ ಬಿಟ್ಟಗಲ ಬೇಕಲ್ಲಾ! ಅವರನ್ನು ಬಿಟ್ಟಗಲಿದರೆ, ಅವರು ಈ ಕ್ರೂರ ಮಹಮ್ಮದಿ ಮತದಲ್ಲಿದ್ದು ಸಾಯ ಬೇಕಲ್ಲಾ! ಆಗದು! ಕಳ್ಳತನ

ವಾಗಿ ನಾನೆದ್ದು ಹೋಗ ಬಾರದು; ಮಕ್ಕಳನ್ನಾದರೂ ನೋಡಿ, ನಾನು ತಿಳಿಸಿ ಹೋಗ ಬೇಕು. ಅವರು ನನ್ನ ಜೊತೆಯಲ್ಲಿ ಬರುವಂತೆ ನಾ ಮಾಡ ಬೇಕು. ಒಂದು ವೇಳೆ ಅನ್‌ಸಲ್ಮೋನನ ದಾಕ್ಷಿಣ್ಯವೂ ಪ್ರೀತಿಯೂ ನನ್ನ ಹೆಂಡತಿಯನ್ನು ಗೆಲ್ಲ ಬಹುದು. ಆಕೆಯ ಪ್ರಾಣರತ್ನವಾದ ಹುಡುಗಿಯನ್ನು ಸಿಂಹಕ್ಕೆ ತಪ್ಪಿಸಿ ಉಳಿಸಿದವನ ಮಾತಿಗೆ ಅವಳು ಒಂದು ವೇಳೆ ಸೋತು, ಕಿವಿ ಕೊಟ್ಟಾಳು. ನೋಡೋಣಾ! ಅವನ ಮುಖಾಂತರ ನಾನು ನನ್ನಾಲೋಚನೆ ನಡಿಸಿ, ನೆರವೇರಿಸ ಬೇಕು.

ಅಂಥಾ ಆಲೋಚನೆಯಲ್ಲಿ ಮುಳಿಗಿದ್ದ ಅಭ್ಮಿದನು ಅನ್‌ಸಲ್ಮೋನನ ಮಾತಿಗೆ ಹೆಂಡತಿಯಲ್ಲಿ ಹುಟ್ಟಿದ ಆಲೋಚನೆ ಕಿಂಚಿತ್ತಾದರೂ ತಿಳಿಯದೆಯೂ ಊಹಿಸದೆಯೂ ತನ್ನ ಸ್ವದೇಶಕ್ಕೆ ಹೋಗುವ ಆಲೋಚನೆ ಅವಳಿಗೆ ತಿಳಿಸ ಬೇಕೆಂತ ಒಳಕೋಣೆಗೆ ಹೋದನು. ಅವನು ಆ ಕೋಣೆಗೆ ಹೋಗುವದನ್ನು ನೋಡಿ, ಅವಳು ಅವನಿಗೆ—ಪ್ರಿಯನೇ! ನಮ್ಮ ಹತ್ತರ ಕುಳಿತು ಕೊಂಡಿರ ಬೇಕಿತ್ತು, ಯಾಕಂದರೆ ಕ್ರೈಸ್ತ ಮತದ ವಿಷಯದಲ್ಲಿ ನಮಗೆ ಸಂಭಾಷಣೆ ಶುರುವಾಯಿತು; ಅನ್‌ಸಲ್ಮೊ ಕ್ರೈಸ್ತಮತವು ಉತ್ತಮವೆಂತ ತೋರಿಸಿದ್ಧಾನೆ. ನೀನು ಸಹ ಕೇಳಿದರೆ ಆದೀತು. ಅವನ ಮಾತನ್ನು ಕೇಳಿ ನನಗೂ ಆ ಮತಕ್ಕೆ ಖುಷಿ ಹುಟ್ಟಿ, ರುಚಿ ಹತ್ತಿದೆ. ನಮ್ಮೈಶ್ವರ್ಯವನ್ನು ಬಿಟ್ಟು ಬಿಡ ಬೇಕಾದರೂ, ಅಂಥಾ ಮತ ಬೇಕು ಎಂತ ನನಗೆ ಕಾಣುತ್ತದೆ ಎಂಥೇಳಿದಳು. ಹೆಂಡತಿಯ ಈ ಮಾತನ್ನು ಕೇಳಿ, ಅಭ್ಮಿದನು ಆಶ್ಚರ್ಯಭರಿತನಾಗಿ, ಆನಂದನಿಮಗ್ನನಂತಾದನು. ಮತ್ತು ಹಿಂದೆ ಬಂದು ಅವನು—ನನ್ನ ಕಾಂತೇ! ನನಗೂ ಹಾಗೆಯೇ ತೋರುತ್ತದೆ. ನಿನಗೆ ಅದೇ ಮಾತನ್ನು ಹೇಳ ಬೇಕೆಂದಿದ್ದೆ ಎಂತ ಹೇಳಿದನು.

ಫಾತಿಮಳು ಗಂಡನ ಮನಸ್ಸನ್ನು ತಿಳುಕೊಂಡು, ಅಧಿಕ ಸಂತೋಷ ಪಟ್ಟು, ಹೇಳಿದ್ದೇನಂದರೆ: ಹಾಗಾದರೆ ನಾವು ಒಟ್ಟಿಗೆ ಅನ್‌ಸಲ್ಮೋನನ ಮತ ಮಾರ್ಗ ಹಿಡಿದು ಶೇರೋಣಾ! ಅನ್‌ಸಲ್ಮೋನನಿಗೆ ಮಹಾ ಸಂತೋಷವಾಗುವದು. ಇದು ನನಗೆ ಇನ್ನು ಹೆಚ್ಚಿನ ಸಂತೋಷಕ್ಕೆ ಕಾರಣ.

ಅಭ್ಮಿದನು ಆ ಮಾತಿಗೆ ಸಾನಂದನಾಗಿ, ಕಣ್ಣುಗಳನ್ನು ಆಕಾಶಕ್ಕೆತ್ತಿ, ದೇವರನ್ನು ಕೊಂಡಾಡಿದನು. ಆ ಮೇಲೆ ತಮ್ಮ ಸಂಕಲ್ಪವು ಯಾರಿಗೂ ತಿಳಿದು ಬರ ಬಾರದೆಂತ ಹೇಳಿ, ಸತಿಸುತರನ್ನು ಎಚ್ಚರಿಸಿದನು. ಊರಿನವರ ದೆಶೆಯಿಂದ ತೊಂದರೆ ಬಾರದಂತೆ ಫಾತಿಮಳು ಗಂಡನಿಗೆ ಒಂದು ಉಪಾಯವನ್ನು ಹೇಳಿ ಕೊಟ್ಟಳು, ಹ್ಯಾಗಂದರೆ: ನಾವು ಪಟ್ಣವನ್ನು ಬಿಟ್ಟು ಹೋಗುವ ಕೆಲವು ದಿವಸಕ್ಕೆ ಮುಂಚೆ, ನನಗೆ ವೆನಿಸ ಪಟ್ಣಕ್ಕೆ ಹೋಗುವ ಅವಶ್ಯವಾದ ಕೆಲಸ ಉಂಟೆಂದು ನಿನ್ನ ಸ್ನೇಹಿತರಿಗೂ ಸಂಬಂಧಿಕರಿಗೂ ಹೇಳು; ಮತ್ತು ನಮಗಿರುವ ಎಲ್ಲಾ ಆಸ್ತಿಯನ್ನು ಮಾರಿ ಬಿಡು; ಆದರೆ ಭಂಗಾರ ದಾಗಿನಿ ಆಭರಣಗಳನ್ನೂ ಪಾತ್ರೆಗಳನ್ನೂ, ಮುತ್ತು ವಜ್ರಾದಿ ರತ್ನಗಳನ್ನೂ ಮಾರದೆ, ನಮ್ಮ ಸಂಗಡ ಒಯ್ಯುವಾ; ಯಾಕಂದರೆ ನಮ್ಮ ಭಂಗಾರದ ದಾಗಿನಿ ಇತ್ಯಾದಿ ಭಂಡಾರಗಳನ್ನು ನಮ್ಮ ಸಂಗಡ ಒಯ್ಯುವದರಿಂದ ತುರುಕರಿಗೆ ನಮ್ಮ ವಿಷಯದಲ್ಲಿ ಸಂಶಯ ಹುಟ್ಟಲಾರದು. ನಮ್ಮ ಭಂಗಾರ ಆಭರಣಗಳನ್ನು ಸಂಗಡ ತಕ್ಕೊಂಡು ಹೋಗುವದು ತುರುಕರ ಮರ್ಯಾದೆ ಘನಕ್ಕೆ ಯೋಗ್ಯವಾಗಿದೆ; ಆದದರಿಂದ ತ್ವರ್ಯವಾಗಿ ಈ ಕೆಲಸವನ್ನು ನಡಿಸಿ, ನಾವೆಲ್ಲರು ಒಮ್ಮಿಂದೊಮ್ಮೆ ನಿನ್ನ ಸ್ವದೇಶಕ್ಕೆ ಹೋಗುವಾ! ಅಂದಳು.

ಅಭ್ಮಿದನು ತನ್ನ ಹೆಂಡತಿಯ ಆಲೋಚನೆಯು ಬುದ್ಧಿಯುಳ್ಳದೆಂದು ತಿಳಿದು, ತನ್ನ ಸ್ಥಿರ ಆಸ್ತಿಯನ್ನೆಲ್ಲಾ ಮಾರಿ, ಒಂದು ಹಡಗವನ್ನು ಬಾಡಿಗೆಗೆ ತಕ್ಕೊಂಡು, ತನ್ನ ಬೇರೆ ಸಾಮಾನುಗಳನ್ನು ಅದರಲ್ಲಿ ಏರಿಸಿ, ತಾನೂ ತನ್ನ ಕುಟುಂಬವನ್ನೂ ಅನ್‌ಸಲ್ಮೋನನ್ನೂ ಬೇರೆ ಕೆಲವು ಕ್ರೈಸ್ತ ದಾಸರನ್ನೂ ಕರಕೊಂಡು ಹಡಗವನ್ನೇರಿ, ಸಲರ್ನೋ ಪಟ್ಣಕ್ಕೆ ಹೊರಟು, ಮುಟ್ಟಿ, ಅಲ್ಲಿ ಅನ್‌ಸಲ್ಮೋನನನ್ನು ಅವನ

ತಾಯಿ ತಂದೆಗಳಿಗೆ ಒಪ್ಪಿಸಿ ಕೊಟ್ಟು, ತುರುಕರ ದುಸ್ತು, ಮರ್ಯಾದೆ ಬಿಟ್ಟು, ವಿಲಾಯತಿಯವರ ಪೋಷಾಕವನ್ನು ಧರಿಸಿ ಕೊಂಡು, ಕ್ರೈಸ್ತಸಭೆಯಲ್ಲಿ ಶೇರಿ, ತನ್ನ ಹೆಂಡತಿ ಮಕ್ಕಳಿಗೂ ಸ್ನಾನ ಕೊಡಿಸಿ, ತನ್ನನ್ನು ಅಂದಿನ ತನಕ ಕಾಪಾಡಿ ರಕ್ಷಿಸಿ, ಪುನಃ ಕ್ರೈಸ್ತ ಸಭೆಯಲ್ಲಿ ಅಂಗೀಕರಿಸಿದ ಕರ್ತನನ್ನು ಸ್ತುತಿಸಿ, ಕೊಂಡಾಡಿ, ಸಂತೋಷದಲ್ಲಿ ಬದುಕಿದನು.

---

## ಒಂದು ನೆರೆ.

೧ನೇ ಪರ್ವ: ಅಂಬಿಗ ಹುಡುಗನೂ ಮುಪ್ಪಿನ ರೈತನೂ.

ಒಂದಾನೊಂದು ದಿನ ಸಾಯಂಕಾಲಕ್ಕೆ ಸಂಭವಿಸಿದ್ದೇನಂದರೆ: ರೈನ್ ನದನ ಬದಿಯ ಒಂದು ರಮ್ಯ ಊರಿನ ದೇವಾಲಯದ ಸಂಧ್ಯಾಘಂಟಾನಾದವು ಕೇಳುತ್ತಿದ್ದ ಹೊತ್ತಿಗೆ ವ್ಯವಸಾಯದ ವರೂ ದ್ರಾಕ್ಷಾವನದವರೂ ತಮ್ಮ ಗುದ್ದಲಿ, ಕೊಡ್ಲಿ ಮುಂತಾದ ಶಸ್ತ್ರಗಳನ್ನು ಹೆಗಲಿನ ಮೇಲೆ ಹಾಕಿ ಕೊಂಡು, ಮಾತಾಡುತ್ತಾ, ಪದಗಳನ್ನು ಹಾಡುತ್ತಾ ಮನೆಗೆ ಬರಲೂ, ಚಂದ್ರನ ರೂಪ್ಯ ಮಯ ಕಿರಣಗಳು ನದನ ಮುಖಕ್ಕೆ ಬಿದ್ದು, ಪ್ರಕಾಶಮಾನವಾಗಿ ಪ್ರತಿಬಿಂಬಿಸಲೂ, ಪಕ್ಷೀ ಸಮೂಹವು ತಮ್ಮ ತಮ್ಮ ಗೂಡುಗಳಿಗೆ ಹಾರಿ ಶೇರಲೂ, ಹೊಲ ಪೊಲಗಳಲ್ಲಿ ಎಲ್ಲಾ ಮೌನವಾಗಿ, ಭೂಮಾತೆ ಮಬ್ಬು ಎಂಬ ದುಪ್ಪಟೀ ಹೊದ್ದು ಕೊಳ್ಳಲೂ, ಮಂದ ತಂಘಾಳಿಯಲ್ಲಿ ದ್ರಾಕ್ಷೇ ಬಳ್ಳಿ ಮೊದಲಾದ ಗಿಡಗಳು ಎಲೆಗಳೆಂಬ ತುಟಿಗಳನ್ನು ಆಡಿ, ತಮ್ಮ ಸಂಧ್ಯಾವಂದನೆ ಮಾಡಲೂ—ನದನ ಆಚೆಯಿಂದ ಈಚೆಗೆ ತನ್ನ ಡೋಣಿಯನ್ನು ನಡಿಸಿ ಕೊಂಡು ಬರುವ ಅಂಬಿಗನು ಹುಟ್ಟು ಹಾಕುತ್ತಾ ಇದ್ದ ಸದ್ದು ಕಿವಿಗೆ ಬೀಳುವದಾಯಿತು. ಡೋಣಿಯ ಹುಟ್ಟುಹೊಡಿಗ ಬರೇ ೧೫ ವರುಷದ ಹುಡುಗ. ಅವನ ದುಸ್ತು ಬಡತನದ್ದು; ಟೊಪ್ಪಿಯೂ ಅಂಗಿಯೂ ಸುಮಾರು ದಿನ ಉಪಯೋಗವಾಗಿ ಸವೆದು ಹೋಗಿತ್ತು; ಆದರೂ ದುಸ್ತೆಲ್ಲಾ ನಿರ್ಮಲವಾಗಿ, ಸಾಫಾಗಿ, ಆಯಕಟ್ಟಾಗಿತ್ತು. ಹುಡುಗನ ಹೆಸರು ಜೋರ್ಜ್ ಹೋಫರ್ ಎಂಬದು. ಬಡ ವಿಧವೆಯ ಒಬ್ಬನೇ ಮಗ. ಇಬ್ಬರು ಒಂದು ಚಿಕ್ಕ ಗುಡಸಲಲ್ಲಿ ಬಿಡಾರವಾಗಿದ್ದರು. ತಂದೆ ತೀರಿ ಹೋಗಿ ಅಂದಿಗೆ ೬ ತಿಂಗಳಾಗಿತ್ತು. ತಾಯಿಗೆ ಜಾಡ್ಯ ತಪ್ಪದೆ ನಿತ್ಯ ಅಸೌಖ್ಯವಿತ್ತು. ಇಬ್ಬರಿಗೆ ಬಹುಶಾ ಅಂಬಲಿಗಾದರೂ ಕಷ್ಟವಾಯಿತು.

ಡೋಣಿ ಈಚೆಗೆ ಬಂದು ಮುಟ್ಟಿದಾಕ್ಷಣಕ್ಕೆ ಅವನು ತನ್ನ ಕಿಶಿಯಿಂದ ಒಂದು ಚಿಕ್ಕ ಚೀಲ ತೆಗೆದು ಕೊಂಡು, ಕೈಯಲ್ಲಿ ತೂಗಿ ನೋಡಿ, ಹಸನ್ಮುಖನಾಗಿ "ಚಲೋ ನಫೆ! ತಾಯಿಗೆ ಸಂತೋಷವಾಗುವದು. ಈ ಹೊತ್ತು ಅವಳಿಗೆ ದಕ್ಕುವ ರೊಟ್ಟಿ ಕೊಂಡುಕೊಂಡು ಕೊಡಲಿಕ್ಕೆ ಮಾರ್ಗ ವಾಯಿತು. ಅಕಟಾ! ನಮ್ಮ ಬಡವರ ಆಹಾರ ಅವಳಿಗಾಗದ್ದು; ನಾನು ತಡೆದೇನು; ಆದರೆ ಕ್ಷೇಮವಿಲ್ಲದಾಕೆಗೆ ತಡೆಯಲಿಕ್ಕೆ ಕೂಡದು. ಅಮ್ಮಾ! ನನಗೆ ಪ್ರಾಯ ಹೆಚ್ಚು ಇದ್ದದಾದರೆ, ಆಗುತ್ತಿತ್ತು!" ಎಂದಂದು ಕೊಳ್ಳಲು—

"ಎಲೇ ಪೋರಾ! ವೈಗಳ್ಳ ರಂಡೇ ಮಗಾ! ಇಲ್ಲಿ ಬಂದು, ಡೋಣಿ ಕಾದು, ಕಾಲು ತಾಸಾಯಿತು! ಮನಸ್ಸು ಉರಿಯುತ್ತದೆ; ಆದರೆ ವೈಗಳ್ಳರ ಸಂಗತಿ ಹೀಗೆ. ಅಪ್ಪನಂತೆ ಮಗ, ತಾಯಿಯಂತೆ ಕರು. ಡೋಣಿ ಈಚೆ ತಂಧಾಕು, ಪೋರಾ! ಜಲ್ದಿ! ಜಲ್ದಿ!" ಎಂಬದಾಗಿ ಬೈದು, ಕೂಗುವ ಕಠೋರ ಶಬ್ದವು ನದಿಯ ಆಚೆಯಿಂದ ಕೇಳುವಂಥಾದ್ದಾಯಿತು. ಅಷ್ಟರೊಳಗೆ ಡೋಣಿ ವಾಪಸು ಆಚೆಗೆ ಹೋಗಿ ಮುಟ್ಟಿತು. ದಾಟಿ ಹೋಗ ಬೇಕೆಂತ ಅಲ್ಲಿ ಯಾರೋ ಗಂಟುಮೋರೆ ಮಾಡಿ ಕೊಂಡು ನಿಂತಿದ್ದನು. ಅವನು ಗಿಡ್ಡ, ಸ್ಥೂಲ ಜೀರಾಳು. ಅವನ ಹೊಟ್ಟೆಯನ್ನು ಅಂದರೆ ಹೊಟ್ಟೆಯ ಪರಿಮಾಣವನ್ನೂ, ಕೊಬ್ಬಿ ಉಬ್ಬಿದ ಮೋರೆಯನ್ನೂ, ಕೆಂಪಗಾದ ಮೂಗನ್ನೂ ನೋಡಿದರೆ, ಅವನು ಅನ್ನ

ಪಾನಪ್ರಿಯ ತ್ಯಾಗಭೋಗರಾಯನೆಂತ ಬೇಗ ಕಂಡು, ತಿಳಿದು ಕೊಳ್ಳ ಬಹುದಿತ್ತು. ದೊಡ್ಡ ಟೊಪ್ಪಿ, ಕಪ್ಪು ಅಂಗಿ ಮುಂತಾದ ಅವನ ದುಸ್ತು ಅವನ ಸ್ಥೂಲ ಮೈಗೆ ಒಪ್ಪುವಂಥಾದ್ದಾಗಿ ಕಂಡಿತು. ಗುರ್ತು ಇಲ್ಲದವರಾದರೂ ಅವನನ್ನು ಕಂಡರೆ, ಅವನು ಬಹಳ ಭೂಮಿಗೇಮಿ ಇದ್ದ ದೊಡ್ಡ ರೈತನೆಂತ ತಿಳು ಕೊಳ್ಳ ಬಹುದಿತ್ತು. "ಹತ್ತಿ, ಅಯ್ಯಾ! ಹತ್ತಿ!" ಎಂತ ಜೋರ್ಜನು ನಯಭಾಷೆಯಾಗಿ ಹೇಳಿದ್ದಕ್ಕೆ ಆ ಮನುಷ್ಯನು ಹೇಳಿದ್ದೇನಂದರೆ: "ನನ್ನ ಮಗ ನಿನ್ನಂಥ ಮೈಗಳ್ಳನಾಗಿದ್ದರೆ, ಅವನಿಗೆ ಚನ್ನಾಗಿ ಪೂಜೆ ಮಾಡುತ್ತಿದ್ದೇನು; ಆದರೆ ನೀನು ನಿನ್ನಪ್ಪನ ಮಗ. ನಿನ್ನ ಹೆತ್ತವರಲ್ಲೂ ನಿನ್ನಲ್ಲೂ ಒಂದು ರೋಮದಷ್ಟಾದರೂ ಪ್ರಯೋಜನದ್ದೇನೂ ಇಲ್ಲಾ. ಕೈಯಲ್ಲಿ ಕಾಸಿದ್ದರೆ, ಉಂಬುವದು ತಿಂಬುವದು ಒಂದೇ ಕೆಲಸ ನಿಮ್ಮದು. ಕೈ ಬರಿದಾದ ಮೇಲೆ ಮತ್ತೊಬ್ಬರಿಗೆ ಕರಕರೆ ಕೊಟ್ಟು ಬೇಡುವದು. ಬಾಡಿಗೆಯಾಗಲಿ ಸಾಲವಾಗಲಿ ಏನಾಗಲಿ ಸಲ್ಲಿಸಿ ಕೊಡುವ ಮಾತಿಲ್ಲವೇ ಇಲ್ಲಾ. ಹಲಕಿ ಜನ!" ಅಂಥಾ ಕಠಿಣ ಮಾತು ಕೇಳಿ ಆ ಹುಡುಗ—"ಅಯ್ಯಾ! ನನ್ನ ತಾಯಿಯ ಕಷ್ಟವು ನಿಮಗೆ ತಿಳಿದಿದ್ದರೆ"—"ಮುಚ್ಚು ಬಾಯಿ, ಪೋರಾ!" ಎಂಥೇಳಿ, ಹುಡುಗನನ್ನು ಮುಂದೆ ಮಾತಾಡ ಬಿಡದೆ, "ಕಷ್ಟವಂದರೇನು? ನೀನೂ ನಿನ್ನ ತಾಯಿಯೂ ಒಂದೇ ಜಾತಿ! ಸೌಖ್ಯವಿಲ್ಲಾ ಅನ್ನುತ್ತೀರಿ! ಸುಳ್ಳು! ನಾ ಬಲ್ಲೆ: ಉಂಡಾಡಿಬಂಟರು! ಕೆಲಸಗಳ್ಳರು!" ಎಂಬದಾಗಿ ಬೊಗಳಿ, ಬೈಗಳನ್ನು ಹಾಕಿದನು. ಆದಕ್ಕೆ ಹೆಚ್ಚಿನ ಮಾತನ್ನಾಡಲಾರದೆ ಹುಡುಗನು ಗಳ ಹಾಕುತ್ತಾ ನಿಟ್ಟುಸುರು ಬಿಟ್ಟು, ಕಣ್ಣೀರಿಟ್ಟನು. ಡೋಣಿ ಈಚೆಯಲ್ಲಿ ಮುಟ್ಟಿತು. ರೈತನು ಇಳಿದು, ಹುಡುಗನಿಗೆ—"ಕೂತು, ನನ್ನನ್ನು ಕಾದುಕೋ!" ಎಂದು ಹೇಳಿ, ನಡೆದು ಬಿಟ್ಟ. ಹುಡುಗನು ಕೂತು, "ಅಕಟಾ! ಮನುಷ್ಯರಲ್ಲಿ ದಯವೆಂಬದು ಕಾಣದ್ದು; ಎಲ್ಲರು ನಿರ್ದಯರು. ಈತ ಹೇಳಿದ್ದನ್ನು ತಾಯಿಗೆ ತಿಳಿಸಿದರೆ, ತಡೆಯಲಾರದೆ, ಉಸುರು ಕಟ್ಟಿ ಹೋದಾಳು. ಅಸ್ವಸ್ಥವಿಲ್ಲದಿದ್ದರೆ, ಎಷ್ಟೋ ಸಂತೋಷವಾಗಿ ಕೆಲಸ ಮಾಡುತ್ತಿದ್ದಾಳು! ದೇವರೊಬ್ಬನೇ ಬಲ್ಲ. ಮನುಷ್ಯರಲ್ಲಿ ಕನಿಕರವಿಲ್ಲಾ. ಈ ನಮ್ಮ ಧನಿ ಹಿಮಕಾಲದಲ್ಲಿಯೇ ನಮ್ಮನ್ನು ಒಕ್ಕಲು ತೆಗೆದು ಹೊರಡಿಸುತ್ತಾನೆ. ನನ್ನ ತಂದೆ ಯಾಕೆ ತೀರಿ ಹೋದರು? ತಂದೆ ಹೋದ ಮೇಲೆ ನಾವು ಸಹ ಯಾಕೆ ಹೋಗ ಬಾರದು? ದೇವರೇ, ಕರುಣಿಸು!" ಎಂತ ತನ್ನಲ್ಲಿ ಅಂದು ಕೊಂಡು, ಹುಡುಗನು ದುಃಖಾಕ್ರಾಂತನಾಗಿ ಕೈಗಳನ್ನು ಜೋಡಿಸಿ ಕೊಂಡು, ಆಕಾಶದ ಕಡೆಗೆ ಕಣ್ಣೆತ್ತಿ, ತನ್ನ ಮನಸ್ಸಿನಲ್ಲಿ ಪ್ರಾರ್ಥಿಸಿದನು. "ಸ್ತ್ರೀ ತಾ ಹೆತ್ತ ಮಗುವನ್ನು ಮರೆತು ಹೋದರೂ, ನಾನು ನಿನ್ನನ್ನು ಮರೆತು ಹೋಗೆ" ಎಂಬದಾಗಿ ವಚನ ಕೊಟ್ಟ ದೇವರು ಅವನ ಪ್ರಾರ್ಥನೆಗೆ ಅವನ ಮನಸ್ಸಿನಲ್ಲಿ ಶಾಂತಿ ಕೊಟ್ಟು, ದುಃಖೋಪಶಮನ ಮಾಡಿದನು. ಕಡೆಗೆ ಆ ಹುಡುಗನ ಧನಿಯಾದ ಆ ರೈತನು ತಿರಿಗಿ ಕೊಂಡು ಬಂದು, ಡೋಣಿ ಹತ್ತಿದನು. ಡೋಣಿಯಲ್ಲಿ ನೆಟ್ಟಗೆ ನಿಂತು ಕೊಂಡಿರಲಾರದೆ ತಬ್ಬಿಬ್ಬಾಗಿ ಬಾಯಿ ಬಿಟ್ಟು ಮಾತಾಡಿದ್ದರಿಂದ, ಅವನು ಸಾರಾಯಿ ಶಿಸೆಯನ್ನು ಸೇವಿಸಿ ಬಂದನೆಂತ ಕಾಣಲಾಯಿತು. ಡೋಣಿ ಆಚೆಯಲ್ಲಿ ಮುಟ್ಟಿದಾಗ, ಅವನು ಇಳಿದು, ನದಿಗೆ ಅರ್ಧ ಮೈಲು ದೂರದಲ್ಲಿದ್ದ ಮನೆಗೆ ನಡೆದನು. ಜೋರ್ಜನು ಡೋಣಿಯನ್ನು ಬಂದೋಬಸ್ತು ಮಾಡಿ, ತನ್ನ ಗುಡಸಲಿಗೆ ಹೋದನು. ಬಾಗಲಿಗೆ ಬಂದಾಗ ೧೨ ವರುಷದ ಹುಡಿಗಿಯೊಬ್ಬಳು ಬಹು ಅವಸರವಾಗಿ ಕೋಣೆಯೊಳಗಿಂದ ಹೊರಗೆ ಬಂದಳು. "ಏನು? ಮರಿಯಾ!" (ಅವಳ ಹೆಸರು) ಎಂತ ಕೇಳಿದ್ದಕ್ಕೆ ಅವಳವನಿಗೆ—"ಮಾತಾಡ ಬೇಡ; ನಾನು ಬಂದದು ನನ್ನ ತಂದೆಗೂ ಅಣ್ಣನಿಗೂ ತಿಳಿಯ ಬಾರದು; ತಿಳಿದರೆ, ಅವರು ಶಿಟ್ಟು ಮಾಡಿ, ನಾನು ತಿರಿಗಿ ಬರಲಿಕ್ಕೆ ಕೂಡದ ಹಾಗೆ ಮಾಡ್ಯಾರು" ಎಂಥೇಳಿ, ತನ್ನ ಮನೆಯ ದಾರಿ ಹಿಡಿದು, ಮುಂದೆ ಹೋಗಲು, ಜೋರ್ಜನು ತನ್ನ ಮನೆಯನ್ನು ಶೇರಿದನು.

೨ನೇ ಪರ್ವ: ಶಾಂತಿಯ ಬಿಡಾರ.

ಜೋರ್ಜನ ತಾಯಿ ಊಟಕ್ಕೆ ತಯಾರು ಮಾಡುತ್ತಿದ್ದಳು. ಅವಳ ಮುಖಕಮಲದಲ್ಲಿ ಶೋಕಪಂಕ ಬಹಳ ತಾಗಿದ್ದಾಗಿ ಕಂಡಿತು. ತಾಪತ್ರಯವೆಂಬದು ಅವಳಿಗೆ ಶಾನೆ ಅನುಭವವಾಗಿತ್ತು. ಬಹಳ ಮಮತೆ ಇಟ್ಟು, ಅವಳು ಪ್ರೀತಿಸಿದ್ದ ಗಂಡನನ್ನು ಮೃತ್ಯು ಎಂಬ ಶತ್ರು ಶೆರೆ ಹಿಡಿದು ವೈದಿದ್ದನು. ಅವಳ ಅಸೌಖ್ಯ ಅಶಕ್ತಿ ಅನುದಿನಕ್ಕೆ ಹೆಚ್ಚಿ ಹೆಚ್ಚುತ್ತಾ ಬಂದದರಿಂದ ತನಗೆ ಸಹ ಅವಸಾನ ಹತ್ತರವಾಗಿ, ಕಡೇ ಪ್ರಯಾಣಕ್ಕೆ ಹೊರಡುವ ಮಾತು ಬೇಗ ಆಗಲಿಕ್ಕೆ ಸಾಕು ಎಂತ ತಿಳುಕೊಳ್ಳ ಬೇಕಾಯಿತು. "ಪರವನ್ನೈದಿ, ಕ್ರಿಸ್ತನಲ್ಲಿ ಶೇರುವದು ನನಗೆ ಪರಮಾನಂದವೇ" ಎಂಬದಾಗಿ ಆಕೆ ತನ್ನ ಸ್ಥಿತಿಗತಿಯನ್ನು ನೋಡಿ, ಮನಃಪೂರ್ವಕವಾಗಿ ಹೇಳ ಬಹುದಾಗಿದ್ದರೂ, ತಾನಲ್ಲದೆ ಯಾರೂ ಇಲ್ಲದ ಮಗನನ್ನು ನೆನಸಿ, ಅಥವಾ ನೋಡಿ, ಚಿಂತೆಯೂ ಶೋಕವೂ ಎಂಬ ಪಂಕದಲ್ಲಿ ಮುಳಿಗಿ ಹೋದವಳಂತಾಗುತ್ತಿದ್ದಳು. "ನಾನೂ ಹೋದ ಮೇಲೆ ಮಗನಿಗೆ ಯಾರು? ಒಬ್ಬನೇ ಆಗಿ, ಒಂದು ಹಲಿಗೆಯಾಗಲಿ ಬೆಂಡು ಕೊರಡು ಆಗಲಿ ಕೈಯಲ್ಲಿ ಇಲ್ಲದವನಂತೆ ಈ ದುಃಖಸಾಗರದಲ್ಲಿ ಈಜಾಡಿ, ಪೇಚಾಡಿ ಏನಾದಾನು?" ಎಂಬ ಚಿಂತೆ ಅವಳ ಮನಸ್ಸಿಗೆ ಹಿಡಿದಷ್ಟು ಸರ್ತಿ "ಅನಾಥನಾಥನು ದೇವರೇ, ವಿಧವೆಗಳಿಗೂ ದಿಕ್ಕಿಲ್ಲದ ಮಕ್ಕಳಿಗೂ ಆತನೇ ಸಂರಕ್ಷಕನು" ಎಂಬ ನಂಬಿಕೆ ಅವಳು ಮತ್ತೂ ಮತ್ತೂ ಹಿಡುಕೊಂಡು, ತನ್ನನ್ನು ಸಂತೈಸಿ ಕೊಂಡು, ಚಿಂತೆಗಳನ್ನು ಪರಿಹರಿಸಿ ಕೊಳ್ಳ ನೋಡ ಬೇಕಾಯಿತು. ಆದರೆ ಆಗಿಂದಾಗ್ಯೆ ಚಿಂತೆಗಳನ್ನು ಜಯಿಸಿ ಬಿಡಲಿಕ್ಕೆ ಬಹಳ ಕಷ್ಟವಾಯಿತು. ಆದರೂ ಕರ್ತನಿಗೆ ಮೊರೆಯಿಟ್ಟು, ದುಃಖವನ್ನು ಅರಿಕೆ ಮಾಡಿದ್ದಲ್ಲಿ ಹೆಚ್ಚಿನ ಹೊತ್ತು ಹೋದರೂ, ಕಡೆಗೆ ಶಾಂತಿಯಾಗದೆ ಹೋಗಲಿಲ್ಲಾ; ಕರ್ತನ ಸಹಾಯ ಮತ್ತೂ ಅನುಭವ ಮಾಡಲಿಕ್ಕಾಯಿತು. ಆದರೆ ಅಂದಿನ ದಿನದಲ್ಲಿ ಕಷ್ಟವೂ ಚಿಂತೆಯೂ ಅತಿರಿಕ್ತವಾಗಿ, ಬಡವೆ ಕೇವಲ ದಿಕ್ಕುಗಾಣದವಳಾಗಿದ್ದಳು. ಬಾಡಿಗೆ ಸಲ್ಲಿಸಿ ಕೊಡಲಿಕ್ಕೆ ಕೂಡದ ಕಾರಣ, ವಾಯಿದೆ ತೀರಿ, ಧನಿ ಅದೇ ದಿನದ ಮಧ್ಯಾಹ್ನದಲ್ಲಿ ಹೊಸ ವಾಯಿದೆ ಕೊಡದೆ, ಹೊರಟು ಹೋಗ ಬೇಕೆಂತ ಅಪ್ಪಣೆ ಕೊಟ್ಟಿದ್ದನು. ಹಿಮಕಾಲದಲ್ಲಿಯೇ ಬಿಡಾರವಿಲ್ಲದೆ ಘಾಳಿಗೂ ಹಿಮಕ್ಕೂ ಬೀಳುವ ಅವಸ್ಥೆಯಲ್ಲದೆ, ಮತ್ತೊಂದು ಕಾಣದಿದ್ದ ಕಾರಣ ಚಿಂತಾಪಂಕಮಗ್ನಳಾದವಳಿಗೆ ಉಸುರು ಕಟ್ಟಿ ಹೋಗುವಂತಾಗಿತ್ತು.

ಬಂದು, "ಶುಭಮಸ್ತು, ತಾಯಿೂ!" ಎಂಥೇಳಿ, ಸಲಾಮು ಮಾಡಿ, ಜೋರ್ಜನು ತನ್ನ ಚಿಕ್ಕ ಚೀಲವನ್ನು ಕಿಶಿಯಿಂದ ತೆಗೆದು, ಮೇಜಿನ ಮೇಲೆ ಇಟ್ಟು, ಬಿಚ್ಚಿ, ಅದರಲ್ಲಿದ್ದ ರೊಖ್ಖವನ್ನು ಲೆಖ್ಖ ಮಾಡಿ, ತಾಯಿಗೆ ತೋರಿಸಿ, "ನೋಡು, ತಾಯಿೂ! ಈ ಹೊತ್ತು ದೈವಾನುಕೂಲದಿಂದ ಚಲೋ ನಫೆ ಶಿಕ್ಕಿತು. ಮಧ್ಯಾಹ್ನದ ವರೆಗೆ ಯಾರೂ ದಾಟಲಿಕ್ಕೆ ಬಾರದೆ ನಾನು ಕೆಲಸವಿಲ್ಲದೆ ಖಾಲಿ ಡೋಣೀ ಬದೀಲಿ ಕೂತು ಕೊಂಡು ಕಾಯ ಬೇಕಾಯಿತು. ಆದರೆ ಆವಾಗ ದೇವರು ಕಾಗೀ ಮರಿಗಳ ಕೂಗನ್ನಾದರೂ ಕೇಳಿ, ಕಾಡಿನ ನೈದಿಲೆಗಳನ್ನು ಹೊದ್ದಿಸಿ, ಸಮಸ್ತವನ್ನು ಸಲುಹುವಾತನಾಗಿ, ನಿಮ್ಮನ್ನೂ ಮರೆತು ಬಿಡಲಿಕ್ಕಿಲ್ಲಾ ಎಂಬದಾಗಿ ನಮಗೆ ತನ್ನವಸಾನದಲ್ಲಿ ಬುದ್ಧಿ ಹೇಳಿ, ಧೈರ್ಯ ಕೊಟ್ಟ ತಂದೆಯ ಮಾತನ್ನು ನೆನಪು ಮಾಡಿ, ನಾನು ದೇವರಿಗೆ ಪ್ರಾರ್ಥಿಸಿದೆನು. ಪ್ರಾರ್ಥಿಸಿದ ಕೂಡ್ಲೇ ಎದೆಗೆ ಬಿಗು ತಾಗಿ ಹಿಡಿದಿದ್ದ ಭಾರ ಸರಿದು ಹೋದ ಹಾಗಾಯಿತು. ಮತ್ತು ಸಂಗಡಲೇ ಜನರು ಒಬ್ಬರ ಮೇಲೊಬ್ಬರು ದಾಟಲಿಕ್ಕೆ ಬಂದು, ಡೋಣಿ ಹತ್ತಿ, ದಾಟಿಸಿ ಕೊಂಡು ಹೋದರು. ನೋಡು, ಏಳುವರೆ ಆಣೆ ದುಡಿದು ತಂದಿದ್ದೇನೆ. ಇಷ್ಟು ದುಡಿಕೆಯಾಗುವ ದಿನ ಕಡಿಮೆ. ಎರಡು ಮೂರು ದಿನದ ಖರ್ಚಿಗೆ ಸಾಲುವದು. ಮಸ್ತಾಯಿತಲ್ಲಾ?" ಎಂಬದಾಗಿ ಹೇಳಿ, ಮಾತಾಡಿದನು. ತಾಯಿ ಏನೂ ಪ್ರತ್ಯುತ್ತರವಾಗಿ ಹೇಳದೆ, ಪೂರ್ಣ ನಿಶ್ಚಿಂತನೆಂತ ಕಂಡ ಹುಡುಗನನ್ನು

ಬಹಳ ವಾತ್ಸಲ್ಯವೂ ಶೋಕವೂ ಕೂಡಿದ್ದ ಭಾವವುಳ್ಳವಳಾಗಿ ದೃಷ್ಟಿಸಿ ನೋಡಿದಳು. ಹುಡುಗನು ಆ ದುಡ್ಡು ಕಾಸುಗಳನ್ನು ಒಂದೊಂದಾಗಿ ತಿರಿಗಿ ಹೆಕ್ಕಿ, ಚೀಲದಲ್ಲಿ ಹಾಕಿ ಬಿಟ್ಟನಂತರ ಏನೂ ಮಾತಾಡದ ತಾಯಿಯ ಕಡೆಗೆ ಮುಖ ಮಾಡಿ, ಅವಳನ್ನು ನೋಡಿದಾಗ, ಅವಳ ಮುಖ ಪೂರ್ಣ ಕಳೆ ಕುಂದಿ, ನಿಸ್ತೇಜವಾಗಿ ಹೋದ್ದನ್ನು ಕಂಡು, ಬೆಬ್ಬರ ಬಿದ್ದು, ವಿಸ್ಮಿತನಾದನು. ಮತ್ತು ಬಹು ದುಃಖಿತನಾಗಿ ಅವನು ತಾಯಿಯ ಹತ್ತರ ಮಾತಾಡಿ, ಹೇಳಿದ್ದೇನಂದರೆ: "ಅವ್ಮಾ! ನೀನು ಬಹಳ ಅಸ್ವಸ್ಥವಾಗಿದ್ದೀ ಎಂತ ಕಾಣುತ್ತದೆ. ನಿನ್ನ ಮುಖಕಮಲವು ತಂದೆಯದರಷ್ಟು ಬಾಡಿ ಹೋಗ್ಯದೆ. ನಾಳೆ ಪೇಟೆಗೆ ಹೋಗಿ, ವೈದ್ಯರನ್ನು ಕರಕೊಂಡು ಬರುತ್ತೇನೆ. ನಿನಗೆ ಅವ್ವಲ್ ರೊಟ್ಟಿ ಸಹ ತಕ್ಕೊಂಡು ಬರುತ್ತೇನೆ. ನಮ್ಮ ಸಾಧಾರಣ ರೊಟ್ಟಿ ನಿನಗೆ ಚನ್ನಾಗಿ ದಕ್ಕದು. ಹೋಗಿ ಬರಲಿಕ್ಕೆ ಅಪ್ಪಣೆ ಕೊಡುತ್ತೀ ಅಲ್ಲವೋ? ಅವ್ಮಾ! ಇನ್ನು ಈ ರಾತ್ರಿ ಕೂತು, ಎರಡು ಹೂ ಪುಟಿಕೆಗಳನ್ನು ಹೆಣೆದು ತೀರಿಸಿ, ವೈದ್ಯರಿಗೆ ಇನಾಮಾಗಿ ಕೊಡುತ್ತೇನೆ; ಆಗ ಹ್ಯಾಗಾದರೂ ಬಂದಾರು. ನೀನು ಹ್ಯಾಗೂ ಬದುಕ ಬೇಕು; ನೀನು ಸಹ ಹೋದರೆ, ನನಗ್ಯಾರು? ನೀನು ಹೋಗ ಬಾರದು."

ಅದಕ್ಕೆ ಅವನ ತಾಯಿ "ದುಃಖ ನೆನಸಿ ಚಿಂತಿಸ ಬೇಡ, ಮಗಾ! ಈ ಕಷ್ಟ ನಿವಾರಣೆಯಾಗುವದು. ನಾನೂ ಹೋಗ ಬೇಕಾದರೆ—ದೇವರ ಮಾರ್ಗ ಅಶೋಧ್ಯವೇ. ಆದರೂ ಆತನು ಅಚಂಚಲ ಸದಾಪ್ರಭು, ದಿಕ್ಕಿಲ್ಲದವರ ದಿಕ್ಕು, ಅನಾಥನಾಥ" ಎಂಬದಾಗಿ ಮಾತಾಡಿ ಸಂತೈಸುತ್ತಿರಲು, ಆಕೆಗೂ ದುಃಖವು ಹಿಡಿದು, ಸ್ವರ ಅಣಗಿ ಹೋಯಿತು. ತಾನೂ ಸತ್ತು ಹೋದ ಮೇಲೆ ಮುದ್ದು ಮಗನು ಯಾರೂ ಸಂಗಡಿಗರಿಲ್ಲದೆ ಲೋಕಾರಣ್ಯಕ್ಕೆ ಬಿದ್ದು, ತೊಳಲಿ ಬಳಲಿ, ದಿಕ್ಕು ಹುಡುಕ ಬೇಕಾಗುವದು ಎಂಬ ಭಯವು ಅವಳೆದೆಗೆ ಔಕುವಂಥಾದ್ದಾಯಿತು. ಕಡೆಗೆ ಮೆಲ್ಲಗೆ ಅಂದದೇನಂದರೆ: ತಂದೆಯವರಿಗೆ ಈಗ ಸುಖವೇ. ಹೋರಾಟ ಪೇಚಾಟ ತೀರಿ, ಕರ್ತನ ಸಂಗಡ ಸ್ವರ್ಗದಲ್ಲಿದ್ದಾರೆ. ನಾವೂ ಅಲ್ಲಿದ್ದರಾದೀತು!

"ನಿನ್ನನ್ನು ಬಿಡೆ, ನಿನ್ನ ಸಂಗಡ ಹೋಗುತ್ತೇನೆ; ನೀನಲ್ಲದೆ ನನಗೆ ಯಾರು? ಯಾರಿಗೂ ನನ್ನ ಮೇಲೆ ಪ್ರೀತಿ ಇಲ್ಲಾ" ಎಂತ ಮಗನು ಹೇಳಿದ್ದಕ್ಕೆ ಅವಳು—"ಹಾಗೆ ಮಾತಾಡ ಬೇಡಾ! ದೇವರು ನಿನ್ನನ್ನು ಮರತು ಬಿಡನು. ನೀನೂ ನಿನ್ನ ಜೀವವೂ ಆತನ ಕೈಯಲ್ಲಿ. ಆತನು ನನ್ನನ್ನು ಇಲ್ಲಿಂದ ವೈದರೆ, ನಿನ್ನನ್ನುಸಾಕಿ ಸಲುಹುವನು. ಚಿಂತೆಯಲ್ಲಿ ಮುಳುಗ ಬೇಡಾ!" ಎಂತ ಸಂತೈಸಿ ಹೇಳಲು, ಹುಡುಗನು—"ನೀನು ಹೇಳಿದ್ದು ಖರೆ; ಆದರೆ ಧನಿ ನಮಗೆ ನಡಿಸುವಂಥಾದ್ದು ಎಂಥಾ ಕಷ್ಟಾ! ಮತ್ತು ಧನಿಯ ಮಗ ಕೊನ್ರಾದ ಎಷ್ಟೋ ತಂಟೆ ಕೊಟ್ಟು, ಸಾಕಾಗ ಮಾಡುತ್ತಾನೆ. ರಾತ್ರಿ ರಾತ್ರಿಗೆ ನನ್ನ ಡೋಣಿ ನೀರು ತುಂಬಿಸಿ ಬಿಡುತ್ತಾನೆ. ನಾನು ಮನನೊಂದು ಕೊಂಡರೆ, ನಕ್ಕು ಹಾಸ್ಯ ಮಾಡುತ್ತಾನೆ." (ಮುಂದೆ ಸಾಗಿಸಲ್ಪಡುವದು.)

## ಉತ್ತರಗಳು.

(೯೬ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

16. ಯೇಸುವಿನ ಶಿಲುಬೆಯ ಅಡಿಯಲ್ಲಿ ಮರೀಯ ಎಂಬ ಹೆಸರು ಇದ್ದಂಥಾ ಮೂರು ಜನ ಸ್ತ್ರೀಯರು ಕೂಡಿದ್ದರು. ಯೋಹಾನ. ೧೯, ೨೫.

17. ಆದಮ ಎಂಬದು; ಆದಮನ ಮಗನಾದ ಹೇಬೆಲನು ಸಂತಾನವಿಲ್ಲದೆ ತೀರಿ ಹೋದವನು; ಕಾಯಿನನು ಅತಿಪೂರ್ವದಲ್ಲಿ ಅಂದರೆ ಜಲಪ್ರಳಯದಲ್ಲಿ ಅಳಿದು ಹೋದ ಸಂತಾನಕ್ಕೆ ತಂದೆಯಾದವನು; ಸೇಥನು ಇಂದಿನ ವರೆಗೂ ಉಳಿದ ಮಹಾ ಸಂತಾನಕ್ಕೆ ಅಂದರೆ ಜಲಪ್ರಳಯದ ಈಚೆಯ ನರಜಾತಿಗೆ ಜನಕನಾದವನು.

18. **ನಿರ್ದೋಷಿಯಾದ ಕತ್ತೆಯನ್ನು ದೋಷಿಯಾದ ಬಿಳಾಮನು ಶಿಕ್ಷಿಸಿದ (ಹೊಡೆದ)** ಮೇಲೆ ಕತ್ತೆ ಬಿಳಾಮನನ್ನೂ ಶಿಕ್ಷಿಸಿತು, ಅಂದರೆ ಅವನ ಕಾಲನ್ನು ಗೋಡೆಗೆ ಒತ್ತಿ ಹಾಕಿತು; ಇದಕ್ಕೆ ಕೋಪಿಸಿ ಕೊಂಡು ಬಿಳಾಮನು ಹೆಚ್ಚು ಹೊಡೆಯಲಿಕ್ಕೆ, ಕತ್ತೆ ಬಾಯಿ ಬಿಟ್ಟು ಅವನಿಗೆ ಬುದ್ಧಿ ಹೇಳಿತು. ಅಂಕೆ. ೨೨, ೨೩—೩೦.

19. **ಅಹಷ್ವೇರಸನು** ತನ್ನ ರಾಜ್ಯದ ಪ್ರಧಾನರಿಗೂ ನೌಕರರಿಗೂ ಮಾಡಿಸಿದ ಹಬ್ಬಕ್ಕೆ ಆರು ತಿಂಗಳು ಹಿಡಿಯಿತು. ಎಸ್ತೇರ. ೧, ೩. ೪.

20. **ರೋದೆ** ಎಂಬ ಚಾಕ್ರಿಯವಳು ಪೇತ್ರನು ಬಂದದಕ್ಕೆ ಬಹಳ ಸಂತೋಷ ಪಟ್ಟಾಗ್ಯೂ ಬಾಗಲನ್ನು ತೆರೆಯಲಿಲ್ಲಾ. ಅಪೊ. ಕ್ರಿಯೆ. ೧೨, ೧೩. ೧೪.

---

## ಹೊಸ ಪ್ರಶ್ನೆಗಳು.

21. ಪರಲೋಕಕ್ಕೇರಿ ಹೋದ ಮೇಲೆ ಯೇಸು ಯೆರೂಸಲೇಮಿನ ದೇವಾಲಯದಲ್ಲಿ ಯಾರ ಸಂಗಡ ಸಂಭಾಷಣೆ ಮಾಡಿದನು?

22. ಒಂದೇ ಮನೆಯಲ್ಲಿ ಅದೇ ಹೆಸರು ಇದ್ದಂಥಾ ಗೃಹಸ್ಥರಿಬ್ಬರು ವಾಸವಾಗಿದ್ದರು. ಅವರ ಹೆಸರೇನು?

23. ಮಮತೆಯ ದೆಶೆಯಿಂದ ಮಗನನ್ನು ಇನ್ನು ನೋಡಲಿಕ್ಕೆ ಕೂಡದೆ ಬಿಟ್ಟಗಲಿದ ತಾಯಿಯ ಹೆಸರೇನು?

24. ತನ್ನಾಯುಷ್ಯದ ಪ್ರಥಮ ಮೂರನೇ ಅಂಶ ವಿದ್ಯಾಭ್ಯಾಸದಲ್ಲಿ, ಮಧ್ಯ ಮೂರನೇ ಅಂಶ ಊಳಿಗದಲ್ಲಿ, ಕಡೇ ಮೂರನೇ ಅಂಶ ಒಂದೇ ಪ್ರಯಾಣದಲ್ಲಿ ಕಳದವನ್ಯಾರು?

25. ತನ್ನ ದೀರ್ಘಾಯುಷ್ಯದ ಪ್ರಾರಂಭದಲ್ಲೇ ಸತ್ತು ಹೋದವನೊಬ್ಬನ ಹೆಸರೇನು?

---

## ವಿವಿಧ ವರ್ತಮಾನಗಳು.

ಈ ಇಡೀ ಭೂಲೋಕದಲ್ಲಿ ೧೪೨೩೯೧೭೦೦೦ ನಿವಾಸಿಗಳಿದ್ದಾರಂತೆ.

ಬಕ್ಕರಗಂಗೆ ಮತ್ತು ನವಾಖೋಲಿ ಈ ಪ್ರದೇಶಗಳಲ್ಲಿ ಒಕ್ಟೋಬರ್ ತಿಂಗಳಲ್ಲಿ ತುಫಾನೂ ನೆರೆಯೂ ಬಂದು ಸತ್ತವರಷ್ಟೇ ಜನರು ವಾಂತಿಭೇದಿಯಿಂದ ಸತ್ತರು. ಸಂದೀಪ ಎಂಬ ದ್ವೀಪದ ಕೆಳಗಿನ ಅರ್ಧಪ್ರದೇಶದಲ್ಲಿ ಮುಂಚೆ ೨೨,೭೨೮ ನಿವಾಸಿಗಳಿದ್ದರು; ಇವರಲ್ಲಿ ನೆರೆಯಿಂದ ೪,೪೨೮ ಜನರೂ, ನವಂಬರ್ ತಿಂಗಳಲ್ಲಿ ವಾಂತಿಭೇದಿಯಿಂದ ೨,೮೩೦ ಜನರೂ ತೀರಿ ಹೋದರು.

ಬ್ರೆಮೆನ್ ಪಟ್ಣದಲ್ಲಿ ೧೬೨೪ನೇ ವರ್ಷದಲ್ಲಿ ಮಾಡಿದ ದ್ರಾಕ್ಷೇ ರಸ ಇನ್ನೂ ಉಂಟಂತೆ. ಬಡ್ಡಿಗೆ ಬಡ್ಡಿ ಹಿಡಿದು ಲೆಖ್ಖ ಮಾಡಿದರೆ, ಒಂದು ಬಾಟ್ಲಿಗೆ ಲಕ್ಷ ರೂಪಾಯಿ ಕ್ರಯವಾಗುವದು.

ರುಸ್ಯದ ಮಹಾ ದಳವು ಕಿಶೆನೆಫ್ ಎಂಬಲ್ಲಿ ಯುದ್ಧಸನ್ನದ್ಧವಾಗಿ ಅದೆ; ಸೆರ್ವ್ಯರು ತುರ್ಕರಿಗೆ ಎದುರ್ನಿಲ್ಲಲಿಕ್ಕೆ ಬಲವಿಲ್ಲದವರಾದರೆ, ತುರ್ಕರಾಜ್ಯದೊಳಗೆ ಹೊಗುವದಕ್ಕೆ ಅವರಿಗೆ ಮನಸ್ಸದೆ ಎಂತ ತೋರುತ್ತದೆ; ವಿಲಾಯತಿಯ ಆರು ಶ್ರೇಷ್ಠ ರಾಜ್ಯಗಳವರು ರಾಯಭಾರಿಗಳನ್ನು ಕಳುಹಿಸಿ ಕೊಟ್ಟು ತುರ್ಕರಿಗೆ ಹೇಳಿ ಕೊಟ್ಟ ಆಲೋಚನೆ ಅವರು ಮನಸ್ಸಿಗೆ ತಾರದೆ ಹೋದದ್ದು ಇವರಿಗೆ ಒಳ್ಳೇ ಸಂದರ್ಭವೂ ನೆವನವೂ ಆಗುವದಾಯಿತು.

ಗಂಧಕದ ಹೊಗೆ ಷಾಂತಿಭೇದಿ ರೋಗಕ್ಕೆ ಮಹಾಔಷಧವಾಗಿದೆ. ಉರಿಯುವ ಕೆಂಡಗಳ ಮೇಲೆ ಒಂದು ಚಟ್ಟಿ ಇಟ್ಟು, ಅದರೊಳಗೆ ಪದೇ ಪದೇ ಗಂಧಕದ ಪುಡಿ ಹಾಕುತ್ತಿರ ಬೇಕು; ಈ ಚಟ್ಟಿಯನ್ನು ರೋಗಿಯ ಹತ್ತರ ಇಟ್ಟು ಆ ಹೊಗೆ ಅವನ ಮೂಗಿನಲ್ಲಿ ಹೋಗುತ್ತಾ ಇರ ಬೇಕು; ಇದು ಮನಗಂಡ ಔಷಧವಾಗಿದೆ.

ಚೀನದ ಉತ್ತರದಲ್ಲಿ ಶಾಂತುಂಗ್ ಎಂಬ ಶೀಮೆಯಲ್ಲಿ ಮಹಾ ದುರ್ಭಿಕ್ಷೆ ಉಂಟಾಗಿದೆ. ಅವರ ಸಹಾಯಾರ್ಥವಾಗಿ ಶಾಂಗಾಯಿಯ ಕ್ರೈಸ್ತರು ಹಣ ಕೂಡಿಸಿ, ಒಬ್ಬ ಮಿಶ್ಯನೆರಿಯ ಕೈಯ ಕೊಟ್ಟು ಕಳುಹಿಸಿದ್ದಾರೆ.

ಔರಂಗಾಬಾದಿನಲ್ಲಿ ಕಲ್ಲುಮಳೆ ಉಂಟಾಗಿ ಒಂದೊಂದು ಕಲ್ಲು ಒಂದು ಕಿತ್ತಳೆ ಹಣ್ಣಿನಷ್ಟು ದೊಡ್ಡದಾಗಿತ್ತು. ಹಾಗೂ ಬಡೋದೆ ಜಿಲ್ಲೆಯಲ್ಲಿಯೂ ಬಿದ್ದ ಕಲ್ಲುಮಳೆಯಲ್ಲಿ ಒಂದೊಂದು ಕಲ್ಲು ಕೋಳಿಮೊಟ್ಟೆಗಿಂತ ದೊಡ್ಡದಾಗಿತ್ತು.

ಲಂಡನ ಪಟ್ಣದಲ್ಲಿಯೂ ಶಿಡುಬುರೋಗ ಪ್ರಬಲವಾಗುತ್ತಾ ಅದೆ; ಈ ಸಾಂಕ್ರಾಮಿಕ ರೋಗವನ್ನು ತಡಿಯುವದಕ್ಕೆ ಏನು ಮಾಡ ಬೇಕೆಂದು ಆಲೋಚನೆ ಮಾಡುತ್ತಿದ್ದಾರೆ.

ಈ ಶೀಮೆಯಲ್ಲಿ ಮಳೆ ಬಹಳ ಕಡಿಮೆಯಾದದ್ದಕ್ಕೆ ಇಡೀ ವರುಷದಲ್ಲಿ ಸೂರ್ಯನ ಕಳೆಗಳು ಇಲ್ಲದೆ ಹೋದದ್ದು ಕಾರಣವೆಂದು ಮದ್ರಾಸಿನಲ್ಲಿರುವ ಸರಕಾರ ಜ್ಯೋತಿಷನು ಹೇಳುತ್ತಾನೆ.

ಇಂಗ್ಲಾಂಡಿನಲ್ಲಿ, ಸ್ಪಾನ್ಯದಲ್ಲಿ, ಇನ್ನು ಬೇರೆ ಕಡೆಗಳಲ್ಲಿ ಅತಿವೃಷ್ಟಿಯಾಗಿ ದೊಡ್ಡ ನೆರೆ ಬಂದದ್ದು ಯಾವ ಕಾರಣದಿಂದ? ಈ ಶೀಮೆಯಲ್ಲಿಯೂ ಮಳೆ ಕಡಿಮೆಯಾಗಲಿಲ್ಲಾ; ಆದರೆ ಎಲ್ಲಾ ಕಡೆಗಳಲ್ಲಿ ಒಂದೇ ಪ್ರಕಾರ ಮಳೆ ಬೀಳದೆ ಹೋಯಿತು ಎಂತ ನಮಗೆ ತೋರುತ್ತದೆ.

ಪೂರ್ವಬಂಗಾಳದಲ್ಲಿ ಇನ್ನೊಂದು ಉತ್ಪಾತವಾಯಿತು; ಸ್ವಲ್ಪ ಸಮಯಕ್ಕೆ ಬೀಸಿದ ಪ್ರಚಂಡ ಘಾಳಿಯಿಂದ ಹೂಗ್ಲಿ ಪೋಯಿಂಟಿನಿಂದ ಸಗೊರ ವರೆಗೆ ನದಿಯ ಉಭಯ ಕಡೆಗಳ ಮನೆಗಳು ಹಾರಿ ಹೋಗಿ ಒಂದು ಲಕ್ಷ ಬಾಳೆ ಗಿಡಗಳು ಹೋದವು. ಶುಮಾರು ೩೦ ದೋಣಿಗಳೂ ಒಂದು ಹೊಗೆಹಡಗವೂ ಮುಣುಗಿ ಹೋದವು.

ಪುಣೆಯಲ್ಲಿ ಜೋಗೀಶ್ವರಿ ಎಂಬ ದೇವಿಯ ಬೆಳ್ಳಿಯ ಮುಖ ಸುಮಾರು ೧೦೦ ರೂಪಾಯಿ ಕ್ರಯದ್ದು ಚೋರಿಯಾಯಿತಂತೆ.

ಪೋಪನು ತನ್ನ ತದ್ರೂಪಚಿತ್ರದ ಕೆಳಗೆ "ಹೆದರ ಬೇಡ, ನಾನಿದ್ಧೇನೆ!" ಎಂಬ ಮಾತನ್ನು ಬರಸಿ, ಅದನ್ನು ತನ್ನ ಶರಣಗಳಿಗೆ ಕೊಡುತ್ತಿದ್ಧಾನಂತೆ.

ಮದ್ರಾಸ ಮುಂಬಾಯಿ ಸಂಸ್ಥಾನಗಳಲ್ಲಿ ದುರ್ಭಿಕ್ಷೆಯ ದೆಶೆಯಿಂದ ಸಹಾಯ ಹೊಂದುವವರ ಲೆಖ್ಖ ಕಡಿಮೆಯಾಗುತ್ತಾ ಬರುತ್ತದೆ.

ಕಳದ ತಿಂಗಳ ಅಂತ್ಯದಲ್ಲಿ ಮಂಗಳೂರಿನ ಮೇಲ್ಕಾಲೆಯಲ್ಲಿ ಮಲೆಯಾಳ ದೇಶದವನಾದ ಒಬ್ಬ ವಿದ್ಯಾರ್ಥಿ ಶಿಡುಬುರೋಗದಿಂದ ಮೃತಪಟ್ಟನು.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

ಫ್ರೆಂಚ ದೇಶದ ರಾಜಧಾನಿ ಪರೀಸು ಪಟ್ಣಕ್ಕೆ ೧,೯೮೬,೭೪೮ ನಿವಾಸಿಗಳಿದ್ಧಾರಂತೆ.

ಅಮೇರಿಕದ ಸಂಯುಕ್ತಸಂಸ್ಥಾನಗಳಲ್ಲಿ ಹೊಲಿಯುವ ಸೂಜಿಗಳನ್ನು ಮಾಡುವ ೮ ಕಾರಖಾನೆಗಳವೆ. ಅವುಗಳಲ್ಲಿ ದಿನದಿನಕ್ಕೆ ೪ ಕೋಟಿ ೭೦ ಲಕ್ಷ ಸೂಜಿಗಳು ಮಾಡೋಣಾಗುತ್ತವಂತೆ. ಆದರೂ ಅವು ಆ ದೇಶಕ್ಕೆ ಸಾಲದೆ, ಸರಾಸರಿ ಲೆಖ್ಖದಲ್ಲಿ ದಿನವೊಂದಕ್ಕೆ ೨ ಕೋಟಿ ೩೦ ಲಕ್ಷ ಬೀಳುವಷ್ಟು ಸೂಜಿಗಳು ವಿಲಾಯತಿಯಿಂದ ವ್ಯಾಪಾರದಲ್ಲಿ ಬರುತ್ತವಂತೆ. ಹೀಗಿರಲಾಗಿ ಸರಾಸರಿ ಲೆಖ್ಖದಲ್ಲಿ ಸಂಯುಕ್ತಸಂಸ್ಥಾನಗಳಲ್ಲಿ ಒಂದು ದಿನಕ್ಕೆ ೭ ಕೋಟಿ ೨೦ ಲಕ್ಷ, ಒಂದು ತಾಸಿಗೆ ೩೦ ಸಾವಿರ ಸೂಜಿಗಳು ಮುರಿದು ಅಥವಾ ಕಳದು ಹೋಗುವಂಥಾದ್ದಾಗಿದೆ. ಒಂದು ಸೂಜಿಯ ಬೆಲೆ ತೀರಾ ತುಸವಾದರೂ, ಇಷ್ಟು ಸೂಜಿಗಳದು ಬಹಳವಾಗುತ್ತದೆ. ಇಲ್ಲ್ಯಲ್ಲಿ ಆಗಿಂ

ದಾಸ್ತ್ಯೆ ಲೆಕ್ಕಕ್ಕೆ ಬಾರದಷ್ಟು ಅಲ್ಪ ಸ್ವಲ್ಪವೆಂತ ಕಾಣುವಂಥಾದನ್ನಾದರೂ ಕಳಕೊಂಡರೆ, ಅಥವಾ ಹಾಳು ಮಾಡಿ ಬಿಟ್ಟರೆ, ಕಡೆಗೆ ಬಹಳವಾಗುತ್ತದೆ. ಆದ್ದರಿಂದ ಏನೂ ಹಾಳು ಆಗ ಗೊಡದ ಜೋಕೆ ಜಾಗ್ರತೆ ಬೇಕು! ಇದರಲ್ಲಿ ಬಹಳ ಆದಾಯವದೆ!

ವೊಹೈಯೊ ಎಂಬ ನಾಡಿನಲ್ಲಿ ಹೊಗೇ ಭಂಡಿಗೆ ಒಂದು ಸೇತುವೆ ಮುರಿದು ಹೋಗಿ, ಅಪಾಯ ಒದಗಿತು. ಹತ್ತಿಕೊಂಡಿದ್ದ ೧೭೬ ಜನರಲ್ಲಿ ೫ ಮಾತ್ರವೇ ಏನೂ ಹಾನಿಗೆ ಗುರಿಯಾಗದೆ ಉಳಿದರು. ಬಾಕಿ ಜನರು ಜಖಮಾದರು, ಹೆಚ್ಚಾದವರು ಸತ್ತರು. ಶೀತವೂ ಬೆಂಕಿಯೂ ಹಿಮವೂ ನೀರೂ ಇವು ನಾಲ್ಕು ಕೂಡಿ, ಅಷ್ಟು ಹಾನಿ ಮಾಡಿ ಬಿಟ್ಟವು.

ಕರ್ಡಿನಾಲ ಅಂತೊನೆಲ್ಲಿ ಬಹಳ ಆಸ್ತಿಯನ್ನು ಕೂಡಿಸಿಟ್ಟು, ಬಿಟ್ಟು ಹೋದನಲ್ಲಾ! (೧೦೦ನೇ ಪಾನಿನ ತುದಿ ಸರಿ ನೋಡ ತಕ್ಕದ್ದು.) ಸದರಿ ಆಸ್ತಿಗೆ ಅವನ ಸಂಬಂಧಿಕರು ಮಾತ್ರವಲ್ಲಾ ಒಬ್ಬ ಸ್ತ್ರೀ ಸಹ ಬಾಧ್ಯಸ್ಥಳಾಗಿದ್ದಾಳೆಂತೆ. ಅಂತೊನೆಲ್ಲಿಗೂ ಆ ಸ್ತ್ರೀಗೂ ಇರುತ್ತಿದ್ದ ಒಂದು (ನಿಂದ್ಯ) ತರದ ಗೊಡವೆ ಅವಳ ಹಕ್ಕಿಗೆ ಆಧಾರವಾಗಿದಂತೆ; ಆದರೆ ಸಂಬಂಧಿಕರು ಪಾಲು ಹಂಚಿ ಕೊಡಲಿಕ್ಕೆ ಕಬೂಲಾಗಿರದ ಕಾರಣ ಆ ಅಮ್ಮ ತನ್ನ ಹಕ್ಕು ಸಾಧಿಸಿ ಕೊಳ್ಳುವ ಬಗ್ಯೆ ಅರ್ಥ ವ್ಯವಹಾರ ನಡಿಸ ಬೇಕೆಂದಿರುತ್ತಾಳೆಂತೆ.

ಲಂದನ ಪಟ್ಣಕ್ಕೆ ಹಡಗಗಳಲ್ಲಿ ಬಂದು ಮುಟ್ಟುವ ಪರದೇಶದವರಾದ ಖಲಾಶಿಗಳು ಹೇರಳ ಜನ. ಕಳೆದ ವರುಷದಲ್ಲಿ ಅಲ್ಲಿಯ ಒಬ್ಬನೇ ಮಿಶನೆರಿ ಆಸ್ಯ ಭೂಖಂಡದವರಾದ ೮,೦೦೦ ಜನರನ್ನು ನೋಡಿ, ಮಾತಾಡಿಸಿ, ಅವರಿಗೆ ಸಂಭಾಷಣೆಗಳಲ್ಲಿ ಸುವಾರ್ತೆಯನ್ನು ತಿಳಿಸಲಾಯಿತು. ಕೆಲವರು ಹೀಗೆ ಕೇಳಿದ ಸುವಾರ್ತೆಯನ್ನು ಅಂಗೀಕರಿಸಿ, ಸ್ನಾನ ಹೊಂದಿ, ಕ್ರೈಸ್ತ ಸಭೆಯನ್ನು ಸೇರಿದರು. ಅವರು ಮುಹಮ್ಮದಿಯರೂ ಹಿಂದುಗಳೂ ಬೌದ್ಧರೂ ಆಗಿದ್ದವರು.

ಜಾಪಾನ ದೇಶದ ಸರಕಾರದ ಕಡೆಯಿಂದ ಮೂರ್ತಿಗಳನ್ನೂ ವಿಗ್ರಹಗಳನ್ನೂ ಇನ್ನು ಮುಂದೆ ಮೆರವಣಿಗೇ ಹೋಗಿಸಿ, ಬೀದಿಗಳಲ್ಲಿ ತೋರಿಸ ಬಾರದು ಎಂಬ ಹುಕುಂ ಹೊರಡಿಸೋಣಾಗಿ ಪ್ರಕಟವಾಯಿತಂತೆ.

ಚೀನ ದೇಶದಲ್ಲಿ ಕ್ರೈಸ್ತಮತ ಸೇರಿದವರಿಗೆ ಇಲ್ಲಿ ಅಲ್ಲಿ ಧರ್ಮಾರ್ಥ ಹಿಂಸಾಗ್ನಿ ಹೊತ್ತಿ ಬರುತ್ತಿರುತ್ತದಂತೆ.

ಅಫ್ರಿಕ ದೇಶದ ದಕ್ಷಿಣಾಗ್ರದ ಕಡೆಯ ಪ್ರದೇಶದಲ್ಲ್ಯಾದರೂ ಮಹಮ್ಮದಿ ಮತಸ್ಥರು ಸುಮಾರು ೮೦೦೦ ಜನ ಇದ್ದಾರೆ. ಕಳೆದ ಇಸ್ವಿಯ ೩ ತಿಂಗಳೊಳಗೆ ಒಬ್ಬ ಮಿಶನೆರಿ ೬೦ ಜನರನ್ನು ಬೋಧಿಸಿ, ಸ್ನಾನ ಕೊಟ್ಟು, ಕ್ರೈಸ್ತ ಸಭೆಯಲ್ಲಿ ಸೇರಿಸಿ ಕೊಳ್ಳಲನುವಾಯಿತಂತೆ.

ರುಸ್ಯ ಸರಕಾರಕ್ಕೂ ತುರ್ಕ್ಯ ಸರಕಾರಕ್ಕೂ ಇತ್ತಲಾಗಿನ ದಿನಗಳಲ್ಲಿ ಹೆಚ್ಚಿನ ಗೊಡವೆ ಯಾವ ತರದ್ದಾದರೂ ಆಗಲಿಲ್ಲಾ. ಕೊನ್ಸ್ತಂತಿನೊಪೊಲಿಯಲ್ಲಿ ನೆರೆದಿದ್ದ ಆಲೋಚನಾಸಭೆ ಏನೂ ಬಾಯಿಗೊಳ್ಳದೆ ಹೋದ ಮಾತು ಕಡೇ ಪತ್ರದಲ್ಲಿ ತಿಳಿಸಲಾಯಿತು. ಸದರಿ ಸಭೆಯಲ್ಲಿ ಇಂಗ್ಲಂದ ದೇಶದ ರಾಯಭಾರಿ ಅಡ್ಡಗೋಡೇ ಮೇಲಿನ ದೀಪದಂತಾಗಿದ್ದದೇ ಆ ಸಭೆಯವರ ಹಂಚಿಕೆ ಎಲ್ಲಾ ನಿಷ್ಫಲವಾಗಿ ಹೋದ್ದಕ್ಕೆ ಮುಖ್ಯ ಕಾರಣವಾಯಿತಂತೆ. ಆ ಸಭೆಯಲ್ಲಿ ಬಹು ಯುಕ್ತಿಶಾಲಿಯಾಗಿ ತುರ್ಕರ ಸ್ವಾರ್ಥ ಸಾಧಿಸಿ ಕೊಳ್ಳುತ್ತಿದ್ದ ಅಂದಿನ ಪ್ರಧಾನ ವಜೀರನನ್ನು ಅವರು ಯಾತಕ್ಕೋ ಗಡಿ ದಾಟಸಿ ಬಿಟ್ಟು, ಅವನ ಉಪಕಾರಕ್ಕೆ ಪ್ರತ್ಯುಪಕಾರ ಮಾಡಿದರು. ತುರ್ಕ್ಯ ರಾಜ್ಯವು ಹ್ಯಾಗೂ ಕಡೆಗೆ ತನ್ನಷ್ಟಕ್ಕೆ ಒಂದು ಹಾಳು ಮನೆಯಂತೆ ಬಿದ್ದು ಹೋಗುವದು ಎಂಬುದು ಅನೇಕರ ಅಭಿಪ್ರಾಯವೇ. ರುಸ್ಯರು ಹಾಗೆಯೇ ತಿಳುಕೊಂಡು, ತುರ್ಕರಿಗೆ ಕತ್ತಿಮಾತನ್ನು ಕೊಡದೆ ಹೋಗಲಿಕ್ಕೆ ಸಾಕು.

ಕಳೆದ ಶತಮಾನದಲ್ಲಿ ಫ್ರೆಂಚ ದೇಶದಲ್ಲಿ ಸಾಯುವ ತನಕ ಕೈದಿಯವನಾಗ ತಕ್ಕ ಅಪರಾ

ಧಿಗೆ ನೂರು ಸಂವತ್ಸರ ಒಂದು ದಿನ ಕೈದಿಯಾಗತಕ್ಕದೆಂತ ಹೇಳಿ ತೀರ್ಪು ಕೊಡುವ ಮರ್ಯಾದೆಯಿತ್ತು. ೧೭೭೬ನೇ ಇಸ್ವಿಯಲ್ಲಿ ೧೬ ವರುಷ ಪ್ರಾಯದ ಒಬ್ಬ ಫ್ರೆಂಚ ಯೌವನಸ್ಥನು ಕೊಲೆಗಾಗಿಯೂ ಕಿಡಿಗೇಡಿತನಕ್ಕಾಗಿಯೂ ೧೦೦ ವರುಷ ಒಂದು ದಿನದ ಕಠಿಣ ಕೈದಿಗೆ ಬಿದ್ದನು. ಅವನು ಸುಮಾರು ವರುಷ ಕೈದಿಯಲ್ಲಿದ್ದು, ಏನೂ ತಂಟೆಗಿಂಟೆ ನಡಿಸದೆ, ಕೈದಿಯ ಕಾವಲುಗಾರರಿಗೂ ಪಾರುಪತ್ಯಗಾರರಿಗೂ ಮೆಚ್ಚಿಕೆಯಾಗಿ ನಡಕೊಳ್ಳುತ್ತಾ ಬರುವವನಾದ್ದರಿಂದ, ಅವರು ಅವನಿಗೆ ಮಾಫಾಗಿ ಬಿಡುಗಡೆಯಾಗುವಂತೆ ಶಿಫಾರಸ್ಸು ಮಾಡಿದರು. ಸರಕಾರದ ಕಡೆಯಿಂದ ಕ್ಷಮೆಯಾಗಿ, ಅವನಿಗೆ ಕೆಲವು ಸರ್ತಿ ಎದ್ದು ಊರಿಗೆ ಹೋಗ ಬಹುದೆಂತ ಅಪ್ಪಣೆಯಾಯಿತು; ಆದರೆ ಅವನು ತಾನು ೧೦೦ ವರುಷ ೧ ದಿನ ಕೈದಿಯನ್ನು ತಡೆದು, ಶಿಕ್ಷೆಯೆಲ್ಲಾ ತಿಂದು ಹೋಗಬೇಕೆಂದು ಛಲ ಹಿಡಿದು, ಕೈದಿಯನ್ನು ಬಿಡಲಿಕ್ಕೆ ಒಡಂಬಡಲಿಲ್ಲಾ. ಎರಡು ತಿಂಗಳಿನ ಹಿಂದೆ ಅವನ ಕೈದಿ ೧೦೦ ವರುಷ ೧ ದಿವಸ ಆಗಿ, ಅವನು ಬಿಡುಗಡೆಯಾಗಿ, ೧೧೬ ವರುಷದ ಮುದುಕನಾಗಿ, ೧೦೦ ವರುಷ ನೋಡದ ತನ್ನೂರಿಗೆ ತಿರಿಗಿ ಬಂದು ಶೇರಿದನಂತೆ.

ಒಟ್ಟಾರೆ ಅನವೃಷ್ಟಿ (ಅಂದರೆ ಮಳೆ ಬಾರದೆ ಹೋದ್ದು) ಅಲ್ಲಾ, ಮಳೆ ತಕ್ಕ ಮಟ್ಟಿನಲ್ಲಿ ಬಾರದೆ, ಒಂದಾನೊಂದು ಕಡೆಯಲ್ಲಿ ಜಾಸ್ತಿಯಾಗಿ, ಮತ್ತೊಂದು ಕಡೆಯಲ್ಲಿ ಸಾಲದ್ದಾಗಿ ಬಂದದೇ ಈಗಿನ ಬರಕ್ಕೆ ಮುಖ್ಯ ಕಾರಣವಂತೆ. ಅನ್ನಕ್ಕೆ ಬಹು ದುರ್ಭಿಕ್ಷೆಯಿರುವಾಗಲೇ ಕಲ್ಕತ್ತದಲ್ಲಿ ಒಂದು ಅಕಾಲ ಜೋರು ಮಳೆ ಬಂದು, ಬಂದರಗಳಲ್ಲಿ ಇಲ್ಲ್ಯಲ್ಲಿ ವ್ಯಾಪಾರಕ್ಕೆ ತಂಧಾಕಿದ್ದ ಅಕ್ಕಿರಾಶಿಯಾಗಿ ಕೆಡಿಸಿ ಬಿಟ್ಟಿತು. ಇದರಿಂದ ದೇವರು ತೋರಿಸಿದ್ದೇನಂದರೆ: ದವಸಗಳು ಬೆಳೆಯುವಂತೆ ಮಾತ್ರವಲ್ಲಾ, ಬೆಳದ್ದನ್ನು ತಿಂದು ಅನುಭೋಗಿಸಲಿಕ್ಕೂ ನಮಗೆ ದೇವಾನುಗ್ರಹವು ಬೇಕೇ ಬೇಕು. ದೇವರು ಒಲಿದು ಅನುಗ್ರಹಿಸದಿದ್ದರೆ, ಕೈಗೆ ಬಂದ ತುತ್ತಾದರೂ ಬಾಯಿಗಿಲ್ಲದೆ ಹೋಗ ಬಹುದು.

ಅಹ್ಮದಾಬಾದಿನಲ್ಲಿ ಕೋವಿ ಮದ್ದು ತುಂಬಿದ್ದ ಪೆಟ್ಟಿಗೆಗೆ ಬೆಂಕಿ ತಾಗಿ, ಆ ಮದ್ದು ಫಟ್ಟೆಂತ ಕಿಚ್ಚಾಗಿ ಹಾರಿ, ಪೆಟ್ಟಿಗೆಯಿದ್ದ ಅಂಗಡಿಯನ್ನು ದಶದಿಕ್ಕಿಗೆ ಹಾರಿಸಿ ಬಿಟ್ಟದರಿಂದ ೬೦ ಜನರಿಗೆ ಪ್ರಾಣಹಾನಿಯಾಯಿತಂತೆ.— "ಫಕ್ಕನಾಪತ್ಕಾಲವು ಬಂದರೇನು? ಹೇಳು!"

ದಕ್ಷಿಣ ಆಫ್ರಿಕದಲ್ಲಿಯ ತ್ರಂಸ್ವಾಲ ಎಂಬ ಪ್ರಜಾಧಿಪತ್ಯದವರಿಗೂ ನೆರೆಹೊರೆಯ ಕಾಫ್ರಿ ಜನರಿಗೂ ಲಡಾಯಿಯಾಗಿ ಹೋರಾಟ ನಡೆಯುತ್ತದೆ. ಸದ್ಯಕ್ಕೆ ತುರ್ಕ್ಯ ರಾಜ್ಯದಲ್ಲಿ ನಡೆಯುವ ಹೋರಾಟವನ್ನೇ ಕಣ್ಣು ಹೊಡದು ನೋಡುವ ವಿಲಾಯತಿಯ ಆಯಾ ರಾಜ್ಯಗಳವರಿಗೆ ಕಾಣದಂತೆ ಅಲ್ಲಿಯ ತಮ್ಮ ರಾಜ್ಯಸ್ವಾಸ್ಥ್ಯಕ್ಕೆ ಒಂದು ದೊಡ್ಡ ತುಕಡಿಯನ್ನು ಕೂಡಿಸಿ ಕೊಳ್ಳಲಿಕ್ಕೆ ಇಂಗ್ಲಿಷರಿಗೆ ಆ ಹೋರಾಟದ ದೆಶೆಯಿಂದ ವೈನವಾಗಲಿಕ್ಕೆ ಸಾಕು. ಇಂಗ್ಲಿಷರು ಮೀನು ಹಿಡಿಯಲಿಕ್ಕೆ ಕೂಡದ ನೀರು ಎಲ್ಲಿಯೂ ಹರಿಯದು. ಅವರು ಮಹಾ ಜಾಣರಂತೆ.

ಕ್ರಿಸ್ತ್ಯೇಸುವನ್ನೂ ಕ್ರೈಸ್ತಭಕ್ತರನ್ನೂ ಕ್ರೈಸ್ತವಿಶ್ವಾಸ ಆಚಾರಾದಿಗಳನ್ನೂ ತುಚ್ಛೀಕರಿಸಿ, ಜರಿದು ಬಿಟ್ಟ ತನ್ನ ಅವಿಶ್ವಾಸಭಾವವನ್ನು ಕಾಣಿಸಬೇಕೆಂತ ಬೆರ್ಲೀನ್ ಪಟ್ಣದಲ್ಲಿ ಒಬ್ಬ ಗೃಹಸ್ಥನು ಕಳದ ಕ್ರಿಸ್ತ್ಮಸ್ ದಿನಕ್ಕೆ (ಕ್ರಿಸ್ತವಾರಕ್ಕೆ) ತಾನು ಮನೆಯಲ್ಲಿ ಸಾಕುವ ಕಪಿಗೆ (ಮಂಗಕ್ಕೆ) ಒಂದು ಕ್ರಿಸ್ತ್ಮಸ್ ಗಿಡವನ್ನು ಒದಗಿಸಿ, ಸವರಿಸಿ ಕೊಟ್ಟನಂತೆ. ಆ ಗೃಹಸ್ಥನ ಕೋತಿಚೇಷ್ಟೆಯ ಸುದ್ದಿಯನ್ನು ತಿಳಿದು ಒಬ್ಬ ವರ್ತಮಾನ ಪತ್ರಕರ್ತನು ಅವನಿಗೆ ಒಂದು ಬಹು ವಾಜಿಬಿಯಾದ ಆಲೋಚನೆ ಹೇಳಿ ಕೊಟ್ಟನು; ಏನಂದರೆ: ತನ್ನ ಕೋತಿಚೇಷ್ಟೆಯನ್ನು ತುದಿಗೆ ಮುಟ್ಟಿಸಿ ಪೂರ್ತಿ ಮಾಡುವಂತೆ ಸದರಿ ಗೃಹಸ್ಥನು ಆ ಮಂಗವನ್ನು ತನ್ನ ದತ್ತಪುತ್ರನೆಂತ (ಸಾಕು ಮಗನೆಂತ) ಮಾಡಿ ಕೊಂಡರಾದೀತು.

Printed at the Basel Mission Press, Mangalore.

# ಕ್ರೈಸ್ತಸಭಾಪತ್ರ

ಪುಸ್ತಕ ೯. **APRIL 1877.** ಅಂಕೆ ೧೦.


**ಅಡಕವು:** ಕ್ರಿಸ್ತನ ಉತ್ಥಾನೋತ್ಸವಕ್ಕೆ—ಚಿನ್ನದ ಹರಳುಗಳು—ಒಂದು ನೆರೆ—ಉತ್ತರಗಳು—ಹೊಸ ಪ್ರಶ್ನೆಗಳು—ವಿವಿಧ ವರ್ತಮಾನಗಳು.

## ಕ್ರಿಸ್ತನ ಉತ್ಥಾನೋತ್ಸವಕ್ಕೆ.

ಮಾರ್ಕ. ೧೬, ೧—೮.

ಎದ್ದನು! ಯೇಸು ಎದ್ದಿದ್ದಾನೆ! ಎಂಬುವ ಮಾತು ಉತ್ಥಾನೋತ್ಸವವೃತ್ತಾಂತಗಳ ಸಾರವೇ ಆಗಿದೆ. ಸದರಿ ಮಾತನ್ನು ಮೊದಲು ಸಾರಿ ಹೇಳಿದ್ದು ದೇವದೂತನೇ. ಯೇಸುವಿನ ಸಮಾಧಿಯ ಬಳಿಗೆ ಬಂದ ಸ್ತ್ರೀಯರಿಗೆ ಬಂದ ದಾರಿಯಲ್ಲಿ ನಂಬದೆಯೂ ಊಹೆಯನ್ನಾದರೂ ಮಾಡದೆಯೂ ಇದ್ದದನ್ನು ಅವರು ತಿಳಿದು, ದುಃಖಪರಿಹಾರವನ್ನು ಹೊಂದಿ, ಸಂತೋಷಭರಿತರಾಗ ಬೇಕೆಂದು ಅವನು ಖಾಲಿಯಾದ ಸಮಾಧಿಯನ್ನು ತೋರಿಸಿ ಹೇಳಿದ್ದು. ನಾವು ಸಹ "**ಯೇಸು ಎದ್ದಿದ್ದಾನೆ**" ಎಂಬ ಮಹಾ ಶುಭವಾರ್ತೆಯಲ್ಲಿಯ ಕೇವಲ ಆನಂದ ದ್ರವ್ಯವಾಗಿರುವಂಥ ಹುರುಳನ್ನು ಲಾಭ ಮಾಡಿ ಕೊಳ್ಳ ಬೇಕೆಂಬ ಮನಸ್ಸುಳ್ಳವರಾಗಿ,

**ಯೇಸು ಎದ್ದು ಬದುಕುತ್ತಿದ್ದಾನೆ** ಎಂಬ ಉತ್ಥಾನೋತ್ಸವವಾರ್ತೆಯನ್ನು ಲಕ್ಷ್ಯಕ್ಕೆ ತಂದು ಕೊಂಡು,—ಮೊದಲು ಎದ್ದ ಯೇಸುವಿನ ಜೀವದ್ರವ್ಯವನ್ನು ಬಳಿಕ ನಾವು ಸಹ ಅದರಲ್ಲಿ ಪಾಲುಗಾರರಾಗುವದು ಹ್ಯಾಗೆ? ಎಂಬ ಮಾತನ್ನು ಪರಾಂಬರಿಸಿ ನೋಡೋಣಾ!

೧. ಎದ್ದ ಯೇಸುವಿನ ಜೀವದ್ರವ್ಯವನ್ನು ನೋಡುವವನಿಗೆ ಅದು ಕೇವಲ **ಅಜಿತವೂ ಮಹಾ ಜಯಪ್ರದವೂ** ಆದ ಜೀವವೆಂತ ಕಾಣುವದು. ನವಜೀವೋದ್ಭವದ ಉದ್ದಿಶ್ಯಾರ್ಥವಾಗಿ ಅಂದರೆ ಹೊಸ ಜೀವವನ್ನು ಘಳಿಸಿ, ತಂದು ಕೊಡ ಬೇಕೆಂದು ಯೇಸು ತನ್ನನ್ನು ಮರಣಕ್ಕೆ ಒಪ್ಪಿಸಿ ಕೊಂಡು, ಸಾವನ್ನು ತಾಳಿದನು. ಯೇಸು ಶ್ರಮೆಗಳನ್ನೂ ಮರಣವನ್ನೂ ತಾಳಿ ಕೊಂಡ ಉದ್ದಿಶ್ಯವು ಸಾಧಿಸೋಣಾಗಿ, ಆತನು ಪರಿಪೂರ್ಣ ಫಲಸಿದ್ಧಿ ಪಡಕೊಂಡನೆಂಬದಕ್ಕೆ ಆತನ ಉತ್ಥಾನವು ಮುದ್ರೆಯಂತಾಯಿತು. ಪಾಪದ ಫಲವೂ ಪಾಪಕ್ಕೆ ದಂಡವೂ ಆಗಿರುವ ಮರಣವನ್ನು ತಾಳಿ, ಗೆದ್ದು, ಮೃತ್ಯುಂಜಯನಾಗಿ, ಸುವಾರ್ತೆಯಲ್ಲಿ ಜೀವವನ್ನು, ಅಂದರೆ ಶಾಶ್ವತ ಜೀವವನ್ನು, ಅಮರತ್ವವನ್ನು ತಂದು ಕೊಟ್ಟಿರುತ್ತಾನೆ. ಮೃತ್ಯುವನ್ನು ತನ್ನಲ್ಲಿಯೇ ಗೆದ್ದು, ಅಳಿಸಿ, ಮೃತ್ಯುವಿನದೇನೂ ಇನ್ನು ಉಳಿಯದ ಹಾಗೆ ಮಾಡಿ, ತೆಗೆಧಾಕಿ ಬಿಟ್ಟನು. ಮರಣದ ಅಧಿಕಾರವಿದ್ದ ಪಿಶಾಚನನ್ನೂ ಗೆದ್ದು,

ಅವನು ಶೆರೆ ಹಿಡಿದಿದ್ದ ಪಾಪಿಗಳನ್ನು (ಮರಣಸ್ಥರನ್ನು) ಬಿಡಿಸಿದನು. ಯೇಸು ಶ್ರಮೆಗಳನ್ನು ಪಟ್ಟು, ಮರಣ ತಾಳಿ ಕೊಂಡದರಲ್ಲಿ ಏನೇನು ಸಾಧಿಸಿ ಕೊಂಡು, ತೀರಿಸಿ ಬಿಟ್ಟನೆಂಬದು ಆತನ ಉತ್ಥಾನದಲ್ಲಿ ಪ್ರತ್ಯಕ್ಷವಾಯಿತು. ಆತನ ಉತ್ಥಾನವೇ ವಿಶ್ವಾಸಕ್ಕೆ ಆಸ್ಪದವಾಯಿತು. ಆತನು ಉತ್ಥಾನವಾಗದೆ ಹೋದ್ದಾದರೆ, ನಾವು ರಕ್ಷಣ್ಯವಿಲ್ಲದೆ ನಮ್ಮ ಪಾಪಗಳಲ್ಲಿ ಗತಿಗೆಟ್ಟು ಹೋಗ ಬೇಕಿತ್ತು. ನಾವೂ ಸರ್ವರೂ ಆ ಸ್ತ್ರೀಯರ ಕೂಡ ಯೇಸುವಿನ ಸಮಾಧಿಯ ಬಳಿಗೆ ಹೋಗಿ ಬಂದದಾದರೆ, ಯೇಸು ಎಲ್ಲವರ ಪಾಪ ಹೊತ್ತು ಕೊಂಡು ನಿವಾರಿಸಿ ಬಿಟ್ಟನೆಂಬದು ನಮ್ಮೆಲ್ಲರಿಗೆ ರುಜುವಾಗ ಬಹುದಿತ್ತು. ನಾವು ಈಗ ನೋಡಿ ಅಲ್ಲಾ, ಕೇಳಿ, ಆತನು ಎದ್ದಿದ್ದಾನೆಂತ ನಂಬಿದರೆ, ನಮಗೆ ಅದು ನಿಸ್ಸಂದೇಹ ವಾಗಿ ಖಚಿತವಾಗ ಬಹುದು. ಮರಣದಲ್ಲಿ ಲೋಕದ ಪಾಪವನ್ನು ಹೊತ್ತು ಕೊಂಡು ಹೋದ ದೇವರ ಕುರಿಮರಿಯೂ ಉತ್ಥಾನದಲ್ಲಿ ಜಯಗೊಂಡ ಯೆಹೂದ ಕುಲದ ಸಿಂಹನೂ ಆಗಿ, ಯೇಸು ಸಂಕೀರ್ತ್ಯ ಸಂಸ್ತುತ್ಯ ಜೀವದಧಿಪತಿಯಾಗಿದ್ದಾನೆ. "ಕೊಲ್ಲಲ್ಪಟ್ಟ (ದಿವ್ಯ) ಕುರಿಮರಿ ಬಲ, ಐಶ್ವರ್ಯ, ಜ್ಞಾನ, ಶಕ್ತಿ, ಘನ, ಮಹಿಮೆ, ಸ್ತೋತ್ರಗಳನ್ನು ಹೊಂದ ಯೋಗ್ಯವಾಗಿದೆ!"

ಯೇಸುವಿನ ಜೀವದಲ್ಲಿ ಇನ್ನೊಂದು ಬಹಳ ವಿಶೇಷವಾದ ಲಕ್ಷಣ ಕಾಣುವಂಥಾದ್ದು, ಏನಂದರೆ: ಅದು **ಆತ್ಮಭಾವದ್ದೇ** ಆಗಿರುತ್ತದೆ, ಅಂದರೆ ಯೇಸುವಿನ ಜೀವವೆಂಬ ದ್ರವ್ಯ **ಆತ್ಮನೇ, ಆತ್ಮಸ್ವರೂಪವೇ** ಆಗಿರುವಂಥಾದ್ದು. ಯೇಸುವಿನ ಜೀವದ ಈ ಗುಣವಿಶೇಷವನ್ನು ಗ್ರಹಿಸಿ ಕೊಳ್ಳಲಿಕ್ಕೆ ಚನ್ನಾಗಿ ಕೂಡದ ಹೆಡ್ಡತನ ಮನುಷ್ಯರಲ್ಲಿ ಸಾಧಾರಣವದೆ. ಭೂಸಂಚಾರ ಮಾಡುತ್ತಿದ್ದ ದಿನಗಳಲ್ಲಿ ಯೇಸು ಮನುಷ್ಯನಾಗಿ, ಅಸ್ಥಿಚರ್ಮರಕ್ತಮಾಂಸಮಯವಾದಂಥಾ, ನಶ್ವರ ಘಟದೋಪಾದಿಯಾಗಿದ್ದಂಥಾ ದೇಹವಿದ್ದವನಾಗಿ, "ದೇಹಿಗಳ ಅಂದದಲ್ಲಿ" ಬಲಹೀನನಾಗಿದ್ದನು. ಆದರೆ ಉತ್ಥಾನದಲ್ಲಿ ಭೌಮಿಕ ದೇಹಲಕ್ಷಣಗಳು ಹೋಗಿ, ಆತನ ದೇಹವಿನ್ನು ರಕ್ತ ಮಾಂಸ ಅಸ್ಥಿ ಚರ್ಮಮಯವಾಗಿರದೆ, ಆತ್ಮಮಯವೇ ಆಗಿ ಹೋಯಿತು; ಭೌಮಿಕ ತತ್ವ ಆತ್ಮತತ್ವವಾಯಿತು; ದೈಹಿಕ ರೂಪಲಕ್ಷಣಗಳು ದಿವ್ಯಸ್ವರೂಪವಾದವು. ಹೀಗಾಗಿ ಯೇಸು ಎದ್ದ ಮೇಲೆ ಬೀಗವೂ ಕೀಲೂ ಹಾಕಿ, ಮುಚ್ಚಿ ಇದ್ದ ಬಾಗಲಲ್ಲಿ ಪ್ರವೇಶಿಸ ಬಹುದಾಯಿತು. ಆತನ ದೇಹ ಸೂಕ್ಷ್ಮರೂಪವಾಗಿ, ಜ್ಯೋತಿಃ ಸ್ವರೂಪನಾದನು. ಆದರೆ ಹೀಗೆ ರೂಪಾಂತರವಾದ ದೇಹವು ಶಿಲುಬೆಯಲ್ಲಿ ತೂಗಿದ್ದದೇ, ಬೇರೊಂದಲ್ಲಾ. ಆದ್ದರಿಂದ "ಮೊದಲನೇ ಮನುಷ್ಯನಾದ ಆದಮನು ಬದುಕುವ ಪ್ರಾಣನಾದನು; ಕಡೇ ಆದಮನು (ಯೇಸು) ಬದುಕಿಸುವ ಆತ್ಮನಾದನು" ಎಂತ ಹೇಳಲಿಕ್ಕಾಯಿತು. "ಅಮೃತತನು" ಅಂದರೆ **ಅಮೃತವೇ** ಆಗಿರುವ ದೇಹವೆಂತ ಎದ್ದ ಯೇಸುವಿನ ದೇಹಕ್ಕೆ ಹೇಳ ತಕ್ಕದ್ದು.

ಅಂಥಾ ಆತ್ಮಿಕ ಜೀವವು **ಬಲವುಳ್ಳ ಶಕ್ತಿಮಯ** ಜೀವ ಸಹ ಆಗಿದೆ, ಯಾಕಂದರೆ ಆತ್ಮಸ್ವರೂಪವಾದ್ದು ಬಲಪೂರ್ಣವಾದ್ದೂ ಶಕ್ತಿಮಯವಾದ್ದೂ ಆಗಿರುತ್ತದೆ. ಬಲಹೀನನಾಗಿ ಯೇಸು ಕ್ರೂಜೆಯಲ್ಲಿ ಮೃತಿ ಹೊಂದಿದನು; ಆದರೆ ಈಗ ದಿವ್ಯ ಬಲದಲ್ಲಿ ಬದುಕುತ್ತಿದ್ದಾನೆ. ಆತನ ಈಗಿನ ಶಕ್ತಿ ಸರ್ವವ್ಯಾಪಕವಾಗಿ, ಸರ್ವತ್ರ ಯತ್ನೈಸ ತಕ್ಕಂಥಾದ್ದೇ. ಆತನಿಗೆ ಸೋತು ಹೋಗದ್ದು, ಎದುರಿಸಿ ನಿಲ್ಲಲಿಕ್ಕೆ ಶಕ್ತವಾದ್ದೂ ಏನೊಂದಾದರೂ ಇಲ್ಲವೇ ಇಲ್ಲಾ. ಜೀವದಧಿಪತಿಯಾಗಿ ಅಖಿಲಾಂಡವನ್ನು ತನ್ನ ಕೈಕೆಳಗೆ ಮಾಡಿ ಕೊಳ್ಳ ಶಕ್ತನಾಗಿದ್ದಾನೆ. "ಪಾತಾಳ ಮರಣಗಳ ಬೀಗದ ಕೈಗಳು" ಆತನ ರಾಜಹಸ್ತದಲ್ಲಿದ್ದಾವೆ, ಅಂದರೆ ಭೂಲೋಕಕ್ಕೂ ಭೂಲೋಕದ ವಿಶಿಷ್ಟ ಸ್ಥಿತಿಗಳಿಗೂ ಕಾರ್ಯಗಳಿಗೂ ಮಾತ್ರವಲ್ಲಾ, ಪಾತಾಳಲೋಕಕ್ಕೂ ಪಾತಾಳ ಮೊದಲಾದ ಪರಲೋಕಗಳ ಸ್ಥಿತಿಗಳಿಗೂ ಕಾರ್ಯಗಳಿಗೂ ಆತನು ಕರ್ತನೂ ನಾಯಕನೂ ಆಗಿದ್ದಾನೆ. "ಸರ್ವೇಶನಾತನು!" ತನ್ನಲ್ಲಿ ನಂಬುವವರಿಗೆ ನಿತ್ಯಜೀವವನ್ನು ಕೊಡೋ ಅಧಿಕಾರವಾದರೂ ಆತನಿಗುಂಟು. **ನಿತ್ಯಜೀವ, ಶಾಶ್ವತ**

ಜೀವ ಸಹ ಆಗಿರುವ ತನ್ನ ಜೀವದ ಪರಿಪೂರ್ತಿಯಿಂದ ಕೊಡುತ್ತಿದ್ದಾನೆ; ಶಾಶ್ವತ ಜೀವದ ಬುಗ್ಗೆಯೇ ಆಗಿರುತ್ತಾನೆ. ಮರಣವು ಆತನಿಗೆ ಎಷ್ಟು ಮಾತ್ರವು ಇನ್ನು ಮುಟ್ಟದು. ಇನ್ನು ಮುಂದೆಯೂ ನಮಗೋಸ್ಕರ ವಿಜ್ಞಾಪನೆ ಮಾಡಿ, ರಕ್ಷಾಕಾರ್ಯವನ್ನು ಸಾಗಿಸಿ, ಸಂಪೂರ್ಣ ಮಾಡುವ ಹಾಗೆ ಸದಾಕಾಲ ಬದುಕುತ್ತಿದ್ದಾನೆ.

೨. ಆದರೆ ಆತನಲ್ಲಿ ಸಂಚಿತವಾಗಿರುವ ಜೀವದ್ರವ್ಯಾದಿಗಳು ನಮಗೆ ಪ್ರಾಪ್ತಿಯಾಗುವ ವಿಚಾರವು ಹ್ಯಾಗೆ? ಯೇಸುವಿನಲ್ಲಿದ್ದದು ನಮಗೆ ಅವಶ್ಯವಾಗಿ ದೊರಕಿ, ನಾವು ಸಹ ಬದುಕ ಬೇಕಲ್ಲಾ! ನಾವು ಬದುಕ ಬೇಕೆಂತ ಆತನು ನಮಗೋಸ್ಕರ ಮರಣ ತಾಳಿ ಕೊಂಡನಲ್ಲಾ! ನಾವು ಆತನಲ್ಲಿಯ ಜೀವದ್ರವ್ಯವೇನೂ ಹೊಂದದಿದ್ದರೆ, ಆತನು ಲೋಕಕ್ಕೆ ಅವತರಿಸಿ ಕೊಂಡು ಬಂದದೂ ಮರಣ ತಾಳಿದದೂ ಸಮಾಧಿಯಿಂದ ಎದ್ದದೂ ನಮ್ಮ ಹೆಸರಿಗೆ ತಾಗುವಷ್ಟಕ್ಕೆ ವ್ಯರ್ಥವಾದಂತಾದೀತು. ಆತನ ಮಹಿಮೆಯುಳ್ಳ ಜೀವದ್ರವ್ಯದಲ್ಲಿ ನಾವು ಪಾಲುಗಾರರಾಗದೆ ಹೋದರೆ, ನಾವು ಆಗಿದ್ದದೇ ಆಗಿದ್ದೇವು, ಏನಂದರೆ: ಗತಿಗೆಟ್ಟ ಪಾಪಿಗಳೇ. ಕ್ರಿಸ್ತನಲ್ಲಿ ನಾವು ಅತ್ಯವಶ್ಯವಾಗಿ ಪಾಲುಗಾರರಾಗ ಬೇಕು. ಇದು ಹ್ಯಾಗಾಗ ಬಹುದು? ಅಂದರೆ: ಆತನಲ್ಲಿ ನಾವು ವಿಶ್ವಾಸವಿಟ್ಟು, ಆತನನ್ನು ಎಳ ಮಾಡಿದ ಜೀವಶಕ್ತಿ ನಮ್ಮನ್ನು ವ್ಯಾಪಿಸಿ ಹೋಗುವದರಲ್ಲಿ ಆಗುವದು. ಹೀಗಿರಲಾಗಿ ವಿಶ್ವಾಸವೆಂಬದು ಮಹಾ ದೊಡ್ಡದಾದ್ದೇ. ಅದು ಶಾಶ್ವತ ಜೀವಶಕ್ತಿಯನ್ನು ತನ್ನ ಕಡೆಗೆ ಎಳಕೊಳ್ಳುವಂಥಾದ್ದು. ಯೇಸುವಿನ ಜೀವಶಕ್ತಿವ್ಯಾಪ್ತರಾದವರು ಮರಣದಿಂದ ಎದ್ದವರೂ, ಕ್ರಿಸ್ತನ ಕೂಡ ಎದ್ದವರೂ ಆಗಿದ್ದಾರೆ. ಅವರಲ್ಲಿ ಸಹ ಯಾವದಕ್ಕೂ ಸೋತು ಹೋಗದ ಜಯಪ್ರದವಾದ ಜೀವವುಂಟು. ತಮ್ಮಲ್ಲಿಯ ಹಾಗೂ ಲೋಕದಲ್ಲಿಯ ಪಾಪವನ್ನೂ, ಲೋಕವನ್ನೂ, ಪಿಶಾಚನನ್ನೂ, ಮರಣ ನರಕಗಳನ್ನೂ ಜಯಿಸುವವರಾಗುತ್ತಾರೆ. ಆದ್ದರಿಂದ ಅವರು ಎಲ್ಲಾದರಲ್ಲಿ ಅಧಿಕ ಜಯಶಾಲಿಗಳಾಗಿ, ಕ್ರಿಸ್ತನ ಮುಖಾಂತರ ಜಯ ಕೊಡುವ ದೇವರನ್ನು ಕೀರ್ತಿಸಿ, ಹರ್ಷಿಸಿ, ಸದಾ ಸಾನಂದರಾಗಿರ ಬಹುದು. ಕ್ರಿಸ್ತನಲ್ಲಿ ಪಾಲುಗಾರರಾದವರಿಗೆ ಬಲವಾದ ಆತ್ಮಿಕ ಜೀವ ಸಹ ಉಂಟು. ಮೃತ್ಯುವಿನ ಶೆರೆಗೆ ತಪ್ಪಿಸಿ ಕೊಂಡು, ಜೀವದಧಿಪತಿಯ ಶರಣಾಗತರಲ್ಲಿ ಮೃತ್ಯುವಿನ ವ್ಯಾಪ್ತಿ ಏನೂ ಇರದೆ, ಜೀವದ ವ್ಯಾಪ್ತಿ ಮಾತ್ರ ಇರುವದು. ದೇವರ ಬಲದಿಂದ ಅವರು ಬದುಕುವವರು. ಚಿಪ್ಪಿನಲ್ಲಿ ಮುತ್ತು ಹ್ಯಾಗೋ ಹಾಗೆ ಕ್ರಿಸ್ತನಲ್ಲಿಯು ಅವರ ಜೀವ ಅವರಲ್ಲಿ ಅಡಗಿದ್ದಾಗಿ, ಲೋಕಕ್ಕೆ ಕಾಣದಿದ್ದರೂ, ಅವರಲ್ಲಿದ್ದದು ಉಂಟೇ ಉಂಟು. ವಸಂತಕಾಲ ಬರಲು ಬೀಜಗಳ ಚಿಪ್ಪಗಳೂ ತೊಗಲುಗಳೂ ಬಿರಿದು, ಸುಲಿದು ಹೋಗಿ, ಒಳಗೆ ಅಡಗಿದ್ದ ಜೀವಬಲವು ಮೊಳಿಕೆಯಲ್ಲಿ ನವೀನ ರೂಪವಾಗಿ ಕಂಡು ಬರುವಂತೆ, ಅವರ ಉತ್ಥಾನದಲ್ಲಿ ಸಹ ಅವರಲ್ಲಿ ಅಡಗಿದ್ದ ಜೀವ ಮಹಿಮೆಯುಳ್ಳದಾಗಿ ಬೈಲಾಗಿ ಕಾಣ ಬರುವದು.

ಯೇಸುವಿನ ಉತ್ಥಾನದ ಸಂಗತಿ ಮಹಾ ಸಂತೋಷದ್ದೂ ಮಹತ್ತಾದ್ದೂ ಅಲ್ಲವೋ? ಎದ್ದ ಕ್ರಿಸ್ತನಲ್ಲಿ ನಮಗೆ ಸಿದ್ಧವಾಗಿರುವಂಥಾದ್ದು ಕಣ್ಣಿಗೆ ಕಾಣದ್ದರಿಂದ, ಅದು ಎಷ್ಟು ಮಹತ್ತೆಂತ ಕಾಣದು. "ಲೋಕವು ನನ್ನನ್ನು ಕಾಣದು" ಎಂತ ಯೇಸು ಹೇಳಿದ್ದಾನೆ. ಆದರೆ ನಾವು ನಂಬಿದರೆ, ನಮಗೆ ಮಹತ್ತು ಕಾಣುವದು. ನಂಬಿರಿ! ಕ್ರಿಸ್ತನಲ್ಲಿ ವಿಶ್ವಾಸವಿಡಿರಿ! ಅಂಥಾ ಜೀವದಧಿಪತಿಯಲ್ಲಿ ವಿಶ್ವಾಸವಿಡ ಬಹುದೆಂಬ ಮಾತಿಗೆ ಸಂತೋಷ, ಮಹಾ ಸಂತೋಷ ಪಟ್ಟು, ವಿಶ್ವಾಸವಿಡಿರಿ! ವಿಶ್ವಾಸವಿಟ್ಟು, ಕ್ರಿಸ್ತನ ಶಕ್ತಿಗೆ, ಕ್ರಿಸ್ತನ ಜೀವವ್ಯಾಪ್ತಿಗೆ ಇಂಬು ಕೊಡಿರಿ! ಯೇಸುವಿನ ಮಹಿಮೆಯನ್ನು ನೋಡುವಿರಿ. ಅದನ್ನು ನೋಡಿ, ಆತನನ್ನು ಕೀರ್ತಿಸಿ, ಹರ್ಷಿಸಿ, ಸದಾ ಸಾನಂದರಾಗಿ ಬದುಕುವಿರಿ. ತಥಾಸ್ತು!

---

## ಚಿನ್ನದ ಹರಳುಗಳು.

೧. ಬಿಸಲಿಗೆ ಬಿದ್ದು, ಬಿಳ್ಪೇರಿ, ಕೇವಲ ಮಾಂಸಹೀನವಾಗಿ ಇದ್ದ ದೊಡ್ಡದೊಂದು ಎಲುಬನ್ನು ಒಂದು ನಾಯಿ ಬಾಯಿಯಲ್ಲಿ ಕಚ್ಚಿ ಕೊಂಡು, ತಾನು ಮಹಾ ಲಾಭ ಹೊಂದಿದ್ದು ಎಂಬ ಹಾಗೆ ತಲೆ ಮೇಲೆ ಮಾಡಿ ಕೊಂಡು ಹೋಗುವದನ್ನು ಮೊನ್ನೆ ದಿನದಲ್ಲಿ ಕಂಡೆನು. ದೊಡ್ಡ ಲಾಭದ ಸಂತೋಷಕ್ಕೆ ಒಂದು ಭಯ ಸಹ ಆ ನಾಯಿಯಲ್ಲಿ ಬೆರಿಕೆಯಾಗಿತ್ತು; ಏನು ಭಯವಂದರೆ: ಬೇರೆ ನಾಯಿ ಕಂಡರೆ, ಅದು ತನ್ನ ಎಲುಬನ್ನು ಕಸಕೊಂಡು ಹೋಗಲಿಕ್ಕೆ ಸಾಕು ಎಂಬದೇ. ಈ ಪ್ರಕಾರ ಸಂತೋಷವೂ ಭಯವೂ ಹಿಡಿದಿದ್ದ ನಾಯಿ ಆ ಎಲುಬನ್ನು ಆದಷ್ಟು ಬಿಮ್ಮಗೆ ಕಚ್ಚಿ ಕೊಂಡು, ಏಕಾಂತಕ್ಕೆ ಓಡಿ ಹೋಯಿತು. ಆದರೆ ಕಡೆಗೆ—ನಾನು ಕೂತು, ತಿನ್ನಲಿಕ್ಕೆ ತಕ್ಕ ಜಾಗವಿದು ಎಂತ ಆ ನಾಯಿ ಕೂತು, ಎಲುಬನ್ನು ಕಚ್ಚಿ, ಕಚ್ಚಿ, ತಿನ್ನಲಿಕ್ಕೆ ನೋಡಿದಲ್ಲಿ ಮಾಂಸಹೀನ ಒಣ ದೊಡ್ಡ ಎಲುಬಿನಲ್ಲಿ ನಾಯಿಗೆ ಏನು ಶಿಕ್ಕಿದ್ದೀತು? ಕಚ್ಚಿ, ಕಚ್ಚಿ, ದವಡೆಗಳೆರಡನ್ನು ದಣಿಸಿ ಕೊಳ್ಳಲಿಕ್ಕಲ್ಲದೆ, ಹೆಚ್ಚಿನ ಪ್ರಯೋಜನಕ್ಕೇನೂ ಆಸ್ಪದವಾಗಲಿಲ್ಲಾ.—ಪ್ರಪಂಚವನ್ನು ತಮ್ಮಿಷ್ಟಾರ್ಥವೆಂತ ಮಾಡಿ ಕೊಂಡು, ಹಿಡುಕೊಂಡಿರುವ ಪ್ರಪಂಚಾಸಕ್ತರು ಆ ನಾಯಿಗೆ ಸಮಾನರೇ. ಪ್ರಪಂಚದಲ್ಲಿ ಅವರಿಗೆ ಎಷ್ಟೋ ಲಾಭವೂ ಸಂತೋಷವೂ ಆದರೂ, ಚಿಂತೆಯೂ ಭಯವೂ ತಪ್ಪೋದಿಲ್ಲಾ. ಮತ್ತು ಕಡೆಗೆ ಲಾಭ ಮಾಡಿ ಕೊಂಡದನ್ನು ತಿನ್ನಲಿಕ್ಕೆ ನೋಡಿದರೆ, ಏನೂ ಹುರುಳು ಶಿಕ್ಕದು. ಅವರು ಸುಮ್ಮನೆ ದಣಿಸಿ ಕೊಂಡ ಮೇಲೆ ಒಣ ಎಲುಬನ್ನು ಬಿಟ್ಟು, ಬರೀ ಕೈಯಾಗಿಯೂ ಖಾಲಿ ಹೊಟ್ಟೆಯಾಗಿಯೂ ಹೋಗ ಬೇಕು. ಹೌದಲ್ಲವೋ? ಓದುವವರೇ! ಈ ನಾಯಿಯ ಸಾಮ್ಯವನ್ನು ಮರೆತು ಬಿಡದೆ, ಸಂತೃಪ್ತಿಗೂ ಶಾಶ್ವತ ಪದವಿಗೂ ಶೇರುವ ಮಾರ್ಗವನ್ನು ಹಿಡಿದು, ಒಳ್ಳೇ ಪರಮಾರ್ಥಿಗಳಾಗಿರಿ!

೨. ವಿಸ್ತಾರವಾದ (ಲೋಕರಾಜ) ಮಾರ್ಗದಲ್ಲಿ ನಡೆಯದೆ, ಚಿಕ್ಕ ಬಾಗಲನ್ನು ಶೇರಿ, ಇಕ್ಕಟ್ಟಾದ ದಾರಿಯಲ್ಲಿ ಇದ್ದರೂ, ಶಾಶ್ವತ ಜೀವ ಪಡ ಕೊಳ್ಳಲಿಕ್ಕೆ ಸಾಲದು: ಸೀನಾಯಿ ಪರ್ವತವನ್ನು ಹಾದು ಹೋಗಿ, ಗೊಲ್ಗಥಾದ್ರಿಯನ್ನು ಹತ್ತಿ, ದಾಟಿ, (ಮೇಲಿನ) ಯೆರೂಸಲೇಮು ನಗರವನ್ನು ಶೇರ ಬೇಕು. ಗಲಾತ್ಯ. ೪, ೨೧—೨೬.

೩. ಕುದ್ರೆಮುಖವೆಂಬ ಪರ್ವತದ ಶಿಖರದಲ್ಲಿ ನಿಂತು ಕೊಂಡು, ತುಳು ಶೀಮೆಯನ್ನು ನೋಡುವವನಿಗೆ ಅದೊಂದು ದೊಡ್ಡ ರಮ್ಯ ಮೈದಾನೋ? ಕೇವಲ ಸಮಭೂಮಿಯಲ್ಲಿಯ ಮಹಾ ಸುಂದರ ರಾಜವನವೋ? ಎಂತ ಶೋಭಿಸಿ ಕಾಣುವದು. ಆದರೆ ಆ ಶಿಖರದಿಂದಿಳಿದು, ಪಶ್ಚಿಮ ದಿಕ್ಕು ಹಿಡಿದು, ನಡದು, ತುಳು ಶೀಮೆಯನ್ನು ದಾಟಿ, ಮಂಗಳೂರಿಗೆ ಮುಟ್ಟ ಬೇಕಾದರೆ, ತಗ್ಗು ಮುಗ್ಗು, ದಿನ್ನೆ ಗಿನ್ನೆ, ಕಾಡು ತೋಡು, ಕಲ್ಲು ಮುಳ್ಳು ಮೊದಲಾದ ಅಡ್ಡಿಸಡ್ಡಿಗಳು ಮನಸ್ಸಿದ್ದಂತೆ ನೆಟ್ಟಗೆನೇ ನಡೆದು, ಮಂಗಳೂರಿಗೆ ಮುಟ್ಟಲಿಕ್ಕೆ ಕೂಡದಷ್ಟು ಬಹಳವೆಂತ ಕಂಡು ಬಂದೀತು. ಪಕ್ಷಿಯಾದರೆ ಸದರಿ ಅಡ್ಡಿಸಡ್ಡಿಗಳೆಲ್ಲವನ್ನು ಲಕ್ಷಿಸದೆ, ನೆಟ್ಟಗೆನೇ ಆ ಶಿಖರದಿಂದ ಮಂಗಳೂರಿಗೆ ಹಾರಿ ಮುಟ್ಟಲಿಕ್ಕೆ ಅಡ್ಡಿಯಿಲ್ಲಾ. ತದೋಪಾದಿಯಲ್ಲಿ ಯಾರಾದರೂ ತತ್ವಜ್ಞಾನವೆಂಬ ಪರ್ವತಶಿಖರದಲ್ಲಾಗಲಿ, ಸನ್ಯಾಸವೈರಾಗ್ಯವೆಂಬ ಅದ್ರಿಯಲ್ಲಾಗಲಿ ನಿಂತು ಕೊಂಡು, ಈ ಪ್ರಪಂಚವೆಂಬ ತಗ್ಗನ್ನು ನೋಡಿ, ನೆಟ್ಟಗೆ, ಅಡ್ಡಿಸಡ್ಡಿಯಾಗದೆ, ದಾಟಿ ಹೋದೇನೆಂತ ಬಗೆದು, ಹಾಗೆ ದಾಟಿ ಹೋಗಲಿಕ್ಕೆ ಹತ್ತಿದರೂ, ಆಗದ ಹೋಗದ ಕಾರ್ಯ ಬಗೆದವನ ಸಾಧನೆ ಎಲ್ಲಾ ವ್ಯರ್ಥವಾದೀತು. ಪಕ್ಷಿಯಂತೆ ದ್ಯುಚರನಾದವನು, ಅಂದರೆ ಮೇಲಿನಿಂದ, ದೇವರಿಂದ ಹುಟ್ಟಿ, ಕ್ರಿಸ್ತ್ಯೇಸುವಿನಲ್ಲಿ ಪರಮಾರ್ಥ ಸಾಧನೆ ಮಾಡು

ವಂಥವನು ಮಾತ್ರ ಲೋಕವನ್ನು ಜಯಿಸಿ, ಅಡ್ಡಿ ಸಡ್ಡಿ ಇಲ್ಲದೆ ದಾಟಿ, ಪರಮಾನಂದಸಾಗರವಾದ ದಿವ್ಯ ಮಂಗಳ ಊರನ್ನು ಶೇರ ಬಹುದು.

---

## ಒಂದು ನೆರೆ.

(೧೦೮ನೇ ಪುಟದಿಂದ ಮುಂದೆ.)

ಪ್ರತ್ಯುತ್ತರವಾಗಿ ತಾಯಿ—“ದೇವರಿಗೆ ಕಾಣದೆ ತಿಳಿಯದೆ ಹೋಗುವಂಥಾದ್ದು ಒಂದೂ ಇಲ್ಲಾ; ತಾಳಿಕೋ! ನಿಮ್ಮ ವೈರಿಗಳನ್ನು ಪ್ರೀತಿ ಮಾಡಿರಿ; ಶಾಪ ಹಾಕುವವರಿಗೆ ಆಶೀರ್ವದಿಸಿರಿ; ನೋಯಿಸುವವರಿಗೋಸ್ಕರ ಪ್ರಾರ್ಥಿಸಿರಿ! ಎಂಬ ಮಾತು ಕರ್ತನ ಅಪ್ಪಣೆ. ಅವರು ಮಾಡುವಂಥಾದ್ದು ನಾವು ಸೈರಿಸಿ ಕೊಳ್ಳಲಿಕ್ಕೆ ಕೂಡದಪ್ಪಲ್ಲಾ. ಧನಿಯ ಹೆಂಡತಿ ಕೊನ್ರಾದನ ತಾಯಿ ಬಹು ಹೆಚ್ಚು ತಾಳಿಕೊಳ್ಳ ಬೇಕು. ನಿನ್ನ ತಂದೆ ಅಸ್ವಸ್ಥವಾಗಿ, ಏಳಲಾರದೆ ಹಾಸಿಕೇ ಮೇಲೆ ಬಿದ್ದಿದ್ದ ಸಮಯದಲ್ಲಿ ದಿನಾಲು ಬಂದು ಹೋಗುತ್ತಿದ್ದಳು. ನಿನ್ನ ತಂದೆ ಕರ್ತನ ವಿಷಯದಲ್ಲಿ ಮಾತಾಡಿದ್ದೆಲ್ಲಾ ಅವಳಿಗೆ ಸಂತೋಷ ಕೊಟ್ಟು, ಬಹು ಮಧುರವಾಗುತ್ತಿತ್ತು. ಆದರೆ ನಮ್ಮಲ್ಲಿ ಇನ್ನು ಬಂದು ಹೋಗ ಬಾರದೆಂದು ಧನಿ ಅವಳಿಗೆ ಕ್ರೂರ ಅಪ್ಪಣೆ ಕೊಟ್ಟದ್ಧಾನೆ. ಮತ್ತು ಕೊನ್ರಾದ ತಂಟೆಗಾರನಾಗಿ, ಅವಳಿಗೆ ಎಷ್ಟೋ ದುಃಖ ಕೊಡುತ್ತಿದ್ಧಾನೆ! ದೇವರು ಅವಳಿಗೆ ಸುಶೀಲೆಯಾದ ಮಗಳನ್ನು ಕೊಟ್ಟು ಉಳಿಸದಿದ್ದರೆ, ಅವಳು ಅಷ್ಟೆಲ್ಲಾ ತಡೆಯಲಾರದೆ ಹೋಗುತ್ತಿದ್ದಳು” ಎಂಧೇಳಿದ್ದಕ್ಕೆ ಜೋರ್ಜನು—“ನಿನ್ನ ಮಾತು ಖರೆ; ಆದರೆ ಧನಿ ನಮ್ಮನ್ನು ಈಗಲೇ ಹಿಮಕಾಲದ ಪ್ರಾರಂಭದಲ್ಲಿ ಹೊರಡಿಸುವದು ಹ್ಯಾಗೂ ಮಹಾ ನಿರ್ದಯವೂ ಅನ್ಯಾಯವೂ ಆಗಿದೆ, ಅಲ್ಲವೋ? ಬಿಡಾರವಿಲ್ಲದೆ ನಾವು ಹಿಮಕಾಲ ಕಳೆಯುವದು ಹ್ಯಾಗೆ?” ಎಂತ ಕನಲ್ದು ಅನ್ನಲು, ಅವನ ತಾಯಿ—“ಕಂದಾ! ಕಂದಾ! ಹಗೇ ಭಾವ ನಿನಗೆ ದೂರವಾಗಿರಲಿ! ಎಲ್ಲವನ್ನು ನೋಡುವ ದೇವರು ನೋಡದವನಂತೆ ಅನೇಕವನ್ನು ನಡೆಯಲೀಸಿ ತಾಳುತ್ತಾನೆ. ಹಾಗೆ ಮಾಡುವದೇನೆಂತ ನಾವು ಕೇಳ ತಕ್ಕದ್ದಲ್ಲಾ. ಆತನ ಮಾರ್ಗವೂ ಚಿತ್ತವೂ ಸದಾ ದಿವ್ಯ ಜ್ಞಾನದ್ದೂ ನೀತಿಯದೂ. ಇತರರನ್ನು ಹಗೆ ಮಾಡುವವನು ಕೊಲೆಗಾರನೇ” ಎಂತ ತಡಿಸಿ, ಬುದ್ಧಿ ಹೇಳಿದ್ದಕ್ಕೆ ಹುಡುಗನು ಅವಳ ಮಾತು ನ್ಯಾಯವೆಂತ ತಿಳುಕೊಂಡು, ಹೆಚ್ಚು ಮಾತಾಡದೆ, ತಾಯಿಯ ಕೈ ಹಿಡಿದು, ಒತ್ತಿ, ಕೂತನು. ಮತ್ತಾಕೆ ಕೈ ಜೋಡಿಸಿ ಕೊಂಡು, ಊಟಕ್ಕೆ ಆಶೀರ್ವಾದ ಬೇಡಿ, ಪ್ರಾರ್ಥಿಸಿದ್ದೇನಂದರೆ: “ಕರ್ತಾ! ಯೇಸು! ನಮ್ಮ ಪಂಕ್ತಿಗೆ ಬಂದು, ನೀನು ನಮಗೆ ದಯ ಪಾಲಿಸಿದ್ದನ್ನು ಆಶೀರ್ವದಿಸು! ಆಮೆನ್.” ಜೋರ್ಜನಿಗೆ ಒಳ್ಳೇ ಹಶಿವೆಯಿದ್ದದರಿಂದ ಅಂಬಲಿ ಚನ್ನಾಗಿ ಶೇರಿತು. ಊಟವಾದ ಮೇಲೆ ತಾಯಿ ಮಲಗಿ ಕೊಂಡಳು; ಆದರೆ ಅವನು ಮಧ್ಯರಾತ್ರೀವರೆಗೆ ಹೂಪುಟಿಕೆ ಹೆಣೆಯುತ್ತಿದ್ದನು. ಕಡೆಗೆ ಅವನೂ ಮಲಗಿ ಕೊಂಡು, ನಿದ್ದೆ ಹೋದನು. ಇಬ್ಬರ ಬಳೀಲಿ ದೇವದೂತನೊಬ್ಬನು ಕಾವಲಿಯಾಗಿದ್ದನು. ಇಬ್ಬರು ಆ ರಾತ್ರಿ ಒಳ್ಳೇ ನಿದ್ರೆ ಗೈದು, ಚನ್ನಾಗಿ ವಿಶ್ರಮಿಸಿ ಕೊಂಡರು.

### ೩ನೇ ಪರ್ವ: ಗೃಹಛಿದ್ರವೆಂಬ ಮಾರಿ ಇದ್ದ ಮನೆ.

ಅವರ ಗುಡಸಲಿನ ಬದೀಲಿಂದ ತುಸ ಇಳಿಯುವ ಒಂದು ಒಳದಾರಿ ವಕ್ರವಾಗಿ ಒಂದು ತೋಪಿಗೆ ಹೋಗುವದು. ಆ ತೋಪಿನಲ್ಲಿ ಧನಿಯ ಮನೆ ಮರಗಳ ಮರೆಯಲ್ಲಿ ಕಟ್ಟಿತ್ತು. ತೋಪಿನ ಸುತ್ತಮುತ್ತಲಿನ ಹೊಲಪೊಲಗಳಲ್ಲಿ ಗೋಧೀ ಬೆಳೆ ಮಸ್ತಾಗಿ, ಹಣ್ಣಾಗಿ, ಘಾಳಿಯಲ್ಲಿ ಅಲ್ಲಾಡುತ್ತಾ ಒಂದು ಸುವರ್ಣ ಸರೋವರವೋ? ಪೀತಾಂಬರ ಹಾಸಿದ ಮಂಡಲವೋ? ಎಂಬಂತೆ ಕಾಣಿಸಿತು.

ಹೊಲಪೊಲಗಳ ಇತ್ತತ್ತಣ ಗುಡ್ಡಗಳು ದ್ರಾಕ್ಷೇ ತೋಟಗಳಾಗಿ, ದ್ರಾಕ್ಷೇ ಮಿಡಿಗಾಯಿಗಳಿಂದ ತುಂಬಿದ್ದವು. ಕಂಣಿಗೆ ಕಂಡದೆಲ್ಲಾ ಐಶ್ವರ್ಯಪರಿಣಾಮಪೂರ್ತಿಯ ಲಕ್ಷಣವುಳ್ಳದಾಗಿತ್ತು.

ಜೋರ್ಜನು ಧನಿಯಾದ ಆ ಮುದುಕನನ್ನು ದಾಟಿಸಿ, ಮನೆಗೆ ಬಂದು, ತಾಯಿಯ ಸಂಗಡ ಸಂಭಾಷಿಸಿದ ಸಾಯಂಕಾಲದಲ್ಲಿ ಅವನ (ಧನಿಯ) ಹೆಂಡತಿ ಮರ್ಗರೀತಳು ಮೇಜಿನ ಬಳಿಯಲ್ಲಿ ಕೂತು, ಹೊಲಿಯುತ್ತಾ, ಗಂಡನು ಮನೆಗೆ ಬರುವದನ್ನು ಭಯಾಕ್ರಾಂತಳಾಗಿ ಕಾದು ಕೊಂಡು ಇದ್ದಳು. ಸೌಲನಲ್ಲಿ ಹ್ಯಾಗೋ ಹಾಗೆಯೇ ಅವನಲ್ಲಿಯೂ ದುರಾತ್ಮಾವೇಶದ ಸಂಗತಿ ಇತ್ತು. ಇದು ಅವಳಿಗೆ ಅಂದು ಮಾತ್ರವಲ್ಲಾ ಅಂದಿಗೆ ಮುಂಚೆ ಸಹ ಸುಮಾರು ದಿವಸ ಒಂದು ನಿತ್ಯ ಭಯಾಸ್ಪದವಾಗಿತ್ತು. ಯಾರಿಗೂ ಮೆಚ್ಚಲೂ ನೆಚ್ಚಲೂ ಕೂಡದೆ, ಅವನು ಎಲ್ಲವರಲ್ಲಿ ಸಂಶಯಗಳನ್ನು ಹಿಡಿಯುವವನಾಗಿ, ಎಲ್ಲರಿಗೆ ಒಂದು ಮಾರಿ ಎಂಬ ಹಾಗಾಗಿದ್ದನು. ಅವನು ಹೋದಲ್ಲಿ ಬೈಗಳೂ ಜಗಳವೂ ತಪ್ಪದು. ಮನಸ್ಸಾಕ್ಷಿಯ ಶಬ್ದವನ್ನು ಅಣಗಿಸೋದಕ್ಕಾಗಿ ಮದ್ಯಪಾನವನ್ನು ಮಾಡುವನು; ಆದರೆ ಶಿಸೆಯ (ಕುಪ್ಪಿಯ) ಸಹಾಯದಿಂದ ಕರಕರೆಯನ್ನು ಪರಿಹರಿಸಿ, ಸಮಾಧಾನ ಮಾಡಿ ಕೊಳ್ಳ ಬೇಕೆಂದಿರುವವರ ಗತಿ ಬಿಸಲಿಗೆ ಹುತ್ತವನ್ನು ಹೊಕ್ಕು, ಹಾವಿನ ಬಾಯಿಯಲ್ಲಿ ಬಿದ್ದ ಕಪ್ಪೆಗಳ ಗತಿ ಸೈ.

ಗಂಡನಿಗೆ ದುರಾತ್ಮಾವೇಶವಾಗಿದ್ದ ಸಮಯದಲ್ಲಿ ಮರ್ಗರೀತಳಿಗೆ ಅತಿ ಕಷ್ಟವಾಗಿ, ಬಹಳ ಮನೋವ್ಯಥೆಯಾಗುತ್ತಿತ್ತು. ಮನೋವ್ಯಥೆ ಬಹುಶಾ ಅವಳಿಗೆ ಉಸುರು ಕಟ್ಟಿ ಹೋಗುವಂತೆ ಮಾಡಿತು. ಆ ಸಾಯಂಕಾಲದಲ್ಲಿ ಜೋರ್ಜನಿಗೆ ಪ್ರಾಯದಲ್ಲಿ ಸುಮಾರು ಸಮಾನಸ್ಕಂಧನಾಗಿದ್ದ ಕೊನ್ರಾದನೆಂಬ ಆಕೆಯ ಮಗನು ಸಹ ಮೇಜಿನ ಬದೀಲಿ ಕೂತು ಕೊಂಡಿದ್ದನು. ಅವನು ಕಾಣುತ್ತಲೇ ಯಾರ ಮಗನೆಂತ ಗುರ್ತು ಹಿಡಿದು ತಿಳುಕೊಳ್ಳಲಾಯಿತು. ಹಟವೂ ಮದವೂ ಕೂಡಿದ್ದ ಅವನ ಮುಖಭಾವದಿಂದಲೂ ಅವನ ಗುಣ ತಿಳುಕೊಳ್ಳ ಬಹುದಿತ್ತು. ಮರೀಯಳೆಂಬ ಹೆಸರಿದ್ದ ಒಬ್ಬಳೇ ತಂಗಿ ಅವನಿಗಿದ್ದಳು. ಆಕೆಗೆ ಒಂದು ಚಿತ್ರಪುಸ್ತಕವಿತ್ತು. ಅಂದೇ ಆ ಪುಸ್ತಕವನ್ನು ತೆಗೆದು ಕೊಂಡು, ಅದರ ಕೆಲವು ಹಾಳೆಗಳನ್ನು ಸುಮ್ಮನೆ ಬರೀ ಆಟಕ್ಕೆ ಹರಿದು ತೆಗೆದು, ಚೂರು ಚೂರಾಗಿ ಮಾಡಿ, ಬಿಸಾಡಿ ಬಿಡುತ್ತಿದ್ದನು. ಅವನ ತಾಯಿ—"ಬೇಡಪ್ಪಾ! ಮರೀಯಳ ಪುಸ್ತಕವನ್ನು ಹರಿದು, ಹಾಳು ಮಾಡ ಬೇಡಾ! ಅವಳಿಗೆ ಬಹು ದುಃಖವಾದೀತಲ್ಲಾ!" ಎಂಥೇಳಿ ತಡಿಸಿದ್ದಕ್ಕೆ ಅವನು ಬಹಳ ದರ್ಪದಿಂದ—"ಬರೀ ಬೇಸರಕ್ಕೆ ನಾನು ಹೀಗೆ ಆಡುವದು ನಿನಗೇನು?" ಎಂತ ಬಾಯಿ ಬಿಟ್ಟನಷ್ಟೇ. ಅದಕ್ಕೆ ಅವನ ತಾಯಿ—"ಆಟಕ್ಕೆ ತಂಗಿಯ ಪುಸ್ತಕವನ್ನು ಹರಿದು ಹಾಕುವಂಥಾದ್ದು ಎಂಥಾ ಕರ್ಮ! ಬೇಸರವಿದ್ದರೆ, ಬೇರೊಂದು ಪುಸ್ತಕ ತೆಗೆದು ಕೊಂಡು, ಏನಾದರೂ ಓದಿಕೋ!" ಎಂದು ಬುದ್ಧಿ ಹೇಳಿದ್ದಕ್ಕೆ ಪೋರನು—"ಹಹಹಾ! ನಾನು ಬೇಸರಕ್ಕೆ ಪುಸ್ತಕ ತೆಗೆದು ಕೊಂಡು ಓದುವವನೋ? ನನಗೆ ದೃಢೀಕರಣವಾಯಿತಲ್ಲಾ! ಅದಕ್ಕೆ ಮುಂಚೆ ನಾನು ಶಾಲೆಯಲ್ಲಿ ಕೂತು, ಓದಿ, ಓದಿ, ನನಗೆ ಸಾಕೇ ಸಾಕಾಯಿತು. ಮತ್ತೂ ಓದಿ, ನನ್ನ ತಲೆಯನ್ನು ಭಾರ ಮಾಡಿ ಬಿಡಲಿಕ್ಕೆ ನಾನು ಹುಚ್ಚನಲ್ಲಾ!" ಎಂತ ಹೇಳಿ, ಕೇಕೇ ಹೊಡದು, ನಕ್ಕನು. ಆ ಮಾತಿಗೆ ತಾಯಿ ನಿಟ್ಟುಸುರು ಬಿಟ್ಟು ಸುಮ್ಮಗಾದಳು. ಮಗನಿಗೆ ಪೆಟ್ಟು ತಿನ್ನಿಸಲಿಕ್ಕೆ ಅವಳಿಗೆ ತ್ರಾಣ ಸಾಲಲಿಲ್ಲಾ; ಅವನಿಗೆ ಪೆಟ್ಟು ತಿನ್ನಿಸಿದ್ದಾದರೂ ಪ್ರಯೋಜನವಾಗುತ್ತಿದ್ದಿಲ್ಲಾ, ಯಾಕಂದರೆ ಆಕೆಯ ಗಂಡ, ಹುಡುಗನ ತಂದೆ, ಯಾವಾಗಲೂ ಮಗನ ಪಕ್ಷ ಹಿಡಿದು, ಅವನಿಗೆ ಸಹಾಯಕನಾಗಿರುತ್ತಿದ್ದನು. ತಾಯಿಗೂ ಹುಡುಗನಿಗೂ ಹಿಂದಿನ ಮಾತು ಅಷ್ಟಕ್ಕೆ ನಡೆಯುತ್ತಲೇ ಅವನು ಮನೆಗೆ ಬಂದನು. ಕುಡಿದು, ಅಮಲೇರಿಸಿ ಕೊಂಡು ಬಂದನೆಂಬ ಮಾತು ಒಂದನೇ ಪರ್ವದಲ್ಲಿ ಹೇಳಿ ಆಯಿತು. ಅವನು ಬಂದು, ತನ್ನ ಹಿಂದೆ ಬಾಗಲನ್ನು

ಮುಚ್ಚಿ ಹಾಕಿ ಬಿಟ್ಟ ಕೂಡಲೇ ಅವನು ಕಠೋರವಾಗಿ ಒದರಿದ್ದು, ಏನಂದರೆ: "ಊಟಕ್ಕೆ ತಯಾರೋ? ತಯಾರಾಗಲಿಲ್ಲವೋ? ಛೀ ಛೀ! ಇಡೀ ಹಗಲು ನಾನು ಕಷ್ಟ ಮಾಡಿ, ಪೇಚಾಡ ಬೇಕು. ಸಂಜೆಗೆ ಮನೆಗೆ ಬಂದರೆ, ಉಣ್ಣಲಿಕ್ಕೆ ತಯಾರಿಲ್ಲಾ! ಅಕಟಾ! ನನ್ನ ಮನೆಯ ಹೆಣ್ಣುಮಕ್ಕಳು ಎಂಥಾ ಮೈಗಳ್ಳ ರಂಡೇ ಜನ! ಛೀ ಛೀ! ಮರಿಯಾ! ಎಲ್ಲಿದ್ಧೀ? ಬಾರು ಬಿಚ್ಚಿ, ನನ್ನ ಮೊಚ್ಚೆಗಳನ್ನು ತೆಗೆದು ಬಿಡು! ಎಲ್ಲಿದ್ಧಾಳೆ ಈ ರಂಡೇ ಪೋರಿ?" ಹೀಗೆ ಒದರಿ ಕೇಳಿದ್ದಕ್ಕೆ ಅವನ ಹೆಂಡತಿ ಬಹಳ ದಿಗಿಲು ಹಿಡಿದು, ಅವನನ್ನು ನೋಡಲು, ಕೊನ್ರಾದನು ಮತ್ಸರಭಾವಪೂರ್ವಕ ಸಂತೋಷವುಳ್ಳವನಾಗಿ ಎದ್ದು, ಓಡಿ ಬಂದು, ಅಪ್ಪನ ಮೊಚ್ಚೆಗಳನ್ನು ಬಿಚ್ಚಿ ತೆಗೆದಿಟ್ಟನು. ಅದಕ್ಕೆ ಮುದುಕನು— "ಶಹಬಾಸ್! ಶಹಬಾಸ್! ನೀನು ನಿನ್ನ ತಾಯಿಯಂಥವನಲ್ಲಾ! ಬೇಶ್! ಬೇಶ್! ಮಗಾ, ನೀನು ಘಟ್ಟಿಗನೇ! ಆದರೆ ನಿನ್ನ ತಂಗಿ ಎಲ್ಲಿ? ನಿನಗೆ ಗೊತ್ತಿಲ್ಲವೋ? ಸತ್ತೇ ಹೋಗಲಿ ಆ ರಂಡೇ ಪೋರಿ!" ಎಂತ ಹೇಳಿದ್ದಕ್ಕೆ ಹುಡುಗನು— "ಅವಳು ಎಲ್ಲಿ? ನನಗೆ ಹೇಳಿ ಹೋಗುತ್ತಾಳೋ? ತಾಯಿ ಅವಳನ್ನು ಎಲ್ಲಿಗಾದರೂ ಕಳುಹಿಸಿರ ಬೇಕು!" ಎಂತಾ ಠಕ್ಕಾಗಿ ಬಾಯಿ ಬಿಟ್ಟನು.

ಈ ಮಾತಿಗೆ ತಾಯಿ ಹುಡುಗನ ಕಡೆಗೆ ದುಃಖಭಾವದ ಮುಖ ಮಾಡಿ ನೋಡಲು, ಯೆರ್ಗಲ್ (ಗಂಡನ ಹೆಸರು) ಹುಡುಗಿ ಆ ಬಡ ವಿಧವೆಯ ಮನೆಗೆ ಹೋಗಿದ್ದಾಳು ಎಂತ ಊಹಿಸಿ ಕೊಂಡು, ಬಲಗೈ ಮುಷ್ಟಿ ಹಿಡಿದು, ಮೇಜಿಗೆ ಒಂದು ಗುದ್ದು ಬಡಿದು, ಹೆಂಡತಿಯನ್ನು ನೋಡಿ, ಗರ್ಜಿಸಿ ಒದರಿದ್ದೇನಂದರೆ: "ಸತ್ತೇ ಹೋಗಿ ರಂಡೇ ಮಕ್ಕಳು! ಹುಡುಗಿ ಆ ರಂಡೇ ಬಳಿಗೆ ಹೋದ್ದು ಹೌದೋ? ಅವಳನ್ನು ಇನ್ನೊಮ್ಮೆ ಆ ಖೋಡಿಯಲ್ಲಿ ಕಳುಹಿಸಿ ನೋಡು! ನಿನ್ನನ್ನೂ ಹುಡುಗಿಯನ್ನೂ ಕೊಂದೇ ಕೊಂದು ಬಿಡುತ್ತೇನೆ."

ಮರ್ಗರೀತಳು ಸುಮ್ಮಗಾಗಿ ಊಟಕ್ಕೆ ತಂದು ಬಡಿಸಿದಳು. ಕಡೆಗೆ ತನ್ನ ಗಂಡನ ಮುಂದೆ ನಿಂತು ಕೊಂಡು, ಖಂಡಿತವಾಗಿ ಹೇಳಿದ್ದೇನಂದರೆ: "ಯೆರ್ಗಲ್! ಯೆರ್ಗಲ್! ಶಾಪಕ್ಕೆ ಗುರಿಯಾಗುವ ಸಂಗತಿ ಇದು. ಆ ಹೆಂಗಸು ತೀರಾ ಬಡವೆ, ಜಾಡ್ಯದವಳು. ಇನ್ನು ಬಹಳ ದಿನ ಬದುಕಲಿಕ್ಕಿಲ್ಲಾ; ಆದರೆ ಅವಳಿಗೆ ಎಷ್ಟೋ ಸಂಕಟವಾದರೂ ಅವಳ ಮೇಲೆ ನಿನಗೆ ಕರುಣ ಹುಟ್ಟದು. ಮಹಾ ನಿಷ್ಕರುಣದಿಂದ ಅವಳನ್ನು ಹಿಮಕಾಲದಲ್ಲಿ ಮನೆಯಿಂದ ಹೊರಡಿಸಿ ಬಿಡಲಿಕ್ಕಿದ್ಧೀ. ಇದು ಶಾಪಕ್ಕೆ ಗುರಿಯಾಗುವ ಸಂಗತಿಯಲ್ಲವಾದರೆ, ದೇವರಿಲ್ಲಂತಾದೀತು."

ಈ ಬುದ್ಧೀ ಮಾತಿನ ಒಂದೊಂದು ಶಬ್ದಕ್ಕೆ ಗಂಡನ ಕೋಪವೂ ಆಗ್ರಹವೂ ಹೆಚ್ಚಿ, ಉದ್ರೇಕವಾಯಿತು. ಅವನ ಮುಖವು ಭಯಂಕರವಾಗಿ ವಿರೂಪವಾಗಿ ಹೋಯಿತು. "ಮುಚ್ಚು ಬಾಯಿ! ಆ ಮುದಿ ಖೋಡಿಯ ಮಾತು ಬೇಡಾ! ಹೋಗಲಿ ಅರಿಷ್ಟ! ಹ್ಯಾಗೂ ಹೋಗ ಬೇಕು ಅವಳು!" ಎಂಧೇಳಿ, ತನ್ನ ಮಾತಿಗೆ ಮುದ್ರೆ ಎಂಬಂತೆ ಮುಷ್ಟಿಯಿಂದ ಮೇಜಿಗೆ ಬಹು ಜೋರಿನಿಂದ ಒಂದು ಗುದ್ದು ಬಡತ ಬಡಿದನು.

ಆ ಕ್ಷಣಕ್ಕೆ ಬಾಗಲು ತೆರೆದು ಹೋಗಿ, ಹುಡುಗಿ ಒಳ ಬಂದಳು. ಹುಡುಗಿಯನ್ನು ಕಂಡು, ಆಗ್ರಹ ಹಿಡಿದ ವ್ಯಾಘ್ರ (ಹುಲಿ) ಎಂಬಂತೆ ಅವನು ಹಾರಿ ಎದ್ದು, ಕೈ ಚಾಚಿ, "ಛೀ! ಛೀ! ಅಂಥಾ ಮುದಿ ಖೋಡಿಯಲ್ಲಿ ನೀನು ಹೋಗುವವಳೋ? ಅಂಥಾ ಗರೀಬ ಮೈಗಳ್ಳ ಜನರ ಘಾಳಿ ನನ್ನ ಮಗಳಿಗೆ ಸುಗಂಧವೋ? ನಿನ್ನಲ್ಲಿ ನಾಚಿಕೆ ಇಲ್ಲವೋ? ನೀನು ಮತ್ತೂ ಹೋದರೆ, ದೊಡ್ಡ ಕೇಡಾದರೂ ಚಿಂತಿಲ್ಲಾ, ನೀನು ತಿರಿಗಿ ಹೋಗದ ಹಾಗೆ ನಾನು ಮಾಡಿ ನೋಡುತ್ತೇನೆ. ಕೇಳಿದಿಯಾ?" ಎಂತಾ ಬೆದರಿಸಿದ ಬಳಿಕ ಕೋಪಾಗ್ರಹವು ಮಿತಿ ಮೀರಿ, ಅವನನ್ನು ನಿಂತು ಕೊಂಡಿರ ಬಿಡದ ಕಾರಣ ಅರೆ ಪ್ರಾಣದವನಂತೆ ಲೋಡಿನ ಮೇಲೆ ಬಿದ್ದು ಕೊಂಡನು. ತುಸ ಹೊತ್ತಿನ ಮೇಲೆ ಕುಡಿದು ಬಂದವ

ನಿಗೆ ನಿದ್ರೆ ಬಂದು ಹೋದ್ದರಿಂದ ತಿರಿಗಿ ಏಳದೆ ಬಿದ್ದಲ್ಲಿಯೇ ಗುರುಕಾಯಿಸಿ ನಿದ್ರೆ ಗೈದನು. ಹುಡುಗನೂ ಹುಡುಗಿಯೂ ಮಲಗಿ ಕೊಂಡು ನಿದ್ರೆ ಹೋದರು. ಆದರೆ ಮರ್ಗರೀತ ತೂಕಡಿಗೆಯಾಗದೆ, ಮಧ್ಯರಾತ್ರೀ ತನಕ ಮೇಜಿನ ಹತ್ತರ ದುಃಖಾಕ್ರಾಂತಳಾಗಿ ಕೂತು ಕೊಂಡಿದ್ದಳು. ಕಣ್ಣೀರು ಸುರಿಸುತ್ತಾ ಆಗಿಂದಾಗ್ಯೆ ಗಂಡನು ಬಿದ್ದು ಕೊಂಡಿದ್ದ ಕಡೆಗೆ ನೋಡುತ್ತಿದ್ದಳು. ಅವನು ಸುಖವಾಗಿ ನಿದ್ರೆ ಗೈಯದೆ, ಕುಸ್ವಪ್ನಗಳ ಕಾಟವಿದ್ದವನಂತೆ ಪದೇ ಪದೇ ಹೊರಳಿ ಕೊಳ್ಳುತ್ತಿದ್ದನು.

(ಮುಂದೆ ಸಾಗಿಸಲ್ಪಡುವದು.)

---

## ಉತ್ತರಗಳು.

(೧೦೯ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

21. **ಪೌಲನ** ಸಂಗಡ. ಅಪೊ. ಕ್ರಿ. ೨೨, ೧೭—೨೧.

22. **ಸೀಮೋನ್.** ಸೀಮೋನ್ ಪೇತ್ರ ತೊಗಲುಗಾರನಾದ ಸೀಮೋನನ ಮನೆಯಲ್ಲಿ ಬಿಡಾರ ಮಾಡಿ ಕೊಂಡಿದ್ದನು. ಅಪೊ. ಕ್ರಿ. ೯, ೪೩.

23. **ಹಾಗರ್.** ಉತ್ಪತ್ತಿ ೨೧, ೧೫. ೧೭.

24. **ಮೋಶೆ.** ಅವನ ಆಯುಷ್ಯವೆಲ್ಲಾ ೧೨೦ ವರುಷವಾಯಿತು. ದ್ವಿತೀ. ನ್ಯಾ. ೩೪, ೭. ಐಗುಪ್ತ ದೇಶದ ಅರಮನೆಯಲ್ಲಿದ್ದು, ಐಗುಪ್ತ್ಯರ "ಸಮಸ್ತ ಜ್ಞಾನದಲ್ಲಿ ಉಪದೇಶಿಸಲ್ಪಟ್ಟು," ೪೦ ವರುಷದವನಾಗಿ ಮಿದ್ಯಾನ್ ದೇಶಕ್ಕೆ ಓಡಿ ಹೋದನು. ಅಪೊ. ಕ್ರಿ. ೭, ೨೦—೨೯. ಮಿದ್ಯಾನ್ ದೇಶದಲ್ಲಿ ೪೦ ವರುಷ ಕುರಿ ಮೇಯಿಸಿ ಕಾಯುವ ಚಾಕ್ರಿ ಮಾಡುತ್ತಿದ್ದನು. ಅಪೊ. ಕ್ರಿ. ೭, ೩೦; ಹೊರ. ೭, ೭. ಮತ್ತಿನ ೪೦ ವರುಷ ಇಸ್ರಯೇಲ್ಯರ ಸಂಗಡ ಅರಣ್ಯಸಂಚಾರದಲ್ಲಿ ಕಳದನು. ಅಂಕೆ. ೧೪, ೩೨. ೩೪; ಅಪೊ. ಕ್ರಿ. ೭, ೩೬. ೪೨.

25. **ಆದಮ್.** ಅವನಿಗೆ ೯೩೦ ವರುಷ ಹಾಗಾದರೆ ದೀರ್ಘಾಯುಷ್ಯವಾಯಿತು; ಉತ್ಪತ್ತಿ ೫, ೫. ಆದರೆ ಈ ದೀರ್ಘಾಯುಷ್ಯದ ಪ್ರಾರಂಭದಲ್ಲೇ, ಅಂದರೆ ಪಾಪಪತಿತನಾದ ಕೂಡಲೇ, ಸತ್ತನು. ಉತ್ಪತ್ತಿ ೨, ೧೭; ೩, ೧—೧೯.

---

## ಹೊಸ ಪ್ರಶ್ನೆಗಳು.

26. ಪೂರ್ವಿಕ ದೇವಭಕ್ತರಲ್ಲಿ ಯಾರಿಗಾಗದಷ್ಟು ಸ್ಪೃಷ್ಟವಾಗಿ (ಅಂದರೆ ಸ್ಪರ್ಶ್ಯವಾಗಿ, ಸ್ಪರ್ಶಗೋಚರವಾಗಿ) ದೇವರು ಯಾವಾತನಿಗೆ ಸಮೀಪವಾಗಿ ಕಾಣಿಸಿ ಕೊಂಡನು?

27. ಎಲ್ಲಾ ದಿನಚರ್ಯೆಪುಸ್ತಕಗಳಲ್ಲಿ ಅತಿ ವಿಶೇಷವಾದಂಥಾದ್ದರ ಪ್ರಸ್ತಾಪವೆಲ್ಲಿ? ಎಲ್ಲಾ ದಿನಚರ್ಯೆಪುಸ್ತಕಗಳಲ್ಲಿ ಅದೇ ವಿಶೇಷವಾದ್ದೆಂದೆಣಿಸಿ ಕೊಳ್ಳುವ ನ್ಯಾಯವೇನು?

28. ನೋಹನು ನಾವೆಯಲ್ಲಿ (ದೊಡ್ಡ ಡೋಣಿಯಲ್ಲಿ) ಕೇವಲ ಅಪೂರ್ವ ಅಂದದಲ್ಲಿ ಉಳಿದಂತೆ, ಚಿಕ್ಕ ಡೋಣಿ ಎಂಬಂತಾದ್ದರಲ್ಲಿ ಅಪೂರ್ವವಲ್ಲದ ಅಂದದಲ್ಲಿ ಉಳಿದದು ಯಾರು?

29. ಅಂಧದ (ಕುರುಡತನದ) ನಿಮಿತ್ತದಿಂದ ಕುರುಡನಾದವನ್ಯಾರು?

30. ಯಾವ ವಚನದಲ್ಲಿ ಯೇಸು ತಾನೇ ಬರೇ ನಾಲ್ಕು ಮಾತಿನಲ್ಲಿ ತನ್ನ ಚರಿತ್ರಸಾರಾಂಶವನ್ನು ಹೇಳಿ ತಿಳಿಸಿದ್ದು?

---

# ವಿವಿಧ ವರ್ತಮಾನಗಳು.

ಕಥೋಲಿಕ ಸಭೆಯ ಒಂದು ನವೀನ ಅದ್ಭುತವು ಪರೀಸ ಪಟ್ಟಣದಲ್ಲಿ ಬೈಲಿಗೆ ಬಿತ್ತು; ಪಕ್ಷವಾಯುರೋಗಿಯಾಗಿ ಕಾಲಿನಲ್ಲಿ ವ್ರಣವಿದ್ದಂಥಾ ಮತ್ತು ಮೂಕನೂ ಅರ್ಧ ಕುರುಡನೂ ಆಗಿದ್ದಂಥಾ ಒಬ್ಬನು ಲೂರ್ಡ್ ಎಂಬ ಪುಣ್ಯಸ್ಥಳಕ್ಕೆ ಹೋಗಿ, ತೀರ್ಥದಲ್ಲಿ ಮಿಂದು, ಪೂರ್ಣ ಗುಣವಾದನಂತೆ. ಊರಲ್ಲೆಲ್ಲಾ ಈ ವರ್ತಮಾನ ಹಬ್ಬಿ ಪೊಲೀಸಿನವರು ಅವನನ್ನು ಹಿಡಿದು ವಿಚಾರಿಸಲು ಆ ಮನುಷ್ಯನು ಹಳೇ ಅಪರಾಧಿ ಎಂತಲೂ ಅವನು ತನಗೆ ರೋಗವಿತ್ತು, ತಾನು ವಾಶಿಯಾದೆನೆಂದು ಸುಳ್ಳಾಗಿ ಹೇಳುತ್ತಿದ್ದನೆಂದೂ ತಿಳಿದು ಬಂತು. ಪುಣ್ಯಸ್ಥಳಗಳಿಗೆ ಯಾತ್ರೆ ಮಾಡಿ, ಸಾಂತರ ಮರೀಯಳ ಸಂದರ್ಶನದಿಂದ ರೋಗಗಳು ವಾಶಿಯಾಗುತ್ತವೆಂದು ಹೇಳುವ ಕಥೆಗಳೆಲ್ಲಾ ಮೇಲಿನ ಉದಾಹರಣೆಯಂತೆ ಮಿಥ್ಯಾಭ್ರಮೆ ಹೊರ್ತು ಮತ್ತೊಂದಲ್ಲಾ.

ಕೊಲ್ಲಾಪುರದ ಕಗ್ಗವಾಡದಲ್ಲಿರುವ ಒಬ್ಬ ಉಪದೇಶಿ ಹೊಲೆಯರಲ್ಲಿ ದೇವರ ವಾಕ್ಯವನ್ನು ಸಾರಿ ೩೭ ಮಂದಿಗೆ ಸ್ನಾನ ಕೊಡಿಸಿದನು; ಮರು ದಿನ ಪುನಃ ೭ ಮಂದಿಗೆ ಸ್ನಾನ ಶಿಕ್ಕಿತು; ಹೀಗೆ ಎರಡು ತಿಂಗಳಲ್ಲಿ ೬೦ ಮಂದಿ ಸ್ನಾನ ಹೊಂದಿದರು. ಆ ಪ್ರಾಂತ್ಯದಲ್ಲಿ ದೇವರ ವಾಕ್ಯವನ್ನು ಅಂಗೀಕರಿಸುವದಕ್ಕೆ ಬಡವರೊಳಗೆ ಸಹ ಇರುವ ವಿಘ್ನಗಳು ಪರಿಹಾರವಾಗಿ ಅದು ಅವರ ಹೃದಯಗಳಲ್ಲಿ ಮೊಳೆತು ಬೇರೂರುವದಕ್ಕೆ ಪ್ರಾರಂಭಿಸುತ್ತದೆಂತ ತೋರುತ್ತದೆ.

ಮೇಜರ್ ಕೆಂಡಿ ಎಂಬವರು, ಮರಾಟಿ ಭಾಷೇ ನಿಘಂಟನ್ನೂ ಅನೇಕ ಶಾಲಾಪುಸ್ತಕಗಳನ್ನೂ ಧರ್ಮಸಂಬಂಧ ಪುಸ್ತಕಗಳನ್ನೂ ರಚಿಸಿ, ಮುಂಬಾಯಿ ಸಂಸ್ಥಾನದಲ್ಲಿ ಪ್ರಖ್ಯಾತಿಗೆ ಬಂದಿದ್ದವರು, ತೀರಿ ಹೋದರು.

ಮದ್ರಾಸ ಸಂಸ್ಥಾನದಲ್ಲಿ ಚರ್ಚ್ ಮಿಶ್ಯನ ಸಂಘದಲ್ಲಿ ಯುರೋಪಿಯನ್ ಮಿಶ್ಯನೆರಿಗಳು ೨೫; ದೇಶಸ್ಥ ಬೋಧಕರು ೭೦; ಉಪದೇಶಿಗಳು ೨೯೮; ಕ್ರೈಸ್ತರು ೬೪,೮೭೩; ರಾತ್ರಿಭೋಜನಕ್ಕೆ ಬರುವವರು ೧೩,೩೪೧; ಶಾಲೆಗಳು ೬೩೦; ಕಲಿಯುವ ಹುಡುಗರೂ ಹುಡುಗಿಯರೂ ೨೧,೭೪೬. ಕಳೆದ ವರುಷ ೧೦೦೩ ಮಂದಿಗೆ ಸ್ನಾನವಾಯಿತು.

ಬಿದುರಿಗೆ ಅರವತ್ತು ವರ್ಷಕ್ಕೊಮ್ಮೆ ಭತ್ತವಾಗುತ್ತದಷ್ಟೇ; ಮೈಸೂರಿನ ಗುಂಡ್ಲ ಪೇಟೆ ಮತ್ತು ಆಸಪಾಸಿನ ತಾಲೂಕುಗಳಲ್ಲಿ ಬರಗಾಲದಿಂದ ಥಾವತಿ ಪಡುವ ಬಡ ಜನರು ಬಿದುರಿನ ಅಕ್ಕಿಯಿಂದ ಕಾಲಕ್ಷೇಪ ಮಾಡುತ್ತಾರೆ.

ಫೈಜಾಬಾದಿನ ಸಮೀಪ ಅಯೋಧ್ಯೆಯಲ್ಲಿ ಮಹಾ ಜಾತ್ರೆ ಉತ್ಸವವಾದಾಗ್ಯೆ ಹೆಚ್ಚು ಕಡಿಮೆ ಮುನ್ನೂರು ನಾನ್ನೂರು ಮಂದಿ ಜನರ ಸಂದಣಿಯಿಂದ ಸತ್ತು ಹೋದರು; ಎಪ್ಪತ್ತು ವರ್ಷಕ್ಕೊಂದಾವರ್ತಿ ಮಾತ್ರವೇ ಸಂಭವಿಸುವ ಗ್ರಹಯೋಗದ ದೆಸೆಯಿಂದ ಮಹಾ ಪುಣ್ಯ ಕಾಲವೆಂದು ಅರ್ಧಲಕ್ಷಕ್ಕಿಂತ ಹೆಚ್ಚು ಜನರು ನೆರೆದಿದ್ದರು.

ಕಲ್ಕತದಲ್ಲಿ ಒಬ್ಬ ಭಟ್ಟನು, ತಾನು ಇಟ್ಟುಕೊಂಡಂಥವಳು ಇನ್ನೊಬ್ಬನ ಸ್ನೇಹ ಮಾಡಿದ್ದರಿಂದ ಅವಳನ್ನು ಕತ್ತಿಯಿಂದ ಸಂಹಾರ ಮಾಡಿದನು: ಜ್ಯೂರಿಗಳೆಂಬ ಪಂಚಾಯತರು ಆ ಸಂಗತಿ ವಿಚಾರಣೆ ಮಾಡಿ, ಅವನ ತಪ್ಪಿತವು ಶಿಕ್ಷೆಗೆ ತಕ್ಕ ಕೊಲೆ ಎಂತ ಬಂದಿಖಾನೆ ಫಿತವೆ ನೇಮಿಸಿದರು. ಸರಕಾರದವರು ಪುನಶ್ಚ ವಿಚಾರಿಸಿ, ಅವನನ್ನು ಪಾಶಿಗೆ ಹಾಕ ಬೇಕೆಂತ ತೀರ್ಪು ಮಾಡಿದರು; ಅವನ ಪ್ರಾಣ ಉಳಿಸ ಬೇಕೆಂತ ಲೆಫ್ಟಿನೆಂಟ ಗವರ್ನರ್ ಧೊರೆಗೆ ಕೆಲವರು ಮಾಡಿದ ಅರ್ಜಿ ಅವರು ನಿರಾಕರಿಸಿ ಬಿಟ್ಟರು. ಒಬ್ಬ ಮನುಷ್ಯನ ಸ್ಥಿತಿ ಎಷ್ಟಕ್ಕೆ ದೊಡ್ಡದೋ ಅಷ್ಟಕ್ಕೆ ಅವನ ಅಪರಾಧವೂ ದೊಡ್ಡದು ಎಂಬದನ್ನು ಹಿಂದು ಜನರು ನೆನಸದೆ ಹೋಗುತ್ತಾರೆ.

ಸದ್ಯಾ ನ್ಯೂಹೇವನ್ ಎಂಬಲ್ಲಿಂದ ಕೊನ್ಸ್ತಂತಿನಪೊಲಿಗೆ ಎರಡು ಹೊಗೆಹಡಗಗಳು ಹೋದವು; ಅವುಗಳಲ್ಲಿ ೧೦,೦೦೦,೦೦೦ ಮದ್ದಿನ

ತೋಟಿಗಳು, ೨೦,೦೦೦,೦೦೦ ಗುಂಡುಗಳು, ಕೆಲವು ನೂರು ದೊಡ್ಡ ಗುಂಡುಗಳು, ಖಂಡಿ ಖಂಡಿ ಮದ್ದು, ೩೦,೦೦೦ ರೈಫಲ್ ಕೋವಿಗಳು ಇದ್ದವು.

ಸೂರ್ಯನ ಕಿರಣಗಳ ಉಷ್ಣದಿಂದ ಆಯಾ ಚಮತ್ಕಾರಗಳನ್ನು ಮಾಡುವದಕ್ಕೆ ವಿದ್ವಾಂಸರು ಕಲಿತು ಕೊಂಡಿದ್ಧಾರೆ. ಒಂದು ಚಮತ್ಕಾರವೇನಂದರೆ: ಒಂದು ಪಾತ್ರೆಯಲ್ಲಿ ನೀರಿಟ್ಟು ನಾಲ್ವತ್ತು ಕನ್ನಡಿಗಳನ್ನು ತೆಗದು ಕೊಂಡು ಪ್ರತಿಬಿಂಬಿಸುವ ಸೂರ್ಯನ ರಶ್ಮಿಗಳು ಆ ಪಾತ್ರಕ್ಕೆ ತಾಗುವಂತೆ ಮಾಡಿದರೆ, ನೀರು ಬಿಶಿಯಾಗುತ್ತದಂತೆ.

ಅಮೇರಿಕದ ಸಂಯುಕ್ತ ರಾಜ್ಯಗಳಲ್ಲಿ ರಾಜ್ಯದ ಕಾರ್ಯಗಳನ್ನು ನಡಿಸುವ ಅಗ್ರಸ್ಥನನ್ನು ಆದು ಕೊಳ್ಳುವಲ್ಲಿ ಉಂಟಾದ ಬಹಳ ಭೇದಗಳು ಪರಿಹಾರವಾಗಿ, ಹೇಸ್ ಎಂಬವರನ್ನು ಆ ಸ್ಥಾನಕ್ಕೆ ನೇಮಿಸಲಾಯಿತು.

ರುಸ್ಯರಿಗೂ ತುರ್ಕರಿಗೂ ಯುದ್ಧವುಂಟಾಗುವದು ತಿರಿಗಿ ಹೆಚ್ಚು ಸಂಭಾವ್ಯವಾಗಿ ತೋರುತ್ತದೆ; ೯ ಸೈನ್ಯಗಳನ್ನು ಸನ್ನದ್ಧಮಾಡುವದಕ್ಕೆ ಮಹಾರಾಜನ ಅಪ್ಪಣೆ ಹೊರಟದೆ.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

ತುರ್ಕರೂ ಮೊಂತೆನೆಗ್ರೊ ಮತ್ತು ಸೆರ್ವ್ಯ ಎಂಬ ಶೀಮೆಗಳವರೂ ಇತ್ತಲಾಗೆ ಸಮಾಧಾನ ಮಾಡಿ ಕೊಂಡರು.

ಸಣ್ಣಾಸ್ಯದಲ್ಲಿಯೂ ಯುವನರ ದೇಶವಾದ ಗ್ರೀಶ್ಯದಲ್ಲಿಯೂ ಭೂಮಿಯಲ್ಲಿ ಹುಗಿದು ಹೋಗಿ ಕಾಣದಿದ್ದಂಥಾ ಅತ್ಯಾಶ್ಚರ್ಯವೂ ಬೆಲೆಯೂ ಉಳ್ಳಂಥ ಅನೇಕ ಪ್ರಾಚೀನ ಪಾತ್ರೆಗಳನ್ನೂ ಮೂರ್ತಿಗಳನ್ನೂ ಇತರ ವಿವಿಧ ಸಾಮಗ್ರಿಗಳನ್ನೂ ತೋಡಿ, ಕಂಡು ಕೊಂಡು, ಬೈಲಿಗೆತ್ತಿ ತೆಗೆದರಂತೆ.

ಹಿಂದುಸ್ಥಾನವೆಂಬ ದೇಶಸಂಗ್ರಹದಲ್ಲಿ ೨೩,೯೯,೩೮,೬೯೫ ನಿವಾಸಿಗಳು ಇದ್ಧಾರಂತೆ. ಇವರಲ್ಲಿ ೧೯ ಕೋಟಿ ಜನ ಇಂಗ್ಲಿಷ್ ಸರಕಾರಕ್ಕೊಳಗಾಗಿ, ವಿಕ್ತೋರಿಯ ಭೂಚಕ್ರವರ್ತಿನಿಯವರ ಪ್ರಜೆಗಳಾಗಿದ್ಧಾರೆ. ೧೪ ಕೋಟಿ ಜನ ಹಿಂದುಗಳಾಗಿ, ವಿಗ್ರಹಾರಾಧಕರಾಗಿದ್ಧಾರೆ. ಮಹಮ್ಮದಿ ಮತದವರು ೪ ಕೋಟಿ. ಬೌದ್ಧರೂ ಜೈನರೂ ೩೦ ಲಕ್ಷ. ಶಿಖರು (ಸಿಕ್ಕರು) ೧೦ ಲಕ್ಷ. ಫಾರ್ಸ್ಯರೂ ಭೂತಪೂಜಕರೂ ಕೆಲವು ದಶಲಕ್ಷಾಂತರಗಳು. ಕ್ರೈಸ್ತರು ೯ ಲಕ್ಷ. ಇವರಲ್ಲಿ ಸ್ವಲ್ಪ ಕಡಿಮೆ ೩ ಲಕ್ಷ ಮಾತ್ರ ದೇಶೀಯ ಪ್ರೊಟೆಸ್ಟಾಂಟರು. ಉಳಿದವರು ಅಷ್ಟ ಜಾತಿಯವರಾದ ಕ್ರೈಸ್ತರೂ ಪಪ್ಪರ (ರೋಮನ್) ಸಭೆಯವರೂ. ಹೀಗಿರಲಾಗಿ ಕಂಡ ೩೦೦ ಜನರಲ್ಲಿ ಒಬ್ಬನೇ ಕ್ರೈಸ್ತ; ೬೦೦ ಜನರಲ್ಲಿ ಒಂದು ಜನ ಮಾತ್ರ ಪ್ರೊಟೆಸ್ಟಾಂಟ ಸಭೆಯ ಕ್ರೈಸ್ತ. ಎಲ್ಲಾ ನಿವಾಸಿಗಳ ೫ನೇ ಅಂಶ ವ್ಯವಸಾಯದವರು. ಈ ಸಂಖ್ಯೆಗೆ ಪಂಚಾಳರೂ ವ್ಯಾಪಾರಿಗಳೊ ಇವರದು ತಕ್ಕಷ್ಟು ಒಪ್ಪುವಂಥಾದ್ದು. ಆದರೆ ಭಟ್ಟರೂ ಜೋಯಿಸರೂ ಸನ್ಯಾಸಿಗಳೂ ಬೈರಾಗಿಗಳೂ ಯೋಗಿಗಳೂ ದಾಸದಾಸಿಯರೂ ಡೊಂಬರರೂ ಹಾವಡಿಗರೂ ಮಂತ್ರಗಾರರೂ ಮಾಟಗಾರರೂ ಗಾರಡಿಗಾರರೂ ಅಡ್ನಾಡಿ ವೈದ್ಯರೂ ಕಣ್ಣುಕಟ್ಟಿನವರೂ ಭಿಕ್ಷೆಗಾರರೂ ಜೋರ ವಿದ್ವಾಂಸರೂ ಮೋಳದವರೂ ಇತ್ಯಾದಿ ನಿಂದ್ಯವೃತ್ತಿಯವರು ಹೇರಳ ಜನರೇ. ವಿಗ್ರಹಾರಾಧನೆಯ ಸಮ್ಮಂಧವಾದ ಜಾತ್ರೆ, ಗೌಜಿ, ಖರ್ಚು ಲೆಖ್ಖವಿಲ್ಲದಷ್ಟು. ಗಣಪತಿಯ ಮೂರ್ತಿಗಳನ್ನು ಮಣ್ಣಿನಿಂದ ರೂಪಿಸಿ, ಪೂಜಿಸಿ, ನೀರಿಗೆ ದೊಬ್ಬಿಕ್ಕುವ ಮರ್ಯಾದೆಗೆ ಬರೀ ಮುಂಬೈ ಪಟ್ಣವೊಂದರಲ್ಲಿ ವರುಷ ವರುಷಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚವಾಗುವದಂತೆ. ಜಾತಿಗಳೂ ಹೇರಳವೇ. ಬಂಗಾಲ ಶೀಮೆಯೊಂದರಲ್ಲಿ ೧ ಸಾವಿರದ ಮೇಲೆ ಜಾತಿಭೇದಗಳು ಇದ್ಧಾವಂತೆ.—“ಬ್ರಹ್ಮನ ಸೃಷ್ಟಿ” ಏನಾಗಿ ಹೋಯಿತು!

ಅಶಂತೆ ದೇಶಕ್ಕೆ ಶೇರಿದಂಥ, ೧೮೬೫ನೇ ಇಸ್ವಿಯಲ್ಲಿ ಸ್ಥಾಪನೆಯಾದಂಥ ಬೆಗೋರೊ ಎಂಬ ಮಿಶ್ಯನ್ ಠಾಣೆಯಲ್ಲಿ ಇತ್ತಲಾಗೆ ೯ ಜನರು ಬೋಧನೆ ಕೇಳಿ, ಸ್ನಾನ ಹೆಂದಿ, ಕ್ರೈಸ್ತ ಸಭಾಂಗಗಳಾದರು—.ಇತ್ತಲಾಗೆ ಒಬ್ಬ ವೆಸ್ಲಿಯನ್ ಮಿಶ್ಯನೆರಿ ಕುಮಾಸೆ ಎಂಬ ಆ ದೇಶದ ರಾಜಧಾನಿಗೆ

ಹೋಗಿ, ಅರಸನ ಭೇಟಿ ಬೇಡಿ ಕೊಂಡು, ಒಡ್ಡೋಲಗದಲ್ಲಿ ಮನವಿ ಮಾಡಿ ಕೊಂಡದೇನಂದರೆ: ಕುಮಾಸೆಯಲ್ಲಿ ಮಿಶ್ಯನ್ ಶಾಲ್ಯೆ ಸ್ಥಾಪನೆಯಾಗಲಿಕ್ಕೂ, ಜನರು ಮಿಶ್ಯನೆರಿಗಳ ಪ್ರಸಂಗ ಕೇಳಿ, ಮನಸ್ಸಿದ್ದವರು ಕ್ರೈಸ್ತ ಸಭೆಯನ್ನು ಅಭ್ಯಂತರವಾಗದೆ ಶೇರಲಿಕ್ಕೂ ಅಪ್ಪಣೆ ಆಗ ಬೇಕೆಂಬದೇ. ಈ ಮನವಿಗೆ ಆ ಅರಸು ಕೊಟ್ಟ ಜವಾಬು ಏನಂದರೆ: “ನಮ್ಮ ಹಿರಿಯರ ಮಾರ್ಗವನ್ನು ನಾವು ಬಿಟ್ಟು ಬಿಡ ಕೆಲಸವಲ್ಲಾ. ನೀವು ನಮ್ಮೂರಿಗೆ ಬಂದು, ಶಾಲೆ ಹಾಕಿ, ಹುಡುಗರಿಗೆ ಬರಹ ಕಲಿಸುವದು ಏನೂ ಅವಶ್ಯವಿಲ್ಲಾ. ಅಶಂತೆಯರ ಹುಡುಗರು ಇಡೀ ಹಗಲು ಕೂತು, ಹೇ! ಹೋ! ಹೈ! ಎಂತ ಕೂಗಿ, ಅಭ್ಯಾಸ ಮಾಡಿ ಕಲಿಯುವದರಿಂದ ಏನೂ ಪ್ರಯೋಜನ ಬಾರದು. ಹುಡುಗರು ಹೆತ್ತವರಿಗೆ ಬೀಸಣಿಗೆ ಬೀಸಿ, ಘಾಳಿ ಹಾಕುವದೂ, ಇತರ ಮನೇ ಕೆಲಸಗಳನ್ನು ಮಾಡಿ, ಸಹಾಯ ಮಾಡೋದೂ ಪ್ರಯೋಜನ. ಸ್ನೇಹಕ್ಕೆ ನಾನು ನನ್ನ ಹುಡುಗರಲ್ಲಿ ಒಂದೆರಡು ಜನ ನಿಮ್ಮ ಶಾಲೆಗೆ ಕಳುಹಿಸಿದರೂ, ನನ್ನ ಪ್ರಜೆಗಳ ಹುಡುಗರು ಹ್ಯಾಗೂ ಹೋಗಲಿಕ್ಕೆ ಕೂಡದು. ಅದಲ್ಲದೆ ಸ್ವಾತಂತ್ರ್ಯವೆಂಬದು ನನ್ನ ಪ್ರಜೆಗಳಿಗೆ ಅಗದೀ ಅನವಶ್ಯವೇ. ತಾವು ಅರಸನ ಆಳುಗಳು ಎಂಬದು ಅವರಿಗೆ ಚನ್ನಾಗಿ ಮನವರಿಕೆಯಾಗಿರ ಬೇಕು. ಹೆಚ್ಚಿನ ತಿಳುವಿಕೆಯೂ ವಿದ್ಯೆಯೂ ಅವರಿಗೇನು? ಬೈಬಲು ನಮಗೆ ತಕ್ಕ ಶಾಸ್ತ್ರವಲ್ಲಾ! ಬಿಳೀ ಮುಖಿಗಳಿಗೆ ಮಾತ್ರ ದೇವರು ಬೈಬಲನ್ನು ಕೊಟ್ಟಿದ್ಧಾನೆ, ಮುಸಲಮಾನರಿಗೆ ಖುರಾನು, ನಮ್ಮಂಥ ಕಪ್ಪು ಜನರಿಗೆ ಫೆತಿಷ್ (ಭೂತ, ಪಿಶಾಚಿ) ಕೊಟ್ಟಿದ್ಧಾನೆ. ಫೆತಿಷ್ (ಭೂತವೇ) ನಮ್ಮ ಗುರು! ದೇವರಿಗೆ ನರಮೇಧವಾಗಲಿ ಅಜಾದಿಮೇಧವಾಗಲಿ ಬೇಕಾದರೆ, ಫೆತಿಷಿಗೆ (ಭೂತಕ್ಕೆ) ತಿಳಿಸುತ್ತಾನೆ, ಫೆತಿಷ್ ನಮಗೆ ತಿಳಿಸ ಬೇಕು. ಫೆತಿಷ್ ತಿಳಿಸಿದ್ದನ್ನೇ ನಾವು ಮಾಡುತ್ತಿದ್ದೇವೆ. ದೇವರನ್ನು ನಾವು ಚನ್ನಾಗಿ ಬಲ್ಲೆವು. ನೀವು ಬಂದು ನಮಗೆ ತಿಳಿಸುವದು ಅವಶ್ಯವಿಲ್ಲಾ. ನರಮೇಧಗಳ ಮರ್ಯಾದೆಯನ್ನು ನಾವು ಬಿಟ್ಟು ಬಿಡಲಾರೆವು. ಬಿಳೀ ಜನರ ದೇವರು ಕಪ್ಪು ಜನರ ದೇವರು ಒಬ್ಬನೇ? ನೀವು ಬಿಳೀ ಜನರು: ನಾವು ಕಪ್ಪು. ನಿಮ್ಮ ದೇವರು ಬೇರೆ: ನಮ್ಮ ದೇವರು ಬೇರೆ! ನಮ್ಮ ಹಿರಿಯರ ಮಾರ್ಗವು ನಮ್ಮ ಮಾರ್ಗ. ಅವರು ಮಾಡಿದ್ದು ನಾವು ಸಹ ಮಾಡುತ್ತೇವೆ. ಅವರು ಹೋದಲ್ಲಿಗೆ ನಾವೂ ಹೋಗುತ್ತೇವೆ.”—ದಪ್ಪ ಜೋಲು ತುಟಿಯುಳ್ಳ ಆ ನಿಗ್ರೋ ಕಿರಾತರಾಜ ಹೇಳಿದ್ದಕ್ಕೂ ಈ ದೇಶದ ಬ್ರಾಹ್ಮಣರಾದರೂ ಹೇಳುವಂಥಾದ್ದಕ್ಕೂ ಹೆಚ್ಚು ಕಡಿಮೆ ಏನು? ಆ ಕಿರಾತರು ಈ ದೇಶದವರ ಶಿಷ್ಯರೋ? ಈ ದೇಶದವರು ಆ ಕಿರಾತರ ಶಿಷ್ಯರೋ?

ಪಶ್ಚಿಮ ಆಫ್ರಿಕದಲ್ಲಿಯ ನಿಗರ್ ಎಂಬ ನದಿ ಸಮುದ್ರಕ್ಕೆ ಸಂಗಮವಾಗುವ ನೆರೆಯಲ್ಲಿ ಬೊನ್ನಿ ಎಂಬ ಪಟ್ಣ ಉಂಟು. ಇತ್ತಲಾಗಿನ ವರುಷಗಳಲ್ಲಿ ಅಲ್ಲಿಯೂ ಮಿಶ್ಯನ್ ಕೆಲಸ ನೆಲೆಗೊಂಡು, ಕೆಲವು ಜನರು ಕ್ರೈಸ್ತಸಭೆಯಲ್ಲಿ ಶೇರಿಸಿ ಕೊಳ್ಳೋಣಾದರು. ಆದರೆ ೧೮೭೩ನೇ ಇಸ್ವಿಯಂದಿನಿಂದ ಆ ಕಡೆಯ ಕ್ರೈಸ್ತರು ಧರ್ಮಾರ್ಥ ದ್ವೇಷಕ್ಕೂ ಹಿಂಸೆಗೂ ಗುರಿಯಾಗುತ್ತಾ ಬಂದರು. ೧೮೭೫ನೇ ಇಸ್ವಿಯ ನವಂಬರ ತಿಂಗಳಲ್ಲಿ ಆ ಕಡೆಯ ಪ್ರಥಮ “ರಕ್ತಸಾಕ್ಷಿ” ಮರಣ ತಾಳಿದನು. ಈ ಸಂಗತಿಯನ್ನು ಇತ್ತಲಾಗೆ ಒಂದು ವರ್ತಮಾನಪತ್ರದಲ್ಲಿ ಓದಿ, ಕ್ರೈಸ್ತಸಭಾಪತ್ರಪಠಕರಿಗೂ ಅದು ತಿಳಿದು ಬರ ತಕ್ಕಂಥಾದ್ದೆಂತ ನೆನಸಿ ಕೊಂಡು, ಅದರ ಸಂಕ್ಷೇಪವನ್ನು ಬರದು ಕೊಡುತ್ತೇನೆ. ಆ ರಕ್ತಸಾಕ್ಷಿಯ ಹೆಸರು ಯೋಶುವ. ಅವನು ಗುಲಾಮನಾಗಿದ್ದು, ಕ್ರೈಸ್ತಸಭೆಯನ್ನು ಶೇರಿದ ಮೇಲೆ ಭೂತಪೂಜೆಗೆ ಇನ್ನು ಶೇರಿ ಕೊಳ್ಳಲೊಲ್ಲದ ಕಾರಣ ಅವನ ಒಡೆಯನು ಅವನನ್ನು ಹಿಡಿಸಿ, ಒಂದು ಡೋಣಿಯಲ್ಲಿ ಹಾಕಿಸಿ, ಮುಳುಗಿಸಿ ಬಿಡ ಬೇಕೆಂತ ನದಿಯ ಮಧ್ಯಕ್ಕೆ ವೈಯಿಸಿದನು. ಯೋಶುವ ಡೋಣಿಯಲ್ಲಾದರೂ ಬಿಡದೆ ಯೇಸುವನ್ನು ಪ್ರಾರ್ಥಿಸು

ತ್ತಿದ್ದದು ಒಡೆಯನನ್ನು ಬಹಳ ಕೆದರಿಸಿ ಕನಲಿಸಿತು. ಮಧ್ಯ ನದಿಗೆ ಮುಟ್ಟಿ, ಒಡೆಯನು ಯೋಶುವನನ್ನು ನೀರಿಗೆ ದೊಬ್ಬಿಸಿ ಬಿಟ್ಟನು. ಆದರೆ ನೀರಿನಲ್ಲಿ ಬಿದ್ದವನು ಮುಣುಗಿ ಹೋಗದ್ದರಿಂದ, ಅವನನ್ನು ನೀರಿನಿಂದ ದೋಣಿಗೆ ತಿರಿಗಿ ತೆಗಿಸಿ, ಈಗಾದರೂ ಭೂತಕ್ಕೆ ಬಲಿಯನ್ನರ್ಪಿಸುತ್ತೀಯೋ? ಎಂತ ಪ್ರಶ್ನೆ ಹಾಕಿ ಕೇಳಿದ್ದಕ್ಕೆ ಯೋಶುವ— "ಅದು ಎಂದಿಗೂ ಆಗದು!" ಎಂತ ಕಟ್ಟುತ್ತರ ಕೊಡಲು, ಒಡೆಯನು ಅವನನ್ನು ಇನ್ನೊಮ್ಮೆ ನೀರಿನಲ್ಲಿ ದೊಬ್ಬಿ ಹಾಕಿಸಿ, ಮುಳುಗಿ ಹೋಗುವ ತನಕ ಅವನ ತಲೆಗೂ ಮೈಗೂ ಹುಟ್ಟುಗಳಿಂದಲೂ ಗಳಗಳಿಂದಲೂ ಹೊಡಿಸುತ್ತಾ ಇರಿಯಿಸುತ್ತಾ, ಅವನನ್ನು ಮುಳುಗಿಸಿ ಕೊಲ್ಲಿಸಿದನು.

ರೋಮನ್ ಕಥೋಲಿಕರಿಗೆ ಒಂದೊಂದು ಉಳುಪಡಿ, (ಅವಶಿಷ್ಟ, ಅಂದರೆ: ಸಾಂತರು, ಅರ್ಚ್ಯಶಿಷ್ಟರು ಎನ್ನಿಸಿ ಕೊಳ್ಳುವಂಥವರಿಂದ ಉಳಿದಂಥಾದ್ದೆಂದೆನ್ನಿಸಿ ಕೊಳ್ಳುವ ಎಲುಬು ಮುಂತಾದ್ದೇನಾದರೂ) ಒಂದು ದೇವತೆ ಎಂಬ ಹಾಗೆ. ಸ್ಪೈನ್ಯ ದೇಶದ ಮನ್ರೋಸವೆಂಬ ಒಂದೇ ಪಟ್ಣದಲ್ಲಿ ಹತ್ತೆಂಟು ಅಂಥ ಉಳುಪಡಿಗಳು ಇದ್ದು, ಪೂಜೆಗೀಜೆ ಹೊಂದುತ್ತಿರುತ್ತವೆ. ಅವು ಇದ್ದಲ್ಲಿಗೆ ದೊಡ್ಡ ಜಾತ್ರೆಗಳೂ ಆಗುತ್ತವೆ. ಆ ಉಳುಪಡಿಗಳು ಎಂಥವೆಂತ ಒಂದೆರಡು ಹೇಳಿದರೆ ತಿಳಿಯುವದು. ಹೆರೋದನು ಬೇತ್ಲೆಹೇಮಿನಲ್ಲಿ ಕೊಲ್ಲಿಸಿದ ಕೂಸುಗಳ ನಾಲ್ಕು ಎಲುಬು. ೧೧ ಸಾವಿರ ಅರ್ಚ್ಯಶಿಷ್ಟ ಕನ್ಯೆಗಳ ಒಂದೆಲುಬಿನ ಒಂದು ತುಕಡಿ. (ಸದರಿ ೧೧ ಸಾವಿರ ಅರ್ಚ್ಯಶಿಷ್ಟ ಕನ್ಯೆಗಳು ಯಾರವರು? ಎಲ್ಲಿದ್ದವರು? ಎಂಬದು ಏನೂ ತಿಳಿಯದ್ದು. ಮತ್ತು ಅಷ್ಟು ಜನರ ಎಲುಬು ಎನ್ನಿಸಿ ಕೊಳ್ಳ ತಕ್ಕಂಥಾ ಎಲುಬು ಎಂಥಾದ್ದಾಗಿದ್ದೀತು!) ಅರಣ್ಯದಲ್ಲಿ ಪಿಶಾಚನು ಹಸಿದ ಯೇಸುವಿಗೆ "ಈ ಕಲ್ಲುಗಳು ರೊಟ್ಟಿಗಳಾಗುವ ಹಾಗೆ ಹೇಳು" ಎಂದಂದು ತೋರಿಸಿದ ಕಲ್ಲುಗಳಲ್ಲಿ ಒಂದು. ಮೂಡಣದಿಂದ ಬಂದ ಜ್ಞಾನಿಗಳು ಯೇಸುಶಿಶುವಿಗೆ ಅರ್ಪಿಸಿದ ಧೂಪದ ಕೆಲವು ಚೂರುಗಳು ಇತ್ಯಾದಿಗಳು.

ಈ ತರದ ಉಳುಪಡಿಗಳು ಆ ಪಟ್ಣದವರಿಗೆ ದೊರಕಿದ್ದೂ ಅಂಥಂಥವೆಂತ ತಿಳಿದು ಬಂದಗೂ ಪತಕರಿಗೆ ಬಹು ಆಶ್ಚರ್ಯವೆಂದು ಕಾಣುವದು. ವಿಲಾಯತಿಯ ಬೇರೆ ಬೇರೆ ರೋಮನ್ ಪುಣ್ಯಕ್ಷೇತ್ರಸ್ಥಳಗಳಲ್ಲಿ ಬೇರೆ ಬೇರೆ ಆಶ್ಚರ್ಯಕರ ಉಳುಪಡಿಗಳನ್ನು ಮಡಗಿ, ಯಾತ್ರಿಕರಿಗೆ ತೋರಿಸಿ ಕೊಡುತ್ತಿದ್ದಾರೆ. ಅವುಗಳಲ್ಲಿ ಸಹ ಒಂದೆರಡು ಹೆಚ್ಚಿನ ಆಶ್ಚರ್ಯದವುಗಳನ್ನು ಹೇಳುತ್ತೇನೆ. ಒಂದೂರಿನ ದೇವಾಲಯದಲ್ಲಿ ಐಗುಪ್ತದೇಶದಲ್ಲಾದ ಕತ್ತಲೆಯ ಒಂದು ತುಕಡಿಯುಂಟು. (ಆ ಕತ್ತಲೆ ಬಹಳ ದಪ್ಪವಾಗಿತ್ತಲ್ಲಾ!) ಮತ್ತೊಂದರಲ್ಲಿ ಯಾಕೋಬನು ಕನಸು ಕಂಡ ಏಣಿಯ ಒಂದು ರವೆ. ಇನ್ನೊಂದರಲ್ಲಿ ಮರೀಯಳನ್ನೂ ಯೇಸುಶಿಶುವನ್ನೂ ಐಗುಪ್ತಕ್ಕೆ ಹೊತ್ತು ಕೊಂಡು ಹೋದ ಕತ್ತೆಯ ಒಂದಿಷ್ಟು ಲದ್ದಿ. ಬೇರೊಂದರಲ್ಲಿ ಮರೀಯಳ ಮೊಲೇಹಾಲು ತುಂಬಿರುವ ಒಂದು ಭರಣಿ!— ಹಿಂದುಗಳು ೩೩ ಕೋಟಿ ದೇವರುಗಳನ್ನು ಕಲ್ಪಿಸಿ ಕೊಂಡು ಇದ್ದಾರೆ; ಬೇಕಾದರೆ, ರೋಮಾಯರು ಸಹ ೩೩ ಕೋಟಿ ದೇವತೆಗಳಂತಾದ ಅವಶಿಷ್ಟಗಳನ್ನು ಗೊತ್ತು ಹತ್ತಿಸಿ ಕೊಂಡು, ಪೂಜೆಗೀಜೆ ಮಾಡಲಿಕ್ಕೆ ಸಂದೇಹವಿಲ್ಲಾ. ಅಣ್ಣಾ ಘಟ್ಟಿಗನೋ? ತಮ್ಮ ಘಟ್ಟಿಗನೋ? ಇಬ್ಬರೇ ಘಟ್ಟಿಗರು ಸೈ!

ಕಳೆದ ಕ್ರಿಸ್ತವಾರದಲ್ಲಿ (ದಶಂಬರ ೨೫ರಲ್ಲಿ) ಅಯ್ಯುನ್ಯೈಯ್ಯ ತಿರಿಗಿ ೭೧ ಮಂದಿ ಚೀನಿಯವರನ್ನು ಸ್ನಾನ ಕೊಟ್ಟು, ಸಭೆಯಲ್ಲಿ ಸೇರಿಸಿ ಕೊಂಡರು.

ಮಾರ್ಚ್ ೧೧ರಲ್ಲಿ ಮಂಗಳೂರಲ್ಲಿ ಇಬ್ಬರು ಪ್ರಾಯಸ್ಥರಿಗೆ ಕ್ರೈಸ್ತ ಸ್ನಾನಸಂಸ್ಕಾರವಾಯಿತು. ಒಬ್ಬನು ಉಡ್ಪಿಯಲ್ಲಿ ಕೊಂಕಣಸ್ಥರಲ್ಲಿ ಹುಟ್ಟಿದವನು. ಎರಡನೆಯವನು ಕುಶಸ್ಥ್ಯರಲ್ಲಿ ಹುಟ್ಟಿ, ಬ್ರಹ್ಮಸಮಾಜವನ್ನು ಸೇರಿ ಕೊಂಡಿದ್ದವನು. ಅವರಿಬ್ಬರು ನಿಜದೇವಪ್ರಸಾದಿಗಳು ಆಗುವಂತೆ ದೇವರು ಅವರಿಗೆ ಸದಾ ಪ್ರಸನ್ನನಾಗಿರಲಿ!

Printed at the Basel Mission Press, Mangalore.

# ಕ್ರೈಸ್ತ ಸಭಾ ಪತ್ರ

ಪುಸ್ತಕ ೯. **MAY 1877.** ಅಂಕೆ ೧೧.

**ಅಡಕವು:** ಲೋಕದ ಸ್ನೇಹವು—ದೇವರಿಲ್ಲವೋ?—ಚಲೋ. ಬಾಲವೃತ್ತಾಂತವು—ಒಂದು ನೆರೆ—ಉತ್ತರಗಳು—ಹೊಸ ಪ್ರಶ್ನೆಗಳು—ವಿವಿಧ ವರ್ತಮಾನಗಳು.

## ಲೋಕದ ಸ್ನೇಹವು.

### ಶೂನ್ಯಕ್ಕೆ ಶೂನ್ಯ.

ಎಲೇ, ಲೋಕವೇ! ಶೂನ್ಯಕ್ಕೆ ಶೂನ್ಯವೆಂಬೀ ಮಾತು ನನಗೂ ನಿನಗೂ ತಾಗುವಂಥಾದ್ದು. ನಾನು ನಿನಗೆ ಸರಿ ಬೀಳೆ; ನೀನು ನನಗೆ ಸರಿ ಬೀಳಲಾರಿ: ನಾನು ಬೇರೆ, ನೀನು ಬೇರೆ; ನಿನ್ನುಪಕಾರವು ನನಗೆ ಬೇಡವೇ ಬೇಡಾ! ನಿನ್ನಲ್ಲಿ ನಾ ಮೋಹ ಗೊಳ್ಳೆ, ಯಾಕಂದರೆ ನೀನು ಶೀಯೆಂದು ಆಶೆ ಹುಟ್ಟಿಸಿ, ನೀಡಿ, ತಿನ್ನಿಸುವ ಭಕ್ಷ್ಯಗಳಲ್ಲಿ ವಿಷವೇ ಬೆರಿಕೆಯಾಗಿದೆ. ನನ್ನಲ್ಲಿ ನೀನು ಇಷ್ಟ ಪಡಲಾರಿ, ಯಾಕಂದರೆ ನೀನು ನನ್ನನ್ನೂ, ನನ್ನ ಪ್ರಾರ್ಥನೇ ಮೇಲೆ ನನ್ನ ತಂದೆ ದೇವರು ನಿನಗೆ ಅನ್ನವನ್ನು ನೀಡಿ, ಕಾಲಕ್ಷೇಪ ಮಾಡಿಸುತ್ತಿರುವ ಉಪಕಾರವನ್ನೂ ಅರಿತು ಕೊಳ್ಳಲೊಲ್ಲದ ಅಪಕಾರಿಯಷ್ಟೇ!

ಕ್ರೈಸ್ತ ಸದ್ಭಕ್ತನು ಲೋಕದಲ್ಲಿ ಮೋಹ ಗೊಳ್ಳಲಿಕ್ಕೆ ಲವಲೇಶಮಾತ್ರವಾದರೂ ಕಾರಣವಿಲ್ಲವೇ ಇಲ್ಲಾ, ಯಾಕಂದರೆ ಲೋಕವು ರೂಪ ಕೆಟ್ಟ ಕೇವಲ ದುರ್ಗಂಧದ ಮುದಿ ಕಸಮಾಳಿಯಷ್ಟೇ. ಪಿಶಾಚನೆಂಬ ದುರಾತ್ಮಕ್ಕೆ ವಶವಾಗಿ, ಕೆಟ್ಟತನಗಳಲ್ಲಿ ಮುಳಿಗಿ ಹೋಗಿರುವ ಲೋಕದಿಂದ (೧ ಯೋಹಾ. ೫, ೨೦.) ತನಗೇನಾದರೂ ಮೇಲು ಒದಗಿ, ಉಪಕಾರವಾದೀತೆಂತ ನಂಬಿ, ಲೋಕದ ಸ್ನೇಹವನ್ನು ಪಡಕೊಳ್ಳಲಿಕ್ಕೆ ಸತ್ಕ್ರೈಸ್ತನು ಹುಚ್ಚನಲ್ಲಾ.

ಆದರೆ ಸತ್ಕ್ರೈಸ್ತರನ್ನು ಬಹಳವಾಗಿ ಗಣನೆಗೆ ತರಲಿಕ್ಕೆ ಲೋಕಕ್ಕೆ ಬಹು ಕಾರಣವದೆ; ಯಾಕಂದರೆ ಸತ್ಕ್ರೈಸ್ತರು ಲೋಕದಲ್ಲಿ ಇಲ್ಲವಾದರೆ, ಲೋಟನು ಹೊರಟು, ಬಿಟ್ಟು ಹೋದ ಸೊದೋಮು ಅಗ್ನಿಗಂಧಕವೃಷ್ಟಿಯಲ್ಲಿ ನಾಶವಾದಂತೆ ಲೋಕವು ಅಗ್ನಿಪ್ರಳಯವಾಗಿ ನಾಶವಾಗಿ ಹೋಗುವದು. ಆದಾಗ್ಯೂ ಲೋಕವು ನನ್ನನ್ನು ಸ್ನೇಹಿಸದಿರಲಿ! ಯಾಕಂದರೆ ಅದು ನನ್ನನ್ನು ಸ್ನೇಹಿಸಬೇಕಾದರೆ, ನಾನು ಅದಕ್ಕೆ ಅನುಗುಣವೂ ಅನುಕೂಲವೂ ಆಗಿ, ಸರಿ ಬೀಳ ಬೇಕಾದೀತು; ಇದು ಆಗದ್ದರಿಂದ ಲೋಕದ ಸ್ನೇಹವು ನನಗೆ ಬೇಡವೇ ಬೇಡಾ! ಲೋಕಕ್ಕೆ ನಾನು ಇಷ್ಟನಾಗಿ ಮೆಚ್ಚದಿದ್ದರೆ, ಲೋಕವು ನನ್ನನ್ನು ಗಣ್ಯ ಮಾಡಲಶಕ್ಯವಾಗಿದೆ. ಆದರೆ ಲೋಕಕ್ಕೆ ಇಷ್ಟಪ್ರಿಯನಾಗೋಣವು ನನಗೆ ದೂರವಾಗಿರಲಿ! ನನ್ನ ಸದ್ಧರ್ಮ ಸದ್ಭಕ್ತಿ ಎಂಬೀ ಮೊದಲಾದ್ದು ಲೋಕಕ್ಕೆ ಮೆಚ್ಚದ್ದು.

ಅನ್ಯಾಯಾದಿಗಳಲ್ಲಿ ಮುಳಿಗಿರುವ ಲೋಕಕ್ಕೆ ನಾನು ಶೇರಿಕೆಯಾಗ ಬೇಕಾದರೆ, ನಾನೂ ಅನ್ಯಾಯಾದಿಗಳಲ್ಲಿ ಮುಳುಗ ಬೇಕಾದೀತು. ಹೀಗಿರಲಾಗಿ ಲೋಕವು ನನಗೆ, ನಾನು ಲೋಕಕ್ಕೆ ಬೇಡವೇ ಬೇಡ ಎಂಬದು ಇನ್ನು ಮುಂದೆಯೂ ಹೌದಾಗಿರಲಿ!

ಹಾಗಾಗಿದ್ದರೂ ಲೋಕದ ದೆಶೆಯಿಂದ ನನಗೆ ಬಹು ಪ್ರಯೋಜನವಾಗಿ, ಬಹಳ ಲಾಭ ಬರುತ್ತಿರುತ್ತದೆ. ಹ್ಯಾಗಂದರೆ: ನನಗೆ ಮನಸ್ಸಾಗುವಷ್ಟಕ್ಕೆ ನಾನು ಲೋಕಕ್ಕೆ ಉಪಕಾರಿಯಾಗಿರ ಬಹುದು; ಆದರೆ ಲೋಕವು, ದೇವರ ಚಿತ್ತವಾದರೆ, ನನ್ನುಪಕಾರವನ್ನು ಬಗೆಯದೆ, ನನಗೆ ಅಪಕಾರವನ್ನು ಮಾಡ ಬೇಕೆಂದಿರುವಾಗಲೇ ನನಗೆ ಅನುಕೂಲವಾಗಿ, ಉಪಕಾರ ಮಾಡಿ, ನನ್ನ ಮೇಲಿಗೆ ಕೈ ಕೊಡ ಬೇಕು. ನನಗೆ ಮಾನ ಪ್ರಾಣ ಹಾನಿ ಪಡಿಸ ಬೇಕೆಂದಿರುವಾಗಲೇ ಲೋಕವು ನನಗೆ ಜೀವನೋಪಾಯಗಳನ್ನು ಒದಗಿಸಿ, ಅನ್ನಪಾನಾದಿಗಳನ್ನು ತಂದು ಕೊಡ ಬೇಕು. ನಾನಾಳ್ವ ದೊರೆಯೇ ಸೈ! ಇಡೀ ಪೃಥ್ವಿ ನನ್ನ ಬಿಟ್ಟಿಯಾಳು ಅಷ್ಟೇ: ಭೃತಿ (ಕೂಲಿ) ಕೊಡದ ನನಗೆ ಅದು ಊಳಿಗ ಮಾಡುತ್ತಿರ ಬೇಕು. ಈ ಪೃಥ್ವಿ ನನ್ನ ಹೊರೆಯಾಳಾಗಿ ನನ್ನನ್ನು ಹೊರುವದು; ನಾನೋ ಮಜೂರಿ ಕೊಡದೆ, ಅದರ ಮುಖದಲ್ಲೇ ತುಳಿದಾಡುತ್ತಿದ್ದೇನೆ. ನನ್ನ ಕೈಯಿಂದ ಪ್ರತಿ ಹೊಂದದೆ ಅದು ನನಗೆ ಅನ್ನ ನೀಡಿ, ಉಣ್ಣಿಸ ಬೇಕು. ಲೋಕಕ್ಕೆ ನಾನು ಆಗದವನಾದರೂ, ಅದು ನನ್ನನ್ನು ಸಹಿಸ ಬೇಕು. ನನ್ನ ಮೇಲೆ ಬೇಸರ ಪಟ್ಟಿರುತ್ತದೆ, ಆದರೂ ನನ್ನನ್ನು ದೂಡಿ ಬಿಡ ಬಾರದು. ನಿನ್ನನ್ನು ಕೊಂಧಾಕುತ್ತೇನೆಂದು ನನಗೆ ಹೆದರಿಸಿ, ಹಲ್ಲು ಕಡಿಯುತ್ತಿರುವಾಗಲೇ ನನಗೆ ಬದುಕನ್ನು ತಂದು ಕೊಡ ಬೇಕು. ತನ್ನದೆಲ್ಲಾ ಭುಜಬಲಪರಾಕ್ರಮದಿಂದ ಅದು ನನ್ನದೊಂದು ಕೂದಲನ್ನಾದರೂ ಉದುರಿಸಲಿಕ್ಕೂ ಕಿತ್ತಾಕಲಿಕ್ಕೂ ಕೂಡದು. ನಾನೋ ಒಂದೇ ನಿಟ್ಟುಸುರು ಬಿಟ್ಟು, ಅದನ್ನು ಹಾರಿಸಿ ಬಿಡ ಬಹುದು.

ನಾನು ಲೋಕಕ್ಕೆ ಇಷ್ಟಪ್ರಿಯನಾಗ ಬೇಕೆಂಬುವವನಾದರೆ, ನನಗೆ ಬಹಳ ಕಷ್ಟವೂ ನಷ್ಟವೂ ಆದೀತು, ಯಾಕಂದರೆ ಲೋಕಕ್ಕೆ ಇಷ್ಟವಾಗೋ ಸಂಗತಿ ದೇವರಿಗೆ ಅನಿಷ್ಟವೂ ಅಸಹ್ಯವೂ ಆಗುವಂಥಾದ್ದಾಗಿದೆ. ಲೋಕದ ಸ್ನೇಹವು ದೇವರ ವೈರವೇ. (ಯಾಕೋಬ. ೪, ೪.) ದೇವರ ಸ್ನೇಹವು ಉತ್ತಮವೋ? ಮನುಷ್ಯರದು ಉತ್ತಮವೋ? ದೇವರದೇ! ಲೋಕವು ಒಲಿದರೇನು? ಮುನಿದರೇನು? ಒಲಿದರೂ, ನಾದಾರಿ ಲೋಕವು ಏನು ಕೊಟ್ಟೀತು? ಲೋಕಕ್ಕೆ ಇದ್ದದೆಲ್ಲಾ ಲೋಕದ ಸೊತ್ತಲ್ಲಾ: ನನ್ನ ತಂದೆಯದೇ! ಈತ ಕೊಡುವಾತನೇ! ಮನಸ್ಸಿದ್ದ ಹಾಗೆ ಕೊಡುತ್ತಾನೆ, ತೆಗೆದು ಕೊಳ್ಳುತ್ತಾನೆ. ಈ ಹೊತ್ತು ಲೋಕದ ಕೈಯಲ್ಲಿದ್ದದು ನಾಳೆ ಒಂದು ವೇಳೆ ನನ್ನ ಕೈಗೆ ಬರಲಿಕ್ಕೆ ಸಾಕು. ಲೋಕವು ನನಗೆ ಮುನಿದರೆ, ಕೇಡೇನೂ ನನಗಾಗದು! ಲೋಕವು ನನ್ನದೇನು ಸುಲುಕೊಂಡು, ನಷ್ಟ ಪಡಿಸ ಬಹುದು? ನನಗೆ ಸೊತ್ತೆಂಬದು ಇಲ್ಲವಲ್ಲಾ! ನನ್ನ ಸೊತ್ತೂ ಐಶ್ವರ್ಯವೂ ಅಂದರೆ: ಸಾಕೆಂಬುವ ಮನಸ್ಸು. ನನ್ನ ಘನವಂದರೆ: ಸದ್ಗುಣ; ನನ್ನ ಸಂತೋಷವೂ ಭಾಗ್ಯವೂ ಅಂದರೆ: ದೂರದ ಮನಸ್ಸಾಕ್ಷಿ; ನನ್ನ ಪಿತ್ರಾರ್ಜಿತವಂದರೆ: ಸ್ವರ್ಗ; ನನ್ನ ಸ್ವಾರ್ಜಿತವಂದರೆ: ದೇವತಾ ಕೃಪೆ. ನನ್ನ ಸರ್ವಸ್ವವಂದರೆ: ಪರಾತ್ಪರನೇ! ಲೋಕವು ನನ್ನ ಮೇಲೆ ದ್ವೇಷವಿಟ್ಟರೆ, ನನಗೆ ಅತ್ಯಂತ ಲಾಭವೇ. ಲೋಕದ ವೈರವು ದೇವರ ಸ್ನೇಹವೇ. ಲೋಕವು ನನಗೇನಾದರೂ ಅಪಹಾರ ಮಾಡಿದರೆ, ದೇವರು ನೂರಾರಷ್ಟು ಬದಲು ಕೊಡುವನು. ಲೋಕವು ನನ್ನನ್ನು ದುಃಖ ಪಡಿಸಿದರೆ, ದೇವರು ಸಂತೋಷ ಪಡಿಸುವನು. ಲೋಕವು ನನ್ನನ್ನು ಅಪಮಾನ ಪಡಿಸಿದರೆ, ದೇವರು ಬಹುಮಾನ ಕೊಟ್ಟು, ಘನ ಪಡಿಸುವನು. ಲೋಕವು ಎಷ್ಟು ಮುನಿದು ಶಪಿಸುವದೋ ಅಷ್ಟು ದೇವರು ಒಲಿದು ಆಶೀರ್ವದಿಸುವನು. ಲೋಕವು ನನ್ನನ್ನು ಬಿಟ್ಟು ಹೋದರೆ, ದೇವರು ನನ್ನ ಬಳಿಗೆ ಬರುವನು

ಲೋಕವು ನನ್ನನ್ನು ಕೈ ಬಿಟ್ಟರೆ, ದೇವರು ನನಗೆ ಕೈ ನೀಡುವನು. ಲೋಕವು ನನ್ನನ್ನು ತಳ್ಳಿ ಬಿಟ್ಟರೆ, ದೇವರು ನನ್ನನ್ನು ಸೇರಿಸಿ ಕೊಳ್ಳುವನು.

## ದೇವರಿಲ್ಲವೋ?

ಅಥವಾ

## ದೇವರ ನ್ಯಾಯಾಧಿಪತ್ಯವು.

ಬೆರ್ಲೀನ್ ಪಟ್ಣದಲ್ಲಿ ಒಂದು "ವೈದ್ಯಶಾಲಾವಾರ್ತಿಕಪತ್ರವು" ವಾರವಾರಕ್ಕೆ ಛಾಪೆಯಾಗಿ ಪ್ರಸಿದ್ಧವಾಗುತ್ತಿರುತ್ತದೆ. ಕಳೆದ ೧೮೭೭ನೇ ಇಸ್ವಿಯ ನವಂಬರ ತಿಂಗಳು ತಾರೀಖು ೨೦ರಲ್ಲಿ ಪ್ರಕಟವಾದ ಸದರಿ ಪತ್ರದಲ್ಲಿ ಒಬ್ಬ ವೈದ್ಯಶಾಸ್ತ್ರಿ ಮುಂದಿನ ವಿವರಸಂಕ್ಷೇಪವನ್ನು ಬರದು ಪ್ರಕಟ ಮಾಡಿದ್ದಾನೆ; ಹ್ಯಾಗಂದರೆ:

ಒಂದಾನೊಂದು ರಾತ್ರಿಯಲ್ಲಿ ಲ . . . . ಎಂಬ ಬಡಿಗೇ ಕೆಲಸದ ಹುಡುಗನೂ ಅವನ ಗೆಳಿಯರಾದ ನಾಲ್ಕೈದು ಮಂದಿ ಇತರ ಪೋರಗಳೂ ತಮ್ಮೂರಿನ ಗೋರೀ ಸ್ಥಳವನ್ನು ಹಾದು ಹೋಗುವ ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ್ಯೆ, ಸದರಿ ಬಡಿಗೇ ಪೋರನು ತನ್ನ ಜತೆಯವರಿಗೆ ಹೇಳಿ ಅಂದದೇನಂದರೆ: "ನಾಲ್ಕೈದು ಕುಪ್ಪಿ (ಶೀಸೆ) ಬೀರಿಗೆ ನಾನು ಈ ಗೋರೀ ವಠಾರದ ಪ್ರಾಕಾರವನ್ನು ಹತ್ತಿ, ಒಳಗೆ ಹೋಗಿ, ಮಧ್ಯದಲ್ಲಿಯ ಗೋರೀ ಕಲ್ಲನ್ನು ಮೂರಾವರ್ತಿ ಸುತ್ತಿ ಬಂದು, ಒಂದೊಂದಾವರ್ತಿ—ದೇವರಾಗಲಿ ಪಿಶಾಚನಾಗಲಿ ಇದ್ದದಾದರೆ, ನನ್ನನ್ನು ವೈದು ಹೋಗಲಿ! ಎಂತ ಘಟ್ಟ್ಯಾಗಿ ಕೂಗಿ ಬಿಡುವೆನು." ಉಳಿದ ಪೋರಗಳು ಅವನ ಎದೆಗೆ ಆಶ್ಚರ್ಯ ಪಟ್ಟು, "ಒಳ್ಳೇದು, ನೀನು ಹಾಗೆ ಮಾಡಿ ಬಂದರೆ, ನಿನಗೆ ನಾಲ್ಕು ಕುಪ್ಪಿ ಬೀರ್ ಕೊಡಿಸುತ್ತೇವೆ" ಎಂತ ಒಡಂಬಟ್ಟು, ಪಂಥವಿಟ್ಟರು. ಅವನು ಪಂಥ ಹಾಕಿ ಕೊಂಡು, ಹೋಗಿ, ಪ್ರಾಕಾರ ಹತ್ತಿ, ಒಳ ಧುಮುಕಿ, ಪಂಥವಾಡಿದಂತೆ ಕೂಗುತ್ತಾ ಆ ಗೋರೀ ಕಲ್ಲನ್ನು ಸುತ್ತಿ ಬಂದನು. ಆದರೆ ಮೂರನೇ ಸರ್ತಿಗೆ ಸುತ್ತಿ ಬಂದು, ಆ ಪ್ರಕಾರ ಒದರಲಿಕ್ಕೆ ಬಾಯಿ ಬಿಡುತ್ತಲೇ ಅವನ ಸ್ವರ ಫಕ್ಕನೆ ಅಣಗಿ, ಬಾರದೆ ಹೋಯಿತು; ಮತ್ತವನು ತಿರುಗಿ ಕೊಂಡು, ಓಟ ಮಾಡಿ, ಸಂಗಡಿಗರ ಬಳಿಗೆ ಓಡಿ ಬಂದನು. ಅವರ ನಡುವೆಗೆ ಬಂದವನು ಮಾತಾಡಲಾರದೆ, ರೋಮಾಂಚವಾಗಿ, ಜೀವದ ಕಳೆ ಕುಂದಿ ಹೋಗಿ, ಹೆಣದೋಪಾದಿಯಾಗಿದ್ದನು. ಅವರು ಅವನನ್ನು ಮನೆಗೆ ತಕೊಂಡು ಬಂದು, ಕುಂಡ್ರಿಸಿದ ಬಳಿಕ ಮಾತ್ರ ಅವನಿಗೆ ಬಾಯಿ ತಿರಿಗಿ ಬಂದು, ತನಗೆ ಸಂಭವಿಸಿದ್ದನ್ನು ಹೇಳಿ ತಿಳಿಸಲಿಕ್ಕೆ ಕೂಡಿತು. ಅವನು ಅಂದು ಮನೆಯಲ್ಲಿ ಹೇಳಿ ತಿಳಿಸಿದ್ದನ್ನು ಅನಂತರದಲ್ಲಿ ಆಸ್ಪತ್ರಿಯಲ್ಲಿಯೂ ಸರಕಾರಿ ವೈದ್ಯರಿಗೂ ಪೊಲೀಸು ಧೊರೆಗಳಿಗೂ ವಾಜ್ಮೂಲ ಕೊಟ್ಟನು. ಅವನು ಕೊಟ್ಟ ವಾಜ್ಮೂಲವು ಹ್ಯಾಗಂದರೆ: "ದೇವರಾಗಲಿ ಪಿಶಾಚನಾಗಲಿ ಇರುವ ಪಕ್ಷಕ್ಕೆ ನನ್ನನ್ನು ವೈದು ಹೋಗಲಿ! ಎಂತ ನಾನು ಮೂರನೇ ಸರ್ತಿಗೆ ಬಾಯಿ ಬಿಟ್ಟು ಕೂಗಲಿಕ್ಕಿದ್ದಾಗಲೇ, ಯಾರೋ ನನ್ನ ಕೈ ತಡವಿ, ಹಿಡಿದ ಹಾಗಾಯಿತು. ಕೈ ಹಿಡಿತವು ನನಗೆ ಸ್ಪರ್ಶಗೋಚರವಾಗಿ ತಿಳಿಯುತ್ತಲೇ, ದಿಗಿಲು ಹಿಡಿದು, ರೋಮಾಂಚವಾಗಿ, ನನ್ನ ಸರ್ವಾಂಗವು ಗಡಗಡ ನಡುಗುವಂಥಾದ್ದಾಯಿತು. ಅಲ್ಲಿಂದ ಓಡಿ, ಓಡಿ ಬರುವಾಗ, ಯಾರೋ ನನ್ನಂಗಿಯನ್ನು ಹಿಡಿದು ಎಳದೆಳದಂತಾಯಿತು." ಅವನ ವಾಜ್ಮೂಲವಿಷ್ಟೇ. ಈ ಸಂಗತಿ ಅವನಿಗೆ ಸಂಭವಿಸಿದನಂತರ ಅವನಿಗೆ ಹಸಿವೆಯಾಗಲಿ ನಿದ್ರೆಯಾಗಲಿ ಇನ್ನು ಬಾರದೆ, ಸುಖವೂ ವಿಶ್ರಾಂತಿಯೂ ಪೂರಾಗಿ ತಪ್ಪಿ ಹೋಯಿತು. ಎಡಕೈಗೆ ಬಿಡದ ಛಳಿಯಿಂದಾಗುವ ತರದ ನಡುಗು ಹಿಡಿದು ಹೋಯಿತು. ಕೈಯೂ ತೋಳೂ ಬಾತು ಹೋಗಿ, ಮೊಣಕೈಯೆಲ್ಲಾ ಬಹಳ ನೋಯುವಂಥಾದ್ದಾ

ಯಿತು. ರಕ್ತಪಿತ್ತರೋಗವು ಶುರುವಾಗಿ, ಅವನ ಬಾಯಿಯೆಲ್ಲಾ ನಾರಿ, ನಾರಿ, ಹೆಣದ ನಾತದಂಥಾ ನಾತ ಬಡಿಯುವದಾಯಿತು. ಕಡೆಗೆ ಮೈಯೆಲ್ಲಾ ರಕ್ತಪಿತ್ತರೋಗಗ್ರಸ್ತವಾಗಿ ಹೋಯಿತು. ಶುರುವಿನಲ್ಲಿ ಬಾವು ಕೆಂಪಗೆ ಕಂಡಿತು, ಆ ಮೇಲೆ ಕೆಂಗರಿಯದಾಗಿ, ಕಡೆಗೆ ಪೂರ್ಣ ಕಪ್ಪಾಗಿ ಹೋಯಿತು. ಕಪ್ಪು ಗುಳ್ಳೆಗಳಿಂದ ಒಂದು ಕೆಂಗರಿ ನೀರು ಸೋರುವಂಥಾದ್ದಾಯಿತು. ೩ಲನೇ ದಿನಕ್ಕೆ ಆ ನೀರು ಸೋರುವಂಥಾದ್ದು ನಿಂತು, ಎಡಗೈ ಒಣಗಿ ಹೋಗಿ, ಚರ್ಮವು ಕಪ್ಪು ತೇಪೆಗಳೋಪಾದಿಯಾಗಿ ಸುಲಿದು, ಉದುರಿ ಬೀಳುವಂಥಾದ್ದಾಯಿತು. ಯಾವ ಯಾವ ಔಷಧಗಳಿಂದಾಗಲಿ ಇತರ ಚಿಕಿತ್ಸೋಪಾಯಗಳಿಂದಾಗಲಿ ರೋಗವು ಏನೂ ಗುಣವಾಗದೆ ದಿನದಿನಕ್ಕೆ ಹೆಚ್ಚುತ್ತಾ ಬಂತು. ಇಡೀ ೪೦ ದಿವಸ ಅವನು ಆಸ್ಪತ್ರಿಯಲ್ಲಿ ಬಿದ್ದು, ಮಿತಿಮೀರಿ ಹೋದ ಅಂಜಿಕೆಯನ್ನೂ ಮನೋವ್ಯಥೆಯನ್ನೂ ರೋಗವೇದನೆಯನ್ನೂ ಪಟ್ಟು, ಸತ್ತು ಹೋದನು. ಅವನನ್ನು ನೋಡುತ್ತಾ ಕೇಳುತ್ತಾ ಇದ್ದ ಆಸ್ಪತ್ರಿಯ ವೈದ್ಯರಿಗೂ ಇತರ ಜನರಿಗೂ, ಆಸ್ಪತ್ರಿಗೆ ಬರುತ್ತಾ ಹೋಗುತ್ತಾ ಇದ್ದ ಊರಿನ ಜನರಿಗೂ ಅವನಿಗೆ ಸಂಭವಿಸಿದ್ದು ದೇವರ ಭಯಹಸ್ತದ ಪೆಟ್ಟೆಂತ ತಿಳಿದು, ಬೆರಗೂ ದಿಗಿಲೂ ಹಿಡಿದು ಹೋಯಿತಂತೆ.

"ದೇವರು ಹಾಸ್ಯ ಮಾಡಲ್ಪಡುವವನಲ್ಲಾ" ಎಂಬ ವಾಕ್ಯವು ಈ ಸಂಗತಿಯಲ್ಲಿಯೂ ನಿಜವೇ ಎಂತ ಕಾಣುತ್ತದೆ. ಆದರೆ ದೇವರಿಲ್ಲಾ ಎಂಬ ಹಾಗೆ ನಡಕೊಳ್ಳುವಂಥಾದ್ದೂ ಮಾತಾಡುವಂಥಾದ್ದೂ ಅನೇಕ ಪ್ರಕಾರದಲ್ಲಿ ಆಗುವದುಂಟು. ಆ ಬಡಿಗೇ ಪೋರನು ಸ್ಥೂಲ ತರದಲ್ಲಿ ಮಾಡಿದ್ದನ್ನು ಅನೇಕರು ಸೂಕ್ಷ್ಮ ತರದಲ್ಲಿ ಮಾಡುತ್ತಿದ್ದಾರೆ. ಸೂಕ್ಷ್ಮ ತರದ ಅವಿಶ್ವಾಸಕ್ಕೂ ಭಕ್ತಿಹೀನತೆಗೂ ದಂಡವಾಗದೆ ಹೋಗದು. ಅದಕ್ಕೆ ಸಾಧಾರಣವಾಗಿ ಪ್ರತ್ಯಕ್ಷವಾಗಿಯೂ ಅದ್ಭುತವಾಗಿಯೂ ದಂಡವಾಗದೆ ಹೋಗುವದರಿಂದ, ಜನರು ಅದಕ್ಕೆ ಹೆದರಿ ಕೊಳ್ಳುವದಿಲ್ಲಾ; ಆದರೆ ಅದು ಸಹ ಮಹಾ ಭಯಂಕರವಾದ ದಂಡಕ್ಕೆ ಗುರಿಯಾಗುವಂಥಾದ್ದೆಂತ ಪರದಲ್ಲಿ ಕಂಡು ಬರುವದು.

---

## ಚಲೋ ಬಾಲವೃತ್ತಾಂತವು.

ಅಥವಾ

## ಬಾಲಭಾವದ ವಿಶ್ವಾಸವೂ ಪ್ರಾರ್ಥನೆಯೂ.

ಚಿಕ್ಕ ಪ್ರಾಯದ ಹುಡುಗಿಯೊಬ್ಬಳಿಗೆ ಬಹಳ ಹಲ್ಲುನೋವಾಗಿ, ಅದರ ಪೀಡೆ ಒಮ್ಮೆ ಬಹು ತೀಕ್ಷ್ಣವಾಗಿ ಹತ್ತುವಲ್ಲಿ ಅವಳು ಫಕ್ಕನೆ ಪ್ರಾರ್ಥಿಸಿ ಅಂದದೇನಂದರೆ: "ಪ್ರಿಯ ರಕ್ಷಕಾ, ಯೇಸು! ನೀನು ನಾನಾಗಿಯೂ, ನಾನು ನೀನಾಗಿಯೂ ಇರುವ ಪಕ್ಷಕ್ಕೆ ನನ್ನದರಂಥ ಹಲ್ಲುನೋವು ನಿನಗೆ ಆಗುವದಾದರೆ, ನಾನು ವಿಲಂಬವಿಲ್ಲದೆ ನಿನ್ನ ನೋವು ಪರಿಹರಿಸಿ, ಗುಣ ಮಾಡಿ ಕೊಟ್ಟೇನು." ಆ ಬಾಲೆ ಹೀಗೆ ಅಂದಾಕ್ಷಣಕ್ಕೆ ಹಲ್ಲುನೋವು ಹೋಗಿ, ಅವಳಿಗೆ ಗುಣವಾಯಿತಂತೆ.

---

## ಒಂದು ನೆರೆ.

(೧೨೦ನೇ ಪುಟದಿಂದ ಮುಂದೆ.)

### ೪ನೇ ಪರ್ವ: ತಾಯಂದ್ಯರ ಅವಸಾನ. ಹುಡುಗರಿಬ್ಬರು.

ಹಿಂದಿನ ವಿವರವು ನಡೆದ ಸಾಯಂಕಾಲದ ಈಚೆಯ ನಾಲ್ಕೈದು ವಾರಗಳ ಮೇಲೆ ಆ ಬಡವರ ಗುಡಸಲು ಬರೇ ಶೋಕಪಂಕ ತುಂಬಿ ಹೋದ ಕುಣಿಯಂತಾಗಿ ಹೋಗಿತ್ತು. ಜೀವದ ಕಳೆ ಕುಂದಿ, ಜೋರ್ಜನ ತಾಯಿ ಏಳಲಾರದೆ, ಹಾಸಿಕೆಯೋ? ಹಲಿಗೆಯೋ? ಏನೋ? ಎಂದು

ಚನ್ನಾಗಿ ಕಾಣದಷ್ಟು ಅಧಮ ತರದ ಶಯನೀಯದಲ್ಲಿ ಬಿದ್ದೇ ಬಿದ್ದಿದ್ದಳು. ಜೋರ್ಜನು ಅಂದಿನ ರಾತ್ರೀ ಮುಂಜಾನೆಗೆ ಎದ್ದು, ಹೋಗಿ, ವೈದ್ಯಶಾಸ್ತ್ರಿಯನ್ನು ಮನೆಗೆ ಕರಕೊಂಡು ಬಂದಿದ್ದನು; ಆದರೆ ಆದಷ್ಟು ಚಿಕಿತ್ಸೋಪಾಯವೆಲ್ಲವು ನಿಷ್ಫಲವಾಗಿ ಹೋಯಿತು. ದಿನ ದಿನಕ್ಕೆ ಆಕೆಯ ತ್ರಾಣ ಉ ತಾರಾಗಿ, ಆಕೆ ತಾರುಗೊಳ್ಳುತ್ತಾ ಬಂದಳು. ತನ್ನ ಕಡೇ ಘಳಿಗೆ ಹತ್ತರವೇ ಎಂತ ಅವಳಿಗೆ ಚನ್ನಾಗಿ ಭಾವನೆಯಾಗಿ ಗೊತ್ತಿತ್ತು. ಒಬ್ಬರನ್ನೊಬ್ಬರು ಬಿಟ್ಟು ಹೋಗುವದು ತಾಯಿಗೂ ಮಗನಿಗೂ ಮಹಾ ಕಷ್ಟವೆಂತ ಕಂಡದರಿಂದ, ಅವಸಾನವು ಸಮೀಪಿಸುತ್ತಾ ಬಂದದು ಇಬ್ಬರಿಗೆ ಅಧಿಕ ದುಃಖಕ್ಕೆ ಕಾರಣವಾಯಿತು. ತಾಯಿಯನ್ನು ಹಗಲಲ್ಲಿಯೂ ಇನ್ನು ಬಿಟ್ಟು ಹೋಗಲಿಕ್ಕೆ ಕೂಡದೆ, ಪರಾಂಬರಿಸಿ, ಹಸಿ ಬಿಸಿ ನೋಡ ಬೇಕಾಗಲಾಗಿ ಹುಡುಗನು ನೆರೆಹೊರೆಯ ಹುಡುಗನೊಬ್ಬನಿಗೆ ತನ್ನ ಡೋಣಿ ಬಾಡಿಗೆ ನಿರ್ಣಯಿಸಿ, ಒಪ್ಪಿಸಿ ಕೊಡ ಬೇಕಾದ್ದರಿಂದ, ಇಬ್ಬರಿಗೆ ಜೀವನೋಪಾಯಕ್ಕೂ ಬಹಳ ಇಕ್ಕಟ್ಟಾಯಿತು. ಜೋರ್ಜನು ಏನೂ ದುಡಿದು ಕೊಳ್ಳಲಾರದ ಕಾರಣ ಅವನೂ ತಾಯಿಯ ಕೂಡ ಹೊಟ್ಟೆಗಿಲ್ಲದೆ ಸಾಯ ಬೇಕೆಂಬ ಭಯಕ್ಕೆ ಆಸ್ಪದ ಕಾಣ ಬಹುದಿತ್ತು. ಧನಿಯ ಹೆಂಡತಿ ಮರ್ಗರೇತಳು ತನ್ನ ಹುಡುಗಿಯ ಕೈಯಿಂದಾಗಲಿ ಕೈಯಾಳುಗಳ ಕೈಯಿಂದಾಗಲಿ ಗಂಡನಿಗೆ ತಿಳಿಯದೆ ತನ್ನ ಮೇಜಿನ ಉಳಿವುಗಳನ್ನು ಕಳುಹಿಸುತ್ತಾ ಬಾರದಿದ್ದರೆ, ಹ್ಯಾಗೂ ಇಬ್ಬರು ಹೊಟ್ಟೆಗಿಲ್ಲದೆ ಸಾಯ ಬೇಕಿತ್ತು. ಬಡವೆಯ ತ್ರಾಣ ಕುಂದುತ್ತಾ ಬಂದಷ್ಟಕ್ಕೆ ಹುಡುಗನ ಮೇಲಿನ ಮಮತೆಯೂ ಅಕ್ಕರೆಯೂ ಹೆಚ್ಚುತ್ತಾ ಬಂತು. ಅವನು ಇಲ್ಲದ ಪಕ್ಷಕ್ಕೆ ಸಾವು ಆಕೆಗೆ ಕಹಿಯಾಗದೆ, ಭಯಂಕರವೆಂತ ಕಾಣದೆ, ಬಹು ಶೀಘ್ರವಾಗಿ ಸಂತೋಷವೇ ಎಂತ ಕಾಣುತ್ತಿತ್ತು; ಆದರೆ ತಾನೂ ಹೋದ ಮೇಲೆ ಮಗನ ಗತಿಯೇನು? ಯಾರೂ ಇಲ್ಲದ ಹುಡುಗ ಎಲ್ಲಿ ಬೀಳುವನು? ಏನಾಗಿ ಹೋಗುವನು? ಎಂಬೀ ಚಿಂತೆ ಸಹ ಹೆಚ್ಚುತ್ತಾ ಬಂದದರಿಂದ ಹೋಗುವದು ಅವಳಿಗೆ ಬಹು ಕಹಿಯಾಗಿ ಕಂಡು, ಕರುಳುಗಳಲ್ಲಿ ಮಹಾ ಸಂಕಟ ಕೊಟ್ಟಿತು. ಆದರೂ ಎಡೆಬಿಡದೆ ತನ್ನ ದುಃಖವನ್ನು ಯೇಸುಸ್ವಾಮಿಗೆ ಅರಿಕೆ ಮಾಡಿ ಪ್ರಾರ್ಥಿಸುತ್ತಾ, ತನ್ನ ಚಿಂತಾಭಾರವನ್ನು ಆತನ ಮೇಲೆ ಹಾಕುತ್ತಾ ಬಂದ ಕಡೆಗೆ ಮಗನ ಚಿಂತೆ ಹೋಗಿ, ಮನಸ್ಸಿಗೆ ಹಿಡಿದಿದ್ದ ಭಾರವು ತಪ್ಪಿ, ಶಾಂತಿಯೂ ಸಮಾಧಾನವೂ ಆಕೆಗೆ ದೊರಕಿತು. ಕಟ್ಟಕಡೆಗೆ ಕಡೇ ಘಳಿಗೆ ಬಂದೊದಗಿತು. ಅಳುತ್ತಾ ಕಣ್ಣೀರಿಡುತ್ತಾ ಮಗನು ಒಬ್ಬನೇ ತಾಯಿಯ ಹಾಸಿಕೇ ಬದೀಲಿ ನಿಂತಿದ್ದಾಗ ಆದಷ್ಟು ಹತ್ತರ ಬರಬೇಕೆಂತ ಅವಳು ಅವನಿಗೆ ಕೈಸನ್ನೆ ಮಾಡಿ ಕರೆದಳು. ಅವನು ಆಕೆಯ ತಲೆಯ ಬದೀಲಿ ಹಾಸಿಕೇ ಮೇಲೆ ಮೊಣಕಾಲೂರಿ ಕೊಳ್ಳಲು, ಆಕೆ ಬಹು ಅಣಗಿದ ಸ್ವರದಿಂದ ಮೆಲ್ಲ ಮೆಲ್ಲಗೆ ಹೇಳಿದ್ದೇನಂದರೆ: “ಮುದ್ದೇ! ಈಗ ಅಪ್ಪಣೆಯಾಯಿತು. ನನ್ನ ರಕ್ಷಕನಾದ ಯೇಸು ಈಶನಲ್ಲಿ ಹೋಗುತ್ತೇನೆ. ನಿನ್ನನ್ನು ಬಿಟ್ಟು ಹೋಗುತ್ತೇನೆ. ಅನಾಥನಾಥ ಯೇಸು ನಿನ್ನ ಗತಿಯಾಗಿ, ನಿನ್ನ ಕಣ್ಣೀರನ್ನೊರಸಿ ಬಿಟ್ಟು, ನಿನ್ನನ್ನಾದರಿಸುವನು. ನಿನ್ನ ಮುಂದೆ ಇರುವ ದಾರಿ ಬಹು ಇಕ್ಕಟ್ಟಿನದು; ಆದರೆ ಆತನು ನಿನ್ನನ್ನು ಬಿಡದೆ ನಡಿಸುವನು. ನಾನಾದರೆ, ದುಃಖವೂ ಶೋಕವೂ ರೋಗವೂ ಕ್ಷುಧೆಯೂ ಉಷ್ಣವೂ ಶೀತವೂ ಇಲ್ಲದಲ್ಲಿಗೆ ಹೋಗುತ್ತೇನೆ. ದೇವರೇ! ಮರಣಾಂಧಕಾರದಲ್ಲಿಯೂ ನನ್ನನ್ನು ಕೈಬಿಡದೆ, ನಡಿಸಿ, ದಾಟಿಸು! ಹಾ! ನನ್ನ ರಕ್ಷಕ ಬಾಳಿ ಆಳುತ್ತಾನೆಂತ ಬಲ್ಲೆ. ‘ಮರಣಾಂಧಕಾರದ ತಗ್ಗಿನಲ್ಲಿ ನಡೆದರೂ, ಕೇಡಿಗೆ ಭಯ ಪಡೆನು; ಯಾಕಂದರೆ ನೀನು, ಓ ಯೆಹೋವಾ! ನನ್ನ ಸಂಗಡ ಇದ್ದೀ; ನಿನ್ನ ಬೆತ್ತವೂ ಊರುಕೋಲೂ ನನ್ನಾದರವಾಗಿದ್ದಾವೆ.’ ನನ್ನ ಮುದ್ದು ಮಗಾ! ನೀನು ತಾಳಿ, ನಂಬಿಕೆಯಿಂದಿರು! ದೇವರ ರಾಜಾಸನದ ಮುಂದೆ ನಾವು ಒಬ್ಬರಿಗೊಬ್ಬರು ತಿರಿಗಿ ಶಿಕ್ಕಬೇಕು. ಕರ್ತಾ! ನಿನ್ನ ಚಿತ್ತವಾಗಲಿ!” ಇಷ್ಟು ಮಾತಾಡಿದ ಕೂಡಲೇ ಜೋರ್ಜನ ತಾಯಿ ಕೇವಲ

ನಿತ್ರಾಣಿಯಾಗಿ, ನಾಲಿಗೆ ಬಿದ್ದೋದಳು. ಆ ಕ್ಷಣಕ್ಕೆ ಮರ್ಗರೇತಳು ಬಂದಳು. ಬರೀ ಅಸ್ಥಿಚರ್ಮವಾಗಿ ಬಿದ್ದಾಕೆಯನ್ನು ನೋಡಿ, ಅವಳು ಶಾನೆ ಕಣ್ಣೀರಿಟ್ಟು, ಬಿಕ್ಕಿ ಬಿಕ್ಕಿ ಅಳುವವಳಾದಳು. ಅತ್ತ ಶಬ್ದಕ್ಕೆ ಜೋರ್ಜನ ತಾಯಿ ಇನ್ನೊಮ್ಮೆ ಕಣ್ದೆರದು ನೋಡಿದಳು. ಮರ್ಗರೇತಳನ್ನು ಕಂಡು, ಬಾಯಿ ಬಿಟ್ಟಳು; ಆದರೆ ಸ್ವರ ಹೊರಡಿಸಲಿಕ್ಕೆ ತ್ರಾಣ ಸಾಲಲಿಲ್ಲಾ. ತೀರಾ ತಾರಿ, ಬರೇ ಎಲುಬು ತೊಗಲು ಆಗಿದ್ದ ಕೈಯನ್ನು ಎತ್ತಿ; ಆಕೆಯ ಕಡೆಗೆ ಚಾಚಿದಳು. ಹಣೆಯೆಲ್ಲಾ ಬೆವರಾಗಿ ತಣ್ಣಗಿತ್ತು. ಮುಖಭಾವವು ಸತ್ತವಳ ತರದ್ದಾಗಿತ್ತು. ಒಂದು ದೊಡ್ಡ ನಿಟ್ಟುಸುರಿನಲ್ಲಿ ಆಕೆಯ ಉಸುರಾಟ ನಿಂತು ಹೋಯಿತು. ಬಿಕ್ಕಿ ಬಿಕ್ಕಿ ಅಳುತ್ತಾ ಮರ್ಗರೇತಳು ಆಕೆಯ ರೆಪ್ಪೆಗಳನ್ನು ಕಣ್ಣಿನ ಮೇಲೆ ಎಳದು, ಮುಚ್ಚಿ ಬಿಟ್ಟಳು. ಮತ್ತು ಇನ್ನು ಯಾರೂ ಇದ್ದಿಲ್ಲದ ಹುಡುಗನನ್ನು ಬಹಳ ಕನಿಕರಿಸಿ ನೋಡಿ, ನೆರೆಹೊರೆಯ ಜನರನ್ನು ಕರಕೊಂಡು ಬರಲಿಕ್ಕೆ ಹೋದಳು. ತಾಯಿ ಹೋದ್ದಕ್ಕೆ ಜೋರ್ಜನ ದುಃಖವು ಅಮಿತವೇ ಆಗಿತ್ತು.

ಜೋರ್ಜನ ತಾಯಿ ತೀರಿ ಹೋದ ನಾಲ್ಕೈದನೇ ದಿನದ ಮುಂಜಾನೆಗೆ ಅರುಣೋದಯದ ಹೊಳಪಿನಲ್ಲಿ ಗೋರೀ ಸ್ಥಳದ ಪ್ರಾಕಾರಕ್ಕೆ ತಾಗಿ ಇದ್ದೊಂದು ಹೊಸ ಸಮಾಧಿಯ ಬದೀಲಿ ಒಬ್ಬ ಹುಡುಗನು ಹಶಿ ಹೂಮಾಲೆಗಳನ್ನು ಗೋರೀ ಮೇಲೆ ಹಾಕಿ, ಮೊಣಕಾಲೂರಿ ಕೊಂಡು, ಬಿಕ್ಕಿ ಬಿಕ್ಕಿಯಳುತ್ತಾ ಆಕಾಶಕ್ಕೆ ಕಣ್ಣು ಕೈಗಳನ್ನೆತ್ತಿ, ಪ್ರಾರ್ಥನೆ ಮಾಡುವದನ್ನು ನೋಡ ಬಹುದಿತ್ತು. ಜೋರ್ಜನಲ್ಲದೆ ಯಾವ ಹುಡುಗ ಅವನ ತಾಯಿಯ ಸಮಾಧೀ ಬಳಿಯಲ್ಲಿ ಬಂದು ಪ್ರಾರ್ಥಿಸುತ್ತಿದ್ದಾನು! ಅವನ ಅಡಿಗಳ ಬಳಿಯಲ್ಲಿ ಒಂದು ಕೋಲೂ ಬಹು ಸುಮಾರಿನದೊಂದು ಗಂಟೂ ಇಟ್ಟಿತ್ತು. ಊರಲ್ಲಿ ಅವನಿಗಿನ್ನು ಯಾರೂ ಏನೂ ಇರದಿದ್ದ ಕಾರಣ ಪರದೇಶಕ್ಕೆ ಹೊರಟು ಹೋಗ ಬೇಕೆಂದಿದ್ದನು. ಅವನು ದೇಶಾಂತರಕ್ಕೆ ಹೊರಟು ಹೋಗದ ಹಾಗೆ ಮರ್ಗರೇತಳು ತನ್ನ ಕೈಲಾದಷ್ಟು ಮಾಡಿ, ಹೇಳಿ, ತಡಿಸಿ ಇದ್ದಳು; ಆದರೆ ದೇಶಾಂತರದ ಆಲೋಚನೆಗೆ ಸೋತು ಹೋಗಿದ್ದ ಅವನ ಮನಸ್ಸನ್ನು ಅದಕ್ಕೆ ತಪ್ಪಿಸಲಾಗದ್ದು ಎಂತ ತಿಳಿದು, ಆಕೆ ಅವನಿಗೆ ಕೆಲವು ಬಟ್ಟೆಗಳನ್ನೂ ಸ್ವಲ್ಪ ರೊಖ್ಖವನ್ನೂ ಬುತ್ತಿಯನ್ನೂ ಕಟ್ಟಿ, ಕೊಟ್ಟು, ಆಶೀರ್ವದಿಸಿ ಕಳುಹಿಸಿದ್ದಳು. ಜೋರ್ಜನ ಧನಿಯಾದ ಮರ್ಗರೇತಳ ಗಂಡನು ಜೋರ್ಜನ ತಾಯಿಗಿದ್ದ ಎಲ್ಲಾ ಮಡಿಕೆ ಗಡಿಗೆಗಳನ್ನೂ ಇತರ ಮನೇ ಸಾಮಾನುಗಳನ್ನೂ ಡೋಣಿಯನ್ನೂ ಬಾಡಿಗೇ ಬಾಕಿಗೆ ಜಪ್ತಿ ಮಾಡಿಸಿದ್ದನು. ಜೋರ್ಜನ ಪಿತ್ರಾರ್ಜಿತವೂ ಸ್ವಾರ್ಜಿತವೂ ಮಣ್ಣುಮಸಣವೂ ಜಪ್ತಿಯಾದ ಮೇಲೆ ಇನ್ನು ಊರಲ್ಲಿರಲಿಕ್ಕೆ ಮನಸ್ಸು ಸ್ವಲ್ಪವಾದರೂ ಒಡಂಬಡದ ಕಾರಣ ಅಂದಿನ ಮುಂಜಾನೆಗೆ ದೇಶಾಂತರಕ್ಕೆ ಹೊರಟು ಹೋಗಲಿಕ್ಕೆ ತಯಾರಾಗಿ, ಎದ್ದು, ಗೋರಿಗೆ ಬಂದು ತಾಯಿಯ ಸಮಾಧೀ ಬದೀಲಿ ಇನ್ನೊಮ್ಮೆ ದೇವರಿಗೆ ಪ್ರಾರ್ಥಿಸಿ, ಊರನ್ನು ಬಿಟ್ಟು ಹೋಗಲಿಕ್ಕಿದ್ದನು. ಪ್ರಾರ್ಥಿಸಿ, ಎದ್ದು, ಮಹಾ ದುಃಖಾಕ್ರಾಂತನಾಗಿ ತಾಯಿಯ ಗೋರಿಯನ್ನು ಇನ್ನೊಮ್ಮೆ ನೋಡಿ, ಗಂಟನ್ನೂ ಕೋಲನ್ನೂ ತೆಗೆದು ಕೊಂಡು, ನಡೆದನು. ಆ ಪಿತೃವನದ ಬಾಗಲಿಂದ ಹೊರಟು, ರಸ್ತೆಗೆ ಮುಟ್ಟಿ ಶೇರುವಷ್ಟರಲ್ಲಿ ಎರಡು ಕುದುರೆ ಕಟ್ಟಿದ್ದ ಭಂಡಿ ಬರುವ ಸದ್ದು ಕೇಳಲಾಯಿತು. ಗಾಡಿಯವನು ಬಹಳ ದೊಡ್ಡ ಭಂಡೀ ಹೊರೆ ಗೋಧಿಯನ್ನು ಸಂತೆಗೆ ತಕ್ಕೊಂಡು ಹೋಗುವವನಾಗಿ, ಹೆಚ್ಚು ಹೊತ್ತು ಹೋಗದೆ ಸಂತೆಗೆ ಮುಟ್ಟ ಬೇಕೆಂತ ಅವಸರ ಪಟ್ಟು, ಕುದುರೆಗಳನ್ನು ಬೈಯುತ್ತಾ, ಶಪಿಸುತ್ತಾ, ಚಬುಕು ಶಳೆಯುತ್ತಾ ಭಂಡಿಯನ್ನು ಹೊಡಕೊಂಡು ಹೋದನು. ಅವನು ಕೊನ್ರಾದನೆಂತ ಜೋರ್ಜನು ದೂರದಲ್ಲಿ ಗುರುತು ಹಿಡಿದನು. ಅವನ ತಾಯಿಯ (ಮರ್ಗರೇತಳ) ಹಾಗೂ ತಂಗಿಯ (ಮರೀಯಳ) ಪ್ರೀತಿಯನ್ನೂ ಅನೇಕ ಉಪಕಾರಗಳನ್ನೂ ನೆನಸಿ, ಮನಸ್ಸಿನಲ್ಲಿ ಅವರನ್ನು ಹರಸಿ, ಮೆಲ್ಲ ಮೆಲ್ಲನೆ ನಡೆದು ನಡೆದನು,

ಕೊನ್ರಾದನು ದೊಡ್ಡ ವಜ್ಜೆ ಹೇರಿದ್ದ ಭಂಡಿಯನ್ನು ಸಂತೆ ನೆರೆದ ಪೇಟೆಗೆ ಮುಟ್ಟಿಸಿದನು. ಸವಾರಿಯಲ್ಲಿಯೂ ಭಂಡಿಯನ್ನು ಹೊಡಕೊಳ್ಳೋದರಲ್ಲಿಯೂ ಅವನು ಬಹು ಘಟ್ಟಿಗನೇ; ಆದರೆ ಬೈಯೋದು, ಶಾಪ ಹಾಕೋದು, ಕುಡಿಯೋದು, ಪಗಡೆಯಾಡೋದು, ಜೂಜಾಡೋದು ಮೊದಲಾದ್ದರಲ್ಲಿಯೂ ಘಟ್ಟಿಗನಾಗಿದ್ದನು. ಕುದುರೆಗಳನ್ನು ಚನ್ನಾಗಿ ಅಂಕೆಯಲ್ಲಿಟ್ಟು, ನಡಿಸ ಬಲ್ಲವನಾಗಿದ್ದನು; ಆದರೆ ತಾನು ಯಾರ ಅಂಕೆಯಲ್ಲಿರಲೊಲ್ಲದವನು. ಎಲ್ಲಿಗೋ ಹೋಗಿ, ಮನೆಗೆ ಬಂದ ಮೇಲೆ ತನ್ನಪ್ಪನಿಗೆ ತನ್ನ ಬಿಂಕವನ್ನೂ ಸಾಹಸಗಳನ್ನೂ ಹೇಳುವನು. ಬಹಳ ಬಡಾಯಿ ಮಾಡಿ, ತನ್ನ ದೌಲತ್ತನ್ನು ಪ್ರಶಂಸೆ ಗೈಯುವನು. ಅವನ ಮಾತು ಕೇಳಿದರೆ, ಅವನಿಗೆ ಸಮಾನಸ್ಕಂಧರು ಯಾರೂ ಇಲ್ಲ, ಅವನ ಕುದುರೆಗಳಿಗೆ ಜೋಡಾಗುವ ಕುದುರೆ ಇಲ್ಲಾ, ಅವನ ಗೋಧಿಯಂಥಾದ್ದು ಸಂತೆಯಲ್ಲೆಲ್ಲಾ ಇಲ್ಲವೇ ಇಲ್ಲಾ ಎಂತ ನಂಬ ಬೇಕು. ಇಲ್ಲಿ ಒಬ್ಬ ಕೋಮಟಿಗ ಅಲ್ಲಿ ಒಬ್ಬ ಗೇನಯ್ಯ ತನಗೆ ಸೋತು ಹೋದಂಥ ಅವನ ಮಾತು ಕಥೆ ಬಹಳವೇ. ಧಾನ್ಯಗಳನ್ನು ಮಾರಿ, ಈಸಿ ಕೊಂಡ ಹಣದ ಲೆಖ್ಖವನ್ನೂ ಆಯಾ ಅಂಗಡಿಗಳಲ್ಲಿ ಏನಾದರೂ ತಿಂದು, ಕುಡಿದು, ಖರ್ಚು ವೆಚ್ಚ ಮಾಡಿದ ಲೆಖ್ಖವನ್ನೂ ಅಪ್ಪನಿಗೆ ಒಪ್ಪಿಸಿ ಕೊಡುವಾಗಲೂ, ಅಪ್ಪನು—"ಬೇಶ್! ಬೇಶ್! ನೀನು ಗಿಡದ ಬುಡದಲ್ಲೇ ಪ್ರಾಯ ಹೋಗುವ ಮೊಲವಲ್ಲಾ! ಶಹಬಾಸ್! ಶಹಬಾಸ್! ನೀನು ತೊತ್ತುಮಗನೂ ಪುಕ್ಕನೂ ಅಲ್ಲಾ! ನಿನ್ನಪ್ಪನ ಮಗ ನೀನು! ಬೇಶ್! ಬೇಶ್!" ಎಂತ ನಕ್ಕು ಹೊಗಳುವನು.

ಆದರೆ ಕೊನ್ರಾದನ ಅಪ್ಪ ನಕ್ಕರೆ, ತಾಯಿ ನಿಟ್ಟುಸುರು ಬಿಡುವಳು; ಕಣ್ಣೀರನ್ನಾದರೂ ಇಡುವಳು. ದಿನ ದಿನಕ್ಕೆ ಅವಳಿಗೆ ಕಷ್ಟ ಹೆಚ್ಚುತ್ತಾ ಬಂತು. ಗಂಡನು ಸಾರಾಯಿಗೆ ಸೋತು ಹೋಗಿ, ಕುಡಿಯೋ ದುರ್ವ್ಯಸನದಲ್ಲಿ ದಿನ ದಿನಕ್ಕೆ ಹೆಚ್ಚೆಚ್ಚಾಗಿ ಮುಳಿಗಿ ಹೋದನು. ಮಗನು ಅದೇ ದುರ್ವ್ಯಸನದಲ್ಲಿ ಅಪ್ಪನಂತಾಗುವ ಮಾರ್ಗ ಹಿಡಿದಿದ್ದನು. ಅವನ ಪ್ರಾಯವು ಹೆಚ್ಚುತ್ತಾ ಬಂದಷ್ಟಕ್ಕೆ ದುರ್ವಿಷಯಾಸಕ್ತಿಯೂ ಹೆಚ್ಚುತ್ತಾ ಬಂತು. ಜೂಜೂ ನಾಚೂ, ಶೀಸೆಯೂ ವೀಣೆಯೂ, ಭಂಡಾಟವೂ ಹೊಡದಾಟವೂ ಎಲ್ಲಿಯೋ ಅಲ್ಲಿ ಕೊನ್ರಾದನೂ ತಪ್ಪದೆ ಇರುವನು. ರಾತ್ರಿ ರಾತ್ರಿ ಮನೆಗೆ ಬಾರದೆ, ಎಲ್ಲಿಯೋ ಸುಳಿದಾಡಿ ಕಳೆಯುವದು ಅವನ ಮರ್ಯಾದೆಯಾಯಿತು. ಒಳ್ಳೇ ತಾಯಿ ದುಃಖಾಕ್ರಾಂತಳಾಗಿ, ಮನೋವ್ಯಥೆ ತಡೆಯಲಿಕ್ಕೆ ಕೂಡದೆ, ಕಣ್ಣೀರಿಕ್ಕುತ್ತಾ ಕೂತರೆ, ಮರೀಯಳು ಆಕೇ ಹತ್ತರ ಕೂತು, ತನ್ನಿಂದಾದಷ್ಟು ಆದರಿಸಿ, ಶಾಂತಿ ಪಡಿಸ ನೋಡುವಳು. ಆದರೆ ದಿನ ದಿನಕ್ಕೆ ಆಕೆಯ ತ್ರಾಣ ಕುಂದುತ್ತಾ ಬಂತು. ಶೋಕ ಚಿಂತೆಗಳ ಉರುಬಿಗೆ ಜಾಡ್ಯ ಹುಟ್ಟಿ, ಆಕೆ ಹಾಸಿಕೇ ಮೇಲೆ ಬಿದ್ದಳು. ಆ ವರುಷದ ಶರತ್ಕಾಲ ಪೂರ್ಣವಾಗದೆ, ಅವಳಿಗೆ ಕಾಲ ಬಂದು, ಬಿಡುಗಡೆಯನ್ನು ಒದಗಿಸಿತು. ತಾಯಿ ತೀರಿ ಹೋದ್ದು ಮರೀಯಳಿಗೆಂಥಾ ಪೆಟ್ಟು! ತಾಯಿ ತೀರಿ ಹೋದ್ದು ಜೋರ್ಜನಿಗೆ ಹೆಚ್ಚಿನ ಪೆಟ್ಟೋ? ಮರೀಯಳಿಗೆ ಹೆಚ್ಚಿನ ಪೆಟ್ಟೋ? ಪರವಾಸವು ಜೋರ್ಜನ ಗತಿಯಾಯಿತು; ಆದರೆ ಮರೀಯಳಿಗೆ ಬರೇ ರಾಕ್ಷಸರ ಸಹವಾಸದಂಥ ಸಹವಾಸ ಉಳಿಯಿತು. ತಾಯಿ ಇರುವಾಗ ತಂದೆಯ ಬೈಗಳಿಗೂ ಅಣ್ಣನ ತಂಟೆಗಳಿಗೂ ಮನನೊಂದು ಕೊಂಡವಳು ತಾಯಿಯ ಹತ್ತರ ಬಂದು, ತನ್ನ ಸುಖ ದುಃಖ ಮಮತೆ ಇದ್ದ ಕಿವಿಗೆ ಹೇಳಿ ಹೋಗ ಬಹುದಿತ್ತು; ತಾಯಿ ಹೋದನಂತರ ಇನ್ನು ಅಪ್ಪನ ಮನೆಯಲ್ಲಿದ್ದವಳಾದರೂ ಯಾರೂ ಇಲ್ಲದವಳಂತಾದಳು. ಪರಜನರಲ್ಲಿ ಹೋಗುವದು ಅವಳಿಗೆ ಸಂತೋಷವಾಗಿರುತ್ತಿತ್ತು; ಆದರೆ ತಾಯಿ ಅವಸಾನದಲ್ಲಿ—"ಕೇವಲ ದೌರ್ಭಾಗ್ಯಸ್ಥನಾದ ತಂದೆಯನ್ನು ಬಿಟ್ಟು ಹೋಗ ಬೇಡಾ, ಮುದ್ದು ಕಂದವ್ವಾ! ತಂದೆ ನಿಷ್ಠೂರನಾಗಿಯೂ ನಿರ್ದಯವಾಗಿಯೂ ನಿನಗೆ ನಡಿಸಿದರೂ, ವಿಧೇಯಳಾಗಿ ತಾಳಿಕೋ! ಯೇಸು ನಿನ್ನ ಆತ್ಮಾಪ್ತನೂ ಪ್ರಾಣೇಶನೂ ಆಗಿರಲಿ!" ಎಂಥೇಳಿ, ಅಪ್ಪಣೆ ಕೊಟ್ಟಿದ್ದ ಕಾರಣ ತಾಯಿಯ ದಾಕ್ಷಿಣ್ಯಾ

ದಿಂದಾದರೂ ತಡೆದು, ಎಲ್ಲಾ ತಾಳಿ ಕೊಂಡಳು. ತಾಯಿಯ ಮಾತೆಲ್ಲಾ ಅವಳಿಗೆ ಮರೆತು ಹೋಗದೆ, ಒಳ್ಳೇ ನೆನಪಿನಲ್ಲಿತ್ತು. ಮನೆಯ ತೊಂದರೆಗಳನ್ನು ತಡೆಯಲಿಕ್ಕೆ ಪ್ರಯಾಸವಾದರೂ ತಾಯಿಯ ನೆನಪಿನಿಂದ ಮತ್ತೂ ಮತ್ತೂ ಕೂಡಿತು. ಆಕೆಯ ರೂಪ ನಿತ್ಯದಲ್ಲೂ ಕನ್ನಡಿಯಲ್ಲಿ ಎಂಬ ಹಾಗೆ ಹುಡುಗಿಯ ದೃಷ್ಟಿಗೆ ಕಾಣುವಂತಿತ್ತು. ಕೊನ್ರಾಡನಾದರೆ ಮೂರು ನಾಲ್ಕು ದಿನದೊಳಗೆ ತಾಯಿಯನ್ನು ಪೂರ್ಣವಾಗಿ ಮರತು ಬಿಟ್ಟದಲ್ಲದೆ, ಅವಳು ಹೋದ್ದು ಅವನಿಗೆ ಒಳ್ಳೇದೆಂತ ಕಾಣುವದಾಯಿತು; ಯಾಕಂದರೆ ಆಕೆಯ ದೆಶೆಯಿಂದಲೂ ಆಕೆಯ ಬುದ್ಧೀ ಮಾತುಗಳ ದೆಶೆಯಿಂದಲೂ ಅವನಿಗೆ ದುರ್ಮಾರ್ಗದಲ್ಲಿ ಆಗುತ್ತಿದ್ದ ಕರಕರೆಯೂ ಅಭ್ಯಂತರವೂ ಇನ್ನು ಆಗದೆ, ತಪ್ಪಿ ಹೋಗಿತ್ತು. ಮಾಸದ ಮೇಲೆ ಮಾಸ, ಸಂವತ್ಸರದ ಮೇಲೆ ಸಂವತ್ಸರ ಗತಿಸಿ ಹೋಯಿತು. ಮರೀಯಳು ತನ್ನ ಮತ್ತು ಜೋರ್ಜನ ತಾಯಿಯ ಗೋರಿಯಲ್ಲಿ ನೆಟ್ಟ ಗುಲಾಬೀ ಗಿಡಗಳು ಚನ್ನಾಗಿ ಬೆಳೆದು, ಹೂವುಗಳನ್ನು ಬಿಟ್ಟು, ಪರಿಮಳಿಸುವಂಥವಾದವು. ಆದರೆ ಮನೆಯಲ್ಲಿ ಸುಖಸಮಾಧಾನವೆಂಬ ಗಿಡವು ಇನ್ನು ಹೂ ಬಿಡದೆ, ಸತ್ತು ಹೋಗುವಂತಾಯಿತು. (ಮುಂದೆ ಸಾಗಿಸಲ್ಪಡುವದು.)

---

## ಉತ್ತರಗಳು.

(೧೨೦ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

26. **ಯಾಕೋಬನಿಗೆ.** ಉತ್ಪತ್ತಿ. ೩೨, ೨೪—೩೦. ಅವನ ಸಂಗಡ ಯೆಹೋವನು ಹೋರಾಟ ಮಾಡಿ, ಅವನ ತೊಡೆಯ ಕೀಲು ಮುಟ್ಟಿ ತಪ್ಪಿಸಿದನು. ಅಷ್ಟು ಸ್ಪಷ್ಟವಾಗಿ ಯೆಹೋವನು ಮತ್ತ್ಯಾರಿಗೂ ದರ್ಶನವಾಗಲಿಲ್ಲಾ.

27. ಕೀರ್ತನೆ. ೧೩೯, ೧೬ರಲ್ಲಿ ಹೇಳಿರುವ ದಿನಚರ್ಯೆಪುಸ್ತಕವು ಇತರ ಎಲ್ಲಾ ದಿನಚರ್ಯೆಪುಸ್ತಕಗಳಿಗಿಂತ ಅತಿ ವಿಶೇಷವಾದ್ದೇ: ಯಾಕಂದರೆ ಅದು ೧. ಇತರ ಎಲ್ಲಾ ದಿನಚರ್ಯೆಪುಸ್ತಕಗಳಿಗಿಂತ ಪೂರ್ವದ್ದು; ೨. ನಡೆದ ವಿವರ ಮಾತ್ರವಲ್ಲಾ ಇನ್ನು ಮುಂದೆ ಆಗುವಂಥಾದ್ದು ಸಹ ದಾಖಲಾದ್ದು.

28. **ಮೋಶೆ.** ಹೊರ. ೨, ೩—೭.

29. **ಎಲುಮನು.** ಅಪೊ. ಕೃ. ೧೩, ೬—೧೨.

30. ಯೋಹಾನ. ೧೬, ೨೮ರಲ್ಲಿ. "ತಂದೆಯ ಬಳಿಯಿಂದ ಹೊರಟೆನು—ಲೋಕಕ್ಕೆ ಬಂದೆನು—ಲೋಕವನ್ನು ಬಿಡುತ್ತೇನೆ—ತಂದೆಯ ಬಳಿಗೆ ತಿರಿಗಿ ಹೋಗುತ್ತೇನೆ."

---

## ಹೊಸ ಪ್ರಶ್ನೆಗಳು.

31. ಹೊಸ ಒಡಂಬಡಿಕೆಯ ವಾಗ್ದಾನಗಳಲ್ಲೆಲ್ಲಾ ದೊಡ್ಡದೂ ಆಶ್ಚರ್ಯದ್ದೂ ಯಾವದು?

32. ಒಂದೇ ತುಫಾನಿನಲ್ಲಿ ಸತ್ತು ಹೋದ ಹತ್ತು ಜನರು ಯಾರವರು?

33. ಆರೋನನಲ್ಲಾ ಮೆಲ್ಕೀಜೆದೆಕನೇ ಕ್ರಿಸ್ತನಿಗೆ ಮುಂಗುರ್ತು ಆದ್ದಕ್ಕೆ ನ್ಯಾಯವೇನು?

34. ಮೂಡಣ ಯಾತ್ರೆ, ಪಶ್ಚಿಮ ಯಾತ್ರೆ, ತೆಂಕಣ ಯಾತ್ರೆ, ಬಡಗ ಯಾತ್ರೆ, ಈ ಪ್ರಕಾರವಾಗಿ ನಾಲ್ಕು ಯಾತ್ರೆಗಳನ್ನು ಮಾಡಿದ ವಿವರದಲ್ಲಿ ಯಾರ ಚರಿತ್ರ ಸಮಾಪ್ತವಾಯಿತು?

35. ಮುಖವೆಂಬ ಕನ್ನಡಿಯಲ್ಲಿ ಕಂಡ ಮನೋದುಃಖಕ್ಕಾಗಿ ಯೆರೂಸಲೇಮ್ ಯಾತ್ರೆಗೆ ಅಪ್ಪಣೆ ಹೊಂದಿದ್ದು ಯಾರು?

---

# ವಿವಿಧ ವರ್ತಮಾನಗಳು.

ಕಲ್ಕತ್ತದಲ್ಲಿ ೧ ಕೋಟಿ ರೂಪಾಯಿಯಷ್ಟು ಅಕ್ಕಿ ಮಳೆಯ ದೆಶೆಯಿಂದ ಹಾಳಾಗಿ ಹೋಯಿತಂತೆ. (೧೧೨ನೇ ಪಾನು ಸರಿ ನೋಡ ಬಹುದು.) ಅಕಾಲ ಜೋರು ಮಳೆಯಿಂದ ಕೆಲವು ಕಡೆಯಲ್ಲಿ ಹತ್ತಿಗೂ ಬೇರೆ ಬೇರೆ ಬೆಳೆಗೂ ಹಾನಿಯಾಯಿತು.

ಅಲ್ಲಹಾಬಾದಿನಲ್ಲಿ ಕಥೋಲಿಕ ಶೆಮಿನೆರಿಯ ವಿಚಾರಕನಾದ ಪಾದರಿಗೆ ಯಾಕೋ ಹಣ ಬೇಕಿತ್ತು. ಅದಕ್ಕಾಗಿ ಮತ್ತೊಬ್ಬ ಪಾದರಿ ಅರ್ವತ್ತು ಸಾವಿರ ರೂಪಾಯಿಗೆ ಸೋಡತಿಚೀಟು ಮಾಡಿ ಹಣ ಘುಳಿಸಿದನು; ಇದಾದ ಮೇಲೆ ರೊಕ್ಕ ಪಾಲು ಮಾಡುವಾಗ್ಯೆ ಇಬ್ಬರಿಗೂ ಜಗಳವಾಗಿ ಸರಕಾರಿಗೆ ಹೋದರು. ಸೋಡತಿಯಿಂದ ಹಣ ಮಾಡುವದು ಕಾನೂನಿಗೆ ವಿರೋಧವಾಗಿದ್ದರೂ ಸರಕಾರದವರು ಮೊದಲು ಸುಮ್ಮನಿದ್ದು, ಕಡೆಗೆ ಸೋಡತಿಚೀಟು ಪ್ರಕಟಿಸಿದವನ ಮೇಲೆ ವ್ಯವಹರಿಸಲಾಗಿ ನ್ಯಾಯಾಧಿಪತಿ ಸೋಡತಿಚೀಟು ಆಸ್ತ್ರಿಯಲ್ಲಾದ್ದರಿಂದ ದಗೆ ನಡಿಯಲಿಲ್ಲವೆಂತಾ ತೀರ್ಪು ಕೊಟ್ಟನು. ದೇವರ ರಾಜ್ಯದ ಕೆಲಸಕ್ಕೆಂದು ಇಂಥಾ ಯುಕ್ತಿಗಳಿಂದ ಹಣ ಸಂಪಾದಿಸ ಬಾರದು. ನೀವು ಆಶಿಸಿ ಹೊಂದುವದಿಲ್ಲ; ನಿಮ್ಮ ಆಶೆಗಳಲ್ಲಿ ವೆಚ್ಚ ಮಾಡುವ ಹಾಗೆ ತಪ್ಪಾಗಿ ಬೇಡಿಕೊಳ್ಳುವ ಕಾರಣ ನೀವು ಹೊಂದುವದಿಲ್ಲ ಎಂಬ ಯಾಕೋಬನ ಪತ್ರಿಕೆಯ ವಾಕ್ಯವನ್ನು ಕಥೋಲಿಕರು ಮನಸ್ಸಿಗೆ ತೆಕ್ಕೊಳ್ಳ ತಕ್ಕದ್ದು.

ಅಹ್ಮದಾಬಾದಿನಲ್ಲಿ ಸುಮಾರು ೧೪೦ ಮನೆಗಳು ಬೆಂಕಿ ಹೊತ್ತಿ ಸುಟ್ಟು ಹೋದದರಿಂದ ಸುಮಾರು ೬ ಲಕ್ಷ ರೂಪಾಯಿಗಳಷ್ಟು ಮನೆ ಮಾಲು ಸೊತ್ತು ನಾಶವಾಯಿತಂತೆ. ಶುರುವಿನಲ್ಲಿ ಆ ಬೆಂಕಿ ಏನೂ ವಿಶೇಷವಾಗಿರದೆ ಬಹು ಸುಲಭದಲ್ಲಿ ನಂದಿಸಿ ಬಿಡ ತಕ್ಕಂಥಾದ್ದಾಗಿತ್ತಂತೆ; ಆದರೆ ಬೆಂಕಿ ಶುರುವಾದ ಮನೆಯವರು ವಾಣಿಯರಾಗಿ, ತಮ್ಮ ವಠಾರದ ಭಾವಿಯಿಂದ ನೀರನ್ನು ಶೇದಿ ತೆಗೆದು ಕೊಳ್ಳ ಬಿಡಲಿಲ್ಲಾದ್ದರಿಂದ ಆ ಬೆಂಕಿಗೆ ದೊಡ್ಡದಾಗಿ ಹೋಗಲಿಕ್ಕೆ ಇಂಬಾಯಿತಂತೆ.

ಬಳ್ಳಾರಿಯಿಂದ ಗೋವೆಗೆ ಒಂದು ಲೋಹಮಾರ್ಗವನ್ನು ಕಟ್ಟಿಸುವ ಆಲೋಚನೆಯುಂಟಂತೆ. ಸರಕಾರದವರು ಅದಕ್ಕೆ ಒಡಂಬಟ್ಟರಂತೆ.

ಬೆಂಗಳೂರ ಚಾವಣಿಯಲ್ಲಿ ಶಿಡುಬುರೋಗವಾಗಲಿ ವಾಂತಿಭೇದಿರೋಗವಾಗಲಿ ಹಿಡಿದ ಜನರಲ್ಲಿ ಕಳೆದ ಒಂದೇ ತಿಂಗಳಲ್ಲಿ ೫೦೦ ಮಂದಿ ಸತ್ತು ಹೋದರಂತೆ.

ಅಯೋಧ್ಯ ಜಾತ್ರೆಯಲ್ಲಿ ಕೆಲವು ನೂರು ಜನ ಯಾತ್ರಿಕರು ಗೊಂದಲದಲ್ಲಿ ಶಿಕ್ಕಿ, ನಜ್ಜುಗುಜ್ಜಾಗಿ ಸತ್ತರೆಂಬ ವರ್ತಮಾನ ೧೨೧ನೇ ಪಾನಿನಲ್ಲಿ ಛಾಪಿಸಿ ಅದೆ. ಆದರೆ ಆ ಆಪತ್ತು ಸಾಲದೆ, ಅಂದು ನೆರೆದಿದ್ದ ಜನರಿಗೆ ಮಾರ್ಯಮ್ಮನವರ (ವಾಂತಿಭೇದಿರೋಗದ) ದರ್ಶನವಾಗಿ, ಅನೇಕರು ಕಾಲ ಕಾಣುವ ಸಂಗತಿಯಾಯಿತಂತೆ.

ಕಳೆದ ತಿಂಗಳಲ್ಲಿ ಗಂಡನು ತೀರಿ ಹೋದ ೬ ಜನ ಹೆಂಡರು ಸಹಗಮನವಾಗಿ, ತಮ್ಮನ್ನು ಅವನ ಹೆಣದ ಕೂಡ ಸುಡಿಸಿ ಕೊಂಡರಂತೆ. ಈ ಸಹಗಮನದ ಮರ್ಯಾದೆ ಮುಂಚೆ ಪ್ರಬಲವಾಗಿತ್ತು; ಆದರೆ ಸರಕಾರದ ಕಾಯಿದೆಯ ದೆಶೆಯಿಂದ ಅದಕ್ಕೆ ವಿಘ್ನವಾಗಿ, ಅದು ಇತ್ತಲಾಗೆ ಅಪರೂಪವಾಯಿತು. ಗಂಡ ಹೆಂಡರು ಒಂದೇ, ಹೆಂಡತಿ ಗಂಡನ ಅರ್ಧಾಂಗಿಯೇ ಎಂಬ ನ್ಯಾಯದ ಮಾತುಂಟು. ಹೀಗಿರಲಾಗಿ ಸಹಗಮನದ ಮರ್ಯಾದೆ ನ್ಯಾಯವಾಗಿದ್ದದಾದರೆ, ಗಂಡನು ಸತ್ತ ಪಕ್ಷಕ್ಕೆ ಹೆಂಡತಿ ಹ್ಯಾಗೋ ಹಾಗೆಯೇ ಹೆಂಡತಿ ಸತ್ತ ಪಕ್ಷಕ್ಕೆ ಗಂಡನೂ ಸಹಗಮನವಾಗಿ ಹೋಗುವದು ನ್ಯಾಯವಾಗಿರುತ್ತಿತ್ತು. ಆದರೆ ಈ ನ್ಯಾಯವು ಎಲ್ಲಿಯೂ ಕಾಣದು: ಗಂಡನು ಸತ್ತನಂತರ ಹೆಂಡತಿ ಸಹಗಮನವಾಗೋದು, ಸಹಗಮನವಾಗದ ಪಕ್ಷಕ್ಕೆ ಬೋಳಿಯಾಗಿ ಪುನರ್ವಿವಾಹ ಮಾಡದೆ ಇರುವದು, ಪರಂತು ಹೆಂಡತಿ ಸತ್ತನಂತರ ಗಂಡನು ಸಹಗಮನವಾ

ಗದೆ, ಪುನರ್ವಿವಾಹವಾಗಿ, ಹೊಸ ಹೆಂಡತಿಯನ್ನು ಮಾಡಿ ಕೊಳ್ಳುವದು ಅನ್ಯಾಯವೇ. ಈ ಹಿಂದುಸ್ಥಾನದಲ್ಲಿ ಬಲವಂತರು ದುರ್ಬಲರನ್ನು ತಿಂದು ಬಿಡುವಂಥಾದ್ದು ಸ್ವಲ್ಪ ಹೆಚ್ಚುಕಡಿಮೆಯಾಗಿ ಸಕಲ ಕಾರ್ಯ ಮರ್ಯಾದೆಗಳಲ್ಲಿ ಪ್ರತ್ಯಕ್ಷವಾಗಿದೆ.

ತಿರುವಾಂಕೋಡಿನಲ್ಲಿಯ ಲಂದನ್ ಮಿಶ್ಯನಿನ ಒಂದು ಶಾಖೆಯಾಗಿರುವ ನೇಯೂರ ಮಿಶ್ಯನಿನ ಕಳೆದ ವರುಷದ ರಿಪೋರ್ಟಿನ ಸಾರವೇನಂದರೆ: ಸದರಿ ಮಿಶ್ಯನಿನಲ್ಲಿರುವ ಮಿಶ್ಯನೆರಿಗಳು ೬ ಮಂದಿ; ದೇಶೀಯ ಪಾದ್ರಿಗಳು ೧೦ ಮಂದಿ; ಪ್ರಸಂಗಿಗಳು ೨೦ ಮಂದಿ; ಉಪದೇಶಕರು ೧೪೫ ಮಂದಿ; ಉಪಾಧ್ಯಾಯರು ೨೧೨ ಮಂದಿ; ಶಾಲೇ ಹುಡುಗರು ೮,೦೧೩; ರಾತ್ರಿಭೋಜನ ಸಿದ್ಧರು ೩,೨೪೬. ಕಳೆದ ಇಸ್ವಿಯಲ್ಲಿ ಸ್ನಾನ ಹೊಂದಿದ ಪ್ರಾಯಸ್ಥರು ೨೧೭; ಸಭಾಂಗಗಳು ೧೨,೪೧೩. ಮಿಶ್ಯನಿನ ಪರಾಂಬರಿಕೆಯಲ್ಲಿರುವವರೆಲ್ಲರು ೩೯,೩೪೫. ಆ ಸಭೆಯವರು ಕೊಟ್ಟ ಒಂತಿಗೇ ಹಣದ ಒಟ್ಟು: ೧೬,೫೬೪ ರೂಪಾಯಿ.

ಮಹಾರಾಷ್ಟ್ರದ ಅಹ್ಮದ್‌ನಗರದಲ್ಲಿಯ ಅಮೇರಿಕನ್ ಮಿಶ್ಯನಿನ ಸಂಬಂಧದಲ್ಲಿ ೨೩ ಸಭೆಗಳು ಇದ್ದಾವೆ. ಕಳೆದ ಇಸ್ವಿಯಲ್ಲಿ ಆ ಸಭೆಗಳನ್ನು ಒಟ್ಟಿಗೆ ೧೧೮ ಜನ ಹೊಸಬರು ಸೇರಿದರಂತೆ.

ನಮ್ಮ ಬಾಸಲ್ ಮಿಶ್ಯನಿನ ಈ ದೇಶದ ಆಯಾ ಸಭೆಗಳು ಕಳೆದ ಇಸ್ವಿಯಲ್ಲಿ ಮಿಶ್ಯನ್ ಭಂಡಾರಕ್ಕೆ ದಾನವಾಗಿ ಕೊಟ್ಟ ಹಣಗಳ ವಿವರವು ಹ್ಯಾಗಂದರೆ:

| | | | |
|---|---|---|---|
| ಮಂಗಳೂರ | ಸಭೆಯದು | ೨೩ | ರೂಪಾಯಿ. |
| ಮೂಲ್ಕಿ | ” | ೭ | ” |
| ಉಡ್ಪಿ | ” | ೨೩ | ” |
| ಹೊನ್ನಾವರ | ” | ೪೦ | ” |
| ಆನಂದಪುರ | ” | ೭೩ | ” |
| ಧಾರವಾಡ | ” | ೨ | ” |
| ಹುಬ್ಬಳ್ಳಿ | ” | ೩೭ | ” |
| ಗುಳೇದಗುಡ್ಡ | ” | ೧೫ | ” |
| ಕಣ್ಣಾನೂರು | ಸಭೆಯದು | ೫೬ | ರೂಪಾಯಿ. |
| ತಲಚೇರಿ | ” | ೧೦ | ” |
| ಚೋಂಬಾಲ | ” | ೬ | ” |
| ಕೋಳಿಕೋಡು | ” | ೬೫ | ” |
| ಕೊಡಕಲ್ಲ | ” | ೫ | ” |
| ಪಾಲ್ಘಾಡು | ” | ೨೨ | ” |
| ಕೋಟಗೇರಿ | ” | ೨೨ | ” |

ಬೆಟ್ಟಗೇರಿಯಲ್ಲಿ ಹಿಂದು ಗೃಹಸ್ಥರಿಬ್ಬರು ೨೫ ರೂಪಾಯಿ, ಮತ್ತು ಹುಬ್ಬಳ್ಳಿಯಲ್ಲಿ ಕೆಲವು ಹಿಂದು ಜನರು ೨೧ ರೂಪಾಯಿ ಕೊಟ್ಟರು.

ಬಂದಿವಾನನೊಬ್ಬನ ಅನುದಿನದ ಅಶನಾರ್ಥಕ್ಕೆ ಸರಕಾರದವರು ೨೦ ಔನ್ಸ ಅಕ್ಕಿ, ೪ ಔ. ರೊಟ್ಟಿ, ೫ ಔ. ಮಾಂಸ, ೪ ಔ. ಕಾಯಿಪಲ್ಯ, ಮತ್ತು ಬಾಳೆ ಹಣ್ಣು, ನೀರುಳ್ಳಿ, ಮೆಣಸು, ಉಪ್ಪು, ಮಸಾಲೆಗೆ ೮ ತರದ ಸಂಬಾರಗಳನ್ನು ನೇಮಿಸಿ ಕೊಡಿಸುತ್ತಿದ್ದಾರಂತೆ. ಸಹಾಯಾರ್ಥಕ ಕೆಲಸಗಳನ್ನು ಗೈಯುವ ಬರ ಬಿದ್ದವರಿಗೆ ೧೬ ಔನ್ಸ ಅಕ್ಕಿಯೂ ೧ ಆಣೆಯೂ ಒಂದು ದಿವಸದ ಕೂಲಿಯಾಗಿ ಸಿಕ್ಕುತ್ತದಂತೆ. ಕೆಲಸವು ಸಾಗದ ಆದಿತ್ಯವಾರಗಳಲ್ಲಿ ಅವರಿಗೆ ಕೂಲಿ ಇಷ್ಟಾದರೂ ಸಲ್ಲದೆ, ಉಪವಾಸದ ಪುಣ್ಯದಲ್ಲಿ ತೃಪ್ತಿಯಾಗ ಬೇಕು.

ಕ್ಷಾಮಾತಿಸಾರ (ಅಂದರೆ ಹೊಟ್ಟೆಗಿಲ್ಲದೆ ಕ್ಷುಧಾಪೀಡಿತರಿಗಾಗುವ) ರೋಗವು ಹ್ಯಾಗಂದರೆ: ಕರಳುಗಳ ತೊಗಲು ತೆಳ್ಳಗಾಗಿ, ಕಿಬ್ಬೊಟ್ಟೆಯಲ್ಲಿ ಹುಣ್ಣುಗಳು ಆಗಿ, ಕೀವು ಕಟ್ಟುವದು. ಈ ವ್ಯಾಧಿ ಬರ ಬಿದ್ದ ಸೀಮೆಯವರಲ್ಲಿ ಸದ್ಯಕ್ಕೆ ಬಹಳ ಪ್ರಬಲವಾಗಿದಂತೆ. ಗರ್ಭದಲ್ಲಿ ಆಹಾರವು ಸಾಲದೆ, ಬಹು ಕ್ಷೀಣವಾಗಿ, ಬರೇ ಅಸ್ಥಿ ಚರ್ಮವಿದ್ದು, ಕೇವಲ ಕಡ್ಡಿಗಳಾಗಿ ಹುಟ್ಟಿ, ಬದುಕಲಾರದ ಶಿಶುಗಳು ಸಹ ಅನೇಕವಾಗಿ ಕಾಣುತ್ತವಂತೆ. ಮುಂಬೈಗೆ ಬಂದಂಥಾ ಇನ್ನು ಬರುತ್ತಿರುವಂಥಾ ಕ್ಷಾಮಾಳುಗಳಲ್ಲಿ ಅನೇಕಾನೇಕರು ಸಾಯುತ್ತಾರೆ. ಬರುವ ದಾರಿಯಲ್ಲಿ ಕಂಡದನ್ನೇ: ಎಂಜಲು, ಬಿದ್ದ ಕಾಯಿಪಲ್ಯ ಸೊಪ್ಪುಗಳ ಚೂರುಗಳು ಮುಂತಾದ್ದನ್ನು ಹೆಕ್ಕಿ ತಿನ್ನುತ್ತಾರೆ. ಅವರ ಹತ್ತಿರ

ಇನ್ನು ಅತ್ತು ಕೂಗಲಿಕ್ಕಾಗಲಿ ಕೈಗಳನ್ನೆತ್ತಲಿಕ್ಕಾ
ಗಲಿ ತ್ರಾಣ ಸಾಲದ ಹುಡುಗರು ಕಾಣುವಂಥಾದ್ದು
ದೃಷ್ಟಿಗೆ ತಡೆಯಲಿಕ್ಕೆ ಕೂಡದಷ್ಟು ದುಃಖಕರ
ವಾದ ನೋಟವಾಗಿರುತ್ತದಂತೆ. ಒಂದು ಸು
ಮಾರಿನ ಮನೆಯಲ್ಲಿ ೩೧೬ ಮಂದಿ ಬಿಡಾರವಾ
ದರು. ಬೇರೊಂದರಲ್ಲಿ ಉಳುಕೊಂಡ ೧೨೧
ಜನರಲ್ಲಿ ೪೫ ಮಂದಿ ಅಸ್ವಸ್ಥವಾದವರು. ಬಂ
ದು ಲೆಖ್ಖವಾದ ೧೪,೦೦೦ ಜನರಲ್ಲಿ ೩,೫೦೦
ಮಂದಿ ಏಳಲಾರದಷ್ಟು ಜಾಡ್ಯದವರೇ.

ಕಳದ ಇಸ್ವಿಯಲ್ಲಿ ಫ್ರೆಂಚ ದೇಶದ ದ್ರಾಕ್ಷೇ
ತೋಟಗಳ ಹುಟ್ಟುವಳಿ ಬಹಳ ಕಡಿಮೆ ಅಂದರೆ
೧೮೭೫ನೇ ಇಸ್ವಿಯದರ ಅರೆವಾಶಿ ಮಾತ್ರವೇ
ಆಯಿತಂತೆ. ಈ ನಷ್ಟಕ್ಕೆ ದ್ರಾಕ್ಷೇ ಗಿಡಗಳನ್ನು
ಕೆಡಿಸಿ ಬಿಡುವ ಒಂದು ಚಿಕ್ಕ ಹುಳ ಕಾರಣವಾ
ಯಿತು.

ಸ್ಪೈನ್ಯ ದೇಶದ ಸರಕಾರದವರು ಪ್ರೊಟೆಸ್ಟಾಂಟ
ಕ್ರೈಸ್ತ ಸಭೆಯವರನ್ನು ಕಠಿಣ ಅಂಕೆಯಲ್ಲಿಟ್ಟು,
ದ್ವೇಷಿಸಿ, ನಾನಾ ಪ್ರಕಾರವಾಗಿ ತಿಪ್ಪಲು ಪಡಿಸು
ತ್ತಿದ್ದಾರೆ. ೨೦೦ಕ್ಕಿಂತ ಕಡಿಮೆ ಪಾನು ಇದ್ದ
ಪುಸ್ತಕ ಒಂದನ್ನಾದರೂ ಪ್ರೊಟೆಸ್ಟಾಂಟರು ಇನ್ನು
ಮುಂದೆ ಛಾಪಿಸಿ ಪ್ರಕಟಿಸ ಬಾರದೆಂಬ ಆಜ್ಞೆ
ಯನ್ನು ಇತ್ತಲಾಗೆ ಹೊರಡಿಸಿದ್ದಾರೆ. ವಹಿಗಳು
ಮೊದಲಾದ ಚಿಕ್ಕ ಪುಸ್ತಕಗಳನ್ನು ಹಬ್ಬಿಸಿ, ಪ್ರೊ
ಟೆಸ್ಟಾಂಟರು ಸುಲಭದಲ್ಲಿ ಬಹಳ ಸಫಲವಾಗಿ
ವ್ಯಾಪ್ತಿ ನಡಿಸಿ, ಮರುಳು ನಂಬಿಕೆಯನ್ನೂ ಇತರ
ಮೂಢ ಭಕ್ತಿಗಳನ್ನೂ ಅಬದ್ಧಗಳನ್ನೂ ಎದು
ರಿಸಿ, ಸತ್ಯವನ್ನೂ ಸುವಾರ್ತೆಯನ್ನೂ ಜನರು
ಗಳಿಗೆ ತಿಳಿಯ ಪಡಿಸ ಬಹುದೆಂತ ತಿಳುಕೊಂಡು,
ಅಟಕಾಯಿಸ ಬೇಕೆಂತ ಆಲೋಚನೆ ಹಿಡಿದು,
ಆ ಹುಕುಮ್ ಕೊಟ್ಟರು. ಮನೇ ಯಜಮಾನರು
ಇಲ್ಲದ ಸಮಯವನ್ನು ನೋಡಿ, ರೋಮನ್ ಗು
ರುಗಳು ಪ್ರೊಟೆಸ್ಟಾಂಟ ಮನೆಗಳನ್ನು ಹೊಕ್ಕು,
ಶಿಶುಗಳಿಗೆ ಸ್ನಾನಸಂಸ್ಕಾರ ಮಾಡಿದ್ದು ಇತ್ತಲಾಗೆ
ಅಲ್ಲಲ್ಲಿ ಕೆಲವು ಸಾರಿ ಆಯಿತು. ಒಬ್ಬ (ರೋ
ಮನ್) ಪಾದರಿ ಸುವಾರ್ತೆಗನುಸಾರವಾಗಿ ಪ್ರ
ಸಂಗ ಮಾಡಿದ "ತಕ್ಸೀರಿಗಾಗಿ" ಬಂದಿವಾನನಾದ
ನು. ಆದರೆ ಹಾದಿಗಳ್ಳರು ಮೊದಲಾದ ಚೋರರು
ತಮ್ಮ ಕೆಲಸಗಳನ್ನು ವಿಶೇಷ ಅಡ್ಡಿಸಡ್ಡಿಯಿ
ಲ್ಲದೆ ಸಾಗಿಸ ಬಹುದು. ಚೋರರ ಭಯದಿಂದ
ಕೆಲವು ಪ್ರಾಂತ್ಯಗಳಲ್ಲಿ ಹೊಗೇ ಭಂಡಿಯಾದ
ರೂ ನಡೆಯಲಿಕ್ಕೆ ಕೂಡದಂತೆ; ಯಾಕಂದರೆ
ಚೋರರು ಅಪಾಯಗಳನ್ನು ಒದಗಿಸಿ, ಹೊಗೇ
ಗಾಡಿಗಳನ್ನು ನಿಲ್ಲಿಸಿ ಬಿಟ್ಟು, ಸೂರೆ ಮಾಡಿ
ಬಿಡುವದಾಗುತ್ತದೆ.

ಇತಲ್ಯ ದೇಶದಲ್ಲೂ ಚೌರ್ಯವೃತ್ತಿ ಬ
ಹಳ ವೃದ್ಧಿಯಾಗಿ, ಮೆರೆಮೆರೆಯುವಂಥಾದ್ದಾ
ಗಿದೆ. ಕಳದ ಒಂದೇ ವರುಷದಲ್ಲಿ ೨೪೪೧
ಹಾದಿಗಳವೂ, ೨೯,೦೦೦ ಇತರ ಕಳವುಗಳೂ,
೩,೬೫೦ ಖೂನಿಗಳೂ ಪೊಲೀಸಿನವರ ಗೊತ್ತಿಗೆ
ಹತ್ತಿ, ದರ್ಯಾಪ್ತಿಯಾದವಂತೆ.

ಫೆಬ್ರುವರಿ ತಿಂಗಳಲ್ಲಿ ಸ್ವೀಚರ್ಲಂದದಲ್ಲಿಯೂ
ಜರ್ಮಾನ್ಯದಲ್ಲಿಯೂ ಅತಿವೃಷ್ಟಿಯ ಸಂಬಂ
ಧವಾಗಿ ನೆರೆಗಳು ಆಗಿ, ನೀರಿನ ದೆಸೆಯ ಆಪತ್ತು
ಗಳೂ ನಷ್ಟಗಳೂ ಅತಿ ಹೇರಳವೇ ಆದವಂತೆ.

ಅಮೇರಿಕದಲ್ಲಿಯೂ ವಿಲಾಯತಿಯಲ್ಲಿ
ಯೂ ವ್ಯಾಪಾರಾದಿಗಳು ಚನ್ನಾಗಿ ಸಾಗಿ ಶೋಭಿ
ಸದ ಕಾರಣ ಜನರುಗಳಿಗೆ, ಮುಖ್ಯವಾಗಿ ಭೂಮಿ
ಗೀಮಿ ಇಲ್ಲದ ಕೈಗಾರಿಕೇ ಕೆಲಸದವರಿಗೆ, ಬಹಳ
ಕಷ್ಟವಾಗಿರುತ್ತದಂತೆ. ಬೆರ್ಲೀನ್ ಲೀಯೊ ಮೊ
ದಲಾದ ದೊಡ್ಡ ಪಟ್ಣಗಳಲ್ಲಿ ಕ್ಷುಧಾವಿಷಮ
ಜ್ವರವೆಂಬ ರೋಗವು ಪ್ರಬಲವಾಗಿದಂತೆ.

ತುರ್ಕ್ಯ ರಾಜ್ಯದ ಕಾರುಬಾರು ಒಂದು ರಾ
ವಣಹೊಟ್ಟೆಯಂತೆಯೇ ಸೈ. ಇತ್ತಲಾಗೆ ಸು
ಲ್ತಾನರೂ ಪ್ರಧಾನ ವಜೀರರೂ ಒಬ್ಬನ ಮೇಲೊ
ಬ್ಬನು ಆ ಹೊಟ್ಟೆಗೆ ಬಿದ್ದು, ಜೀರ್ಣವಾಗಿ ಹೋ
ಗುವದಾಯಿತು. ಆದರೆ ಈ ಪ್ರಕಾರವಾಗಿ ನಡೆ
ಯುವಂಥಾದ್ದು ಒಂದು ಹೊಸ ಮರ್ಯಾದೆ
ಯಾಗಿರದೆ, ಒಂದು ಹಳೇ ರೋಗದಂತೆಂದ್ಹೇಳೆ
ಬಹುದು. ೧೪೫೩ನೇ ಇಸ್ವಿಯಿಂದ ೧೭೭೩ನೇ
ಇಸ್ವಿಯ ತನಕ ೧೬೨ ಮಂದಿ ಪ್ರಧಾನ ವಜೀ

ರರು ರಾಜ್ಯವ ಗೈಯುವವರಾದರು. ಇಷ್ಟು ಮಂದಿಯಲ್ಲಿ ಒಬ್ಬನೇ ಮಾತ್ರ ಸ್ವಂತ ಖುಷಿಯಿಂದ ರಾಜಿನಾಮೆ ಕೊಟ್ಟು, ಉದ್ಯೋಗವನ್ನು ಬಿಟ್ಟು ಬಿಟ್ಟವನು. ೪೩ ಜನ ಸುಲ್ತಾನನ ಒಲುಮೆಯನ್ನು ಕಳಕೊಂಡು, ರಾಜಿ ಮಾಗಲ್ಪಟ್ಟರು. ೨೪ ಮಂದಿಗೆ ಅಜ್ಞೆಯಾಗಿ ಶಿರಚ್ಛೇದನವಾಯಿತು. ಒಬ್ಬನು ದಿವಾಣದಲ್ಲೇ (ಒಡ್ಡೋಲಗದಲ್ಲಿ) ಕೊಲೆ ಪಟ್ಟನು. ಕೆಲವರು ವಿಷ ತಿಂದು ಸತ್ತರು. ಕೆಲವರು ಲೂಟಿಯಲ್ಲಿಯೂ ಹೊಡದಾಟದಲ್ಲಿಯೂ ಪೆಟ್ಟು ತಾಗಿ ಸತ್ತರು.

ಯುದ್ಧಕ್ಕೆ ತಯಾರಾಗಿ ಕೂಡಿ ಕೊಂಡಿರುವ ರುಸ್ಯ ದಂಡುಗಳ ಖರ್ಚು ವೆಚ್ಚ ದಿನ ಒಂದಕ್ಕೆ ೧೦ ಲಕ್ಷ ರೂಪಾಯಿ. ಈಗಲೇ ತುರ್ಕರಿಗೂ ರುಸ್ಯರಿಗೂ ಕಾಳಗವು ತೊಡಗುವ ವರ್ತಮಾನವು ತಲಪಿದೆ. ವಿಲಾಯತಿಯ ತುರ್ಕ್ಯ ರಾಜ್ಯದಲ್ಲಿರುವ ಕ್ರೈಸ್ತರಿಗೆ ಮಾತ್ರವಲ್ಲ, ಸುರ್ಯುಸಣ್ಣಾಸ್ಯ ಮೊದಲಾದ ಶೀಮೆಗಳಲ್ಲಿ ವಾಸವಾಗಿರುವವರಿಗೂ, ಇವರಿಗೆ ಹೆಚ್ಚಾಗಿ, ತುರ್ಕರ ದ್ವೇಷೋದ್ರೇಕಕ್ಕಾಗಿ ಭಯಕ್ಕೆ ಬಹಳ ಬಹಳ ಕಾರಣವದೆ. ಕ್ರೈಸ್ತರೆಲ್ಲರ ಜೊತೆಯಲ್ಲಿ ಸಭಾಪತ್ರಪಠಕರೂ ಆ ಕಡೆಯ ಸಭೆಯವರನ್ನು ನೆನಸಿಕೊಂಡು, ಅವರಿಗೋಸ್ಕರ ಸರ್ವಕರ್ತನಾದ ಯೇಸು ಕ್ರಿಸ್ತ ಒಡೆಯನನ್ನು ಪ್ರಾರ್ಥಿಸಿ ವಿಜ್ಞಾಪನೆ ಮಾಡ ತಕ್ಕದ್ದು.

ಭೂಮಂಡಲದ ಸರ್ವ ನರಜಾತಿಯವರ ೧೧ವಾ ೧೦ ಜನದ ಸಂಖ್ಯೆಗೆ ೧ ಮಹಮ್ಮದಿ ಜನ ಬೀಳುವಷ್ಟು ಮಹಮ್ಮದಿಯರು ವಿಲಾಯತಿ, ಆಸ್ಯ, ಆಫ್ರಿಕ ಮೊದಲಾದ ದೇಶಗಳಲ್ಲಿದ್ದಾರಂತೆ.

೧೮೪೬ನೇ ಇಸ್ವಿಯಲ್ಲಿ ತುರ್ಕ್ಯ ರಾಜ್ಯದಲ್ಲಿ ಮೊದಲನೇ ಪ್ರೊಟೆಸ್ಟಾಂಟ ದೇವಾಲಯವು ಕಟ್ಟೋಣಾಯಿತು. ಸದ್ಯಕ್ಕೆ ೭೬ ಅಂಥಾ ದೇವಾಲಯಗಳು ಅಲ್ಲಲ್ಲಿ ಕಟ್ಟಿರುತ್ತವೆ. ಅವುಗಳ ಸಂಬಂಧದ ಸಭೆಗಳಲ್ಲಿ ೧೯,೦೦೦ ಸಭಾಂಗಗಳು ಇದ್ದಾವಂತೆ.

ಜೂನ್ಯೈ ೩೦ರಲ್ಲಿ ಆಸ್ಯದ ರುಸ್ಯಸಾಮ್ರಾಜ್ಯಕ್ಕೆ ಶೇರಿದ ಒಂದು ಶೀಮೆಯ ಅಕ್ಸಿಸ್ ಎಂಬ ಊರಲ್ಲಿ ೪ ಸಾವಿರ ಜನರಿಗೆ ಒಟ್ಟಿಗೆ ಒಂದು ಹೊಳೆಯಲ್ಲಿ ರುಸ್ಯ ಸಭಾಧ್ಯಕ್ಷನೊಬ್ಬನ ಮತ್ತು ಆರು ಮಂದಿ ಪಾದರಿಗಳ ಕೈಯಿಂದ ಕ್ರೈಸ್ತ ಸ್ನಾನಸಂಸ್ಕಾರವಾಯಿತಂತೆ.

ಜಾಪಾನ ದೇಶದಲ್ಲಿ ಒಬ್ಬ ಯೂರೋಪಿಯನ್ ಸರದಾರನು ತನಗೆ ಅಪರೂಪವಾದ ಸಾಮಾನುಗಳನ್ನು ಹುಡುಕಿ ತಂದು ಕೊಡ ಬೇಕೆಂಬದಾಗಿ ಒಬ್ಬ ಕೋರಿಶೆಟ್ಟಿಗೆ ಅಪ್ಪಣೆ ಕೊಟ್ಟನು. ಆ ಅಪ್ಪಣೇ ಮೇರೆಗೆ ಇವನು ಹೋಗಿ, ನಾನಾ ಸಾಮಾನುಗಳನ್ನು ಹುಡುಕಿ, ಕೊಂಡುಕೊಂಡು, ತಂದು, ಆ ಸರದಾರನಿಗೆ ವಿಕ್ರಯ ಮಾಡಿದನು. ಆ ಸಾಮಾನುಗಳಲ್ಲಿ ಒಂದು ಹಳೇ ದೇವತೆಯ ಮೂರ್ತಿ ಸಹ ಇತ್ತು. ಬಳಿಕ ಆ ಮೂರ್ತಿಯ ತಲೆ ಏನೋ ಕಾರಣದಿಂದ ಒಡದು ಹೋಗಲಾಗಿ, ಎರಡು ದೊಡ್ಡ ವಜ್ರಗಳು ಅದರೊಳಗಿಂದ ಹೊರಳಿ ಬಿದ್ದು ಶಿಕ್ಕಿದವಂತೆ. ಇನ್ನು ಬೇರೆ ವಿಗ್ರಹಗಳ ಹೊಟ್ಟೆಯಲ್ಲೂ ಮುಂಡೆಯಲ್ಲೂ ಅಂಥಾ ನಿಕ್ಷೇಪಗಳು ಮರೆಯಾಗಿರಲಿಕ್ಕೆ ಸಾಕು. ಆದ್ದರಿಂದ ಅವುಗಳನ್ನು ಒಡದು ಹಾಕಿ ನೋಡಿದರಾದೀತು ಎಂತ ತೋರುತ್ತದೆ. ಬಹಳ ವರುಷ ಅಂಥಾ ಶೆರೆಯಲ್ಲಿದ್ದ ವಜ್ರಾದಿ ಬಂದಿವಾನರಿಗೆ ಬಿಡುಗಡೆಯಾದರೆ, ಸಂತೋಷವಲ್ಲವೋ?

ಮೂರು ದಿನದಲ್ಲಿ ಕಠಿಣ ಶಿಡುಬುರೋಗವನ್ನಾದರೂ ದ್ರಾಕ್ಷೇ ರಸದ ಕರಣೆಯ ಪ್ರಯೋಗದಿಂದ ಪರಿಹರಿಸಿ ವಾಶಿ ಮಾಡಿ ಕೊಳ್ಳ ಬಹುದಂತೆ. ೧ ಪೈಂಟ್ (=೨೦ ಔನ್ಸ್ =೩೦ ಮೋಜಿನ ಸೌಟು) ತುಂಬ ನೀರಿನಲ್ಲಿ ಆ ಕರಣೆಯ ೧ ಔನ್ಸ್ ಕರಗಿಸಿ ಬೆರಿಸಿ, ಆಗಿಂದಾಗ್ಯೆ ಕುಡಿಯುತ್ತಾ ಬರ ಬೇಕಂತೆ.

Printed at the Basel Mission Press, Mangalore.

# ಕ್ರೈಸ್ತಸಭಾಪತ್ರ

ಪುಸ್ತಕ ೯. JUNE 1877. ಅಂಕೆ ೧೨.

**ಅಡಕವು:** ಚಂದಾದಾರರಿಗೆ—ನಿರುಪಾಯವೇ ವಿಶ್ವಾಸದ ಉಪಾಯವು—ಒಂದು ನೆರೆ—ಉತ್ತರಗಳು—ವಿವಿಧ ವರ್ತಮಾನಗಳು.

## ಚಂದಾದಾರರಿಗೆ.

ಕ್ರೈಸ್ತಸಭಾಪತ್ರದ ಈಗಿನ ಅಂಕೆ ೯ನೇ ಪುಸ್ತಕದ ೧೨ನೇದಾಗಿ ಕಡೇದಾಗಿರುವದರಿಂದ ಕೆಲವು ಮಾತುಗಳು ಪ್ರಸ್ತಾವೋಚಿತವಾಗಿದ್ಧಾವೆ.

ಈ ಪತ್ರವನ್ನು ಇನ್ನು ಮುಂದೆಯೂ ಓದಲಿಕ್ಕೆ ಮನಸ್ಸಿಲ್ಲದ ಚಂದಾದಾರರು ತಮಗೆ ೧೦ನೇ ಪುಸ್ತಕವನ್ನು ರವಾನೆ ಮಾಡಿಸಿ ತಲಪಿಸ ಬಾರದು ಎಂಬದಾಗಿ ತಕ್ಕ ಸಮಯದಲ್ಲಿ ಅಂದರೆ ಈ ಅಂಕೆಯನ್ನು ಹೊಂದಿ ಓದಿ ಕೊಂಡ ಕೂಡಲೇ ತಿಳಿಯ ಪಡಿಸ ತಕ್ಕದ್ದು.

ಆದರೆ ತಕ್ಕ ಕಾರಣವಿಲ್ಲದೆ ಯಾರಾದರೂ ಬೇಡೆಂದು ಬಿಡ ಬಾರದು. ಕ್ರೈಸ್ತಸಭಾಪತ್ರದ ಇಡೀ ಸ್ವರೂಪಕ್ಕಾಗಲಿ ಅದರಲ್ಲಿ ಛಾಪೆಯಾಗುವ ಏನೊಂದು ಸಂಗತಿಗಾಗಲಿ ಒಂದು ವೇಳೆ ಯಾರಿಗಾದರೂ ಪೂರ್ಣ ಸಮಾಧಾನವೂ ಸಂತೋಷವೂ ಆಗದೆ, ಯಾವಾಗಾದರೊಮ್ಮೆ ಒಂದು ವೇಳೆ ವಿಕಲ್ಪವಾದರೂ ಹುಟ್ಟಿ ಹೋಗ ಬಹುದು; ಆದಾಗ್ಯು ಈ ಪತ್ರಕ್ಕಿಂತ ಉತ್ತಮವಾದ ಬೇರೊಂದನ್ನು ನಿರ್ಮಾಣ ಮಾಡದೆ, ಇದನ್ನು ಬೇಡೆಂತ ಬಿಡುವದು ಕಾರ್ಯಸಿದ್ಧಿಯ ಕೆಲಸವಲ್ಲಾ.

ಯಾರ್ಯಾರ ಮುಖಾಂತರವಾಗಿ ಈ ಪತ್ರವು ಇತರರಿಗೆ ಹಸ್ತಗತವಾಗುತ್ತಾ ಬಂತೋ ಅವರವರು ಕೈಕೊಟ್ಟು, ಸಹಾಯ ಮಾಡುತ್ತಾ ಬಂದ ಉಪಕಾರವನ್ನು ನೆನಸಿ ಕೊಂಡು, ಅವರವರು ಇನ್ನು ಮುಂದೆಯೂ ಪ್ರೀತಿಯಿಟ್ಟು, ಅದೇ ತರದ ಸಹಾಯ ಮಾಡ ಬೇಕೆಂತ ಬೇಡಿ ಕೊಳ್ಳುತ್ತೇನೆ.

ಪ್ರಬಂಧಾದಿಗಳನ್ನು ಬರೆದು ಕಳುಹಿಸಿ, ಸಹಾಯ ಮಾಡಿದವರು ಬಹಳ ಕೊಂಚ ಜನ. ಇನ್ನು ಮುಂದೆ ಈ ಬಗೆಯ ಸಹಾಯ ಕಡಿಮೆಯಾಗದೆ ಹೆಚ್ಚೇ ಹೆಚ್ಚಲಿ!

ಓದುವವರೆಲ್ಲರು ಹೊಸ ಚಂದಾದಾರರು ದೊರಕುವ ಹಾಗೆ ನೋಡಿ, ಪ್ರಯತ್ನ ಮಾಡಿ, ಸಹಾಯಕರಾಗಲಿ! ಒಂದು ಮನೆಯವರಿಗೆ ಈ ಪತ್ರದ ಪಟ್ಟೀ ಹಣವನ್ನು (ಬರೇ ಲ ಆಣೆ) ಸಲ್ಲಿಸಲಿಕ್ಕೆ ಕಷ್ಟವಾದರೆ, ಅವರು ಇನ್ನೊಂದು ಮನೆಯ ಜನರನ್ನು ಕೂಡಿ ಕೊಂಡು ಅಥವಾ ಕೂಡಿಸಿ ಕೊಂಡು, ನಾಲ್ಕ್ನಾಲ್ಕಾಣೆ ಕೊಟ್ಟು, ಈ ಪತ್ರವನ್ನು ದೊರಕಿಸಿ ಕೊಂಡು, ಓದಿ ಕೊಳ್ಳಲಿ! ಹೆಚು ಜನ ಹೊಸ ಚಂದಾದಾರರನ್ನು ದೊರಕಿಸಲಿಕ್ಕಾಗುವಂತೆ ಈ ಸರ್ತಿ ಹೆಚ್ಚು ಪ್ರತಿಗಳು ಛಾಪೆಯಾಗಿ,

ರವಾನೆಯಾಗುವವು. ಅನುಕೂಲವಾಗುವಲ್ಲಿ ಯಾರಿಗಾದರೂ ಒಂದನ್ನು ಕೊಟ್ಟು, ಮಾತಾಡಿ, ಹೆಚ್ಚು ಚಂದಾದಾರರು ಶಿಕ್ಕುವ ಹಾಗೆ ನೋಡಿದರಾದೀತು. ಮುಂದಿನ ವರುಷದಲ್ಲಿಯೂ ಕ್ರೈಸ್ತ ಸಭಾಪತ್ರಪಠಕರಿಗೆ ದೇವರು ಪ್ರಸನ್ನನಾಗಿ, ಅವರ ಇಹಪರಗಳ ವಿಚಾರಾರ್ಥಕ ಮೇಲಿಗೆ ಕೈಕೊಟ್ಟು, ಸಮಸ್ತವನ್ನು ಕೃಪೆಯಾಗಿ ನಡಿಸಲಿ! ಕ್ರೈ. ಸ. ಕ.

## ನಿರುಪಾಯವೇ ವಿಶ್ವಾಸದ ಉಪಾಯವು.

ಆಗ ಅಬ್ರಹಾಮನು ತನ್ನ ಸೇವಕರಿಗೆ--ಕತ್ತೆಯ ಸಂಗಡ ಇಲ್ಲಿ ನಿಂತು ಕೊಳ್ಳಿರಿ; ನಾನೂ ಹುಡುಗನೂ ಅಲ್ಲಿಗೆ ಹೋಗಿ, ಆರಾಧನೆ ಮಾಡಿ, ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ ಅಂದನು. ಉತ್ಪ. ೨೨, ೫.

ಗುಡ್ಡದ ಅಡಿಯಲ್ಲಿ ಅಬ್ರಹಾಮನು ತನ್ನಾಳುಗಳನ್ನು ಬಿಟ್ಟು, ತಾನೊಬ್ಬನೇ ತನ್ನ ಮಗನ ಸಂಗಡ ಗುಡ್ಡವನ್ನೇರಲಿಕ್ಕೆ ಹತ್ತಿದನು. ಆಳುಗಳು ಅಲ್ಪ ಬಾಹ್ಯಕಾರ್ಯಗಳಲ್ಲಿ, ಬರೀ ಚಿಲ್ಲರೆ ಕೆಲಸದಲ್ಲಿ ಮಾತ್ರ ಊಳಿಗ ಮಾಡಿ, ಸಹಾಯಕರಾಗಿರ ಬಹುದಿತ್ತು; ಮುಖ್ಯ ಕೆಲಸದಲ್ಲಿ ಅಬ್ರಹಾಮನಿಗೆ ಅವರಿಂದ ಏನೂ ಪ್ರಯೋಜನ ಒದಗಿ ಬರ ಕೂಡದಿತ್ತು. ಹಾಗೆಯೇ ನಾವು ಸಹ ಕೇವಲ ಒಂಟಿಗರಾಗಿ, ನಾವು ಚಿಂತಿಸುವ ಸಂಗತಿಗಳನ್ನು ಕರ್ತನೊಬ್ಬನಿಗೆ ಅರಿಕೆ ಮಾಡಿ, ಒಪ್ಪಿಸಿ ಕೊಟ್ಟು, ಯಾರ ಸಹಾಯವೂ ಆಶೆಯೂ ಇಲ್ಲದೆ ಪಾರಾಗಲಿಕ್ಕೆ ನೋಡ ಬೇಕಾಗುವ ಸಮಯಗಳು ಬರುತ್ತವೆ. ಪ್ರಪಂಚಕಾರ್ಯಗಳಲ್ಲಿ ಒಂದು ವೇಳೆ ಮನುಷ್ಯರು ಒಬ್ಬರಿಗೊಬ್ಬರು ಕೈ ಕೊಡ ಬಹುದು; ಆದರೆ ವಿಶ್ವಾಸದ ಹೋರಾಟ ಮೊದಲಾದ ಹೆಚ್ಚಿನ ಸಂಗತಿಗಳನ್ನೂ ಕೆಲಸಗಳನ್ನೂ ಒಬ್ಬರ ಬದಲಿಗೊಬ್ಬರು ವಹಿಸಿ ಕೊಳ್ಳಲಿಕ್ಕೂ ನಿರ್ವಹಿಸಿ ಸಾಗಿಸಲಿಕ್ಕೂ ಕೂಡದು. ಬಾಗಲು ಬರೇ ಇಬ್ಬರಾದರೂ ಒಟ್ಟಿಗೆ ಶೇರಲಿಕ್ಕೆ ಕೂಡದಷ್ಟು ಇಕ್ಕಟ್ಟೂ ಚಿಕ್ಕದೂ ಆಗಿದೆ: ಒಬ್ಬೊಬ್ಬನೇ ತಾನಾಗಿ ಒಂಟಿಗನಾಗಿ ಶೇರ ಬೇಕು. ತಾನು ಒಬ್ಬನೇ ಒಳ್ಳೇದನ್ನು ತೊಡಗಿಸುವಾತನೂ ನೆರವೇರಿಸಿ ಪೂರೈಸುವಾತನೂ ಎಂಬ ತನ್ನ ಕೀರ್ತಿಗೆ ಕರ್ತನು ಕುಂದು ಬರ ಬಿಡಲಾರನು. ಅವಸರಗಳೂ ಕಷ್ಟಗಳೂ ಬಿದ್ದಾಗ ಯಾರ ಸಹಾಯವಿಲ್ಲದಾದರೂ, ತಡೆದು, ತಾಳಿ, ಪಾರಾಗುವ ಸಾಧನೆಯನ್ನು ಅಭ್ಯಾಸ ಮಾಡಿಕೊಳ್ಳ ತಕ್ಕದ್ದು. ಪ್ರತಿಯೊಬ್ಬನು ಕರ್ತನ ಪರಿಚಿತಿಯನ್ನೂ ಅನುಭವವನ್ನೂ ಮಾಡೋದು ಮುಖ್ಯ ಕೆಲಸವೇ. ಆತನೊಬ್ಬನು ಧೈರ್ಯವನ್ನೂ ಬಲವನ್ನೂ ಜಯವನ್ನೂ ಕೊಟ್ಟು, ಉಳಿಸ ಶಕ್ತನಾಗಿದ್ದಾನೆ. ಆತನ ಹೆಚ್ಚಿನ ಅನುಭವವನ್ನೂ ಪರಿಚಿತಿಯನ್ನೂ ಮಾಡದೆ ಹೋಗುವದಕ್ಕೆ ಬಹುಶಾ ಆಲಸ್ಯವೇ ಕಾರಣವಾಗಿದೆ. ಪ್ರಾರ್ಥಿಸೋದು ಪ್ರಯಾಸವೂ ಮಹಾ ಹೋರಾಟದಂಥಾ ಸಾಹಸಕಾರ್ಯವೂ ಆಗುವದುಂಟು. ಆದರೆ ಬಲಹೀನರನ್ನು ಬಲ ಪಡಿಸುವ ಪ್ರಾರ್ಥನೆಯ ಆತ್ಮನೆಂಬ ಸಹಾಯಕನು ಇದ್ದಾನಲ್ಲಾ! ಈ ಸಹಾಯಕನು ಹೋರಾಡುವ ಪ್ರತಿಯೊಬ್ಬನಿಗೆ ಕೈಕೊಟ್ಟು, ದಾರಿಗೆ ಅಡ್ಡವಾಗಿ ಬಿದ್ದ ಗುಡ್ಡಗಳನ್ನಾದರೂ ತೆಗೆದು ಹಾಕಲಿಕ್ಕೆ ಹತ್ತರವಿರುತ್ತಾನೆ. "ಇಗೋ, ನಾನು ಲೋಕಾಂತದ ವರೆಗೂ ಎಲ್ಲಾ ದಿವಸಗಳಲ್ಲಿ ನಿಮ್ಮ ಸಂಗಡ ಇದ್ದೇನೆ" ಎಂಬ ವಾಗ್ದಾನವನ್ನು ಯೇಸು ಕೊಟ್ಟದು ಯಾತಕ್ಕೆ? ನಾವು ಸಹ ನಮ್ಮಂತ್ಯದ ವರೆಗೂ ತನ್ನ ಸಂಗಡ ಇರುವವರಾಗಿರಬೇಕೆಂದು ಆತನು ಆ ವಾಗ್ದಾನವನ್ನು ಕೊಟ್ಟನೆಂಬದು ನಿಶ್ಚಯವೇ. ಸರ್ವಬಂಧಹರನಾದಾತನು ನಮ್ಮ ಸಂಗಡವಿದ್ದು, ದಾರಿ ಬಿಡಿಸಿ, ನಮ್ಮನ್ನು ನಡಿಸಿ ಕೊಂಡು ಹೋಗುವ ನಾಯಕನಾಗಿದ್ದರೆ, ನಮ್ಮ ಮಾರ್ಗವೆಲ್ಲವೂ ನಮ್ಮ ಸರ್ವ ವಿದ್ಯಮಾನಾದಿಗಳೂ ಬಾಯಿಗೊಂಡು, ಫಲಸಿದ್ಧಿಯನ್ನು ಹೊಂ

ದ್ಯಾವು. ಈ ನಾಯಕನ ಬೆನ್ನಿನಲ್ಲಿ ಮಹಾ ಪರ್ವತಾವಳಿಗಳನ್ನೂ ಅತಿ ದುರ್ಗಮ ಘಟ್ಟಗಳನ್ನೂ ಹತ್ತಿ ದಾಟ ಬಹುದು. ಆತನನ್ನು ಕೂಡಿ ಕೊಂಡವನು ತಾನು ಒಂಟಿಗನಲ್ಲಾ, ತನಗೆ ಸೇನಾಬಲವಾಗಲಿ ಧನಬಲವಾಗಲಿ ಮಿತ್ರಬಂಧುವರ್ಗಬಲವಾಗಲಿ ಬೇಡಾ, ಶಾಂತಿಯೂ ತಾಳ್ಮೆಯೂ ನಂಬಿಕೆಯೂ ತನಗೆ ಬೇಕಾದ ಬಲವೊಂದೇ ಸಾಕು ಎಂತ ಅನುಭವಜ್ಞಾನಿಯಾಗಿ ತಿಳುಕೊಂಡಾನು. ದಾಟಿ ಪಾರಾದ ಮೇಲೆ ಪಾರಾಗಲಿಕ್ಕೆ ಯಾರ ಸಹಾಯವಿಲ್ಲದೆ ಹೋದದಕ್ಕೆ ಸಂತೋಷವೂ ಹರ್ಷಧ್ವನಿಯೂ ಹುಟ್ಟುವದು. ತನ್ನನ್ನೇ ಹಿಡಿಯ ಬೇಕೆಂತ ಕರ್ತನು ನಮ್ಮನ್ನು ಒಂಟಿಗರಾಗಿ ಅಂಥಾ ಘಟ್ಟಗಳ ಅಡಿಯಲ್ಲಿ ತಂದಿರಿಸುತ್ತಾನೆ. ಅಬ್ರಹಾಮನು ಆಳುಗಳನ್ನೂ ವಾಹನವನ್ನೂ ಅಡಿಯಲ್ಲಿ ಬಿಟ್ಟು ಏರಿದನು. ಎಷ್ಟಕ್ಕೆ ನಾವು ಮಾನುಷಬುದ್ಧಿಯನ್ನೂ ಆದರವನ್ನೂ ಉಪಾಯಗಳನ್ನೂ ಬಿಟ್ಟು ಬಿಡುತ್ತೇವೋ ಅಷ್ಟಕ್ಕೆ ದೇವರೇ ಸಹಾಯಕನಾಗಿ ಆದರವನ್ನೂ ಸಫಲತೆಯನ್ನೂ ಕೊಟ್ಟು, ನಡಿಸಿ, ಪರಿಪಾಲಿಸುತ್ತಾನೆ.

---

## ಒಂದು ನೆರೆ.

(೧೩೨ನೇ ಪುಟದಿಂದ ಮುಂದೆ.)

### ೫ನೇ ಪರ್ವ: ಭಯಂಕರ ಅಂತವು.

ಕೊನ್ರಾದ ಮರೀಯ ಇವರ ತಾಯಿ ಸಹ ತೀರಿ ಹೋಗಿ, ೪ನೇ ಪರ್ವದ ತುದೀ ವಿವರವು ಸೂಚಿಸುವ ಮರ್ಯಾದೆಯಲ್ಲಿ ಯೆರ್ಗಲನ ಮನೆವಾರ್ತೆ ಸುಮಾರು ಹತ್ತು ವರುಷ ನಡೆಯುತ್ತಾ ಇದ್ದ ಬಳಿಕ ಸಂಭವಿಸಿದ್ದೇನಂದರೆ: ಆ ವರುಷದ ಹಿಮಕಾಲದಲ್ಲಿ ಕೇವಲ ಅಪೂರ್ವವೆಂತ ಕಂಡಷ್ಟು ಬಹಳ ಹಿಮವು ಬೀಳುವದಾಯಿತು. ಹಾದಿಗಳೂ ದಾರಿಗಳೂ ಮಾತ್ರವಲ್ಲಾ ರಾಜಮಾರ್ಗಗಳಾದರೂ ಬಿದ್ದ ಹಿಮರಾಶಿಯ ದೆಶೆಯಿಂದ ಅಗಮ್ಯವಾಗಿ (ಯಾರೂ ಸಂಚರಿಸ ಕೂಡದ್ದಾಗಿ) ಹೋದವು. ಅನೇಕ ಮರಗಳು ಹಿಮದ ಭಾರವನ್ನು ಹೊರಲಾರದೆ, ಜಗ್ಗಿ, ಮುರಿದು ಹೋದವು. ಅಷ್ಟು ಹಿಮ ಬಿದ್ದನಂತರ ಬಹು ಕಠಿಣ ಛಳಿ ಶುರುವಾಗಿ, ಬಹಳ ದಿನ ಕಡಿಮೆಯಾಗದೆ, ಬಹು ಜೋರಾಗಿತ್ತು. ನೀರೆಲ್ಲಾ, ಹರಿಯುವ ನೀರಾದರೂ, ಘಟ್ಟಿಯಾಗಿ, ನೀರ್ಗಲ್ಲಾಗಿ ಹೋಯಿತು. ರೈನ್ ನದ ರಾಜನೂ ತನ್ನ ವೇಷ ಬದಲಿಸಿ ಕೊಂಡು, ಶೀತಕ್ಕೆ ತಕ್ಕ ಬಹು ದಪ್ಪವಾದ ನೀರ್ಗಡ್ಡೆಯ ಕವಚ ಹಾಕಿ ಕೊಂಡನು. ಆದರೆ ಮಾಘಮಾಸದ (ಫೆಬ್ರವರಿ ತಿಂಗಳಿನ) ಅಮಾವಾಸೆಗೆ ಆಕಾಶವು ಫಕ್ಕನೆ ರೂಪಾಂತರವಾಗಿ, ವಾಯುಗುಣ ಬೇರ್ಪಟ್ಟು, ಛಳಿ ಉತಾರಾಗಿ, ಹಿಮವೂ ನೀರ್ಗಡ್ಡೆಯೂ ಕರಗಿ, ನೀರಾಗಿ ಹೋಗುವ ಸಂಗತಿಯಾಯಿತು. ಜನರೆಲ್ಲರಿಗೆ ಭಯ ಹಿಡಿದು ಹೋಗಿ, ಅವಾಂತರ ಹತ್ತಿತು. ಕಾರಣವಿಲ್ಲದೆ ಹಾಗಾಗಲಿಲ್ಲಾ. ಹಿಮವೂ ನೀರ್ಗಲ್ಲುಗಳೂ ಅಮಿತವಾಗಿದ್ದದರಿಂದಲೂ, ವಾಯುಗುಣ ಫಕ್ಕನೆ ಬದಲಾಗಿ ಅವುಗಳನ್ನು ಕರಗಿಸಿ ಬಿಡುವಂಥಾದ್ದಾದ್ದರಿಂದಲೂ, ನೀರೂ ಅಮಿತವಾಗಿ, ಕೇವಲ ಅಪೂರ್ವವಾದ ನೆರೆಯಾಯಿತು. ಹಳ್ಳ ಕೊಳ ಹೊಳೆ ಪೊಳೆಗಳಲ್ಲಿ ಮುಸ್ಕಿದ್ದ ನೀರುಗಡ್ಡೆ ಒಡದು, ದೊಡ್ಡ ದೊಡ್ಡ ಹಲಿಗೆಗಳಂತೆಯೂ ಬಂಡೆಗಳಂತೆಯೂ ನೀರಿನಲ್ಲಿ ಶಳಕೊಂಡು ಹೋಗುವಂಥಾದ್ದಾಯಿತು. ಆ ನೀರ್ಗಲ್ಲಿನ ತುಕಡಿಗಳು ಇಲ್ಲ್ಯಲ್ಲಿ ದೊಡ್ಡ ದೊಡ್ಡ ಏರಿಗಳೂ ದಿನ್ನೆಗಳೂ ಗುಡ್ಡಗಳೂ ಆಗುವಷ್ಟಾಗಿ ಕೂಡಿ ಕೊಂಡು, ನೀರು ಚನ್ನಾಗಿ ಹರಿದು ಹೋಗಲಿಕ್ಕೆ ಕೂಡದ ಹಾಗೆ ಮಾಡಿ ಬಿಟ್ಟವು. ಈ ತುಕಡಿಗಳು ನನಗೆ ಅಟಕಾಯಿಸುತ್ತವೋ ಏನೋ ನೋಡೋಣ! ಎಂಬಂತೆ ನೀರು ರೌದ್ರವಾಗಿ ಘೋಷಿಸಿ, ಗರ್ಜಿಸಿ, ಏಳುತ್ತಾ ಬೀಳುತ್ತಾ, ಏರುತ್ತಾ ಇಳಿಯುತ್ತಾ,

ಇಲ್ಲ್ಯಲ್ಲಿ ದಾರಿ ಬಿಡಿಸಿ ಕೊಳ್ಳುತ್ತಾ, ಇಲ್ಲ್ಯಲ್ಲಿ ದಾರಿ ಕಟ್ಟಿಸಿ ಕೊಳ್ಳುತ್ತಾ, ಏರಿಗಳನ್ನೂ ಸಂಕಗಳನ್ನೂ ಮನೆಗಿನೆಗಳನ್ನೂ ಕೊರದು, ತೊಳದು, ಒಡದು, ಮುರಿದು, ಹಿಡಿದು, ಹೊಡದು, ಬಡದು, ಶಳಕೊಂಡು ಹೋಗುವಂಥಾದ್ದಾಯಿತು. ನೀರಿಲ್ಲದ ತಗ್ಗು ಬೈಲುಗಳಾದರೂ ಸಮುದ್ರದ ಪಾಲಾಗಿ ಹೋದಂತಾದವು.

ಜೋರ್ಜನ ತೊಟ್ಲು ಇದ್ದಂಥಾ, ಅವನ ತಂದೆ ತಾಯಿಗಳು ತಾಪತ್ರಯವನ್ನು ತಾಳಿ ಕೊಂಡು, ಅಂತ್ಯಶ್ವಾಸ ಬಿಟ್ಟಂಥ ಗುಡಸಲು ಬಿಚ್ಚಿ ತೆಗಿಸೋಣಾಗಿ, ಅದು ಕಟ್ಟಿದ್ದ ಠಾವಿನಲ್ಲಿ ಒಂದು ದೊಡ್ಡ "ನಂಬರಮನೆ" (ಅಂದರೆ ಮದ್ಯಪಾನಾದಿಗಳು ಮಾರಾಟವಾಗುವ ಅಂಗಡಿ, ಛತ್ರ) ಕಟ್ಟೋಣಾಗಿ, ಚಿಕ್ಕ ಗುಡ್ಡವೆಲ್ಲಾ ರೂಪಾಂತರವಾಗಿ ಹೋಗಿತ್ತು. ಆ ಹೊಸ ನಂಬರಮನೆಯ ಸುತ್ತಮುತ್ತಲು ರಮ್ಯ ಹೂತೋಟವನ್ನು ಮಾಡಿದ್ದರು. ಅನೇಕರು ಅದರ ದಾರಿ ಹಿಡಿದು, ಬರುತ್ತಾ ಹೋಗುತ್ತಾ ಇರುವದಾಯಿತು. ವಿಶೇಷವಾಗಿ ಆದಿತ್ಯವಾರಗಳಲ್ಲಿ ಬಹಳ ಜನರು ಬಂದು, ತಿಂದು, ಕುಡಿದು, ಖುಷಾಲು ಮಾಡಿ ಹೋಗುತ್ತಿದ್ದರು. ನೆರೆ ಶುರುವಾದ ದಿನವು ಒಂದು ಆದಿತ್ಯವಾರವೇ ಆಗಿತ್ತು. ಆ ಆದಿತ್ಯವಾರ ಸಾಯಂಕಾಲಕ್ಕೆ ಮಳೇ ಮೋಡಗಳು ಆಕಾಶವನ್ನು ಕವಿದು ಹೋಗಿ, ಬೇಗ ಮಬ್ಬಾಗಿ, ನೀರಿನ ಗಂಡ ಹೆಚ್ಚುವದು ಒಂದಿಷ್ಟು ಮರೆಯಾಗಿ, ಚನ್ನಾಗಿ ಕಾಣದೆ ಹೋಗಲಿಕ್ಕೆ ಕಾರಣವಾಯಿತು. ಹ್ಯಾಗಾದರೂ ಅಂದು ಆ ನಂಬರಮನೆಯಲ್ಲಿದ್ದವರು ಸಂಭವ್ಯವಾದ ಕಂಟಕವನ್ನು ತಿಳಿಯಲಿಲ್ಲಾ. ಹಳೇಬ ಗ್ರಾಮಗಾಯಕರವನೊಬ್ಬನು ಹಳೇ ಸಾರಂಗಿ ನುಡಿಸಿ, ಮಾಡಿದ ವಾದ್ಯಕ್ಕೆ ಸುತ್ತಮುತ್ತಲಿನ ಗ್ರಾಮಗಳವರ ಪೋರಗಳೂ ಪೋರಿಗಳೂ ನಾಟ್ಯದಲ್ಲಿ ಕುಣಿದು, ಆಡಿ, ಹಾಡಿ, ದ್ರಾಕ್ಷೇ ರಸಸೇವೆಯಲ್ಲಿಯೂ ವಿಲಾಸಗಳಲ್ಲಿಯೂ ನಿಮಗ್ನರಾಗಿ ಹೋಗಿದ್ದರು. ನದನೀರು ಏರುತ್ತಾ, ಏರುತ್ತಾ, ಅದರ ಘೋಷವೂ ಉರುವಣೆಯೂ ಹೆಚ್ಚುತ್ತಾ ಬಂದ ಪ್ರಮಾಣದಲ್ಲಿ ಅವರಲ್ಲಿ ಅಮಲೇರುತ್ತಾ ಬಂದು, ಅವರ ಗೌಜಿ, ಗುಲ್ಲು, ಕೂಗು, ಹಾಡು ಪಾಡುಗಳಲ್ಲಿ ನೀರಿನ ಘೋಷವೂ ಶಳದಾಟವೂ ಮುಳಿಗಿ, ಕೇಳದೆ ಹೋಯಿತು. ಅವರನ್ನು ಶೇರಿ ಕೊಳ್ಳದೆ, ಅಮಲು ಹಿಡಿಯದ ಜನರು ಅವರನ್ನು ನೋಡಿದ್ದಾದರೆ, ಕಾಡು ಮೃಗಗಳ ಗುಂಪೋ? ನರಪಿಶಾಚಿಗಳ ಕೂಟವೋ? ಶುದ್ಧ ದೈತ್ಯರ ಮೇಳವೋ? ಏನೋ? ಎಂತ ಅವರಿಗೆ ದಿಗಿಲು ಹಿಡಿದು ಹೋಗುತ್ತಿತ್ತು.

ಹೊತ್ತು ಹೋದಷ್ಟು ಗುಲ್ಲು ಹೆಚ್ಚುತ್ತಾ ಬಂತು; ಮಧ್ಯ ರಾತ್ರಿಯೋ ಆಯಿತು; ಆದರೂ ಮನೆಗೆ ಎದ್ದು ಹೋಗ ಬೇಕೆಂಬ ಯೋಚನೆ ಒಬ್ಬನಿಗೂ ಹುಟ್ಟಲಿಲ್ಲ. ಕೋಣೆಯ ಒಂದು ಮೂಲೆಯಲ್ಲಿ ಜೊತೆಗಾರರ ನಡುವೆಯಲ್ಲಿ ಭಂಡು ಮಾತಾಟ ಮೊದಲಾದ ಕೆಟ್ಟ ಆಟಗಳಲ್ಲಿ ಶಿಖಾಮಣಿಯಾಗಿದ್ದ ಯೌವನಸ್ಥನೊಬ್ಬನು ಬಹಳವಾಗಿ ಅಮಲೇರಿ, ಕೂತು ಕೊಂಡಿದ್ದನು. ಅವನ ಮೋರೆ ಕಂಡರೆ, ಅವನು ಅಂದಿಗೆ ಒಮ್ಮೆ ಮಾತ್ರ ಅಮಲು ಹಿಡಿದವನಲ್ಲಾ, ಕುಡಿಯೋ ವ್ಯಸನಕ್ಕೆ ಪೂರ್ಣ ಸೋತು ಹೋದ ಅಮಲುಖೋರನೇ ಎಂತ ತಿಳಿಯ ಬಹುದಿತ್ತು. ಕಣ್ಣುರೆಪ್ಪೆ ಬಾತು, ಕಣ್ಣುಗುಡ್ಡು ಕೆರಳಿ, ಕೆಂಪಗಾಗಿ, ಕಣ್ಣುಗೊಂಬೆ ಕಿಸಿದು, ಬಿರಿದ್ದಾಗಿ ಹೋಗಿತ್ತು. ಅವನು ಕಂಡರೆ, ಎಂಥಾ ಮಾರಿ! ಎಂತ ಹೆದರಿಕೆಯಾಗುವದು; ತಾಯಿಯ ಗುರ್ತು ಮಾತ್ರ ಇದ್ದವರು ಇದ್ದರೆ, ಅವನು ಹತ್ತು ವರುಷ ಮೊದಲು ತೀರಿ ಹೋದ ಮರ್ಗರೀತಳ ಮಗ ಕೊನ್ರಾದನೆಂದು ನಂಬಲಿಕ್ಕೆ ಕಷ್ಟವಾಗುತ್ತಿತ್ತು. "ಹೇ, ಗುಪ್ಪಯ್ಯಾ! ಇನ್ನೊಂದು ಕುಪ್ಪಿ!" ಎಂತ ತನ್ನ ಬದೀಲಿ ನಿಂತವನಿಗೆ, ಅವನು ನಂಬರಮನೆಯವನೆಂತ ನೆನಸಿ, ಒಂದು ಇರ್ತ ಇರಿದು, ಒದರಿದನು. ಆದರೆ ಆ ಇರ್ತತಾಗಿದವನು ನಂಬರಮನೆಯವನಾಗಿರದೆ, ಇತರ ಪೋರರಲ್ಲೊಬ್ಬನಾಗಿದ್ದು, ಕೊನ್ರಾದನ ಇರಿತಕ್ಕೆ ಕೋಪಿಸಿ ಕೊಂಡು, ಬಲಗೈ ಮುಷ್ಟಿ ಹಿಡಿದು, ಪ್ರತ್ಯುಪಕಾರಕ್ಕೆ ಕೊನ್ರಾದನ ನಡುಮೋರೆಗೆ

ಒಂದು ಗುದ್ದು ಗುದ್ದಿ ಬಿಟ್ಟನು. ಆ ಗುದ್ದಿಗೆ ಕೊನ್ರಾದನು ಒಂದು ಹುಲಿಯೋ? ಕಾಡ್ಗೋಣವೋ? ಎಂಬಂತೆ ಕೋಪಾವೇಶವಾಗಿ ಎದ್ದು, ಆ ಎರಡನೆಯವನ ಮೈಯ ಮೇಲೆ ಬಿದ್ದನು. ಇಬ್ಬರೊಳಗೆ ಗುದ್ದಾಟವೂ ಕಚ್ಚಾಟವೂ ತೊಡಗಲೇ, ಉಳಿಕೇ ಪೋರಗಳೂ ಎದ್ದು, ಒಬ್ಬನು ಅವನಿಗೆ ಇನ್ನೊಬ್ಬನು ಇವನಿಗೆ ಸಹಾಯ ಮಾಡ ಬೇಕೆಂತ ಓಡಿ ಬಂದು, ಒಬ್ಬರ ಮೈ ಮೇಲೆ ಒಬ್ಬರು ಬಿದ್ದು, ಹೊಡೆಯಲೂ ಬಡಿಯಲೂ ದೊಡ್ಡ ದೊಡ್ಡ ಕಚ್ಚಾಟವೂ ಹೊಡದಾಟವೂ ಶುರುವಾಯಿತು. ಕುಪ್ಪಿಗಿಪ್ಪಿಯೆಲ್ಲಾ ಒಡದು ಹೋದೀತು ಎಂತ ಮಾತ್ರವಲ್ಲಾ, "ಒಂದು ನಂಬರ" ಆಗಿ ಪೋಲೀಸಿಗೆ ಹೋಗುವ ಸಂಗತಿ ಆಗಲಿಕ್ಕೆ ಸಾಕು ಎಂತಲೂ ಭಯ ಪಟ್ಟು, ನಂಬರಮನೆಯವರು ಓಡಿ ಬಂದು, ಉಪಾಯದಿಂದ ಕಚ್ಚಾಟದವರನ್ನು ಅಗಲಿಸಿ, ಹೋಗಲಾಡಿಸಿ ಬಿಟ್ಟರು. ಕಣ್ಣು ಕೆರಳಿ, ಕ್ರೂರ ದೃಷ್ಟಿ ಒಬ್ಬರಕಡೆಗೊಬ್ಬರು ಮಾಡಿ, ಮನೆ ಬಿಟ್ಟು ಹೋದರು. ಹೊರಗೆ ಜೋರು ಮಳೆಯೂ ಕಾರ್ಗತ್ತಲೂ ಇಲ್ಲದ ಪಕ್ಷಕ್ಕೆ ಕಿಚ್ಚು ಆರದೆ, ಕಿಚ್ಚಾಟವೂ ಕಚ್ಚಾಟವೂ ತಿರಿಗಿ ತೊಡಗಿ, ಮಿತಿ ಮಿೀರಿ ಹೋಗುತ್ತಿತ್ತು; ಆದರೆ ಹೊರಗಣ ಮಳೆಗೆ ಬಿದ್ದವರ ಕಿಚ್ಚು ಬೇಗನೇ ತಕ್ಕ ಮಟ್ಟಿಗೆ ಆರಿ ಹೋಯಿತು. ಕಾಲು ತಾಸಾಗದೆ ನಂಬರಮನೆಯ ಒಳಗೂ ಹೊರಗೂ ಎಲ್ಲಾ ಶಾಂತವಾಗಿ, ಮೌನವಾಯಿತು. ಘಾಳಿ ಪ್ರಚಂಡವಾಗಿ ಬೀಸಿ, ಮಳೆಯನ್ನು ಹೊಡಕೊಂಡು ಬರುವ ಶಬ್ದವೂ ಉಬ್ಬಿದ ನೀರಿನ ಘೋಷವೂ ಇವು ಅಲ್ಲದೆ ಬೇರೇನೂ ಕೇಳದೆ ಹೋಯಿತು. ಕೊನ್ರಾದನು ಮಳೆಯಲ್ಲಿ ತಡೆಯಲಿಕ್ಕೆ ಮನಸ್ಸಾಗದೆ, ತಗ್ಗಿಗೆ ಇಳಿದು ಹೋಗುವ ಓಣಿಯಲ್ಲಿ ನಡೆಯುತ್ತಾ, ತಡವ್ಯಾಡುತ್ತಾ, ಎಡವಿ ಬೀಳುತ್ತಾ, ಕೈ ಕಾಲಿನಲ್ಲ್ಯಾದರೂ ಹರಿದಾಡುತ್ತಾ, ಹೀಗೆ ನಾನಾ ಪ್ರಕಾರದಲ್ಲಿ ತನ್ನ ಮನೆಯ ಕಡೆಗೆ ಹೋಗಿ, ಮನೆಗೆ ಮುಟ್ಟಲಿಕ್ಕೆ ಕೈಲಾದಷ್ಟು ಪೇಚಾಡಿ ನೋಡಿದನು. ಆದರೆ ಆ ನಂಬರಮನೆ ಕಟ್ಟಿದ್ದ ಗುಡ್ಡೆಯನ್ನಿಳಿದ ಮೇಲೆ ಅವನ ಮುಂದಿದ್ದ ತಗ್ಗುಬೈಲೆಲ್ಲಾ ನೀರಾಗಿ ಹೋಗಿತ್ತು. ಏನು? ತಾನು ಎಲ್ಲಿ? ಎಂತ ಅಮಲಿನ ದೆಶೆಯಿಂದ ಚನ್ನಾಗಿ ತಿಳಿಯದೆ, ಇನ್ನು ನಾಲ್ಕೈದು ಹೆಜ್ಜೆ ಮಾತ್ರ ಮುನ್ನಡೆದು, ನೀರಿಗೆ ಬಿದ್ದನು. ಕೇಳಲಿಕ್ಕೆ ಯಾರಾದರೂ ಅಲ್ಲಿ ಇದ್ದದಾದರೆ, ಅವನು ಬೀಳುವಾಗ್ಯೆ ಅವನ ಬಾಯಿಯಿಂದ ಹೊರಟ ಭೀಕರವಾದ ಒಂದೇ ಕೂಗೂ, ನಾಲ್ಕೈದು ಸರ್ತಿ ನೀರಿನಲ್ಲಿ ಚಟಪಟ ಮಾಡಿ, ಧಡಬಡ ಎಂತ ಬಡಿದ ಸಪ್ಪಳವೂ ಅಲ್ಲದೆ, ಮತ್ತೇನೂ ಕೇಳುತ್ತಿದ್ದಿಲ್ಲಾ.

ಮನೆಯವರು ಮಲಗಿ ಕೊಳ್ಳದೆ, ಕೊನ್ರಾದನನ್ನು ಕಾದು, ಕಾದು ಕೊಳ್ಳುತ್ತಾ ಇದ್ದರು. ಘಾಳಿ ಅತಿ ಪ್ರಚಂಡವಾಗಿ ಭೋರೆಂದು ಗರ್ಜಿಸುವಂಥಾದ್ದಾಯಿತು. ಕಿಟಕಿಗಳು ಘಾಳಿಯ ಒತ್ತರಕ್ಕೆ ಧಣಧಣ ಗಣಗಣ ಭರಭರೆಂದು ಸಪ್ಪಳ ಮಾಡುವಂಥವಾದವು. ರೈನ್ ನದನ ಘೋಷವು ಹೆಚ್ಚೆಚ್ಚಾಗಿ, ಬಿಡದ ಗುಡುಗಿನಂತಾದ ಗರ್ಜನೆಯಾಗಿ ಹೋಯಿತು. ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ದನ ಕರುಗಳು ಘಾಬರಿ ಹಿಡಿದು ಒಂದು ತರವಾಗಿ ಅರಚುತ್ತಾ ಕೂಗುತ್ತಿದ್ದವು. ಯೆರ್ಗಲನು ಪೈತ್ಯಗಾರನಂತೆ ಕಿವಿಯ ಹಿಮ್ಮಡಿಯನ್ನು ತುರಿಸಿ ಕೊಳ್ಳುತ್ತಾ ಕೋಣೆಯಲ್ಲಿ ಅಡ್ಡಾಡುತ್ತಿದ್ದನು. ಅಂದಿನ ದರಂಥಾ ಘಾಳಿ ಅವನು ಕೇಳಿದ್ದೂ ಇಲ್ಲಾ, ನೋಡಿದ್ದೂ ಇಲ್ಲಾ. "ಕೊನ್ರಾದ ಎಲ್ಲಿದ್ದಾನು? ಅಂಥಾ ಭೂತಘಾಳಿಯಲ್ಲಿಯೂ ಭೋರ್ಮಳೆಯಲ್ಲಿಯೂ ಯಾಕೆ ಮನೆಗೆ ಬಾರದೆ ತಿರುಗಾಡುವನು? ಗ್ರಹ ಬಡಿಯಿತೋ? ಪಾಪ! ಅಂಥಾ ರಾತ್ರಿ ನಾನು ಹುಟ್ಟಿದಂದಿನಿಂದ ಕಳದ್ದು ಇಲ್ಲವೇ ಇಲ್ಲಾ! ಮರೀಯಾ! ಯಾಕೆ ಸುಮ್ಮಗೆ ಕೂತಿದ್ದೀ? ಜಪ ಮಾಡ ಬಾರದೋ? ಪುಸ್ತಕ ತೆಗದು ಕೊಂಡು, ಜಪ ಮಾಡೋ! ದೇವರಿಗೆ ಜಪ ಮಾಡೋ!" ಅಂದನು.

ಬಹು ಘಾಬ್ರಿಯಾಗಿ ಒಬ್ಬ ಊಳಿಗಿತ್ತಿ ಕೋಣೆಗೆ ಓಡಿ ಬಂದು—"ನೀರು ಕೊಟ್ಟಿಗೆಯನ್ನು ಶೇರಿ, ತುಂಬಿಸಿ ಬಿಡುತ್ತದೆ. ಒಂದು ಘಳಿಗೆಯಲ್ಲಿ ದನ ಕರು ಸತ್ತೇ ಸತ್ತು ಹೋಗುವ ಸಂಗತಿ! ಅಕ

ಟಕಟಾ!" ಎಂತ ಬೊಬ್ಬಿಟ್ಟು ತಿಳಿಸಲು, ಯೆರ್ಗಲನೂ ಮಗಳೂ ಎಲ್ಲರೂ ಹೊರಗೆ ಓಡಿ ನೋಡಲು, ಆಕೆಯು ಮಾತು ಹೌದೆಂತ ಕಂಡಿತು. "ದನ ಕರು ಬಿಚ್ಚಿ ಬಿಡಿ! ಬಿಚ್ಚಿ ಬಿಡಿ!" ಎಂತ ಯೆರ್ಗಲ್ ಒದರಿದ್ದಕ್ಕೆ ಎಲ್ಲರು ಕೊಟ್ಟಿಗೆಗೆ ಓಡಿ, ದನಗಳನ್ನು ಬಿಡಿಸಿ, ಹೊರಡಿಸಿದರು. ಆದರೆ ದನಗಳ ಘಾಬ್ರೀ ದೆಶೆಯಿಂದ ಬಹಳ ಪ್ರಯಾಸವಾಯಿತು. ಯೆರ್ಗಲ್ ತಿರಿಗಿ ಕೋಣೆಗೆ ಬಂದಾಗ—"ಅಮ್ಮಮ್ಮಾ! ದೇವಾ! ಅಂಥಾ ಆಪತ್ಕಾಲ ನಾ ಕಾಣಲಿಲ್ಲಾ! ಮಗ ಎಲ್ಲಿ? ಯಾಕೆ ಬಾರನು? ಮರೀಯಾ! ಕಂದವ್ವಾ! ನೀ ಯಾಕೆ ಪ್ರಾರ್ಥನೆ ಮಾಡುವದಿಲ್ಲಾ? ಅವಶ್ಯವಿಲ್ಲದ ಸಮಯಕ್ಕೆ ಯಾವಾಗಲೂ ಜಪ ಮಾಡುತ್ತಿದ್ದವಳು ಈಗ ಯಾಕೆ ಜಪ ಮಾಡೋದಿಲ್ಲಾ?" ಎಂಧೇಳಿದ್ದಕ್ಕೆ ಮರೀಯಳು—"ಸಂಕಟ ಬಂದರೆ ವೆಂಕಟರಮಣ" ಅಂತಲ್ಲವೋ? ಆಪತ್ತಿಗೆ ಮಾತ್ರವಲ್ಲಾ ಸರ್ವದಾ ದೇವರಿಗೆ ಪ್ರಾರ್ಥಿಸುತ್ತಿರ ಬೇಕು ಎಂದಂದಳು.

ಹೊತ್ತು ಹೋಗುತ್ತಾ ಕಂಟಕವು ಹೆಚ್ಚುತ್ತಾ ಬಂತು. ರೈನ್ ನದನಲ್ಲಿ ನೀರ್ಗಡ್ಡೆಯ ತುಕಡಿಗಳು ರಾಶಿಯಾಗಿ, ಗೊಂದಲವಾಗಿ, ನೀರು ಏರುತ್ತಾ ಏರುತ್ತಾ, ನದನ ಇಕ್ಕಡೆಯಲ್ಲೆಲ್ಲಾ ಉಬ್ಬಿ ಹೋಗಿ, ಧಡಗಳನ್ನೂ ಕಟ್ಟುಗಳನ್ನೂ ಕೊರೆಯುತ್ತಾ ತೊಳಕೊಳ್ಳುತ್ತಾ ಶಳಕೊಂಡು ಹೋಗುವಂಥಾದ್ದಾಯಿತು. ನೀರ್ಗಲ್ಲುಗಳು ಒಂದಕ್ಕೊಂದು ತಾಗಿ ತಿಕ್ಕುವ ಸಪ್ಪಳವೂ ಘಾಳಿಯು ಗರ್ಜನೆಯೂ ಒಂದು ಮಹಾ ಭೀಕರ ಅಬ್ಬರವಾಗಿ ಹೋಯಿತು. ಮರೀಯಳಾದರೂ ಕಂಗೆಟ್ಟು ಹೋದವಳಂತಾಗಿದ್ದಳು. ಅವಳ ತಂದೆ ಯೆರ್ಗಲಲ್ಲಿ ಉದ್ವೇಗವೂ ಭಯವೂ ಮನಸ್ತಾಪವೂ ಹೆಚ್ಚೇ ಹೆಚ್ಚಾಗುತ್ತಾ ಬಂತು. ಕಡೆಗೆ ಕಿಟಕಿಗಳಲ್ಲಿ ನೀರು ಸೋರುತ್ತದೋ? ಹರಿಯುತ್ತದೋ? ಎಂಬ ಹಾಗಾದ ಶಬ್ದವು ಕೇಳಿತು. ಆದರೆ ಘಾಳಿ ಮಳೆಯನ್ನು ಕಿಟಕಿಗೆ ಹೊಡದು ಬಡದು ಸೋರುವದೆಂತ ಭಾವಿಸಿಕೊಂಡವರ ಭಾವನೆ ಬೇಗನೇ ಅಲ್ಲದ್ದಾಗಿ ಹೋಯಿತು; ಯಾಕಂದರೆ ಒಂದು ನಿಮಿಷ ಹೋಗದೆ ನೀರು ಕಿಟಕಿಗಳನ್ನು ಒತ್ತಿ, ನೂಕಿ ಬಿಟ್ಟು, ಹಳ್ಳ ಪಳ್ಳವಾಗಿ ಒಳ ಬೀಳಲಿಕ್ಕೆ ದಾರಿ ಬಿಡಿಸಿ ಕೊಂಡಿತು.

"ದೇವರೇ! ದೇವರೇ!" ಎಂತ ಕೂಗಿ, ಬೊಬ್ಬೆ ಹಾಕಿದರು. ಮರೀಯಳು ದೀಪವನ್ನು ಹಿಡುಕೊಂಡು, ಮೇಲ್ಮಾಳಿಗೆಗೆ ಓಡಿದಳು; ಉಳಿದವರೂ ಅವಳ ಹಿಂದೆ ಓಡೋದೇ ಮಾಡಿ, ಉಪ್ಪರಿಗೆಯನ್ನು ಹತ್ತಿದರು. ನೀರಿನ ಒತ್ತರವೂ ಉರುವಣಿಯೂ ಇನ್ನು ಹೆಚ್ಚುತ್ತಾ ಬಂತು. ಕೊಟ್ಟಿಗೆ ಉಗ್ರಾಣಗಳ ಗೋಡೆಗಳು ಮಾತ್ರವಲ್ಲಾ ಮನೆಯುವು ಸಹ ನೀರಿನ ಜೋರು ತಡೆಯಲಾರದೆ, ಒಂದರ ಮೇಲೆ ಒಂದು ಧಡಬಡೆಂತ ನೀರಿಗೆ ಬಿದ್ದೋಯಿತು. ಎಲ್ಲರು ಬೊಬ್ಬೆ ಬೊಬ್ಬೆ ಹೊಯ್ಯುತ್ತಿರುವಾಗ ಮರೀಯಳು ಮೌನಿಯಾಗಿ ಮುದರಿ ಕೊಂಡು, ಮನಸ್ಸಿನಲ್ಲಿ ದೇವರಿಗೆ ಮೊರೆಯಿಟ್ಟು, ಪ್ರಾರ್ಥಿಸಿದಳು. ಅವಳ ತಂದೆ ಸಹ ಪ್ರಾರ್ಥಿಸಲೆಸಗಿದನು. ಆದರೆ ಅವನಿಗೆ ಬಾಯಿ ಬಾರದೆ ಹೋಯಿತು. "ನನ್ನ ಮಗಾ! ನನ್ನ ಮಗಾ!" ಎಂಬೀ ಒಂದೇ ಕೂಗಲ್ಲದೆ, ಬೇರೊಂದು ಅವನ ತುಟಿಗಳನ್ನು ದಾಟಲಿಕ್ಕೆ ಕೂಡಲಿಲ್ಲ. ಮಗನಿಗಾಗಿ ಅವನಿಗೆ ಹಿಡಿದು ಹೋದ ಭಯವು ಹೊತ್ತು ಹೋಗುತ್ತಾ ಉದ್ರೇಕವಾಗುತ್ತಾ ಬಂತು. ಅಷ್ಟರಲ್ಲಿ ರಾತ್ರಿ ಕಳದು ಬೆಳಗಲಿಕ್ಕಾಯಿತು.

ಬೆಳಗಾದ ಮೇಲೆಯೂ ಘಾಳಿ ಶಾಂತವಾಗಲಿಲ್ಲಾ. ಆ ರಾತ್ರಿಯ ಮಳೆಗೆ ಸ್ವಲ್ಪ ಕಡಿಮೆ ಎಲ್ಲಾ ಹಿಮವು ಕರಗಿ, ಕಾಣದೆ ಹೋಗಿತ್ತು. ಆ ನಂಬರಮನೆಯವರು ಹೊತ್ತಾರೆ ಎದ್ದು, ಮನೆಯಿಂದ ಹೊರಗೆ ಬಂದು, ನಿಂತು ಕೊಂಡು, ತಗ್ಗಿಗೆ, ರೈನ್ ನದನ ಕಡೆಗೆ ನೋಡಿದರು. ಅವರ ಮನೆಯಿದ್ದ ಗುಡ್ಡೆಯ ಸುತ್ತಮುತ್ತಲಿನ ತಗ್ಗೆಲ್ಲಾ ಸಮುದ್ರದ ಪಾಲಾಗಿ ಹೋಗಿತ್ತು. ಅವರು ಭ್ರಮೆಗೊಂಡು ನೋಡುತ್ತಿರುವಾಗ್ಯೆ, ನೌಕಾಜೀವಿಗಳ (ಖಲಾಶಿಗಳ) ವೇಷ ಹಾಕಿ ಕೊಂಡು ಇದ್ದ ಪುರುಷನೊಬ್ಬನು ನಂಬರಮನೆಯ ದಾರಿ ಹಿಡಿದು ಕೊಂಡು, ಒಂದು ದೊಡ್ಡ ಏರಿಯಲ್ಲಿ ನಡದು ಬರುವದ

ನ್ನು ಕಂಡರು. ಒಳ್ಳೇ ಧೋರವೂ ಉದ್ದವೂ ಇದ್ದ ಆಳು. ಅವನ ಮುಖವು ದುಷ್ಟ ಅಥವಾ ಕ್ರೂರ ಭಾವ ಲಕ್ಷಣದ್ದೇನೂ ಇಲ್ಲದ ದಯ ಸ್ನೇಹ ಸಜ್ಜನಿಕೇ ಭಾವದ್ದು. ನಂಬರಮನೆಯವರ ಬಳಿಗೆ ಬಂದು, ವಂದಿಸಿ, ಬಹು ಚಿಂತಾಭಾವವುಳ್ಳವನಾಗಿ, ತಗ್ಗಿಗೆ, ಯೆರ್ಗಲನ ಮನೆಯಿದ್ದ ಕಡೆಗೆ ಮುಖ ಮಾಡಿ ನೋಡಿದನು. ಆ ಕಡೆಯಲ್ಲೆಲ್ಲಾ ನೀರು ಬಹು ಆಳವಾಗಿ, ಮನೆಯ ಮಾಡು ಮಾತ್ರ ಇನ್ನು ಮುಳುಗದೆ ಕಂಡಿತು. ಆ ಪುರುಷನ ಮುಖ ನೋಡಿ, ನಂಬರಮನೆಯವನು—"ಮಹದಾಪತ್ತು ಇದು! ಆದರೆ ಸಹಾಯ ಒದಗಿಸುವದು ಹ್ಯಾಗೆ? ಏನೂ ಯಾರಿಂದಲೂ ಕೂಡದು!" ಎಂತ ಹೇಳಿದನು. ಬಂದವನು—"ನೋಡೋಣ! ಓ ಅಲ್ಲಿ ಗಡದ ಡೋಣಿ ಇರುತ್ತಿತ್ತಲ್ಲಾ! ಆ ಕಡೆಗೆ ಹೋಗಿ, ಅದು ನನಗೆ ಶಿಕ್ಕುವ ಹಾಗೆ ನೀವು ಸಂಗಡ ಬಂದು, ಕೈಕೊಡ ಬೇಕು. ಬೇಗನೇ ದಯ ಮಾಡಿ ಬನ್ನಿ! ತಡ ಮಾಡ ಬಾರದು!" ಎಂತ ಹೇಳಿ ಕೊಳ್ಳಲು, ನಂಬರಮನೆಯವನು ತಲೆಯನ್ನಲ್ಲಾಡಿಸಿ—"ಕೂಡದು! ಕೂಡದು!" ಎಂತ ಮತ್ತೂ ಮತ್ತೂ ಖಂಡಿತವಾಗಿ ಹೇಳಿದ್ದಕ್ಕೆ ಆ ಪುರುಷನು ಬಹಳ ಒತ್ತಾಯದಿಂದ ಬೇಡಿ ಕೊಳ್ಳಲು, ಅವನು ತನ್ನ ಮನೆಯೊಳಗೆ ಹೋಗಿ, ಒಂದು ಹಗ್ಗವನ್ನೂ ಒಂದು ಗಳವನ್ನೂ ಒಂದು ಕಬ್ಬಿಣದ ಕೊಕ್ಕೇ ಕೋಲನ್ನೂ ತೆಗೆದು ಕೊಂಡು ಬಂದನು. ಇಬ್ಬರು ರೈನ್ ನದನ ಗಡು ವಿಗೆ ನಡೆದರು. ಒಂದಿಷ್ಟು ನಡೆದು ಬಂದ ಮೇಲೆ ಗಡುವಿನ ಡೋಣಿ ಈಚೆಯ ಗದ್ದೆಯೊಳಗಣ ಓಣೀ ಕಡೆಯ ಬೇಲಿಯಲ್ಲಿ ಶಿಕ್ಕಿ ಕೊಂಡದ್ದಾಗಿ ಕಂಡರು. ನೀರಿನ ಶಳವು ಅದನ್ನು ಅಲ್ಲಿಗೆ ಹೊಡ ಕೊಂಡು ನೂಕಿ ಬಿಟ್ಟಿತ್ತು. ಸ್ವಲ್ಪ ಕಡಿಮೆ ಇಡೀ ಡೋಣಿ ನೀರಲ್ಲಿ ಮುಳಿಗಿ ನೀರಿನಿಂದ ತುಂಬಿ ಹೋಗಿತ್ತು. ಆ ಪುರುಷನು ಡೋಣಿಗೆ ಆದಷ್ಟು ಹತ್ತರವಾಗಿ ಕೊಕ್ಕೇ ಕೋಲನ್ನು ಹಗ್ಗಕ್ಕೆ ಕಟ್ಟಿ, ಡೋಣಿಯಲ್ಲಿ ಎಸದು ಹಾಕಿದನು. ಇಬ್ಬರು ಹಗ್ಗ ಹಿಡಿದು, ಕೈಲಾದಷ್ಟು ಎಳದು, ಎಳದು, ಎಳದರು. ಕಡೆಗೆ ಅವರ ಎಳತಕ್ಕೆ ಡೋಣಿ ಬಿಡಿಸಿ ಕೊಂಡು, ಅವರ ಬಳಿಗೆ ಬರುವಂಥಾದ್ದಾಯಿತು. ಆ ಪುರುಷ ನು ನೀರು ತೆಗೆದು ಬಿಟ್ಟು, ಅದರಲ್ಲಿ ಹಾರಿ, ಗಳ ಹಾಕಿ ನೂಕುತ್ತಾ ನಂಬರಮನೆಯ ಗುಡ್ಡೆಯನ್ನು ಸುತ್ತಿ, ಯೆರ್ಗಲನ ಮನೇ ಕಡೆಗೆ ಸಾಗಿಸುತ್ತಾ ಹೋದನು. ನೀರ್ಗಲ್ಲು ರಾಶಿ ರಾಶಿಯಾಗಿತ್ತು! ಆದರೆ ಒಂಬಾದರೂ ಡೋಣಿಗೆ ತಾಗದ ಹಾಗೆ ಆ ಪುರುಷನು ಮಾಡಿ, ಬಹು ಚಮತ್ಕಾರವಾಗಿ ಸಾಗಿಸಿ ಹೋಗ ಬಲ್ಲವನಾಗಿದ್ದನು. ನಂಬರಮನೆಯವನು—"ಯಾರಿವ? ಯಾರಾಗಿದ್ದಾನು?" ಎಂತ ಬಹು ಆಶ್ಚರ್ಯ ಪಟ್ಟು, ಹಿಂದಿನಿಂದ ನೋಡುತ್ತಿದ್ದನು.

ಡೋಣಿಯನ್ನು ಸಾಗಿಸಿ ಮುಟ್ಟಸಲಿಕ್ಕೆ ಬಹು ಪ್ರಯಾಸವಾಯಿತು; ಆದರೂ ಹ್ಯಾಗೂ ಯೆರ್ಗಲನ ಮನೆಗೆ ತಲಪಿತು. ಕಂಟಕವು ಆ ಮನೆಯವರಿಗೆ ತುದಿಗೆ ಬಂದಿತ್ತು. ಗೋಡೆಯೆಲ್ಲಾ ಹೋಗಿ, ಮಾಡು ಸಹ ಈಗಲೇ ಈಗಲೇ ಹೋಗುತ್ತದೆ ಎಂತ ಕಾಣುವ ಅವಸ್ಥೆ ಸುಮಾರು ಹೊತ್ತಿನಿಂದ ಇತ್ತು. ಮಾಡನ್ನು ಹತ್ತಿ, ಆಶಾಭ್ರಷ್ಟರಾಗಿ ದೊಡ್ಡ ದೊಡ್ಡ ಬೊಬ್ಬೆ ಹೊಯ್ಯು ತ್ತಿದ್ದರು. ಬರುವ ಡೋಣಿ ಕಂಡು, ಅದರ ದಾರಿ ಅಧಿಕ ಕಾಂಕ್ಷಿತರಾಗಿ ನೋಡುತ್ತಿದ್ದರು. ಡೋಣಿ ಮುಟ್ಟಿ, ಮನೆಯ ಕುಂಬೆಗೆ ತಾಗಲು ಆ ಪುರುಷನು ಹುಯಿಹುಯಿದು, ಧೈರ್ಯ ಕೊಟ್ಟನು. ಮೊದಲು ಯೆರ್ಗಲ್ ಬಂದು, ಡೋಣಿ ಹತ್ತಿದನು. ಭಯದಿಂದಲೂ ನೀರಿನ ಥಳಿಯಿಂದಲೂ ಅವ ನಿಗೆ ಜೋಮು ಹಿಡಿದು, ಅವನ ಮೈಯೆಲ್ಲಾ ಮರಕಟ್ಟಿ ಹೋದಂತಿತ್ತು. ಅವನ ಹಿಂದೆ ಮರೀಯಳೂ ಉಳಿಕೆಯವರೂ ಹತ್ತಿಕೊಂಡರು. ಎಲ್ಲವರು ಹತ್ತಿ ಕೊಂಡಿರಲು ಆ ಪುರುಷನು ಇನ್ನೊಮ್ಮೆ ಘಟ್ಟಿ ಯಾಗಿ ಹುಯಿಹುಯಿದು, ಗಳ ಹಾಕಿ ನೂಕುತ್ತಾ ಡೋಣಿಯನ್ನು ನಂಬರಮನೆಯ ಗುಡ್ಡೆಯ ಅಡಿಗೆ ಸಾಗಿಸುವವನಾದನು. ನೀರಿನಲ್ಲಿಯ ನೀರ್ಗಲ್ಲು ನೋಡಿ, ಹತ್ತಿದವರಿಗೆ ಬಹಳ ಭಯಾಸ್ಪದ ಕಂಡಿತು. ಆದರೆ ಅವನು ಬಹು ಚಮತ್ಕಾರವಾಗಿ ಡೋಣಿಯನ್ನು ಗಂಡಕ್ಕೆ ತಪ್ಪಿಸಿ ಸಾಗಿಸುತ್ತಾ

ಮುಟ್ಟಿಸಿದನು. ಮುಟ್ಟಿ ಇಳಿಯುವಾಗಲೇ ಮರೀಯ ಫಕ್ಕನೆ ಕೀ ಎಂತ ಕೂಗಿ, ಬೆರಳು ತೋರಿಸಿದಳು. ಅವಳು ತೋರಿಸಿದ ಜಾಗ ಒಂದೊಳ ದಾರೀ ಬದಿಯ ಬೇಲಿ; ಆದಕ್ಕೆ ಒಂದು ಹೆಣ ತಾಗಿ ಬಿದ್ದಿತ್ತು! ಹೋಗಿ ನೋಡಿದ ಜನರು ಅದು ಕೊನ್ರಾದನ ಹೆಣವೆಂತ ಗುರ್ತು ಹಿಡಿದರು. ಈ ಮಾತಿಗೆ ಮರೀಯಳು ಮುರ್ಛೆಗೊಂಡಳು. ಯೆರ್ಗಲ್ ತೀರಾ ಮನೋವೇಧಕ ಕೂಗು ಹಾಕಿ, ಹೆಣದ ಮೇಲೆ ಬಿದ್ದನು. ನಂಬರಮನೆಯವರೂ ಓಡಿ ಬಂದು, ಹೆಣವೆತ್ತಿ ಕೊಂಡು, ನಂಬರಮನೆಗೆ ಹೊತ್ತು ಕೊಂಡು ಬರಲಿಕ್ಕೆ ಕೈ ಕೊಟ್ಟರು. ಆ ಪುರುಷನು ತನ್ನಿಂದಾದಷ್ಟು ಆದರಿಸಿ, ಮರೀಯಳನ್ನೂ ಅವಳ ತಂದೆಯನ್ನೂ ದುಃಖಶಮನ ಮಾಡಲಿಕ್ಕೆ ನೋಡಿದನು; ಆದರೆ ಮುದುಕನು ಕೇಳದೆ, "ನನ್ನ ಮಗಾ! ನನ್ನ ಮಗಾ! ಯಾಕೆ ಹೀಗೆ ಹೋದಿ?" ಎಂತ ಕಠೋರವಾಗಿ ಕೂಗೋದೇ ಮಾಡಿ, ಎದೆ ಬಡಕೊಳ್ಳುತ್ತಿದ್ದನು. ಮತ್ತು ತುಸ ಹೊತ್ತಿನ ಮೇಲೆ ಫಕ್ಕನೆ ಕೇಕೇ ಹೊಡದು, ಪೈತ್ಯಗಾರನಂತೆ ನಕ್ಕನು. ಅವನ ಮುಖವೆಲ್ಲ ವಿಕಾರವಾಗಿ ಭಯಂಕರವಾಗಿ ಕಾಣುವಂಥಾದ್ದಾಯಿತು. "ಅಮ್ಮಮ್ಮಾ! ಪಿತ್ತವೇರಿ, ಹುಚ್ಚಾದ!" ಎಂತ ಹತ್ತರ ನಿಂತವರು ಬೆರಗಾಗಿ ಹೇಳಿದರು. ಕುಡಿಯೋ ವ್ಯಸನದಿಂದ ದುರ್ಬಲನಾಗಿದ್ದ ಮುದುಕನಿಗೆ ಕಂಟಕದ ಪೆಟ್ಟೂ, ಒಬ್ಬನೇ ಮಗ ಸತ್ತು, ಹೆಣವಾಗಿ ಶಿಕ್ಕಿದ ಪೆಟ್ಟೂ ತಡೆಯಲಿಕ್ಕೆ ಕೂಡದೆ, ಬುದ್ಧಿ ತಪ್ಪಿ, ಹುಚ್ಚು ಹಿಡಿಯಿತು. ಮೂರು ದಿನದ ಮೇಲೆ ಅವನೂ ಸತ್ತು ಹೋದನು. ಈ ಪ್ರಕಾರದಲ್ಲಿ ದೇವರು ಮಗನಿಗೂ ಅಪ್ಪನಿಗೂ ನ್ಯಾಯ ತೀರಿಸಿ, ಕರ್ಮಫಲ ಕೊಟ್ಟದಕ್ಕೆ ಆ ನಾಡಿನ ಜನರೆಲ್ಲರು ಬೆರಗಾಗಿ ಭ್ರಮೆಗೊಂಡರು.

ಆದರೆ ಅಂದಿನ ಆಪತ್ತಿಗೆ ಸಹಾಯಕನಾಗಿ ಬಂದ ಪುರುಷನು ಯಾರಾಗಿದ್ದಾನು? ಆ ನೆರೆಯಾಗಿ ಹೋಗಿ ಒಂದು ವರ್ಷದ ಮೇಲೆ ಆ ಠಾವಿಗೆ ಬಂದವರು ಯೆರ್ಗಲನ ಮನೆಯಿದ್ದ ಜಾಗದಲ್ಲೇ ಒಂದು ಹೊಸ ಮನೆ ಕಂಡು ಕೊಳ್ಳ ಬಹುದಿತ್ತು. ಖಲಾಶೀ ವೇಷದಲ್ಲಿ ಬಂದ ಆ ಪುರುಷನು ಅದನ್ನು ಕಟ್ಟಿದವನೇ. ಅವನ ಹೆಸರೇನಾಗಿದ್ದೀತು? ಆ ಕಡೆಯ ಗಡುವಿನ ಡೋಣಿಯ ಮುಂಗಡೆಯಲ್ಲಿ ಕೆತ್ತಿದ್ದ ಹೆಸರನ್ನು ಓದಿ ಕೊಂಡರೆ, ಗೊತ್ತಾಗುತ್ತದೆ. ಜೋರ್ಜ ಹೋಫರ್ ಎಂಬ ಅಂಬಿಗ ಹುಡುಗನು ಹತ್ತು ವರುಷ ಮೊದಲು ಬಡ ತಾಯಿ ತೀರಿ ಹೋದ ಮೇಲೆ ದೇಶಾಂತರಕ್ಕೆ ಹೊರಟು ಹೋದನಲ್ಲಾ! ಅವನು ಹಂಬುರ್ಗ್ ಎಂಬ ಬಂದರನಗರಕ್ಕೆ ಹೋಗಿ, ಅಲ್ಲಿ ದ್ವೀಪಾಂತರ ವ್ಯಾಪಾರದ ಹಡಗದಲ್ಲಿ ಚಾಕ್ರಿ ತೆಗದು ಕೊಂಡು, ಆ ಹತ್ತು ವರುಷಗಳಲ್ಲಿ ನಾಲ್ಕೈದಾವರ್ತಿ ಸಿಂಹಳದ್ವೀಪಕ್ಕೂ ಸಿಂಗಪುರಕ್ಕೂ ಹೋಗಿ ಬಂದು, ತಕ್ಕಷ್ಟು ಹಣ ಸಹ ಸಂಪಾದಿಸಿ ಕೊಂಡು, ತಂದೆತಾಯಿಗಳ ಗೋರಿಯನ್ನೂ ಊರನ್ನೂ ಇನ್ನೊನ್ಮೆ ನೋಡ ಬೇಕೆಂಬ ಕಾಂಕ್ಷೆಯನ್ನು ತಡೆಯಲಾರದೆ, ಚಾಕ್ರಿ ಬಿಟ್ಟು, ಊರಿನ ದಾರಿ ಹಿಡಿದು, ಆ ದಿವಸ ಮುಂಜಾನೆಗೆ ನಂಬರಮನೆಗೆ ಮುಟ್ಟಿ, ದೇವದೂತನೊಬ್ಬನೆಂಬಂತೆ ಆ ಆಪತ್ತಿನವರಿಗೆ ಸಹಾಯ ಒದಗಿಸಿ, ಧನಿಯನ್ನೂ ಧನಿಯ ಮಗಳನ್ನೂ ನೀರಿಗೆ ತಪ್ಪಿಸಿದನು. ಅಪ್ಪ ಸಹ ತೀರಿ ಹೋದ ಮೇಲೆ ಇನ್ನು ಯಾರೂ ಇಲ್ಲದ ಮರೀಯಳು ಜೋರ್ಜನಿಗೆ, ಅವನು ಅವಳಿಗೆ ಉತ್ತಮ ಪ್ರೀತಿಯಿಂದ ಹೊಂದಿ ಕೊಂಡು, ಒಬ್ಬರನ್ನೊಬ್ಬರು ಮದುವೆ ಮಾಡಿ ಕೊಂಡು, ಯೆರ್ಗಲನ ಆಸ್ತಿಗೆ ಯಾವತ್ತು ಬಾಧ್ಯರಾಗಿ, ಹಳೇ ಮನೆಯಿದ್ದ ಜಾಗದಲಿ ಹೊಸ ಮನೆ ಕಟ್ಟಿಸಿ ಕೊಂಡು, [illegible]

## ಉತ್ತರಗಳು.

(೧೩೨ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

31. ಜಯಿಸುವವನ್ಯಾವನೋ ಅವನಿಗೆ ನನ್ನ ಸಂಗಡ ನನ್ನ ಸಿಂಹಾಸನದಲ್ಲಿ ಕೂಡ್ರ ಕೊಡುವೆನು (ಪ್ರಕಟ. ೩ ೨೧.) ಎಂಬ ವಾಗ್ದಾನವು ಎಲ್ಲವುಗಳಿಗಿಂತ ದೊಡ್ಡದೂ ಆಶ್ಚರ್ಯದ್ದೂ ಆಗಿದೆ; ಆದರೆ ಆತನು (ಕರ್ತನು) ನಡು ಕಟ್ಟಿ ಕೊಂಡು, ಅವರನ್ನು ಊಟಕ್ಕೆ ಕೂಡ್ರಿಸಿ, ತಾನು ಬಂದು, ಅವರಿಗೆ ಸೇವಿಸುವನು (ಲೂಕ. ೧೨, ೩೭.) ಎಂಬ ವಾಗ್ದಾನವು ಅದಕ್ಕಿಂತಲೂ ದೊಡ್ಡದೂ ಆಶ್ಚರ್ಯದ್ದೂ.

32. ಯೋಬನ ಮಕ್ಕಳು (೭ ಮಂದಿ ಮಗಂದ್ಯರು, ೩ ಮಂದಿ ಮಗಳಂದ್ಯರು). ಯೋಬ. ೧, ೧೮. ೧೯.

33. ಮೆಲ್ಕೀಚೆದೆಕನು ಯಾಜಕನೂ ರಾಜನೂ ಆಗಿದ್ದದರಿಂದ ಯಾಜಕನೂ ರಾಜನೂ ಆಗಿರುವ ಕ್ರಿಸ್ತನಿಗೆ ಮುಂಗುರ್ತು ಆದನು.

34. ಯಾಕೋಬನದು: ಅವನ ಮೂಡಣ ಯಾತ್ರೆ ಹಾರಾನಿಗೆ; ಪಶ್ಚಿಮ ಯಾತ್ರೆ ಸ್ವದೇಶಕ್ಕೆ; ತೆಂಕಣ ಯಾತ್ರೆ ಐಗುಪ್ತಕ್ಕೆ; ಬಡಗ ಯಾತ್ರೆ ಕಾನಾನ್ ದೇಶದಲ್ಲಿದ್ದ ಪಿತೃವನಕ್ಕೆ.

35. ನೆಹೆಮಿಾಯನು. ನೆಹೆ. ೨ನೇ ಸಂಧಿ.

---

## ವಿವಿಧ ವರ್ತಮಾನಗಳು.

ದಕ್ಷಿಣ ಹಿಂದುಸ್ಥಾನದ ಬಿಶೊಪ ಸ್ಥಾನಕ್ಕೆ ನೇಮಕವಾದ, ಮೊದಲು ತಿನ್ನೆವೆಲ್ಲಿಯಲ್ಲಿ ಮಿಶ್ಯನೆರಿಗಳಾಗಿದ್ದ ಸಾರ್ಜೆಂಟ ಮತ್ತು ಕಾಲ್ಡವೆಲ್ ಎಂಬವರಿಬ್ಬರಿಗೆ ಕಲ್ಕತದಲ್ಲಿ ಆ ಪಟ್ಟದ ದೀಕ್ಷೆ ಕೊಡಲಾಯಿತು. ಈ ಇಬ್ಬರು ಬಿಶೊಪರ ಹೊರ್ತು ಲಾಹೋರಿಗೂ ಒಬ್ಬರು ಬಿಶೊಪರು ಈ ವರ್ಷದಲ್ಲೇ ನೇಮಕವಾದಾರು.

ಕಲ್ಕತದಲ್ಲಿ ಒಬ್ಬಳು ಜಮಿಾನದಾರಿಣಿ ಸ್ನಾನ ಹೊಂದಿದಳು; ಮುಸಲ್ಮಾನರಾಕೆಯಾಗಿದ್ದ ಈ ಬಾಯಿ ಯಾವ ಕ್ರೈಸ್ತ ಬೋಧಕನ ಮುಖವನ್ನೂ ನೋಡಿದ್ದಿಲ್ಲಾ. ಅವಳಿಗೆ ಒಬ್ಬ ವಿಲಾಯತಿಯವಳು ಹಿಂದುಸ್ಥಾನಿ ಹೊಸ ಒಡಂಬಡಿಕೆ ಪುಸ್ತಕ ಕೊಟ್ಟಿದ್ದಳು. ಅದನ್ನು ಓದೋಣಾದಿಂದ ಅವಳಿಗೆ ನಮ್ಮ ಧರ್ಮದ ಸತ್ಯತ್ವವು ತಿಳಿದು ಹತ್ತಲಾಗಿ, ಅವಳು ೫ ದಿವಸದ ದಾರಿ ನಡದು ಸ್ನಾನ ತೆಕ್ಕೊಳ್ಳುವದಕ್ಕೆ ಕಲ್ಕತಕ್ಕೆ ಬಂದು, ಬಪ್ಟಿಸ್ತ ಮಿಶ್ಯನ ಸಂಬಂಧದಿಂದ ಕ್ರೈಸ್ತ ಸಭೆಗೆ ಸೇರಿದಳು. ಅವಳು ತನ್ನ ಕುಟುಂಬದವರಲ್ಲಿ ೭ ಮಂದಿಯನ್ನು ಕರಕೊಂಡು ಬಂದಿದ್ದಳು.

ಸತಾರದಲ್ಲಿ ಒಬ್ಬ ಮುಸಲ್ಮಾನ ಕಾಜಿ ಸುಮಾರು ೫೫ ವರುಷ ಪ್ರಾಯುದವನು ಕ್ರೈಸ್ತನಾದನು. ಕ್ರೈಸ್ತ ಕೀರ್ತನೆಗಳನ್ನು ಕೇಳುವದರಿಂದ ಅವನೊಳಗೆ ವಿಶ್ವಾಸ ಹುಟ್ಟಿತು; ಸ್ವಜಾತಿಯವರು ಅವನನ್ನು ಪುನಹಾ ತಿರಿಗಿಸುವದಕ್ಕೆ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಗಲಾಗಿ ಅವನು ಏಪ್ರಿಲ್ ೭ರಲ್ಲಿ ಬಹಿರಂಗವಾಗಿ ಅಮೇರಿಕನ ಮಿಶ್ಯನ ದೇವಾಲಯದಲ್ಲಿ ಸ್ನಾನ ತಕ್ಕೊಂಡನು.

ಅಹಮ್ಮದ ನಗರದಲ್ಲಿ ಅಪೂರ್ವ ಮತ್ತು ಅಶ್ರುತವಾದ ಪ್ರೇತಸಂಸ್ಕಾರ ನಡಿಯುವಂಥಾದ್ದಾಯಿತು. ಗೊಸ್ಪೆಲ್ ಪ್ರೊಪೆಗೇಶನ್ ಸೊಸೈತಿ ಎಂಬ ಮಿಶ್ಯನಿನಲ್ಲಿ ಒಬ್ಬ ಕ್ರೈಸ್ತನು ಮರಣ ಪಟ್ಟಾಗ್ಯೆ ಆ ಮಿಶ್ಯನಿನ ಬಾರ್ಕರ್ ಎಂಬ ಬೋಧಕರು ರಾತ್ರಿ ಭೋಜನದ ವಿಧಾನ ಮಾಡಿ, ಅವನ ಶವಕ್ಕೂ ತರುವಾಯ ತನ್ನ ಸಭೆಯವರಿಗೂ ಕೊಟ್ಟರು.

ಇಂಥಾ ಅಶಾಸ್ತ್ರ ಆಚಾರ ಕಥೋಲಿಕರಲ್ಲಾದರೂ ನೋಡಿದ್ದಿಲ್ಲಾ; ಇನ್ನು ಮುಂದೆ ಶವದ ಪೆಟ್ಟಿಗೆಯಲ್ಲಿ ಒಂದು ರೊಟ್ಟಿ ಒಂದು ಶೀಸೆ ದ್ರಾಕ್ಷೇ ರಸ ಇಡುವ ಪದ್ಧತಿ ಉಂಟಾಗುತ್ತದೋ ಏನೋ? ಅದು ಉಂಟಾದ ಮೇಲೆ ಪುನರುತ್ಥಾನದ ದಿವಸ ಪರ್ಯಂತರ ಶವಕ್ಕೆ ಪೋಷಣೆ ಆಗುವದಕ್ಕೆ ಅವನ ಹೆಸರಿನಲ್ಲಿ ಶ್ರಾದ್ಧ ಮಾಡುವ ರೀತಿಯೂ ಕದಾಚಿತ್ ಉಂಟಾದರೆ, ಆಶ್ಚರ್ಯ ಪಡ ಬಾರದು. ನಮ್ಮ ಕರ್ತನು ನೇಮಿಸಿದಂಥಾ ರಾತ್ರಿಭೋಜನವನ್ನು ಈ ರೀತಿ ಭ್ರಷ್ಟ ಮಾಡುವದು ಅಗದಿ ಕೆಟ್ಟದ್ದು. ಆದರೂ ತಾವು ಮಾತ್ರ ಅಪೊಸ್ತಲೀಯ ಪರಂಪರೆಯವರು ಎಂದಂದು ಕೊಂಡು, ಕ್ರಿಸ್ತನ ಬೇರೆ ಬಹುತೇಕ ಸೇವಕರಿಗೆ ರಾತ್ರಿಭೋಜನ ಕೊಡುವ ಅಧಿಕಾರವಿಲ್ಲವೆಂದು ಹೇಳಿ, ಅವರನ್ನು ತಮ್ಮ ದೇವಾಲಯದಲ್ಲಿ ಪ್ರಸಂಗಿಸುವದಕ್ಕೂ ಸಮ್ಮತಿಸದ "ಹೈಚರ್ಚ್" ಪಕ್ಷದವರೇ ಈ ಕೃತ್ಯ ಮಾಡಿದವರು.

ಸರ್ ಫಿಲಿಪ್ ವುಡ್‌ಹೌಸ್ ಧೊರೆಗಳು ಮುಂಬಾಯಿ ಸಂಸ್ಥಾನದ ರಾಜ್ಯಭಾರವನ್ನು ಮುಗಿಸಿ ವಿಲಾಯತಿಗೆ ಹೋಗುತ್ತಾರಾದ್ದರಿಂದ ಅವರ ಬದಲಿಗೆ ಸರ್ ರಿಚಾರ್ಡ ಟೆಂಪ್ಲ ಧೊರೆಗಳು ಆ ಸ್ಥಾನಕ್ಕೆ ಬಂದಿದ್ದಾರೆ.

ಬಾಗಲಪುರ ಪ್ರಾಂತದಲ್ಲಿ ಒಂದು ಭಂಗಾರದ ಖನಿ ಶಿಕ್ಕಿಯದೆ; ಸರಕಾರದವರು ಪೊಲೀಸ ಪಹರೆ ಇಟ್ಟಿದ್ದಾರೆ. ಆ ಭೂಮಿಯ ಒಡೆಯನಿಗೆ ೫೦ ಲಕ್ಷ ರೂಪಾಯಿ ಕೊಡುತ್ತೇವೆಂದರೆ ಅವನು ಶಿಕ್ಕುವ ನಫೆಯಲ್ಲಿ ಅರ್ಧಾಂಶ ತನಗೆ ಕೊಡ ಬೇಕೆನ್ನುತ್ತಾನೆ. ಈ ಮಾತಿಗೆ ಸರಕಾರದವರು ಒಪ್ಪುವದಿಲ್ಲಾ.

ಫೆಬ್ರುವರಿ ತಿಂಗಳಲ್ಲಿ ಬೆಳಗಾವಿನಲ್ಲಿ ಬಾಪು ಎಂಬ ಒಬ್ಬ ಲಿಂಗಾಯತನಿಗೂ ಅವನ ಹೆಂಡತಿ ಇಬ್ಬರು ಮಕ್ಕಳು ಬೇರೆ ಇಬ್ಬರು ಹುಡುಗರಿಗೆ ಸಹ ಹೀಗೆ ಆರು ಮಂದಿಗೆ ಅಲ್ಲಿಯ ಬೋಧಕರಾದ ಮಹಾಂತಪ್ಪನವರು ಸ್ನಾನ ಕೊಟ್ಟರು.

ಅಮೇರಿಕದ ಮಧುರೆ ಮಿಶ್ಯನು ೧೮೩೪ರಲ್ಲು ಸ್ಥಾಪಿತವಾದಂಥಾದ್ದು; ಅಲ್ಲಿ ೧೦,೩೭೭ ಕ್ರೈಸ್ತರಿದ್ದಾರೆ; ಯುರೋಪಿಯನ್ ಮಿಶ್ಯನೆರಿಗಳು ೨೪; ದೇಶೀಯ ಬೋಧಕರು ೧೭; ೧೧೫ ಶಾಲೆಗಳಲ್ಲಿ ೨,೧೮೦ ಹುಡುಗರು ಕಲಿಯುತ್ತಾರೆ.

ಮದ್ರಾಸಿನಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹೋದ ೨,೩೬೭ ವಿದ್ಯಾರ್ಥಿಗಳಲ್ಲಿ ೧,೨೫೦ ಪರೀಕ್ಷೆಯಲ್ಲಿ ಉತ್ತರಿಸಿದರು; ಅವರಲ್ಲಿ ೩೭೮ ಮಂದಿ ಮಿಶ್ಯನ ಶಾಲೆಗಳಲ್ಲಿ ಕಲಿತವರು.

ತಿರುವಾಂಕೋಡಿನ ಎರಡನೆ ಯುವರಾಜರಾದ ಮಹಾರಾಜಶ್ರೀ ಮಾರ್ತಂಡ ವರ್ಮ ಅವರುಗಳು ದೇಹವಿಯೋಗವಾದರು. ಅವರು ಒಳ್ಳೇ ವ್ಯುತ್ಪನ್ನರೂ ಧರ್ಮಿಷ್ಟರೂ ಆಗಿದ್ದರು.

ಪಾಟನಾ ಮತ್ತು ಬಂಕಿಪುರ ಈ ಪ್ರಾಂತ್ಯಗಳಲ್ಲಿ ವಾಂತಿಭೇದಿಯ ಉಪದ್ರವ ಬಹಳ ಪ್ರಬಲವಾಗಿರುತ್ತದೆ.

ಮುಂಬಾಯಿಯ ರೇವಿನಲ್ಲಿ ಯಾವ ಖಲಾಶಿ ಜನರಾದರೂ ಸಮುದ್ರದಲ್ಲಿ ಹಾರಿ ಸ್ನಾನ ಮಾಡ ಬಾರದು, ಈಜಾಡ ಬಾರದು ಎಂಬದಾಗಿ ಬಂದರಿನ ಅಧಿಕಾರಿಗಳು ಅಪ್ಪಣೆ ಪ್ರಸಿದ್ಧಿ ಮಾಡಿದ್ದಾರೆ. ಹಾಗೆ ಸ್ನಾನ ಮಾಡಿದವರಲ್ಲಿ ಕೆಲವರನ್ನು ಮೀನುಗಳು ಹಿಡಿದು ತಿಂದದರಿಂದ ಈ ಅಪ್ಪಣೆ ಕೊಡಲಿಕ್ಕೆ ಕಾರಣವಾಯಿತು.

ಬೆಳಗಾವಿನಲ್ಲಿ ಬಹಳ ಮಳೆ ಬಿತ್ತು; ಆದರೂ ದುಷ್ಕಾಲದ ಧಾವತಿ ಯಥಾ ಪ್ರಕಾರವೇ.

ಸಿಂಹಳ ದ್ವೀಪದ ಇಂಗ್ಲಿಷ ಮತ್ತು ಪ್ರೆಸ್ಬಿಟೇರಿಯನ್ ಸಭೆಗಳಿಗೆ ಸರಕಾರದಿಂದ ದ್ರವ್ಯದ ಸಹಾಯ ಕೊಡಲೇ ಬಾರದು ಎಂಬದಾಗಿ ಸದ್ಯಾ ಪಾರ್ಲಿಮೆಂಟಿನಲ್ಲಿ ವಿಚಾರ ಹೊರಟಿತು; ಆದರೆ ಸರಕಾರದ ಆಗ್ರಹದಿಂದಲೂ ಹೌಸ್ ಒಫ್ ಕೊಮನ್ಸ ಮಂತ್ರಿಸಭೆಯವರಲ್ಲಿ ಬಹು ಮಂದಿಯ ಅಭಿಪ್ರಾಯದಿಂದಲೂ ಅದು ಸಿದ್ಧಿಗೆ ಬರಲಿಲ್ಲಾ.

ರುಸ್ಯ ಮಹಾರಾಜನು ತುರ್ಕರ ಸಂಗಡ ಯುದ್ಧ ಮಾಡುತ್ತೇನೆಂದು ಪ್ರಕಟ ಮಾಡಿ, ಕಪ್ಪು ಸಮುದ್ರದ ಉಭಯ ಪಾರ್ಶ್ವಗಳಿಂದ ಸೈನ್ಯಗಳನ್ನು ತುರ್ಕಿ ದೇಶಕ್ಕೆ ಕಳುಹಿಸಿದ್ದಾನೆ. ಆ ಸೈನ್ಯದಲ್ಲಿ ೪ ಲಕ್ಷ ಶಿಪಾಯರಿದ್ದಾರೆ. ತುರ್ಕಿ ದಳವು

ಬುಲ್ಗಾರ್ಯದಲ್ಲಿ ಕೂಡಿ ಬಂದು, ರುಸ್ಯರು ದೆನ್ಯುಬ್ ನದಿಯನ್ನು ದಾಟಿ ಬರುವಲ್ಲಿ ಅವರನ್ನು ಎದುರಿಸುವದಕ್ಕೆ ಸಿದ್ಧವಾಗಿದೆ. ಒಂದು ವೇಳೆ ಬುಲ್ಗಾರ್ಯವೇ ಯುದ್ಧದ ಮುಖ್ಯ ಸ್ಥಳವಾಗಲಿಕ್ಕೆ ಸಾಕು. ರುಸ್ಯರ ದಳವೊಂದು ತುರ್ಕಿ ಅರ್ಮೇನ್ಯಕ್ಕೆ ಸಮೀಪಿಸುತ್ತಾ ಅದೆ. ಬಯಾಜಿದ್ ಎಂಬ ಕೋಟೆಯಲ್ಲಿದ್ದ ೧,೭೦೦ ತುರ್ಕ ಶಿಪಾಯರು ಹಿಮ್ಮೆಟ್ಟಿ ಹೋದರು. ಐಗುಪ್ತದ ಖೆದೀವನೂ ತುರ್ಕರ ಸಹಾಯಕ್ಕೆ ಸೈನ್ಯ ಕಳುಹಿಸಿದ್ಧಾನೆ.

ಐಗುಪ್ತದ ಸರಕಾರದವರು ತಮ್ಮ ರಾಜ್ಯದಲ್ಲಿರುವ ಪ್ರೊತೆಸ್ತಂತ ಮಿಶ್ಯನುಗಳಿಗೆ ವೈರತ್ವ ಮಾಡಲಿಕ್ಕೆ ಆರಂಭಿಸಿದ್ಧಾರೆ. ಈ ವಿಷಯದಲ್ಲಿ ಇವೆಂಜೆಲಿಕಲ್ ಅಲ್ಯೆಯನ್ಸ ಸಭೆಯವರು ಬ್ರಿತಿಷ ಸರಕಾರದ ಮುಖಾಂತರ ಬರಕೊಂಡ ವಿನಂತಿಯಿಂದ ವಿಶೇಷ ಪ್ರಯೋಜನ ಬರಲಿಲ್ಲ.

ಕೊನಸ್ತಂತೀನೊಪೊಲಿಯಲ್ಲಿರುವ ಒಬ್ಬ ಮಿಶ್ಯನೆರಿ ಕುರ್ದಿಸ್ಥಾನದವನಾದ ಒಬ್ಬನನ್ನು ಕ್ರೈಸ್ತ ಸಭೆಗೆ ಶೇರಿಸಿದರು; ಆ ಜನರಲ್ಲಿ ಇವನು ಮೊದಲನೇ ಕ್ರೈಸ್ತನು.

ಸುರಿಯ ದೇಶದ ಬೇರುತ್ ಪಟ್ಣದಿಂದ ಸುಮಾರು ಎರಡು ಹರದಾರಿ ದೂರವಿರುವ ಒಂದು ಊರಿನವರೆಲ್ಲರೂ ಐನೂರು ಮಂದಿ ಮರೊನಿತರೆಂಬ ಮತಭೇದದವರಾಗಿದ್ದವರು ಪ್ರೊತೆಸ್ತಂತ ಸಭೆಯನ್ನು ಶೇರಿದರು; ಅವರಿಗಾಗಿ ಒಂದು ದೇವಾಲಯ ಶಾಲೆ ಸಹ ಕಟ್ಟಿಸಿ, ಇಬ್ಬರು ಉಪದೇಶಕರನ್ನು ಅಲ್ಲಿ ಇಟ್ಟಿದ್ಧಾರೆ; ಸುರಿಯನ್ ಮಿಶ್ಯನ ಸಂಘದವರು ಅಲ್ಲಿ ದೇವರ ರಾಜ್ಯದ ಕಾರ್ಯ ನಡಿಸುತ್ತಾರೆ.

ಪಾರ್ಸಿಸ್ಥಾನದ ಜಲಫಾ ಎಂಬಲ್ಲಿರುವ ಬ್ರೂಸ್ ಎಂಬ ಮಿಶ್ಯನೆರಿಗೆ ರೋಮಾಯರೂ ಅರ್ಮೇನಿಯರೂ ಬಹಳ ತರದಲ್ಲಿ ಉಪದ್ರವ ಕೊಡುತ್ತಾರಂತೆ; ಅವರ ಸಭೆಯವರಲ್ಲಿ ಕೆಲವರನ್ನು ಅವರು ಬೀದಿಗಳಲ್ಲಿ ಹಾಕಿ ಹೊಡದರು.

ಅಮೇರಿಕದ ಮೊಂಟ್ರೀಲ್ ಎಂಬಲ್ಲಿ ೨೨೫ ಮಂದಿ ಕಥೋಲಿಕರು ತಾವು ರೋಮನ್ ಸಭೆಯನ್ನು ಬಿಟ್ಟಿದ್ಧೇವೆಂಬದಾಗಿ ಬರದು ಕ್ರಿಸ್ತಮಿಸ್ ಹಬ್ಬದ ಇನಾಮಾಗಿ ಅಲ್ಲಿಯ ಬಿಶೊಪನಿಗೆ ಕಳುಹಿಸಿದರು. ಅಂದಿನಿಂದ ೧೦೮ ಮಂದಿ ಅವರಂತೆ ಮಾಡಿದವರಾದರು; ಇವರಲ್ಲಿ ಮೂವರು ಗಟ್ಟಿಗರಾದ ಪ್ರೀಸ್ತರು. ಈ ಶುಭಕಾರ್ಯವು ಮೊದಲು ಕಥೋಲಿಕನಾಗಿದ್ದು ತರುವಾಯ ಸುವಾರ್ತಾಪಕ್ಷಕ್ಕೆ ಶೇರಿದ ಚೆನಿಕ್ವಿ ಎಂಬ ಪಾದರಿಯ ಮುಖಾಂತರ ನಡದದು.

ಯುರೋಪ ಖಂಡದಲ್ಲಿ ೫,೦೦೦,೦೦೦ ಯೆಹೂದ್ಯರಿದ್ಧಾರೆ; ಅವರಿಗೆ ಕ್ರೈಸ್ತಧರ್ಮ ಪ್ರಸಂಗಿಸುವದಕ್ಕೆ ೨೨೦ ಮಿಶ್ಯನೆರಿಗಳು ಕಷ್ಟ ಮಾಡುತ್ತಾರೆ; ಅಂದರೆ ೨೨,೭೨೭ ಮಂದಿಗೆ ಒಬ್ಬ ಮಿಶ್ಯನೆರಿ ಇದ್ದ ಹಾಗಾಯಿತು. ಆದರೆ ಹಿಂದುಸ್ಥಾನದಲ್ಲಿ ೫ ಲಕ್ಷ ಮನುಷ್ಯರಿಗೆ ಒಬ್ಬ ಮಿಶ್ಯನೆರಿ ಇದ್ಧಾನೆ.

ಕಳದ ವರುಷದಲ್ಲಿ ೨೦೭೯ ಜನರು ಅಂದರೆ ೫೪ ಯೆಹೂದ್ಯರೂ, ೧೬೦೨ ರೋಮನ್ ಕಥೋಲಿಕರೂ, ೪೨೩ ಇತರ ಕ್ರೈಸ್ತ ಸಭಾಶಾಖೆಗಳವರೂ ಪ್ರುಸ್ಯ ರಾಜಾಶ್ರಿತ ಪ್ರೊತೆಸ್ತಾಂತ ಸಭೆಯನ್ನು ಶೇರಿದರಂತೆ; ಮತ್ತು ೧೧೭೬ ಜನರು ಆ ಸಭೆಯನ್ನು ತ್ಯಜಿಸಿ ಬಿಟ್ಟರಂತೆ. ಬಿಟ್ಟು ಬಿಟ್ಟವರಲ್ಲಿ ೧೯ ಜನ ಯೆಹೂದ್ಯ ಮತವನ್ನು, ೧೧೨ ರೋಮನ್ ಸಭೆಯನ್ನು, ೧೦೪೫ ಇತರ ಕ್ರೈಸ್ತ ಸಭಾಶಾಖೆಗಳಲ್ಲಿ ಶೇರಿದರಂತೆ.

ಈ ಭೂಮಿಯಲ್ಲಿರುವ ಜನಸಂಖ್ಯೆಯ ವಿವರ:

| | |
|---|---|
| ಕ್ರಿಸ್ತೀಯರು-ಪ್ರೊತೆಸ್ತಾಂತರು | ೭೬,೦೦೦,೦೦೦ |
| ರೋಮನ ಕಥೋಲಿಕರು | ೧೭೦,೦೦೦,೦೦೦ |
| ಗ್ರೇಕ ಸಭೆಯವರು | ೮೯,೦೦೦,೦೦೦ |
| ಯೆಹೂದ್ಯರು | ೫,೦೦೦,೦೦೦ |
| ಮುಸಲ್ಮಾನರು | ೧೬೦,೦೦೦.೦೦೦ |
| ಮೂರ್ತಿಪೂಜಕರು | ೨೦೦,೦೦೦,೦೦೦ |
| ಆಸ್ಯದ ಬೌದ್ಧರು | ೬೦೦,೦೦೦,೦೦೦ |

ಮನುಷ್ಯರ ಸರಾಸರಿ ಆಯುಷ್ಯ ೩೩ವರೆ ವರ್ಷ; ನಾಲ್ಕರಲ್ಲಿ ಒಂದಂಶ ೭ ವರುಷ ಪ್ರಾಯವಾಗುವಷ್ಟರಲ್ಲಿ, ಅರ್ಧಾಂಶವು ೧೭ ವರುಷ

ಪ್ರಾಯವಾಗುವಷ್ಟರಲ್ಲಿ ಮರಣ ಪಡುವರು. ನೂರರಲ್ಲಿ ೬ ಮಂದಿ ಮಾತ್ರವೇ ೬೦ರ ಮೇಲೆ ಬದುಕುವರು, ಆದರೆ ೧೦೦೦ರಲ್ಲಿ ಒಬ್ಬನೇ ನೂರು ವರ್ಷಕ್ಕೆ ಮುಟ್ಟುತ್ತಾನೆ; ೮೦ ವರ್ಷಕ್ಕೆ ಬರುವವನು ೫೦೦ರಲ್ಲಿ ಒಬ್ಬ. ಒಂದರ್ಬುದ ಬದುಕುವ ಮನುಷ್ಯರಲ್ಲಿ ಪ್ರತಿ ವರ್ಷಕ್ಕೆ ೩೨ ಕೋಟಿ, ದಿವಸ ಒಂದಕ್ಕೆ ೯೧,೦೦೦, ತಾಸು ಒಂದಕ್ಕೆ ೩,೭೩೦, ನಿಮಿಷಕ್ಕೆ ೬೦, ಸೆಕುಂದಕ್ಕೆ ೧, ಹೀಗೆ ಸಾಯುತ್ತಾರೆ.

ಫೆಬ್ರುವರಿ ತಿಂಗಳಿನ ೧ನೇ ತಾರೀಖಿಗೆ ಚೀನ ದೇಶದ ಮಹಾರಾಜನ ಸರಕಾರವು ಒಂದು ಪರಮತದ್ವೇಷನಿವಾರಣಾರ್ಥಕ ರಾಜಾಜ್ಞೆಯನ್ನು ಹೊರಡಿಸಲಾಯಿತಂತೆ. ಈ ರಾಜಾಜ್ಞೆಯ ಬಲದಿಂದ ಆ ಸಾಮ್ರಾಜ್ಯದಲ್ಲಿ ಯಾರಾದರೂ ತನಗೆ ಅನುಮತ್ಯವೆಂತ ಕಂಡ ಮತವನ್ನು ಧರ್ಮಾರ್ಥ ಹಿಂಸೆಗೆ ಗುರಿಯಾಗದೆ, ರಾಜಾಶ್ರಯವನ್ನು ಕಳಕೊಳ್ಳದೆ, ಶೇರಿ ಅಭ್ಯಂತರವಿಲ್ಲದೆ ಅನುಸರಿಸಬಹುದು.

ಪಾರ್ಸಿಸ್ಥಾನದ ಶ್ಯಾ (ಮಹಾರಾಜ) ಪಾಪಸ್ವಾಮಿಗೆ ಇತ್ತಲಾಗೆ ಬರದು ಮುಟ್ಟಿಸಿದ ಒಂದು ಪತ್ರಿಕೆಯಲ್ಲಿ ಅವನು ಇವನಿಗೆ “ಮೆಸ್ಸೀಯಾ” ಎಂಬ ನಾಮಧೇಯವಿಟ್ಟು ಸಂಬೋಧಿಸಿದ್ದನ್ನು ಪಾಪನು ನೋಡಿ, ಮಹಾ ಸಂತೋಷ ಪಟ್ಟು, ತನ್ನ ಸಂತೋಷದ ಗುರ್ತಿಗೆ ಶ್ಯಾನನ ಅರಮನೆಗೆ ಒಬ್ಬ ರಾಯಭಾರಿಯನ್ನು ಕಳುಹಿಸಿದನಂತೆ.

೧೮೬೯-೧೮೭೦ನೇ ಇಸ್ವಿಯಲ್ಲಿ ರೋಮಪಟ್ಣದಲ್ಲಿ ನೆರೆದಿದ್ದ ಮಹಾ ಸಭಾಸಂಘವನ್ನು ಪಾಪನು ಬರುವ ಹಿಮಕಾಲಕ್ಕೆ ತಿರಿಗಿ ಕರದು ನೆರಿಸ ಬೇಕೆಂದಿರುತ್ತಾನಂತೆ. ಸುಮಾರು ೨೫ ವರುಷಗಳ ಹಿಂದೆ ಮರೀಯಳು ಪಾಪರಹಿತಳಾಗಿ ಗರ್ಭಗತಳಾಗಿ ಜನಿಸಿದಾಕೆ ಎಂಬುವ ನೂತನ ಜ್ಞಾನವನ್ನು ಸೃಷ್ಟಿಸಿ, ಒಂದು ಹೊಸ ವಿಶ್ವಾಸಾರ್ಥ ಸೂತ್ರವನ್ನು ಸ್ಥಾಪಿಸಿದನು. ಬರುವ ಸಂಘದಲ್ಲಿ ಬಾಳೇಹಣ್ಣಿಗೆ ಸಕ್ಕರೆ ಕೂಡಿಸಿ ಕೊಡುವವನಾಗಿ ಪಾಪನು ಇನ್ನೊಂದು ವಿಶ್ವಾಸಾರ್ಥ ಸೂತ್ರವಾಗಿ ಏರ್ಪಡಿಸ ಬೇಕೆಂದಿರುವದೇನಂದರೆ: “ಯೇಸು ಹ್ಯಾಗೋ ಹಾಗೆಯೇ ಮರೀಯಳೂ ಯಥಾದೇಹಿಯಾಗಿ, ಸಾಂಗೋಪಾಂಗವಾಗಿ ಸ್ವರ್ಗಾರೋಹಣ ಪಟ್ಟಳು. ಆಕೆಯನ್ನು ಹೆತ್ತ ತಾಯಿ ಅನ್ನಳೂ ಪಾಪರಹಿತಳಾಗಿದ್ದಳು” ಎಂಬದೇ. ಮರೀಯಳು ಪಾಪರಹಿತಳಾಗಿ ಜನಿಸಿದಾಕೆಯಾಗಿದ್ದರೆ, ಆಕೆಯ ತಾಯಿ ಸಹ ಪಾಪರಹಿತಳಾಗಿದ್ದಿರ ಬೇಕು ಎಂಬ ಮಾತಿಗೆ ಸಂಶಯವಿಲ್ಲಾ. ಆದರೆ ಹೀಗಿದ್ದ ಪಕ್ಷಕ್ಕೆ ಅನ್ನಳ ತಾಯಿಯೂ ತಾಯಿಯ ತಾಯಿಯೂ ಮತ್ತು ಕಡೆಗೆ ನೋಹನ ಹೆಂಡತಿಯೂ ಹವ್ವಳೂ ಪಾಪರಹಿತರಾಗಿದ್ದರೆಂಬ ಮಾತಿಗೆ ಅಡ್ಡಿಯೇನು?

ಅತಿಸಾರಕ್ಕೆ ಕಾಯಿಪಲ್ಯ ಇದ್ದಲಿ (vegetable charcoal) ಎಂಬದು ಒಳ್ಳೇ ಚಿಕಿತ್ಸೆಯಾಗಿದಂತೆ. ಅದು ಹಾಕಿರುವ ಭರಣಿಗಳಿಗೆ ಹಚ್ಚಿರುವ ಪಟ್ಟಿಯಲ್ಲಿ ಅದರ ಪ್ರಯೋಗವಿಧಿಯನ್ನು ನೋಡಿಕೊಳ್ಳ ಬಹುದು.

ವಾತರೋಗವೆಂತಲೂ ಹರಿವಾತವೆಂತಲೂ ಕಸವೆಂತಲೂ (rheumatism, neuralgia) ಎನ್ನಿಸಿಕೊಳ್ಳುವ ರೋಗಕ್ಕೆ ನೀಲ ಕನ್ನಡಿಯನ್ನು ದಾಟಿದ ಸೂರ್ಯಕಿರಣಗಳು ಒಳ್ಳೇ ಚಿಕಿತ್ಸೆಯಾಗಿದ್ಧಾವಂತೆ. ಆ ರೋಗವು ಹಿಡುಕೊಂಡ ಅಂಗಕ್ಕೆ ನೀಲ ಕನ್ನಡಿಯ ದ್ವಾರವಾಗಿ ಸೂರ್ಯಕಿರಣಗಳನ್ನು ಚನ್ನಾಗಿ ಬೀಳಿಸಿ ತಾಗಿಸಿ ಕೊಳ್ಳ ಬೇಕಷ್ಟೇ.

ದಕ್ಷಿಣ ಮಹಾರಾಷ್ಟ್ರ ಜಿಲ್ಲೆಯಲ್ಲೂ ಬರಬಿದ್ದ ಬಾಧೆಯೂ ರೋಗವೂ ಪ್ರಬಲವಾಗಿದೆ. ಅಂಥಾ ರಾಜ್ಯಕ್ಷೋಭೆಗೆ ಗುರಿಯಾದ ಸಹಸಭೆಯವರನ್ನೂ ಆ ಸಭೆಗಳನ್ನು ಹೊಸಬರಾಗಿ ಶೇರಿದವರನ್ನೂ ಅಷ್ಟು ಕ್ಷೋಭೆಯಿಲ್ಲದ ಸಭೆಯವರು ಪ್ರೀತಿಭಾವಪೂರ್ವಕ ಜ್ಞಾಪಕ ಮಾಡಿ ಕೊಳ್ಳ ತಕ್ಕದಾಗಿದೆ. ಅಲ್ಲಿಯ ಸಭೆಗಳನ್ನು ಇತ್ತಲಾಗೆ ಶೇರಿದವರು ಸ್ವಲ್ಪ ಕಡಿಮೆ ಅರ್ಧಸಾವಿರ ಜನ. ಗುಳೇದಗುಡ್ಡ ಸಭೆಯ ಪಟ್ಟಿ ಒಂದರಲ್ಲಿ ೨೪೦ ಜನ ಹೊಸಬರು ದಾಖಲಾಗಿದ್ದಾರೆ.

Printed at the Basel Mission Press, Mangalore.

# ಕ್ರೈಸ್ತಸಭಾಪತ್ರ

ಪುಸ್ತಕ ೧೦. JULY 1877. ಅಂಕೆ ೧.

**ಅಡಕವು:** ಸತ್‌ಕ್ರೈಸ್ತರ ದಿಕ್ಕು—ಕುಚೋದ್ಯಗಾರನೊಬ್ಬನ ಅವಸಾನವು—ಮುದಿ ಮೊಖಲ್—ಹೊಸ ಪ್ರಶ್ನೆಗಳು—ವಿವಿಧ ವರ್ತಮಾನಗಳು.

## ಸತ್‌ಕ್ರೈಸ್ತರ ದಿಕ್ಕು.

ನಿಮ್ಮನ್ನು ದಿಕ್ಕಿಲ್ಲದವರಾಗಿ ಬಿಡೆನು; ನಿಮ್ಮ ಬಳಿಗೆ ಬರುತ್ತೇನೆ.

ಯೋಹಾ. ೧೪, ೧೮.

ಕ್ರಿಸ್ತನು ಇಲ್ಲದ ಮನುಷ್ಯನು, ಯಾರಾದರೂ ಸೈ, ದಿಕ್ಕೇ ಇಲ್ಲದವನಾಗಿದ್ಧಾನೆ. ಇಂದಿಗೆ ಬಹು ಸೋಪಾಯಸ್ತನೆಂತಲೂ ಮಹದಾಧಾರಿಯೆಂತಲೂ ಕಾಣುವವನಾದರೂ, ನಾಳೆಗೆ ದಿಕ್ಕು ಕಾಣದ ನಿರಾಧಾರಿಯಾಗಿ ಹೋಗುತ್ತಾನೆ. ಪ್ರತಿ ದಿನ ನಮ್ಮಾಯುಷ್ಯ ತ್ರಾಣ ಮೊದಲಾದ್ದು ಒಂದಿಷ್ಟು ಕಳದು, ಕ್ಷೀಣವಾಗುತ್ತಾ ಬರುತ್ತದೆ. ನಿನ್ನೆ ನಮ್ಮ ಸಂಗಡಿಗರೂ ಸ್ನೇಹಿತರೂ ಆಗಿದ್ದವರು ಇಂದಿಗೆ ಎಲ್ಲಿದ್ಧಾರೆ? ಒಬ್ಬನು ಕಾಲವಶನಾಗಿ ಹೋದಾ; ಇನ್ನೊಬ್ಬನು ದೇಶಾಂತರಕ್ಕೆ ಹೊರಟು ಹೋದನು; ಮತ್ತೊಬ್ಬನ ಸ್ನೇಹ ಭಂಗವಾಗಿ ದ್ವೇಷವಾಗಿ ಹೋಯಿತು. ಹ್ಯಾಗೆಂತ ಕಂಡು ಬರುವ ಮೊದಲು ದಿಕ್ಕು ಕಾಣದೆ ಹೋಗುವ ಸಂಗತಿ ಆಗುತ್ತಿರುತ್ತದೆ. ಹೊನ್ನೂ ಹೆಣ್ಣೂ ಮಣ್ಣೂ ಯಥೇಷ್ಟ ಘಳಿಸಿ ಕೊಂಡು, ಮಹಾ ಘನ ರಾಜ್ಯೋದ್ಯೋಗ ಸಹ ಮಾಡಿ ಕೊಂಡು, ಬಹು ಮಾನ ಪಟ್ಟು ಇರುವವನಿಗಾದರೂ ಏನು ಪ್ರಾಪ್ತಿ? ಎಂಥಾ ದಿಕ್ಕು? ಈ ಅಸ್ಥಿರ ಲೋಕದಲ್ಲಿ ಶಾಶ್ವತ ಪದವಿ, ನಿತ್ಯ ಸುಖ ಎಲ್ಲಿ? ಸ್ಥಿರ ಸ್ಥಿತಿ ಯಾರಿಗೆ? ಯಾರಿಗೂ ಇಲ್ಲಾ! ದೊಡ್ಡ ಸಂಸಾರದಲ್ಲ್ಯಾದರೂ ತಾಪತ್ರಯ ತಪ್ಪದು. ಶೋಕ ಬೆನ್ನಟ್ಟದ ಭೋಗವೂ ದುಃಖ ಬೆರೆಯದ ಸುಖವೂ ಉಂಟೇ? ದುಃಖಸಾಗರವೆಂಬ ಹೆಸರು ಈ ಲೋಕಕ್ಕೆ ನ್ಯಾಯವಲ್ಲದ ದೂರೋ? ಸ್ತುತಿಗೆ ಬಂದದೋ? ಇಹದ್ದೂ ಈ ಪ್ರಪಂಚದ್ದೂ ಎಲ್ಲವು ಪಾಪವೆಂಬ ವಿಷ ಹಿಡಿದ್ದಾಗಿ, ಶಾಶ್ವತವಾಗಿರದೆ, ಶಾಶ್ವತ ಸುಖವನ್ನೀಯದೆ, ನಶ್ವರವಾಗಿ, ಮಾಯೆಯಾಗಿದೆ. ಪರಾ ಮರ್ತು, ಇಹಾ ನಂಬುವ ಪ್ರಪಂಚ ಭಾವದವರೆಲ್ಲರು ಕಡೆಗೆ ದಿಕ್ಕು ಕಾಣದೆ ದುರ್ಗತರಾಗಿ ಹೋಗುವರು. ಆದರೆ ತಾನು ಕ್ರಿಸ್ತನಿಲ್ಲದವನಾಗಿ ಹೋದರೆ, ತಾನು ದಿಕ್ಕಿಲ್ಲದವನೇ ಆಗಿ ಹೋದೇನು ಎಂತ ಅರಿತು ಕೊಂಡು, ಕ್ರಿಸ್ತನನ್ನಾಶ್ರಯಿಸಿ ಕೊಳ್ಳುವವನು ಎಂದಿಗೂ ದಿಕ್ಕಿಲ್ಲದವನಾಗಿ ಹೋಗನು. ತನ್ನ ಶರಣಾಗತರಿಗೆ ಕ್ರಿಸ್ತನು "ನಿಮ್ಮನ್ನು ದಿಕ್ಕಿಲ್ಲದವರಾಗಿ ಬಿಡೆನು; ನಿಮ್ಮ ಬಳಿಗೆ ಬರುತ್ತೇನೆ, ಬಂದಿದ್ದೇನೆ" ಎಂಬದಾಗಿ ಅಭಯ ಕೊಟ್ಟು, ರಕ್ಷಕನಾಗುತ್ತಾನೆ. ಓದುವವರಾದ ನೀವು ಸಹ ಕ್ರಿಸ್ತನು ಕೊಡುವ ಕೈಯನ್ನು ಹಿಡಿದು ಕೊಂಡು, ಬೇರೆ ಯಾರಲ್ಲಿ ನಂಬಿಕಿಡದೆ, ಬೇರೇನೂ ಆಶಿಸದೆ, ಹೆಜ್ಜೇ ಮೇಲೆ ಹೆಜ್ಜೆ ಹಾಕುತ್ತಾ

ಮುಂದೆ ನಡೆದರೆ, ನಿಮ್ಮ ಭೂಪಯಣವು ಬಹು ಅಂದವಾಗಿಯೂ ಸಾರ್ಥಕವಾಗಿಯೂ ಸಾಗಿ, ನೀವು ಸುಖಕ್ಷೇಮದಲ್ಲಿ ಶಾಶ್ವತ ಮನೆಯನ್ನು ಶೇರಿ, ಆತನನ್ನು ಶರಣಾಗತರಕ್ಷಕನೆಂತ ನಿತ್ಯ ಸದಾಕಾಲಕ್ಕೆ ಕೊಂಡಾಡಲಿಕ್ಕೆ ಕಾರಣ ಕಂಡು ಕೊಳ್ಳುವಿರಿ. ತನ್ನ ಶರಣಾಗತರ ಸುಖದುಃಖಗಳನ್ನು ಬಹು ಕರುಣೆಯಿಟ್ಟು ಚಿಂತಿಸಿ, ಪಾಲಿಸುವ ಒಳ್ಳೇ ಕುರುಬನಾಗಿ ಆತನು ಅವರ ಕೊರತೆಗಳನ್ನೆಲ್ಲಾ ನಿವಾರಿಸಿ, ಅವರನ್ನು ಕಾಯುತ್ತಾ ಸಲಹುತ್ತಾ ಪರಮಾನಂದ ಪಡಿಸುವಾತನಾಗಿದ್ಧಾನೆ. ಯಾವ ಮನುಷ್ಯರಿಂದಲಾದರೂ, ಯಾವ ದ್ರವ್ಯ ಉದ್ಯೋಗ ವಿದ್ಯಮಾನಾದಿಗಳಿಂದಲೂ ಅಲ್ಲಾ, ಆತನಿಂದ ಮಾತ್ರವೇ ಸುಖವು ಬರ ಬಹುದು. ತನ್ನವರಿಗೆ ಆತನು "ನಿತ್ಯ ಸುಖಪೂರ್ತಿಯಾದ ಬುಗ್ಗೆ" ಆಗಿದ್ಧಾನೆ. ಆತನನ್ನೇ ಮಾತ್ರವಲ್ಲಾ, ಬೇರೇನಾದರೂ ತಮ್ಮ ಗುರಿಯೆಂತ ಮಾಡಿ ಕೊಂಡು ಅಟ್ಟುವಂಥವರು ಬರೇ ಮನೋವ್ಯಥೆಗೆ ಗುರಿಯಾಗಿ ಹೋಗುವರು. ತಾನು ನಮ್ಮೆಲ್ಲರಲ್ಲಿ ಬಂದು ಳಿದು ಕೊಂಡಿರ ಬೇಕೆಂತ ಆತನು ಸ್ವರ್ಗಕ್ಕೆ ಏರಿ ಹೋಗಿದ್ಧಾನೆ. ತನ್ನನ್ನೂ ತನ್ನ ಹೃದಯವನ್ನೂ ಪೂರ್ಣವಾಗಿ ಅಲ್ಲಾ, ಪಾಲಾಗಿ ಮಾತ್ರವೇ, ಕ್ರಿಸ್ತನಿಗೆ ಒಪ್ಪಿಸಿ ಕೊಟ್ಟಿರುವವನು ಸಹ ದಿಕ್ಕಿಲ್ಲದವನಾಗಿದ್ಧಾನೆ. ತನ್ನ ಇಡೀ ಹೃದಯವನ್ನು, ತನ್ನ ತನುಮನಧನಗಳನ್ನು, ತನ್ನ ಸರ್ವಸ್ವವನ್ನೂ ಕ್ರಿಸ್ತನಿಗೆ ಒಪ್ಪಿಸಿ ಕೊಡದವನಲ್ಲಿ ಆತನು ಬಂದು, ಎಲ್ಲಾ ತಾಪಾದಿಗಳನ್ನು ಪರಿಹರಿಸಿ, ಸಂತೃಪ್ತಿ ಕೊಟ್ಟು, ಆನಂದ ಪಡಿಸಲಾರನು. ಎರಡು ಕಡೆಗೆ ಕಣ್ಣಿಟ್ಟು ಸಾಧಿಸುವವರು ಮೋಸ ಹೋಗುತ್ತಾರೆ, ಯಾಕಂದರೆ ಪ್ರಪಂಚವು ಅವರಿಗೆ ತಪ್ಪಿ ಹೋಗುವಾಗ್ಯೆ, ಅವರು ಸ್ವರ್ಗಪದವಿಗೆ ಶೇರಲಾರದೆ ತಪ್ಪಿ ಹೋಗುತ್ತಾರೆ. ಅವರ ಗತಿ ಎರಡು ಡೋಣಿಗೆ ಕಾಲಿಟ್ಟವರ ಸಂಗತಿ. ಎರಡು ಮನಸ್ಸಿನವರಾಗಿರದೆ, ಒಂದೇ ಮನಸ್ಸಾಗಿ, ಏಕೋಭಾವವಾಗಿ ಕ್ರಿಸ್ತನಿಗೆ ಹೊಂದಿ ಕೊಂಡಿರ್ರಿ! ಹಾಗೆಯೇ ತನಗೆ ಹೊಂದಿ ಕೊಂಡಿರುವವರಿಗೆ ಆತನು ಪರಮ ವಿಶ್ರಾಂತಿಯೂ ಪರಮ ಗತಿಯೂ ಆಗಿ, ಶಾಶ್ವತ ಜೀವವನ್ನೂ ನಿತ್ಯ ತೃಪ್ತಿಯನ್ನೂ ಸಂಪೂರ್ಣ ಪರಮ ಆನಂತಾನಂದವನ್ನೂ ದಯ ಪಾಲಿಸುತ್ತಾನೆ.

---

## ಕುಚೋದ್ಯಗಾರನೊಬ್ಬನ ಅವಸಾನವು.

೧೮೭೩ನೇ ಇಸ್ವಿಯ ದಶಂಬರ ತಿಂಗಳಲ್ಲಿ ವಿರ್ತೆಂಬೆರ್ಗೆಂಬ ಶೀಮೆಯಲ್ಲಿ ಒಬ್ಬ ಬೋಧಕನು ತಾನು ಸ್ವಲ್ಪ ಕಡಿಮೆ ಇಡೀ ೨೦ ವರುಷ ಪಾಲಿಸುತ್ತಿದ್ದ ಊರಿನ ಸಭೆಯನ್ನು ಬಿಟ್ಟು, ಬೇರೊಂದೂರಿಗೆ ವಾಸಾಂತರವಾಗಲಿಕ್ಕಿದ್ದಾಗ ಸಂಭವಿಸಿದ್ದೇನಂದರೆ: ಆ ಊರಿನಲ್ಲಿ ಬೋಧಕನ ಪ್ರಸಂಗಕ್ಕೆ ಮಾತ್ರವಲ್ಲಾ ತಿರುವಾದ್ದೆಲ್ಲಕ್ಕೆ ಗೇಲಿಟ್ಟು, ಪರಿಹಾಸ್ಯಗಳನ್ನು ಮಾಡುತ್ತಿದ್ದ ಒಬ್ಬ ಅವಿಶ್ವಾಸಿ ಇದ್ದನು. ಈತನು ಪರಿಹಾಸ್ಯಗಳನ್ನು ಮಾಡಿ, ಘನ ಪುರುಷರಲ್ಲದವರನ್ನು ನೆಗಾಡಿಸಿದ ಸುದ್ದಿ ಕೇಳಿ ಆ ಬೋಧಕನು ಕೆಲವು ಸಾರಿ ಅವನ ಹತ್ತಿರ ಮಾತಾಡಿ, ಅವನನ್ನು ಎಚ್ಚರಿಸಿದ್ದನು; ಆದರೆ ಅವನು ಬುದ್ಧೀ ಮಾತಿಗೆ ಮಣಿಯದೆ, ಕೋಪದಿಂದ ಕೆದರಿಸಿ ಕೊಂಡು, ತದನಂತರ ಮತ್ತಷ್ಟು ಕುಚೋದ್ಯಗಳನ್ನಾಡಿ, ಬೋಧಕನಿಗೆ ಹೆಚ್ಚಿನ ದುಃಖ ಕೊಡುವವನಾಗಿದ್ದನು. ಆ ಬೋಧಕನ ಕಡೇ ಪ್ರಸಂಗವಾಗುವ ಆದಿತ್ಯವಾರಕ್ಕೆ ಮುಂಚಿನ ಆದಿತ್ಯವಾರದಲ್ಲಿ ಆ ಹಾಸ್ಯಗಾರನು ದೇವಾಲಯದಿಂದ ಮನೆಗೆ ಬಂದು, ತನ್ನ ಹೆಂಡತಿಗೆ ಕರದು ಹೇಳಿದ್ದೇನಂದರೆ: "ಎಲೇ ಹೆಣ್ಣೇ! ಬರುವ ಆದಿತ್ಯವಾರದಲ್ಲಿ ನಮ್ಮ ಪಾದ್ರೆ ಕಡೇ ಸರ್ತಿಗೆ ಪ್ರಸಂಗ ಮಾಡುವದುಂಟಲ್ಲಾ! ಈ ಹೊತ್ತಿನ ಪ್ರಸಂಗ ಕೇಳಿ ಕೆಲವರು ಕಣ್ಣೀರಿಟ್ಟರು; ಬರುವ ಆದಿತ್ಯವಾರದ ಪ್ರಸಂಗ ಕೇಳಿ ಎಲ್ಲರು ಬಹಳ ಕಣ್ಣೀರಿಟ್ಟಾರು; ಎಲ್ಲರು ಕಣ್ಣೀರಿಡುವಲ್ಲಿ ನಾನು ಸಹ ಇಡ ಬೇಡವೋ? ಕಣ್ಣೀರನ್ನು ಒರಸಿ ಬಿಡಲಿಕ್ಕೆ ನನ್ನ ಎಲವಸ್ತ್ರವು ಸಾಲಲಿಕ್ಕಿಲ್ಲಾ;

ಆದ್ದರಿಂದ ಬರುವ ಆದಿತ್ಯವಾರಕ್ಕೆ ನೀನು ನನಗೊಂದು ದೊಡ್ಡ ದುಪ್ಪಟಿಯನ್ನು ತಯಾರು ಮಾಡಿ ಕೊಡ ಬೇಕು; ಅದನ್ನು ಕಣ್ಣೀರನ್ನೊರಸಿ, ಒರಸಿ, ನೆನೆಸಿ ಬಿಟ್ಟೇನು".

ಆದರೆ "ಮನುಷ್ಯನೊಂದು ಬಗೆಯೆ, ದೇವರು ಇನ್ನೊಂದನ್ನು ಬಗೆದನು" ಎಂಬಂತೆ ಆ ಮನುಷ್ಯನು ಮಾರಣೆ ಬುಧವಾರ ಸಾಯಂಕಾಲಕ್ಕೆ ಕೆಲಸ ಮುಗಿಸಿ, ಮನೆಗೆ ಬರುವ ಹೊತ್ತಿಗೆ ಮೈಯಲ್ಲಿ ಏನೂ ನೆಟ್ಟಗಿರದೆ, ಹಾಸಿಕೇ ಮೇಲೆ ಬೀಳ ಬೇಕಾಯಿತು. ಮತ್ತು ಮರು ಗುರುವಾರ ಸಂಜೆಗೆ ಅವನಿಗೆ ಯಮಲೋಕಕ್ಕೆ ಹೊರಡ ಬೇಕೆಂಬ ಅಪ್ಪಣೆಯಾದ್ದರಿಂದ, ಅವನು ಬೆಸಗೊಂಡ ದುಪ್ಪಟಿ ಅವನ ಹೆಣವನ್ನು ಅದರಲ್ಲಿ ಸುತ್ತಲಿಕ್ಕೆ ಅವಶ್ಯವಾಯಿತು. ಮತ್ತು ಜರ್ಮನ್ ದೇಶವು ಉಷ್ಣವಿಲ್ಲದ ದೇಶವಾಗಿರುವದರಿಂದ ಮರಣ ಸಂಭವಿಸಿದ ಮೇಲಿನ ಮೂರನೇ ದಿನದಲ್ಲಿ ಉತ್ತರಕ್ರಿಯೆ (ಹೂಳಿಕೆ) ಆಗುವ ಪದ್ಧತಿಗೆ ಸರಿಯಾಗಿ ಬೋಧಕನ ಕಡೇ ಪ್ರಸಂಗವಾದ ಆದಿತ್ಯವಾರಕ್ಕನೇ ಈತನ ಹೆಣವನ್ನು ಗೋರಿಗೆ ವೈದು, ಹೂಣಿಡುವ ಪ್ರಸಂಗವೂ ಬಿತ್ತು. ನಡೆದ ವಿವರವೆಲ್ಲವನ್ನು ತಿಳಿದ ಆ ಸಭೆಯವರಿಗೆ ೧ನೇ ಕೀರ್ತನೆಯಲ್ಲಿಯ ವಾಕ್ಯವು ಬಹಳ ಬಲಪೂರ್ಣವಾಗಿ ನೆನವರಿಕೆಯಾಗ ಬಹುದಾಯಿತು. ಈ ವಿವರವನ್ನು ಓದಿ ಕೊಂಡವರಾದ ನಾವು ಸಹ ಆ ವಾಕ್ಯವನ್ನು ಮನಸ್ಸಿಗೆ ತಂದು ಕೊಳ್ಳ ತಕ್ಕದು. ಆ ವಾಕ್ಯವೇನಂದರೆ: "ದುಷ್ಟರ ಆಲೋಚನೆಯಲ್ಲಿ ನಡಿಯದೆ, ಪಾಪಾತ್ಮರ ಮಾರ್ಗದಲ್ಲಿ ಹೋಗದೆ, ಕುಚೋದ್ಯಗಾರರು ಕೂತು ಕೊಳ್ಳುವಲ್ಲಿ ಕೂತು ಕೊಳ್ಳದೆ, ಯೆಹೋವನ ನ್ಯಾಯಪ್ರಮಾಣದಲ್ಲಿ ಸಂತೋಷ ಪಡುವ ಮನುಷ್ಯನು ಭಾಗ್ಯವಂತನು. ತನ್ನ ಕಾಲದಲ್ಲಿ ತನ್ನ ಫಲ ಕೊಡುವಂಥಾ, ಎಲೆ ಬಾಡದಂಥಾ, ನೀರಿನ ಕಾಲಿವೆಗಳ ಬಳಿಯಲ್ಲಿ ನೆಟ್ಟಂಥಾ ಮರದ ಹಾಗಿರುವನು. ಆದರೆ ದುಷ್ಟರು ಹಾಗಲ್ಲಾ: ಅವರು ಘಾಳಿ ಹಾರಿಸುವ ಹೊಟ್ಟಿನ ಹಾಗೆಯೇ ಇದ್ದಾರಷ್ಟೇ".

---

## ಮುದಿ ಮೊಖಲ್.

(ಜರ್ಮನ್ ದೇಶದಲ್ಲಿ ನಡೆದ ಒಂದು ಗ್ರಾಮವೃತ್ತಾಂತವು.)

ಜ್ಯೇಷ್ಠಮಾಸದ (ಜೂನ್ ತಿಂಗಳಿನ) ಒಂದಾನೊಂದು ದಿವಸ ಮಧ್ಯಾಹ್ನದ ಹೊತ್ತಿಗೆ ಬಹು ನಿರ್ಮಲವಾದ ಆಕಾಶದಿಂದ ಸೂರ್ಯನು ಮಹಾ ಪ್ರಕಾಶಮಾನ ಕಾಂತಿಮುಖನಾಗಿ ಭೂಮಾತೆಯನ್ನು ಕಟಾಕ್ಷಿಸಿ ಸತ್ಕರಿಸುತ್ತಿರಲೂ, ಭೂಮಾತೆ ತನ್ನ ಮುಖಕ್ಕೂ ವಸ್ತ್ರಾಲಂಕಾರಕ್ಕೂ ಸುಗಂಧಾದಿಗಳನ್ನು ಪೂಸಿ ಹಾಕಿ ಕೊಂಡು, ಮೆರೆ ಮೆರೆಯಲಿಕ್ಕೆ ಹೋಗುತ್ತಾಳೇನೋ? ಎಂಬಂತೆ ಕಾಣುತ್ತಿರುವಾಗಲೂ, ಒಂದಾನೊಂದು ಗ್ರಾಮದವರೆಲ್ಲರು ಹುಲ್ಲುಮೈದಾನಕ್ಕೆ ಹೋಗಿ, ಒಣಗಲಿಕ್ಕೆ ಕೊಯಿದು ಹಾಕಿದ್ದ ಹುಲ್ಲನ್ನು ರಾಶಿರಾಶಿಯಾಗಿ ಕೂಡಿಸಿ, ಗಾಡಿಗಳ ಮೇಲೆ ತಮ್ಮ ತಮ್ಮ ಉಗ್ರಾಣಕ್ಕೆ ವೈದು ತಂಧಾಕಲಿಕ್ಕಿದ್ದಾಗಲೂ, ಗ್ರಾಮವು ನಿವಾಸಿಗಳಿಲ್ಲದೆ ಹೋದಂತೆ ಮೌನವಾಗಿರಲೂ, ಹುಂಜರಾಜನು ತನ್ನ ಪ್ರಜೆಗಳನ್ನು ಮರಗಳ ಅಡಿಯಲ್ಲಿ ತಂಪಿದ್ದ ತೋಟಗಳಿಗೆ ಕರಕೊಂಡು ಹೋಗಿರಲೂ, ಯಾರಾದರೂ ಆ ಗ್ರಾಮವನ್ನು ಹಾದು ಹೋದದಾದರೆ, ಒಂದು ಎಳೇ ಕೂಸು ಒಂದು ತರವಾಗಿ ಅಳುವದನ್ನು ಕೇಳ ಬಹುದಿತ್ತು. ಆ ಶಬ್ದಕ್ಕೆ ಹೋಗಿ ನೋಡುವವರು ಒಂದು ದೊಡ್ಡ ಮನೆಯ ಎದುರಿನಲ್ಲಿಯ ಕಟ್ಟೇ ಮೇಲೆ ಕೂತು ಕೊಂಡು, ಒಂದು ಕೂಸನ್ನು ಕೈಯಲ್ಲಿ ಹಿಡು ಕೊಂಡು ಲಾಲಿಸುತ್ತಿದ್ದ ಹುಡುಗಿಯನ್ನು ಕಂಡು ಕೊಳ್ಳುತ್ತಿದ್ದರು. ಆ ಹುಡುಗಿ ಸುಮಾರು ೧೫ ವರುಷ ಪ್ರಾಯದ ಕನ್ಯೆ. ಆಕೆಯ ಮುಖವು ರಕ್ತಪ್ರಸಾದವುಳ್ಳದಾಗಿ, ಕೆನ್ನೆಗಳು ಎರಡು ಗುಲಾಬಿ

ಪುಷ್ಪಗಳೇನೋ? ಎಂಬಂತೆ ಕೆಂಪಗಾಗಿ, ಬಹು ಚಲುವಾಗಿತ್ತು; ಆದರೆ ಅವಳ ಕೈಯಲ್ಲಿದ್ದ ಮಗು ಅಕ್ಕನಿಗೆ ಏನೂ ಹೋಲದೆ, ಉಬ್ಬಿ ಹೋದ ದೊಡ್ಡ ಹೊಟ್ಟೆಯೂ ಬರೇ ಎಲುಬೂ ತೊಗಲೂ ಆಗಿತ್ತು. ಒಂದು ತರವಾಗಿ, ಅಂದರೆ ಕೇವಲ ಅಸ್ವಸ್ಥವಾಗಿ ನಿಸ್ತ್ರಾಣವಾಗಿ, ಅಳೋದೇ ಮಾಡುತ್ತಿದ್ದ ತಮ್ಮನನ್ನು ಆ ಕನ್ಯೆ ಬಹು ಮಮತಾಭಾವದ ದೃಷ್ಟಿಯಿಟ್ಟು, ಬಹಳ ಅಕ್ಕರೆಯಾಗಿ ಮಾತಾಡಿ, ಲಾಲನ ಮಾಡಿ, ಸುಮ್ಮನಿರಿಸಿ, ನಿದ್ರೆ ಹೋಗಿಸ ಸರ್ವ ಪ್ರಯತ್ನ ಮಾಡಿದಳು; ಆದರೆ ಆಕೆ ಏನೇನೂ ಮಾಡಿದರೂ, ಮಾತಾಡಿದರೂ, ಹಾಡಿದರೂ, ಹ್ಯಾಗೆ ಲಾಲಿಸಿದರೂ, ಮಗು ಅಳುವದನ್ನು ಬಿಡವಲ್ಲದು. ಮಮತೆಗೆ ಚಿಂತೆ, ಅಕ್ಕರೆಗೆ ಕರಕರೆ ಬೆರೆದ ಮುಖಭಾವವಾಗಿ ಆಕೆ ಕಡೆಗೆ ತನ್ನ ತಮ್ಮನಿಗೆ "ಕಂದಯ್ಯಾ! ಯಾಕೆ ಸುಮ್ಮಗಾಗಲೊಲ್ಲಿ? ಆಕಾಶವು ನಿರ್ಮಲವಾಗಿ ಸಮಸ್ತವು ಸಂತೋಷಾಬ್ಧಿನಿಮಗ್ನವೆಂತ ಕಾಣುತ್ತಿರುವಾಗಲೂ ನನ್ನ ಮುದ್ದಿನ ಮೊಗದಲ್ಲಿ ಒಮ್ಮೆಯಾದರೂ ಯಾಕೆ ಎಳೇ ನಗೆಯಾಗದು? ಕಡ್ಡಿಗಳಂತಾದ ನನ್ನ ಮುದ್ದಿನ ಕೈಗಳು ಈ ಸಮಯದಲ್ಲೂ ಯಾಕೆ ಬೆಚ್ಚಗಾಗವು? ನಿನ್ನ ಕೆನ್ನೆಗಳು ಒಂದಿಷ್ಟಾದರೂ ಯಾಕೆ ಕೆಂಪಗಾಗವಲ್ಲವು? ಇದೇನ ಕಟಾ!" ಎಂಬದಾಗಿ ಪಾಲಾಗಿ ತಮ್ಮನ ಹತ್ತರ, ಪಾಲಾಗಿ ತನ್ನಲ್ಲಿಯೇ ಅಂದು ಕೊಳ್ಳುತ್ತಾ, ಚಿಕ್ಕ ತಮ್ಮನಿಗೆ ಮುದ್ದು ಸಹ ಇಕ್ಕುತ್ತಾ ಇರುವಾಗಲೇ ಆಕೆಯ ಕಣ್ಣಿನಿಂದ ಒಂದು ವಜ್ರದಂಥಾ ಬಾಷ್ಪವು ತಮ್ಮನ ಮೋರೇ ಮೇಲೆ ಸುರಿದು ಬಿತ್ತು. ತತ್‌ಕ್ಷಣಕ್ಕೆ ಆಕೆಯ ಬದೀಲಿ ಗಂಟ್ಲೊಡದಂಥಾ, ಚಿಟನೆ ಚೀರುವಂಥಾ ತರದ ಶಬ್ದವು ಕೇಳುವಂಥಾದ್ದಾಯಿತು. "ಗ್ರೇಟ್ಲೆ, ಇದೇನು? ಚಿಕ್ಕ ಮಗುವಿನ ಮೊಗದ ಮೇಲೆ ಕಣ್ಣೀರಿಟ್ಟದೇನು? ಹಾಗೆ ಕಣ್ಣೀರು ತಾಗಿದ ಮಗು ಬದುಕದು ಎಂತ ನಿನಗೆ ಗೊತ್ತಿಲ್ಲವೋ?" ಎಂದು ಹೇಳಿದಾಕೆಯ ಬಾಡಿದ ಕೈ ಮಗುವಿನ ಮೋರೆಯಿಂದ ಆ ಕಣ್ಣೀರನ್ನು ಒರಸಿ ತೆಗೆಯುವಂಥಾದ್ದಾಯಿತು. ಹುಡುಗಿ ಆ ಶಬ್ದವನ್ನು ಕೇಳಿ, ಕೇಳುತ್ತಲೇ ಆ ಕೈಯನ್ನು ತಮ್ಮನ ಮೋರೆಯಲ್ಲಿ ಕಂಡು, ಬೆಬ್ಬರಿಸಿ ನೋಡಲು, "ಮುದಿ ಕುಟಿಲಗಿತ್ತಿ (ಮಾಟಗಾರ್ತಿ) ಮೊಖಲ್" ಎಂಬ ಅಡ್ಡಹೆಸರನ್ನು ಹೊಂದಿದ್ದ ಮುದುಕಿಯೇ ಕಂಡದರಿಂದ, ಗ್ರೇಟ್ಲೆ ಬೆಚ್ಚಿ ಬೆದರಿ, ಭಯಭ್ರಾಂತಳಾಗಿ ಹೋಗಿ, ಮೈಯಲ್ಲೆಲ್ಲಾ ಅದರುವವಳಾದಳು.

ಆ "ಮುದಿ ಕುಟಿಲಗಿತ್ತಿ ಮೊಖಲ್" ಬಹಳ ಬಡವೆಯೂ ಮುಪ್ಪಿನ ದೆಶೆಯಿಂದಲೂ ರೋಗದ ದೆಶೆಯಿಂದಲೂ ಕುರೂಪಿಯೂ ಆಗಿ, ಬೆನ್ನು ಬಹು ಬಗ್ಗಿ ಹೋಗಿದ್ದ ಮುದುಕಿಯಾಗಿದ್ದಳು. ಒಂಟಿಗಳಾಗಿ ಗ್ರಾಮದ ತುದಿಯಲ್ಲಿ ಕಟ್ಟಿದ್ದ ಒಂದು ಚಿಕ್ಕ ಗುಡಸಲಲ್ಲಿ ವಾಸವಾಗಿದ್ದಳು. ಔಷಧಿ ಮೂಲಿಕೆಗಳನ್ನು ಹುಡುಕಿ ಕೂಡಿಸಿ, ಔಷಧ ಮೂಲಿಕೇ ಅಂಗಡಿಯವನಿಗೆ ಮಾರಿ, ಜೀವನ ಮಾಡುತ್ತಿದ್ದಳು. ಆಕೆ ಯಾರಿಗೂ ಎಂದಾದರೂ ಕೇಡಾರೈಸದವಳೂ ಎರಡು ಬಗೆಯದವಳೂ ಆಗಿದ್ದರೂ, ಅವಳು ಕುಟಿಲಗಿತ್ತಿ, ಮಾಟಗಾರ್ತಿ, ಕೆಟ್ಟ ದೃಷ್ಟಿಯವಳು, ಜನರನ್ನೂ ದನ ಕರುಗಳನ್ನೂ ಮಾಟ ಮಾಡಿ ಕಾಟ ಮಾಡ ಬಲ್ಲಾದವಳು ಎಂತ ಆಕೇ ವಿಷಯದಲ್ಲಿ ಸುದ್ದಿ ಇದ್ದದರಿಂದ, ಆಕೆ ಎಲ್ಲರಿಗೆ ಒಂದು ಬೆಚ್ಚಿನಂತಾಗಿದ್ದಳು. ಭಯಾಕ್ರಾಂತಳಾದ ಹುಡುಗಿಯನ್ನು ನೋಡಿ, ಮೊಖಲ್ ಒಡದ ಘಂಟೆಯದರಂಥ ತರದ ಸ್ವರವೆತ್ತಿ ಹೇಳಿದ್ದೇನಂದರೆ: "ಬೆಚ್ಚಿ ಬೆದರಿದಿಯವ್ವಾ? ನಾನು ನಿನಗೆ ಕಾಣದೆ ಮನೆಯ ಹಿಂದಗಡೇ ಮೂಲೆಯಿಂದ ಬಂದೆನೆಂತ ತೋರುತ್ತದೆ. 'ಮುದಿ ಕುಟಿಲಗಿತ್ತಿಯ' ದೃಷ್ಟಿಯಿಂದ ನಿನ್ನ ಮಗುವಿಗೆ ಏನೋ ಆಗಿ, ಕಾಲ ಬಂದೀತೆಂತ ಭಯ ಪಟ್ಟಿದ್ದೀಯೋ? ನಿನ್ನ ಮಗು ಸತ್ತು ಹೋಗಲಿಕ್ಕೆ ಕೆಟ್ಟ ದೃಷ್ಟಿಯಾಗಲಿ ಮಾಟವಾಗಲಿ ಏನೂ ಬೇಡ: ಬರೇ ಕಡ್ಡಿಯಾಗಿ, ಬಡ ಕ್ರಿಮಿಯಾದ ನಿನ್ನ ತಮ್ಮನಿಗೆ ನೀವು ಬೇರೆ ಆಹಾರ ಕೊಡದಿದ್ದರೆ, ಅವನೊಂದು ತಿಂಗಳು ಹೋಗದೆ ಸತ್ತೇ ಸತ್ತು ಹೋಗುವನು ಎಂಬದಕ್ಕೆ ಸಂಶಯವಿಲ್ಲಾ. ಪಾಪ! ಅದಕ್ಕೆ ಬಹಳ ದಪ್ಪವಾದ ಗಂಜಿಯನ್ನು

ಹುಳಿಯಾಗಿ ಹೋದ್ದಾಗಿಯಾದರೂ ಉಣ್ಣಿಸುತ್ತಾ, ಅದು ಹೊಟ್ಟೆಗಾಗದ್ದಕ್ಕೆ ಅಳುವ ಕೂಸಿಗೆ ನಿದ್ರೆ ಬರುವಂತೆ ಕಸಕಸೆ ಕಷಾಯ ಕೊಡುತ್ತಾ ನೀವೇ ಅದನ್ನು ಬೇಕೆಂಬ ಹಾಗೆ ಕೊಂದೇ ಕೊಂದು ಬಿಡುತ್ತೀರಿ!"

ಗ್ರೇಟ್ಲಿ ಆ ಮುದುಕಿ ಬಂದದಕ್ಕೆ ಬೆಚ್ಚಿ ಬೆದರಿ, ಎದ್ದು, ತನ್ನ ತಮ್ಮನನ್ನು ಕೈಲಾದಷ್ಟು ಬಿಮ್ಮಗೆ ಕೈಯಲ್ಲಿ ಹಿಡುಕೊಂಡು, ಮುದಿ ಮಾಟಗಾರ್ತಿಯ ದೃಷ್ಟಿಗೆ ತಪ್ಪಿಸ ಬೇಕೆಂಬದಾಗಿ ತನ್ನೆದೆಗೆ ಔಚಿ ಕೊಂಡು ಮರೆ ಮಾಡಿ, ನಿಂತು ಕೊಂಡಳು. ಆದರೆ ಮುದುಕಿಯ ಕಡೇ ಮಾತು ಅವಳ ಮನಸ್ಸಿಗೆ ಹಿಡಿದು ಹೋಗಿ, ಅವಳಿಗೆ ಒಂದಿಷ್ಟು ಆಶ್ಚರ್ಯಕ್ಕೆ ಕಾರಣವಾಗಿ, ಲಕ್ಷ್ಯಕ್ಕೆ ತಕ್ಕದೆಂತ ಕಾಣುವಂಥಾದ್ದಾಯಿತು. ಭಯವೂ ಸಂದೇಹವೂ ಉಳ್ಳವಳಾಗಿದ್ದಾಗ್ಯೂ, ಒಂದು ತರದ ನಂಬಿಕೆಯೂ ವಿನಯವೂ ಹಂಬಲವೂ ಉಳ್ಳವಳಾಗಿ ಮುದುಕಿಯ ಸುಕ್ಕು ಸುಕ್ಕಾದ ಮೋರೆಯನ್ನು ನೋಡುವವಳಾದಳು. ಮುದುಕಿ ಹುಡುಗಿಯ ಮನೋಭಾವವನ್ನು ತಿಳಿದು ಕೊಂಡು, ಹೇಳಿದ್ದೇನಂದರೆ: "ಹಾಗಾದರೆ ನಿನ್ನ ತಮ್ಮನನ್ನು ಅಷ್ಟು ಘಾಬ್ರಿಯಾಗಿ ಎದೆಗೌಚಿ ಕೊಳ್ಳದೆ ನನಗೆ ತೋರಿಸು! ನಾನವನಿಗೇನೂ ದುಃಖ ಕೊಡೆ. ಒಂದು ವೇಳೆ ಅವನು ವಾಶಿಯಾಗಿ ಬದುಕಿ, ಪುಷ್ಟನಾಗುವ ಉಪಾಯವನ್ನು ಹೇಳಿ ಕೊಡಲಿಕ್ಕಾದರೇನು? ನಾನು ಔಷಧಿಗಳನ್ನು ಬಲ್ಲಾದ ಮುದುಕಿಯಲ್ಲವೋ?" ಈ ಮಾತಿಗೂ ಹುಡುಗಿಯ ಘಾಬರಿಯೂ ಶಂಕೆಯೂ ಹೋಗದ್ದಕ್ಕೆ ಮುದುಕಿ ಮೆಲ್ಲನೆ ಆರ್ತ ಸ್ವರದಿಂದ ಹೇಳಿದ್ದೇನಂದರೆ: "ಅಂಜಿಕೋ ಬೇಡವ್ವಾ! ಮುದಿ ಮೊಖಲ್ ಜನರು ಹೇಳುವಂಥಾ ಕೆಡಕಳೂ ಕುಟಿಲಗಿತ್ತಿಯೂ ಅಲ್ಲವೇ ಅಲ್ಲಾ! ಈ ಮುದುಕಿ ಯಾರಿಗಾದರೂ ಕೇಡನ್ನು ಬಗೆಯುವವಳಲ್ಲಾ! ನಂಬು, ಮಗಳೇ! ಎಲ್ಲವರಿಗೆ ಮೇಲೂ ಕ್ಷೇಮವೂ ಆಗ ಬೇಕೆಂಬದು ನನ್ನ ನಿತ್ಯ ಬಯಕೆ; ಆದರೆ ಜನರು ನಂಬಿಕಿಲ್ಲದೆ ಅಲ್ಲದ್ದನ್ನು ಹೇಳಿ, ದೂರಿ, ದುಃಖ ಕೊಡುತ್ತಾರೆ. ಆದರೂ ಚಿಂತಿಲ್ಲಾ: ಸರ್ವಜ್ಞನಾದ ಜಗತ್ಸಾಕ್ಷಿ ಸ್ವಾಮಿ ಮುದುಕಿಯನ್ನು ಬಲ್ಲಾ. ಆತನು ಪರದಲ್ಲಿ ಮುದುಕಿಯ ನ್ಯಾಯ ಸಹ ತೀರಿಸಿ, ಅನ್ಯಾಯದ ಅಡ್ಡಹೆಸರಿನ ಬದಲಿಗೆ ಹೊಸ ಹೆಸರನ್ನು ದಯ ಪಾಲಿಸುವನು. ನಿನ್ನ ತಮ್ಮನ ವಿಷಯದಲ್ಲಿ ಇನ್ನು ಆಶೆಯುಂಟೋ? ಏನೋ? ನೋಡೋಣಾ!" ಎಂದು ಮೊಖಲ್ ಹೇಳಿದ್ದಕ್ಕೆ ಗ್ರೇಟ್ಲಿಯ ಮನಸ್ಸಿನಲ್ಲಿ ದೊಡ್ಡ ಕದರ್ಚೆ ಎದ್ದ ಹಾಗಾಯಿತು. ಕೆಟ್ಟ ದೃಷ್ಟಿ ಇದ್ದ ಮುದುಕಿಗೆ ಚಿಕ್ಕ ತಮ್ಮನನ್ನು ತೋರಿಸಲೋ? ಬೇಡವೋ? ಅವಳು ಕಣ್ಣಿಟ್ಟು ನೋಡಿದ ಮಗು ಬದುಕುವದೇ? ಸತ್ತು ಹೋದರಕಟಾ! ಒಂದು ವೇಳೆ ಏನಾದರೂ ಔಷಧೋಪಾಯವನ್ನು ತಿಳಿದು, ತಿಳಿಸ ತಕ್ಕ ಮುದುಕಿಗೆ ನಾನು ಮಗುವನ್ನು ತೋರಿಸದೆ ಹೋದ್ದಕ್ಕೆ ಮಗು ಸತ್ತು ಹೋದರೆ, ತಮ್ಮನನ್ನು ಕೊಂದ ಹಾಗಾದೀತಲ್ಲಕಟಾ! ಹ್ಯಾಗೆ ಮಾಡಲಿ? ಎಂಬದಾಗಿ ಹುಡುಗಿಯ ಮನಸ್ಸಿನಲ್ಲಿ ಬಹಳ ಚರ್ಚೆಯಾಗಿ, ಕರಕರೆಯಾಯಿತು.

ಗ್ರೇಟ್ಲಿಯ ಮಮತೆಯುಳ್ಳ ಮನಸ್ಸಿನಲ್ಲಿ ಯೋಚನೆಗಳೂ ಸಂಶಯಗಳೂ ಆಶೆಯೂ ಚಿಂತೆಯೂ ಏಳುತ್ತಾ ಬೀಳುತ್ತಾ ಇರುವಾಗ್ಯೆ ಅವಳ ದೃಷ್ಟಿ ಅಕಸ್ಮಾತ್ತಾಗಿ ಎಂಬ ಹಾಗೆ ಮುದುಕಿಯದನ್ನು ಕಲಿಯಲು, ಈಕೆಯದು ಒಂದು ತರದ ಹೊಳವೂ ಚುರುಕೂ ಮತ್ತು ಅಕ್ಕರೆಯೂ ಕನಿಕರವೂ ಉಳ್ಳದಾಗಿ ಮಗುವಿನ ಮೇಲೆ ಊರಿ ಹೋಗಿದ್ದದು ಅವಳಿಗೆ ಕಂಡಿತು. ಹಾಗೆ ಕಂಡಾಕ್ಷಣಕ್ಕೆ ಗ್ರೇಟ್ಲಿಯ ಮನಸ್ಸಿನಲ್ಲಿ ಸಂಶಯವೂ ಭಯವೂ ಪರಿಹಾರವಾಗಿ, ಪೂರ್ಣ ನಿರ್ಭಯದ ನಂಬಿಕೆ ಹುಟ್ಟಿ ಹೋದ್ದರಿಂದ, ಅವಳು ತಮ್ಮನನ್ನು ಮುದುಕಿಯ ಕೈಯಲ್ಲಿ ಕೊಟ್ಟಳು. ಮುದುಕಿ ಮಗುವನ್ನು ತೆಗೆದು ಕೊಂಡು, ತನ್ನ ಕಿವಿಯನ್ನು ಅದರ ಬಾಯಿಗೂ ಎದೆಗೂ ನೀಡಿ, ಅದರ ಉಸುರಾಟವು ಹ್ಯಾಗೆಂತ ಪರೀಕ್ಷೆ ಮಾಡಿ ನೋಡಿದಳು. ಮತ್ತು ಮಗುವಿನ ದಣುಕೊಂಡು, ಕುಗ್ಗಿ ಹೋಗಿ,

ಮಸಕಾದ ಕಣ್ಣುಗಳನ್ನು ತನ್ನ ಕಣ್ಣೂರಿ ನೋಡಿ, ತಣ್ಣಗಿದ್ದ ಕೈಗಳನ್ನು ತಡವಿ ನೋಡಿ, ಕಲೆಗುಂದಿದ್ದ ಮೊಗವನ್ನು ಚುಂಬಿಸಿದ ಕಡೆಗೆ ಸ್ವಲ್ಪ ಹೊತ್ತು ಮಾತಾಡದೆ, ಬಹು ಕ್ಷೀಣವಾಗಿದ್ದ ಮಗುವನ್ನು ಆಲೋಚನಾಮಗ್ನಳಾಗಿ ದೃಷ್ಟಿಸೇ ದೃಷ್ಟಿಸಿ, ಹೇಳಿದ್ದೇನಂದರೆ: “ಈ ಮಗುವಿಗೆ ಅಸ್ವಸ್ಥದಿಂದಲ್ಲಾ ತ್ರಾಣವಿಲ್ಲವಾದ್ದರಿಂದ ಮಾತ್ರ ಕ್ಷೇಮವಿಲ್ಲವಷ್ಟೇ. ಅದಕ್ಕೆ ಏನೂ ರಕ್ತಬಲವಿಲ್ಲಾ. ಮೊದಲೇ ಬಹಳ ಕೋಮಲ ದೇಹಿಯಾಗಿದ್ದ ಶಿಶು ಹೊಟ್ಟೆಗಾಗದ ದಪ್ಪ ಗಂಜಿ ಗಂಜಿ ಉಂಡು, ಕೇವಲ ಬಲಹೀನವಾಗಿ ಹೋಗ್ಯದೆ. ಮತ್ತು ಕಸಕಸೆ ಕಷಾಯ ಶುದ್ಧ ವಿಷವೇ” ಎಂಧೇಳಿ, ಹುಡುಗಿಯ ಬದೀಲಿ ಇಟ್ಟಿದ್ದ ಬಟ್ಲನ್ನು ದೂಡಿ ಕೆಡವಿ, ಆದರಲ್ಲಿದ್ದ ಕಷಾಯವನ್ನು ಚಲ್ಲಿ ಹಾಕಿದಳು. ಅದಕ್ಕೆ ಗ್ರೇಟ್ಲಿ ಕೇವಲ ವಿಸ್ಮಿತಳಾಗಿ—“ಏನಿದು? ಈ ಕಷಾಯ ಯಾಕೆ ಚಲ್ಲಿ ಹಾಕಿದಿ? ಈ ಕಷಾಯವಲ್ಲದೆ ಮಗುವಿಗೆ ಏನೇನೂ ಕೊಟ್ಟರೂ, ಶಮನವಾಗದು, ನಿದ್ರೆ ಬಾರದು ಎಂಧೇಳಿದ್ದಕ್ಕೆ ಆ ಮುದುಕಿ—“ಅಲ್ಲದ ಮಾತನ್ನು ನಂಬಿ ಮಾತಾಡ ಬೇಡವ್ವಾ! ನೀವಿನ್ನು ಮುಂದೆ ದಪ್ಪವಾದ ಗೋಧೀ ಪುಡಿಯ ಗಂಜಿ ಉಣ್ಣಿಸದೆ, ಕೂಸಿನ ಹೊಟ್ಟೆಗೆ ದಕ್ಕಿ ಹಿತವಾಗುವ ಆಹಾರ ಕೊಟ್ಟರೆ, ಹೊಟ್ಟೇ ನೋವಾಗದೆ, ಕಷಾಯದಿಂದ ಬಾರದಂಥಾ ಒಳ್ಳೇ ಸ್ವಸ್ಥ ನಿದ್ದೆ ಬಂಧೋದೀತು. ಕಸಕಸೆ ಕಷಾಯದಿಂದಾಗುವ ನಿದ್ದೆ ಸೌಖ್ಯದ ನಿದ್ದೆಯಲ್ಲಾ. ಈ ಕಷಾಯದಿಂದ ಬರೇ ಮಂಕು ಆಗಿ, ನಿನ್ನ ತಮ್ಮ ಬದುಕಿದರೆ, ಕೇವಲ ಧಡ್ಡನಾದಾನು; ಆದರೂ ಧಡ್ಡನಾಗುವ ಭಯವಿಲ್ಲಾ, ಯಾಕಂದರೆ ಬದುಕಲಿಕ್ಕಿಲ್ಲಾ! ನೀವೇ ಮಗುವನ್ನು ವಿಷ ವಿಷ ವಿಷ ಕುಡಿಸಿ ಕೊಲ್ಲುತ್ತೀರಿ. ಆರೋಗ್ಯ ಹಾಲಿನಿಂದಲ್ಲದೆ ಆರೋಗ್ಯ ರಕ್ತವು ಶಿಶುಗಳಿಗೆಲ್ಲಿಂದ ಬಂದೀತು?”

(ಮುಂದೆ ಸಾಗಿಸಲ್ಪಡುವದು.)

## ಹೊಸ ಪ್ರಶ್ನೆಗಳು.

36. ದ್ರಾಕ್ಷೇ ಆಲೆಯಲ್ಲಿ ಗೋಧಿಯನ್ನು ಒಕ್ಕಿದ್ದು (ಬಡಿದ್ದು) ಯಾರು?

37. ಗ್ರಹ ಮೊದಲಾದ ನಕ್ಷತ್ರಗಳಿಗೆ ಸ್ವರ್ಗಲೋಕದಲ್ಲಿಯೂ ಹೆಸರುಂಟೋ?

38. ತಲೇ ನೋವನ್ನು ತಡೆಯ ಮನಸ್ಸಿಲ್ಲದೆ ಸಾವನ್ನು ಅಪೇಕ್ಷಿಸಿದ್ದು ಯಾರು?

39. ವಿಶ್ವಾಸವು ಬಲಗೊಂಡು ದೃಢವಾಗುವಂತೆ ಹಾದು ಹೋಗುವವರು ಓದ ಬೇಕೆಂತ ಯಾರು ದರ್ಶನದ ಮಾತನ್ನು ಹಲಿಗೆಯಲ್ಲಿ ಬರದಿಟ್ಟು, ಹಲಿಗೆಯನ್ನು ರಸ್ತೆಯ ಬದೀಲಿ ತೂಗಿಸಿಟ್ಟನು?

40. ಬರೇ ಒಂದು ಅಕ್ಷರದಲ್ಲಿ ಅಡಗಿರುವಂಥಾ, ಶ್ರೇಷ್ಠ ಜಗದ್ಗುರುಮೂರ್ತಿ ಅಪ್ಪಣೆ ಕೊಟ್ಟಂಥಾ ಪ್ರಾರ್ಥನೆಯ ವೃತ್ತಾಂತವು ಎಲ್ಲಿ?

## ವಿವಿಧ ವರ್ತಮಾನಗಳು.

ಪಶ್ಚಿಮ ಬೇರಾರಿನಲ್ಲಿ ವಾಸೀಮ್ ಎಂಬಲ್ಲಿ ಒಬ್ಬ ಮಿಶ್ಯನೆರಿಸಾನಿ ಪ್ರತಿ ದಿವಸ ಅಲ್ಲಿಯ ಪೇಟಿಯಲ್ಲಿ ಪ್ರಸಂಗ ಮಾಡುತ್ತಿದ್ಧಾಳೆ.

ಫಾದರ್ ಹಾಯಸಿಂತ ಎಂಬದಾಗಿ ಫ್ರಾನ್ಸ ದೇಶದಲ್ಲಿ ಸುಧಾರಣೆ ಪಟ್ಟ ಕಥೋಲಿಕ ಉಪದೇಶಕನು ಪರಿಸ ಪಟ್ಣದಲ್ಲಿ ಪ್ರತಿ ಆದಿತ್ಯವಾರ ಪ್ರಸಂಗಿಸುತ್ತಿದ್ಧಾನೆ, ಅವನ ಪ್ರಸಂಗ ಕೇಳುವದಕ್ಕೆ ಬಹು ಜನರು ಬರುತ್ತಾರೆ; ಅವರಲ್ಲಿ ಕೆಲವರು ರಾಜಕೀಯರೂ ಬೇರೆ ಶ್ರೀಮಂತರೂ ಇದ್ಧಾರೆ.

ತಿರುವಾಂಕೋಡಿನ ಲಂಡನ ಮಿಶ್ಯನಿನಲ್ಲಿ ಸ್ನಾನ ಹೊಂದಿದ ಕ್ರೈಸ್ತರು ೬,೨೬೫; ಪ್ರಾರ್ಥನೆಗೆ ಬರುವವರು ೩,೨೪೬. ಕಳದ ವರುಷದಲ್ಲಿ ೨೨೭ ಮಂದಿ ಹೊಸಬರು ಶೇರಿದರು.

ಸತಾರದಲ್ಲಿ ಕೆಲ ಕಾಲಕ್ಕೆ ಹಿಂದೆ ಕ್ರೈಸ್ತನಾದಂಥಾ ಕಾಜಿಯ ಹೆಂಡತಿ ಒಂದು ಮಗು ಸಹ ಅವನ ಬಳಿಗೆ ಬಂದಿದ್ದಾರೆ.

ಕೊನ್‌ಸ್ತಂತಿನೋಪೊಲಿಯಲ್ಲಿ ಭಯಂಕರ ಬೆಂಕಿ ಪ್ರಬಲವಾಗಿ ಸುಮಾರು ೧೨೦೦ ಮನೆಗಳು ಭಸ್ಮವಾದವು.

ಅಮೇರಿಕ ಖಂಡದ ಮೆಕ್ಸಿಕೋ ದೇಶದಲ್ಲಿ ಶುಭವರ್ತಮಾನದ ಉಪದೇಶದ ಕೆಲಸ ಮೊದಲಿಗಿಂತಲೂ ಬಹಳ ಚನ್ನಾಗಿ ನಡಿಯುತ್ತದೆ.

ಮುಂಬಾಯಿಯಲ್ಲಿ ಮಜಗಾಂವ ಎಂಬ ಪಾಳ್ಯದಲ್ಲಿ ದುರ್ವೃತ್ತಿಯಲ್ಲಿ ಬದುಕುವ ಸ್ತ್ರೀಯರನ್ನು ಸನ್ಮಾರ್ಗಕ್ಕೆ ತರುವ ಬಗ್ಯೆ ಅವರಿಗಾಗಿ ಒಂದು ಮನೆ ಕಟ್ಟಿಸಿ ಅದಕ್ಕೆ ಹೌಸ್ ಒಫ್ ಹೋಪ್ ಅಂದರೆ ಪ್ರತೀಕ್ಷೆಯ ಮನೆ ಎಂಬ ಹೆಸರಿಟ್ಟಿದ್ದಾರೆ. ಇದರ ಖರ್ಚು ಪರೋಪಕಾರಿಗಳಾಗಿರುವವರ ವಂತಿಗೆಯಿಂದ ನಡಿಯುವಂಥಾದ್ದು.

ಮುಂಬಾಯಿಯಲ್ಲಿ ಮರಣ ಪಟ್ಟವರ ಲೆಖ್ಖ ಬಹುಶಾ ದೊಡ್ಡದಾಗಿದೆ; ಜೂನ ತಿಂಗಳ ಮೊದಲನೆ ವಾರದಲ್ಲಿ ೮೫೮ ಮನುಷ್ಯರು ಸತ್ತುಹೋದರು.

ಬಾಬು ನಿಶಿಕಂತ ಚತರಜೀ ಎಂಬ ಒಬ್ಬ ಬಂಗಾಳಿ ಮನುಷ್ಯನು ಲೈಪ್ಜಿಗ್ ಪಟ್ಣದಲ್ಲಿ ವಿದ್ಯೆ ಕಲಿಯುತ್ತಾ ಇದ್ದಂಥವನು ರುಸ್ಯ ರಾಜ್ಯದ ಸಂತಪೀತರ್ಸ್‌ಬರ್ಗ ಪಟ್ಣದ ಮಹಾ ಶಾಲೆಯಲ್ಲಿ ಹಿಂದುಸ್ಥಾನಿ ಸಂಸ್ಕೃತ ಬಂಗಾಳಿ ಭಾಷೆಗಳ ಉಪಾಧ್ಯಾಯನಾಗಿ ನೇಮಕ ಪಟ್ಟಿದ್ದಾನೆ.

ಪುಣೆಯಲ್ಲಿ ಒಂದು ಪುನರ್ವಿವಾಹವಾಯಿತು; ಮದುಮಗನು ಸುಮಾರು ಮೂವತ್ತು ವರ್ಷ ಪ್ರಾಯದವನು ಇಪ್ಪತ್ತು ವರ್ಷ ಪ್ರಾಯದ ವಿಧವೆಯನ್ನು ಲಗ್ನ ಮಾಡಿ ಕೊಂಡನು. ಅವರು ಸಂಭಾವಿತರಾಗಿ ಬ್ರಾಹ್ಮಣ ಕುಲದವರು.

ಮೃತವಾದವನೊಬ್ಬನಿಗೆ ಒಬ್ಬ ಮಿಶನೆರಿ ರಾತ್ರಿಭೋಜನ ಕೊಟ್ಟ ಸಂಗತಿ ಕಳೆದ ಅಂಕೆಯಲ್ಲಿ ಪ್ರಸ್ತಾಪವಾಯಿತಷ್ಟೇ. ಆತನನ್ನು ಮುಂಬಾಯಿ ಬಿಶೋಪರು ಕರಿಸಿ ವಿಚಾರಿಸಿ ಮೂರು ತಿಂಗಳಿಗೆ ಕೆಲಸದಿಂದ ಮಿನಾಯಿ ಮಾಡಿದರಂತೆ.

ಸ್ಪೇನ್ ದೇಶದಲ್ಲಿ ನಡೆದ್ದೊಂದು ಸಂಗತಿ ಏನಂದರೆ—ಒಬ್ಬ ಮಾತಬಾರಿ ಗೃಹಸ್ಥನು ಮರಣಕ್ಕೆ ಸಮೀಪವಾಗಿದ್ದಾಗ ಮನೆಯವರೂ ಸ್ನೇಹಿತರೂ ಬಹುತೇಕವಾಗಿ ಪಾದರಿಯನ್ನು ಕರಿಸಬೇಕೋ ಎಂದು ಬೇಡಿ ಕೊಳ್ಳಲು ಅವನು ಒಲ್ಲದಿದ್ದು ಸ್ವಲ್ಪ ಹೊತ್ತಿನ ಮೇಲೆ ಆ ಗೃಹಸ್ಥನು ಮನಸ್ಸು ಬೇರೆ ಮಾಡಿದಂತೆ ಕಂಡದರಿಂದ ಪಾದರಿಯು ಅವನ ಬಳಿಗೆ ಬಂದು ಮಾತನಾಡಿಸಲು, ಅವನು ಕಠಿಣವಾಗಿ ನಿರಾಕರಿಸಿ ಬಿಡುವ ವೇಳೆಗೆ ಪಾದರಿಗೆ ಶಿಟ್ಟು ಬಂದು, ಸುತ್ತಲಿದ್ದವರನ್ನು ನೋಡಿ, ಈ ಪಾತಕಿ ಮನುಷ್ಯನನ್ನು ನರಕಕ್ಕೆ ಒಯ್ಯುವದಕ್ಕೆ ಸೈತಾನನು ತಾನೇ ಶರೀರಾಕಾರದಲ್ಲಿ ಬರುವನು ಎಂದು ಘಟ್ಟಿಯಾಗಿ ಹೆದರಿಸಿ ಹೋದವನಾದನು. ಎರಡು ದಿನಗಳ ಮೇಲೆ ಸತ್ತು ಹೋದ ಆ ಗೃಹಸ್ಥನ ಹೆಣವನ್ನು ಮನೆಯವರು ಕಾಯುತ್ತಿರುವಾಗ್ಯೆ ಬಾಗಲು ಫಕ್ಕನೆ ತೆರದು, ಇಂಥಾದ್ದೆಂದು ಹೇಳ ಕೂಡದ ಒಂದು ವಿರೂಪವು ರಕ್ತಬಣ್ಣದ ವಸ್ತ್ರ ಹಾಕಿ ಕೊಂಡು, ಗಂಧಕದ ನಾತ ಉಳ್ಳದಾಗಿ ದೊಡ್ಡ ಬಾಲ ಕಟ್ಟಿ ಕೊಂಡದಾಗಿ ಒಳಗೆ ಬರುವಂಥಾದ್ದಾಯಿತು. ಈ ವಿರೂಪ ನೋಡಿ ಒಳಗಿದ್ದವರೆಲ್ಲರೂ ಹೆದರಿ ಓಡಿ ಹೋದರು. ಆಗ್ಯೆ ಆಚೆ ಕೋಣೆಯಲ್ಲಿದ್ದ ಒಬ್ಬ ಚಾಕರನು ಬೊಬ್ಬೆ ಕೇಳಿ ಬಂದು, ಪಿಸ್ತೂಲು ತಂದು, ಪಿಶಾಚನು ತನ್ನನ್ನು ಕೊಲ್ಲುವ ಮುಂಚೆ ತಾನು ಅವನನ್ನು ಕೊಲ್ಲ ಬೇಕೆಂದು ಮೂರು ಗುಂಡು ಹೊಡದನು. ಆಗ್ಯೆ ಮನೆಯವರು ಒಳಗೆ ಬಂದು, ಎದೆಗೆ ಮೂರು ಗುಂಡು ತಾಗಿ ಕೆಳಗೆ ಬಿದ್ದು ಅತ್ಯಾಸನ್ನನಾಗಿ ಬಾಯಿಯಲ್ಲಿ ನೊರೆ ಬರುವದನ್ನು ನೋಡಲಾಗಿ, ತಮ್ಮ ದೇವಾಲಯದ ಚಾಕರನು. ಮರು ದಿನ ಅವನನ್ನು ಹೂಣಿಟ್ಟರು.

ಕೊಚ್ಚಿ ತಿರುವಾಂಕೋಡು ಈ ಎರಡು ರಾಜ್ಯಗಳಲ್ಲಿ ೪೫೦,೦೦೦ ಕ್ರೈಸ್ತರಿದ್ದಾರೆ. ಇಷ್ಟು ಹಿಂದುಸ್ಥಾನದ ಬೇರೆ ಯಾವ ಶೀಮೆಯಲ್ಲಿಯೂ ಇಲ್ಲಾ; ಇವರಲ್ಲಿ ಸುರ್‍ಯಾಣಿಗಳು ೩೦೦,೦೦೦;

ಕಥೋಲಿಕರು ೧೦೦,೦೦೦; ಪ್ರೊತೆಸ್ತಾಂತರು ೫೦,೦೦೦.

ಈಗ ಸದ್ಯಾ ವಿಲಾಯತಿಯ ಸರ್ವ ಅರಸರ ಕೂಡ ಸಿದ್ಧವಾಗಿರುವ ೭೭,೫೪,೯೩೫ ದಳವು ಅದೆ. ಇದರಲ್ಲಿ ರುಸ್ಸಿಯರದು ೧೭,೮೯,೫೭೧; ಜರ್ಮನಿಯರದು ೧೨,೪೭,೮೩೪; ಫ್ರೆಂಚರದು ೧೧,೧೮,೫೨೫; ಆಸ್ತ್ರಿಯರದು ೯೬,೪೨೬೮; ಇತಲಿ ೮೭೧,೮೭೧; ಇಂಗ್ಲಿಷರದು ೬,೫೫,೬೦೮; ತುರ್ಕಿ ೬,೨೯,೭೩೬; ಇತರರದು ೪,೭೬,೩೨೧. ಈ ಸರ್ವ ಸೈನ್ಯಕ್ಕೆ ಒಂದು ವರುಷಕ್ಕೆ ಹಿಡಿಯುವ ಖರ್ಚು ಹೆಚ್ಚು ಕಡಿಮೆ ಐದರ್ಬುದ ರೂಪಾಯಿ ಆದೀತು.

ತುರ್ಕಿಸ್ಥಾನದ ಸುಲ್ತಾನನು ಧರ್ಮಸಂರಕ್ಷಕ ಎಂಬ ನಾಮವನ್ನು ತನಗೆ ಇಟ್ಟು ಕೊಂಡು, ತಾನು ರುಸ್ಯರ ಸಂಗಡ ಮಾಡುವ ಯುದ್ಧ ಮತಯುದ್ಧವೆಂತ ತೋರಿಸಲಿಕ್ಕೆ ನೋಡುತ್ತಾನೆ. ತುರ್ಕರಿಗೂ ರುಸ್ಯರಿಗೂ ಯುದ್ಧವು ನಡಿಯುತ್ತಲೇ ಅದೆ. ಯಾರಿಗೆ ಜಯವಾಯಿತು? ಯಾರಿಗೆ ಅಪಜಯವಾಯಿತು? ಎಂದು ಈ ವರೆಗೆ ಹೇಳಲಿಕ್ಕಾಗಲಿಲ್ಲಾ; ಬೇಗನೇ ಸಂಧಾನಕ್ಕೆ ಬರುವ ಹಾಗೂ ತೋರುವದಿಲ್ಲಾ. ರುಸ್ಯರ ಸಂಗಡ ಯುದ್ಧ ನಡಿಯುತ್ತಿರುವಾಗಲೇ ತುರ್ಕರು ಮೊಂಟೆನೀಗ್ರೊ ಎಂಬ ರಾಜ್ಯಕ್ಕೂ ದಳ ಕಳುಹಿಸಿ ಕೊಟ್ಟಿದ್ದಾರೆ. ಅನೇಕ ವರುಷ ಅವರ ಸಂಗಡ ಕಾದಾಡಿದ ಮೊಂಟೆನೀಗ್ರುರ ಸೈನ್ಯ ತುರ್ಕಿ ಸೈನ್ಯದ ಮುಂದೆ ಸೋಥೋಯಿತೆಂಬ ವರ್ತಮಾನ ಸತ್ಯವಲ್ಲಾ.

ತುರ್ಕರು ಬೊಸ್ಪೊರಸ್ ಸಮುದ್ರ ಮಾರ್ಗವನ್ನು ದಾಟಿ ಇತ್ತಲಾಗೆ ಬಂದರೆ, ತಮ್ಮ ಸ್ವಂತ ಮನೆಗೆ ತಮ್ಮವರ ಬಳಿಗೆ ಬಂದಂತೆ ಆಯಿತೆಂದು ಅನೇಕರು ಹೇಳುವದುಂಟು; ಆದರೆ ವಿಲಾಯತಿಯಲ್ಲಿ ಹ್ಯಾಗೋ ಹಾಗೆಯೇ ಆಸ್ಯದ ತುರ್ಕಿಯಲ್ಲಿಯೂ ಅವರ ರಾಜ್ಯಭಾರಕ್ಕೆ ಮೆಚ್ಚುವ ಶೀಮೆ ಒಂದೂ ಇಲ್ಲ. ಅವರ ಅಧಿಕಾರ ಹೋದರೆ ಸಾಕೆಂದು ಆ ಕಡೆಯ ಸರ್ವ ಶೀಮೆಗಳವರ ಮನಃಪೂರ್ವಕ ಅಪೇಕ್ಷೆ; ಆದ್ದರಿಂದ ರುಸ್ಯರು ಅರ್ಮೇನ್ಯವನ್ನು ಕೈವಶ ಮಾಡಿ ಕೊಂಡರೆ, ಪಾರ್ಶಿಕೊಲ್ಲಿ ವರೆಗೆ ಸಮಸ್ತ ಆಸ್ಯದ ತುರ್ಕಿಸ್ಥಾನಕ್ಕೆ ಅವರೇ ಧೊರೆಗಳಾಗುವರು.

ಸುರ್ಯ ದೇಶದ ಬೇರುತ್ ದಮಸ್ಕ ಮುಂತಾದ ಪಟ್ಣಗಳಲ್ಲಿ ಮುಸಲ್ಮಾನ ಗಂಡಸರು ಯುದ್ಧಕ್ಕೆ ಹೋಗ ಬೇಕಾದ್ದರಿಂದ ಅವರ ಹೆಂಡರು ಮಕ್ಕಳಿಗೆ ಉಣ್ಣಲಿಕ್ಕೂ ತಿನ್ನಲಿಕ್ಕೂ ಗತಿ ಇಲ್ಲದೆ ಅವರ ಅವಸ್ಥೆ ಬಹುಶಾ ದುಷ್ಕಾಲಗ್ರಸ್ತರ ಅವಸ್ಥೆಯಂತೆಯೇ ಆಗಿದೆ; ಅವರಿಗೋಸ್ಕರವಾಗಿ ಅಲ್ಲಿಯ ಕ್ರೈಸ್ತರು ವಂತಿಗೆಯಿಂದ ಹಣ ಕೂಡಿಸಿ ಸಹಾಯ ಮಾಡುತ್ತಾ ಇದ್ದಾರೆ.

ಜಗತ್ಪ್ರಸಿದ್ಧರಾದ ಕೆಲ ಮಹಾ ಪುರುಷರ ಪ್ರಾಯ ಎಷ್ಟೆಂದರೆ—ಪ್ರಿನ್ಸ್ ಬಿಸ್ಮಾರ್ಕರೆಂಬ ಜರ್ಮನಿಯ ಪ್ರಧಾನಿಗಳ ಪ್ರಾಯ ೬೨; ಕೈಸರರದು ೮೦; ಲಾರ್ಡ್ ಗ್ರಾನ್ವಿಲ ಇವರದೂ ೬೨; ಪ್ರಿನ್ಸ್ ಗಾರ್ಚೆಕೊಫ್ ಎಂಬ ರುಸ್ಯದ ಪ್ರಧಾನಿಗಳದು ೭೯; ಲಾರ್ಡ್ ಬೀಕನ್ಸ್‌ಫೀಲ್ಡ್ ಎಂಬ ಇಂಗ್ಲಾಂಡಿನ ಮುಖ್ಯ ಪ್ರಧಾನಿಗಳದು ೭೨; ಗ್ಲಾಡಸ್ಟನ ಇವರದು ೬೮; ಫ್ರಾನ್ಸ ದೇಶದ ರಾಜಾಧ್ಯಕ್ಷ ಮೆಕಮೊಹಾನರದು ೬೯; ಪೋಪಸ್ವಾಮಿಯದು ೮೫; ಗಾರಿಬಲ್ಡಿ ಎಂಬ ಇತಲಿ ಸೇನಾಪತಿಯದು ೭೦.

ಬ್ರಿತಿಷ ಹಿಂದುಸ್ಥಾನದಲ್ಲಿರುವ ಜನಸಂಖ್ಯೆ ಎಷ್ಟೆಂದರೆ:೧೯೦, ೫೬೩,೦೪೮, ಇವರಲ್ಲಿ

| | |
|---|---|
| ಹಿಂದುಗಳು | ೧೩೯,೨೪೮,೫೬೮ |
| ಮುಸಲ್ಮಾನರು | ೪೦೮,೮೨೫,೩೭ |
| ಶಿಕ್ಕರು | ೧೧೭,೪೪೩,೬ |
| ಬೌದ್ಧರೂ ಜೈನರೂ | ೨೮೩,೨೮೫,೧ |
| ಕ್ರಿಸ್ತಿಯರು | ೮೯೬,೬೫೮ |
| ಇತರರು | ೫೧೦,೨೮೨,೩ |
| ಗೊತ್ತಿಲ್ಲದ ಮತದವರು | ೪೨೫,೧೭೫ |

ಸಿಂಹಳ ದ್ವೀಪದಲ್ಲಿ ಈ ವರ್ಷದಲ್ಲಿ ೬,೮೪೯,೭೧೧ ಮುತ್ತಿನ ಚಿಪ್ಪುಗಳು ಶಿಕ್ಕಿದವು; ಇವುಗಳಲ್ಲಿ ಸರಕಾರದ ಪಾಲಿಗೆ ಬಂದ ೫,೧೩೭,೩೯೫ ಚಿಪ್ಪುಗಳ ಹುಟ್ಟು ೧೮೯,೫೨೧ ರೂಪಾಯಿ.

ಮಧುರಾ ಜಿಲ್ಲೆಯಲ್ಲಿ ಸಾಧಾರಣವಾಗಿ ಬರುವ ಮಳೆ ಬಾರದ್ದಕ್ಕೆ ಭೂಮಿ ಪೈಮಾಯಶಿಯಿಂದ ಸರಹದ್ದು ಮಾಡಿದ್ದು ಕಾರಣವೆಂದೂ, ಹೊಗೆಭಂಡಿಯ ಗರ್ಜನೆ ಕೇಳಿ ಮೇಘಗಳು ಸಿಟ್ಟುಗೊಂಡದ್ದು ಕಾರಣವೆಂದೂ ಕೆಲವರು ಹೇಳುತ್ತಾರಂತೆ.

ಕಳೆದ ವರುಷ ಲಂಡನ ನಗರದಲ್ಲಿ ಒಂದು ನಾಯಿಗೆ ೨೭ ರೂಪಾಯಿ ಮೇರೆಗೆ ಸುಂಕ ಮಾಡಿದ್ದರಿಂದ ೧೩,೭೩,೯೩೬ ನಾಯಿಗಳಿಗೆ ೫೦೦,೩೪,೩೪,೮೪೦ ರೂಪಾಯಿ ಬರುವಂಥಾದ್ದಾಯಿತು.

ಅಲ್ಜೀರಿಯ ದೇಶದಲ್ಲಿ ಒಂದು ಶಾಯಿಯ ನದಿ ಸಿಕ್ಕಿಯದೆ. ಆ ನದಿ ಎರಡು ನದಿಗಳು ಕೂಡಿ ಸಂಗಮವಾದಂಥಾದ್ದು, ಅವುಗಳಲ್ಲಿ ಒಂದು ಲೋಹಮಿಶ್ರಿತವಾದ ಅಥವ ಹಿರೇಕಸದ ಭೂಮಿಯಿಂದ ಹರಿದು ಬರುತ್ತದೆ, ಎರಡನೇದು ಅಣಿಲೆ ಗಿಡಗಳ ಅಥವ ಆ ಜಾತಿಯ ಮರಗಳ ಅರಣ್ಯದಿಂದ ಮತ್ತು ಗಾಲಿಕ್ ಆಸಿಡ್ ಎಂಬದು ಮಿಶ್ರಿತವಾದ ಭೂಮಿಯಿಂದ ಹರಿದು ಬರುತ್ತದೆ. ಇವೆರಡು ನದಿಗಳು ಸಂಗಮವಾದಲ್ಲಿ ನೀರಿನ ರಂಗು ಕಪ್ಪಾಗಿದೆ. ಈ ಮಿಶ್ರವು ಚಲೋ ಇಂಗ್ಲಿಷ ಶಾಯಿಗೆ ಸಮವಾಗಿದ್ದು ಬರಿಯುವದಕ್ಕೆ ಉಪಯುಕ್ತವಾಗಿದೆ.

ಕಲ್ಕತದಲ್ಲಿ ಒಬ್ಬ ಕೆಲಸಿಗನು ಕ್ಷೌರ ಮಾಡುತ್ತಾ ಕೂತು ಕೊಂಡಿರುವಾಗ್ಯೆ ಒಬ್ಬ ಫಕೀರನು ಮೆಲ್ಲಗೆ ಬಂದು ವಿನಾಕಾರಣವಾಗಿ ಆ ಕ್ಷೌರಕನ ಕೈಯಿಂದ ಕತ್ತಿ ತೆಗದು ಕೊಂಡು, ಅವನ ಮೂಗು ಕೊಯಿದು ಓಡಿದನು. ಆ ಕತ್ತಿ ಕೈಯಲ್ಲೇ ಹಿಡಿದು ಕೊಂಡು ಮತ್ತೊಬ್ಬ, ಕ್ಷೌರಕನ ಬಳಿಗೆ ಬಂದು, ಅವನ ಮೂಗೂ ಕೊಯ್ಯಲಿಕ್ಕೆ ಅವನ ಮೇಲೆ ಬೀಳುವಾಗ್ಯೆ ಆ ಕ್ಷೌರಕ ಬಿಡದ್ದರಿಂದ ಕೆಲವು ಘಾಯವಾದವು. ಕಡೆಗೆ ಆ ಫಕೀರನನ್ನು ಪೊಲೀಸಿನವರು ಹಿಡಿದು, ವಿಚಾರಣೆಯಾಗಿ, ನಾಲ್ಕು ವರುಷದ ಕಠಿಣ ಕಾಮಗಿರಿ ನೇಮಕವಾಯಿತು.

ಬರ್ಮ ದೇಶದಲ್ಲಿ ಬೇಗನೆ ಬರ ಬೀಳುವಂತೆ ತೋರುತ್ತದೆ; ಮಳೆ ಬಾರದೆ ಅನೇಕ ಊರುಗಳಲ್ಲಿ ನೀರಿನ ತತ್ವಾರ ಹೆಚ್ಚುತ್ತಾ ಬರುತ್ತದೆ.

ಸೋಲಾಪುರದಲ್ಲಿ ಒಬ್ಬ ಹಿಂದು ಮನುಷ್ಯ ಭಾವಿ ತೋಡಿಸಿದನು; ಚಲೋ ಝರಿ ಉಂಟಾಗ ಬೇಕಾದರೆ ನರಬಲಿ ಕೊಡ ಬೇಕೆಂತಾ ಒಬ್ಬ ಜೋಯಿಷಿ ಹೇಳಿದ್ದರಿಂದ ಅವನು ಇಬ್ಬರು ಹೊಲೆಯರಿಗೆ ಹಣ ಕೊಟ್ಟು ಹನ್ನೆರಡು ವರುಷದ ಪೋರನನ್ನು ಆ ಭಾವಿಯೊಳಗೆ ದೂಡಿಸಿ ಕೊಲ್ಲಿಸಿದನು. ಅವನ ವಿಚಾರಣೆ ಆಗುತ್ತಾ ಇರುತ್ತದೆ. ನರಬಲಿಗಳಿಂದ ಇಚ್ಛಿತಾರ್ಥ ಫಲಿತವಾಗುತ್ತದೆಂಬ ವಿಶ್ವಾಸ ಈ ದೇಶದವರಲ್ಲಿ ಬಲವಾಗಿರುವದರಿಂದ ಎಷ್ಟು ಜೀವಿಗಳು ಹಾನಿಯಾಗುತ್ತವೆ!

ಬಳ್ಳಾರಿಯಲ್ಲಿ ಮೇ ತಿಂಗಳ ಅಂತ್ಯದ ವರೆಗೆ ಮಳೆ ಬೀಳುವ ಕುರುಹುಗಳೇನೂ ಕಾಣದೆ ಕ್ಷಾಮದ ಧಾವತಿ ಹೆಚ್ಚಾಗಿ ಹೊಟ್ಟೆಗಿಲ್ಲದೆ ಜನರು, ಮುಖ್ಯವಾಗಿ ಹೆಂಗಸರು ಮಕ್ಕಳು, ಪಟ್ಣದಲ್ಲಿ ತುಂಬುತ್ತಿದ್ದರು. ತಾಯಿಗಳು ತಮ್ಮ ಮಕ್ಕಳನ್ನು ಮಾರಿ ಬಿಡುವದಕ್ಕೂ ಸಿದ್ಧವಾಗಿದ್ದರು; ಇದೇ ಪ್ರಕಾರ ಬೇರೆ ಕಡೆಯಲ್ಲಿಯೂ ಸಂಕಷ್ಟ ಪ್ರಬಲವಾಗಿತ್ತು; ಆದರೆ ವೇಲೂರು, ಕಡಪೆ, ಬಳ್ಳಾರಿ, ಈ ಪ್ರಾಂತಗಳಲ್ಲಿ ಮಳೆ ಬೀಳುವದಕ್ಕೆ ಪ್ರಾರಂಭವಾಯಿತೆಂತ ವರ್ತಮಾನವದೆ. ಮಂಗಳೂರಿನಲ್ಲಿಯೂ ಮಳೆಗಾಲ ಚನ್ನಾಗಿ ಆರಂಭವಾಗಿದೆ.

ಅಹಮದನಗರದಲ್ಲಿ ಒಬ್ಬ ಹುಡುಗನ ಮೂಗು ಒಡದು ರಕ್ತ ಹರಿಯುವದಕ್ಕೆ ಆರಂಭವಾಗಲಾಗಿ ಯೂರೋಪಿಯನ ಮತ್ತು ದೇಶೀಯ ವೈದ್ಯರು ಸರ್ವ ಉಪಾಯ ಮಾಡಿದರೂ ನಿಲ್ಲಿಸುವದು ಅಸಾಧ್ಯವಾಯಿತು. ಅವನನ್ನು ಮಲಗಿಸಿದರೆ, ಬಾಯಿಯಲ್ಲಿ ರಕ್ತ ಬರುವಂಥಾದ್ದಾಯಿತು; ಈ ಪ್ರಕಾರ ಅವಸ್ಥೆಯಾಗಿ ಮೂರನೇ ದಿವಸ ಅವನ ಪ್ರಾಣ ಹೋಯಿತು.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

ಮೇ ೨೦ರಲ್ಲಿ ಧಾರವಾಡದ ಸಭೆಯಲ್ಲಿ ೧೮ ಮಂದಿ ಹೊಸಬರು ಸ್ನಾನ ಹೊಂದಿ ಸೇರಿಸಿ ಕೊಳ್ಳೋಣಾದರು.

ನೋಬಲ್ ಎಂಬ ಮಿಶ್ಯನೆರಿಯ ಮುಖಾಂತರವಾಗಿ ಮಚಲಿ ಪಟ್ಣದಲ್ಲಿ ಕ್ರೈಸ್ತ ಧರ್ಮಾ

ರ್ಥದಲ್ಲಿ ಇಷ್ಟಗೊಂಡು, ಬೋಧನೆ ಹೊಂದಿ, ಕ್ರೈಸ್ತ ಸಭೆಯನ್ನು ಸೇರಿದ ಯುನಿ ಅಲಿ ಎಂಬವನು ಕಂಬ್ರಿಜ್ ಎಂಬ ರಾಜವಿದ್ಯಾಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಮುಗಿಸಿ, ಚರ್ಚ್ ಮಿಶ್ಯನಿನಲ್ಲಿ ದೀಕ್ಷೆ ಹೊಂದಿ, ಮಿಶ್ಯನೆರಿಯಾದನು.

ಯುದ್ಧದ ಕಾರಣದಿಂದ ರುಸ್ಯ ದೇಶದ ಬಂದರಗಳಿಂದ ತುರ್ಕ್ಯ ರಾಜ್ಯಕ್ಕೆ ಧಾನ್ಯಗಳು ಬಾರದೆ ಇರುವದರಿಂದ ತುರ್ಕ್ಯ ರಾಜ್ಯದಲ್ಲಿಯೂ ಬರ ಬಿದ್ದಂತೆ ಎಲ್ಲಾ ದವಸಗಳು ಬಹು ಪ್ರಿಯವಾಗಿ ಜನರಿಗೆ ಬಹಳ ಕಷ್ಟಕಾಲವು ಬಂದೊದಗಿದೆ.

ಬುಲ್ಗಾರ್ಯದಲ್ಲಿ ಕೆಲವು ಊರುಗಳ ಕ್ರೈಸ್ತರ ಮೇಲೆ ಅವರು ರುಸ್ಯರ ಪಕ್ಷ ಹಿಡಿದಾರು ಎಂಬ ಸಂಶಯವು ತುರ್ಕರಿಗೆ ಹುಟ್ಟಿದ್ದರಿಂದ ಆ ಊರುಗಳನ್ನು ನೆಲಸಮ ಮಾಡಿ ಬಿಟ್ಟರು.

ಬಗ್ದಾದದಲ್ಲಿಯೂ ಪಾರ್ಶಿಸ್ಥಾನದಲ್ಲಿಯೂ ಭೂತಮಾರಿ ರೋಗವು ಪ್ರಬಲವಾಗಿರುತ್ತದಂತೆ.

೯ನೇ ಪುಸ್ತಕದ ೧೭೩ನೇ ಪಾನಿನಲ್ಲಿ ಬೊನ್ನಿ ಎಂಬಲ್ಲಿಯ ಕ್ರೈಸ್ತರು ಧರ್ಮಾರ್ಥ ಹಿಂಸೆಗೆ ಗುರಿಯಾದ ವೃತ್ತಾಂತವು ಛಾಪೆಯಾಗಿ ತಿಳಿಸೋಣಾಯಿತು. ೧೮೭೫ನೇ ಇಸ್ವಿಯ ನವಂಬರ ತಿಂಗಳಲ್ಲಿ ಅವರಲ್ಲಿ ಪ್ರಥಮ ರಕ್ತಸಾಕ್ಷಿಯಾದವನು ಮರಣ ತಾಳಿದ ಸಮಯಕ್ಕೊ ಬೇರೆ ಬೇರೆ ಜನರು ಬಂಧನದಲ್ಲಿ ಬಿದ್ದರು. ಆದರೆ ಕಳೆದ ನವಂಬರ ತಿಂಗಳಲ್ಲಿ ಅವರಿಗೆ ಬಿಡುಗಡೆಯಾಯಿತು; ಹ್ಯಾಗಂದರೆ: ಅಲ್ಲಿಗೆ ವ್ಯಾಪಾರಕ್ಕೆ ಬಂದ ಕೆಲವು ವಿಲಾಯತಿಯ ಸಾವುಕಾರರೂ ನಾವಿಕರೂ ಕೂಡಿ ಕೊಂಡು, ಅವರು ಬಿಡುಗಡೆಯಾಗುವ ಹಾಗೆ ಮಾಡಿದರಂತೆ.

ಮೊದಲೊಮ್ಮೆ ಮುಂಬೈ ಸಂಸ್ಥಾನದ ಅಧಿಪತಿಗಳಾಗಿದ್ದ ಸರ್ ಬಾರ್ಟ್ಲೆ ಫ್ರೀರ್ ಎಂಬವರು ಇಂಗ್ಲಿಷ ರಾಜಾಧಿಕಾರಕ್ಕೊಳಗಾದ ದಕ್ಷಿಣಾಫ್ರಿಕದ ಆಧಿಪತ್ಯಕ್ಕೆ ಮೊಕರೂರಾಗಿ, ಆ ದಿಕ್ಕಿಗೆ ಹೊರಟು ಮುಟ್ಟಿದ್ಧಾರೆ. ಅವರು ಅಲ್ಲಿ ಮುಟ್ಟಿದ ಸಮಯಕ್ಕೆ ಟ್ರಾನ್ಸ್ವಾಲೆಂಬ ಪ್ರಜಾಧಿಪತ್ಯದ ಸೀಮೆ ಸಹ ಇಂಗ್ಲಿಷ ಸಾಮ್ರಾಜ್ಯಕ್ಕೆ ಕೂಡಿಸಿಕೊಳ್ಳೋಣಾಯಿತು.

ಈಗ ೧೫ ವರುಷ ರಾಜ್ಯಕಾರ್ಯಗಳನ್ನು ನಡಿಸುತ್ತಾ ಬಂದ ಜರ್ಮನ್ ಮಹಾರಾಜ್ಯದ ಪ್ರಧಾನ ಮಂತ್ರಿ ಬಿಸ್ಮರ್ಕ ಪ್ರಭುಗಳು ದೇಹಕ್ಷೇಮವು ಸಾಲದ ಕಾರಣ ಕೈಸರರಿಗೆ ರಾಜಿನಾಮೆ ಬರಕೊಂಡದಕ್ಕೆ ಫ್ರೆಂಚರೂ ಇಂಗ್ಲಿಷರಲ್ಲಿ ಅನೇಕರೂ ಬಿಸ್ಮರ್ಕ ಪ್ರಭುಗಳು ಇನ್ನು ವಹಿಸಿ ಕೊಳ್ಳದ ರಾಜ್ಯವು ಬಿದ್ದೋದೀತು ಎಂತ ಬಗೆದು, ಬಿದ್ದೋಗಲಿ! ಎಂತ ಬಯಸುವವರಾಗಿ ಶಾನೆ ಸಂತೋಷ ಪಟ್ಟರು. ಆದರೆ ಅವರ ಸಂತೋಷ ಕಾಲಾನುಚಿತವಾಯಿತು, ಯಾಕಂದರೆ ಕೈಸರರು ಸಮ್ಮತರಾಗದೆ, ರಜೆ ಮಾತ್ರ ಕೊಟ್ಟರು. ಅದಲ್ಲದೆ ದೇವರ ಚಿತ್ತವು ಯಾವದೊಂದು ರಾಜ್ಯ ಬಾಳಲಿ! ಎಂಬದಾಗಿರುವದಾದರೆ, ಬಿಸ್ಮರ್ಕ ಪ್ರಭುಗಳಂಥವರು ಅದಕ್ಕೆ ಇಲ್ಲದಿದ್ದರೂ, ಅದು ಬಿದ್ದೋಗದೆ ಬಾಳುವದು; ಆದರೆ ಬಿದ್ದೋಗಲಿ! ಎಂಬದಾಗಿ ಪರಾತ್ಪರನ ಚಿತ್ತವಾಗಿದ್ದರೆ, ಯಾರೂ, ಬಿಸ್ಮರ್ಕರಂಥವರಾದರೂ, ರಾಜ್ಯವ ಗೈದರೂ, ಅದು ಬಾಳದೆ ಬಿದ್ದೋದೀತು.

ಸ್ಪನ್ಯ ದೇಶದ ಕಾದಿಶವೆಂಬ ಪಟ್ಣದಲ್ಲಿ ಇತ್ತಲಾಗೆ ಪ್ರೊಟೆಸ್ಟಾಂಟರು ತಮ್ಮದೊಂದು ದೇವಾಲಯದಲ್ಲಿ ಪ್ರಾರ್ಥನೆಗೆ ನೆರೆದು ಕೊಂಡಿರುವಾಗಲೇ ಪೊಲೀಸಿನವರು ಬಂದು, ಅವರನ್ನು ಹೋಗಲಾಡಿಸಿ, ಅವರು ಮತ್ತೂ ಕೂಡಿ ಬರ ಬಾರದೆಂಬದಾಗಿ ಹುಕುಂ ಕೊಟ್ಟು ಹೋದರು. ಇಂಗ್ಲಿಷ ಸರಕಾರದ ರಾಯಭಾರಿ ಪ್ರೊಟೆಸ್ಟಾಂಟರಿಗೆ ಈ ಪ್ರಕಾರವಾಗಿ ನಡಿಸಿದ್ದು ಆಗದ ಅನ್ಯಾಯವೇ ಎಂಬದಾಗಿ ಸ್ಪನ್ಯ ಸರಕಾರಕ್ಕೆ ಪ್ರತಿವಾದಭಾವದ ಪತ್ರವನ್ನು ಬರದು ಮುಟ್ಟಿಸಿದರಂತೆ.

ಜರ್ಮನ್ ದೇಶದ ಸರಕಾರದವರೂ ಇತಲ್ಯ ದೇಶದ ಸರಕಾರದವರೂ ಇತ್ತಲಾಗೆ ಒಬ್ಬರ ಸಂಗಡ ಒಬ್ಬರು ಬಹು ವಿಶೇಷ ಪರಸ್ಪರಾನುಕೂಲವಾದ ರಾಜ್ಯಕಾರ್ಯ ಸಂಬಂಧ ಪತ್ರವ್ಯವಹಾರವನ್ನು ಸಾಗಿಸಿ ಕೊಳ್ಳುತ್ತಿದ್ದರಂತೆ.

ಪೋಪಸ್ವಾಮಿ ಬಡ ಕಂಗಾಲ ಶೆರೆಯುವನೆಂತ ಹುಸಿ ಸುದ್ದಿಗಳನ್ನು ಹಬ್ಬಿಸಿ, ಅವನನ್ನು ಬಿಡಿಸಿ, ತನ್ನಧಿಕಾರವನ್ನು ನಡಿಸೋದಕ್ಕೆ ಅವನಿಗೆ ತಿರಿಗಿ ಆಸ್ಪದವಾಗುವಂತೆ ಯುದ್ಧ ಕಾಟಕಾಯಿಗಳನ್ನಾದರೂ ಮಾಡ ಬೇಕೆಂಬದಾಗಿ ಯೇಸುವಿತರು ಹೇಳಿ, ಬೋಧನೆ ಕೊಟ್ಟು, ರೋಮನ್ ಕಥೋಲಿಕರನ್ನು ಎಬ್ಬಿಸಿ ರೇಗಿಸುತ್ತಿದ್ಧಾರೆ. ಓಸ್ತ್ರಿಯದಲ್ಲಿಯೂ ಇಂಗ್ಲಿಷ ಕಥೋಲಿಕರಲ್ಲಿಯೂ ವಿಶೇಷವಾಗಿ ಫ್ರೆಂಚ ದೇಶದಲ್ಲಿಯೂ ಯೇಸುವಿತರ ಈ ಬಗೆಯ ಸಂಚುಗಳಿಗೆ ಬಹಳ ಇಂಬು ಶಿಕ್ಕುತ್ತದಂತೆ. ಫ್ರೆಂಚ ರಾಜಸಭೆ ಇದೇ ಸಂಬಂಧದಿಂದ ವಿಭೇದವಾಗಿ, ದಿವಾಣದವರು ಬದಲಿಸೋಣಾದರು. ಅವೇ ಸಂಚುಗಳು ಇತಲ್ಯ ಸರಕಾರಕ್ಕೂ ಜರ್ಮನ್ ಸರಕಾರಕ್ಕೂ ಇತ್ತಲಾಗೆ ಬಹು ಪರಸ್ಪರಾನುಕೂಲವಾದ ಕಾರ್ಯಗಳು ನಡೆಯುತ್ತಿದ್ದದಕ್ಕೆ ಕಾರಣವಾದವಂತೆ.

೫೦ ವರುಷಗಳ ಹಿಂದೆ ಪೋಪನಿಗೆ ಅಧ್ಯಕ್ಷತೆಯ ದೀಕ್ಷೆ (ಪ್ರತಿಷ್ಠೆ) ಆದ್ದಕ್ಕೆ ಜ್ಞಾಪಕಾರ್ಥವಾಗಿ ಕಳೆದ ಮೇ ತಿಂಗಳಲ್ಲಿ ಮಹೋತ್ಸವವಾಯಿತು. ಅದಕ್ಕೆ ೫೦ ಸಾವಿರದ ಮೇಲೆ ಪೋಪಸ್ವಾಮೀ ಭಕ್ತರು ಅಷ್ಟದಿಕ್ಕಿನಿಂದಲೇ ರೋಮಪುರಕ್ಕೆ ಯಾತ್ರಿಕರಾಗಿ ನೆರೆದು ಕೊಂಡರು. "ಪೇತ್ರ ಕಾಸು," ದಕ್ಷಿಣೆ ಮೊದಲಾದ ಹೆಸರಿನಲ್ಲಿ ಪೋಪನ ಖಜಾನೆಗೆ ಬಿದ್ದ ಮತ್ತು ಬೀಳುತ್ತಿರುವ ಹಣಗಳು ಅಗಣಿತ; ಆದರೂ ಪೋಪನು ಬಡ ಕಂಗಾಲನಂತೆ.

ಚೀನ ದೇಶದ ೮ ಜಿಲ್ಲೆಗಳಲ್ಲಿಯೂ ಘೋರ ಬರವು ಬಿದ್ದಿರುತ್ತದಂತೆ. ಈ ದೇಶದ ಸರಕಾರದ ಕೈ ಬಹು ಉದ್ದವೇ ಮನಸ್ಸು ಬಹು ದೊಡ್ಡದೇ ಆಗಿದ್ದಾಗ್ಯೂ, ಬರ ಬಿದ್ದ ನಮ್ಮ ದೇಶದವರಿಗೆ ಬಹಳ ಬಹಳ ಕಷ್ಟವಿರುತ್ತದೆ. ಚೀನ ದೇಶದ ಸರಕಾರದ ಮಾತು ಹಾಗಲ್ಲದಿರಲಾಗಿ ಆ ಜಿಲ್ಲೆಗಳವರಿಗೆ ಎಷ್ಟೋ ಕಷ್ಟವಿದ್ದೀತು! ಸಾವಿರ ಸಾವಿರ ಕಟ್ಟಳೆಯಾಗಿ ಅವರು ಹೊಟ್ಟೆಗಿಲ್ಲದೆ ಸಾಯುತ್ತಾರಂತೆ.

ಪಾರ್ಶಿಸ್ಥಾನದ (ತೆಹೆರಾನವೆಂಬದು ಅದರ ರಾಜಧಾನಿ) ಸರಕಾರವೂ ಅಫಘಾನಿಸ್ಥಾನದ (ಕಾಬೂಲವೆಂಬದು ಇದರ ರಾಜಧಾನಿ) ಸರಕಾರವೂ ದೌಡಿನ ಬಗ್ಯೆಯೂ ಬಚಾವಿನ ಬಗ್ಯೆಯೂ ತುರ್ಕರಿಗೂ ಇಂಗ್ಲಿಷರಿಗೂ ಅನನುಕೂಲವಾದಂಥ, ರುಸ್ಯರಿಗೆ ಅನುಕೂಲವಾದಂಥ ಒಪ್ಪಂದ ಮಾಡಿ ಕೊಂಡರಂತೆ.

ರುಸ್ಯರಿಗೂ ತುರ್ಕರಿಗೂ ಶುರುವಾಗಿ ನಡೆಯುವ ಯುದ್ಧವು ಏಳು ವರುಷದ ಹಿಂದೆ ಫ್ರೆಂಚರಿಗೂ ಜರ್ಮನರಿಗೂ ನಡೆದ ಯುದ್ಧಕ್ಕೆ ಬಹಳ ಹೋಲಿಕೆಯಾಗಿರುತ್ತದಂತೆ. ಫ್ರೆಂಚರು ಅಂದು ಕೋಟೆ ಕಿಲ್ಲೆಯಿಲ್ಲದ ಜರ್ಮನ್ ಪ್ರಾಂತ್ಯ ಪಟ್ಟಣಗಳ ಮೇಲೆ ಫಿರಂಗಿಗಳನ್ನು ಸುಟ್ಟು ಗುಂಡುಗಳನ್ನು ಹಾರಿಸಿದಂತೆ ತುರ್ಕರು ದನೂಬ (ದೊನಾವ) ಎಂಬ ನದಿಯ ಆಚೆಯ ಪ್ರಾಂತ್ಯ ಪಟ್ಟಣಗಳ (ರುಮೇನ್ಯವೆಂಬ ದನೂಬಿಕ ಸಂಸ್ಥಾನಗಳಿಗೆ ಶೇರಿದ ಪಟ್ಟಣಗಳ) ಮೇಲೆ ಫಿರಂಗೀ ಗುಂಡುಗಳನ್ನು ಹಾರಿಸಿ, ಅವನ್ನು ಹಾಳು ಮಾಡಲಿಕ್ಕೆ ಹತ್ತಿದರು. ತುರ್ಕರು ಹೀಗೆ ನಡಿಸಿದ್ದಕ್ಕೆ ಈ ವರೆಗೆ ಸುಲ್ತಾನನಿಗೆ ಮೇಲೊಡೆಯನಿಗೆಂತ ಕಪ್ಪ ಸಲ್ಲಿಸುತ್ತಾ ಬಂದ ರುಮೇನ್ಯರು ಸಹ ತುರ್ಕರಿಗೆ ಕತ್ತೀ ಮಾತು ಕೊಟ್ಟು, ರುಸ್ಯರನ್ನು ಕೂಡಿ ಕೊಂಡು, ತುರ್ಕರನ್ನು ಎದುರಿಸ ತೊಡಗಿದ್ಧಾರೆ. ಮತ್ತು ಜರ್ಮನರು ಅಂದು ಫ್ರೆಂಚ ಕೋಟೆ ಬಂದರ ಮೇಲೊಂದನ್ನು ಆವರಿಸಿ ಕೊಂಡು, ಮುತ್ತಿಗೆಗೆ ಬೇಕಾದಷ್ಟು ದಂಡು ಅಲ್ಲಲ್ಲಿ ಬಿಟ್ಟು, ಮುಖ್ಯ ಸೇನಾಂಗವನ್ನು ಮುಂದೆ ಮುಂದೆ ಕೂಚು ಮಾಡಿಸಿದಂತೆ ರುಸ್ಯರು ತುರ್ಕ್ಯ ಅರ್ಮೇನ್ಯದಲ್ಲಿ ಕೋಟೆಗಳನ್ನು ಆವರಿಸಿ, ಮುತ್ತಿಗೆ ಹಾಕಿ ಮುಂದೆ ಮುಂದೆ ಕೂಚು ಮಾಡುತ್ತಿದ್ಧಾರಂತೆ. ಇತ್ತಲಾಗೆ ರುಸ್ಯರು ಅರ್ಮೇನ್ಯದಲ್ಲಿ ಮತ್ತೂ ಎರಡು ಕಿಲ್ಲೆಗಳನ್ನು ಸಾಧಿಸಿ, ಹಿಡು ಕೊಂಡರು. ಅವುಗಳಲ್ಲಿ ಒಂದಾದ ಅರ್ದಹಾನೆಂಬ ಕೋಟೆ ರುಸ್ಯರಿಗೆ ವಶವಾದಲ್ಲಿ ೮೨ ಫಿರಂಗಿಗಳೂ ಮದ್ದು ಗುಂಡು ಮುಂತಾದ ರಸ್ತೂ ಅವ

ರಿಗೆ ಕೈವಶವಾಯಿತಂತೆ. ರುಸ್ಯರು ಮುಟ್ಟಿ ಶೇ
ರಿದ ಕಡೆಗಳಲ್ಲೆಲ್ಲಾ ತಮ್ಮ ರಾಜ್ಯಾಧಿಕಾರವನ್ನು
ಸ್ಥಾಪಿಸಿ, ಆಯಾ ಜನರಿಗೆ ತಮ್ಮ ಅಧಿಕಾರಕ್ಕೊ
ಳಗಾದವರಿಗೆಂತ ನಡಿಸಿ, ರಾಜ್ಯಪರಿಪಾಲನೆ ಮಾ
ಡುತ್ತಾ ಬರುತ್ತಾರೆ. ಶೈಕ್ ಉಲ್ ಇಸ್ಲಾಮ್
ಎಂಬ ಮಹಮ್ಮದಿ ಜಗದ್ಗುರು ಈ ಯುದ್ಧವು
ಧರ್ಮಾರ್ಥ ಯುದ್ಧವೆಂತ ಸಾರಿಸಿ, ಮಹಮ್ಮದಿ
ಮತಸ್ಥರೆಲ್ಲರು ಅದಕ್ಕೆ ಶೇರಿ, ಎದೆಗೊಟ್ಟು,
ಧರ್ಮಾರ್ಥ ಮರಣದ ಪುಣ್ಯಾತಿಶಯವನ್ನು
ಪಡಕೊಳ್ಳುವಂತೆ ರಾಯಸ ಹೊರಡಿಸಿದ್ದಾನೆ.
ಈ ರಾಯಸಾನುಸಾರವಾಗಿ ಮುಸಲ್ಮಾನರ ಲೋ
ಕಪ್ರಸಿದ್ಧ ಪುಣ್ಯಕ್ಷೇತ್ರವಾಗಿರುವ ಮಕ್ಕ ಎಂಬ
ಪಟ್ಣದ ಶರೀಫ್ ಎಂಬ ಮುಖ್ಯಸ್ಥನು ೪,೦೦೦ ರಾ
ಣುವೆಯವರನ್ನು ಸೌರಿಸಿ, ರಣರಂಗಕ್ಕೆ ಕಳು
ಹಿಸಿ ಕೊಟ್ಟನು—ಈ ವರೆಗೂ ರುಸ್ಯರು ವಿಲಾ
ಯತಿಯ ತುರ್ಕ್ಯ ರಾಜ್ಯದಲ್ಲಿ ಹೆಚ್ಚಿನ ಜಯ
ವನ್ನು ಹೊಂದಿ, ಏನಾದರೂ ಸ್ವಾಧೀನ ಮಾಡಿ
ಕೊಂಡ ವರ್ತಮಾನವಿಲ್ಲದಿದ್ದರೂ, ಆಸ್ಯಕ್ಕೆ
ಶೇರಿದ ರಣಭೂಮಿಯಲ್ಲಿ ತಕ್ಕಷ್ಟು ಜಯಪ್ರದ
ರಾಗುತ್ತಾ ಬಂದಿದ್ದಾರೆ. ಅವರು ತುರ್ಕ್ಯ ಅರ್ಮೇ
ನ್ಯವನ್ನು ಆಕ್ರಮಿಸಿ, ಸ್ವತಂತ್ರಿಸಿ ಕೊಳ್ಳ ಶಕ್ತ
ರಾದರೆ, ಬಾಬಿಲೋನ್ಯವೆಂಬ ಶೀಮೆಯನ್ನೂ
(ಇರಕ್ ಅರಬಿ ಅಥವಾ ಖಲ್ದಿಯ ಶೀಮೆಯನ್ನು)
ವಶೀಕರಿಸಿ ಕೊಳ್ಳುವ ಮನಸ್ಸು ಅವರಿಗೆ ಆಗ
ಲಿಕ್ಕೆ (ಇರಲಿಕ್ಕೂ) ಸಾಕು. ಅವರಿಗೆ ಅಷ್ಟು
ಸ್ವಾಧೀನವಾದರೆ, ಯುಫ್ರಾತ ಮತ್ತು ತಿಗ್ರಿಸ
ಎಂಬ ನದರಾಜರನ್ನೂ ಇವರ ಪ್ರಾಂತ್ಯಗಳನ್ನೂ
ಸ್ವತಂತ್ರಿಸಿ ಕೊಂಡವರು "ಬಸ್ರೋರಾ" ಎಂಬ
ಬಂದರವನ್ನೂ ಪಾರ್ಶಿಕೊಲ್ಲಿ ಎಂಬ ಸಮುದ್ರದ
ಬಾಗಲನ್ನೂ ಹಿಡುಕೊಂಡು, ಹಾಗಾದರೆ ಹಿಂದು
ಸ್ಥಾನಕ್ಕಾದರೂ ಬರಲಿಕ್ಕೆ ಮಾರ್ಗವನ್ನು ಬಿಡಿಸಿ
ಕೊಂಡ ಹಾಗಾದೀತೇನೋ? ಆಗುವಂಥಾದ್ದೇ
ನೆಂತ ಸದ್ಯಕ್ಕೆ ಯಾರೂ ತಪ್ಪದಂತೆ ಹೇಳಿ ತಿಳಿ
ಸಲಿಕ್ಕಾಗದು. ಆದರೆ ಈ ಯುದ್ಧದ ಸಂಬಂಧ
ದಲ್ಲಿ ಮಹಾ ಮಹತ್ತಾದ ಕಾರ್ಯಗಳು ತೊಡಗಿ
ಸಾಗಲಿಕ್ಕೂ, ನೆರವೇರಲಿಕ್ಕೂ ಸಾಕು. "ನಿನ್ನ
ರಾಜ್ಯ ಬರಲಿ!" ಎಂಬದಾಗಿ ಕ್ರೈಸ್ತರೆಲ್ಲರು
ಸದ್ಯಕ್ಕೆ ಬಹಳ ಮನಃಪೂರ್ವಕವಾಗಿ ಪ್ರಾರ್ಥಿಸಿ
ಬೇಡಿ ಕೊಳ್ಳಲಿಕ್ಕೆ ಈಗಿನ ಕಾಲದಲ್ಲಿ ಹ್ಯಾಗೂ
ಬಹಳ ಆಸ್ಪದವೂ ಕಾರಣವೂ ಉಂಟೆಂಬದಕ್ಕೆ
ಸಂದೇಹವಿಲ್ಲಾ. ರುಸ್ಯರ ಪಶ್ಚಿಮ ದಿಕ್ಕಿನ ಸೈ
ನ್ಯವು ದಂಡಿಳಿದು ಕೊಂಡಿರುವಲ್ಲಿ ಇತ್ತಲಾಗೆ ಅತಿ
ವೃಷ್ಟಿಯಾಗಿ ನೆರೆಯಾದದರಿಂದ, ದನೂಬ ನದಿ
ಯನ್ನು ದಾಟಿ, ತುರ್ಕ್ಯ ರಾಜ್ಯದೊಳನುಗ್ಗಲಿಕ್ಕೆ
ರುಸ್ಯರಿಗೆ ಅನುವಾಗದೆ, ಎಡತಡೆಯಾಯಿತು; ಆ
ದರೂ ಅವರು ಹೊತ್ತು ಸುಮ್ಮನೆ ಕಳೆಯದೆ ದಾಟ
ಲಿಕ್ಕೂ ದಾಟಿದ ಕೂಡಲೇ ಕಾಳಗವನ್ನು ಬಲಪೂ
ರ್ಣವಾಗಿ ತೊಡಗಿಸಲಿಕ್ಕೂ ಸೌರಣೆ ಮಾಡಿ, ಅ
ವಶ್ಯವಾದ್ದೆಲ್ಲವನ್ನು ಒದಗಿಸಿ, ಹವಣಿಸಿ ಕೊಳ್ಳು
ತ್ತಿದ್ದಾರೆ. ತುರ್ಕರು ದಾಟಿ ಬರಲಿಕ್ಕೆ ಕೂಡದ
ಹಾಗೆಯೂ ಅವರ ನೌಕಾಸೇನಾಬಲವು ಹೆಚ್ಚಿನ
ಅನರ್ಥ ನಡಿಸಲಿಕ್ಕೆ ಕೂಡದ ಹಾಗೆಯೂ
ರುಸ್ಯರು ತಕ್ಕಷ್ಟು ಉಪಾಯಗಳನ್ನು ಯೋ
ಚಿಸಿ ಮಾಡಿದ್ದಾರೆ. ರುಸ್ಯರು ದಾಟುವ ಠಾವು
ಯಾವದು? ಎಂಬದು ತುರ್ಕರಿಗೆ ತಿಳಿಯದ
ಕಾರಣ ಅವರು ನದಿಯ ಈಚೆಯಲ್ಲೆಲ್ಲಾ ದಂಡಿ
ಳಿದು ಕಾಯ ಬೇಕು. ಆದರೆ ಹೀಗೆ ಕಾಯುವ
ಸೈನ್ಯವು ಬಹಳ ಉದ್ದ ಪ್ರಾಂತ್ಯದಲ್ಲಿ ಹರಡಿ
ಬಿದ್ದು ಕೊಂಡಿರುವದರಿಂದ ಎಲ್ಲೆಲ್ಲಿಯೂ ಹೆಚ್ಚು
ಬಲವಾಗಿರದ ತುರ್ಕರು ದಾಟುವ ರುಸ್ಯರ
ಜೋರಿಗೆ ನಿಲ್ಲಲಾರದೆ ಹೋಗಲಿಕ್ಕೆ ಸಾಕು.
ರುಸ್ಯರ ಸೇನಾಬಲವು ಮೂರು ಲಕ್ಷ ರಾಣುವೆ
ಯವರೇ. ಇವರ ಸಹಾಯಕ್ಕಿರುವ ಹಿಂದಳವು
೧೨೦,೦೦೦ ಜನ. ರುಮೇನ್ಯರು ಸಹ ಸುಮಾರು
೧ ಲಕ್ಷದಷ್ಟು ಜನರಾಗಿ ರುಸ್ಯರನ್ನು ಕೂಡಿ
ಕೊಂಡರು. ರುಸ್ಯ ಕೈಸರರು ಈ ಯುದ್ಧಕ್ಕೆ
೨, ೩ ವರುಷ ಹಿಡಿಯಲಿಕ್ಕೆ ಸಾಕು ಎಂತ ಹೇಳಿ
ದ್ದಾರಂತೆ. ಅವರ ಪ್ರಜೆಯೆಲ್ಲಾ ಮಹಾ ಗೆಲುವಿನಿಂದ
ಲೂ ಉಲ್ಲಾಸದಿಂದಲೂ ತುಂಬಿ, ಯುದ್ಧಕ್ಕೆ ಬೇ
ಕಾದ ಜನರನ್ನೂ ರಸ್ತನ್ನೂ ಹಣವನ್ನೂ, ಹಾಗಾದ
ರೆ, ತಮ್ಮ ತನುಮನಧನಗಳನ್ನೂ ಕೊಡುತ್ತಾರಂತೆ.

Printed at the Basel Mission Press, Mangalore.

# ಕ್ರೈಸ್ತ ಸಭಾ ಪತ್ರ

ಪುಸ್ತಕ ೧೦. **AUGUST 1877.** ಅಂಕೆ ೨.


**ಅಡಕವು:** ಸತ್ಯವೆಂಬದು ಸದ್ಭಕ್ತರ ಲಕ್ಷಣವು—ಮುದಿ ಮೊಖಲ್—ವಿವಿಧ ವರ್ತಮಾನಗಳು.

## ಸತ್ಯವೆಂಬದು ಸದ್ಭಕ್ತರ ಲಕ್ಷಣವು.

ನಾನು ರಾಜನಾಗಿದ್ದೇನೆ, ಹೌದು; ಸತ್ಯಕ್ಕೆ ಸಾಕ್ಷಿ ಕೊಡುವದಕ್ಕೋಸ್ಕರವೇ ನಾನು ಹುಟ್ಟಿ ಬಂದಿದ್ದೇನೆ; ಸತ್ಯದವರೆಲ್ಲರು ನನ್ನನ್ನು ಕೇಳುತ್ತಾರೆ ಎಂಬದಾಗಿ ಯೇಸು ಕ್ರಿಸ್ತನು ನ್ಯಾಯಸ್ಥಾನದಲ್ಲಿ ಹೇಳಿ, (ಯೋಹಾ. ೧೮, ೩೭.) ತಾನು ಹುಟ್ಟು ಅರಸು, ತಾನು ಈ ಲೋಕದ್ದೂ ಇಹದ್ದೂ ಆಗಿರದೆ, ಮೇಲ್ಲೋಕದ್ದೂ ಸದಾಕಾಲದ್ದೂ ಆಗಿರುವ ರಾಜ್ಯದ, ಶಾಶ್ವತ ರಾಜ್ಯ ಪದವಿಯ ಒಡೆಯನು ಎಂತಲೂ, ತನ್ನ ಕಾರುಬಾರು ಈ ಕೀಳು ಲೋಕದಲ್ಲಿ ಸಾಗಿ ಕಾಣುವಂಥಾದ್ದಾಗಿರುವಷ್ಟಕ್ಕೆ ಸತ್ಯಕ್ಕೆ ಸಾಕ್ಷಿ ಕೊಡುವದೂ ಸತ್ಯವನ್ನು ತಿಳಿಸಿ ಸಾಧಿಸಿ ಸ್ಥಾಪಿಸುವದೂ ಆಗಿದೆ ಎಂತಲೂ ವಾಗ್ಮೂಲ ಕೊಟ್ಟನು. ತಾನು ರಾಜ್ಯಾಧಿಪತಿ ಎಂಬ ಸಾಕ್ಷಿ ಕೊಟ್ಟದಕ್ಕೆ ತುಸ ಹೊತ್ತು ಮಾತ್ರ ಮುಂಚೆ ತಾನು ನರಾವತಾರವನ್ನೆತ್ತಿ ಕೊಂಡು ಬಂದ ದೇವರ ಮಗನು ಎಂಬ ವಾಗ್ಮೂಲ ಪ್ರಮಾಣರೂಪವಾಗಿ ಕೊಟ್ಟನು. ಹಾಗಾದರೆ ಯೇಸು ಕ್ರಿಸ್ತನ ರಾಜ್ಯಪದವಿ ಎಲ್ಲಿ? ಆತನ ರಾಷ್ಟ್ರವು ಯಾವದು? ಆತನು ತಿಳಿಸಿ, ಸಾಧಿಸಿ, ಸ್ಥಾಪಿಸಿದ ಸತ್ಯವು ಎಂಥಾದ್ದು? ಎಂಬುವ ವಿಷಯದ ಮಾತೆಲ್ಲವು ಅತಿ ವ್ಯಕ್ತವಾಗಿದೆ.—ಹೀಗಿರಲಾಗಿ ಸ್ವರ್ಗರಾಜ್ಯಾಧಿಪತಿಯಾದ ಆತನ ಪ್ರಜೆ ಆಗಲೂ ಆಗಿರಲೂ ಬೇಕೆಂದಿರುವವರು ಶುದ್ಧ ಪರಮಾರ್ಥಿಗಳಾಗಿ, ಸ್ವರ್ಗರಾಜ್ಯದ ನೀತಿಯನ್ನು ತಮ್ಮ ಮನೋವಾಕ್ಕಾಯಗಳಲ್ಲಿ ಕೈಕೊಳ್ಳುವವರಾಗಿ, ಆತನು ತಿಳಿಸಿ, ಸಾಧಿಸಿ ಸ್ಥಾಪಿಸಿದ ಸತ್ಯವನ್ನು ಕೈಕೊಂಡು, ಸಾಧಿಸಿ, ಪ್ರತಿಷ್ಠಿಸುವವರಾಗಿರ ಬೇಕು. ಅವರ ಭಾವವೂ ಭಾಷೆಯೂ ಮನೋಗತವೂ ಚಾಳಿಯೂ ಹಾಗಾದರೆ ಅವರ ನಡೆನುಡಿಯೆಲ್ಲವು ಯೇಸುವಿನ ಸತ್ಯಕ್ಕೆ ಅನುರೂಪವೂ ಅನುಗುಣವೂ ಆಗಿರ ಬೇಕು. ಅಂಥಾ ನಡೆನುಡಿಯಿದ್ದವರು ಯೇಸು ಈ ಲೋಕದ್ದಲ್ಲ ಸ್ವರ್ಲೋಕದ ರಾಜ್ಯಾಧಿಪತಿಯಾಗಿರುವದಕ್ಕೆ ಪರಮ ಸಂತೋಷವೂ ಸಮಾಧಾನವೂ ಉಳ್ಳವರಾಗಿ, ಆತನಿಗೆ ವಿಶ್ವಾಸಪೂರಕರಾಗಿ, ಪರಮಾರ್ಥವನ್ನು ಸಾಧಿಸಿ ಕೊಂಡು, ಪರಮ ಸಿದ್ಧಿಯನ್ನು ಹೊಂದ ಶಕ್ತರಾಗಿರುತ್ತಾರೆ.

---

## ಮುದಿ ಮೊಖಲ್.

(೭ನೇ ಪಾನಿನಿಂದ ಮುಂದೆ.)

ಮಗುವಿಗೆ ಇನ್ನು ಮುಂದೆ ಕಸಕಸೆ ಕಷಾಯವನ್ನು ಕುಡಿಸ ಬಾರದೆಂಬ ಮಾತಿಗೆ ಗ್ರೇಟ್ಲಿ ಬಿಕ್ಕಿ ಬಿರಿದು, ಬಹು ಅಕ್ಕರೆಯಿಂದಲೂ ಕನಿಕರದಿಂದಲೂ ತಮ್ಮನನ್ನು ನೋಡಿ, ತನ್ನೆದೆಗೌಚಿ ಕೊಂಡು, ಹೇಳಿದ್ದೇನಂದರೆ:

ನನ್ನರಗಿಳಿ! ಮುದ್ದಮ್ಮಣಿ! ಗಂಜಿಯನ್ನಾಗಲಿ ಕಸಕಸೆ ಕಷಾಯವನ್ನಾಗಲಿ ನಿನಗಿನ್ನು ಕೊಡ ಬಾರದಂತೆ. ಅಕಟಾ! ಮುದ್ದು ಕಂದಾ! ನಿನಗೇನು ದಕ್ಕೀತು? ಏನು ಕೊಡಲಿ? ನಿನಗೆ ಉಪವಾಸ ಹಾಕಲಿಕ್ಕೆ ಕೂಡೀತೇ? ನಿನ್ನನ್ನು ಶಮನ ಪಡಿಸುತ್ತಿದ್ದ ಕಷಾಯವನ್ನು ಇನ್ನು ಕೊಡದೆ, ನಿನ್ನನ್ನು ನಿತ್ಯಾ ಅಳಲೀಸ ಬೇಕೇ?

ಹುಡುಗಿಯ ಪ್ರಲಾಪ ಕೇಳಿ ವೊಖಲ್ ಕಂಡಾತುಂಡವಾಗಿ ಹೇಳಿದ್ದೇನಂದರೆ: "ಗ್ರೇಟ್ಲೀ! ನಿನ್ನ ಖುಷಿ! ಮಗು ಸತ್ತು ಹೋಗಲಿ! ಅಥವಾ ಖೊಜಗೂ ಆಗದವನಾಗಲಿ! ಎಂಬುವ ಮನಸ್ಸಿದ್ದರೆ, ಅದಕ್ಕೆ ಎಂದಿನಂತೆ ಮಾಡಿ, ಗಂಜಿ ತಿನ್ನಿಸಿ, ಕಷಾಯ ಕುಡಿಸು! ಆದರೆ ನಿನ್ನ ತಮ್ಮ ಬದುಕಿ, ಪುಷ್ಟನಾಗಿ, ಕ್ಷೇಮಶಾಲಿಯೂ ಬುದ್ಧಿಶಾಲಿಯೂ ಆಗ ಬೇಕೆಂದಿದ್ದರೆ, ನಿನ್ನ ತಾಯಿ ಮಾಡಿಡುವ ದಪ್ಪವಾದ ಗಂಜಿಯನ್ನು ಇನ್ನು ತಿನ್ನಿಸದೆ, ಕಸಕಸೆ ಕಷಾಯವನ್ನು ಕುಡಿಸದೆ ಇರು! ಎರಡೂ ಎಂದಿಗೂ ಬೇಡವೇ ಬೇಡಾ! ಕೇಳಿದಿಯಾ? ಮುಂಜಾನೆಗೂ ಮಧ್ಯಾಹ್ನಕ್ಕೂ ಸಂಜೆಗೂ ನಿನ್ನ ತಮ್ಮನಿಗೆ ಒಳ್ಳೇ ಹಾಲನ್ನು, ನೊರೆಹಾಲನ್ನೇ, ಕುಡಿಸುತ್ತಿರು! ಯಾವಾಗಲೂ ಒಂದೇ ಆಕಳಿನ ಹಾಲು ಗರೆದು ಕೊಡು! ಮತ್ತು ಒಂದು ಕೋಳೀ ಮೊಟ್ಟೆಯ ಹಳದಿ ಬಿಂದುವಿನ ಅರೆವಾಶಿಯನ್ನು, ಕೆಲವು ಸಮಯದ ಮೇಲೆ ಇಡೀ ಬಿಂದುವನ್ನು, ಹಾಲಿಗೆ ಕಡೆದು ಬೆರಸಿ ಕುಡಿಸು!* ನಾನು ಹೇಳಿದಂತೆ ನೀನು

---

*ಮೇಲಿನ ಮಾತು ಆಗದ ಕೆಲಸಕ್ಕೆ ಕಾರಣವಾಗದ ಹಾಗೆ ಒಂದಿಷ್ಟು ಹೆಚ್ಚಿನ ವಿವರವನ್ನು ಕೂಡಿಸಿ ಕೊಡ ತಕ್ಕದೆಂತ ತೋರುತ್ತದೆ. ತಾಯಿಯ ಮೊಲೆಹಾಲಿನಷ್ಟು ಹಿತವಾಗಿರುವ ಇತರ ಆಹಾರವು ಚಿಕ್ಕ ಮಕ್ಕಳಿಗೆ ಶಿಕ್ಕದು: ಇತರ ಹಾಲು ಆಗಲಿ, ಯಾವ ಯಾವ ಪದಾರ್ಥಗಳಾಗಲಿ ಹಿತವಿಚಾರದಲ್ಲಿ ಆ ಹಾಲಿಗೆ ಎಣೆಯಾಗದ್ದು. ಆದರೆ ಏನೊಂದು ಸಂಭವದಿಂದ ತಾಯಿಯ ಮೊಲೆಹಾಲು ಕೂಸಿಗೆ ಶಿಕ್ಕದೆ ಅಥವಾ ಆಗದೆ ಹೋಗಿ, ಬೇರೆ ಆಹಾರವು ಅವಶ್ಯವಾಗ ಬಹುದು. ಈ ಸಂಗತಿಯಾಗುವ ಪಕ್ಷಕ್ಕೆ ಮುಂದಿನ ಯುಕ್ತಿಗಳನ್ನು ಲಕ್ಷ್ಯಕ್ಕೆ ತಂದು ಕೊಳ್ಳ ತಕ್ಕದು.

ಬರೇ ಚಿಕ್ಕ ಮೊಲೆಗೂಸಿಗೆ, ಅಂದರೆ ಬರೇ ಎಳೇ ಶಿಶುವಿಗೆ, ತಾಯಿಯ ಹಾಲು ತಪ್ಪಿ ಹೋದರೆ, ಅದಕ್ಕೆ ಹ್ಯಾಗೂ ಹಾಲು ಒದಗಿಸಿ ಕೊಡ ಬೇಕೇ ಬೇಕು. ತಕ್ಕ ದಾದಿ ಇಲ್ಲದ ಅಥವಾ ಮಾಡಿ ಕೊಳ್ಳಲಿಕ್ಕೆ ಅನುವಾಗದ ಪಕ್ಷಕ್ಕೆ, ಆಕಳಿನ ಅಥವಾ ಆಡಿನ ಹಾಲನ್ನು ದೊರಕಿಸಿ ಕೊಡ ಬೇಕು. ಮೊದಲೇ ಒಂದು ಅಂಶ ಹಾಲು ಮೂರು ಅಂಶ ನೀರು (ಹಾಲನ್ನೂ ನೀರನ್ನೂ ಕಾಸಿ) ಬೆರಸಿ, ಸುಮಾರು ಎರಡೆರಡು ತಾಸಿಗೊಮ್ಮೆ ಕುಡಿಸ ಬೇಕು. ಕೆಲವು ದಿನ ಹೋಗಿ, ಹಾಲನ್ನು ಸ್ವಲ್ಪ ಸ್ವಲ್ಪ ಹೆಚ್ಚಿಸಿ, ನೀರನ್ನು ಕಡಿಮೆ ಮಾಡಿ ಕೊಡ ಬಹುದು. ಒಂದು ತಿಂಗಳಾಗುವಷ್ಟರಲ್ಲಿ ನೀರು ಎರಡು ಅಂಶ ಹಾಲು ಒಂದು ಅಂಶ ಆಗುವಷ್ಟು ಅಲ್ಪ ಸ್ವಲ್ಪವಾಗಿ ಬರ ಬರುತ್ತಾ ನೀರನ್ನು ಕಡಿಮೆ ಹಾಲನ್ನು ಹೆಚ್ಚು ಮಾಡಿ ಕೊಡ ತಕ್ಕದು. ಈ ಪ್ರಕಾರವಾಗಿ ಬರ ಬರುತ್ತಾ ಅಲ್ಪ ಸ್ವಲ್ಪವಾಗಿ ಹಾಲು ಹೆಚ್ಚು ನೀರು ಕಡಿಮೆ ಮಾಡಿ ಕೊಡುತ್ತಾ ಬಂದು, ಸುಮಾರು ಆರು ತಿಂಗಳಾಗಿ ಹೋದ ಬಳಿಕ ನೀರು ಬೆರೆಯದ ಹಾಲನ್ನು ಕುಡಿಸ ಬಹುದು. ಹೆಚ್ಚು ದಿನ ಹೋದ ಶಿಶುಗಳು ಒಂಥೊತ್ತಿಗೆ ಹೆಚ್ಚು ಹಾಲು ಕುಡಿಯ ಶಕ್ತವಾಗಿರುವದರಿಂದ, ಅವುಗಳಿಗೆ ಎರಡೆರಡು ತಾಸಿಗೊಮ್ಮೆ ಅಲ್ಲಾ, ಹೆಚ್ಚು ಹೊತ್ತು ಹೋಗಿ ಕುಡಿಸ ತಕ್ಕದು. ಹ್ಯಾಗೂ ಸಮಯಕ್ರಮವಿಲ್ಲದೆ ಕಂಡಾಬಟ್ಟೆಯಾಗಿ ಹುಡುಗರಿಗೆ ಕುಡಿಸಲೂ ಉಣ್ಣಿಸಲೂ ಬಾರದು. ಆಕಳನ್ನು ಹೆಚ್ಚು ಸಾರಿ ಬದಲಾಯಿಸದೆ, ಒಂದೇ ಆಕಳಿನ ಹಾಲು ಕೊಡುವಂಥಾದ್ದು ಹೆಚ್ಚು ಹಿತವಾಗಿದೆ. ಒಂದು ಕೂಸಿಗೆ ಹಾಲನ್ನು ಗರೆದು ಕೊಡ ತಕ್ಕ ಆಕಳು ಕಂಡ ಕಂಡದನ್ನೂ, ಬರೇ ಎಳೇ ಹಸಿ ಹುಲ್ಲುಗಳನ್ನೂ ಮೆಲ್ಲ ಬಾರದು. ಅಂಥಾದ್ದನ್ನು ಮೆಲ್ಲುವ ಆಕಳಿನ ಹಾಲು ಅಷ್ಟು ಆರೋಗ್ಯವಾಗಿರದೆ, ಕೂಸಿನ ಹೊಟ್ಟೆಯಲ್ಲಿ ವಾಯು ನೋವುಗಳು ಹುಟ್ಟೋದಕ್ಕೂ ನಿದ್ರೆಗೇಡಿಗೂ ಕಾರಣವಾಗುವದು.—ಹಾಲನ್ನು ಕುಡಿಸುವ ಪಾತ್ರೆಗಳನ್ನು ಯಾವಾಗಲೂ ಬಹು ನಿರ್ಮಲವಾಗಿ ಶುಭ್ರವಾಗಿರಿಸಿ, ಹುಳಿ ಹಿಡಿಯದ ಹಾಗೆ ಜಾಗ್ರತೆ ಇಡ ಬೇಕು. ಹಾಲಿಗೆ ಏನಾದರೂ ಹುಳಿ ಶೇರಿ ಹೋದರೆ, ಕೂಸಿಗೆ ಹೊಟ್ಟೇ ನೋವು, ಅತಿಸಾರ ಮುಂತಾದ್ದು ಆಗಿ, ಬಹಳ ಮೋಸವಾಗುತ್ತದೆ. ಕೆಲವು ತಿಂಗಳಾದ ಕೂಸಿಗೆ ತ್ರಾಣ ಕಡಿಮೆಯಾಗಿರುವ ಪಕ್ಷಕ್ಕೆ ಮಾಂಸಸಾರವೂ ಹಸಿ ಕೋಳೀ ಮೊಟ್ಟೆ ಕಡೆದು ಬೆರಸಿದ ಹಾಲೂ ತಕ್ಕ ಮಟ್ಟಿನಲ್ಲಿ ವಿಹಿತವಾಗ ಬಹುದು.

ತಪ್ಪದೆ ಮಾಡುವದಾದರೆ, ಮುದುಕಿಯ ಮಾತು ವಾಜಿಬಿ ಎಂತ ಕಂಡು, ಬಹಳ ಸಂತೋಷ ಪಡುವಿ."

ಆದಕ್ಕೆಪ್ರತ್ಯುತ್ತರವಾಗಿ ಗ್ರೇಟ್ಲೆ ಬಹು ನಿಧಾನವಾಗಿ ಅಂದದೇನಂದರೆ: "ಹೌದು, ನಿನ್ನ ಮಾತು ಖರೆಯಾಗಿರ ಬಹುದು; ಮುಂಜಾನೆಗೂ ಮಧ್ಯಾಹ್ನಕ್ಕೂ ಸಂಜೆಗೂ ನೊರೆಹಾಲನ್ನೂ ಕೋಳೀ ಮೊಟ್ಟೆಯನ್ನೂ ಉಣ್ಣಿಸುವದು ಮಾಟದ ಸಂಗತಿಯಲ್ಲಾ, ಆದರಿಂದ ಮಗುವಿಗೆ ಹಾನಿಯಾಗದೆ, ಹಿತವೇ ಆಗಲಿಕ್ಕೆ ಸಾಕು ಎಂದು ನಾನು ನಂಬಿ ಕೊಳ್ಳುತ್ತೇನೆ; ಆದರೆ ನನ್ನ ತಾಯಿ ನಂಬಲಿಕ್ಕಿಲ್ಲಾ; ತಾನೇ ಅಡುವ ಗಂಜಿಯನ್ನು ತಿನ್ನಿಸದೆ, ಕಸಕಸೆ ಕಷಾಯವನ್ನು ಕುಡಿಸದೆ, ನಿನ್ನ ಮಾತನ್ನು ಪರೀಕ್ಷೆ ಮಾಡಿ ನೋಡಲಿಕ್ಕೆ ಅವಳು ಎಂದಿಗೂ ಒಡಂಬಡಳು." ಆದಕ್ಕೆ ಮೊಖಲ್ ಹೇಳಿದ್ದೇನಂದರೆ: "ಹಾಗಾದರೆ ನಿನ್ನ ತಾಯಿಗೆ ತಿಳಿಸದೆ, ಅವಳಿಗೆ ಗೊತ್ತಾಗದಂತೆ, ನೀನು ಉಪಾಯದಿಂದ ನಾನು ಹೇಳಿದ ಹಾಗೆ ಮಾಡ ಬೇಕು; ಆದರೆ ಆದು ಪೂರ್ಣ ನಿನ್ನ ಮನಸ್ಸು: ನಾನು ಹೇಳಿದ ಹಾಗೆ ನೀನು ಮಾಡಿದರೆ, ನಿನ್ನ ತಮ್ಮ ಬದುಕಿ, ಬಿದಿಗೆಯ ಚಂದ್ರನಂತೆ ಬೆಳದು ಪುಷ್ಟನಾದಾನು; ನೀನು ಹಾಗೆ ಮಾಡದೆ ಹೋದರೆ, ಅವನು ಬದುಕದೆ, ಬಹಳ ದಿನ ಹೋಗದೆ ಸತ್ತು ಹೋಗುವನು. ನನ್ನ ಮಾತು ಖರೆ ಎಂತ ಹ್ಯಾಗೂ, ನೀನು ಆ ಪ್ರಕಾರ ಮಾಡಿದರಾಗಲಿ, ಮಾಡದಿದ್ದರಾಗಲಿ, ಕಂಡು ಬಾರದೆ ಹೋಗಲಿಕ್ಕಿಲ್ಲ. ಆದರೆ ಯಾರೋ ಜನರು ಬರುವ ಸದ್ದು ಈಗ ಕೇಳುತ್ತದೆ; ಆದ್ದರಿಂದ ನಾನೀಗ ಬಂದ ದಾರಿ ಹಿಡಿದು ನನ್ನ ಗುಡಸಲಿಗೆ ಹೋಗ ಬೇಕು. ಜನರಿಗೆ ನಾನು ಕಾಣ ಬಾರದು, ಕಂಡರೆ, ಏನೋ ಹೇಳಿ ಬೈಯುತ್ತಾರೆ; ಹುಡುಗರು ನನಗೆ ಮಣ್ಣು ಕಲ್ಲು ಹೊಡದು, ದುಃಖ ಕೊಡಲಿಕ್ಕಾದರೂ ಅಂಜರು. ಎಲ್ಲವರು ನನಗೆ ಕೆಡಕಳು, ಕುಟಿಲಗಿತ್ತಿ, ಮಾಟಗಾರ್ತಿ ಎಂತ ಮನಸ್ಸಿನಲ್ಲಿ ಮಾತ್ರವಲ್ಲಾ ಬಾಯಿಯಿಂದಲೂ ಹೇಳಿ ದೂಷಿಸುತ್ತಾರೆ. ನನ್ನ ಕಷ್ಟ ಎಷ್ಟೋ! ದೇವರು ಎಲ್ಲವನ್ನು ನೋಡುವಾತನೂ ಕೇಳುವಾತನೂ; ಬಡ ಮುದುಕಿಯನ್ನು ಆತನು ಕರುಣಿಸಿ, ಶೇರಿಸಿ ಕೊಳ್ಳುವನೆಂಬ ನಂಬಿಕೆ ನನಗಿಲ್ಲದಿದ್ದರೆ, ನಾನು ಅಷ್ಟು ಕಷ್ಟವನ್ನೂ ದುಃಖವನ್ನೂ ತಡೆಯಲಾರದೆ, ಏನೋ ಮಾಡಿ, ಮುಣುಗಿ ಹೋಗುತ್ತಿದ್ದೆ. ನಾನು ನಿನಗೆ ಹೇಳಿ ಕೊಟ್ಟ ಆಲೋಚನೆ ಆತನೇ, ಸೈತಾನನಲ್ಲಾ, ನನಗೆ ಪ್ರೇರಿಸಿ ತಿಳಿಸಿ ಕೊಟ್ಟದು. ಮಗಳೇ! ನೀನು ನಂಬಿ ಕೊಂಡು, ಆ ಪ್ರಕಾರವಾಗಿ ಮಾಡಿದರೆ, ನಿನ್ನ ತಮ್ಮನ ಕೆನ್ನೆ ಬಹಳ ದಿನ ಹೋಗದೆ ನಿನ್ನದರಪ್ಪಂದ ಗುಲಾಬಿ ಹೂವಿನಂತೆ ಕೆಂಪಗಾಗಿ ಶೋಭಿಸುವದು. ಹೋಗುತ್ತೇನವ್ವಾ! ಸಲಾಂ!"

ಮುದಿ ಮೊಖಲ್ ಕಾಲೆಳದು ಕೊಳ್ಳುತ್ತಾ ನಡೆದು ಹೋಗುವಾಗ್ಯೆ, ಗ್ರೇಟ್ಲೆ ತಿರಿಗಿ ತಲ್ಲಣಿಸಿ ಕೊಂಡು— "ಜೀವ ಫಕ್ಕನೇ ಹಾರಿ ಹೋಗುತ್ತದೇನೋ? ಮುಖವು ಕೆಂಪಗಾಗಿ ರಕ್ತಪ್ರಸಾದದಿಂದ ಶೋಭಿಸುವಂಥಾದ್ದಾಗುತ್ತದೇನೋ?" ಎಂಬಂತೆ ಭಯವೂ ಆಶೆಯೂ ಬೆರೆದ ಭಾವದಿಂದ ತನ್ನ ತಮ್ಮನನ್ನು ದೃಷ್ಟಿ ಇಟ್ಟು ನೋಡುವವಳಾದಳು; ಆದರೆ ಆ ಮಾತಾಗಲಿ ಈ ಮಾತಾಗಲಿ ಸಂಭವಿಸದೆ, ಮಗುವಿನ ಮುಖವು ಇದ್ದಂತೆಯೇ ಕ್ಷೀಣವೂ ನಿಸ್ತೇಜವೂ ಆಗಿದ್ದುಳಿಯುವದನ್ನು ನೋಡಿ, ಗ್ರೇಟ್ಲೆ ಮತ್ತೂ ಕನಿಕರ ಪಟ್ಟು, ಮುದುಕಿ ಹೇಳಿ ಕೊಟ್ಟ ಯುಕ್ತಿಯನ್ನು ಕೈಕೊಂಡು ನೆರವೇರಿಸಲಿಕ್ಕೆ ಕೂಡೀತೇನೋ? ಎಂಬುವ ವಿಷಯದಲ್ಲಿ ಆಲೋಚನೆ ಮಾಡುವವಳಾದಳು. ಮೊಖಲ್ ಬಂದು, ತನ್ನಾಲೋಚನೆ ಹೇಳಿ ಕೊಟ್ಟು ಹೋದ ಸಂಗತಿ ಮಗು ವಾಶಿಯಾಗುವ ಮೊದಲು ತಾಯಿಗಾಗಲಿ, ಇತರ ಮನೆಯವರಿಗಾಗಲಿ ಹ್ಯಾಗೂ ತಿಳಿದು ಬರ ಬಾರದು ಎಂದು ಗ್ರೇಟ್ಲೆಗೆ ಹೆಚ್ಚಿನ ಯೋಚನೆ ಇಲ್ಲದೆ ಸಹಜವಾದ ಮಾತೆಂಬಂತೆ ತಿಳಿಯಿತು. ಯಾಕಂದರೆ ತಾಯಿಗೂ ಇತರರಿಗೂ ಮೊಖಲ್ ಮಾಟಗಾರ್ತಿಯಿಂದ ಕೇಡಲ್ಲದೆ ಮೇಲೇನೂ ಬಾರದು ಎಂಬದು ಪೂರ್ಣ ಹೃತ್ಪಚಿತ

ವಾಗಿತ್ತು. ಆಕೆ ಮಾಟಗಾರ್ತಿಯಲ್ಲಾ ಎಂತ ಯಾರಾದರೂ ಪ್ರಮಾಣಪೂರ್ವಕವಾಗಿಯಾದರೂ ಹೇಳಿದ್ದಾದರೆ, ಆ ಗ್ರಾಮದವರೆಲ್ಲರಲ್ಲಿ ಯಾರೂ ನಂಬುತ್ತಿದ್ದಿಲ್ಲಾ. ಹೀಗಿದ್ದಾಗ್ಯೆ ಮುದುಕಿಯ ಮಾತನ್ನು ಪರೀಕ್ಷೆ ಮಾಡಿ ನೋಡ ಬೇಕಾದರೆ, ಯಾರಿಗೂ ತಿಳಿದು ಬಾರದಂತೆ ಉಪಾಯದಿಂದ ಮಾಡಿ ನೋಡ ಬೇಕೆಂಬದು ಗ್ರೇಟ್ಲಿಗೆ ಚನ್ನಾಗಿ ಕಂಡು ತಿಳಿಯಿತು. ಆದರೆ ತಾನು ಹಾಲೂ ಕೋಳೀ ಮೊಟ್ಟೆಯೂ ಯಾರಿಗೂ ಕಾಣದೆ ದೊರಕಿಸಿ ಕೂಸಿಗೆ ಉಣ್ಣಿಸಲಿಕ್ಕೆ ಕೂಡಿದರೂ, ತಾಯಿ ತಾನೇ ಅಟ್ಟು ಇಡುತ್ತಿದ್ದ ಗಂಜಿಯನ್ನೂ ಕಸಕಸೆ ಕಷಾಯವನ್ನೂ ಕುಡಿಸದೆ ಹೋಗುವದು ಹ್ಯಾಗೆ? ಎಂಬ ಪ್ರಶ್ನೆಗೆ ತಕ್ಕ ಉತ್ತರ ಬೇಗ ಕಾಣಲಿಲ್ಲಾ: ಈ ವಿಷಯದಲ್ಲಿ ಗ್ರೇಟ್ಲಿ ಇನ್ನು ಆಲೋಚನೆ ಮಾಡುತ್ತಿರುವಾಗ ಮನೆಯವರು ತಮ್ಮ ಕೆಲಸದಿಂದ ಮನೆಗೆ ಬಂದರು.

(ಮುಂದೆ ಸಾಗಿಸಲ್ಪಡುವದು.)

---

## ವಿವಿಧ ವರ್ತಮಾನಗಳು.

ಮುಂಬಾಯಿ ಪಟ್ಣದಲ್ಲಿಯೂ ಸಂಸ್ಥಾನದಲ್ಲಿಯೂ ದೇವರ ದಯದಿಂದ ಒಳ್ಳೇ ಮಳೆ ಬಂದು, ಒಕ್ಕಲಿಗರು ಬೇಸಾಯದ ಕೆಲಸಕ್ಕೆ ಪ್ರಾರಂಭಿಸಿದ್ದರು, ಆದರೆ ಮಳೆ ಥಕ್ಕನೆ ಬಿಟ್ಟು ಹೋಗಿ, ಬೆಳೆಗೆ ಅತ್ಯವಶ್ಯವಾದ ಮಳೆ ಕಡಿಮೆಯಾದದರಿಂದ ಜೂಲಾಯಿ ೧೪ರಲ್ಲಿ ಮುಂಬಾಯಿಯಲ್ಲಿಯ ಕ್ರೈಸ್ತರು ಫ್ರೀಚರ್ಚ್ ಮಿಶ್ಯನ ದೇವಾಲಯದಲ್ಲಿ ಕೂಡಿ ಬಂದು, ದೇವರು ಮಳೆ ದಯ ಪಾಲಿಸ ಬೇಕೆಂದು ಪ್ರಾರ್ಥನೆ ಮಾಡಿದರು. ಕಾರವಾರ ಧಾರವಾಡ ಅಲ್ಲಿಂದ ತಾಪಿ ನದಿಯ ವರೆಗೆ, ಕೊಂಕಣದ ತೀರದಿಂದ ಮೊಗಲು ವರೆಗೆ ಮಳೆ ಬಹುಶಾ ಕಡಿಮೆಯಂತೆ; ಬೇಸಾಯದ ಕೆಲಸ ಕೆಲವು ಕಡೆಗಳಲ್ಲಿ ಆಗಿದೆ, ಕೆಲವು ಕಡೆಗಳಲ್ಲಿ ಆಗುತ್ತಾ ಅದೆ. ಬೇಗನೆ ಮಳೆ ಬಾರದಿದ್ದರೆ, ಪರಿಣಾಮ ಕಠಿಣವಾದೀತು.

ಪಂಜಾಬಿನಲ್ಲಿ ಶತದ್ರು ನದಿಯ ಹತ್ತರ ಕ್ರೈಸ್ತರದೊಂದು ನೆಲೆ ಸ್ಥಾಪಿಸಲ್ಪಡುವಂಥಾದ್ದು ಅದೆ. ಅಮೇರಿಕದ ಒಬ್ಬ ಮಾತುಬರಿ ಧರ್ಮಿಷ್ಟ ಗೃಹಸ್ಥನು ಬೀಜ ಮುಂತಾಗಿ ಅವಶ್ಯವಾದ ಸಾಹಿತ್ಯಗಳನ್ನು ಅವರಿಗೆ ಒದಗಿಸಿ ಕೊಡುತ್ತಾನೆ.

ಉತ್ತರ ಹಿಂದುಸ್ಥಾನದಲ್ಲಿ ಮೊಂಘೀರ್ ಎಂಬಲ್ಲಿ ಒಬ್ಬ ಮಾತುಬರಿ ಹಿಂದು ಗೃಹಸ್ಥನು ಸುಮಾರು ಮೂರು ತಿಂಗಳ ಹಿಂದೆ ಕ್ರೈಸ್ತನಾದನು. ಅಂದಿನಿಂದ ಒಬ್ಬ ಬ್ರುಹ್ಮಸಮಾಜದ ಮಿಶ್ಯನೆರಿ, ಯೇಸು ಕ್ರಿಸ್ತನು ದೇವರಲ್ಲಾ ಎಂಬ ವಿಷಯದಲ್ಲಿ ಅವನಿಗೆ ಬೋಧನೆ ಕೊಡುತ್ತಾ ಅವನನ್ನು ತಿರುಗಿಸಿದ ಕಾರಣ, ಆ ಗೃಹಸ್ಥನು ಬಹಿರಂಗವಾಗಿ ಕ್ರೈಸ್ತಧರ್ಮ ಬಿಡುವವನಾದನು. ಬ್ರುಹ್ಮಸಮಾಜದವರ ನಡತೆ ಇಂಥಾದ್ದು ಆದ ಮೇಲೆ ಕ್ರೈಸ್ತ ಮಿಶ್ಯನೆರಿಗಳಿಗೆ ಅವರ ಮೇಲೆ ವೈಮನಸ್ಯ ಹುಟ್ಟುವದು ಆಶ್ಚರ್ಯವಲ್ಲಾ.

ಬಂಕಿಪುರ ದಿನಾಪುರ ಊರುಗಳ ಹೊಗೆಭಂಡಿಯ ಠಾಣ್ಯಾಗಳಲ್ಲಿಟ್ಟಂಥಾ ಧಾನ್ಯ ದವಸ ಮಳೆಯಿಂದ ಹಾಳಾಗಿ, ಕೆಲ ಲಕ್ಷ ರೂಪಾಯಿ ನಷ್ಟಕ್ಕೆ ಕಾರಣವಾಯಿತು.

ಬೆಂಗಳೂರಿನಲ್ಲಿಯ ಮುಸಲ್ಮಾನರು ತುರ್ಕರಿಗೋಸ್ಕರವಾಗಿ ಯಥೇಷ್ಟ ಹಣ ಕೂಡಿಸಿ ಕಳುಹಿಸುತ್ತಾರೆ.

ಬೆಂಗಳೂರಿನಲ್ಲಿ ವೆಸ್ಲಿಯನ್ ಸಂಘದ ಒಬ್ಬ ಮಿಶ್ಯನೆರಿ ಹದಿನೇಳು ವರುಷ ಪ್ರಾಯದ ಒಬ್ಬ ಅಯ್ಯಂಗಾರ ಬ್ರಾಹ್ಮಣ ಹುಡುಗನಿಗೆ ಸ್ನಾನ ಕೊಟ್ಟರು. ಈ ಹುಡುಗನಿಗೆ ಬಹು ಕಾಲದಿಂದ ಕ್ರೈಸ್ತನಾಗಲಿಕ್ಕೆ ಮನಸ್ಸಿದ್ದರೂ, ಪ್ರಾಯಪ್ರಬುದ್ಧನಲ್ಲದ ಕಾರಣ ಮಿಶ್ಯನೆರಿಗಳೇ ಅವನನ್ನು ಈ ವರೆಗೆ ತಡಿಸಿದರು. ಹುಡುಗನ ಕಡೆಯವರು ಬಹಳ ಗದ್ದಲ ಮಾಡಿ, ಮಿಶ್ಯನೆರಿಯ ಮೇಲೆ ಫಿರ್ಯಾದು ಮಾಡಿದ್ದಲ್ಲಿ, ಆವಾಗ್ಯೆ ಕೋರ್ಟಿನಲ್ಲಿ ಆ ಹುಡುಗನಿಗೆ ಸತ್ಯವೇದದ ವಿಷಯವಾಗಿ

ಯೂ ಕ್ರೈಸ್ತಧರ್ಮದ ವಿಷಯವಾಗಿಯೂ ವಿಚಾರಣೆಯಾದಾಗ್ಯೆ ಅವನು ಚನ್ನಾಗಿ ಉತ್ತರ ಕೊಟ್ಟನು. ಕೆಲವು ದಿನಗಳನಂತರ ಅದೇ ಮಿಶ್ಯನೆರಿ ಸುಮಾರು ಇಪ್ಪತ್ತು ವರುಷದ ಒಬ್ಬ ಸ್ಮಾರ್ತ ಬ್ರಾಹ್ಮಣನಿಗೂ ಸ್ನಾನ ಕೊಟ್ಟರು.

ಕೊಲ್ಲಾಪುರದ ಬ್ರಹ್ಮಪುರಿ ಮಿಶ್ಯನಿನಲ್ಲಿ ಕಳೆದ ಆರು ತಿಂಗಳಲ್ಲಿ ಹೆಚ್ಚು ಕಡಿಮೆ ನೂರು ಮಂದಿ ಸ್ನಾನ ತಕ್ಕೊಂಡರು. ಇತ್ತಲಾಗೆ ಕ್ರೈಸ್ತರಾದವರಲ್ಲಿ ಒಬ್ಬ ಮೂವತ್ತೆರಡು ಗ್ರಾಮಗಳ ಧನಿ; ತನ್ನ ಗ್ರಾಮಗಳಲ್ಲಿ ಪ್ರಸಂಗಿಸಿದರೆ, ಇನ್ನು ಬಹು ಜನರು ಬರುವರು ಎಂದು ಅವನು ಹೇಳುತ್ತಾನೆ. ಇನ್ನೊಬ್ಬ ವೈದ್ಯ ಸ್ನಾನ ತಕ್ಕೊಳ್ಳುವ ಮುಂಚೆ ತನ್ನ ಗೃಹದೇವತೆಗಳನ್ನು ಗೋಡೆಯಲ್ಲಿದ್ದ ಗೂಡಿನಲ್ಲಿ ಮಣ್ಣು ಹಾಕಿ ಮುಚ್ಚಿ ಬಿಟ್ಟನಂತೆ.

ಅನೇಕ ಪಟ್ಣಗಳಲ್ಲಿ ಸಾರಾಯಿ ಅಂಗಡಿಗಳು ಹೆಚ್ಚಾಗುತ್ತಾ ಅವೆ; ಅಧಿಕಾರಿಗಳು ಹಿಂದಿನ ಮುಂದಿನ ವಿಚಾರವೇನೂ ಮಾಡದೆ, ಅಂಗಡಿ ಇಡುವವರಿಗೆ ಲೈಸನ್ಸು ಕೊಡುತ್ತಾರೆ. ಈ ಕಾರಣದಿಂದ ಕೆಲವು ಕಾಲಕ್ಕೆ ಮುಂಚೆ ಬಂಗಾಳದ ಮೊಂಘೀರ ಎಂಬಲ್ಲಿಯ ಹಿಂದು ಮುಸಲ್ಮಾನ ಕ್ರೈಸ್ತ ಗೃಹಸ್ಥರು ಸರಕಾರಕ್ಕೆ ಅರ್ಜಿ ಮಾಡುವ ವಿಷಯ ಆಲೋಚನೆ ಮಾಡುವದಕ್ಕೆ ಒತ್ತಟ್ಟು ಕೂಡಿ ಬಂದರು.

ದಿಂಡುಗಲ್ಲಿಗೆ ಸಮೀಪ ಒಂದು ಗ್ರಾಮದಲ್ಲಿ ಒಬ್ಬ ಹೆಂಗಸು ವಿಚಿತ್ರವಾದ ಒಂದು ಮಗು ಹೆತ್ತಳಂತೆ; ಅದರ ತಲೆಯ ಹಿಂದೆ ಎರಡು ದೊಡ್ಡ ಚಂಡುಗಳಿದ್ದು, ಎರಡು ತಲೆಗಳಂತೆ ಕಾಣುತ್ತಿದ್ದವು; ಮಗುವಿಗೆ ಬಾಯಿ ಇತ್ತು, ಆದರೆ ಅದರಲ್ಲಿ ನಾಲಿಗೆ ಇರಲಿಲ್ಲಾ, ಕಣ್ಣುಗಳಿದ್ದವು, ಆದರೆ ಅವುಗಳಲ್ಲಿ ಗೊಂಬೆಗಳಿಲ್ಲಾ. ಅದರ ಒಂದೊಂದು ಕೈಗೆ ಒಂದೊಂದು ಕಾಲಿಗೆ ಆರಾರು ಬೆರಳುಗಳಿದ್ದವು. ಆ ಮಗು ಜನನವಾಗಿ ಆರು ತಾಸುಗಳನಂತರ ತೀರಿ ಕೊಂಡಿತು.

"ಪಯೋನಿಯರ್" ಎಂಬ ಪತ್ರದಲ್ಲಿ ಒಂದು ಅಪೂರ್ವ ವರ್ತಮಾನ ಅದೆ. ಏನಂದರೆ—ರುಸ್ಯದಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿ ನಾಲ್ಕು ಮಂದಿ ಮಕ್ಕಳನ್ನು ತಕ್ಕೊಂಡು ಭಂಡಿಯಲ್ಲಿ ಕೂತು ಪ್ರಥ ನದಿಯ ತೀರದಲ್ಲಿ ಹೋಗುತ್ತಿರಲಾಗಿ, ಅವನ ಭಂಡಿಯ ಹಿಂದೆ ತೋಳಗಳ ಹಿಂಡು ಗಂಟು ಬಿತ್ತು; ಅದನ್ನು ನೋಡಿ, ಅವರು ಭಂಡಿಯನ್ನು ಬೇಗ ಹೊಡಿಯಲಿಕ್ಕೆ ಆರಂಭಿಸಿದರು, ಆದರೆ ಆ ತೋಳಗಳು ಭಂಡಿಯನ್ನು ಬಿಡವಲ್ಲವು. ಆಗ್ಯೆ ಎಲ್ಲವರ ಜೀವ ಹೋಗುವದಕ್ಕಿಂತ ಒಬ್ಬನ ಜೀವ ಹೋದರೆ ಒಳ್ಳೇದೆಂದು ಆ ಗೃಹಸ್ಥ ಮನಸ್ಸಿನಲ್ಲಿ ನೆನಸಿ, ತನ್ನ ಹುಡುಗರಲ್ಲಿ ಒಬ್ಬನನ್ನು ಭಂಡಿಯಿಂದ ಹೊರಗೆ ಹಾಕಿದನು; ಆದರೂ ಆ ತೋಳಗಳು ಕೇಳುವದಿಲ್ಲವೆಂತ ಅವನು ಒಬ್ಬನ ಮೇಲೆ ಇನ್ನೊಬ್ಬನನ್ನು ಹೀಗೆ ಎಲ್ಲಾ ಹುಡುಗರನ್ನು ತೋಳಗಳಿಗೆ ಹಾಕಿ ಬಿಟ್ಟನು. ಅನಂತರ ಅವರಿಬ್ಬರು ಒಂದು ಊರಿಗೆ ತಲಪಿದರು; ಆ ವೇಳೆಗೆ ಆ ಗೃಹಸ್ಥನ ಹೆಂಡತಿ ನಡದ ಸಂಗತಿ ಯಾವತ್ತೂ ನ್ಯಾಯಾಧಿಪತಿಯ ಮುಂದೆ ತಿಳಿಸಿದ್ದಲ್ಲಿ ನ್ಯಾಯಾಧಿಪತಿ ಕೊಟ್ಟ ಅಭಿಪ್ರಾಯ—ಈ ಗೃಹಸ್ಥ ತನ್ನ ಎಲ್ಲಾ ಹುಡುಗರನ್ನು ತೋಳಗಳ ಮುಂದೆ ಹಾಕದಿದ್ದರೆ, ನಿಮ್ಮೆಲ್ಲವರ ಜೀವ ನಾಶವಾಗುತ್ತಿತ್ತಲ್ಲಾ. ಈ ಮನುಷ್ಯನ ಮೇಲೆ ಏನೊಂದೂ ಅಪರಾಧವಿಲ್ಲಾ. ಹೀಗೆ ಹೇಳಿ ಅವನನ್ನು ಬಿಟ್ಟು ಬಿಟ್ಟನು. ಇಂಥಾ ಪ್ರಸಂಗ ಬಿದ್ದಲ್ಲಿ ನಾವೇನು ಮಾಡುತ್ತಿದ್ದೆವು? ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಹಿಂಸ್ರ ಮೃಗಗಳಿಗೆ ಆಹುತಿ ಕೊಟ್ಟು, ನಮ್ಮ ಜೀವ ಉಳಿಸಿ ಕೊಳ್ಳುತ್ತಿದ್ದೆವೋ? ಎಂತ ನಾವು ಓದುವವರನ್ನು ಕೇಳುತ್ತೇವೆ. ("ಜ್ಞಾನೋದಯ.")

ಸೆಂಟ್ ಪೀತರ್ಸ್‌ಬರ್ಗ ಪಟ್ಣದ ಕುಲೀನ ಸ್ತ್ರೀಗಳು ಯುದ್ಧವು ಮುಗಿಯುವ ವರೆಗೆ ರೇಶಿಮೆ ವಸ್ತ್ರಗಳನ್ನೂ ಜಲ್ತಾರ ವಸ್ತ್ರಗಳನ್ನೂ ಆಭರಣಾದಿಗಳನ್ನೂ ಧರಿಸಿ ಕೊಳ್ಳದೆ, ಅದರಿಂದ ಉಳಿಯುವ ರೊಖ್ಖವನ್ನು ರಣರಂಗದಲ್ಲಿ ಘಾಯ ಪಟ್ಟವರ ಸಹಯಾರ್ಥವಾಗಿ ಕೊಡುವದಕ್ಕೆ ನಿಷ್ಕರ್ಷೆ ಮಾಡಿದ್ದಾರೆ.

ಒಬ್ಬ ಜಾಪಾನಿ ಯೌವನಸ್ಥೆ ಅಮೇರಿಕದ ಫೇರ್‌ಹೇವನ್ ಎಂಬ ಪಟ್ಟಣದಲ್ಲಿ ಕ್ರೈಸ್ತ ಸಭೆಗೆ ಶೇರಿದಳು; ಅವಳ ತಾಯಿ ತಂದೆಗಳೂ ಜಾಪಾನಿನ ಸರಕಾರದವರೂ ಅದಕ್ಕೆ ಸಮ್ಮತಿ ಪಟ್ಟಿದ್ದಾರೆ.

ಪೂರ್ವದಲ್ಲಿ ಯೆರೂಸಲೇಮಿನ ದೇವಾಲಯದೊಳಗಿದ್ದ ಪೂಜ್ಯ ಸಾಮಾನುಗಳು ಗುಡಾರ, ಸಾಕ್ಷಿಪೆಟ್ಟಿಗೆ, ಅದರೊಳಗಿದ್ದ ಹತ್ತಪ್ಪಣೆಗಳು ಬರದ ಎರಡು ಕಲ್ಲಿನ ಹಲಿಗೆಗಳನ್ನು ಯೆರೆಮೀಯನು ನೆಬೋ ಪರ್ವತದಲ್ಲಿ ಹುಗದಿಟ್ಟನೆಂತಾ ಮಕಬಾಯರ ಪುಸ್ತಕದಲ್ಲಿ ಹೇಳಿಯದೆ. ಇವುಗಳನ್ನು ಹುಡುಕಿ ತೆಗೆಯ ಬೇಕೆಂತ ಪಲೆಸ್ತೀನ ದೇಶದಲ್ಲಿ ಪುರಾತನ ವಸ್ತುಗಳನ್ನು ಶೋಧನೆ ಮಾಡುತ್ತಾ ಇರುವ ಸಂಘದವರಿಗೆ ಕೆಲವರು ಆಲೋಚನೆ ಕೊಟ್ಟಿದ್ದಾರಂತೆ.

ಉತ್ತರ ಅಮೇರಿಕದ ಕೆಲವು ಸಂಸ್ಥಾನಗಳಲ್ಲಿ ೫ ಸಾವಿರ ಕಥೋಲಿಕ ಬೋಧಕರೂ ೨ ಸಾವಿರ ವಿರಕ್ತಸ್ತ್ರೀಯರೂ ಅಲ್ಲಿಯ ಕಪ್ಪು ಜನರನ್ನು ರೋಮನಮತಕ್ಕೆ ತಿರುಗಿಸುವ ಪ್ರಯತ್ನದಲ್ಲಿದ್ದಾರೆ.

ಫಿಲದೆಲ್ಫ್ಯ ಪಟ್ಟಣದ ಕೋಲಮನ್ ಎಂಬ ಪಂಡಿತನು ಎತ್ತರದಲ್ಲಿ೮೫, ವ್ಯಾಸದಲ್ಲಿ ೫೦ ಅಡಿಯುಳ್ಳ ಒಂದು ಆಕಾಶಯಾನ ಮಾಡಿದ್ದಾನೆ. ಅದರಲ್ಲಿ ಸಣ್ಣ ಸಣ್ಣ ಪಯಣ ಮಾಡಿ ನೋಡಿ, ಕಡೆಗೆ ಅತ್ಲಂತಿಕ ಸಮುದ್ರವನ್ನು ದಾಟಲಿಕ್ಕೆ ಇದ್ದಾನಂತೆ.

ಅಮೇರಿಕದ ಯೂನೈಟೆಡ್ ಸ್ಟೇಟ್ಸ ಶೀಮೆಯ ಸಾರ್ವಜನಿಕ ಶಾಲೆಗಳಲ್ಲಿ ಹೆಚ್ಚುಕಡಿಮೆ ೯೦ ಲಕ್ಷ ಕಲಿಯುವ ಹುಡುಗರೂ ಹುಡುಗಿಯರೂ ಎರಡುವರೆ ಲಕ್ಷ ಕಲಿಸುವವರೂ ಇದ್ದಾರಂತೆ. ಹಾಗೂ ಆದಿತ್ಯವಾರದ ಶಾಲೆಗಳಲ್ಲಿ ೬೦, ೭೦ ಲಕ್ಷ ಮಂದಿ ಕಲಿಯುವವರೂ ೭೦ ಸಾವಿರ ಮಂದಿ ಕಲಿಸುವವರೂ ಇದ್ದಾರೆ.

ಪೋಪನು ಇತಲಿ ಅರಸನಿಗೆ ವಿರೋಧವಾಗಿ ತನಗೆ ಸಹಾಯ ಮಾಡ ಬೇಕೆಂದು ಫ್ರಾನ್ಸ ಓಸ್ತ್ರಿಯ ಸರಕಾರದವರನ್ನು ಬೇಡಿ ಕೊಂಡದ್ದಕ್ಕೆ, ತಮ್ಮ ರಾಜ್ಯ ತಮಗೆ ಪುನಹಾ ಶಿಕ್ಕುವಂತೆ ಇತಲಿ ಅರಸನ ಹತ್ತರ ಕೌಲು ಮಾಡುವದು ನಮ್ಮಿಂದಾಗದೆಂದು ಆ ಸರಕಾರದವರು ತಿಳಿಸಿದ್ದಾರೆ.

೧೮೭೬ನೇ ವರ್ಷದ ಬಾಸಲ್ ಮಿಶ್ಯನಿನ ವರ್ಷ ಚರ್ಯೆವಹಿಯಲ್ಲಿ ತೋರುವದೇನಂದರೆ: ತುಳು ಶೀಮೆ ದಕ್ಷಿಣ ಮಹಾರಾಷ್ಟ್ರ ನೀಲಗಿರಿ ಕೊಡಗು ಶೀಮೆಗಳಲ್ಲಿ ಕ್ರೈಸ್ತರಿರುವ ಸ್ಥಳಗಳು ೯೩; ಮುಖ್ಯ ಠಾಣ್ಯಗಳು ೨೦, ಸಣ್ಣ ಠಾಣ್ಯಗಳು ೨೨, ಉಳಿದ ೫೧ ಊರುಗಳವರು ಪ್ರಾರ್ಥನೆಗೆ ಹತ್ತರವಿರುವ ಠಾಣ್ಯಕ್ಕೆ ಬರುತ್ತಾರೆ; ಅಥವಾ ಮಿಶ್ಯನೆರಿಗಳಾಗಲಿ ಉಪದೇಶಕರಾಗಲಿ ಅವರಿದ್ದಲ್ಲಿಗೆ ಹೋಗುತ್ತಾರೆ. ಕುಂದಾಪುರಕ್ಕೆ ಸಮೀಪ ಬಸರೂರಿನಲ್ಲಿ, ಮತ್ತು ವೈನಾಡಿನಲ್ಲಿ ಕಳೆದ ವರುಷ ಹೊಸತಾಗಿ ಠಾಣ್ಯ ಸ್ಥಾಪಿಸಲಾಯಿತು. ಸಭೆ ಮುತ್ತಲ ವರುಷದಲ್ಲಿ ವರ್ಧನೆಯಾದಷ್ಟು ಹೋದ ಕಾಲ ಆಗದಿದ್ದರೂ ದೇವರ ದಯೆಯಿಂದ ೨೯೫ ಮಂದಿ ಸಭೆಗೆ ಶೇರಿದರು; ಒಟ್ಟು ಕ್ರೈಸ್ತರು ೬೦೫೨ ಮಂದಿ ಇದ್ದಾರೆ. ಈ ಲೆಖ್ಖದಲ್ಲಿ ಆಯಾ ಠಾಣ್ಯಗಳಲ್ಲಿರುವ ಮಿಶ್ಯನೆರಿಗಳೂ ಅವರ ಕುಟುಂಬವೂ ಬರಲಿಲ್ಲ. ಹೋದ ಕಾಲ ವಾಂತಿಭೇದಿ ಮೈಲಿಗೆ ರೋಗಗಳು ಪ್ರವೇಶವಾದ ಪ್ರಯುಕ್ತ ಮರಣಕ್ಕಿಂತ ಜನನ ೭೭ ಮಾತ್ರವೇ ಹೆಚ್ಚು ಆಯಿತು. ಮೂರ್ತಿಪೂಜಕರೊಳಗಿಂದ ಕ್ರೈಸ್ತಧರ್ಮವನ್ನಂಗೀಕರಿಸಿದವರು ೨೫೫. ಇನ್ನೂ ೨೯೯ ಮಂದಿ ಸ್ನಾನ ತಕ್ಕೊಳ್ಳಲಿಕ್ಕೆ ಸಿದ್ಧರಾಗಿದ್ದಾರೆ. ದಕ್ಷಿಣ ಮಹಾರಾಷ್ಟ್ರದಿಂದ ಸದ್ಯಾ ಬಂದ ವರ್ತಮಾನದಿಂದ ಗುಳೆದ ಗುಡ್ಡ ಹುಬ್ಬಳಿ ಧಾರವಾಡ ಬೆಟ್ಟಿಗೆರಿ ಊರುಗಳಲ್ಲಿ ಹೆಚ್ಚು ಕಡಿಮೆ ೪೦೦ ಮಂದಿ ಕ್ರೈಸ್ತರಾಗಲಿಕ್ಕೆ ಬಂದಿದ್ದಾರೆ. ಉಡ್ಪಿ ಮೂಲ್ಕಿ ಊರುಗಳಲ್ಲಿ ವರ್ಷದಾರಂಭದಲ್ಲಿ ೩೦೮ ಮಂದಿ ಬೋಧನೆ ಹೊಂದುವವರಿದ್ದರು; ಇವರಲ್ಲಿ ಕೆಲವರು ಅಸ್ಥಿರರೂ ಕೆಲವರು ಅಯೋಗ್ಯರೂ ಆದರೂ, ತಕ್ಕಷ್ಟು ಮಂದಿಗೆ ಸ್ನಾನವಾಯಿತು. ಸಭೆಯವರ ಅಂತಃಸ್ಥಿತಿ ವಿಚಾರಿಸಿದರೆ — ದೇವರ ಕಾರ್ಯದಲ್ಲಿ ಅಸಕ್ತರಾಗಿರುವವರು ಇದ್ದಾರೆ. ಮುಖ್ಯವಾಗಿ ಒಂದು ಠಾಣ್ಯದವರು ತಮ್ಮ ಊರಿನವರಿಗೆ ಶುಭವರ್ತಮಾನ

ತಿಳಿಸುವದಕ್ಕೆ ತಮ್ಮಿಂದಾಗುವ ಪ್ರಯತ್ನ ಮಾಡುತ್ತಾರೆ. ತಮ್ಮ ತಮ್ಮ ಸಭಾಕಾರ್ಯಗಳಿಗೆ ಖರ್ಚಿಗೆ ಕೊಡುವದರಲ್ಲಿ ವಾತ್ಸಲ್ಯವುಳ್ಳವರು ಕಡಿಮೆ; ಒಂದು ಊರಿನ ಕ್ರೈಸ್ತರು ತಮ್ಮ ದೇವಾಲಯಕ್ಕೆ ಬೇಕಾದ ದೀಪಗಳನ್ನು ತಾವೇ ಕೊಂಡು ಕೊಂಡರು. ಮಂಗಳೂರಿನಲ್ಲಿ ಧಾರವಾಡದಲ್ಲಿ ಕಣ್ಣಾನೂರಿನಲ್ಲಿ ಆದ ಮಿಶ್ಯನ್ ಹಬ್ಬಗಳಲ್ಲಿ ಬಹಳ ಮಂದಿ ಏಕಸ್ಥರಾಗಿ ಕೂಡಿ ಬಂದು, ಪ್ರಸಂಗ ವ್ಯಾಖ್ಯಾನಾದಿಗಳನ್ನು ಕೇಳಿ, ಆತ್ಮಸಂತೋಷ ಪಡುವವರಾದರು. ಜಾತಿಭೇದ ನೋಡುವಂಥಾದ್ದು ನಮ್ಮ ಕ್ರೈಸ್ತರೊಳಗಿಲ್ಲಾ. ಜಾತ್ಯಭಿಮಾನವನ್ನು ಸಹಮೂಲವಾಗಿ ಕಿತ್ತಾಕುವದು ಅಸಾಧ್ಯವೆಂಬದಾಗಿ ಪರಶೀಮೆಗಳವರು ನೆನಸುತ್ತಿರುವಾಗ್ಯೆ ಆ ವಿಷಯದಲ್ಲಿ ತೊಂದರೆಗಳು ನಮ್ಮ ಕ್ರೈಸ್ತರಲ್ಲಿ ಬಾರದಿರುವದಕ್ಕೆ ಮಿಶ್ಯನನ್ನು ಸ್ಥಾಪಿಸಿದವರು ಬುಡದಲ್ಲೇ ಘಟ್ಟಿ ಬುನಾದಿ ಹಾಕಿದ್ದು ಕಾರಣವಾಗಿದೆ. ಇದೆಲ್ಲಾ ಹೀಗಿರಲಿ; ಮನಸ್ಸಿಗೆ ಸಂತೋಷ ಕೊಡದ ಕಾರ್ಯಗಳೂ ಸಂಭವಿಸಿಯವೆ; ಒಂದೆರಡು ಶಾಣ್ಯಾಗಳಲ್ಲಿ ವ್ಯಭಿಚಾರಸಂಬಂಧವಾದ ಹೊಲಸು ಪಾಪಗಳು ಪ್ರಕಟಕ್ಕೆ ಬಿದ್ದವು. ಹೆಚ್ಚು ತಿಳಿಯುವಿಕೆ ಉಳ್ಳವರಾಗಿ, ಒಬ್ಬರಿಗೆ ಬುದ್ಧಿಮಾರ್ಗ ಹೇಳ ತಕ್ಕವರೂ ಅದರೊಳಗೆ ಬಿದ್ದು ಹೋದರು. ಒಂದು ಶಾಣ್ಯದವರು ತಮ್ಮ ದುಷ್ಕ್ರಿಯೆಗಳು ಇಲ್ಲಿ ಆಗುವದಿಲ್ಲವೆಂದು ನೋಡಿ, ರೋಮಾಯರ ಪಕ್ಷಕ್ಕೆ ಹೋಗಿ ಬಿಟ್ಟರು. ವ್ಯಭಿಚಾರದ ಕಾರಣದಿಂದ ಹೊರಗೆ ಹಾಕಿಸಿ ಕೊಂಡ ಒಬ್ಬನನ್ನು ಅವರು ಸ್ವೀಕರಿಸಿ, ಅವನನ್ನು ಉಪದೇಶಿ ಮಾಡಿದ್ದಾರಂತೆ. ಈ ಪ್ರಕಾರ ಅಘೋರ ಪಾಪಗಳೆಂಬ ಕೆಸರಿನಲ್ಲಿ ಮುಳುಗಿದವರನ್ನು ಸಭಾಪತಿಯಾದ ರಕ್ಷಕನೇ ಮೇಲಕ್ಕೆತ್ತಿ ಶುದ್ಧೀಕರಿಸ ಬೇಕು; ಮತ್ತು ಬೋಧಕರಾಗಿರುವವರು ನಿರಾಶೆ ಪಡದೆ, ಕರ್ತನಲ್ಲಿ ಧೈರ್ಯ ಮಾಡಿ ಕೊಂಡು, ಈ ಕೆಲಸದಲ್ಲಿ ಕರ್ತನಿಗೆ ಸಹಾಯಕರಾಗ ಬೇಕು; ಇದನ್ನೂ ಪ್ರಾರ್ಥನೆಯಲ್ಲಿ ಕರ್ತನ ಮುಂದೆ ಇಡೋಣ.

ಪರಜನರಿಗೆ ಶುಭವರ್ತಮಾನ ಪ್ರಸಂಗಿಸುವಲ್ಲಿ, ಮಳೆಯಾಳ ದೇಶದಲ್ಲಿ ಒಂದು ಅಪೂರ್ವ ಸಂಗತಿ ಸಂಭವಿಸಿತು, ಏನಂದರೆ—ಒಬ್ಬ ಸ್ಮಾರ್ತ ಬ್ರಾಹ್ಮಣ ತನಗೆ ಕೆಲ ಶಿಷ್ಯಮಂದಿಗಳನ್ನು ಮಾಡಿಕೊಂಡು, ಮಿಶ್ಯನೆರಿಗಳು ಎಲ್ಲಿ ಸಾರುವದಕ್ಕೆ ಬರುತ್ತಿದ್ದರೋ ಅಲ್ಲಿಗೆ ಬಂದು, ಕೈಯಲ್ಲಿ ಅರವ ಭಾಷೆಯ ಸತ್ಯವೇದಗ್ರಂಥವನ್ನು ಹಿಡುಕೊಂಡು ಮಿಶ್ಯನೆರಿಗಳ ಪ್ರಸಂಗಕ್ಕೆ ಆತಂಕ ಪಡಿಸುವವನಾದನು. ಆ ಬ್ರಾಹ್ಮಣನ ಕೈಗೆ ಭಂಗಾರದ ಬಳೆಗಳೂ ಕುತ್ತಿಗೆಗೆ ರುದ್ರಾಕ್ಷಿ ಮಾಲೆ, ಮೈಯಿಗೆಲ್ಲಾ ಭಸ್ಮಧಾರಣೆ; ಯೇಸು ಕ್ರಿಸ್ತನ ಮತವನ್ನು ನಾಶನ ಮಾಡಿ ಶಿವಾರಾಧನೆಯನ್ನು ಪುನಃಸ್ಥಾಪನೆ ಮಾಡುವದಕ್ಕೆ ತಾನು ಶಿವಾವತಾರವಾಗಿ ಬಂದಿದ್ದೇನೆಂದು ಹೇಳಿ ಕೊಳ್ಳುತ್ತಿದ್ದ. ಎಂಭತ್ತು ಮೈಲು ನೂರು ಮೈಲಿನ ಚತುರ್ಗಡಿಯ ಒಳಗೆ ಎಲ್ಲಿ ಒಂದು ಹಬ್ಬ ಉತ್ಸಹ ಆಗುವದೋ ಅಲ್ಲಿ ಮಿಶ್ಯನೆರಿಗಳು ಹೋದರೆ, ಈ ಶಿವಾವತಾರ ಪುರುಷನೂ ಬರುವನು; ಬಂದರೆ, ಪ್ರಸಂಗಕ್ಕೆ ಆತಂಕ ಪಡಿಸೋಣ ಮಿಶ್ಯನೆರಿಗಳನ್ನು ತುಚ್ಛೀಕರಿಸಿ ಬೈಯೋಣ, ತಾನು ಗೊತ್ತುಗುರಿ ಇಲ್ಲದೆ ಮನಸೋಇಚ್ಛೆ ಮಾತಾಡೋಣ, ಇದೇ ಅವನ ಉದ್ಯೋಗ; ಹೀಗೆ ಇವನ ಉಪದ್ರವ ದಿನೇ ದಿನೇ ಬಹಳವಾಯಿತು; ಕಡೆಗೆ ತಾಳಲಾರದೆ ಒಬ್ಬ ಮಿಶ್ಯನೆರಿಯವರು ಸರಕಾರಿಗೆ ಅರ್ಜಿ ಮಾಡ ಬೇಕೆಂದು ವಕೀಲನ ಸಂಗಡ ಗೊತ್ತು ಮಾಡಿದ್ದು ಬ್ರಾಹ್ಮಣನಿಗೆ ತಿಳಿದು ಬರಲಾಗಿ, ಬಂದು, ಕ್ಷಮಿಸ ಬೇಕೆಂದು ಬೇಡಿದನು. ಈಗಲಾದರೂ ಉತ್ಸವಗಳಾಗುವಲ್ಲಿ ಬಂದರೂ ಏನೂ ಆತಂಕ ಪಡಿಸದೆ, ತಾನೇ ಒತ್ತಟ್ಟು ನಿಂತುಕೊಂಡು, ಪ್ರಸಂಗ ಮಾಡುತ್ತಿದ್ದಾನೆ. ಸಾಲನಂಥವರನ್ನು ತಿರುಗಿಸಲಿಕ್ಕೆ ಸಮರ್ಥನಾದ ಕರ್ತನು ಈ ಅಜ್ಞಾನಿ ಬ್ರಾಹ್ಮಣನನ್ನೂ ತಿರುಗಿಸಲಿಕ್ಕೆ ಸಮರ್ಥನು. ಆದದರಿಂದ ಓದುವವರು ತಮ್ಮ ಪ್ರಾರ್ಥನೆಗಳಲ್ಲಿ ಅವನನ್ನೂ ವಿಂಗಡವಾಗಿ ನೆನಪು ಮಾಡಿ, ಕರ್ತನ ಸನ್ನಿಧಾನಕ್ಕೆ ತರುವವರಾ

ಗಳಿ.—ಮಿಶ್ಯನಿನ ಉಪದೇಶಿಗಳು ೬೨, ದೇಶೀಯ ಬೋಧಕರು ೬. ಇವರಲ್ಲಿ ಒಬ್ಬರು ಕಳೆದ ವರುಷದ ಅಂತ್ಯದಲ್ಲಿ ಹೊಸದಾಗಿ ಆ ಉದ್ಯೋಗಕ್ಕೆ ದೀಕ್ಷಿತರಾದರು.—ಮಿಶ್ಯನೆರಿಗಳು ೬೩; ಇವರಲ್ಲಿ ೪೫ ಮಂದಿವೈದಿಕರು; ನೀಲಗಿರಿಯಲ್ಲಿ ಮಿಶ್ಯನೆರಿಯಾಗಿದ್ದ ಅಂದ್ರೆಯಸ್ ಕೇಲರ್ ಎಂಬವರೂ, ಕಣ್ಣೂರಿನಲ್ಲಿ ಮಗ್ಗದ ಕಾರಖಾನೆ ಮೇಲ್ವಿಚಾರಕರಾಗಿದ್ದ ಗೊತ್ಲೊಬ್ ಶೊಕ್ ಎಂಬವರೂ ಕಳೆದ ವರುಷ ಸ್ವರ್ಗಸ್ಥರಾದರು.—ಇಂಗ್ಲಿಷೂ ದೇಶಭಾಷೆಯೂ ಕಲಿಸುವ ಶಾಲೆಗಳಲ್ಲಿ ಹೆಚ್ಚು ಕಡಿಮೆ ಐನೂರು ಆರುನೂರು ಹುಡುಗರಿದ್ದಾರೆ. ಒಟ್ಟಿಗೆ ೬೦ ಶಾಲೆಗಳಲ್ಲಿ ಕ್ರೈಸ್ತ ಉಪಾಧ್ಯಾಯರು ೫೨; ಉಪಾಧ್ಯಾಯೆಗಳು ೧೫; ಕ್ರೈಸ್ತರಲ್ಲದ ಉಪಾಧ್ಯಾಯರು ೨೭. ಕಲಿಯುವ ಹುಡುಗರೂ ಹುಡುಗಿಯರೂ ೨೩೦೩.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

ಕಳೆದ ಇಸ್ವಿಯಲ್ಲಿ ಬಾಸಲ್ ಮಿಶ್ಯನಿನ ಸಂಬಂಧದಲ್ಲಿರುವ ಸಭೆಗಳಲ್ಲಿ ಒಟ್ಟಿಗೆ ೯೭೪ ಜನ ಹೊಸಬರು ಸ್ನಾನ ಹೊಂದಿ ಶೇರಿದರು.

ಕಳೆದ ಇಸ್ವಿಯ ಲಂದನ್ ಮಿಶ್ಯನಿನ ರಿಪೋರ್ಟಿನಲ್ಲಿ ಕಾಣುವ ಕೆಲವು ಸಂಗತಿವಿಶೇಷಗಳ ಸಂಕ್ಷೇಪವು: ಬೆಂಗಳೂರ ಕನ್ನಡ ಸಭೆಯವರು ೨೩೧ ಮಂದಿ. ರಾತ್ರಿಭೋಜನಕ್ಕೆ ಯೋಗ್ಯರು ೮೦ ಮಂದಿ. ೬ ಜನ ಹೊಸಬರು ಸ್ನಾನ ಹೊಂದಿ, ಸಭೆಯನ್ನು ಶೇರಿದರು.—ಸಭೆಯ ತರುಣ ಸಂಘದ ಕಾರ್ಯವು ಸಫಲವಾಗಿ ಸಾಗುತ್ತಿತ್ತು. ಆದಿತ್ಯವಾರ ಮಧ್ಯಾಹ್ನಕ್ಕೆ ಸಭೆಯ ಹೆಣ್ಣು ಮಕ್ಕಳದೊಂದು ಕೂಟವು ಸಹ ಏರ್ಪಟ್ಟು, ಸಾಗುತ್ತಿರುತ್ತದೆ. ಮುಂಜಾನೆಯಲ್ಲಿ ಆದ ಪ್ರಸಂಗವು ಆ ಕೂಟದಲ್ಲಿ ಪ್ರಶ್ನೋತ್ತರರೂಪವಾಗಿ ನೆನಪು ಹುಟ್ಟಿಸಿ, ಹೃದ್ಗತ ಮಾಡೋಣಾಗುವದಲ್ಲದೆ, "ದೇಶಾಂತರಿಯ ಪ್ರಯಾಣ" ಎಂಬ ಪುಸ್ತಕಸಹ ಓದೋಣಾಗಿ, ಟೀಕಿಸೋಣಾಗುತ್ತದೆ. ಪಾಳ್ಯಯ್ಯನವರೊಬ್ಬರೇ ೧೫೭೫೦ ದೇವವಾಗ್ಗ್ರಂಥಾದಿ ಪುಸ್ತಕಗಳನ್ನು ಮಾರಿ, ಹೇರಳ ದಿವ್ಯ ಬೀಜವನ್ನು ಬಿತ್ತಲಿಕ್ಕೆ ದೈವಾನುಕೂಲ ಹೊಂದಿದರು.—ತಮಿಳ ಸಭೆಯವರು ೧೭೦ ಜನ. ರಾತ್ರಿಭೋಜನಕ್ಕೆ ತಕ್ಕವರು ೬೬ ಜನ..—ಶಾಲೆಗಳಲ್ಲಿ ೫೧೧ ಹುಡುಗಿಯರಿಗೆ, ಒಂದು ಕನ್ನಡ ಶಾಲೆಯಲ್ಲಿ ೬೭, ಇಂಗ್ಲಿಷ್ ಕನ್ನಡ ಶಾಲೆಯಲ್ಲಿ ೬೦೩ ಹುಡುಗರಿಗೆ ವಿದ್ಯಾಭ್ಯಾಸವು ಸಾಗುತ್ತದೆ. ಮಲೂರೆಂಬ ಉಪಠಾಣೆಯಲ್ಲಿ ೬೩ ಜನ ಹುಡುಗರಿಗೆ ೩೭ ಹುಡುಗಿಯರಿಗೆ ಆನೆಕಲ್ಲೆಂಬಲ್ಲಿ ೯೧ ಹುಡುಗರಿಗೆ ಪಾಠ ನಡೆಯುತ್ತದೆ.

ಬಳ್ಳಾರಿಯಲ್ಲಿಯ ಸಭೆಯಲ್ಲಿ ೪ ಜನ ಹೊಸಬರು ಸ್ನಾನದ ದ್ವಾರವಾಗಿ ಶೇರಿ ಸಭಾಂಗಗಳಾದರು. ಇತರರೂ ಅವರ ಬೆನ್ನಿನಲ್ಲಿ ಬಂದು ಶೇರ್ಯಾರೆಂಬ ಧೈರ್ಯಕ್ಕೆ ಹೆಚ್ಚಿನ ಆಸ್ಪದ ಕಾಣುತ್ತದಂತೆ.—ಪ್ರಯಾಣಪ್ರಸಂಗವೆಂಬದನ್ನು ತಕ್ಕಷ್ಟು ಸಾರ್ಥಕವಾಗಿ ನಡಿಸಲಿಕ್ಕೆ ಒಳ್ಳೇ ದೈವಾನುಕೂಲವಾಯಿತಂತೆ. ೧೨,೦೦೦ ಪುಸ್ತಕಾದಿಗಳ ರೂಪದಲ್ಲಿಯೂ ಬಹಳ ಬೀಜವನ್ನು ಬಿತ್ತಲಿಕ್ಕಾಯಿತು. ಪ್ರಯಾಣಪ್ರಸಂಗ ಮಾಡುತ್ತಿದ್ದವರಿಗೆ ಕ್ರೈಸ್ತಸಭೆಗಳು ಇಲ್ಲದ ಊರುಗ್ರಾಮಗಳಲ್ಲಿ ಅಲ್ಲ್ಯಲ್ಲಿ ಸರಕಾರಿ ನೌಕರಿಯಲ್ಲಿರುವ ಬೇರೆ ಬೇರೆ ಕಡೆಯ ಕ್ರೈಸ್ತರೂ ಶಿಕ್ಕುತ್ತಿದ್ದರು; ಆದರೆ ಇವರಲ್ಲಿ ಕೆಲವರ ವಿಷಯದಲ್ಲಿ ದುಃಖಕರವಾದ ಮಾತು ರಿಪೋರ್ಟಿನಲ್ಲಿ ಕಾಣುತ್ತದೆ; ಅಂದರೆ: ಅವರು ತಮ್ಮ ನಡೆನುಡಿಗಳಲ್ಲಿ ಸುವಾಸನೆಯಾಗಿರದೆ, ದುರ್ವಾಸನೆಯಾಗಿ, ಕ್ರೈಸ್ತಸಭೆಗೂ ಮಾರ್ಗಕ್ಕೂ ಕ್ರಿಸ್ತನಾಥನಿಗೂ ಅನ್ಯರಲ್ಲಿ ಅಪಕೀರ್ತಿ ಬರ ಮಾಡುತ್ತಿದ್ದಾರಂತೆ. ಭಕ್ತಿಸಾಧನೆಯಲ್ಲಿ ಬಹಳ ಆಲಸ್ಯವೂ ಪ್ರಪಂಚಭಾವವೂ ಅವರಲ್ಲಿ ತುಂಬಿದೆ. ಮೊದಲು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ್ಯೆ ಕಲಿಸಿದವರು ಅವರ ವಿಷಯದಲ್ಲಿ ಕ್ರೈಸ್ತಸಭೆಗೂ ಮಿಶ್ಯನಿಗೂ ಹಿತಕಾರಿಗಳಾದಾರೆಂಬದಾಗಿ ನೆಚ್ಚುತ್ತಿದ್ದಾರು; ಆದರೆ ಈಗ ನೋಡಲಿಕ್ಕೆ ಹೋದರೆ, ನೆಚ್ಚಿದ ಎಮ್ಮೆ ಕೋಣನಾಗಿ, ಕಲಿಸಿದ ಬೋಧ

ಕರ ನಂಬಿಕೆಯೂ ಪ್ರಯತ್ನವೂ ಸಾರ್ಥಕವಾಗದೆ, ಮಣ್ಣಾಗಿ ಹೋದ ಸಂಗತಿ ಮಾತ್ರ ಕಾಣುತ್ತದಂತೆ. ಇದೊಂದು ಮಹಾ ದುಃಖವಲ್ಲವೋ?

ಬೆಳಗಾವಿನ ಸಭೆಯಲ್ಲಿಯೂ ಬಹು ಸಂತೋಷಕರವಾದ ಸಂಭವಗಳ ಜೊತೆಯಲ್ಲಿ ಬಹು ದುಃಖಕರ ಸಂಗತಿಗಳೂ ಅನುಭವವಾದವಂತೆ. ಬೆಂಗಳೂರಲ್ಲಿಯೂ ಬಳ್ಳಾರಿಯಲ್ಲಿಯೂ ಹ್ಯಾಗೋ ಹಾಗೆ ಬೆಳಗಾವಿನಲ್ಲಿಯೂ ವ್ಯಾಧಿ ಬರಗಳ ಸಂಬಂಧದಿಂದಲೂ ಸಾವಿನ ಸಂಭವದಿಂದಲೂ ಹೆಚ್ಚು ಕಡಿಮೆಯಾಗಿ ಎಲ್ಲಾ ಸಭೆಯವರಿಗೆ ತಾಪತ್ರಯವೆಂಬದು ಬಹಳ ಹೆಚ್ಚಾಗಿ ಅನುಭವವಾಯಿತು. "ನೀತಿಫಲವು" ಅದರಿಂದ ಹುಟ್ಟಿ ಒದಗುವಂತೆ ಕರುಣಾಳು ಸ್ವಾಮಿ ಅನುಗ್ರಹಿಸಲಿ! ಬೆಳಗಾವಿನ ರಿಪೋರ್ಟಿನಲ್ಲಿ ಲಕ್ಷ್ಯಕ್ಕೆ ತಕ್ಕ ಒಂದು ಮಾತುಂಟು; ಏನಂದರೆ—ಸರಕಾರಿ ಶಾಲೆಗಳಲ್ಲಿ ಧರ್ಮಾರ್ಥಕ ಉಪದೇಶವೂ ಮತವಿಚಾರದ ಪಾಠವೂ ಇರಲೂ ನಡೆಯಲೂ ಬಾರದೇ ಬಾರದು ಎಂಬುವ ಕಟ್ಟಳೆ ಬಹು ಬಲವಾಗಿದ್ದರೂ, ಕ್ರೈಸ್ತಮತದ (ಮುಖ್ಯವಾಗಿ ಕ್ರಿಸ್ತನಾಥನ) ವಿಷಯದಲ್ಲಿ ಒಳ್ಳೇ ವಿರೋಧಭಾವವನ್ನು ಹುಡುಗರಲ್ಲಿ ಹುಟ್ಟಿಸಿ, ನೆಲೆಗೊಳಿಸಿ, ಬೆಳಿಸುವ ಬಗ್ಗೆ ಉಪಾಧ್ಯಾಯರು ಒಳ್ಳೇ ಎತ್ತುಗಡೆ ಎತ್ತಿ, ಶತಪ್ರಯತ್ನ ಮಾಡಲಿಕ್ಕೆ ಏನೂ ಅಡ್ಡಿಯಿಲ್ಲಾ. ಹಾಗೆ ಮಾಡುತ್ತಿದ್ದಾರಂತೆ.—ಬೆಳಗಾವಿನವರ ಈ ವಿಷಯವಾದ ಅನುಭವಕ್ಕೆ ಇತರರ ಅನುಭವವೂ ಸರಿ ಬಿದ್ದೀತು; ಆದರೆ ಎಲ್ಲಿಯಾದರೂ ಯಾರ ವಿಷಯದಲ್ಲಿಯಾದರೂ "ಬೀಜಕ್ಕೆ ತಕ್ಕ ಫಲ, ತಿಂದಿಗೆ ತಕ್ಕ ಲದ್ದಿ" ಎಂಬುವ ನೀತಿಯ ಮಾತು ಖರೆ ಮಾತೇ.

ಮದ್ರಾಸಿನಲ್ಲಿರುವ ಬೈಬಲ್ ಸಂಘದವರು ಕಳೆದ ವರುಷದಲ್ಲಿಯೂ ಬಹಳ ವ್ಯವಸಾಯ ಮಾಡಿ, ತಮ್ಮ ಕಾರ್ಯಾರ್ಥವನ್ನು ಬಹು ಸಫಲವಾಗಿ ಸಾಗಿಸಲಿಕ್ಕೆ ದೈವಾನುಕೂಲವನ್ನು ಹೊಂದಿದರು. ಅವರಿಗೆ ಸಹಾಯಾರ್ಥವಾಗಿ ಸಂದು ಬಂದ ಹಣವು ಹೆಚ್ಚಿದ್ದಲ್ಲದೆ, ಹೆಚ್ಚು ದೇವವಾಗ್ಗ್ರಂಥಗಳನ್ನು ದೇಶದಲ್ಲೆಲ್ಲಾ ಹಬ್ಬಿಸಲಿಕ್ಕೆ ಸಹ ಅನುವಾಯಿತು. ಬರವೂ ವ್ಯಾಧಿಗಳೂ ಹೆಚ್ಚು ಕಡಿಮೆಯಾಗಿ ಎಲ್ಲಾ ಕಡೆಯಲ್ಲಿ ಪ್ರಬಲವಾಗಿದ್ದ ವರುಷದಲ್ಲಾದರೂ ಅವರ ಕೆಲಸವು ವರ್ಧಮಾನವಾಗಿ, ಚನ್ನಾಗಿ ಸಾಗುತ್ತಾ ಬಂದದು ಹೆಚ್ಚಿನ ಸಂತೋಷಕ್ಕೆ ಕಾರಣವೇ.

ಮೊದಲು ಮದ್ರಾಸ್ ಬೈಬಲ್‌ಸಂಘವೆಂಬ ವೃಕ್ಷದ ಒಂದು ಶಾಖೆಯೆಂಬಂತಾಗಿದ್ದ ಬೆಂಗಳೂರ ಬೈಬಲ್ ಸಂಘವು ಇತ್ತಲಾಗೆ ಪ್ರತ್ಯೇಕವಾಗಿ, ತನ್ನ ಸ್ವಂತ ಹೆಸರಿನಲ್ಲಿ ಕನ್ನಡ ಭಾಷೆಯಾಡೋಣಾಗುವ ಶೀಮೆಗಳಲ್ಲಿ ಬೈಬಲನ್ನು ಹಬ್ಬಿಸುವ ಕಾರ್ಯವನ್ನು ಸಾಗಿಸುವದಾಯಿತು. ಮೊದಲಿನ ಛಾಪೆಯು ಕನ್ನಡ ಬೈಬಲ್ ಬಹು ದೊಡ್ಡದಾಗಿ, ವಿಶೇಷವಾಗಿ ಶಾಲೆಗಳಲ್ಲಿ ಉಪಯೋಗವಾಗಲಿಕ್ಕೂ ಹಳ್ಳಿಗ್ರಾಮಾದಿ ಜನಪದಗಳಲ್ಲಿ ಹಬ್ಬಿಸಲಿಕ್ಕೂ ಪ್ರಯಾಸವಾಗಿ, ಅನನುಕೂಲವಾದ ಪುಸ್ತಕವಾಗಿರುವ ಕಾರಣ ಬೆಂಗಳೂರ ಬೈಬಲ್‌ಸಂಘದವರು ಒಂದು ಹೊಸ ಛಾಪೆಯನ್ನು ಬಗೆದು ತೊಡಗಿಸಿದ್ದಾರೆ. ಇದು ಮಂಗಳೂರಲ್ಲಿ ಆಗಲೆಸಗಿ, ಈಗಿನ ಮಳೆಗಾಲದಲ್ಲಿ ಮುಗಿಯುವದು. ಈ ಹೊಸ ಛಾಪೆಗೆ ಸಂತೋಷಪಡಲಿಕ್ಕೆ ಬಹಳ ನ್ಯಾಯ ಕಾಣುತ್ತದೆ.

ಇವೆರಡು ಬೈಬಲ್‌ಸಂಘಗಳು ನಮ್ಮೆಲ್ಲರ ಒಲುಮೆಗೂ ಸಹಾಯಕ್ಕೂ ಬಹು ಯೋಗ್ಯವೇ: ಆದ್ದರಿಂದ ಅವರ ಕೆಲಸವು ನಮಗೆ ಒಂದು ಇಷ್ಟಕಾರ್ಯವೇ ಎಂಬದಾಗಿ ನಾವು ಕೈ ನೀಡಿ ಕಾಣಿಸ ತಕ್ಕದ್ದು.

೯ನೇ ಪುಸ್ತಕದ ೫೪ನೇ ಪಾನಿನ ೨ನೇ ಹೋಳಿನಲ್ಲಿ ಪೋಪಸ್ವಾಮಿ ತುರ್ಕರ ಪಕ್ಷಪಾತಿಯೂ ಅನುಕೂಲಿಗನೂ ಎಂಬ ಪ್ರಸ್ತಾಪ ಛಾಪೆಯಾಯಿತು. ಆ ಮಾತು ನಿಂದೆಯಾಗಿರದೆ, ನಿಜವೇ ಆಗಿದೆಂಬದಕ್ಕೆ ಪೋಪನು ಇತ್ತಲಾಗೆ ಹೆಚ್ಚಿನದೊಂದು ದೃಷ್ಟಾಂತವನ್ನು ತೋರಿಸಿ ಕೊಟ್ಟನು; ಹ್ಯಾಗಂದರೆ: ರುಸ್ಯರು ಯುದ್ಧದಲ್ಲಿ ಸೋ

ತು ಹೋಗಿ, ತುರ್ಕರು ಗೆಲ್ಲುವಂತೆ ಎಲ್ಲಾ ದೇವಾಲಯಗಳಲ್ಲಿ ಪ್ರಾರ್ಥಿಸ ಬೇಕೆಂಬದಾಗಿ ಬೊಸ್ನಿಯ ಶೀಮೆಯ ಕಥೋಲಿಕ ಸಭೆಗಳಿಗೆ ರಾಯಸ ಕಳುಹಿಸಿ ನಿರೂಪಿಸಿದನು.—ಆದರೆ ರುಸ್ಯರಿಗೆ ಅಪಜಯವಾಗಲಿಕ್ಕೆ ಸಾಕು ಎಂಬ ಭಯಕ್ಕೆ ನನಗೆ ಮೊದಲು ಆಸ್ಪದ ಕಂಡದಾದರೆ, ಪಾಪನ ಆ ನಿರೂಪವು ಈ ಭಯವನ್ನು ಪರಿಹರಿಸಿ, ರುಸ್ಯರು ಸೋತು ಹೋಗದೆ, ಜಯಶಾಲಿಗಳಾದಾರೆಂಬ ಧೈರ್ಯವನ್ನು ನನಗೆ ತಂದು ಕೊಟ್ಟೀತು; ಯಾಕಂದರೆ ೧೮೭೦ನೇ ಇಸ್ವಿಯಲ್ಲಿಯೂ ಪಾಪನೂ ಅವನ ಭಕ್ತರೂ ಜರ್ಮನರಿಗೆ ಅಪಜಯವು, ಫ್ರೆಂಚರಿಗೆ ಜಯವು ಆಗ ಬೇಕೆಂಬದಾಗಿ ಅಭಿಲಾಷಿಸಿ, ಬಹಳವಾಗಿ ಪ್ರಾರ್ಥಿಸುತ್ತಿದ್ದಾಗ್ಯೂ, ಫ್ರೆಂಚರು ಸೋತು ಹೋಗಿ, ಜರ್ಮನರು ಜಯಶಾಲಿಗಳಾದರು.—ಈ ಸರ್ತಿಗೆ ಸಹ ಪಾಪನ ಇಷ್ಟಾರ್ಥವು ಮಣ್ಣಾದೀತು. ತುರ್ಕ್ಯ ಸುಲ್ತಾನನ ಸಹಕಾರಿಯಾದವನು ಕ್ರೈಸ್ತ ಸಭೆಯ ನಾಯಕನು ಆಗಿರುವ ಕ್ರಿಸ್ತನ ಪ್ರತಿನಿಧಿಯಾಗಿದ್ದಾನೇ? ಅಂಥವನ ಪ್ರಾರ್ಥನೆಯನ್ನು ಕ್ರಿಸ್ತನಾಥನು ಕೇಳಿ ನೆರವೇರಿಸ್ಯಾನೇ?

ಕೃಷ್ಣಸಾಗರ (ಕರಿಕಡಲು) ಎಂಬ ಸಮುದ್ರದ ಕರೆಯಲ್ಲಿ ಕಟ್ಟಿರುವ ಶುಖುಮ್ಕಲೆ ಎಂಬ ರುಸ್ಯ ಕೋಟೆಯನ್ನು, ತುರ್ಕರು ನಾವೆಗಳನ್ನು ಹತ್ತಿ ಕೊಂಡು ಬಂದು, ಫಿರಂಗಿ ಗುಂಡುಗಳನ್ನು ಹಾರಿಸಿ, ನಾಶ ಮಾಡಿ, ರುಸ್ಯ ದಂಡನ್ನು ಓಡಿಸಿ, ಸಾಧಿಸಿ ಕೊಂಡರು. ಈ ಜಯದ ಸುದ್ದಿ ಕೊಂಸ್ತಂತಿನೊಪೊಲಿಗೆ ಮುಟ್ಟಿದ ಕೂಡಲೇ ಸುಲ್ತಾನ ಅಬ್ದುಲ್ ಹಮಿದ್ "ದಿಗ್ವಿಜಯಶಾಲಿ" ಎಂಬ ಯಶಸ್ಕರ ಉಪನಾಮವಿಶೇಷವನ್ನು ಧರಿಸಿ ಕೊಂಡನಂತೆ.—ಶುಖುಮ್ಕಲೆ ಸಾಧಿಸಿ ಕೊಂಡ ತುರ್ಕರು ರುಸ್ಯ ಸಾಮ್ರಾಜ್ಯಕ್ಕೆ ಶೇರಿದ ಕೌಕಸುಸ್ ಎಂಬ ಶೈಲಾಂತರ ಶೀಮೆಗಳ ನಿವಾಸಿಗಳನ್ನು ಕಲಹಕ್ಕೆ ಎಬ್ಬಿಸಿ, ಅವರು ರುಸ್ಯ ಸರಕಾರಕ್ಕೆ ತಿರುಗಿ ಬೀಳುವ ಹಾಗೆ ಶತಪ್ರಯತ್ನ ಮಾಡ ತೊಡಗಿದರು. ಆ ಕೌಕಸಿ ಶೀಮೆಗಳವರು ಹೆಚ್ಚಾಗಿ ಮುಸಲ್ಮಾನರಾದ್ದರಿಂದ ತುರ್ಕರಿಗೆ ಕಲಹವನ್ನು ಹುಟ್ಟಿಸೋದಕ್ಕೆ ಹೆಚ್ಚಿನ ಇಂಬುಂಟು. ಆದರೂ ಅವರ ಪ್ರಯತ್ನಗಳು ಈ ವರೆಗೂ ಅಲ್ಲಿಯೂ ಹೆಚ್ಚು ಸಾರ್ಥಕವಾಗಲಿಲ್ಲಾ. ರುಸ್ಯರು ಆ ಶೀಮೆಗಳ ಬಂದೋಬಸ್ತಿಗೆ ಹೆಚ್ಚು ದಂಡು ಕಳುಹಿಸಿರಸ ಬೇಕಾಯಿತು. ಆದರೆ ಅದರ ದೆಶೆಯಿಂದ ಅವರಿಗೆ ಹೆಚ್ಚಿನ ಎಡತಡೆಯೇನೂ ಆಗಲಿಲ್ಲಾ. ಬೇಕಾದಷ್ಟು ದಂಡುಗಳನ್ನೆತ್ತಿ ಕೂಡಿಸಿ ಕೊಳ್ಳಲಿಕ್ಕೆ ರುಸ್ಯ ಸರಕಾರಕ್ಕೆ ಯಥೇಷ್ಟ ಪ್ರಜೆಗಳುಂಟಲ್ಲಾ! ಸುಲ್ತಾನನು "ದಿಗ್ವಿಜಯಶಾಲಿ" ಎಂಬ ಯಶಸ್ಕರ ಉಪನಾಮವನ್ನು ಧರಿಸಿ ಕೊಳ್ಳಲಿಕ್ಕೆ ಅವಸರ ಪಟ್ಟದು ಒಳ್ಳೇ ಯುಕ್ತಿಯಾಯಿತು, ಯಾಕಂದರೆ ಈಗ ನಡೆಯುವ ಯುದ್ಧದಲ್ಲಿ ಇನ್ನು ಮುಂದೆ ಅಂಥಾ ಸ್ವಪ್ರತಿಷ್ಠೆಗೆ ಅನುವಾಗಲಿಕ್ಕಿಲ್ಲಾ ಎಂತ ತೋರುತ್ತದೆ. "ದಿಗ್ವಿಜಯಶಾಲಿ" ಎಂಬ ಹೆಸರನ್ನು ಇಡಿಸಿ ಕೊಂಡ ಬಳಿಕ ಸುಲ್ತಾನನು ಫರಾರಿಯಾಗಿ ಪಲಾಯಣ ಮಾಡಿದನು. ಅರ್ದಹಾನೆಂಬ ಕೋಟೆಯನ್ನು (೧೧ನೇ ಪಾನಿನ ೨ನೇ ಹೋಳನ್ನು ಸರಿ ನೋಡ ತಕ್ಕದು) ರುಸ್ಯರು ಸಾಧಿಸಿ ಹಿಡುಕೊಂಡ ವರ್ತಮಾನವು ಬಂದದಕ್ಕೆ ಕೊಂಸ್ತಂತಿನೊಪೊಲಿಯಲ್ಲಿ ಒಂದಿಷ್ಟು ಕಲಹದ ಸಂಗತಿ ತೊಡಗಿತು. ಸುಲ್ತಾನನು ಕಲಹಗಾರರ ನಾಯಕರನ್ನು ಹಿಡಿಸಿ, ಶೆರೆಯಲ್ಲಿರಿಸಿ, ಕಲಹವನ್ನು ಅಣಗಿಸಿ ಬಿಡಲಿಕ್ಕೆ ಶಕ್ತನಾದರೂ, ಎದೆ ಒಡದ ಅಂಜುಗುಳಿಯಾಗಿ "ಪರಮದ್ವಾರ" ಎಂಬ ರಾಜಮಂದಿರವನ್ನು ಬಿಟ್ಟು, ಬೊಸ್ಪುರುಸ್ ಎಂಬ ಸಮುದ್ರಕಂಠದ (ಸಮುದ್ರಬೀದಿಯ) ಈಚೆಯಲ್ಲಿರುವ (ಸಣ್ಣಾಸ್ಯಕ್ಕೆ ಶೇರಿದ) ಸ್ಕುತಾರಿಯೆಂಬ ಪಟ್ಣದಲ್ಲಿ ಮೊಕಾಮಾದನು. ರುಸ್ಯರೆಲ್ಲರಲ್ಲಿ ಬಹಳ ಒಕ್ಕಟ್ಟೂ ದೊಡ್ಡ ದೊಡ್ಡ ಗೆಲುವೂ ಮಹಾ ಉಲ್ಲಾಸ ಉತ್ಸಾಹವೂ ಇರುವಾಗ್ಯೆ ತುರ್ಕರಲ್ಲಿ ಶಂಕೆ ಅಪನಂಬಿಕೆ ಕಟಿಪಿಟಿ ಭೇದಬುದ್ಧಿ ಪ್ರಬಲವಾಗಿರುತ್ತದಂತೆ. ಇದು ಅಪಶಕುನದ ಸಂಗತಿ ಸೈ.

ದೊಡ್ಡ ದೊಡ್ಡ ಯುದ್ಧನಾವೆಗಳನ್ನು ಕಟ್ಟಿಸಿ, ೧೨ ವ ೧೫ ವ ೨೫ ಅಂಗುಲದಷ್ಟು ದಪ್ಪವಾದ ತಾಂಬ್ರದ ಹಲಿಗೆಗಳಿಂದ ಹೊದಗಿಸಿದರೆ, ಅವು ಯಾವ ಯಾವ ಗುಂಡಿನ ಪೆಟ್ಟನ್ನಾದರೂ ತಡೆದು, ಬ್ರಹ್ಮಾಸ್ತ್ರದಂಥಾ ಬಲವಾದ ಆಯುಧವೆಂತ ನೆನಸಿ, ಇಂಗ್ಲಿಷರು ಮೊದಲಾದ ವಿಲಾಯತಿಯ ಸರಕಾರದವರೆಲ್ಲರು ಹೇರಳ ಹೇರಳ ಖರ್ಚು ಮುಟ್ಟಿಸಿ, ಅಂಥಾ ಯುದ್ಧನಾವೆಗಳನ್ನು ಕಟ್ಟಿಸಿದರು. ಆದರೆ ಕೇವಲ ಅಜಿತವೆಂತ ಎಣಿಸಿಕೊಳ್ಳುತ್ತಿದ್ದ ಆ ನಾವೆಗಳು ಅಜಿತವಲ್ಲಾ ಎಂದು ಇತ್ತಲಾಗೆ ಬಹು ವ್ಯಕ್ತವಾಯಿತು; ಹ್ಯಾಗಂದರೆ: ಮೂರು ಜನ ರುಸ್ಯರು ಮಧ್ಯರಾತ್ರೀ ವೇಳೆಗೆ ಒಂದು ದೋಣಿಯನ್ನು ಹತ್ತಿ ಕೊಂಡು ಹೋಗಿ, ತುರ್ಕರದಂಥಾ ಭೂತನಾವೆಗೆ ಒಂದು ತೊರ್ಪೇದೊ ತಾಗಿಸಿ, ಧಡಕ್ಕೆ ತಿರುಗಿ ಕೊಂಡು, ಧಡದಿಂದ ಆ ತೊರ್ಪೇದೊ ಹೊತ್ತಿಸಿ, ಒಡಿಸಿ, ಒಂದು ಕ್ಷಣ ಮಾತ್ರದಲ್ಲಿ ಆ ಮಹಾ ಭೂತನಾವೆಯನ್ನು ದಶದಿಕ್ಕಿಗೆ ಹಾರಿಸಿ, ಒಂದು ಎಕ್ಕಲೆಯ ಮೀಶೆಯಷ್ಟಾದರೂ ಉಳಿಯದಂತೆ ನಾಶ ಮಾಡಿ ಬಿಟ್ಟರು.—ಆ ಸಾಹಸಕಾರ್ಯದ ಸುದ್ದಿ ಕೇಳಿ ತುರ್ಕರಿಗೆ ಮಾತ್ರವಲ್ಲಾ, ಮುಖ್ಯವಾಗಿ ಇಂಗ್ಲಿಷರಿಗೂ ಒಂದು ತರದ ದಿಗಿಲು ಹಿಡಿದು ಹೋಯಿತಂತೆ.—ಇಂಗ್ಲಿಷರು ಲಕ್ಷೋಪಲಕ್ಷ ರೂಪಾಯಿ ಖರ್ಚು ಮಾಡಿ, ಯಾವ ಯಾವ ದೇಶದವರಾದರೂ ಕಟ್ಟಿಸದಷ್ಟು ಅಂಥಾ ನಾವೆಗಳನ್ನು ಕಟ್ಟಿಸಿ ಕೊಂಡು, ತಮ್ಮ ನೌಕಾಸೇನಾ ಬಲವು ಈಡಿಲ್ಲದ್ದಾಗಿ ಕೇವಲ ಅಜಿತವೇ ಎಂತ ನಂಬಿ ಕೊಂಡು, ಅದರ ವಿಷಯದಲ್ಲಿ ಮಹಾ ಅಭಿಮಾನಭಾವ ಹಿಡಿದು ಕೊಂಡಿದ್ದರು; ಆದರೆ ಮೂರು ನಾಲ್ಕು ಜನ ಸಾಹಸಗಾರರು ಎದೆಗೊಟ್ಟರೆ, ಅವರು ೫೦, ೬೦ ಲಕ್ಷ ರೂಪಾಯಿ ಖರ್ಚು ಮುಟ್ಟಿದಂಥಾ ಹಡಗವನ್ನು ಮಾತ್ರವಲ್ಲಾ, ಅದರ ಎಲ್ಲಾ ರಸ್ತನ್ನೂ ಜನರನ್ನೂ ಒಂದು ಕ್ಷಣ ಮಾತ್ರದಲ್ಲಿ ಒಂದೇ ಪೆಟ್ಟಿನಿಂದ ನಾಶ ಮಾಡಿ ಬಿಡ ಬಹುದು ಎಂತ ಕಂಡು ಬಂದದು ಆ ಅಭಿಮಾನಕ್ಕೆ ಒಂದು ಪೆಟ್ಟಿನಂತಾಯಿತು.—ತೊರ್ಪೇದೊ ಎಂಬದು ಒಂದು ಜಾತಿಯ ಮೀನಿನ ಹೆಸರು; ಆದರೆ ಈ ಹೆಸರು ಒಂದು ತರದ ದೊಡ್ಡ ಕಲಶಕ್ಕೆ ರೂಢಿಯಾಯಿತು. ಈ ಕಲಶವನ್ನು ಬಹು ಘಟ್ಟಿಯಾದ ಕಂಚಿನಿಂದ ಮಾಡಿ, ಕೋವೀ ಮದ್ದಿಗಿಂತ ಬಲವಾದ ಅಗ್ನಿಪ್ರವರ್ತಕ ಪದಾರ್ಥದಿಂದ ತುಂಬಿಸಿ ಬಿಡುತ್ತಾರೆ. ಅಂಥಾ ಕರಳು ಇದ್ದಂಥಾ ಮೀನನ್ನು ಹಡಗಗಳ ದಾರಿಯಲ್ಲಿರಿಸಿ ಬಿಡುತ್ತಾರೆ, ಅಥವಾ ಬರುವ ಹಡಗಗಳ ಕಡೆಗೆ ಎಸೆದು ಬಿಡುತ್ತಾರೆ. ಆ ಮೀನಿನ (ಒಂದು ಸೂಜಿಯಷ್ಟು ಚಿಕ್ಕ) ಬಾಯಿಯಲ್ಲಿ ಒಂದು ತಂತಿ ಶಿಕ್ಕಿಸಿ ಅದೆ. ಎಸೆದು ಬಿಟ್ಟ ಆ ಮೀನು ಹಡಗದ ನೆರೆಗೆ ಮುಟ್ಟುತ್ತಲೇ ಅಥವಾ ಹಡಗವು ಆ ಮೀನು ಮಡಗಿರುವ ಜಾಗಕ್ಕೆ ಮುಟ್ಟುತ್ತಲೇ ಧಡದಲ್ಲಿ ಕಾಯುವ ಕಾವಲು ಆ ತಂತಿಯ ತುದಿಯನ್ನು ವಿದ್ಯುಚ್ಚಮತ್ಕಾರೋತ್ಪಾತಕ ಯಂತ್ರಕ್ಕೆ ತಗಲಿಸುತ್ತಲೇ, ಆ ಮೀನು ಒಡದು ಹೋಗಿ, ಚನ್ನಾಗಿ ತಾಗಿದರೆ, ಹಡಗವನ್ನು ಸಾವಿರ ಸಾವಿರ ತುಂಡಾಗಿ ಒಡಿಸಿ, ದಶದಿಕ್ಕಿಗೆ ಹಾರಿಸಿ ಬಿಡುವದು.—ಮನುಷ್ಯರ ಈಗಿನ ಚಮತ್ಕಾರವೆಲ್ಲವು ಪೆಟ್ಟು ತಗಲಿಸುವ ಮತ್ತು ಪೆಟ್ಟು ತಪ್ಪಿಸುವ ಪ್ರಯತ್ನದಲ್ಲಿ ಮುಳಿಗಿದೆ. ನಿರ್ಮಾಣಕರ್ತನು ಮನುಷ್ಯನಿಗೆ ಕೊಟ್ಟ ಬುದ್ಧಿಸಾಮರ್ಥ್ಯವೆಲ್ಲವು ತಾನು ಗೆದ್ದು, ಇತರರು ಸೋತು ಹೋಗುವ ಹಾಗೆ ಹ್ಯಾಗೆ ಮಾಡಲಿ? ಎಂಬುವ ಬರೇ ಕಚ್ಚಾಟದ ವ್ಯವಸಾಯದಲ್ಲಿ ಮುಳಿಗಿ, ಹಾಳಾಗಿ ಹೋಗುವಂಥಾದ್ದು ಕೀರ್ತಿಯ ಸಂಗತಿಯೋ? "ಕರೆಯುವ ಹಸಾ ಕೊಟ್ಟು, ಒದೆಯುವ ಕತ್ತೇ ತಂದ" ಪ್ರಯೋಜನದಂಥಾ ಸಂಗತಿಯಷ್ಟೇ.

ಇಂಗ್ಲಿಷರು ತಮಗೆ ಸಹಕಾರಿಗಳಾಗಿ, ಒತ್ತಾಸೆಗೆ ಓಡಿ ಬಂದಾರೆಂದು ನೆಚ್ಚಿ, ತುರ್ಕರು ಬಹಳ ಬಿಂಕಗೊಂಡು, ರುಸ್ಯರನ್ನು ಒಂದಿಷ್ಟಾದರೂ ಗಣನೆಗೆ ತಾರದೆ, ಕತ್ತಿಮಾತಿಗೆ ಕಾರಣ ಕೊಟ್ಟರು; ಆದರೆ ಈಗ ಯುದ್ಧವು ತೊಡಗಿ, ಬಹು ಇಕ್ಕಟ್ಟಿನ ಸಂಗತಿಯಾಗಿರಲು, ಇಂಗ್ಲಿಷರು

ಸಹಾಯಕ್ಕೆ ಓಡಿ ಬಾರದ್ದನ್ನು ನೋಡಿ, ತುರ್ಕರು ಯುದ್ಧವು ತೊಡಗಿದ್ದಕ್ಕೆ ಪಶ್ಚಾತ್ತಾಪ ಪಟ್ಟು, ಇಂಗ್ಲಿಷರ ಮೇಲೆ ಕೋಪಗೊಂಡು, ಅವರು ಮಾತುಬರಿಯುವರಲ್ಲದ ವಿಶ್ವಾಸಘಾತಕರೆಂಬದಾಗಿ ಅವರನ್ನು ನಿಂದಿಸುತ್ತಿದ್ಧಾರಂತೆ. ಇಂಗ್ಲಿಷರನ್ನು ದ್ರೋಹಿಗಳೆಂತ ದೂರಲಿಕ್ಕೆ ತುರ್ಕರಿಗೆ ಕಾರಣವುಂಟೇನೋ? ನೆಚ್ಚಿದ ಎಮ್ಮೆ ಕೋಣನಾಗುವ ಸಂಗತಿ ಬಹುಶಾ ಸಂಭವಿಸುತ್ತದೆ.

ಜೂನ್ ೨೩ರಲ್ಲಿ ರುಸ್ಯರು ದನೂಬ (ದೊನಾವ) ನದಿಯನ್ನು ದಾಟಿ ಕೊಳ್ಳಲೆಸಗಿದರು. ೨೭ನೇದಕ್ಕೆ ಅವರ ಮುಖ್ಯ ಸೇನಾಧಿಪರ ಮಂಡಲಿಯೂ ದಾಟಿ, ಈಚೆಯಲ್ಲಿ ಮೊಕಾಮಾಗಲಿಕ್ಕೆ ಸಂದರ್ಭವಾದಷ್ಟು ಸುಲಭವಾಗಿ ದಾಟುವ ವೈನವು ಸಾಗಿತು.

ಜರ್ಮನ್ ಮಹಾರಾಜ್ಯದ ವಿಲ್ಹೆಲ್ಮ್ ಎಂಬ ಕೈಸರರು ೮೦ ವರುಷ ಪ್ರಾಯ ದಾಟಿದ ವಯೋವೃದ್ಧರು. ೬ ವರುಷಗಳ ಹಿಂದೆ ಜರ್ಮನ್ ಸಾಮ್ರಾಜ್ಯಕ್ಕೆ ಕೂಡಿಸಿ ಕೊಳ್ಳೋಣಾದ ಶೀಮೆಗಳನ್ನು ನೋಡಲಿಕ್ಕಾಗಿ ಅವರು ಮೇ ತಿಂಗಳಲ್ಲಿ ಆ ಪ್ರಾಂತ್ಯಗಳಿಗೆ ಬಿಜಯಂಗೈದು, ಸ್ತ್ರಾಸ್ಬುರ್ಗ್, ಮೆತ್ಸ್ ಎಂಬ ಪಟ್ಣಗಳಲ್ಲಿ ಕೆಲವು ದಿವಸ ಮೊಕಾಮಾಗಿದ್ದಲ್ಲಿ ಅಲ್ಲಿಯ ಪ್ರಜೆಗಳು ಮಾತ್ರವಲ್ಲ, ಇತರರೂ ಶತ್ರುಭಾವ ಹಿಡಿದು, ಗಂಟುಮೋರೆ ಮಾಡಿ ಕೊಂಡು ನಿಂತ ಫ್ರೆಂಚರಾದರೂ ಸಹ, ಅಷ್ಟು ವಯೋವೃದ್ಧರಾದ ಕೈಸರರ ವ್ಯವಸಾಯಗಳನ್ನೂ ಕೆಲಸಗಳನ್ನೂ ದೇಹಕ್ಷೇಮ ಬಲಗಳನ್ನೂ ಕುದುರೆಯನ್ನೇರಿ ಕೊಂಡು ಸವಾರಿ ಮಾಡೋದರಲ್ಲಿ ಕಾಣಿಸಿದ ಚಮತ್ಕಾರವನ್ನೂ ಲಘುತ್ವವನ್ನೂ ನೋಡಿ, ಸಲೆಶಾನೆ ಆಶ್ಚರ್ಯ ಪಟ್ಟರಂತೆ.

ಉತ್ತರ ಅಮೇರಿಕಕ್ಕೆ ಶೇರಿದ ನವ್ಯ ಬ್ರುಂಸ್ವಿಕವೆಂಬ ಶೀಮೆಯ ಒಂದು ಪಟ್ಣದಲ್ಲಿ ಮಹಾ ದೊಡ್ಡ ಬೆಂಕಿ ಹೊತ್ತಿ, ೩ ಕೋಟಿ ರೂಪಾಯಿಯಷ್ಟು ಬಾಳಿನ ಮನೆಮಾರು ಮುಂತಾದ್ದನ್ನು ಹಾಳು ಮಾಡಿ ಬಿಟ್ಟಿತಂತೆ.

ವಿಲಾಯತಿಗೆ ಹೊರಟು ಹೋದ ಕಿತ್ತಲ್ ಧೊರೆಯವರು ಕುಟುಂಬ ಸಮೇತವಾಗಿ ಸುರಕ್ಷಿತರಾಗಿ ಮುಟ್ಟಿದ ವರ್ತಮಾನವು ತಲಪಿದೆ.

ಜುಲೈ ೧೩ರಲ್ಲಿ ಯಾಕೋಬ ಶಿರಿ ಎಂಬವರು ಬಹು ಸಮಾಧಾನದಲ್ಲಿ ಪರವನ್ನೈದಿದರು. ೧೮೦೦ನೇ ಇಸ್ವಿಯಲ್ಲಿ ಹುಟ್ಟಿ, ಅವರು ೧೮೩೯ನೇ ಇಸ್ವಿಯ ಮಾರ್ಚಿ ತಿಂಗಳಲ್ಲಿ ಸ್ನಾನ ಹೊಂದಿ, ಮಂಗಳೂರ ಬಾಸಲ್ ಮಿಶ್ಯನ್ ಸಭೆಯ ಬುಡವೇ ಆದಂಥವರಲ್ಲಿ ಒಬ್ಬರಾಗಿದ್ದರು. ಅವರ ಸ್ಥಿತಿಗತಿ ಎಲ್ಲವನ್ನು, ಮುಖ್ಯವಾಗಿ ಮುಪ್ಪಿನಲ್ಲಿ ಇದ್ದದನ್ನು ನೋಡಿದವರಿಗೆ ಪ್ರೀತಿಭಾವವು ಹುಟ್ಟಿ, ಕೀರ್ತನೆಯ ಮಾತು ನೆನಪಾಗಬಹುದಾಯಿತು; ಏನಂದರೆ: “ನಮ್ಮ ಆಯುಸ್ಸು ೭೦ ವರುಷ, ಬಲುವಾದರೆ ೮೦ ವರುಷ; ಅದರ ಶೋಭನವು ಕಾಯಕಷ್ಟವೂ ಆಯಾಸವೂ.” ಮತ್ತು: “ನೀತಿವಂತನು ತಾಳೇ ಮರದ ಹಾಗೆ ಬೆಳವಣಿಗೆಯಾಗುವನು, ಲೆಬನೋನಿನಲ್ಲಿರುವ ದೇವದಾರಿನಷ್ಟು (ಎತ್ತರಕ್ಕೆ) ಬೆಳೆಯುವನು. ಯೆಹೋವನ ಮನೆಯಲ್ಲಿ ನೆಡಲ್ಪಟ್ಟವರು ನಮ್ಮ ದೇವರ ಅಂಗಳದಲ್ಲಿ ಚಿಗುರುವರು; ಮುಪ್ಪಿನದರೂ ಇನ್ನು ಫಲಭರಿತರಾಗಿ ಪುಷ್ಟರೂ ಹಸುರೂ ಆಗಿರುವರು.” ಅಂದಿನಲ್ಲಿ ಸ್ನಾನ ಹೊಂದಿ, ಸಭೆಯ ಮೊದಲಾಳುಗಳಾದವರಲ್ಲಿ ಒಬ್ಬರೇ ಮಾತ್ರ ಇನ್ನು ಉಳಿದಿದ್ಧಾರೆ; ಯಾರಂದರೆ: ೧೭೯೩ನೇ ಇಸ್ವಿಯಲ್ಲಿ ಹುಟ್ಟಿದ ಸಿಮಿಯೋನ್ ಎಂಬವರು.

ದಕ್ಷಿಣ ಮಹಾರಾಷ್ಟ್ರ ಜಿಲ್ಲೆಯಲ್ಲಿಯೂ ಮೈಸೂರ ಶೀಮೆಯಲ್ಲಿಯೂ ಇರುವ ಸಭಾಪತ್ರಪತಕರಲ್ಲಿ ಯಾರೊಬ್ಬರು ತಮ್ಮ ತಮ್ಮ ಕಡೆಯ ಸಭೆಯವರ ಹಾಗೂ ಇತರರ ಸ್ಥಿತಿಗತಿಗಳ ವಿಷಯದಲ್ಲಿ ಆಗಿಂದಾಗ್ಯೆ ಒಂದಿಷ್ಟಾದರೂ ಬರದು ಕಳುಹಿಸಿ, ಈ ಪತ್ರದ ದ್ವಾರವಾಗಿ ತಿಳಿಸುವದಾದರೆ, “ದುಃಖ ಪಡುವವರ ಸಂಗಡ ದುಃಖವನ್ನು, ಸಂತೋಷ ಪಡುವವರ ಸಂಗಡ ಸಂತೋಷವನ್ನು ಪಡಲಿಕ್ಕೆ” ಅನುವು ಆಗಿ, ಯಾರಿಗಾದರೂ ಏನಾದರೂ ಇಷ್ಟಫಲವು ಒದಗಿ ಬಂದೀತು.

Printed at the Basel Mission Press, Mangalore.

# ಕ್ರೈಸ್ತಸಭಾಪತ್ರ

ಪುಸ್ತಕ ೧೦. SEPTEMBER 1877. ಅಂಕೆ ೨.


ಅಡಕವು: "ಸಂತೋಷಂ ಪರಮಂ ಧನಂ"—ಅವಿಶ್ವಾಸಿಯ ಭಯವು—ಮುದಿ ಮೊಖಲ್—ಉತ್ತಮವಾದ ಪ್ರಸಂಗವು—ಉತ್ತರಗಳು—ವಿವಿಧ ವರ್ತಮಾನಗಳು.

## "ಸಂತೋಷಂ ಪರಮಂ ಧನಂ."

ಮತ್ತು ಯೇಸು ಯೆರಿಕೋವೆಂಬ ಊರನ್ನು ಶೇರಿ ಹಾದು ಹೋದಾಗ, ಜಕ್ಕಾಯನೆಂಬ ಪುರುಷನೊಬ್ಬನು ಇದ್ದನು; ಇವನು ಸುಂಕದ ಮಣಿಯಗಾರನೂ ಐಶ್ವರ್ಯವಂತನೂ ಆಗಿದ್ದು, ಯೇಸುವನ್ನು ನೋಡ ಹುಡುಕಿದನು. ಲೂಕ. ೧೯, ೧. ೨.

ಜಕ್ಕಾಯನು ಐಶ್ವರ್ಯವಂತನಾಗಿದ್ದನು; ಭಾಗ್ಯವಂತನೂ (ಅಂದರೆ ನಿಶ್ಚಿಂತ ಸುಖಜೀವಿ) ಆಗಿದ್ದನೋ? ಅವನು ಏನೂ ಕಡಿಮೆಯಿಲ್ಲದ ಸುಖಜೀವಿಯೂ ಕೇವಲ ನಿಶ್ಚಿಂತ ಕೃತಾರ್ಥಿಯೂ ಆಗಿದ್ದದಾದರೆ, ಯೇಸುವನ್ನು ನೋಡ ಹುಡುಕ ಬೇಕೆಂಬ ಮನಸ್ಸು ಅವನಲ್ಲಿ ಹುಟ್ಟುತ್ತಿದ್ದಿಲ್ಲಾ. ಬರೇ ಐಶ್ವರ್ಯವು ದುಃಖಜೀವನಕ್ಕೆ ಅಡ್ಡಿಯೂ ಸುಖಜೀವನಕ್ಕೆ ಆಧಾರವೂ ಆಗಿರಲಿಕ್ಕೆ ಸಾಲದು. ಒಬ್ಬನಿಗೆ ದುಃಖಜೀವಿಯೆಂತಾಗಲಿ ಸುಖಜೀವಿಯೆಂತಾಗಲಿ ಹೇಳ ಬೇಕಾದರೆ, ಅವನ ಮನೋಗತವನ್ನೂ ಮನೋಧರ್ಮವನ್ನೂ ನೋಡಿ, ತಿಳಿದು, ಹೇಳ ಬೇಕು. ಸಾವಿರಾರು ಜನ ಧನವಂತರಿಗೆ ತಮ್ಮ ಐಶ್ವರ್ಯದಿಂದ ಏನೂ ಸುಖಾನುಭೋಗವೂ ಸಮಾಧಾನವೂ ಆಗದು; ಮತ್ತು ನೂರಾರು ಮಂದಿ ಬಡವರು ತಮ್ಮ ಬಡತನದಲ್ಲಿ ದೌರ್ಭಾಗ್ಯದವರಾಗಿರದೆ, ಸಮಾಧಾನದಲ್ಲಿ ಬದುಕಿ, ಸುಖಜೀವಿಗಳೇ ಆಗಿರುತ್ತಾರೆ. ಜಕ್ಕಾಯನಿಗೆ ಸಮಾಧಾನವಿದ್ದಿಲ್ಲಾ. ದೇವರ ಸಂಗಡ ಸಮಾಧಾನವಾಗದೆ ಅವನು ಸುಖಜೀವಿಯಾಗಲಿಕ್ಕೆ ಕೂಡದಿತ್ತು. ಬೇರೆ ಬೇರೆ ಅನ್ಯಾಯಗಳ ದೋಷವು ಅವನಿಗೆ ಹತ್ತಿ, ಬಾಧಕವಾಗಿತ್ತು. "ತೋಡಿದ ಭಾವಿಗೆ ಜಲವೇ ಸಾಕ್ಷಿ, ಮಾಡಿದ ಪಾಪಕ್ಕೆ ಮನವೇ ಸಾಕ್ಷಿ" ಎಂಬಂತೆ ಅವನ ಮನಸ್ಸಾಕ್ಷಿ ಅವನಿಗೆ ಅನ್ಯಾಯಗಳನ್ನು ಹಿಡಿದು, ತೋರಿಸಿ ಕೊಟ್ಟು, ತಾನು ಅಪರಾಧಿ ಎಂಬ ಬೋಧವನ್ನು ಅವನಲ್ಲಿ ಹುಟ್ಟಿಸಿ, ಅಸಮಾಧಾನಕ್ಕೂ ಭಯಕ್ಕೂ ಕಾರಣವಾಯಿತು. ದ್ರವ್ಯಾಶೆಯ ದೋಷವು ಅವನಲ್ಲಿ ಇತ್ತು. ದ್ರವ್ಯಾಶೆಗೆ ವಶನಾಗಿ ಅವನು ಇಂಬು ಶಿಕ್ಕಿದಲ್ಲಿ ಜಾಸ್ತಿ ಸುಂಕವನ್ನು ವಸೂಲು ಮಾಡುತ್ತಾ ಬಂದು, ಅನ್ಯಾಯಗಾರನಾಗಿದ್ದನು. ಇದ್ದ ಧನವು ಅಲ್ಲಾ, ದ್ರವ್ಯಾಶೆಯೇ--ಅಂದರೆ ದ್ರವ್ಯವು ಮುಖ್ಯವಾದ್ದು, ಹಣವು ಪರಮ ಧನ, ಭುಕ್ತಿಯೇ ಮುಕ್ತಿ ಎಂಬೀ ಭಾವವಾಗಿ, ದ್ರವ್ಯವನ್ನು ಹೆಚ್ಚಿಸಬೇಕೆಂಬ ಮನಸ್ಸು—ದೋಷಕರ್ಮಗಳಿಗೆ ಕಾರಣವಾಗಿ, ಸಮಾಧಾನಕ್ಕೆ ಕೇಡಾಯಿತು. ದ್ರವ್ಯವನ್ನೇ ತನ್ನ ಇಷ್ಟಾರ್ಥವಾಗಿರ ಮಾಡಿ ಸಾಧಿಸುವವನಲ್ಲಿ ಅನ್ಯಾಯದ ವ್ಯಾಪ್ತಿಗೆ ಆಸ್ಪದವಾಗಿ,

ಶಾಪವು ಒದಗಿ ಬರುವ ಸಂಗತಿಯಾಗದೆ ಹೋಗದು; ಯಾಕಂದರೆ ಹೊನ್ನೂ ಮಣ್ಣೂ ಬೇಕೆಂಬುವದರಲ್ಲಿ ಸದ್ಧರ್ಮವೂ ಸದ್ಭಕ್ತಿಯೂ ಮುಳುಗಿ ಹೋಗಿ, ಅಧರ್ಮದ ವಾಸನೆಯೂ ಬಲವೂ ಏರಿ, ಮಿಗಿಲಾಗುತ್ತದೆ.—ಧನಿಕನಾಗಿರುವದು ಬೇರೆ, ಧನವನ್ನು ಅನುಭೋಗಿಸುವದು ಬೇರೆ. ದೇವಾನುಗ್ರಹವಿಲ್ಲದೆ ಒಬ್ಬನು ಒಂದು ವೇಳೆ ಧನವಂತನಾಗ ಬಹುದು; ಆದರೆ ದೇವಾನುಗ್ರಹವಿಲ್ಲದೆ ಯಾರೂ ಧನವನ್ನನುಭೋಗಿಸಿ, ಸುಖಜೀವಿಯಾಗಿರಲಿಕ್ಕೆ ಕೂಡದು. ತನ್ನನ್ನು ನೆನಸದವರನ್ನು ದೇವರೂ ನೆನಸದೆ ಹೋಗುತ್ತಾನೆ. ದೇವರ ಅನುಗ್ರಹವೂ ಆಶೀರ್ವಾದವೂ ತಪ್ಪಿದರೆ, ಎಷ್ಟೋ ಧನವಂತನಾದರೂ ದೌರ್ಭಾಗ್ಯಸ್ಥನಾದಾನು; ಯಾಕಂದರೆ ದೇವರು ಪ್ರಸನ್ನನಾಗಿ ಇದ್ದುಳಿಯದಲ್ಲಿ ಪರಮ ಧನವಾದರೂ ಬರೇ ಮಣ್ಣಾಗಿಯೂ, ಬರೇ ದಂಡವಾಗಿ ಕಾಟವಾಗಿಯೂ ಹೋಗುವದು. ಅನೇಕರಲ್ಲಿ ಧನಸಂಪತ್ತಿಗೆ ಕಡಿಮೆಯಿಲ್ಲವಾದರೂ, ಭಾಗ್ಯವಂತಿಕೆ ಕಾಣದು; ಯಥೇಷ್ಟ ಉಂಟು ಅವರಲ್ಲಿ ಎಂದು ಕಾಣುತ್ತದೆ, ಆದರೂ ಇಷ್ಟಪ್ರಾಪ್ತಿಯ ಲಕ್ಷಣವೇನೂ ತೋರದು. ಬರೇ ಪ್ರಪಂಚಾಸಕ್ತರೆಲ್ಲರ ವಿಚಾರವು ಹಾಗೆಯೇ. ದೇವರು ಅವರಿಗೆ ಪ್ರಸನ್ನನಾಗಿರಲಾರದ ಕಾರಣ ಅವರ ಆಸ್ತಿಪಾಸ್ತಿ ಎಲ್ಲವೂ ದೊಡ್ಡ ಹೊರೆ ಮಣ್ಣೇ. ಗಂಧಕಧೂಮದಲ್ಲಿ ಉಸುರು ಕಟ್ಟಿ ಹೋಗುವಂತೆಯೂ, ಅಂಗಾರದ್ರಾವಕವಾಯು ವಿಷದ ಘಾಳಿ ಇದ್ದಲ್ಲಿ ಇರಲಿಕ್ಕೆ ಸೌಖ್ಯವಾಗದಂತೆಯೂ ಅವರಲ್ಲಿ ಸಮಾಧಾನವಿಲ್ಲದ ದುರವಸ್ಥೆಯಲ್ಲದೆ ಸೌಕರ್ಯವೆಂಬದೂ ಇಷ್ಟಲಾಭವೆಂಬದೂ ಇಲ್ಲವೇ ಇಲ್ಲಾ. ಸುಖವೂ ಸಮಾಧಾನವೂ ಇಲ್ಲದೆ ಲಕ್ಷೋಪಲಕ್ಷ ರೂಪಾಯಿಗಳನ್ನಾದರೂ ಒಬ್ಬನು "ಕಪಿ ಮುಷ್ಟಿ ಹಿಡಿದ ಹಾಗೆ" ಕೈಯಲ್ಲಿ ಹಿಡುಕೊಂಡು ಕೂತು ಕೊಳ್ಳಲಿಕ್ಕಾದರೂ, ಏನು ಪ್ರಯೋಜನ? ನಿನ್ನ ದೋಷಕರ್ಮಗಳನ್ನು ಅಳಿಸಿ, ನಿನ್ನ ಪಾಪಗಳೆಲ್ಲವನ್ನು ಮನ್ನಿಸಿ ಬಿಟ್ಟಿದ್ದೇನೆ; ನಿರ್ಭಯವಾಗಿ ಸಮಾಧಾನವಾಗಿರು! ಎಂಬ ದೇವೋಕ್ತಿಯನ್ನು ತನ್ನ ಮನಸ್ಸಾಕ್ಷಿಯಲ್ಲಿ ಎಂದೂ ಕೇಳದವರಿಗೆ ಧನಸಂಪತ್ತು, ಸ್ವಲ್ಪವಾಗಲಿ ಹೇರಳವಾಗಲಿ, ಬರೇ ಚಿಂತಾಸ್ಪದವಾಗಿದೆ. (ಮುಂದೆ ಸಾಗಿಸಲ್ಪಡುವದು.)

---

## ಅವಿಶ್ವಾಸಿಯ ಭಯವು.

ಅಮೇರಿಕದಲ್ಲಿ ಒಬ್ಬ ದೊಡ್ಡ ಸಾವುಕಾರನು ಮೂರು ಲಕ್ಷ ರೂಪಾಯಿಗಳಿಗೆ ಹುಂಡಿಗಳನ್ನು ತೆಗೆದು ಕೊಂಡು, ತನ್ನ ಊರಿನಿಂದ ಕೆಂತುಕು ಎಂಬ ಪಟ್ಣಕ್ಕೆ ಹೋಗ ಬೇಕೆಂದಿದ್ದನು. ಅಲ್ಲಿಗೆ ಹೊರಟವನು ಒಂದು ದೊಡ್ಡ ಕಾಡನ್ನು ದಾಟಿ ಹೋಗ ಬೇಕಾಯಿತು. ಅದರಲ್ಲಿ ಕಳ್ಳರವಾಂತರ ಬಹಳವಿತ್ತು. ಆದರೆ ಅವನು ಆ ಕಾಡನ್ನು ಶೇರಿ, ದಾಟಿ ಹೋಗಲಿಕ್ಕಾಗುವ ಮೊದಲು ಹೊತ್ತು ಮುಳಿಗಿ ರಾತ್ರಿಯಾಯಿತು. ಉಳುಕೊಳ್ಳಲಿಕ್ಕೆ ಒಂದು ಮನೆಯಾದರೂ ಕಾಣಲಿಲ್ಲಾ. ಅವನು ಸವಾರಿ ಮಾಡಿ ಮಾಡಿ ಮುಂದೆ ಹೋದಷ್ಟಕ್ಕೆ ಕಳ್ಳರು ಬಂದು, ಹಣವನ್ನು ಸುಲುಕೊಂಡು ಹೋದಾರೆಂಬ ಭಯುವು ಹೆಚ್ಚುತ್ತಾ ಬಂತು. ಕಡೆಗೆ ದಾರಿ ಸಹ ತಪ್ಪಿದ್ದರಿಂದ, ಅಪಾಯವು ಇನ್ನೂ ಹೆಚ್ಚಾಯಿತು. ಬಹಳ ಹೊತ್ತು ಕಾಡಿನಲ್ಲಿ ಕಳದ ಮೇಲೆ ದೂರದಲ್ಲಿ ಒಂದು ದೀಪವನ್ನು ಕಂಡನು. ಆ ದೀಪವಿದ್ದಲ್ಲಿ ಒಂದು ವೇಳೆ ಕಳ್ಳರು ಇರಲಿಕ್ಕೆ ಸಾಕು ಎಂದು ಅವನು ನೆನಸಿ ಕೊಳ್ಳ ಬೇಕಾದರೂ, ರಾತ್ರಿಯಾಗಿ, ಬಹಳ ದಣುವೂ ಹಶಿವೆಯೂ ಬಿದ್ದದರಿಂದ, ಮುಂದರಿಯಲಿಕ್ಕೆ ಉಪಾಯ ಕಾಣದೆ, ದೀಪ ಕಂಡ ಕಡೆಗೆ ಹೋಗ ಬೇಕಾಯಿತು. ಮುಟ್ಟಿ, ನೋಡಿದಾಗ, ಒಂದು ಸಣ್ಣ ಗುಡಸಲು ಕಂಡಿತು. ಅವನು ಬಾಗಲನ್ನು ತಟ್ಟಿದಾಗ, ಮನೇ ಯಜಮಾನಿ ಬಂದು, ಬಾಗಲನ್ನು ತೆರೆದು,

ಒಳ ಬಂದು ಕೂತು ಕೊಳ್ಳಿರಿ; ನನ್ನ ಗಂಡನು ಬೇಟೆಯಾಡಲಿಕ್ಕೆ ಹೋದನು; ಆದರೆ ಈಗ ಬೇಗ ಬಂದಾನು; ಈ ರಾತ್ರಿ ಇಲ್ಲಿ ಬಿಡಾರವಾಗಿರಲಿಕ್ಕೆ ಅಡ್ಡಿ ಇಲ್ಲಾ ಎಂದು ನೆನಸುತ್ತೇನೆ, ಅಂದಳು.

ಸಾವುಕಾರನು ತನ್ನ ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ಹಾಕಿ, ಆ ಗುಡಸಲಲ್ಲಿ ಶೇರಿದನು. ಅವನು ಒಳಗಣ ಬೆಂಕಿಯ ಹತ್ತರ ಕೂತು ಕೊಂಡಾಗ, ಅವನ ಮನಸ್ಸಿಗೆ ಬಹಳ ಚಿಂತೆ ಹಿಡಿದು ಹೋಯಿತು; ಹ್ಯಾಗಂದರೆ: ನಾನು ಕಳ್ಳರಿಗೆ ಗಂಟು ಬಿದ್ದೇನೇನೋ? ಈ ಗುಡಸಲು ಕಳ್ಳರ ಗುಹೆಯೋ? ನನ್ನನ್ನು ಕೊಂದು ಹಾಕಿ, ನನ್ನ ಹುಂಡಿಗಳನ್ನು ತೆಗೆದು ಕೊಳ್ಳುವದಕ್ಕೆ ಈ ಜನರಿಗೆ ಎಷ್ಟೋ ಸುಲಭವಾದೀತು. ಹೀಗೆ ಚಿಂತಿಸುತ್ತಾ ಇರುವಾಗ್ಯೆ, ಆ ಮನೆಯ ಯಜಮಾನನು ಬಂದನು. ಸಾವುಕಾರನು ಅವನನ್ನು ನೋಡಿ, ಇನ್ನು ಹೆಚ್ಚು ಭಯ ಪಟ್ಟನು; ಯಾಕಂದರೆ ಅವನ ಮುಖವು ಒಂದು ತರವೆಂತ ಕಂಡದಲ್ಲದೆ, ಕರಡಿಯ ಚರ್ಮದ ದೊಡ್ಡ ಟೋಪಿಯನ್ನೂ, ಮೇಕೆ ಚರ್ಮದ ಅಂಗಿಯನ್ನೂ ಹಾಕಿ ಕೊಂಡು ಇದ್ದದರಿಂದ ಅವನು ಭಯಂಕರನೆಂತ ಕಂಡನು. ಸಾವುಕಾರನು ಬಹಳ ಭಯಭ್ರಾಂತನಾಗಿ ತನ್ನ ಮುಂಚಿನ ನಡತೆಯನ್ನೆಲ್ಲ ವಿಚಾರಿಸಿ, ನೆನಪಿಗೆ ತಂದು ಕೊಂಡನು. ದೇವರು ಇಲ್ಲಾ, ಮೋಕ್ಷವೂ ಇಲ್ಲಾ, ನರಕವೂ ಇಲ್ಲಾ: ದ್ರವ್ಯವೂ ಮಾನವೂ ಮೋಕ್ಷವೇ ಎಂಬ ಹಾಗೆ ಅವನು ಅನೇಕ ವರುಷದಿಂದ ನಡಕೊಳ್ಳುತ್ತಿದ್ದನು. ಆದರೆ ಆ ಭಯದಲ್ಲಿ ಅವನ ಮುಂಚಿನ ವಾದವೆಲ್ಲವೂ ದೀಪಕ್ಕೆ ಬಿದ್ದ ನೂಲಿನಂತೆ ಕಮರಿ ಬೂದಿಯಾಗಿ ಹೋಯಿತು. ಹೀಗೆ ಕೇವಲ ಕಂಗಾಲನಾಗಿ ಎಂಬ ಹಾಗೆ ಬಹು ಶಂಕೆಯಲ್ಲಿಯೂ ಪಶ್ಚಾತ್ತಾಪದಲ್ಲಿಯೂ ಕೂತು ಕೊಂಡಿರುವಾಗ, ಮನೆಯ ಯಜಮಾನನು ಅವನಿಗೆ—ನೀವು ಈಗ ಮಲಗಿ ಕೊಳ್ಳಲಿಕ್ಕೆ ಹೋಗ ಬಹುದು ಎಂತ ಹೇಳಿದನು. ಆದರೆ ಸಾವುಕಾರನು—ಬೇಡಯ್ಯ! ಇನ್ನು ಸ್ವಲ್ಪ ಕುಂಡ್ರಲಿಕ್ಕೆ ನನಗೆ ಮನಸ್ಸುಂಟು ಎಂದು ಘಾಬರಿಯಿಂದ ಹೇಳಿದನು. ಸ್ವಲ್ಪ ಹೊತ್ತಿನ ಮೇಲೆ ಆ ಮನೆಯವನು ಇನ್ನೊಮ್ಮೆ—ನೀವು ಈಗ ಮಲಗಿ ಕೊಳ್ಳಿರಿ! ಅಂದಾಗ, ಸಾವುಕಾರನು ಬೇರೆ ಉಪಾಯ ಕಾಣದೆ, ತನ್ನ ಕಿಶಿಯಲ್ಲಿದ್ದ ಸಣ್ಣ ತುಬಾಕಿಯನ್ನು ಕೈ ಹಾಕಿ ಹಿಡಿದು ಕೊಂಡನು. ಅವನು ಮಲಗಲಿಕ್ಕೆ ಏನೂ ಮನಸ್ಸು ತೋರಿಸದ ಕಾರಣ ಆ ಮನೆಯವನು ಅವನಿಗೆ—ಅಯ್ಯಾ! ಮಲಗಿ ಕೊಳ್ಳಲಿಕ್ಕೆ ನಿಮಗೆ ಮನಸ್ಸು ಇಲ್ಲದಿದ್ದರೂ, ನನಗೆ ಮನಸ್ಸುಂಟು; ಆದರೆ ಮಲಗಿ ಕೊಳ್ಳುವದಕ್ಕಿಂತ ಮುಂಚೆ ದೇವರ ವಾಕ್ಯದಲ್ಲಿ ಓದಿ, ಪ್ರಾರ್ಥನೆ ಮಾಡುವ ಪದ್ಧತಿ ನಮ್ಮಲ್ಲಿ ಉಂಟು; ನಾವು ಈಗ ಸಹ ಹಾಗೆ ಮಾಡಿ ಪ್ರಾರ್ಥಿಸಲಿಕ್ಕೆ ಒಪ್ಪಿ ಕೊಳ್ಳುತ್ತೀರೇನೋ? ಎಂಧೇಳಿದ್ದಕ್ಕೆ, ಆ ಸಾವುಕಾರನು ಭಯವೆಲ್ಲವನ್ನು ಕಳದು, ಮನಸ್ಸಿನಲ್ಲಿ ಮಹಾ ಸಂತೋಷ ಪಡುವವನಾಗಿ—ನನಗೆ ಸಂತೋಷವೇ! ಎಂಧೇಳಿದನು. ದೇವರ ವಾಕ್ಯವನ್ನು ಓದಿ, ಪ್ರಾರ್ಥನೆ ಮಾಡುವವರನ್ನು ಅವನು ಆಂದಿನ ವರೆಗೂ ತಿರಸ್ಕರಿಸುತ್ತಿದ್ದರೂ, ಅಂಥವರ ಮನೆಯಲ್ಲಿ ಬಿಡಾರವಾಗಿರುವದು ಭಯಕ್ಕೆ ಕಾರಣವಲ್ಲಾ ಎಂತ ನಂಬಿ ಕೊಂಡು, ಅವನು ಭಯಭ್ರಾಂತಿಯನ್ನು ಕಳದು, ತಿರಿಗಿ ಪ್ರಾಣ ಬಂದ ಹಾಗಾದನು. ಮತ್ತು ಮಲಗಿ ಕೊಂಡು, ಆ ರಾತ್ರಿಯಲ್ಲಿ ಏನೂ ಭಯವಿಲ್ಲದೆ ಸೌಖ್ಯವಾಗಿ ನಿದ್ರೆ ಮಾಡಿದನು. ಮಾರಣೆ ದಿವಸದಲ್ಲಿ ಎದ್ದು, ಹೊರಟು, ತಿರಿಗಿ ತನ್ನ ದಾರಿಯಲ್ಲಿ ಮುಂದೆ ಹೋಗುವಾಗ್ಯೆ ತನಗೆ ಸಂಭವಿಸಿದ ಸಂಗತಿಯನ್ನು ಪರ್ಯಾಲೋಚನೆ ಮಾಡಿ, ಬಹಳವಾಗಿ ಮನ ಕರಗಿ ಹೋದನು. ಸ್ವಬುದ್ಧಿಯಿಂದ ಕಟ್ಟಿ ಕೊಂಡಿದ್ದಂಥಾ, ಕಾಡಿನಲ್ಲಿ ಮಣ್ಣಾಗಿ ಹೋದಂಥಾ ನಾಸ್ತಿಕ್ಯವನ್ನೂ ಅವಿಶ್ವಾಸವನ್ನೂ ಕಳದು ಬಿಟ್ಟು, ಪೂರ್ಣ ಹೃದಯದಿಂದ ದೇವರಲ್ಲಿ ನಂಬಿಕಿಡುವ ಭಕ್ತನಾದನು. — ಅನುಭವದಿಂದ ಮನೋಭಾವನೆಗಳನ್ನು ತಿದ್ದಿಸಿ ಕೊಳ್ಳ ತಕ್ಕದ್ದು.

---

# ಮುದಿ ಮೊಖಲ್.

(೧೬ನೇ ಪಾನಿನಿಂದ ಮುಂದೆ.)

ಮನೆಯವರು ಬಂದ ಗೌಜಿಯಲ್ಲಿ ಗ್ರೇಟ್ಲೆ ತನ್ನ ಚಿಕ್ಕ ತಮ್ಮನನ್ನು ಕೋಣೆಯೊಳಗೆ ತಂದು, ತೊಟ್ಲಿನಲ್ಲಿ ಮಲಗಿಸಿ, ಅವನಿಗೆ ನಿದ್ದೆ ಬರುವಂತೆ ತೊಟ್ಲ ತೂಗಿದಳು. ಮಗು ಸುಮಾರು ಹೊತ್ತು ಮನೆಯ ಹೊರಗಣ ಶುದ್ಧ ಘಾಳಿಯಲ್ಲಿ ಇದ್ದದರಿಂದ, ಅದಕ್ಕೆ ಬೇಗನೇ ನಿದ್ರೆ ಬಂಧೋಯಿತು. ನಿದ್ರೆ ಬಂಧೋದ ಕೂಡಲೇ ಗ್ರೇಟ್ಲೆ ಕೊಟ್ಟಿಗೆಗೆ ಹೋಗಿ, ಸುಮಾರು ಒಂದು ಶೇರು ಹಾಲು ಹಿಂಡಿ ಗರಸಿ ಕೊಂಡಳು. ಕೊಟ್ಟಿಗೆಯಿಂದ ಕೋಳೀ ಗೂಡಿಗೆ ಹೋಗಿ, ಒಂದು ಹಶಿ ಮೊಟ್ಟೆ ತಕ್ಕೊಂಡು ಬಂದಳು. ಅಷ್ಟರೊಳಗೆ ಮಗು ನಿದ್ರೆ ತಿಳಿದು ತಿರಿಗಿ ಅಳಲಾರಂಭಿಸಿತು. ಮಗು ಅತ್ತ ಶಬ್ದವನ್ನು ತಾಯಿ ಅಡಿಗೇ ಕೋಣೆಯಲ್ಲಿ ಕೇಳಿದ್ದಕ್ಕೆ—"ಗ್ರೇಟ್ಲೇ! ಗಂಜಿ ಕೊಡೋ, ಮಗುವಿಗೆ!" ಎಂತ ಕೂಗಿ ಹೇಳಿದಳು. ಗ್ರೇಟ್ಲೆ ಹೋಗಿ, ತಾಯಿ ಅಟ್ಟು ಕೊಟ್ಟ ಗಂಜಿಯನ್ನು ತೆಕ್ಕೊಂಡು ಬಂದು, ಮನೆಯ ಬೆಕ್ಕಿಗೆ ಬೋಕಿಯಲ್ಲಿ ಹಾಕಿ, ಬದಲಿಗೆ ತಾನು ಹಿಂಡಿ ತಂದ ಹಾಲನ್ನು ಮಗುವಿಗೆ ಊಡಿಸಿ ಕೊಟ್ಟಳು. ಮಗು ಬಹು ಚನ್ನಾಗಿ ಊಡಿತು. ಒಂದೊಂದು ಗುಟುಕಿಗೆ ಗ್ರೇಟ್ಲೆ ತನ್ನ ಮನಸ್ಸಿಲ್ಲಿ ಪ್ರಾರ್ಥಿಸಿ, ಹಾಲು ತಮ್ಮನಿಗೆ ಆರೋಗ್ಯವಾಗಿ ಹಿತವಾಗುವಂತೆ ದೇವರು ದಯ ಪಾಲಿಸಲೂ, ತಾನು ಹಾಲು ಊಡಿಸುವಾಗ ಗಂಜಿ ತಿನ್ನಿಸುತ್ತೇನೆಂಬದಾಗಿ ತಾಯಿಯನ್ನು ನಂಬಿಸಿ ವಂಚಿಸುವಂಥಾದ್ದನ್ನು ಕ್ಷಮಿಸಲೂ ಬೇಕೆಂತಾ ಬೇಡಿ ಕೊಂಡಳು. ತಮ್ಮನು ಆ ಹಾಲನ್ನು ಕುಡಿದ ಬಳಿಕ ಗ್ರೇಟ್ಲೆಯ ಮನಸ್ಸಿನಲ್ಲಿ ಬಹಳ ಸಂತೋಷ ಹುಟ್ಟಿತು. ಮಗುವನ್ನು ಹಿಡುಕೊಂಡು, ಬಹು ಸಂತೋಷದಿಂದಲೂ ಅಕ್ಕರೆಯಿಂದಲೂ ಆಡಿಸುತ್ತಿರುವಾಗ್ಯೆ ತಾಯಿಯೂ ಅತಿ ಸಂತೋಷ ಪಟ್ಟು, ಬಂದು, ಹೇಳಿದ್ದೇನಂದರೆ: "ಈ ಹೊತ್ತು ಮಗುವಿಗೆ ಗಂಜಿ ಬಹು ಚನ್ನಾಗಿ ಶೇರಿತೆಂದು ಕಾಣುತ್ತದೆ; ಯಾಕಂದರೆ ಉಣ್ಣುವಾಗ ಮಗು ಒಮ್ಮೆಯಾದರೂ ಅಳಲಿಲ್ಲಾ!" ಅದಕ್ಕೆ ಪ್ರತ್ಯುತ್ತರವಾಗಿ ಗ್ರೇಟ್ಲೆ ಅಂದದೇನಂದರೆ: "ಹೌದು; ನಾನು ಕೊಟ್ಟದು ಈ ಹೊತ್ತು ತೊನಿಗೆ (ತೊನಿ ಎಂಬದು ಆ ಮಗುವಿನ ಹೆಸರು) ಬಹಳ ಚನ್ನಾಗಿ ಶೇರಿತು; ಈಗ ಒಳ್ಳೇ ನಿದ್ದೆಯೂ ಬಂಧೋದೀತು ಎಂತ ನಂಬುತ್ತೇನೆ. ಆದರೆ ರಾತ್ರಿಯಲ್ಲಿ ತೊನಿ ನನ್ನ ಹತ್ತರವಿರಲಿ! ನಾನು ಅವನಿಗಾಗಿ ಎದ್ದು ನೋಡುತ್ತೇನೆ. ನೀನು ಕೆಲಸದಿಂದ ಬಂದವಳು, ಬಹು ದಣುಗೊಂಡಿರಲಿಕ್ಕೆ ಸಾಕು, ಆದ್ದರಿಂದ ನೀನು ರಾತ್ರಿಯಲ್ಲಿ ತೊನಿಗಾಗಿ ಎದ್ದು, ನಿದ್ದೆಗೆಡ ಬಾರದು." ಗ್ರೇಟ್ಲೆಯ ಮಾತಿಗೆ ತಾಯಿ ಶಾನೆ ಸಂತೋಷ ಪಟ್ಟು, ಹೇಳಿದ್ದೇನಂದರೆ: "ಒಳ್ಳೇದು, ಮಗು ರಾತ್ರಿಯಲ್ಲಿ ನಿನ್ನ ಹತ್ತರವಿರಲಿ! ಆದರೆ ನಿನಗೂ ಅಷ್ಟು ನಿದ್ರೆಗೇಡಾಗದಂತೆ ಈ ಸಾಯಂಕಾಲದಲ್ಲಿ ತೊನಿಗೆ ಚನ್ನಾಗಿ ಕಸಕಸೆ ಕಷಾಯವನ್ನು ಕುಡಿಸಿ ಕೊಡು." ಗ್ರೇಟ್ಲೆ ಅನಂತರದಲ್ಲಿ ಒಬ್ಬಳೇ ಮಲಗಿ ಕೊಳ್ಳಲಿಕ್ಕೆ ತನ್ನ ಕೋಣೆಗೆ ಬಂದಾಗ, ತನ್ನ ತಮ್ಮನನ್ನು ಬಹು ಅಕ್ಕರೆಯಿಂದ ಮುದ್ದಿಟ್ಟು, ತೊಟ್ಲಲ್ಲಿ ಮಲಗಿಸಿ, ದೇವರಿಗೆ ಮನಃಪೂರ್ವಕ ಪ್ರಾರ್ಥನೆ ಮಾಡಿದ ಮೇಲೆ ತಾನೂ ಮಲಗಿ ಕೊಂಡಳು. ಆ ರಾತ್ರಿ ತೊನಿಗೂ ಗ್ರೇಟ್ಲೆಗೂ ಬಹಳ ಒಳ್ಳೇ ನಿದ್ದೆ ಬಂಧೋಯಿತು.

ತೊನಿ ಗ್ರೇಟ್ಲೆಯ ಖಾಸ ತಮ್ಮನಾಗಿರದೆ, ಮಲತಮ್ಮ (ಅಂದರೆ ಮಲತಾಯಿಯ ಮಗನು) ಮಾತ್ರವೇ ಆಗಿದ್ದನು. ಅವಳ ೧೦ನೇ ವರುಷದಲ್ಲಿ ಅವಳ ಖಾಸ ತಾಯಿ ತೀರಿ ಹೋಗಿ, ತಂದೆ ಎರಡನೇ ಹೆಂಡತಿ ಮದುವೆ ಮಾಡಿ ಕೊಂಡನು. ಈಕೆ ದೊಡ್ಡ ರೈತನಾಗಿದ್ದ ಗಂಡನಿಗೆ ಮನೆ ಬದುಕು ಸಾಗಿಸಿ, ಆಳುಗಳನ್ನಾಳಿ ಗೈಸೋದರಲ್ಲಿಯೂ ಇತರ ಎಲ್ಲಾ ವ್ಯವಸಾಯ ವ್ಯಾಪಾರಗಳಲ್ಲಿಯೂ ಉತ್ಕೃಷ್ಟ ಸಹಾಯಕಳಾಗಿದ್ದಳು. ಅವನು ಸ್ವಲ್ಪ ಸ್ಥೂಲ ಮಂದ ತರದ ಮನುಷ್ಯನೂ ಸುಸ್ತಿಗಾರನೂ ಆಗಿ, "ಹೌದು, ಬಸವಾ, ಹೌದು! ಅಲ್ಲಾ, ಬಸವಾ, ಅಲ್ಲ!" ಎಂಬಂತೆ ಕಾರ್ಯ

ಗಳನ್ನು ನಡೆಯುವಂತೆ ನಡೆಯಗೊಡುವವನೂ ಆಗಿರುವಾಗ್ಯೆ, ಆಕೆ ಬಹು ಚುರುಕೂ ಹುಷಾರೂ ಇದ್ದ ಜಾಣೆಯಾಗಿ, ಎಲ್ಲಾ ಆಡಳಿತವನ್ನು ಚನ್ನಾಗಿ ಅರಿತು, ಬಹು ವ್ಯವಸಿತಳಾಗಿ ಮಾಡಿ, ನಡಿಸ ಶಕ್ತಳಾಗಿದ್ದಳು. ಆಕೆ ಗ್ರೇಟ್ಲಿಗೆ ಮಲತಾಯಿಯಾಗಿದ್ದರೂ, ಬಹಳ ಮಮಕಾರವುಳ್ಳವಳಾಗಿ ನಡಿಸುತ್ತಿದ್ದಳು. ಗ್ರೇಟ್ಲಿ ನಯಶೀಲವಂತೆಯೂ ಧ್ಯಾನನಿಷ್ಠೆಯವಳೂ, ಕೋಮಲ ಸಾಧು ಹುಡುಗಿಯೂ ಆಗಿದ್ದು, ಮೊದಲು ಅಂಥ ಗುಣವಿದ್ದ ಮಲತಾಯಿಯಲ್ಲಿ ಇಷ್ಟ ಪಡಲಾರದೆ, ಅವಳಿಗೆ ಅಂಜಿ ಕೊಳ್ಳುತ್ತಿದ್ದಳು. ಆದರೆ ಅನಂತರದಲ್ಲಿ ಹುಟ್ಟಿದ ಮಲತಮ್ಮತಂಗ್ಯಂದ್ಯರ ಮೂಲವಾಗಿ ಅಂಜಿಕೆ ಹೋಗಿ, ಗ್ರೇಟ್ಲಿಗೆ ಮಲತಾಯಿಯಲ್ಲಿಯೂ ಹೆಚ್ಚಿನ ವಿಶ್ವಾಸವನ್ನೂ ಮಮತಾಭಾವವನ್ನೂ ಇಡಲಿಕ್ಕೆ ಕೂಡಿತು; ಯಾಕಂದರೆ ತಮ್ಮತಂಗ್ಯಂದ್ಯರ ಮೇಲೆ ಅವಳಿಗೆ ಬಹಳ ಪ್ರೀತಿ ಹುಟ್ಟಿ ಹೋದ್ದರಿಂದ, ಅವರನ್ನು ಬಹು ಅಕ್ಕರೆಯಿಂದ ನೋಡಿ, ಆಡಿಸಿ, ಲಾಲಿಸಿ ಕಾಯುವವಳಾದಳು. ಅದನ್ನು ನೋಡಿ ಮಲತಾಯಿ ಗ್ರೇಟ್ಲಿಯಲ್ಲಿ ಮತ್ತಷ್ಟು ಮಮತಾಭಾವವನ್ನು ಹಿಡಿದು, ಅವಳ ದೆಶೆಯಿಂದ ಬಹಳ ಸಂತೋಷ ಪಡುವವಳೂ ಆದಳು. ಮೊದಲು ಹುಟ್ಟಿದ ಎರಡು ಗಂಡು ಮಕ್ಕಳು ಒಳ್ಳೇ ಕ್ಷೇಮಶಾಲಿಗಳಾಗಿ, ಪುಷ್ಟರಾಗಿ, ಬಿದಿಗೆಯ ಚಂದ್ರನಂತೆ ಬೆಳೆದು, ಮೂರು ನಾಲ್ಕು ವರುಷವಾಗದೆ ಕೆಲಸಕ್ಕೆ ಹೊರಟ ಆಳುಗಳ ಸಂಗಡ ಹೋಗಿ, ಹೊಲಪೊಲಗಳಲ್ಲಿ ಓಡ್ಯಾಡುತ್ತಾ ಆಡ ಶಕ್ತರಾದರು. ಮೂರನೆಯವನಾಗಿ ತೊನಿ ಹುಟ್ಟಿದನು. ಇವನು ಹುಟ್ಟುವಾಗ ಬರೇ ಕಡ್ಡಿಯಂತಾಗಿ, ಬಹಳ ಬಲಹೀನ ಮಗುವಾಗಿದ್ದನು. ಅವನ ಪ್ರಸವದಲ್ಲಿ ತಾಯಿಗೆ ಬಹಳ ಕಷ್ಟವಾಗಿ, ಅವಳು ಬದುಕಳು ಎಂತ ತೋರುವ ಸಂಗತಿಯಾಯಿತು. ಆದರೂ ಬದುಕಿ ಬಳಿಕ ಒಂದು ಹೆಣ್ಣು ಮಗುವನ್ನು ಹೆತ್ತಳು. ಆ ಹೆಣ್ಣಿಗೆ ಲೈಸ ಎಂಬ ಹೆಸರನ್ನಿಟ್ಟರು. ಲೈಸಳೂ ಚನ್ನಾಗಿ ಪುಷ್ಟಳಾಗಿ ಬೆಳದು, ೯ ತಿಂಗಳಿನ ಮಗುವಾಗಿರುವಾಗ್ಯೆ ಚಿಕ್ಕ ಅಣ್ಣ ತೊನಿಯಷ್ಟಾಗಿದ್ದಳು. ಹುಡುಗಿ ಅಷ್ಟು ಚನ್ನಾಗಿ ಬೆಳೆದ್ದಕ್ಕೆ ತಾಯಿ ಬಹು ಸಂತೋಷಗೊಂಡು, ಅವಳಲ್ಲಿ ಹೆಚ್ಚಳ ಪಡುತ್ತಿದ್ದಳು. ಹುಡುಗಿಯನ್ನು ಕಂಡವರೆಲ್ಲರು ಆಶ್ಚರ್ಯ ಪಟ್ಟು—"ಚಲೋ ಬಾಲೆ! ಎಷ್ಟೋ ಚನ್ನಾಗಿ ಬೆಳೆಯುತ್ತಾಳೆ" ಎಂಬದಾಗಿ ಹೇಳಿ ಹೊಗಳುವಲ್ಲಿ ಯಾರೂ ತೊನಿಯನ್ನು ಹೊಗಳಲಿಲ್ಲಾ. ಕನಿಕರಭಾವದಿಂದಲ್ಲದೆ ಸಂತೋಷಭಾವದಿಂದ ಹ್ಯಾಗೂ ಯಾರೂ ಅವನನ್ನು ನೋಡಲಿಲ್ಲ. ಎಲ್ಲರು ತೊನಿಗೆ ಆ ಪ್ರಕಾರವಾಗಿ ನಡಿಸುತ್ತಾ ಇದ್ದದಕ್ಕೆ ಗ್ರೇಟ್ಲಿಗೆ ಕಣ್ಣೀರು ಬರುವಷ್ಟು ದುಃಖವಾಗಿ, ಅವನ ಮೇಲೆ ಹೆಚ್ಚಿನ ವಾತ್ಸಲ್ಯವೂ ಪ್ರೀತಿತಾತ್ಪರ್ಯವೂ ಹುಟ್ಟಿ ಹೋಯಿತು. ಮುಖ್ಯವಾಗಿ ತಂದೆಯೇ ಲೈಸಳಿಗೂ ತೊನಿಗೂ ನಡಿಸಿದ ಹೆಚ್ಚು ಕಡಿಮೆ ಗ್ರೇಟ್ಲಿಯಲ್ಲಿ ಬಹಳ ದುಃಖವು ಹುಟ್ಟಲಿಕ್ಕೆ ಕಾರಣವಾಯಿತು. ಲೈಸಳ ಮೇಲೆ ತಂದೆಗೆ ಬಹಳ ಪ್ರೀತಿ ಇತ್ತು; ಮತ್ತವನು ಎಲ್ಲಿಗಾದರೂ ಹೋಗಿ ಮನೆಗೆ ಬಂದರೆ, ಅವಳು ಪುಷ್ಟಿಯಿಂದ ಉರುಟಾಗಿದ್ದ ಕೈಗಳನ್ನು ಚಾಚಿ, ತನ್ನನ್ನು ಕೈಯಲ್ಲಿ ತೆಗೆದು ಕೊಳ್ಳ ಬೇಕೆಂಬ ಭಾವವನ್ನು ಕಾಣಿಸುವಳು. ಅದನ್ನು ನೋಡಿ ತಂದೆ ಅವಳನ್ನು ತೆಗೆದು ಕೊಂಡು, ಮುದ್ದಿಟ್ಟು, ತಾನು ಕೂತು ಕೊಂಡು, ಅವಳನ್ನು ತನ್ನ ಅಂಕಪೀಠದಲ್ಲಿ (ಅಂದರೆ ತೊಡೆಗಳಲ್ಲಿ) ಕುಂಡ್ರಿಸಿ, ನಾನಾ ಪ್ರಕಾರವಾಗಿ ಲಾಲಿಸಿ, ಆಡಿಸುತ್ತಿರುವನು. ಆದರೆ ತಂದೆ ಅಪರೂಪವಾಗಿ ಯಾವಾಗಾದರೊಮ್ಮೆ ತೊನಿಯ ಹತ್ತರ ಬಂದು ಮಾತಾಡಿದ್ದಲ್ಲಿ ಇವನು ಅಂಜಿ ಕೊಂಡು ಅಳುವನು. ಹೀಗಾಗಲಾಗಿ ತಂದೆಯಾದರೂ ಅವನನ್ನು ಹೆಚ್ಚಿನ ಲಕ್ಷ್ಯಕ್ಕೆ ತಾರದೆ, ಅವನ ಮೇಲೆ ಹೆಚ್ಚಿನ ತಾತ್ಪರ್ಯವಿಡದೆ, ಹೋದ್ದು ಸಹಜವಾಯಿತು. ಮತ್ತು ತೊನಿ ಅತ್ತದಕ್ಕೆ ತಂದೆ ಗ್ರೇಟ್ಲಿಗೆ—"ತೊನಿಯನ್ನು ಹೊರಗೆ ತಕ್ಕೊಂಡು ಹೋಗು! ಈ ಅಳುಬುರುಕನ ನಿತ್ಯ ಅಳುವು ಕೇಳಿ, ಕೇಳಿ, ಯಾರು ತಡೆದಾರು?" ಎಂಧೇಳಿದ್ದಕ್ಕೆ ಗ್ರೇಟ್ಲಿ ವಿಧೇಯಳಾಗಿ ಅವನನ್ನು ಹೊರಗೆ ತಕ್ಕೊಂಡು ಹೋದರೂ, ಮಹಾ

ದುಃಖಾಕ್ರಾಂತಳಾಗಿ ಮಗುವನ್ನು ನೋಡಿ, ಕನಿಕರಿಸಿ, ಎಲ್ಲವರು ಅವನಿಗೆ ನಿರ್ದಯರಾದ್ದರಿಂದ, ತಾನು ಅವನಲ್ಲಿ ಹೆಚ್ಚಿನ ವಾತ್ಸಲ್ಯವನ್ನಿಡ ತಕ್ಕದ್ದೆಂದು ನೆನಸಿ ಕೊಂಡು, ಅವನಿಗೆ—"ನನ್ನ ಮುದ್ದು! ನನ್ನ ಮುದ್ದು ಕಂಡಯ್ಯಾ!" ಎಂಥೇಳಿ, ಕಣ್ಣೀರಿಡುತ್ತಾ ಬಹಳ ಮುದ್ದುಗೈಯುವಳು. ನಿನ್ನ ಗುಂಡಿಕಾಯಿಯ ರಕ್ತವು ತಮ್ಮನಿಗೆ ತಕ್ಕ ಔಷಧವೆಂತ ಯಾರಾದರೂ ಹೇಳಿದ್ದಾದರೆ, ಅದನ್ನಾದ ರೂ ಅವನಿಗೋಸ್ಕರ ಕೊಟ್ಟು ಬಿಡುತ್ತಿದ್ದಳು. ತಮ್ಮನ ಮೇಲೆ ಅಷ್ಟು ಕನಿಕರವೂ ಅಂಥ ವಾತ್ಸ ಲ್ಯಬಲವೂ ಅವಳಲ್ಲಿದ್ದ ಕಾರಣ ಮಾತ್ರದಿಂದ ಅವಳು ಮೊಖಲ್ ಮುದುಕಿಯ ಮಾತನ್ನು ಕೇಳಿ, ನಂಬಿ, ತಂದೆತಾಯಿಗಳಿಗೆ ತಿಳಿದು ಬಾರದಂತೆ ಮಾಡಿ, ತಮ್ಮನಿಗೆ ಊಡಿಸ ಶಕ್ತಳಾದಳು. ಆದರೆ ಕೆಲವು ದಿವಸವು ಹೋಗಿ ಮುದುಕಿಯ ಮಾತು ವಾಜಿಬಿ ಎಂತ ಅವಳಿಗೆ ಪರೀಕ್ಷೆಯಾಗಿ ಕಂಡು ಬಂದನಂತರ ಅವಳ ಧೈರ್ಯವೂ ಹೆಚ್ಚಿ, ಸಂತೋಷವು ಹುಟ್ಟಿ ಹೋಗಿ, ಅವಳ ಮುಮುಕಾರಾಸಕ್ತಿಗೆ ಹೊಸ ಬಲ ಬಂದ ಹಾಗಾಯಿತು. (ಮುಂದೆ ಸಾಗಿಸಲ್ಪಡುವದು.)

---

## ಉತ್ತಮವಾದ ಪ್ರಸಂಗವು.

ಚೀನ ದೇಶದಲ್ಲಿ ಇತ್ತಲಾಗೆ ಘನಸ್ಥ ಗೃಹಸ್ಥನೊಬ್ಬನು ಒಬ್ಬ ಪಾದ್ರಿಯ ಹತ್ತರ ಬಂದು, ಹೇಳಿದ್ದೇನಂದರೆ: ನಿಮ್ಮ ಶಾಸ್ತ್ರವನ್ನು ನಾನು ಯಾವಾಗಾದರೂ ಕೇಳಲಿಲ್ಲವಾದರೂ, ಅದನ್ನು **ನೋಡಿ** ನಂಬುತ್ತೇನೆ. ಹ್ಯಾಗಂದರೆ: ಬಹಳ ತೊಂದರೆಗಾರನೂ ತಂಟೆಗಾರನೂ ಹಟಮಾರಿಯೂ ಆಗಿ, ತನ್ನ ನೆರೆಹೊರೆಯವರನ್ನು ಬೈಯುತ್ತಾ ಕೆದರಿಸುತ್ತಾ ಕಾಡುತ್ತಾ ಇದ್ದವನೊಬ್ಬನ ಗುರ್ತು ನನಗುಂಟು. ಅಫೀಮ್ ಶೇದುವ (ಊಡುವ) ವ್ಯಸನಕ್ಕೆ ಅವನು ತೀರಾ ಸೋತು ಹೋಗಿದ್ದನು. ಕಾಡ ಮೃಗಗಳಿಗೆ ಪ್ರಯಾಣಸ್ಥರು ಹೆದರಿ ಕೊಳ್ಳುವಂತೆ ಜನರು ಅವನಿಗೆ ಹೆದರಿ ಕೊಳ್ಳುತ್ತಿದ್ದರು. ಆದರೆ ನಿಮ್ಮ ಶಾಸ್ತ್ರವನ್ನು ಕೇಳಿ, ನಿಮ್ಮ ಮತದಲ್ಲಿ ಶೇರಿ ಕೊಂಡ ದಿವಸದಂದಿನಿಂದ ಅವನು ತನ್ನ ವ್ಯಸನವನ್ನೂ ದುರ್ಮಾರ್ಗವನ್ನೂ ಬಿಟ್ಟು ಬಿಟ್ಟು, ಸಾಧು ಮನುಷ್ಯನಾಗಿ, ಒಳ್ಳೇ ಗುಣವಂತನಾಗಿ ನಡಕೊಳ್ಳುತ್ತಾನೆ. ಈತನ ಪರಿಣಾಮವನ್ನು ನೋಡಿ, ನಾನು ನಿಮ್ಮ ಶಾಸ್ತ್ರವು ಒಳ್ಳೇದೂ ಸತ್ಯವೂ ಎಂದು ತಿಳಿದು, ನಿಶ್ಚಯಿಸಿ ಕೊಂಡಿರುತ್ತೇನೆ."

ಪ್ರತಿ ಸಭೆಯವನು ಆ ಚೀನದವನಂಥಾ ಕಾರ್ಯರೂಪ ಪ್ರಸಂಗಿಯಾದರೆ, ಯೇಸು ಕ್ರಿಸ್ತನ ಶ್ರೀನಾಮಕ್ಕೆ ಘನವೂ ಮಹಿಮೆಯೂ ಆಗಿ, ನಮ್ಮ ಸಭೆ ಎಷ್ಟೋ ಅಂದವಾಗಿ ಅಭಿವೃದ್ಧಿಯಾದೀತು! ಹಾಗಾಗ ಬಾರದೋ? ಹಾಗಾಗಲಿ! ಹಾಗಾದರೆ ನಾವೆಲ್ಲರು ಅಂಥ ಕಾರ್ಯಪ್ರವೀಣ ಪ್ರಸಂಗಿಗಳಾಗೋಣಾ!

---

## ಉತ್ತರಗಳು.

(೬ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ)

36. ಗಿದ್ಯೋನನು. ನ್ಯಾಯಾಧಿಪ. ೬, ೧೧.
37. ಹೌದು. ಕೀರ್ತನೆ. ೧೪೭, ೪; ಯೆಶಾಯ. ೪೦, ೨೭.
38. ಯೋನನು. ಯೋನ. ೪, ೮.
39. ಹಬಕೂಕನು. ಹಬಕೂಕ. ೨, ೨. ೩.
40. ಪ್ರಕಟ. ೨೨, ೧೭ರಲ್ಲಿ. "ಬಾ!" ಎಂಬ ಪ್ರಾರ್ಥನೆ.

---

# ವಿವಿಧ ವರ್ತಮಾನಗಳು.

ವೆಂಕಟರಾಯನೆಂಬ ಒಬ್ಬ ಯೌವನಸ್ಥ (ಹೊನ್ನಾವರದವನು) ಒಂದು ವರುಷದ ಹಿಂದೆ ಕ್ರೈಸ್ತನಾಗಿ, ಕ್ರಿಸ್ತಾರ್ಥಿ ಎಂತ ಹೆಸರಿಡಿಸಿಕೊಂಡು, ಕೆಲವು ಕಾಲ ಉಡ್ಪಿಯಲ್ಲಿ ಮತ್ತೆ ಮಂಗಳೂರಿನಲ್ಲಿ ಇದ್ದ ಬಳಿಕ ಭಟ್ಕಳಕ್ಕೆ ಹೋಗಿ, ಮುಸಲ್ಮಾನನಾಗಿ, ಕಮರ್ ಎಂಬ ನೂತನ ಹೆಸರು ಪಡಕೊಂಡು, ಮರಳಿ ಮಂಗಳೂರಿಗೆ ಬಂದಿದ್ಧಾನೆ. ಅವನು ಸುಳ್ಳಾಗಿ ತಾನು ದೊಡ್ಡವರ ಮಗ ಅಂತನ್ನಿಸಿ ಕೊಂಡದರಿಂದ ಅವನಿಗೆ ನೂರಿನ್ನೂರು ರೂಪಾಯಿ ವರೆಗೆ ಲಭ್ಯವಾಯಿತಂತೆ.

ಬಂದೋರದಲ್ಲಿರುವ ರೋಮಾಯರದಾಗಿರುವ ಸಂತ ಪೇತ್ರುನ ದೇವಾಲಯದಲ್ಲಿಡುವದಕ್ಕೋಸ್ಕರ ಪೇತ್ರು ಅಫೊಸ್ತಲನ ಒಂದು ದೊಡ್ಡ ಪ್ರತಿಮೆ ವಿಲಾಯತಿಯಿಂದ ಸಮ್ಮಾನವಾಗಿ ಬಂದದೆ.

ಆದವಾನಿ ತಾಲೂಕಿನಲ್ಲಿ ಕಠಿಣ ವಾಂತಿಭೇದಿ ಪ್ರಬಲವಾಗಿ ಬಹಳ ಸಮಯ ಉಪವಾಸವಾಗಿ ಬಿದ್ದಂಥಾ ಬಡ ಜನರು ಬೇಗನೆ ಆ ರೋಗಕ್ಕೆ ಬಳಗಾಗಿ ಸತ್ತು ಹೋದರು.

ವಿಂಗೋರ್ಲದಲ್ಲಿಯೂ ಕಾರವಾರಿನಲ್ಲಿಯೂ ಇಳಿಸುವದಕ್ಕೆ ೧೩,೦೦೦ ಗೋಣಿ ಅಕ್ಕಿ ತುಂಬಿದ ಒಂದು ಹಡಗು ವಿಗೋರ್ಲದ ಬಳಿಯ ಒಡದು ಹೋಯಿತು.

ಮದ್ರಾಸ ಸಂಸ್ಥಾನದಲ್ಲಿ (ಮೈಸೂರು ಕೂಡ) ಐದು ಲಕ್ಷ ಮಂದಿ ಬರದಿಂದ ಸತ್ತು ಹೋದರು. ದುಷ್ಕಾಲದ ಧಾವತಿ ಇನ್ನೂ ಕಡಿಮೆಯಾಗಲಿಲ್ಲಾ; ಮೈಸೂರಿನಲ್ಲಂತೂ ಹೊಟ್ಟೆಗಿಲ್ಲದೆ ಬಳಲುವ ಬಡ ಜನರ ಸ್ಥಿತಿ ವರ್ಣಿಸಲಶಕ್ಯ; ಇಂಥಾ ಬರ ಮುಂಚೆ ಬೀಳಲಿಲ್ಲವಂತೆ; ಬೆಂಗಳೂರಿನಲ್ಲಿ ದಿನ ಒಂದಕ್ಕೆ ಸರಾಸರಿ ಇಪ್ಪತ್ತು ಹೆಣಗಳು ಬೀಳುತ್ತವೆ; ತಾಯಿ ತಂದೆಗಳು ಕೈ ಬಿಟ್ಟ ಮಕ್ಕಳನ್ನು ಕಥೋಲಿಕ ಮಿಶ್ಯನಿನವರು ಸಂರಕ್ಷಣೆ ಮಾಡುತ್ತಾರೆ. ಅತ್ಲಾಗೆ ಒಂದು ಸ್ಥಳದಲ್ಲಿ ಒಬ್ಬ ಕುರುಬರವನು ಹಶಿವೆ ತಾಳಲಾರದೆ, ಒಂದುವರೆ ವರುಷದ ತನ್ನ ಮಗುವಿನ ಕುತ್ತಿಗೆ ಕೊಯಿದು, ರಕ್ತ ಕುಡಿದು, ಮಾಂಸ ತಿಂದನಂತೆ; ಒಬ್ಬ ಹೆಂಗಸು ಸತ್ತ ಒಂದು ಹೆಣ ತಿನ್ನುವದನ್ನೂ, ಇನ್ನೊಬ್ಬಳು ಸತ್ತ ಕತ್ತೆಯನ್ನು ತಿನ್ನುವದನ್ನೂ ನೋಡಿದವರಿದ್ಧಾರಂತೆ; ದಕ್ಷಿಣದಲ್ಲಿಯೂ ಬರಗಾಲ ಕಠಿಣವಾಗಿದೆ. ಮಧುರೆ ಮಿಶ್ಯನಿನ ಒಂದು ಠಾಣ್ಯದಲ್ಲಿದ್ದ ೨೫೫ ಮಂದಿ ಕ್ರೈಸ್ತರಲ್ಲಿ ಅನೇಕರು ಸತ್ತು ಹೋಗಿ, ಅನೇಕರು ಗುಳೆ ತೆಗದು, ೯೮ ಮಂದಿ ಮಾತ್ರವೇ ಉಳಿದಿದ್ಧಾರಂತೆ; ದಯಾಳುಗಳಾದ ಸರಕಾರದವರು ಈ ವರೆಗೆ ಉಪಶಮನ ಮಾಡುವದರಲ್ಲೇ ಇದ್ಧಾರೆ; ಮುಂದಕ್ಕೂ ಮಾಡುವರು. ಇನ್ನೂ ಸಂಪನ್ನರಾದ ಪ್ರಜೆಗಳವರಿಂದಲೂ ಹಣ ಕೂಡಿಸಿ ಸಹಾಯ ಮಾಡ ಬೇಕೆಂಬ ಆಲೋಚನೆಯುಂಟು.

ಅನೇಕ ಕಡೆಗಳಲ್ಲಿ ಧಾನ್ಯವಿಲ್ಲದೆ ಬರೆಗಾಲವಲ್ಲಾ, ಧಾನ್ಯವಿದ್ದೂ ಬರೆಗಾಲವಾದ ಸಂಗತಿ. ಸಾವಕಾರರು ಬೇಕೆಂತ ಧಾರಣೆ ಏರಿಸುತ್ತಾರೆ. ಒಂದು ಸ್ಥಳದಲ್ಲಿ ಎಂಟು ರೂಪಾಯಿಗೆ ಧಾನ್ಯ ಕೊಂಡು, ಇಪ್ಪತ್ತು ರೂಪಾಯಿಗೆ ಮಾರುತ್ತಾರಂತೆ; ನೂರಕ್ಕೆ ನೂರೈವತ್ತರ ಮೇರೆಗೆ ಲಾಭ. ಒಂದು ಸ್ಥಳದಲ್ಲಿ ಕೆಲ ವರ್ಷಗಳಿಗೆ ಸಾಕಷ್ಟು ಧಾನ್ಯವಿದ್ದರೂ, ಹೆಚ್ಚು ಕ್ರಯ ಬರ ಬೇಕೆಂತ ಹಾಗೆ ಇಟ್ಟಿದ್ಧಾರಂತೆ. ಮಹಾ ಕರುಣಾಳು ದೇವರು ಕಟಾಕ್ಷವಿಟ್ಟು, ಆಕಾಶದಿಂದ ನಮಗೆ ಮಳೆಗಳನ್ನೂ ಫಲ ಫಲಿಸುವ ಕಾಲಗಳನ್ನೂ ಕೊಟ್ಟು, ನಮ್ಮ ಹೃದಯಗಳನ್ನು ಆಹಾರದಿಂದಲೂ ಆನಂದದಿಂದಲೂ ತುಂಬಿಸಿ ಒಳ್ಳೇದನ್ನು ಮಾಡುವಂತೆ ನಿತ್ಯಾ ಪ್ರಾರ್ಥನೆ ಮಾಡುವದು ಅವಶ್ಯವಾಗಿದೆ.

ಮದ್ರಾಸಿನಲ್ಲಿ ಬಳ್ಳಾರಿಯಲ್ಲಿ ಯಥೇಷ್ಟ ಮಳೆ ಬಂತು; ಹಾಂಗೂ ಕಡಪೆ, ಕರ್ನೂಲು, ಉತ್ತರ ಆರ್ಕಾಡು, ಮಚಲಿಬಂದರು, ವೇಲೂರು ಮುಂತಾದ ಊರುಗಳಲ್ಲಿಯೂ ಒಳ್ಳೇ ಮಳೆ ಬಂತು. ಅನಮಲೆ ಗುಡ್ಡಗಳಿಗೆ ಪಶ್ಚಿಮದಲ್ಲಿ ಸರಾಸರಿ ಒಂದುವರೆ ಅಂಗುಲ ಮಳೆ ಬಿದ್ದದರಿಂದ

ಬೆಳೆ ಒಳ್ಳೇದಾದೀತು; ಗುಜರಾತಿನಲ್ಲಿ ಕರಿಯದಲ್ಲಿ ಸ್ವಲ್ಪ ಮಳೆ; ಠಾಣಾ, ಅಹಮದನಗರ, ಸೊಲ್ಲಾಪುರ, ಸತಾರ, ಧಾರವಾಡ, ಬೆಳಗಾವ ಈ ಕಡೆಗಳಲ್ಲಿಯೂ ತಕ್ಕ ಮಟ್ಟಿಗೆ ಮಳೆ ಬಂದದೆ; ಮುಂಬಾಯಿ, ನಾಸಿಕ, ಡೂಲಿಯ, ಪುಣೆ, ಕಲದಗಿ ಈ ಪ್ರಾಂತಗಳಲ್ಲಿ ಮಳೆ ಕೊಂಚವಾಗಿ ಬಂದದೆ; ಕೊಂಕಣದಲ್ಲಿ ಬಹುಶಾ ಕಮ್ಮಿ.

ಗೋವೆಯ ಗವರ್ನರ ಜನರಲ್ ಧೊರೆ ತೀರಿಹೋದರಂತೆ.

ಕಾಗದ ಮಾಡುವದಕ್ಕಾಗಿ ಬ್ರಹ್ಮಿ ದೇಶದಿಂದ ಬಿದುರುಗಳು ರಾಶಿ ರಾಶಿಯಾಗಿ ಇಂಗ್ಲಾಂಡಿಗೆ ಕಳುಹಿಸುವದಕ್ಕೆ ಪ್ರಾರಂಭವಾಗಿದೆ.

ಕೆಲ ಸಮಯಕ್ಕೆ ಹಿಂದೆ ರಾಯಚೂರ ಜಿಲ್ಲೆಯ ಪೂರ್ವಭಾಗದಲ್ಲಿ ಕೆಂಪು ಬಣ್ಣದ ಮಳೆ ಬಿತ್ತು; ಮೂಢ ಜನರು ರಕ್ತದ ಮಳೆ ಬಿತ್ತೆಂದು ಹೇಳಿ, ನಾನಾ ಪ್ರಕಾರದ ಅನಿಷ್ಟ ಕಲ್ಪನೆ ಮಾಡುವವರಾದರು. ಆ ಮಳೆಯಲ್ಲಿ ಶುಭ್ರ ವಸ್ತ್ರ ನೆನಸಿ, ಒಣಗಿಸಿ, ಹೈದರಾಬಾದಿಗೆ, ಪ್ರಧಾನಿ ಸರ್ ಸಾಲಾರ್‌ಜಂಗ್ ಅವರ ಬಳಿಗೆ ಕಳುಹಿಸಿದ್ದು ಕೆಂಪು ಬಣ್ಣ ಕೊಟ್ಟ ಬಟ್ಟೆಯಂತೆ ಕಾಣುತ್ತದೆ. ಆದರೆ ಅದಕ್ಕೆ ರಕ್ತದ ಹಾಗೆ ವಾಸನೆ ಇಲ್ಲಾ, ಅದು ರಕ್ತವೆಂದು ಹೇಳುವದಕ್ಕೆ ಏನೂ ಆಧಾರವಿಲ್ಲಾ; ಕಣ್ಣಿಗೆ ಕಾಣದ ಅಣುಪ್ರಾಣಿಗಳು ಮಳೆ ನೀರಿನಲ್ಲಿದ್ದದರಿಂದ ಆ ರಂಗು ತೋರಿತು ಎಂದು ಬಲ್ಲವರು ಹೇಳುತ್ತಾರೆ. ಇಂಥಾದ್ದು ಎಂದೂ ಸಂಭವಿಸಲಿಲ್ಲವೆಂದು ನೆನಸ ಬಾರದು; ಜೂನ್ ತಿಂಗಳಲ್ಲಿ ರೋಮಪಟ್ಣದಲ್ಲಿಯೂ ನೆಪಲ್ಸ್‌ನಲ್ಲಿಯೂ ಸುಮಾರು ಕೆಂಪು ಬಣ್ಣದ ಉಸುಬಿನ ಮಳೆ ಬಿತ್ತು.

ಉತ್ತಮ ಜಾತಿಯ ಬ್ರಾಹ್ಮಣ ವಿಧವಾಸ್ತ್ರೀಯರು ಪ್ರಸಂಗವಶಾತ್ ಗರ್ಭಿಣಿಗಳಾದರೆ, ಮಾನನಷ್ಟವೂ ಜಾತಿನಷ್ಟವೂ ಆಗದಂತೆ, ಗುಪ್ತರೀತಿಯಿಂದ ಗರ್ಭಪಾತ ಮಾಡುವದರಿಂದ ವ್ಯಭಿಚಾರದೋಷದ ಹೊರ್ತು ಭ್ರೂಣಹತ್ಯ, ಬಾಲಹತ್ಯ ಮತ್ತು ಆತ್ಮಹತ್ಯದ ದೋಷವೂ ಘಟಿಸುತ್ತವೆ. ಇದನ್ನು ನಾಸಿಕಪಟ್ಣದ ಪರೋಪಕಾರಿಗಳಾದ ಗೃಹಸ್ಥರು ಮನಸ್ಸಿಗೆ ತಂದು, ಅಂಥಾ ಸ್ತ್ರೀಯರ ಉದ್ದಿಶ್ಯ ಒಂದು ಮನೆ ಸ್ಥಾಪಿಸಿ, ಅವರ ಪ್ರಸೂತಿಯ ಖರ್ಚು ಬಾಲರಕ್ಷ್ಣೆ ಸಹ ಮಾಡುವದಕ್ಕೆ ನಿಶ್ಚಯ ಮಾಡಿದ್ದಾರೆ. ಮತ್ತು ಗರ್ಭಪಾತ ಮಾಡುವದಕ್ಕೆ ಔಷಧ ಕೊಡುವ ಸ್ತ್ರೀಯರು ಇನ್ನು ಹಾಗೆ ಮಾಡದೆ, ಗರ್ಭಿಣಿಗಳಾದ ವಿಧವೆಗಳನ್ನು ಆ ಮನೆಗೆ ತಲಪಿಸಿದರೆ, ಅಂಥಾ ಸ್ತ್ರೀಯರಿಗೆ ಹತ್ತು ರೂಪಾಯಿ ದಾನವಾಗಿ ಶಿಕ್ಕುವದಂತೆ.

ಬಾಣಾವರದಲ್ಲಿ ಒಂದು ತೋಫಿಗೆ ಪೂಜೆ ನಡಿಯುತ್ತದಂತೆ; ಆದರೆ ಸರಕಾರದವರ ಅಪ್ಪಣೆಯ ಮೇರೆಗೆ ಆ ತೋಫು ಒಡದು ಹಾಕಲ್ಪಟ್ಟ ಮೇಲೆ ಅದರೊಳಗಿದ್ದ ಗುಂಡು ಜನರು ತೆಗದುಕೊಂಡು, ಅದಕ್ಕೆ ಪೂಜೆ ಮಾಡುತ್ತಾರಂತೆ.

ಒಬ್ಬ ಯೌವನಸ್ಥ ಬ್ರಾಹ್ಮಣ ಕ್ರೈಸ್ತನಾಗಬೇಕೆಂದು ಮಾಲೆಗಾವಿಗೆ ಮಿಶ್ಯನೆರಿಯ ಬಳಿಗೆ ಬಂದು, ಅಲ್ಲಿ ಮೂರು ದಿನಗಳಿದ್ದ ಮೇಲೆ, ಅವನ ಕಡೆಯವರು ಬಂದು, ಶತಪ್ರಯತ್ನ ಮಾಡಿ ಅವನನ್ನು ಪುನಹ ಕರಕೊಂಡು ಹೋಗಿ, ಚನ್ನಾಗಿ ಹೆದರಿಸಿ, ಪಂಚಗವ್ಯ ಕೊಟ್ಟು, ಕುತ್ತಿಗೆಗೆ ಹೊಸ ಜನಿವಾರ ಹಾಕಿ, ಪ್ರಾಯಶ್ಚಿತ್ತ ಮಾಡಿ, ಅಲ್ಲಿಂದ ನಾಸಿಕಕ್ಕೆ ವೈದು, ಮತ್ತೊಂದು ಪ್ರಾಯಶ್ಚಿತ್ತ ಮಾಡಿ, ಹೀಗೆ ಸಗಣಿ ಗೋಮೂತ್ರಗಳಿಂದ ಅವನನ್ನು ಎರಡನೇ ಬ್ರಾಹ್ಮಣನಾಗ ಮಾಡಿದರಂತೆ.

ಕಪುರತಲದ ಮಹರಾಜನ ಸಹೋದರಕನವರ ಹೆರನಾಮಸಿಂಗ್ ಎಂಬವನನ್ನು ಸರಕಾರದವರು ಅಯೋಧ್ಯೆಯಲ್ಲಿ ಆ ಮಹಾರಾಜನಿಗಿರುವ ದೊಡ್ಡ ಆಸ್ತಿಯ ಪಾರುಪತ್ಯಗಾರನಾಗಿ ನೇಮಿಸಿದ್ದಾರೆ. ಈ ಹೆರನಾಮಸಿಂಗ್ ಎಂಬಾತನು ಕೆಲವು ವರುಷಗಳ ಹಿಂದೆ ಕ್ರೈಸ್ತನಾದವನು.

ಕಲ್ಕತ್ತದಲ್ಲಿ ಒಬ್ಬ ಬ್ರಾಹ್ಮಣಿ ಯೌವನಸ್ಥೆ ಒಳ್ಳೇ ಮನೆತನದಾಕೆ ಕ್ರೈಸ್ತಳಾದಳು. ಅವಳ ಗಂಡನು ಬ್ರಾಹ್ಮಣ ಮತದಲ್ಲೇ ಇದ್ದಾನೆ.

ಅಮೇರಿಕನ್ ಬಪ್ತಿಸ್ತ ತೆಲುಗು ಮಿಶ್ಯನಿನಲ್ಲಿ ಕಳೆದ ವರುಷ ೫೨೨ ಮಂದಿ ಸ್ನಾನ ಹೊಂದಿದರು; ಅಂತು ಆ ಮಿಶ್ಯನಿನಲ್ಲಿ ೩೩೦೪ ಕ್ರೈಸ್ತರಿದ್ದಾರೆ.

ಬೌದ್ಧರ ಸನ್ಯಾಸಿಮಠಗಳು, ತಲೆ ಕ್ಷೌರ ಮಾಡಿ ಭಿಕ್ಷೆ ಎತ್ತುವ ಸನ್ಯಾಸಿಗಳು, ವಿರಕ್ತಸ್ತ್ರೀಯರ ಮಠಗಳು, ಅವರ ಉಪವಾಸ, ಅವಿವಾಹಿತ್ವ, ಧೂಪಾರ್ಪಣೆ, ಜಪಮಾಲೆ, ಕೈಯಲ್ಲಿ ಮಗುವನ್ನು ಹಿಡಿದು ಕೊಂಡು ಎದೆಯಲ್ಲಿ ಕ್ರೂಜೆಯ ರೂಪವಿರುವ ಸ್ತ್ರೀಯ ಪ್ರತಿಮೆಗಳು ಇವೆಲ್ಲಾ ನೋಡಿದರೆ, ರೋಮಸಭೆಯವರಿಗೂ ಅವರಿಗೂ ಮಹಾ ಸಮಾನತ್ವ ಕಾಣುತ್ತದೆ. ರೋಮಾಯರು ಬೌದ್ಧರಿಂದ ಆ ಆಚಾರಗಳನ್ನು ತಕ್ಕೊಂಡರೋ ಏನೋ?

ಅಮೇರಿಕದ ಯೂನೈಟೆಡ್ ಸ್ಟೇಟ್ಸಿನ ಮಾಜಿ ಅಧಿಕಾರಿಯಾಗಿದ್ದ ಜನರಲ್ ಗ್ರಾಂಟ ಎಂಬವರು ಹಿಂದುಸ್ಥಾನ ನೋಡುವದಕ್ಕೆ ಬರುವವರಿದ್ಧಾರೆ.

ಅಮೇರಿಕದ ಕಲಿಫೋರ್ನಿಯಾ ಪ್ರಾಂತ್ಯದಲ್ಲಿ ಚೇನಿಯವರದೊಂದು ಬಸ್ತಿ ಅದೆ. ಅವರಲ್ಲಿ ನೂರಾರು ಜನರು ಕ್ರೈಸ್ತರಾಗಿದ್ಧಾರೆ. ಅವರು ವಿಲಾಯತಿಯ ಕ್ರೈಸ್ತರಂತೆ ಶಾಂತರೂ ಬುದ್ಧಿವಂತರೂ ಆಗಿದ್ದು, ಕ್ರಿಸ್ತನ ಸೇವೆಯಲ್ಲಿ ಶ್ರಮ ಮಾಡುವವರಾಗಿದ್ಧಾರೆ.

ನ್ಯೂಹೆಬ್ರೀದೆಸ್ ಎಂಬ ದ್ವೀಪಗಳಲ್ಲಿ ಅನೈತ್ಯಮ್ ಅವಿವಾ ಎಂಬ ಎರಡು ದ್ವೀಪಗಳವರು ಎಲ್ಲರೂ ವಿಗ್ರಹಾರಾಧನೆಯನ್ನೂ ಮನುಷ್ಯಮಾಂಸ ತಿಂಬೋಣ ಮುಂತಾದ ಸಕಲ ಮ್ಲೇಛ ಕೃತ್ಯಗಳನ್ನು ಬಿಟ್ಟು ಕ್ರೈಸ್ತರಾದರು. ಅನೈತ್ಯಮ್ ದ್ವೀಪದ ಭಾಷೆಯಲ್ಲಿ ಹೊಸ ಒಡಂಬಡಿಕೆ ಟೀಕಿಸಲ್ಪಟ್ಟದೆ.

ಕ್ವೀಟೊಲ ಊರಿನ ಅರ್ಚಬಿಶೊಪನು ಮಿಸ್ಸ ಯಾಗ ಮಾಡುತ್ತಿರುವಾಗ್ಯೆ, ಆ ಆಚರಣೆಯಲ್ಲಿ ಉಪಯೋಗಿಸಲ್ಪಡುವ ದ್ರಾಕ್ಷೇ ರಸದೊಳಗೆ ಯಾರೋ ದಾವೆಯಿಂದ ವಿಷ ಬೆರಸಿದ್ದು ತಿಳಿಯದೆ ಕುಡಿದು ಮೃತವಾದನು. ಈ ಪಾತಕಿಗಳು ಯಾರೋ ತಿಳಿದು ಬರಲಿಲ್ಲಾ. ಮಿಸ್ಸದಲ್ಲಿ ಪಾತ್ರದೊಳಗಿನ ದ್ರಾಕ್ಷೇ ರಸವು ಶುದ್ಧ ಕ್ರಿಸ್ತನ ರಕ್ತವಾಗುತ್ತದೆಂತ ಕಥೋಲಿಕರು ಹೇಳುತ್ತಾರಷ್ಟೇ; ಆಗ್ಯೆ ಆ ಅದ್ಭುತಶಕ್ತಿ ಎಲ್ಲಿ ಹೋಯಿತು? ಒಂದಿಷ್ಟು ವಿಷ ಆ ಅದ್ಭುತವನ್ನು ತಡಿಯುವಂಥಾದ್ದಾಯಿತೋ?

ಮೇ ತಿಂಗಳಲ್ಲಾದ ಮಹೋತ್ಸವಕಾಲದಲ್ಲಿ ಪೋಪನಿಗೆ ೮೦ ಲಕ್ಷ ರೂಪಾಯಿ ಲಭ್ಯವಾಯಿತಂತೆ.

ಮಧ್ಯಸಮುದ್ರದಲ್ಲಿ ತಿಮಿಂಗಿಲ ಮೀನು ಇಲ್ಲವೆಂತ ನೆನಸುವವರಿದ್ದರು; ಆದರೆ ಕೆಲ ಕಾಲದ ಹಿಂದೆ ಅರವತ್ತು ಅಡಿ ಉದ್ದವಾದದೊಂದು ತಿಮಿಂಗಲ ಸತ್ತು, ತೂರ ಪಟ್ಣದ ಸಮುದ್ರಧಡದಲ್ಲಿ ಬಂದು ಬಿತ್ತು.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

೧೮೭೫ನೇ ಇಸ್ವಿಯಲ್ಲಿ ೨೪೫೨ ಜನರಿದ್ದ ಆರ್ಕಾಟು ಮಿಶ್ಯನಿನ ಸಭೆಗಳು ೧೮೭೬ನೇ ಇಸ್ವಿಯಲ್ಲಿ ೭೫೭೪ ಮಂದಿಯಾಗುವಷ್ಟಕ್ಕೆ ಹೆಚ್ಚಿ ಬೆಳೆದವು. ಸದರಿ ಸಭೆಗಳಲ್ಲಿ ಸಹ ಕಳೆದ ವರುಷದಲ್ಲಿ ಬರವೂ ರೋಗವೂ ಪ್ರಬಲವಾಗಿತ್ತು. ಸ್ವಲ್ಪ ಹೆಚ್ಚುಕಡಿಮೆಯಾಗಿ ಆ ಸಭೆಯವರೆಲ್ಲರು ಬಡವರಾಗಿರುವದರಿಂದ ದುರ್ಭಿಕ್ಷೆಯ ಬಾಧೆ ಅವರಿಗೆ ಮತ್ತಷ್ಟು ಹತ್ತಿ ಅನುಭವವಾಗಲಿಕ್ಕಾಯಿತು. ಏನೂ ಬೆಳೆಯಾಗದ ಕಾರಣ ತಿನ್ನಲಿಕ್ಕೆ ಆಹಾರವು ಇಲ್ಲದೆ ಹೋಯಿತು. ಆಹಾರವನ್ನು ಕೊಂಡು ಕೊಳ್ಳಲಿಕ್ಕೆ ಬಡವರಿಗೆ ಹಣವಿಲ್ಲ; ಕೆಲಸ ಮಾಡಿ, ಹಣವನ್ನು ದುಡಿದು ಕೊಳ್ಳುವ! ಅಂದರೆ, ಅದಕ್ಕೆ ಮಾರ್ಗವಿಲ್ಲ, ಯಾಕಂದರೆ ಕೆಲಸ ಶಿಕ್ಕುವದಿಲ್ಲ. ಆದರೂ ಸರಕಾರದ ಹಣವನ್ನೆಲ್ಲಾ ಕೊಡ ಬೇಕಾಯಿತು. ಅದನ್ನು ಬಿಡ ಬೇಕೆಂತ ಬಡವರು ಅರ್ಜಿ ಬರಕೊಂಡರು; ಆದರೆ ಸರಕಾರದವರು ಮನವಿ ಕೇಳಲಿಲ್ಲ. ಸರಕಾರಕ್ಕೆ ಕೊಡಲಿಕ್ಕಾಗಿ ಹಣವು ಶಿಕ್ಕುವ ಹಾಗೆ ನೇಗಿಲು ಎತ್ತು ಮುಂತಾದ್ದನ್ನು ಮಾರಿ ಬಿಡ ಬೇಕಾಯಿತು.

ಇತ್ತಲಾಗೆ ಕಲ್ಕತ್ತಕ್ಕೆ ಕೇವಲ ಹೊಸಬರಾಗಿ ಬಂದು, ಈ ದೇಶದಲ್ಲಿ ಬರೇ ಒಂದು ಮಳೆಗಾಲವನ್ನಾದರೂ ಪೂರ್ಣ ನೋಡಿ ಕಳೆಯದಂಥಾ ಇಂಗ್ಲಿಷ್ ರಾಜಾಶ್ರಿತ ಕ್ರೈಸ್ತ ಸಭೆಯ ಬಿಶೋಪರು ಒಂದು ಆಲೋಚನಾಸಭೆಯನ್ನು ಕರಿಸಿ ನೆರೆಸಿ, "ಬಿಶೋಪರ ಅಧಿಕಾರಕ್ಕೂ, ಮಿಶ್ಯನ್ ಸಂಘಗಳವರಿಗೂ ಎಂಥಾ ಗೊಡವೆ ಇರಲೂ ಆಗಲೂ ತಕ್ಕದ್ದು" ಎಂಬುವ ವಿಷಯದಲ್ಲಿ ಪ್ರಬಂಧಗಳನ್ನು ಓದಿಸಿ, ವಿಮರ್ಶೆ ಮಾಡಿಸಿದಲ್ಲಿ ಆಲೋಚನಾಸಭೆಯುವರಲ್ಲಿ ಹೆಚ್ಚಾದವರು ಬಿಶೋಪರ ಅಧಿಕಾರಕ್ಕೂ ಮಿಶ್ಯನ್ ಸಂಘಗಳವರಿಗೂ ಹೆಚ್ಚಿನ ಅನುಬಂಧವಾಗಿ, ಮಿಶ್ಯನ್ ಕಾರ್ಯವು ಬಿಶೋಪರ ಅಂಕೆಯಲ್ಲಿ ಶೇರಿ ಸಾಗುವದು ಅನಾವಶ್ಯವೂ ಅವಿಹಿತವೂ ಆಗಿದೆ ಎಂಬದಾಗಿ ಮಾತಾಡಿ ತಿಳಿಸಿದಾಗ್ಯೂ, ಬಿಶೋಪರು ಕಟ್ಟ ಕಡೆಗೆ ಎದ್ದು, ತಾನೇ ಈ ವಿಷಯದ ವಿಚಾರವನ್ನು ಬಗೆ ಹರಿಸಿ, ತನಗೆ ಸರಿಯಾಗಿ ಕಾಣುವಂತೆ ನಿಷ್ಕರ್ಷಿಸಿ, ನಡಿಸ ತಕ್ಕದ್ದು ಎಂಬದು ನಡೆದ ಭಾಷಣಾದಿಗಳ ಸಾರಾಂಶವೂ ಆಲೋಚನಾಸಭೆಯುವರ ಮುಖ್ಯ ಅಭಿಪ್ರಾಯವೂ ಎಂದು ತನಗೆ ಕಂಡದರಿಂದ, ತಾನು ಆ ಪ್ರಕಾರವಾಗಿ ನಡಿಸುವೆನು ಎಂಥೇಳಿ, ಸಭೆಯನ್ನು ಅಗಲಿಸಿದರು.

ಮುಂಬಾಯಿಯಲ್ಲಿ ಹಿಂದುಗಳೂ ಮುಸಲ್ಮಾನರೂ ಕ್ರೈಸ್ತರೂ ತಮ್ಮ ತಮ್ಮ ಮತಾಚಾರಕ್ಕೆ ಒಪ್ಪಾಗಿ ಮಳೆಗೋಸ್ಕರ ಪ್ರಾರ್ಥನೆಗೆ ಕೂಡಿ ಕೊಂಡು, ಬೇಡಿ ಕೊಳ್ಳುವವರಾದರು. ಕ್ರೈಸ್ತರು ಒಮ್ಮೆ ಕೂಡಿ ಕೊಂಡು ಪ್ರಾರ್ಥಿಸುತ್ತಿದ್ದ ಹೊತ್ತಿಗೆನೇ ಘನ ಮಳೆ ಶುರುವಾಗಿ, ಶುಮಾರಿನ ಹೊತ್ತಿಗೆ ಬೀಳುವದಾಯಿತಂತೆ. ಮಳೆ ತಕ್ಕಷ್ಟು ಬಂದ ಕಾರಣ ಮುಂಬಾಯಿ ಸಂಸ್ಥಾನದಲ್ಲಿ ಪೈರು ಹಣ್ಣಾಗಿ, ಕಟಾವು ಆದನಂತರ ದುರ್ಭಿಕ್ಷೆಯ ಬಾಧೆ ಹಿಂಗುವದೆಂಬ ಆಶೆಗೆ ಆಸ್ಪದ ತೋರುತ್ತದಂತೆ. ಆದರೆ ಸದ್ಯಕ್ಕೆ ಬರದ ಕಷ್ಟವು ಇಲ್ಲಿ ಅಲ್ಲಿ ಇನ್ನು ಬಹಳವಂತೆ.--ಜೂಲಾಯಿ ೨೪ರಲ್ಲಿ ಹುಬ್ಬಳ್ಳಿಯಿಂದ ಮಂಗಳೂರಿಗೆ ರವಾನೆಯಾದ ಕಾಗದದಿಂದ ಒಂದೆರಡು ಮಾತನ್ನು ಹೆಕ್ಕಿ ತಿಳಿಸುತ್ತೇನೆ. "ಕಳೆದ ವರುಷದಲ್ಲಿ ಮಳೆ ಸಾಲದೆ ಹೋದ್ದೇ ದುರ್ಭಿಕ್ಷೆಗೆ ಕಾರಣವಾಯಿತೆಂಬ ಭಾವನೆಯನ್ನು ಹಿಡಿದು, (ಮುಂಬಾಯಿ ಸಂಸ್ಥಾನದ) ಸರಕಾರದವರು ಇತ್ತಲಾಗೆ ಒಂದಿಷ್ಟು ಮಳೆ ಶುರುವಾದ ಕೂಡ್ಲೇ—'ಈಗ ಮಳೆ ಬಂತಲ್ಲ! ಹಾಗಾದರೆ ದುರ್ಭಿಕ್ಷೆಯ ಕಾರಣ ನಿವಾರಣೆಯಾಗಿ, ಬಡವರ ಸಹಾಯಾರ್ಥಕ್ಕೆ ತೊಡಗಿದ್ದ ಕೆಲಸಗಳನ್ನು ನಿಲ್ಲಿಸಿ ಬಿಡ ಬಹುದು,' ಎಂದು ಬಗೆದು, ಸದರಿ ಕೆಲಸಗಳು ಮೋಖೂಪಾಗಿ, ಜನರು ತಮ್ಮ ತಮ್ಮ ಊರು ಗ್ರಾಮ ಹಳ್ಳಿಗಳಿಗೆ ಹೋಗಿ, ತಮ್ಮ ಭೂಮಿಗಳನ್ನು ವ್ಯವಸಾಯ ಮಾಡ ಬೇಕೆಂತ ಹುಕುಂ ಹೊರಡಿಸಿದರು. ಈ ಹುಕುಮಿನ ಮೇರೆಗೆ ಕೆಲಸಗಳು ಮೋಖೂಪಾದವು, ಮತ್ತು ಜನರುಗಳನ್ನು ಪೊಲೀಸಿನವರು ದನಕರುಗಳ ಹಿಂಡುಗಳೇನೋ ಎಂಬಂತೆ ಗುಂಪು ಗುಂಪಾಗಿ ಹೊಡಕೊಂಡು ಹೋಗಿ, ಅವರವರ ಊರಲ್ಲಿ ಮುಟ್ಟಿಸಿದರು. 'ಇಲ್ಲಿಂದ ೨೩,೦೦೦ ಜನರು ತಮ್ಮೂರಿಗೆ ಬಿಟ್ಟು ಹೋದರು. ಸಹಾಯಾರ್ಥಕ ಕೆಲಸ ಮೋಖೂಪು ಮಾಡಲಾಯಿತು. ಬರದ ಬಾಧೆ ಹಿಂಗಿ ಹೋಯಿತು. ಎಲ್ಲೆಲ್ಲಿಯೂ ಸಮೃದ್ಧಿಯ ಲಕ್ಷಣ ಕಾಣುತ್ತದೆ' ಎಂಬೀ ತರದ ರಿಪೋರ್ಟುಗಳು ವರ್ತಮಾನಪತ್ರಗಳಲ್ಲಿ ಹಬ್ಬಿಸೋಣಾದವು. ಅಷ್ಟರಲ್ಲಿ ಜನರು ತಮ್ಮ ಊರನ್ನು ಶೇರಿ, ಆಹಾರವಾಗಲಿ, ಭೂಮಿಯನ್ನುತ್ತು ವ್ಯವಸಾಯ ಮಾಡಲಿಕ್ಕೆ ಎತ್ತಾಗಲಿ, ಬೀಜವಾಗಲಿ ಇಲ್ಲದೆ, ಹನಿಗೆ ತಪ್ಪಿಸಿ ಕೊಂಡು ಹೊಳೆಗೆ ಬಿದ್ದಂತಾದರು. ಹುಡುಗರು ಮುದುಕರು ಗಂಡಸರು ಹೆಂಗಸರು ದನಗಳು ಕರುಗಳು ಮೈಗುಂದಿ, ನಡೆಯಲಾರದೆ ಬಿದ್ದು, ಸತ್ತು ಹೋಗುವಂಥಾದ್ದು ಹೋದ ಹೋದಲ್ಲಿ ಕಾಣುತ್ತದೆ".—ಹಿಂದುಸ್ಥಾನದ ಸರ್ವಾಧಿಪತಿಗಳು ಈಗ ಮುಂಬಾಯಿಗೂ ಮದ್ರಾಸಿಗೂ ಬಿಜಯಂ ಗೈದು, ದುರ್ಭಿಕ್ಷೆಯ ಬಾಧೆ ಹಿಂಗಿ, ಜನರಿಗೆ ಉದ್ಧಾರವಾಗುವ ಬಗ್ಯೆ ತಕ್ಕ

ಹಂಚಿಕೆಗಳನ್ನು ಯೋಚಿಸುವರಂತೆ. ಆದರೆ "ಆಕಾಶವು ಹರಿದು ಬೀಳುವಾಗೈ, ಯಾರಾದರೂ ಸೈ, ಅಂಗೈ ಒಡ್ಡಿದರೆ ನಿಂತೀತೇ?" ಜನವರಿ ೧ರಲ್ಲಿ ಡಿಲ್ಲಿಯಲ್ಲಿ ಮಹಾರಾಣಿ ವಿಕ್ಟೋರಿಯ "ಕೈಸರ್ ಈ ಹಿಂದ್" ಎಂಬ ಹೆಚ್ಚಿನ ನಾಮಧೇಯವನ್ನು ಧರಿಸಿ ಕೊಂಡು ಪ್ರಕಟಿಸಿದ ಉತ್ಸವದಲ್ಲಿ ಇವರು ಆಡಂಬರಗಳನ್ನಲ್ಲದೆ ದೇವರ ನಾಮಸ್ಮರಣೆಯನ್ನಾಗಲಿ ಪ್ರಾರ್ಥನೆಯನ್ನಾಗಲಿ ಮಾಡಿದ್ದು ವ ಮಾಡಿಸಿದ್ದಾದರೂ ಉಂಟೋ? ಇಲ್ಲ. ಅಂಥಾ ಉತ್ಸವದ ಮೇಲೆ ಅಂಥ ಉಪದ್ರ ಬಂದದು ದೇವರ ಕೈಯೋ? ಅಲ್ಲವೋ?

ಇಂಗ್ಲಿಷರು ಇತ್ತಲಾಗೆ ತುರ್ಕರಿಗೆ ಒತ್ತಾಸೆ ಮಾಡುವರು ಎಂತ ಕಾಣಿಸುವ ಪ್ರಕಾರದಲ್ಲಿ ಅವರ ಹಿತವಿಚಾರಕ್ಕೆ ಹೋದಲ್ಲಿ ತುರ್ಕರು ಅವರಿಗೆ ನಂಬಿ ಕೊಳ್ಳಲಾರದೆ, ನಿಮ್ಮ ಉಪಕಾರವು ನಮಗೆ ಬೇಡ, ನಮ್ಮ ಕೆಲಸಕ್ಕೆ ನಾವೇ ನೋಡುತ್ತೇವೆ ಎಂಧೇಳಿ, ಜರಿದು ಕಳುಹಿಸಿದರಂತೆ.

ತುರ್ಕ್ಯ ಅರ್ಮೇನ್ಯದಲ್ಲಿ ರುಸ್ಯರು ಇತ್ತಲಾಗೆ ತುರ್ಕರಿಗೆ ಬೆಂಕೊಟ್ಟು, ಹಿಮ್ಮೆಟ್ಟಿದರು. ಅವರು ತುರ್ಕರಿಗೆ ಪೂರ್ಣ ಸೋತು ಹೋಗಲಿಲ್ಲವಾದರೂ, ಅವರನ್ನು ತಡಿಸಲಾರದೆ, ಹೆಚ್ಚಿನ ಪೆಟ್ಟು ತಗಲಿ, ಹಾನಿಯಾಗದ ಹಾಗೆ ಹಿಂಜರಿದರು. ಕಾರಣಃ ರುಸ್ಯ ದಂಡಿನ ಎದುರಿನಲ್ಲಿದ್ದ ತುರ್ಕ್ಯ ದಂಡು ಹೆಚ್ಚಿ ಬಲಿದದಲ್ಲದೆ, ಅವರ ಬೆನ್ನಿನಲ್ಲಿಯು ಕೌಕಸುಸ್ ಎಂಬ ಶೈಲಾಂತರಗಳಲ್ಲಿ ಮುಸಲ್ಮಾನ ನಿವಾಸಿಗಳು ತೊಡಗಿದ ಕಲಹಕಂಟಕವೂ ಹೆಚ್ಚಿ, ಆ ದಿಕ್ಕಿನಿಂದಲೂ ಅವಾಂತರ ಹತ್ತಿ, ಇಕ್ಕಟ್ಟು ಒದಗಿ ಬಂದದೆ. ಆದರೆ ಹೊಸ ಬೆಂಬಲವು ಆ ದಿಕ್ಕಿಗೆ ಕೂಚು ಮಾಡಿ ಮುಟ್ಟಿದ ಈಚೆಯಲ್ಲಿ ರುಸ್ಯರು ತಿರಿಗಿ ಎದೆ ಹೂಡಿ, ತುರ್ಕ್ಯ ದಳದ ಮೇಲೆ ಬೀಳಲಿಕ್ಕೆ ಹತ್ತಿದರಂತೆ.

ವಿಲಾಯತಿಯು ತುರ್ಕ್ಯ ರಾಜ್ಯಕ್ಕೆ ಶೇರಿದ ರೂಮೀಲ್ಯ (ಪ್ರಾಚೀನ ಮಕೆದೋನ್ಯ) ಥೆಸಾಲ್ಯ ಎಂಬ ಶೀಮೆಗಳಲ್ಲಿ ಅನೇಕ ಗ್ರೇಕ ಕ್ರೈಸ್ತರು ತುರ್ಕರ ಮಧ್ಯದಲ್ಲಿ ವಾಸವಾಗಿದ್ದಾರೆ. ಈ ಗ್ರೇಕ ಕ್ರೈಸ್ತರು ತುರ್ಕರ ತಂಟೆ ಉಪದ್ರಗಳನ್ನು ಇನ್ನು ತಡೆಯಲೊಲ್ಲದೆ, ಅವರ ಮೇಲೆ ಏಳುವ ಹಾಗೆ ಇದ್ದಾರಂತೆ. ಇವರು ತುರ್ಕರ ಮೇಲೆ ಬಿದ್ದ ಬಳಿಕ ಗ್ರೀಸ್ಯರಾಜ್ಯದವರು ಸಹ ಅವರ ಮೇಲೆ ಬೀಳಲಿಕ್ಕೆ ಸಾಕು. ದಕ್ಷಿಣದಲ್ಲಿರುವ ಇವರೂ ತುರ್ಕರ ಮೇಲೆ ಬಿದ್ದರೆ; ತುರ್ಕರಿಗೆ ನಾಲ್ಕು ದಿಕ್ಕಿನಲ್ಲಿ ಕಚ್ಚಾಟವೇ. ಪೂರ್ವದಲ್ಲೂ ಉತ್ತರದಲ್ಲೂ ರುಸ್ಯರು ಕಚ್ಚುತ್ತಾರೆ. ಪಶ್ಚಿಮದಲ್ಲಿ ಮೊಂತನಿಗ್ರೊ (ಕರೆ ಮಲೆ) ಮೊದಲಾದ ಶೀಮೆಯವರು ಕಚ್ಚುತ್ತಿದ್ದಾರೆ.

ದನೂಬ ನದಿಯನ್ನು ದಾಟಿ ಬಂದ ರುಸ್ಯ ದಳದ ಸೇನಾಗ್ರವು ಜೂಲೈ ೧೬ರಲ್ಲಿ ಬಲ್ಕಾನ ಅಥವಾ ಹೇಮು ಎಂಬ ಪರ್ವತಶ್ರೇಣಿಯನ್ನು ದಾಟಿ ಬಂತು. ಅದ್ರಿಯನೊಪೊಲಿ ಎಂಬ ಎರಡನೇ ಮುಖ್ಯ ನಗರವು ಅವರ ಕೈಯಲ್ಲಿ ಬೀಳದ ಹಾಗೆ ತುರ್ಕರು ಈ ಪಟ್ಣವನ್ನು ಭದ್ರವಾಗಿರಿಸುವಂತೆ ಕೊನ್ಸ್ತಂತಿನೊಪೊಲಿಯಿಂದ ಸಾಧ್ಯವಾದಷ್ಟು ಜನರನ್ನು ದಂಡೆತ್ತಿ ಕೂಡಿಸಿ ಕಳುಹಿಸಿದರು. ಇದಲ್ಲದೆ ಮೊಂತನಿಗ್ರೊ ಎಂಬ ಶೀಮೆಯಲ್ಲಿದ್ದ ದಳಕ್ಕೂ ಕೈಲಾಗುವಷ್ಟು ತ್ವರೆಯಲ್ಲಿ ಅಲ್ಲಿಂದ ಹೊರಟು, ಹಡಗಗಳನ್ನೇರಿ ಕೊಂಡು, ಅದ್ರಿಯನೊಪೊಲಿಯ ಕಡೆಗೆ ಬರ ಬೇಕೆಂತ ಅಪ್ಪಣೆಯಾಯಿತು. ದಳವಾಯಿ ಈ ಅಪ್ಪಣೆಯನ್ನು ಶಿರಸಾವಹಿಸಿ ಕೊಂಡು, ದಳವನ್ನು ಆಶ್ಚರ್ಯ ಹುಟ್ಟಿದಷ್ಟು ತ್ವರಿತವಾಗಿ ಅಲ್ಲಿಂದ ಹೊರಡಿಸಿ, ಈ ದಿಕ್ಕಿಗೆ ಮುಟ್ಟಿಸಿದನು. ಇದರಿಂದ ಮೊಂತನಿಗ್ರೊ ಜನರಿಗೆ ಮಹೋಪಕಾರವಾಯಿತು. ಅವರು ಚಿಕ್ಕ ಜನಾಂಗವಾಗಿದ್ದಾಗ್ಯೂ, ಸುಮಾರು ೧೨ ತಿಂಗಳು ತುರ್ಕರ ಸಂಗಡ ಸೋತು ಹೋಗದೆ ಕಾದಾಡುತ್ತಾ ಬಂದ ಈಚೆಯಲ್ಲಿ ಅವರು ತಮ್ಮ ದಂಡನ್ನು ಸಂಖ್ಯೆಯಲ್ಲಿ ಬಹಳವಾಗಿ ಮೀರಿ ಹೋದ ತುರ್ಕ್ಯ ದಂಡಿಗೆ ಈಡಾಗದೆ, ಕೆಲವು ಸಾರಿ ಪೆಟ್ಟು ತಾಗಿ, ಹಿಂಜರಿಯ ಬೇಕಾಯಿತು. ತುರ್ಕ್ಯ ದಂಡು ಹೊರಟು ಹೋದನಂತರ ಹತ್ತಿದ ಅವಾಂತರವು ತಪ್ಪಿದ್ದಲ್ಲದೆ ಮತ್ತೂ ಹೋರಾಡಲಿಕ್ಕೆ ಅವರಿಗೆ ಉಪಾಯವಾಯಿತು.

ಪ್ರಾಚೀನ ಕಾಲದಲ್ಲಿ ತಿರ್ನೋವ ಎಂಬ ಪಟ್ಣವು ಬುಲ್ಗಾರ್ಯ ಶೀಮೆಯು ಮುಖ್ಯ ನಗರವಾಗಿತ್ತು. ಈ ಪಟ್ಣವನ್ನು ರುಸ್ಯರು ಸಾಧಿಸಿ ಕೊಂಡರು. ಅದರ ಸಾಧನೆ ಒಂದು ಮಹಾ ಶೌರ್ಯ ಕಾರ್ಯವಾಯಿತಂತೆ. ಬಳಿಕ ರುಸ್ಯ ಮಹಾರಾಜನು ಅಲ್ಲಿಗೆ ಬಿಜಯಂಗೈದು, ಒಂದು ನಿರ್ಣಯಪತ್ರಿಕೆಯನ್ನು ಪ್ರಕಟಿಸಿದ್ದಕ್ಕೆ ಬುಲ್ಗಾರ್ಯದ ಕ್ರೈಸ್ತರಿಗೆ ಮಹಾ ಉಲ್ಲಾಸವಾಯಿತಂತೆ; ಆದರೆ ತುರ್ಕರು ಬಹಳ ವಿಕಲ್ಪಗೊಂಡರು. ಮತ್ತು ಆ ಶೀಮೆಯ ಕ್ರೈಸ್ತರಲ್ಲಿ ಇತ್ತಲಾಗೆ ತಿರಿಗಿ ಮಹಾ ಕ್ರೂರ ರಾಕ್ಷಸಕೃತ್ಯಗಳನ್ನು ನಡಿಸಿ, ೧೫ ಸಾವಿರ ಜನರನ್ನು ಹಿಂಸಿಸಿ, ಸಂಹಾರ ಮಾಡಿದರಂತೆ.

ರುಸ್ಯರು ಬಲ್ಕಾನ ಪರ್ವತಾವಳಿಯನ್ನು ದಾಟಲಿಕ್ಕೆ ಸ್ವಲ್ಪ ದುಡುಕು ಪಟ್ಟದರಿಂದ, ಒಂದೆರಡು ಕಡೆಯಲ್ಲಿ ಅಪಾಯಕ್ಕೆ ಗುರಿಯಾಗಿ ತಿರಿಗಿ ಹಿಂಜರಿಯ ಬೇಕಾಯಿತು. ಬೇಕಾದ ಜನರನ್ನೂ ರಸ್ತುಗಳನ್ನೂ ಬೇಕಾದಲ್ಲಿಗೆ ಮುಟ್ಟಿಸೋದು ಅವರಿಗೆ ಬಹಳ ತೊಂದರೇ ಕಾರ್ಯವೇ; ಯಾಕಂದರೆ ಎಲ್ಲವು ಬಹು ದೂರದಿಂದ ಸಾಗಿ ಬರ ಬೇಕಾಗುವದಲ್ಲದೆ, ಸಾಗಿಸಲಿಕ್ಕೆ ರಸ್ತೆಗಳು ಸಾಲವು; ಯಾಕಂದರೆ ತುರ್ಕ್ಯರಾಜ್ಯದಲ್ಲಿ ರಸ್ತೆಗಳು ಬಹಳ ಕಡಿಮೆ; ಇದ್ದ ರಸ್ತೆಗಳಾದರೂ ಬಹುಶಾ ದುರಸ್ತಾಗದೆ ಅಗಮ್ಯವಾಗಿದ್ದಾವೆ.

ತುರ್ಕ್ಯ ಸರಕಾರದವರು ಹೇರಳ ಜಯವಾರ್ತೆಗಳನ್ನು ಪ್ರಸಿದ್ಧ ಮಾಡುತ್ತಿದ್ದಾರೆ. ಅವರ ಜಯವಾರ್ತೆಗಳೆಲ್ಲವು ಹೌದಾಗಿದ್ದರೆ, ರುಸ್ಯರೆಲ್ಲರು ಅಷ್ಟರಲ್ಲಿ ಯಮಪುರಕ್ಕೆ ಹೊರಟು ಮುಟ್ಟಿರ ಬೇಕಿತ್ತು. ದೃಷ್ಟಾಂತಕ್ಕೆ ಎರಡು ಉದಾಹರಿಸುತ್ತೇನೆ. “ಒಂದೇ ದಿನದಲ್ಲಿ ೨೩೦,೦೦೦ ರುಸ್ಯರು ಹತವಾದರು” ಎಂಬದಾಗಿ ಯೆರೂಸಲೇಮಿಗೆ ತಂತಿ ಬಿಟ್ಟರು. ಮತ್ತು ನಾಬ್ಲುಸೆಂಬ ಪಟ್ಣದಲ್ಲಿ ಅವರು ಹಬ್ಬಿಸಿದ್ದೇನಂದರೆ: ೧ ಕೋಟೀ ಮೇಲೆ ರುಸ್ಯರು ರಣಾರಂಗದಲ್ಲಿ ಬಿದ್ದು, ಅಸುವಳಿದು ಹೋದರು. ತುರ್ಕ್ಯ ದಂಡಿನವರು ಹತವಾದ ರುಸ್ಯರ ಕಿವಿಗಳನ್ನು ಕೊಯಿದು, ಪೀಪಾಯಿಗಳಲ್ಲಿ ಉಪ್ಪು ಬೆರಿಸಿ ಹಾಕಿ, ೪೦ ಪೀಪಾಯಿಗಳನ್ನು ತುಂಬಿಸಿ, ಕೊನ್ಸ್ತಂತಿನೊಪೊಲಿಗೆ ರವಾನೆ ಮಾಡಿದ್ದಾರೆ.—ಈ ಸುದ್ದಿ ಹೌದಾಗಿದ್ದರೆ, ಕೊನ್ಸ್ತಂತಿನೊಪೊಲಿಯಲ್ಲಿ ಅನ್ನಕ್ಕೆ ದುರ್ಭಿಕ್ಷೆಯಿದ್ದರೂ, ಒಳ್ಳೇ ಉಪ್ಪಿನ ಕಾಯಿಗೆ ಬಹಳ ಸುಭಿಕ್ಷೆಯಿರ ಬೇಕು.

ತುರ್ಕ್ಯ ರಾಜ್ಯದಿಂದ ನೆರೆಹೊರೆಯ ದೇಶಗಳಿಗೆ ಪಲಾಯನ ಮಾಡಿದ ಕ್ರೈಸ್ತರು ಮಹಾ ದುರವಸ್ಥೆಯಲ್ಲಿದ್ದಾರಂತೆ. ಅಂಡೆ ಊಟ ಉಡಿಕೆ ಇಲ್ಲದೆ ಅನೇಕರು ಸಾಯುತ್ತಾರೆ.

ಪಾಪನ ವಿಷಯದಲ್ಲಿ ರೋಮಪಟ್ಣದಿಂದ ಹೊರಟು ಹಬ್ಬುವ ವಾರ್ತೆಗಳನ್ನು ನೋಡಿದರೆ, ಅವನ ಶಕ್ತಿ ಕುಂದುತ್ತಾ, ಅವಸಾನವು ಸಮಿಾಪಿಸುತ್ತಾ ಬರುತ್ತದೆಂಬದಕ್ಕೆ ಸಂದೇಹ ಇಲ್ಲಾ. ಕಾಲುಗಳಲ್ಲಿ ನೀರು ತುಂಬುತ್ತಾ ಬರುತ್ತದೆ. ನಿದ್ರೆ ಬಹಳ ಕಡಿಮೆ, ಆದರೆ ಹಶಿವೆ ಹಿಂಗದೆ, ಊಟ ಚನ್ನಾಗಿ ಶೇರುವದರಿಂದ, ಮುಪ್ಪಿಗೆ ತಕ್ಕ ಮಟ್ಟಿನಲ್ಲಿ ಇನ್ನು ಹುಷಾರಾಗಿದ್ದಾನಂತೆ. ಕರ್ಡಿನಾಲಮಂಡಲಿಯವರು, ಅವನು ಹೋದನಂತರ ಏನು? ಅವನ ಉತ್ತರಾಧಿಕಾರಿಯಾಗ ತಕ್ಕವನ್ಯಾರು? ಇವನನ್ನು ಆದು ಕೊಂಡು ಮೊಕರೂರು ಮಾಡುವ ಬಗೆ ಹ್ಯಾಗೆ? ಎಂಬೀ ಮೊದಲಾದ ವಿಚಾರಗಳಿಗೆ ಮನವೊಡ್ಡಿ ಚಿಂತಿಸುತ್ತಿದ್ದಾರಂತೆ. ಆಯಾ ಸರಕಾರದವರೂ ಈ ಸಂಭವವನ್ನೂ ಅದಕ್ಕೆ ತಕ್ಕ ವೈನವನ್ನೂ ಯೋಚಿಸುತ್ತಿದ್ದಾರೆ.

ಕನ್ನಡ ಬೈಬಲಿನ ಹೊಸ ಛಾಪೆ ಈಗ ಮುಗಿಯಿತು. (೨೧ನೇ ಪಾನು ಸರಿ ನೋಡ ಬಹುದು.) ಕನ್ನಡ “ದೇವಾರಾಧನಾಪದ್ಧತಿ” (ಲಿತರ್ಜಿ) ಎಂಬ ಗ್ರಂಥವೂ ಈಗ ತಿರಿಗಿ ಛಾಪೆಯಾಗುತ್ತದೆ.

ಕಳದ ಇಸವಿಯಲ್ಲಿ ಇಂಗ್ಲಂದದಲ್ಲಿರುವಷ್ಟು ಮಿಶ್ಯನ್ ಇತ್ಯಾದಿ ಧರ್ಮಾರ್ಥಪ್ರವರ್ತಕ ಸಂಘಗಳಿಗೆ ಒಟ್ಟಿಗೆ ೧ ಕೋಟಿ ೬೩ ಲಕ್ಷ ೭೫ ಸಾವಿರ ರೂಪಾಯಿಗಳು ಸಹಾಯಾರ್ಥವಾಗಿ ದೊರಕಿದವು.

Printed at the Basel Mission Press, Mangalore.

# ಕ್ರೈಸ್ತ ಸಭಾ ಪತ್ರ

ಪುಸ್ತಕ ೧೦. **OCTOBER 1877.** ಅಂಕೆ ೪.



**ಅಡಕವು:** "ಸಂತೋಷಂ ಪರಮಂ ಧನಂ"—ದಾತೃತ್ವಶೀಲವು—ಮುದಿ ಮೊಖಲ್—ಹೊಸ ಪ್ರಶ್ನೆಗಳು—ವಿವಿಧ ವರ್ತಮಾನಗಳು.


## "ಸಂತೋಷಂ ಪರಮಂ ಧನಂ".

ಜಕ್ಕಾಯನು ಯೇಸುವನ್ನು ನೋಡ ಹುಡುಕುತ್ತಾ ಗಿಡ್ಡನಾಗಿದ್ದದರಿಂದ ಜನಸಮೂಹದ ನಿಮಿತ್ತ ನೋಡಲಾರದೆ, ಮುಂದೆ ಓಡಿ, ಆತನನ್ನು ನೋಡುವ ಹಾಗೆ ಒಂದು ಆಲದ ಮರವನ್ನೇರಿದನು; ಯಾಕಂದರೆ ಆ ಮಾರ್ಗವಾಗಿ ಆತನು ಹಾದು ಬರ ಬೇಕಾಗಿತ್ತು. ಲೂಕ. ೧೯, ೩. ೪.

ಮೊದಲು ದ್ರವ್ಯಾಶೆಗೆ ಸೋತು ಹೋಗಿದ್ದ ಜಕ್ಕಾಯನ ಮನಸ್ಸಿನಲ್ಲಿ ಯೇಸುವನ್ನು ನೋಡಬೇಕೆಂಬ ಆಶೆ ಹುಟ್ಟಿದ್ದು ಹ್ಯಾಗೂ ದೇವತಾಕೃಪಾವ್ಯಾಪ್ತಿಯಿಂದಾಯಿತು. ಯೇಸುವನ್ನು ಕುರಿತ ವಿಚಾರಕ್ಕೆ ಮನಸ್ಸು ಯಾರದಾದರೂ ಹೋಗಿ ಹತ್ತ ಬೇಕಾದರೆ, ದೇವರ ಕೃಪಾಬಲವು ವ್ಯವಸಾಯ ಮಾಡಿ, ಅದನ್ನು ಅದಕ್ಕೆ ಹೂಡಿಸ ಬೇಕು. ಯೇಸು ಯೆರಿಕೋ ಪಟ್ಟವನ್ನು ಹಾದು ಬರುತ್ತಾನೆಂಬ ಮಾತು ಜಕ್ಕಾಯನಿಗೆ ಯಾವದೊಂದು ಬರೇ ಸಾಧಾರಣ ಸುದ್ದಿಯಂತೆ ಮಾತ್ರವೇ ಕೇಳಿ ತಿಳಿದು ಬಂದದಾದರೆ, ಅವನು ಯೇಸುವನ್ನು ನೋಡಲಿಕ್ಕಾಗಿ ಎದ್ದು ಹೊರಡುತ್ತಿದ್ದಿಲ್ಲಾ; ಬರುವ ದಾರಿಯಲ್ಲಾದರೂ ಅವನಿಗೆ ಸಂಶಯಾದಿಗಳು ಹಿಡಿದು ಹೋಗಿ, ಎಡತಡೆಯಾಗ ಬಹುದಿತ್ತು. ಓದುವವರಾದ ನಿಮಗೆ ಯಾವಾಗಾದರೂ ಯೇಸುವಿನ ವಿಚಾರಕ್ಕೆ ಮನಸ್ಸು ಕೊಟ್ಟು, ಆತನನ್ನು ಹುಡುಕ ತಕ್ಕದ್ದೆಂತ ಕಂಡರೆ, ತಡ ಮಾಡದೆ ಎದ್ದು, ಆತನ ದಾರಿಯನ್ನು ಹಿಡಿಯಿರಿ! ದಾರಿಯಲ್ಲಿ ಭಯ ಸಂದೇಹಾದಿಗಳು ಹುಟ್ಟಿದರೂ, ಚಿಂತಿಲ್ಲಾ, ನೀವು ಮುಂದೆ ನಡೆದರೆ, ಅವು ಪರಿಹಾರವಾಗಿ ಹೋದಾವು. ಜಕ್ಕಾಯನು ಬರೇ ಗಿಡ್ಡನಾಗಿದ್ದು, ತಾನು ನೋಡಲಿಕ್ಕೆ ಹೋದರೂ, ಜನಸಮೂಹದಲ್ಲಿ ಯೇಸುವನ್ನು ಒಂದು ವೇಳೆ ಕಾಣಲಿಕ್ಕಿಲ್ಲಾ ಎಂದು ಭಾವಿಸಿ ಕೊಂಡು, ವ್ಯರ್ಥ ಶ್ರಮ ಯಾಕೆಂದು ಏಳದೆ, ಕುಳಿತಿದ್ದಲ್ಲಿ ಸಮಯವನ್ನು ಕಳೆಯ ಬಹುದಿತ್ತು; ಆದರೆ ಒಳ್ಳೇ ಆಶಾಬಂಧ ಹಿಡಿದವನು ಸಂದೇಹಾದಿಗಳಿಗೆ ಬೇಗ ಸೋತು ಹೋಗದೆ, ಎದೆ ಹೂಡಿ, ತನ್ನ ಇಷ್ಟಾರ್ಥವನ್ನು ಸಾಧಿಸಿ ಕೊಳ್ಳುವಂತೆ ಪ್ರಯತ್ನ ಮಾಡ್ಯಾನು. ಸ್ವನೀತಿ ಸಾಲದ್ದಕ್ಕೆ ಯೇಸುವಿನಲ್ಲಿಯ ದೇವತಾನೀತಿಯನ್ನು ಹಸಿದು ಬಾಯಾರಿದವನಂತೆ ಹುಡುಕುವವನಿಗೆ ದಾರಿಯಲ್ಲಿ ವಿಘ್ನಗಳು ಎದುರಾದರೂ, ಅವು ಎಡತಡೆಗಾಗದೆ, ಆಶೆಯೂ ಪ್ರಯತ್ನವೂ ಹೆಚ್ಚಿ, ಬಲುವಾಗೋದಕ್ಕೆ ಮಾತ್ರ ಹೇತುವೆಯಾದಾವು.

ಮನೋರಥವು ಯೇಸುವಿನ ಮೇಲೆ ಹೋಗಲಾಗಿ, ಆತನನ್ನು ನೋಡಲಿಕ್ಕಾಗಿ ಎದ್ದು, ದಾರಿ ಹಿಡಿಯುವವನು ಆತನನ್ನು ಹ್ಯಾಗೂ ಕಂಡುಕೊಂಡು, ಆತನ ದರ್ಶನದಿಂದ ಧನ್ಯನಾಗುತ್ತಾನೆ.

ಮನಸ್ಸು ಎಷ್ಟಕ್ಕೆ ಯೇಸುವಿನ ಮೇಲೆ ಹೋಗುವದೋ ಅಷ್ಟಕ್ಕೆ ಜನರ ಎದುರಿನ ಭಯ ಲಜ್ಜೆ ಮುಖದಾಕ್ಷಿಣ್ಯ ಮೊದಲಾದ್ದು ಹಿಂಗಿ ಹೋಗುವದು. ಜಕ್ಕಾಯನು ಮಾಡಿದ್ದನ್ನು ಎಲ್ಲರು ಮಾಡಲಿಕ್ಕಿಲ್ಲಾ. ಮರವನ್ನು ಹತ್ತಿ ಕೊಂಡು ನೋಡುತ್ತೇನೆಂಬ ಯೋಚನೆ ಎಂಥಾ ಬುದ್ಧಿ! ಬಹಳ ಧನಿಕನೂ ನಾಲ್ಕು ಮಂದಿಯಲ್ಲಿ ಮಾನ್ಯನೂ ಆಗಿರುವ ಗುತ್ತಿಗೆದಾರ ತಾನು ಮರವನ್ನು ಹತ್ತಿ ಕೊಂಡು ಕೂತರೆ, ಊರಿನ ಪೋರಗಳ ಬಾಯಿಯಲ್ಲಿಯೂ ಚೇಷ್ಟೆಗಾರರ ಬಾಯಿಯಲ್ಲಿಯೂ ಮಂಗನೆನ್ನಿಸಿ ಕೊಂಡು, ಪರಿಹಾಸ್ಯಕ್ಕೆ ಗುರಿಯಾಗುವ ಸಂಗತಿಯಾದೀತು ಎಂದು ಅವನ ಬುದ್ಧಿಗೆ ತೋರಲಿಲ್ಲವೋ? ಆದರೆ ಇತರರಿಂದ ಸಹಿಸಲಿಕ್ಕೆ ಕೂಡದಂಥಾ ಪರಿಹಾಸ್ಯಗಳನ್ನೂ ನಿಂದೆಗಳನ್ನೂ ಯೇಸುವಿನಲ್ಲಿ ಲಭ್ಯವಾಗಿರುವ ದೇವತಾಕೃಪೆಯನ್ನು ಬಯಸಿ, ಕ್ಷಮಾದಯವನ್ನೂ ಕರ್ಮವಿಮುಕ್ತಿಯನ್ನೂ ಅರಸುವವನು ಸಹಿಸ್ಯಾನು. ಮಂಗನೆಂತಲೂ ಹುಚ್ಚನೆಂತಲೂ ಥೀಮುಕ್ಕನೆಂತಲೂ ಅನ್ನಿಸಿ ಕೊಂಡು, ಕಂಡ ಕಂಡವರ ಬಾಯಿಗೆ ಬಂದ ಬೈಗಳನ್ನು ತಿನ್ನಬೇಕಾದರೂ, ತಿಂದು, ಸಹಿಸಿ, ತಾಳಿ ಕೊಂಡಾನು.

ಯೇಸುವನ್ನು ನೋಡಲಿಕ್ಕೂ, ಆತನು ಯಾರು? ಎಂಥವನು? ಆತನಲ್ಲಿ ದೊರಕುವಂಥಾದ್ದೇನು? ಎಂಬದನ್ನು ತಿಳುಕೊಳ್ಳಲಿಕ್ಕೂ ಮನಸ್ಸಿದ್ದವರು ಅಷ್ಟು ಕೊಂಚ ಜನವಲ್ಲಾ. ಆತನು ಮರೆಯಲ್ಲಿ, ಅಂತರಂಗದಲ್ಲಿ ಶಿಕ್ಕಿದರೆ, ಆದೀತು ಎಂಬುವ ಭಾವನೆ ಅನೇಕರಲ್ಲಿ ಉಂಟು; ಆದರೆ ಬಹಿರಂಗದಲ್ಲಿ ಯೇಸುವನ್ನು ಶೇರಿ, ಅರಿಕೆ ಮಾಡಿ, ನಾಚಿಕೆ ಅವಮಾನ ಹಾಸ್ಯಾದಿಗಳಿಗೆ ಗುರಿಯಾಗಲಿಕ್ಕೆ ಅವರಿಗೆ ಮನಸ್ಸಿಲ್ಲಾ, ಒಂದಿಷ್ಟು ಮನಸ್ಸಿದ್ದರೂ, ಧೈರ್ಯ ಸಾಲುವದಿಲ್ಲಾ! ಕಳತ್ರ (ಹೆಂಡತಿ) ಪುತ್ರ ಮಿತ್ರಾದಿಗಳಿಗೆ ಅಂಜುವವರಾಗಿಯಾಗಲಿ ಇಷ್ಟರಾಗಿರ ಬೇಕೆಂದಿರುವವರಾಗಿಯಾಗಲಿ ನೋಡಲಿಕ್ಕೆ ಏಳದೆ, ಯೇಸು ತಮ್ಮನ್ನೂ ತಮ್ಮ ಮನೆಯನ್ನೂ ಹಾದು ಹೋಗ ಬಿಡುತ್ತಾರೆ. ಆದರೆ ಯೇಸುವಿಗೆ ನಾಚಿ ಕೊಂಡು, ಕೂತಲ್ಲಿಂದ ಎದ್ದು, ಭೇಟಿಗೆ ಬಾರದವರನ್ನು ಯೇಸು ಸಹ ಕರ್ಮವಿಚಾರಣೆಯ ದಿವಸದಲ್ಲಿ ನನ್ನವರಲ್ಲವೆಂಧೇಳಿ, ಸ್ವರ್ಗರಾಜ್ಯದಲ್ಲಿ ಶೇರಿಸಿ ಕೊಳ್ಳನು.

ಜಕ್ಕಾಯನ ಮನಸ್ಸಿಗೆ ಒಂದು ಚಿಂತೆ ಹಿಡಿದಿದ್ದದರಿಂದ, ತಾನು ಮರವನ್ನು ಹತ್ತಿದರೆ, ಜನರು ತನಗೇನೆಂದಾರು? ಎಂಬುವ ಯೋಚನೆಗೆ ಎಡೆ ಶಿಕ್ಕಲಿಲ್ಲಾ. ಲೋಕವು ಏನೇನು ಹೇಳಿದರೂ, ಹೇಳಲಿ! ಚಿಂತಿಲ್ಲಾ! ನನ್ನ ಮನೋವ್ಯಥೆ ಹೋದರೆ ಸೈ! ಎಂದು ಯೇಸುವಿಗೂ ತನಗೂ ಆಗ ಬೇಕಾಗಿದ್ದ ಕಾರ್ಯವನ್ನಲ್ಲದೆ, ಇತರ ಏನೊಂದು ಮಾತನ್ನಾದರೂ ಅವನು ಮನಸ್ಸಿಗೆ ತಂದು ಕೊಳ್ಳಲಿಲ್ಲಾ. ಜನರ ಎದುರಿನಲ್ಲಿ ಯೇಸುವಿಗಾಗಿ, ಆತನ ದರ್ಶನಕ್ಕಾಗಿ, ಒಂದು ಮರವನ್ನಾಗಲಿ ಒಂದು ಏಣಿಯನ್ನಾಗಲಿ ಹತ್ತುವಂಥಾದ್ದು ಬಹಳ ಅಪರೂಪವೇ ಆಗಿದೆ; ಪರಂತು ತನ್ನ ಹೆಚ್ಚಳಕ್ಕೆ ಇತರರ ಹೆಗಲ ಮೇಲೆಯಾಗಲಿ ನಡುನೆತ್ತೀ ಮೇಲೆಯಾಗಲಿ ಹತ್ತಿ ಕೊಳ್ಳುವಂಥಾದ್ದೂ ಕೀಳು ಲಾಭಕ್ಕಾಗಿ ಗಲ್ಲಿನ ಮರಕ್ಕೆ ಹೋಗುವ ದಾರಿಯನ್ನಾದರೂ ಹಿಡಿದು ಓಡುವಂಥಾದ್ದೂ ಕೇವಲ ಸಾಧಾರಣವಾಗಿದೆ. ಇತರರು ತಡಿಸಿದರೂ, ಕಾಲಿನ ಬುಡದಲ್ಲಿ ಒದ್ದಾಡಿದರೂ, ಬೊಬ್ಬಿಟ್ಟರೂ, ಕುಗ್ಗಿ ಸುಗ್ಗಿ ಹೋದರೂ, ನಾಚಿಕೆಯಿಲ್ಲಾ, ದಯವಿಲ್ಲಾ, ಭಯವೂ ಇಲ್ಲಾ: ಯೇಸು ಕ್ರಿಸ್ತನಿಗೆ ತಾಗುವ ವಿಚಾರಗಳಲ್ಲಿ ಮಾತ್ರ ಕೇವಲ ನಾಚಿಕೆಗೇಡಿಗಳಾದರೂ ನಾಚಿ ಕೊಳ್ಳುತ್ತಾರೆ. ಇದೊಂದು ಆಶ್ಚರ್ಯವೇ! ಅಲ್ಲವೋ?

---

## ದಾತೃತ್ವಶೀಲವು.

ದಾನಧರ್ಮ ಮಾಡುವದರಿಂದ ಮನಸ್ಸಿನೊಳಗೆ ಉಂಟಾಗುವ ಸಂತೋಷವನ್ನು ಅನುಭವ ಮಾಡಿದವರೇ ಲೋಕದಲ್ಲಿ ಧನ್ಯರು; ತಕ್ಕೊಳ್ಳುವದಕ್ಕಿಂತ ಕೊಡುವದು ಹೆಚ್ಚು ಭಾಗ್ಯವೆಂಬ ವಾಕ್ಯ ಸತ್ಯವೆಂತ ಅವರೇ ತಿಳುಕೊಳ್ಳುತ್ತಾರೆ. ಇಂಥಾ ಸಂತೋಷದ ಅನುಭವವಿಲ್ಲದವರೂ ಇದ್ಧಾರೆ. ತಮ್ಮದೊಂದು ಒಡವೆ ತಸ್ಕರವಾದರೆ, ಅಥವಾ ಕಳದು ಹೋದರೆ, ಅವರಿಗೆ ಎಷ್ಟು ಅಸಂತೋಷವಾದೀತೋ, ಅಷ್ಟೇ ಅಸಂತೋಷವು ಅವರಿಗೆ ದಾನಧರ್ಮ ಮಾಡುವದರಲ್ಲಿರುವದು. ತನಗೆ ಜನರಲ್ಲಿ ಕೀರ್ತಿ ಉಂಟಾಗ ಬೇಕೆಂಬದಾಗಿ ಒಬ್ಬನು ಯಾವದಾದರೊಂದು ಕಾರ್ಯಕ್ಕೆ ಸಾವಿರಾರು ರೂಪಾಯಿ ಧರ್ಮಾರ್ಥವಾಗಿ ಕೊಡುತ್ತಾನೆ; ಅವನು ಧರ್ಮರಾಯನಾದದರಿಂದ ಆ ಸತ್ಕಾರ್ಯಕ್ಕೆ ಸಹಾಯ ಮಾಡಿ ಅನೇಕ ಜನರಿಗೆ ಶ್ರೇಯಸ್ಸುಂಟಾಗುವದಕ್ಕೆ ಮಾರ್ಗ ಮಾಡಿದನು, ನಿಶ್ಚಯವೇ; ಮತ್ತು ತಾನು ಪರೋಪಕಾರಿಯಾದೆ ಎಂಬ ಅಭಿಮಾನವನ್ನು ಅವನು ತನ್ನೊಳಗೆ ಪಡುವದು ಸಹಜವೇ. ಆದರೆ ಇಷ್ಟೆಲ್ಲಾ ಮಾಡಿದ್ದು ಪರರ ಹಿತಚಿಂತೆನೆಯಿಂದಲ್ಲಾ, ಒಂದು ವ್ಯಾಪಾರದಂತೆ ಮಾಡಿರಬಹುದಷ್ಟೇ. ಅವನು ಇಂತಿಷ್ಟು ಕೊಟ್ಟನು, ಅದರ ಬದಲಿಗೆ ಅವನ ಹೆಸರು ನಾಲ್ಕು ದಿಕ್ಕುಗಳಲ್ಲಿ ಪ್ರಖ್ಯಾತವಾಯಿತು, ಕೀರ್ತಿಯನ್ನು ಪಡಕೊಂಡನು. ಭಿಕ್ಷೆ ಬೇಡುವವರಿಗೆ ಮುಷ್ಟಿ ಅಕ್ಕಿ ಅಥವಾ ರುವಿ ಕಾಸು ಹಾಕುವದು ಉಂಟಷ್ಟೇ. ಇದೂ ನೀತವಾಗಿರುವ ಹೇತುವಿನಂದಲ್ಲಾ, ನಾನಾ ಹೇತುಗಳಿಂದ ಆಗ ಬಹುದು.

ಹ್ಯಾಗೆ ಕೊಡ ಬೇಕು? ಎಷ್ಟು ಕೊಡ ಬೇಕು? ಎಂಬ ವಿಷಯದಲ್ಲಿ ಕ್ರಮಕಟ್ಟಳೆಗಳನ್ನು ಸ್ಥಾಪಿಸಕೂಡದು, ಖರೆ. ಆದರೂ ತಕ್ಕೊಳ್ಳುವದಕ್ಕಿಂತ ಕೊಡುವದು ಹೆಚ್ಚು ಭಾಗ್ಯವಾಗಿರುವದು ಹ್ಯಾಗೆ? ಅಥವಾ ದಾತೃತ್ವ ನಿಜವಾಗಿ ಸಂತೋಷಕರವಾಗಿರುವದು ಹ್ಯಾಗೆ? ಎಂಬದು ತಿಳಿಯ ಬೇಕಾದರೆ, ಯಾವದಾದರೊಂದು ಸೂತ್ರ ನಮ್ಮೊಳಗಿರ ಬೇಕು. ಮೊದಲನೇ ಸೂತ್ರ ಯಾವದಂದರೆ: ಉದಾರ ಮನಸ್ಸಿನಿಂದಲೂ ಆತ್ಮಸಂತೋಷದಿಂದಲೂ ಕೊಡ ಬೇಕು. ಅವರು ಇಷ್ಟು ಕೊಟ್ಟರು, ನಾನೇನೂ ಕೊಡಲಿಲ್ಲವಲ್ಲ! ಎಂತ ನಾಚಿಕೆ ಪಟ್ಟು, ಅಥವಾ ಕೊಡದಿದ್ದರೆ, ಜನರು ನನ್ನನ್ನು ಹೀನ ಅನ್ನುತ್ತಾರೇನೋ ಎಂತ ಕೊಡುವದು; ಒಬ್ಬ ಸ್ನೇಹಿತ ಒಂತಿಗೇ ಪಟ್ಟಿ ಮನೆಗೆ ತಂದರೆ, ಕೊಡೆನೆಂತ ಹೇಳಲಿಕ್ಕಾಗದೆ ಅವನ ದಾಕ್ಷಿಣ್ಯದಿಂದ ಕೊಡುವದು; ಒಬ್ಬ ಭಿಕ್ಷಕನು ಬಹುತೇಕವಾಗಿ ಬೇಡಿದ್ದರಿಂದ ಅವನನ್ನು ಪರಿಹರಿಸಿ ಕೊಳ್ಳುವದಕ್ಕೆ ಕೊಡುವದು, ಅಥವಾ ಕೊಡದೆ ಉಪಾಯವಿಲ್ಲಾ ಎಂಬದಾಗಿ ನಿರ್ಬಂಧದಿಂದ ಕೊಡುವದು; ಇದೆಲ್ಲಾ ಉದಾರ ಮನಸ್ಸಿನಿಂದ, ಆತ್ಮಸಂತೋಷದಿಂದ ಕೊಡುವಂಥಾದ್ದಲ್ಲ. ಯೆರೂಸಲೇಮಿನ ದೇವಾಲಯದ ಬೊಕ್ಕಸದಲ್ಲಿ ಎರಡು ಕಾಸು ಹಾಕಿದ ವಿಧವೆ ತನ್ನ ಹೆಚ್ಚಿಗೆಯಿಂದಲ್ಲ, ಬಡತನದಿಂದ ತನ್ನ ಸರ್ವಸ್ವವನ್ನು ಶುಭಕಾರ್ಯಕ್ಕಾಗಿ ಕೊಟ್ಟಳಾದ ಕಾರಣ ಮಹಾ ಧರ್ಮಿಷ್ಠೆಯಾದಳಲ್ಲವೇ! ಅವಳ ಕಾಣಿಕೆ ಉದಾರ ಮನಸ್ಸಿನಿಂದ ನಿರ್ಮಲವಾಗಿರುವ ದಾತೃತ್ವಶೀಲದಿಂದ ಬಂದದರಿಂದ ಅವಳ ಮನಸ್ಸಿನಲ್ಲಿ ಎಂಥಾ ಸಂತೋಷವಿದ್ದೀತು! ಅವಳು ಬಡವೆ ಹೌದಾದರೂ, ಅವಳಲ್ಲಿದ್ದ ಸಂತೋಷದಿಂದ ಅವಳು ಧನ್ಯಳೇ ಖರೆ.

ಮತ್ತೊಂದು ಸೂತ್ರವೇನಂದರೆ: ಪ್ರತಿಯಾಗಿ ಏನಾದರೂ ಶಿಕ್ಕುವದೆಂಬ ಅಪೇಕ್ಷೆ ಇಡದೆ ಕೊಡಬೇಕು. ಆತ್ಮರಕ್ಷಣೆ ಪಡಿಯ ಬೇಕಾದರೆ, ಸತ್ಕ್ರಿಯೆಗಳನ್ನು ಮಾಡ ಬೇಕು ಎಂತ ಉಪದೇಶಿಸುವ ಮತಗಳು ಬಡವರಿಗೆ ದಾನಧರ್ಮ ಮಾಡುವದರಿಂದ ದೇವಕಾರ್ಯ ಮುಂತಾದ ಶುಭಕಾರ್ಯಗಳಿಗೆ ಸಾಮರ್ಥ್ಯಾನುಸಾರ ಕೊಡುವದರಿಂದ ದಾತನಿಗೆ ಮಹಾ ಪುಣ್ಯೋದಯವಾಗುತ್ತದೆಂಬದಾಗಿ

ಬೋಧಿಸಿ, ಸತ್ಕ್ರಿಯೆಗಳಿಗೆ ಮನುಷ್ಯರನ್ನು ಪ್ರೇರೇಪಿಸುತ್ತವೆ. ಹೀಗೆ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸ್ವಾರ್ಥಬುದ್ಧಿಯೇ ಹೇತುವೆಯಾಗುತ್ತದೆ. ಬೀದಿಗಳಲ್ಲಿ ಕೂತು ಭಿಕ್ಷೆ ಬೇಡುವವನಿಗೆ ಒಬ್ಬ ಒಂದು ರುವಿ ಹಾಕುತ್ತಾನೆ;—ನೀನ್ಯಾಕೆ ಅವನಿಗೆ ರುವಿ ಹಾಕಿದಿ? ಎಂತ ಕೇಳಿದರೆ, ಅವನೇನು ಹೇಳುವನು? ಅದರಿಂದ ಪುಣ್ಯ, ಮುಂದಕ್ಕೆ ಒಳ್ಳೇದು ಶಿಕ್ಕುವದು ಎಂದು ಅನ್ನುವನಲ್ಲವೋ? ಇಂಥಾ ದಾತನು ಒಳ್ಳೇದು ಮಾಡುವದಕ್ಕಲ್ಲ, ಒಳ್ಳೇದನ್ನು ಹೊಂದುವದಕ್ಕೆ ಆಶೆಯುಳ್ಳವನೇ ಸೈ ಅನ್ನ ಬೇಕು; ತಾನು ಮಾಡುವ ಧರ್ಮ ತನ್ನ ರಕ್ಷಣೆಗೆ ಆಧಾರ; ಪರೋಪಕಾರ ಮಾಡಿದ್ದರಿಂದ ದೇವರು ತನಗೆ ಹಂಗಿಗ ನಾಗುತ್ತಾನೆಂಬದಾಗಿ ಜನರು ನೆನಸಿದರೆ, ತಕ್ಕೊಳ್ಳುವದಕ್ಕಿಂತ ಕೊಡುವದು ಹೆಚ್ಚು ಭಾಗ್ಯವೆಂಬ ವಾಕ್ಯದ ಅನುಭವ ಅವರೊಳಗೆ ಲವಲೇಶವಾದರೂ ಆಗಲಿಲ್ಲಾ.

ಪ್ರೀತಿ ಅಂದರೆ ದೇವರ ಮೇಲಣ ಪ್ರೀತಿ, ಮನುಷ್ಯರ ಮೇಲಣ ಪ್ರೀತಿ ದಾತೃತ್ವಕ್ಕೆ ಆಧಾರವಾಗಿರ ಬೇಕು. ನಾವು ಯಾರನ್ನು ಪ್ರೀತಿ ಮಾಡುತ್ತೇವೋ ಅವರಿಗಾಗಿ ಕಷ್ಟ ಮಾಡುವದಕ್ಕೆ, ಅವರಿಗೇನಾ ದರೂ ಕೊಡುವದಕ್ಕೆ, ನಿಜವಾದ ಸಂತೋಷ ಉಂಟಾಗುತ್ತದೆ. ಸಾಧಾರಣವಾಗಿ ಒಬ್ಬ ಹುಡುಗನಾ ದರೂ ತನ್ನ ತಾಯಿಗೆ ಸಹಾಯ ಮಾಡುವದಕ್ಕೆ ಸಂತೋಷ ಪಡುತ್ತಾನೆ. ಅದರ ಅಂತಸ್ಸು ಏನಂ ದರೆ: ಅವಳ ಮೇಲಿರುವ ಮಾಯೆ. ನಾವು ಯಾರನ್ನು ಪ್ರೀತಿ ಮಾಡುತ್ತೇವೋ ಅವರಿಗೆ ಕೊಡು ವದು ನಮಗೆ ಸಂತೋಷದ ಕಾರ್ಯವಾಗುತ್ತದೆ. ದೇವರ ವಾಕ್ಯದ ಮೇರೆಗೆ ಮಾತಾಡಿದರೆ—ಯಾ ವಾತ ದೇವರನ್ನು ಸತ್ಯವಾಗಿ ಪ್ರೀತಿ ಮಾಡುತ್ತಾನೋ, ಅವನು, ಕ್ರಿಸ್ತನು ಯಾರಿಗಾಗಿ ತನ್ನ ಪ್ರಾಣಾ ರ್ಪಣೆ ಮಾಡಿದನೋ, ಅವರೆಲ್ಲರನ್ನು ಪ್ರೀತಿ ಮಾಡುವವನಾಗುತ್ತಾನೆ. ಆದ್ದರಿಂದ ಸರ್ವರಿಗೆ ಕೊಡು ವದು ನಮ್ಮ ಕರ್ತವ್ಯಾಂಶವಾಗುತ್ತದೆ. ಬಾಲಕರಿಗೆ ಸ್ವಲ್ಪ ಬುದ್ಧಿ ಬಲ ಬಂದಾಗಲೇ ಅವರಿಗೆ ದಾತೃ ತ್ವಶೀಲ ಅಭ್ಯಾಸ ಮಾಡಿಸಿ, ಸಂತೋಷದಿಂದಲೂ ಪ್ರೀತಿಯಿಂದಲೂ ಕೊಡುವದಕ್ಕೆ ಅವರಿಗೆ ಕಲಿಸ ಬೇಕು. ಬಾಲ್ಯದಿಂದಲೇ ಕೊಡುವದು ಸಂತೋಷಕಾರ್ಯವೆಂತ ಕಲಿತ ಮಕ್ಕಳು ತಮ್ಮ ಜೀವಮಾ ನದಲ್ಲಿ ದಾನಧರ್ಮಗಳನ್ನು ಮಾಡುತ್ತಾ ನಿಜವಾಗಿ ಸುಖಿಗಳೂ ಧನ್ಯರೂ ಆಗುವರು.

---

## ಮುದಿ ಮೊಖಲ್.

(ಒಂನೇ ಪಾನಿನಿಂದ ಮುಂದೆ.)

ಗ್ರೇಟ್ಲಿಗೆ ಧೈರ್ಯವು ಹೆಚ್ಚಿ, ಮಮಕಾರಾಸಕ್ತಿಗೆ ಹೊಸ ಬಲವು ಬಂದದು ಒಳ್ಳೇದಾಯಿತು; ಯಾಕಂದರೆ ಹಾಗಾಗದ ಪಕ್ಷದಲ್ಲಿ ಎದುರು ಬರುತ್ತಿದ್ದ ವಿಘ್ನಗಳಲ್ಲಿ ಅವಳು ಪಾರಗಾಣದೆ ಹೋಗಿ, ಪೂರ್ಣ ಪ್ರಯೋಜನವಾಗುವ ಮೊದಲು ತೊಡಗಿದ ಉಪಾಯವನ್ನು ನಿಲ್ಲಿಸಿ ಬಿಡ ಬೇಕಾಗುತ್ತಿತ್ತು. ಎಂಥೆಂಥ ವಿಘ್ನಗಳು ಹತ್ತಿ ಬಂದವು ಎಂಬದನ್ನು ತೋರಿಸುವದಕ್ಕಾಗಿ ಒಂದು ದೃಷ್ಟಾಂತ ಹೇಳು ತ್ತೇನೆ. ಮುದಿ ಮೊಖಲ್ ಗ್ರೇಟ್ಲಿಯ ಹತ್ತರ ಬಂದು ಮಾತಾಡಿದ ಮೇಲಿನ ಏಳೆಂಟನೇ ದಿನದ ಸಾಯಂಕಾಲದಲ್ಲಿ ಮನೆಯ ಆಳುಗಳೂ ಇತರ ಮಕ್ಕಳೂ ಮಲಗಿ ಕೊಳ್ಳಲಿಕ್ಕೆ ಹೋಗಿದ್ದ ವೇಳೆಗೆ ಗ್ರೇಟ್ಲಿ ಇನ್ನು ತನ್ನ ತಂದೆತಾಯಿಗಳ ಬಳಿಯಲ್ಲಿದ್ದು, ತೊನಿಯನ್ನು ತೊಟ್ಲಲ್ಲಿ ಮಲಗಿಸಿ, ತೊಟ್ಲ ತೂಗಿ, ಮೆಲ್ಲ ಮೆಲ್ಲನೆ ಜೋಗುಳ ಹಾಡುತ್ತಿರುವಾಗಲೇ ತಾಯಿ ಸುಮಾರು ಗುಪ್ತವಾಗಿ ತನ್ನ ಗಂಡನಿಗೆ (ಗ್ರೇಟ್ಲಿಯ ತಂದೆಗೆ) ಹೇಳಿದ್ದೇನಂದರೆ: "ನಮ್ಮ ಮನೆಯಲ್ಲಿ ಒಂದು ತಂಟೆ ಇರ ಬೇಕು, ಅಂದರೆ ನಮ್ಮ ಕೊಟ್ಟಿಗೆಯಲ್ಲಿ ಏನೊಂದು ಮಾಟದ ಸಂಗತಿಯಾಗಿ, ಯಾರೋ ಪಂಪು ಹಾಕಿರ ಬೇಕು ಎಂತ ಕಾಣುತ್ತದೆ." ಈ ಮಾತಿಗೆ ರೈತನು: "ಏನಾಯಿತು? ಹೇಳು!" ಎಂಥೇಳಿದ್ದಕ್ಕೆ ಅವನ

ಹೆಂಡತಿ ಅಂದದೇನಂದರೆ: "ಕೋಳಿಮೊಟ್ಟೆ ಮೊದಲು ಶಿಕ್ಕಿದಷ್ಟು ಶಿಕ್ಕುವದಿಲ್ಲಾ; ಮತ್ತು ಬರೇ ಒಂದು ತಿಂಗಳಿನ ಹಿಂದೆ ಹೈನಾಗಿ, ಬಹಳ ಹಾಲು ಕರೆಯುತ್ತಿದ್ದ ಚುಕ್ಕಿ (ಒಂದು ಆಕಳಿನ ಹೆಸರು) ಇತ್ತಲಾಗೆ ಹಾಲು ಬಹು ಕಡಿಮೆ ಮಾಡಿ ಕೊಡುತ್ತದೆ. ಕಥರೀನ (ಒಂದು ಹೆಣ್ಣಾಳಿನ ಹೆಸರು) ಹಾಲು ಹಿಂಡಿ ತೆಗೆಯಲಿಕ್ಕೆ ಹೋದಷ್ಟು ಸರ್ತಿ ಕೆಚ್ಚಲು ಯಾರೋ ಬಂದು, ಹಿಂಡಿದ ಹಾಗೆ ಕಾಣುತ್ತದಂತೆ." ಈ ಮಾತನ್ನು ಕೇಳಿ, ರೈತನು ಘಾಬ್ರಿಯಾಗಿ: "ಅಯ್ಯೋ! ಏನು ಹೇಳಲಿ! ನಮ್ಮ ಚುಕ್ಕಿಯ ಕೆಚ್ಚಲಿಗೆ ಯಾರೋ ಕೈ ಹಾಕಿ ಹಾಲನ್ನು ಹಿಂಡುವದೋ?" ಎಂತ ಹೇಳಿದ್ದಕ್ಕೆ ಅವನ ಹೆಂಡತಿ ಅಂದದೇನಂದರೆ: "ಹೌದಷ್ಟೇ, ಹಾಲು ಕಾಣದೆ ಹೋಗುವದು ನಿಶ್ಚಯವೇ! ಮತ್ತು ಚುಕ್ಕಿಯ ಕೆಚ್ಚಲು ಹಿಂಡಿದ ತರ ನೋಡಿದರೆ, ಯಾರೊಬ್ಬರ ಕೈ ಹಿಂಡಿದ್ದಲ್ಲಾ, ಅದು ಪಂಪು ಬಿದ್ದ ಸಂಗತಿ, ಮಾಟದ ಕೆಲಸ ಎಂತ ಕಾಣುತ್ತದೆಂದು ಕಥರೀನ ಹೇಳುತ್ತಾಳೆ. ಮತ್ತು ನಿನ್ನೆ ಅವಳು ಭಾವೀ ಹತ್ತರ ಇದರ ವಿಷಯ ಮಾತಾಡಿದಲ್ಲಿ ಪೇತ್ರಪ್ಪನ ಹೆಣ್ಣಾಳು ಲೇನಳು ಅವಳಿಗೆ ಹೇಳಿದ್ದೇನಂದರೆ: 'ನೀನು ಹೇಳಿದ್ದು ಕುಟಿಲದ ಸಂಗತಿ ಸೈ, ನನಗೆ ಸಂಶಯವಿಲ್ಲಾ, ಯಾಕಂದರೆ ನೀವೆಲ್ಲರು ಎಂಟು ದಿನಗಳ ಹಿಂದೆ ಹುಲ್ಲುಮೈದಾನಿಗೆ ಹೋಗಿದ್ದ ಹೊತ್ತಿನಲ್ಲಿ ಮುದಿ ಕುಟಿಲಗಿತ್ತಿ ಮೊಖಲ್ ನಿಮ್ಮ ಹಿತ್ತಲಿನಿಂದ ಹೊರಟು ಬರುವದನ್ನು ಅಸ್ವಸ್ಥವಾಗಿ ಮನೆಯಲ್ಲಿ ಬಿದ್ದಿದ್ದ ರೊಟ್ಟಿಗಾರನ ಹುಡುಗನು ಕಂಡನಂತೆ. ಕಾಲೆಳದು ಕೊಳ್ಳುತ್ತಾ ನಡದು ಹೋಗುವಾಗ್ಯೆ ಆ ಹಳೇ ರಂಡೆಯ ಮುಖದಲ್ಲಿ ಒಂದೆರಡಾವರ್ತಿ ಸ್ವಲ್ಪ ಮುಗುಳುನಗೆ ಕಂಡಿತಂತೆ. ನಿಮ್ಮ ವಠಾರದಲ್ಲಿ ಏನಾದರೂ ಮಂತ್ರತಂತ್ರ ನಡಿಸಲಿಕ್ಕೆ ಹರುವು ದೊರಕಿ ಅನುವು ಶಿಕ್ಕಿದ್ದಕ್ಕೆ ಆ ಕುರೂಪಿ ಮುದುಕಿ ಹಸನ್ಮುಖಿಯಾಗಿದ್ದಿರಬೇಕು; ನಗೆಗೆ ಹ್ಯಾಗೂ ಬೇರೆ ಕಾರಣ ಆ ರಂಡೆಗೆ ಇದ್ದಿಲ್ಲಾ.' ಇದು ಲೇನಳು ನಮ್ಮ ಹುಡುಗಿಗೆ ಹೇಳಿದ ಮಾತು. ನಮ್ಮ ಮನೆಯಲ್ಲಿ ಪಂಪುತಂತ್ರದ ಉಪದ್ರವ ಬಿದ್ದದಕ್ಕೆ ಸಂದೇಹವಿಲ್ಲಾ!" ಎಂಬದಾಗಿ ಹೆಂಡತಿ ಮಾತಾಡಿ ತಿಳಿಸಿದ ಬಳಿಕ ರೈತನು ಬೆಬ್ಬರ ಬಿದ್ದು ಹೇಳಿದ್ದೇನಂದರೆ: "ಏನು ಹೇಳಲಕಟಾ! ಮೊಖಲ್ ನಮ್ಮ ಹಿತ್ತಲಿಗೆ ಬಂದು ಹೋದದು ಹೌದಾದರೆ, ಉಪದ್ರವ ಬಾರದೆ ಹೋಗದು, ನಿಶ್ಚಯ! ಆದರೆ ಈಗ ಆ ಮುದಿ ರಂಡೆಯ ದೃಷ್ಟಿಯನ್ನು ಮಂತ್ರಿಸಲೂ ಪಂಪು ತೆಗೆಯಲೂ ಬೇಕಲ್ಲಾ! ಈ ಬಗ್ಯೆ ಏನು ಉಪಾಯ?" ಎಂದು ಕೇಳಲು, ಅವನ ಹೆಂಡತಿ: "ನಾನು ಮಾಡಿದ್ದು ಸದ್ಯಕ್ಕೆ ಸಾಕು; ಸಾಲದ ಪಕ್ಷಕ್ಕೆ ಮತ್ತು ನೋಡುವ! ಈ ಹೊತ್ತು ಸಂಜೆಯಲ್ಲಿ ನಾನು ಕೆಲವು ಕೈತುಂಬ ಕೋಳಿ ಗರಿಗಳನ್ನು ಸುಟ್ಟು, ಬೂದಿಯನ್ನು ಗೂಡಿನಲ್ಲೆಲ್ಲಾ ಚಲ್ಲಿ ಬಿಟ್ಟೆ. ಪಂಪು ತೆಗೆಯಲಿಕ್ಕೆ ಇದು ಬಹಳ ಒಳ್ಳೇದಂತೆ. ಮತ್ತು ಈ ರಾತ್ರಿಗೆ ಚುಕ್ಕಿಯ ಕೆಚ್ಚಲಿಗೆ ಕಥರೀನಳ ಕೈಯಿಂದ ಒಂದು ಬಹು ಒಳ್ಳೇ ಯಂತ್ರ ಕಟ್ಟಿಸಿದ್ಧೇನೆ. ನಮ್ಮ ಕೊಟ್ಟಿಗೆಗೆ ಇನ್ನು ಮುಂದೆ ಏನೂ ಕೆಡಕು ಬಾರದಂತೆ ಜಾಗ್ರತೆ ಇಟ್ಟು ನೋಡ್ಯೇನು" ಎಂಥೇಳಿ, ಗಂಡನನ್ನು ಸ್ವಲ್ಪ ಧೈರ್ಯ ಪಡಿಸಿದಳು. ಮತ್ತನವನು ತನ್ನ ಹೆಂಡತಿ ಬಹು ಜಾಣೆ, ಬಹು ಹುಷಾರಿ ಎಂದಂದು ಕೊಂಡು, ಆಕೆಯನ್ನು ತನ್ನ ಮನಸ್ಸಿನಲ್ಲಿ ಹರಸಿದನು.

ತಂದೆತಾಯಿಗಳು ಅಂದು ತಮ್ಮೊಳಗೆ ಆ ಪ್ರಕಾರವಾಗಿ ಸಂಭಾಷಿಸಿದನಂತರ ಗ್ರೇಟ್ಲೆ ತನ್ನ ತಮ್ಮನಿಗೆ ಬೇಕಾದ ಹಾಲು ತತ್ತಿಗಳನ್ನು ದೊರಕಿಸಿ ಕೊಡಲಿಕ್ಕೆ ಇನ್ನು ಹೆಚ್ಚು ಜಾಗ್ರತೆ ಪಡ ಬೇಕಾಯಿತು. ಆದರೆ ತಮ್ಮನ ಮೇಲಿನ ಮರುಕವೂ ಅಕ್ಕರೆಯೂ ಅವಳಿಗೆ ಮತ್ತೂ ಮತ್ತೂ ಹರುವು ದೊರಕಿಸಿ, ವೈನಗಳನ್ನು ಕಾಣಿಸುವಂಥಾದ್ದಾಯಿತು. ಅದಲ್ಲದೆ ಮೊಖಲ್ ಹೇಳಿ ಕೊಟ್ಟ ಆಹಾರವು ತಮ್ಮನಿಗೆ ಚನ್ನಾಗಿ ದಕ್ಕಿ, ಆರೋಗ್ಯವಾಗಿ ಪುಷ್ಟಿಕರವಾಗುತ್ತಾ ಬಂದದಕ್ಕೆ ಅವಳಲ್ಲಿ ಹುಟ್ಟಿದ ಸಂತೋಷವೂ ಧೈರ್ಯವೂ ಗೆಲುವೂ ಕುಂದದಂತೆ ಮಾಡಿತು. ತೊನಿಯ ಮುಖದಲ್ಲಿ ಸ್ವಲ್ಪ ರಕ್ತ

ಪ್ರಸಾದವು ಹುಟ್ಟಲೂ ಅವನ ಕೆನ್ನೆಗಳು ಬೆಳೆಯಲೂ ಕೈಕಾಲುಗಳು ಹೆಚ್ಚು ಬೆಚ್ಚಗಾಗಲೂ ಕಣ್ಣಿನಲ್ಲಿ ಹೆಚ್ಚು ಚೈತನ್ಯದ ಲಕ್ಷಣವು ತೋರಲೂ ತೊಡಗಿದ್ದು ಇತರರಿಗೆ ಕಾಣ ಬರುವ ಮೊದಲು ಅವಳಿಗೆ ಕಂಡು ಬಂತು. ಮತ್ತು ಅದೇ ಸಮಯದಲ್ಲಿ ಕಟಾವಿನ ಕೆಲಸ ಮೊದಲಾದ ವ್ಯವಸಾಯಗಳು ಜೋರಾಗಿ, ಮನೆಯವರೆಲ್ಲರಿಗೆ ಬಹಳ ಕೆಲಸವಿದ್ದದರಿಂದ ಗ್ರೇಟ್ಲಿಗೆ ತನ್ನ ವೈನವನ್ನು ನಡಿಸಲಿಕ್ಕೆ ಹೆಚ್ಚಿನ ಅನುಕೂಲವಾಯಿತು, ಯಾಕಂದರೆ ಮನೆಯವರಿಗೆ ಮನೆಯಲ್ಲಿ ಸಮಯವನ್ನು ಕಳದು, ಅವಳ ಗುಟ್ಟನ್ನು ಹಿಡಿಯಲಿಕ್ಕೆ ಪುರಸತ್ತು ಶಿಕ್ಕಲಿಲ್ಲಾ. ತಾಯಿಗೂ ಬಹಳ ಕೆಲಸವಿದ್ದದರಿಂದ, ಅವಳಿಗೆ ತಾನು ಅಟ್ಟು ಇಡುತ್ತಿದ್ದ ಗಂಜಿಯನ್ನು ತೊನಿ ಹ್ಯಾಗೆ ತಿನ್ನುತ್ತಾನೆಂತ ನೋಡಲಿಕ್ಕೆ ಸಮಯ ಶಿಕ್ಕಲಿಲ್ಲಾ. ಹೀಗಿದ್ದಲ್ಲಿ ಗಂಜಿಯನ್ನು ಬೆಕ್ಕಿಗೆ ಹಾಕುತ್ತಾ ಕಸಕಸೆ ಕಷಾಯವನ್ನು ಚಲ್ಲಿ ಬಿಡುತ್ತಾ ಬರಲಿಕ್ಕೆ ಗ್ರೇಟ್ಲಿಗೆ ಬಹು ಅನುವಾಯಿತು. ಈ ಪ್ರಕಾರವಾಗಿ ರೈತನ ಮನೆವಾರ್ತೆಯೂ ಗ್ರೇಟ್ಲಿಯ ವೈನವೂ ಒಂದೆರಡು ತಿಂಗಳು ಸಾಗುತ್ತಾ ಬಂದನಂತರ ಇತರರಿಗೂ ತೊನಿಯ ಪರಿಣಾಮವು ಕಾಣಲಾಯಿತು. ಮನೆಗೆ ಬಂದ ಹೊತ್ತಿಗೆ ಒಳ್ಳೇ ಕಾಯಪುಷ್ಟಳಾಗಿದ್ದ ಹುಡುಗಿ ಲೈಸಳಿಗೆ ಮಾತ್ರ ಕಣ್ಣು ತುಂಬ ನೋಡುತ್ತಿದ್ದ ತಂದೆಗಾದರೂ ಒಂದಾನೊಂದು ದಿನ ಸಾಯಂಕಾಲಕ್ಕೆ ತೊನಿಯ ಪರಿಣಾಮವು ಗೋಚರಿಸಿತು, ಯಾಕಂದರೆ ಅವನು ಬಂದು— “ವಹವ್ವಾ! ಏನಿದು! ಈ ಅಳುಬುರುಕ ಹುಡುಗ ಇನ್ನು ಪುಷ್ಟಿಯಾಗಿ, ಚನ್ನಾಗಿ ಬೆಳೆಯಲಿಕ್ಕೆ ಸಾಕು ಎಂದು ತೋರುತ್ತದಲ್ಲಾ!” ಎಂಥೇಳಿ, ಆಶ್ಚರ್ಯ ಪಟ್ಟು, “ಬಾ! ತೊನಿ, ಬಾ! ನನ್ನ ಕೈಯಲ್ಲಿ ಬಾ!” ಎಂತ ಕರೆಯಲು, ತೊನಿ ಎಂದಿನಂತೆ ಅಂಜಿ ಕೊಂಡು ಅಳದೆ, ಮುಗುಳುನಗುಮೊಗ ಮಾಡಿ, ಕೈಗಳನ್ನು ಚಾಚಿ ಬಿಟ್ಟನು. ಮತ್ತು ತಂದೆ ತೊನಿಯ ಮೇಲೆ ಮರುಕಗೊಂಡು, ಅವನನ್ನು ತನ್ನ ಕೈಯಲ್ಲಿ ತೆಗೆದು ಕೊಂಡು ಲಾಲಿಸಿದನು. ಕೇವಲ ಅಪೂರ್ವವಾಗಿದ್ದ ಆ ಲಾಲನವನ್ನು ನೋಡಿ ಗ್ರೇಟ್ಲಿಯ ಎದೆ ಸಂತೋಷದಿಂದಲೇ ಹಾರುವಂಥಾದ್ದಾಯಿತು. ತೊನಿಯ ಕಾಯಪುಷ್ಟಿ ಹೆಚ್ಚುತ್ತಾ ಬಂದ ಪ್ರಮಾಣದಲ್ಲಿ ಅವನ ಹಶಿವೆ ಸಹ ದಿನ ದಿನಕ್ಕೆ ಹೆಚ್ಚುತ್ತಾ ಬಂತು; ಆದರೆ ಈ ಸಂತೋಷದ ಸಂಭವದಿಂದ ಗ್ರೇಟ್ಲಿಗೆ ಪ್ರಯಾಸವೂ ಹೆಚ್ಚಿತು, ಯಾಕಂದರೆ ಹೆಚ್ಚಿದ ಹಶಿವೆಗೆ ಹೆಚ್ಚು ಆಹಾರವನ್ನು ಒದಗಿಸಿ ಕೊಡ ಬೇಕಾಯಿತು. ತಾಯಿಗೆ ತಿಳಿದು ಬಾರದೆ ಹಾಲು ತತ್ತಿಗಳು ಹೆಚ್ಚೆಚ್ಚು ಖರ್ಚಾಗುತ್ತಾ ಬಂದದಕ್ಕೆ ಏನಾದರೂ ಪಂಪು ಬಿದ್ದಿರ ಬೇಕು ಎಂಬುವ ಸಂಶಯವೂ ಅವಳಲ್ಲಿ ಹೆಚ್ಚಿತು. ಕಡೆಗೆ ಒಂದಾನೊಂದು ದಿನ ಸಾಯಂಕಾಲದಲ್ಲಿ ಅವಳು ತನ್ನ ಗಂಡನಿಗೆ ಬಹು ಖಂಡಿತವಾಗಿ ಹೇಳಿದ್ದೇನಂದರೆ: “ಈ ತಂಟೆಯನ್ನು ನಾನು ಇನ್ನು ತಡೆದು ಸಹಿಸಲಾರೆ. ಚುಕ್ಕಿಗೆ ಈಗ ಸುಮಾರು ಹಾಲು ಬತ್ತಿ ಹೋಗ್ಯದೆ. ಕೋಳಿಮೊಟ್ಟೆ ಸಹ ಶಿಕ್ಕುವದು ಬಹಳ ಕಡಿಮೆ. ಬಿದ್ದ ಪಂಪು ತೆಗಿಸೋ ಉಪಾಯ ಮಾಡದಿದ್ದರೆ, ಹಾಲೆಲ್ಲಾ ಬತ್ತಿ ಹೋಗುವದಲ್ಲದೆ, ದೊಡ್ಡ ಉಪದ್ರವಾಗಿ, ದನ ಕರು ಯಾವತ್ತು ಸತ್ತು ಹೋಗಲಿಕ್ಕೂ ಸಾಕು. ಶೂನ್ಯಾ ಬುಡದೊಂದಿಗೆ ಕೀಳಿಸಿ ತೆಗಿಸ ಬೇಕು. ನಾಳೆ ಬುಧವಾರ ಹೊತ್ತಾರೆ ನೀವು ಎದ್ದು, ವೇಗ್‌ಫೆಲ್ಡ್ (ಬಟ್ಟಬೈಲೆಂಬ ಅರ್ಥವುಳ್ಳ ಹೆಸರು) ಗ್ರಾಮದ ಬೋನಯ್ಯನಲ್ಲಿ ಹೋಗಿ, ಅವನನ್ನು ಕರಕೊಂಡು ಬರ ಬೇಕು. ಆ ಬೋನಯ್ಯ ಶೂನ್ಯಾ ಕೀಳಲಿಕ್ಕೆ ಬಹು ಸಮರ್ಥನು, ಯಾಕಂದರೆ ಅವನಿಗೆ ಬಲು ಬಲವಾದ ಒಂದು ಉಚ್ಚಾಟನಮಂತ್ರ ಗೊತ್ತುಂಟಂತೆ. ಅವನು ದೃಷ್ಟಿ ಮಂತ್ರಿಸಲೂ ಪಂಪು ತೆಗೆಯಲೂ ಗ್ರಹಬಡಿತ, ಭೂತಕಾಟ ಮೊದಲಾದ್ದನ್ನು ನಿವಾರಿಸಲೂ ಬಹುದೆಂತಾ ಹೆಸರು ಹೋದವನು. ನನ್ನ ಚಿಕ್ಕಪ್ಪನ ಎತ್ತು ಹಸು ಕರುಗಳಿಗೆ ಒಮ್ಮೆ ಬಹಳ ಉಪದ್ರವವಾಯಿತು. ವಿಶೇಷವಾಗಿ ಹೈನಾಗಿದ್ದ ಹಸುಗಳಿಗೆ ಬಹಳ ಕಾಟವಾಯಿತು. ಉದ್ದಿನ ಹಿಟ್ಟಿನ ಗಂಜಿಯನ್ನಾದರೂ ಇನ್ನು ಕುಡಿಯಲೊಲ್ಲವು, ಹುಲ್ಲು ತಿಂಬುವ ಮಾ

ತಂತೂ ಇಲ್ಲಾ. ಗರೆದ ಹಾಲು ಕೆನ್ನೀರು ಬೆರೆತಂತಾಗಿತ್ತು. ದನ ಕಾಲಲ್ಲಿ ನಿಲ್ಲಲಾರದೆ ಹೋಯಿತು. ಗೊರಶೆ (ಉಗುರು) ಒಡೆದು, ಉದುರಿ ಬೀಳುವ ಸಂಗತಿಯಾಯಿತು. ಸರಕಾರಿ ಗೋವೈದ್ಯನು ಬಂದು, ಅದು ಕಾಲುಕುಂಟುರೋಗ (ಬಾಯಿಜ್ವರವೆಂತಲೂ ಕಾಲುಜ್ವರವೆಂತಲೂ ಅನ್ನಿಸುವ ರೋಗ) ಎಂಥೇಳಿ, ಚಿಕಿತ್ಸೆ ಹೇಳಿ ಕೊಟ್ಟನು. ಆದರೆ ಅದರ ಪರೀಕ್ಷೆ ನನ್ನ ಚಿಕ್ಕಪ್ಪನಿಗೆ ಚನ್ನಾಗಿ ಇದ್ದದರಿಂದ, ಅದು ಪಂಪು ಬಿದ್ದ ಉಪದ್ರವವೆಂತ ತಿಳಿದು, ಅವರು ಬೋನಯ್ಯನನ್ನು ಕರಿಸಿ, ಅವನ ಕೈಯಿಂದ ಪಂಪು ತೆಗಿಸಿದರು. ಅವನು ಬಂದು ಹೋದ ೧೦, ೧೫ನೇ ದಿವಸದಲ್ಲಿ ದನ ಕರುಗಳು ತಿರಿಗಿ ಎಂದಿನಂತೆ ಹುಲ್ಲು ಮೆದ್ದವು, ಹಸುಗಳು ಕೆನ್ನೀರು ಬೆರೆಯದ ಹಾಲು ಗರೆದವು. ಆದ ಕಾರಣ ನೀವು ನಾಳೆ ಹೊತ್ತಾರೆ ಹ್ಯಾಗೂ ಹೋಗಿ, ಬೋನಯ್ಯನನ್ನು ಕರಕೊಂಡು ಬರ ಬೇಕು."

(ಮುಂದೆ ಸಾಗಿಸಲ್ಪಡುವದು.)

---

## ಹೊಸ ಪ್ರಶ್ನೆಗಳು.

41. ಹರಿದು ಸವೆದು ಹೋದ ಹಳೇ ಬಟ್ಟೆಗಳೂ ಒಬ್ಬ ಕೂಷ್ಯನೂ (ನಿಗ್ರೋ ಮನುಷ್ಯ) ಪ್ರವಾದಿಯೊಬ್ಬನಿಗೆ ಉಪಕಾರ ಮಾಡಿದ ವಿವರವು ಎಲ್ಲಿ ಬರದದೆ?

42. ದೇವರ ಕರುಣೆಯನ್ನು ನೋಡಿ, ಬೇಸರಗೊಂಡು ಶಿಟ್ಟು ಮಾಡಿದ್ದು ಯಾರು?

43. ಹೊಸ ಒಡಂಬಡಿಕೆ ಎನ್ನಿಸಿ ಕೊಳ್ಳುವ ಸತ್ಯವೇದದಲ್ಲಿ "ಅಪೊಸ್ತಲರು" (ಪ್ರೇಷಿತರು) ಎನ್ನಿಸಿ ಕೊಳ್ಳುವವರಲ್ಲಿ ಶ್ರೇಷ್ಠನಾದಾತನು ಯಾರು?

44. ಬಿಳಾಮನಿಗೆ ಸಂಭವಿಸಿದ್ದು ಯೆಹೋಶುವನಿಗೂ ಸಂಭವಿಸಿತು. ಅದೇನು?

45. ರಾಜನಂತೆ ರಾಜಿಸುತ್ತಿದ್ದಂಥಾ ಉತ್ತಮೋತ್ತಮರಲ್ಲಿ ಶ್ರೇಯೋವಂತನಾಗಿದ್ದಂಥಾ ಗೃಹಸ್ಥನೊಬ್ಬನನ್ನು ಕಾಡ ಬೇರುಗಳನ್ನೂ ಸೊಪ್ಪುಗಳನ್ನೂ ತಿನ್ನುತ್ತಿದ್ದ ಅಧಮಾಧಮರ ಪೋರಗಳು ಗೇಲಿಟ್ಟು ಹಾಸ್ಯ ಮಾಡಿದ ವೃತ್ತಾಂತವೆಲ್ಲಿ?

---

## ವಿವಿಧ ವರ್ತಮಾನಗಳು.

ಮುಂಬಾಯಿಯಲ್ಲಿ ಕನ್ನಡಿ ಮಾಡುವಂಥಾ ಕಾರ್ಖಾನೆ ಬಹಳ ಸಫಲವಾದ್ದರಿಂದ ಪರದೇಶಗಳಿಂದ ಕನ್ನಡಿಗಳು ಬರುವಂಥಾದ್ದು ಕಮ್ಮಿಯಾಗಿದೆಯಂತೆ. ಹಿಂದುಸ್ಥಾನಕ್ಕೆ ಬೇಕಾಗುವಂಥಾ ಕನ್ನಡಿಗಳು ಈ ದೇಶದಲ್ಲೇ ಮಾಡುವದಾದರೆ, ಇಪ್ಪತ್ತು ಲಕ್ಷ ರೂಪಾಯಿ ಪರದೇಶಕ್ಕೆ ಹೋಗದೆ, ಊರಲ್ಲೇ ಉಳಿಯುವದು.

ಅಥ ಪ್ರಾಕ್ಕಿನಿಂದ ಮಧುರೆಯ ಮೀನಾಕ್ಷಿ ದೇವಿಯ ರಥವನ್ನು ವರುಷಕ್ಕೊಂದಾವರ್ತಿ ಪಟ್ಣದ ಸುತ್ತಲೂ ಎಳಿಯುವ ಪದ್ಧತಿ ಇರುತ್ತಿತ್ತು; ಸಾವಿರಾರು ಜನರು ಕೂಡಿ ತೇರಿನ ಹೊರ್ಜಿಗಳನ್ನು ಹಿಡಿದು ಎಳಿಯುವದೂ ಅನೇಕರು ಆ ತೇರಿನ ಗಾಲಿಗಳ ಕೆಳಗೆ ಬಿದ್ದು ಜೀವ ಕೊಡುವದೂ ನಡಿಯುತ್ತಿತ್ತು. ಈ ವರುಷ ತೇರು ಎಳಿಯುವವರ್‍ಯಾರೂ ಶಿಕ್ಕದೆ, ಪೂಜೇ ಭಟ್ಟರು ಆಗತಕ್ಕ ಕಾರ್ಯಕ್ಕೆ ವಿಘ್ನವಾಗದ ಹಾಗೆ ಎರಡೆರಡಾಣೆಗೆ ಆಳುಗಳನ್ನು ಮಾಡಿ, ತೇರು ಎಳಿಸಿದರು. ಈ ಬೊಂಬೆ ನಮಗೇನು ಮಾಡೀತು? ಕ್ರೈಸ್ತರ ದೇವರು ಸಹಾಯ ಮಾಡದಿದ್ದರೆ, ಮತ್ತೆಲ್ಲಿಯೂ ನಮಗೆ ಸಹಾಯವಿಲ್ಲ ಎಂತ ಜನರು ಹೇಳಿದರಂತೆ.

ಜಯಪುರದಲ್ಲಿ ದೇವತೆಗಳು ಮಳೆ ಸುರಿಸುವಂತೆ ಅವರ ಮನಸ್ಸು ಉಂಟು ಮಾಡುವದಕ್ಕೆ ಜನರು ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸುತ್ತಾರಂತೆ.

ಗುಜರಾತಿನಲ್ಲಿ ಕೆಲ ಸಾವಕಾರರು ಮಳೆ ಬಾರದಂತೆ ಮಾಡುವದಕ್ಕೆ ನಾಲ್ಕು ಮಂದಿ ಜೈನ ಪುರೋಹಿತರಿಗೆ ಲಂಚ ಹಾಕಿ, ಮಂತ್ರಾದಿ ಮಾಡಿಸಿದರಂತೆ; ಈ ಪುರೋಹಿತರು ಕಡೆಗೆ ಪೊಲೀಸಿನವರ ಕೈಗೆ ಶಿಕ್ಕಿದರು.

ಮದ್ರಾಸ ಸಂಸ್ಥಾನದಲ್ಲಿ ಸಹಾಯಾರ್ಥಕ ಕೆಲಸಗಳಲ್ಲಿ ಹೆಚ್ಚು ಕಡಿಮೆ ಹತ್ತು ಲಕ್ಷ ಜನರೂ, ಏನೂ ಕೆಲಸ ಮಾಡದೆ ಪಡಿ ಹೊಂದುವವರೂ ಅಷ್ಟೇ ಜನರು ಇದ್ದಾರೆ. ಮೈಸೂರಿನಲ್ಲಿ ಚಪ್ಪರಗಳನ್ನು ಹಾಕಿಸಿ, ಬಡ ಜನರಿಗೆ ಅನ್ನಾಹಾರ ನಡಿಸುತ್ತಾರೆ. ಮಧುರೆ ಜಿಲ್ಲೆಯಲ್ಲಿ ಧಾವತಿ ಅಧಿಕವಾಗಿದೆ; ಅನೇಕರು ಹೊಟ್ಟೆಗಿಲ್ಲದೆ ಸಾಯುತ್ತಾರಂತೆ. ಬೆಳೆ ನದಿಯ ಪಾರ್ಶ್ವದಲ್ಲಿರುವ ಸ್ಥಳಗಳಲ್ಲಿ ಮಾತ್ರ ತಕ್ಕ ಮಟ್ಟಿಗೆ ಚನ್ನಾಗಿದೆ. ಬಳ್ಳಾರಿ ಅದವಾನಿ ಗುತ್ತಿ ಈ ಪ್ರಾಂತಗಳಲ್ಲಿ ಅಗೊಸ್ತು ತಿಂಗಳಲ್ಲಿ ಒಂದಂಗುಲ ಮಳೆ ಬಂದದರಿಂದ ಬಿತ್ತಿದ ಧಾನ್ಯಕಾಳು ಚನ್ನಾಗಿ ಉಳಿಯುವಂಥಾದ್ದಾಗಿ ಜನರಿಗೆ ಸ್ವಲ್ಪ ಧೈರ್ಯ ಹುಟ್ಟಿಯದೆ. ಗವರ್ನರ ಜನರಲ್ ಧೊರೆಗಳವರು ಅಲ್ಲಿಗೆ ದಯೆ ಮಾಡಿದನಂತರ ಆ ಮಳೆ ಬಂದ ಕಾರಣ ಅದಕ್ಕೆ "ವೈಸರಾಯರ ಮಳೆ" ಎಂತ ಜನರು ಹೇಳುತ್ತಾರಂತೆ. ಗವರ್ನರ ಜನರಲ್ ಧೊರೆಗಳವರ ಅಭಿಪ್ರಾಯದಲ್ಲಿ ಮದ್ರಾಸ ಸಂಸ್ಥಾನದ ದುಷ್ಕಾಲಕ್ಕಿಂತ ಮುಂಬಾಯಿ ಸಂಸ್ಥಾನದ್ದು ಬಹುಶಾ ಕಮ್ಮಿಯಂತೆ. ನಮ್ಮ ಸಂಸ್ಥಾನದ ಧಾವತಿಯ ಉಪಶಮನಕ್ಕೆ ಇಂಗ್ಲಾಂಡಿನಿಂದಲೂ ಈ ದೇಶದ ಕೆಲ ರಾಜರಿಂದಲೂ ಸಂಪನ್ನರಾದ ಇತರ ಗೃಹಸ್ಥರಿಂದಲೂ ರೊಕ್ಕ ಬಂದದೆ.

ಮುಂಬಾಯಿ ಸಂಸ್ಥಾನದಲ್ಲಿ ಬಹುತೇಕ ಜಿಲ್ಲೆಗಳ ಸ್ಥಿತಿ ಮುಂಚಿನದಕ್ಕಿಂತಲೂ ಒಳ್ಳೇದಾಗಿದೆ. ಮುಂಬಾಯಿಯಲ್ಲಿ ಯಥೇಷ್ಟ ಮಳೆ ಬಂದು ಪ್ರಜೆಗಳಿಗೆ ಸಂತೋಷ ಕೊಡುವಂಥಾದ್ದಾಯಿತು. ದಕ್ಷಿಣ ಮಹಾರಾಷ್ಟ್ರದಲ್ಲಿ ಕೆಲ ಕಾಲಕ್ಕೆ ಮುಂಚೆ ಮಳೆ ಬಂದು, ಬೀಜ ಬಿತ್ತಲಿಕ್ಕಾಯಿತು ಸರಿ; ಆದರೆ ತರುವಾಯ ಮಳೆ ನಿಂತು ಹೋದ ಕಾರಣ ಎರಡನೇ ದುಷ್ಕಾಲ ಬಂದೊದಗುತ್ತದೋ ಎಂತ ಭಯಕ್ಕೆ ಆಸ್ಪದವದೆ. ಅಹಮ್ಮದನಗರ ಅತ್ತಗಡೆ ನೀರಿಗೆ ತತ್ವಾರವಾಗುತ್ತಾ ಬರುತ್ತದಂತೆ. ಅಲ್ಲಿ ಸಿಂಧ್ಯ ಮಹಾರಾಜರು ಐನೂರು ಮಂದಿಗೆ ದಿನಾಲೂ ಅನ್ನದಾನ ಮಾಡುತ್ತಾರೆ. ಅಲ್ಲಿಂದ ಉತ್ತರಕ್ಕೆ ಪಂಜಾಬ ಅತ್ತ ಕಡೆಯಲ್ಲಿಯೂ ದುಷ್ಕಾಲದ ಪೀಡೆ ಅನುಭವವಾಗುವ ಹಾಗಿತ್ತು; ಆದರೆ ಮಳೆಯ ಅನುಗ್ರಹವಾಯಿತು ಎಂತ ವರ್ತಮಾನ ಕೇಳುತ್ತೇವೆ. ಜಯಪುರದಲ್ಲಿ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸುತ್ತಾ ದೇವತೆಗಳು ಮಳೆ ಸುರಿಸುವಂತೆ ಮನಸ್ಸುಂಟು ಮಾಡುವಂತೆ ಪ್ರಯತ್ನ ಮಾಡುತ್ತಾರಂತೆ. ಭವಿಷ್ಯತ್ತು ದೇವರ ಕೈಯಲ್ಲಿ ಉಂಟು. ಆತನೇ ಈ ಅರಿಷ್ಟದಿಂದ ಪ್ರಜೆಗಳನ್ನು ಶೀಘ್ರದಲ್ಲಿ ಬಿಡುಗಡೆ ಮಾಡುವವನಾಗಲಿ.

ಬಡೋದೆ ಸರಕಾರದವರು ಮದ್ರಾಸಿನಲ್ಲಿ ದುಷ್ಕಾಲ ಪೀಡಿತರಾದ ಜನರ ಸಹಾಯಾರ್ಥವಾಗಿ ೧೦,೦೦೦ ರೂಪಾಯಿ ಕೊಟ್ಟಿದ್ದಾರೆ.

ಹಿಂದುಸ್ಥಾನದ ಮುಸಲ್ಮಾನರು ತುರ್ಕಿಸ್ಥಾನಕ್ಕೆ ಕಳುಹಿಸಿ ಕೊಟ್ಟ ರೂಪಾಯಿ ನಾಲ್ಕು ಲಕ್ಷ ಆಯಿತಂತೆ.

ತಂಜಾವೂರಿನಲ್ಲಿ ಒಬ್ಬ ಹಿಂದು ಹುಡುಗಿ ಸತ್ತಳೆಂದು ನೆನಸಿ, ಚಿತೆಯ ಮೇಲಿಟ್ಟಾಗ, ಎದ್ದು ಕೂತು, ತನ್ನನ್ನು ಸುಡ ಬಾರದೆಂದು ಬೇಡಿಕೊಂಡಳು. ತಾಯಿ ತಂದೆಗಳು ಸ್ವಲ್ಪ ಸಂಶಯ ಪಟ್ಟಾಗ್ಯೂ ತರುವಾಯ ಅವಳನ್ನು ತಿರಿಗಿ ಮನೆಗೆ ಒಯ್ದರು.

ಪತಿಯಾಲ ಅತ್ತ ಕಡೆ ನಾಹೂರು ಎಂಬ ಹಳ್ಳಿಯಲ್ಲಿ ನಡದ್ದೊಂದು ಅಘೋರ ಕೃತ್ಯವೇನಂದರೆ—ಆ ಊರಲ್ಲಿ ಒಬ್ಬನಿಗೆ ಇಬ್ಬರು ಹೆಂಡರು; ಒಬ್ಬಳಿಗೆ ಒಂದು ಮಗು ಇತ್ತು, ಇನ್ನೊಬ್ಬಳಿಗೆ ಇರಲಿಲ್ಲಾ. ಒಂದು ದಿನ ಆ ಮಗು ಇದ್ದ ಹೆಂಗಸು ಶಿಶುವನ್ನು ಮನೆಯಲ್ಲಿ ಬಿಟ್ಟು ಹೊರಗೆ ಹೋಗಿದ್ದಾಗ್ಯೆ ಅವಳ ಸವತಿ ಆ ಶಿಶುವನ್ನು ಕೊಂದು ಮಾಂಸವನ್ನು ಅಟ್ಟು, ಗಂಡನು ಮ

ನೆಗೆ ಬಂದಾಗ್ಯೆ ಅವನಿಗೆ ಬಡಿಸಿದಳು. ಅವನು ಒಂದೆರಡು ತುಂಡು ಬಾಯಿಯಲ್ಲಿಟ್ಟು ಮೇಲೆ ವಾಸನೆಯಲ್ಲಿ ರುಚಿಯಲ್ಲಿ ತಾರತಮ್ಯ ತಿಳಿದು, ಫಕ್ಕನೆ ತನ್ನ ಮಗುವಿನ ಮಾಂಸವೋ ಎಂತ ಘಾಬರಿಯಾಗಿ ಎದ್ದು, ಕೋಣೆಯೊಳಗೆ ಹೋಗಿ ನೋಡಲು, ಮಗುವಿಲ್ಲಾ. ಪುನಹಾ ಬಂದು, ನೀನು ನನಗೆ ಬಡಿಸಿದ ಬಾಡು ಎಂಥಾದ್ದೆಂದು ಹೆಂಡತಿಯನ್ನ ವಿಚಾರಿಸಲು, ಅವಳು ಮಾಜದೆ, ನಿನ್ನ ಮಗುವಿನದು, ಅಂದಳು. ಆ ಮನುಷ್ಯನು ಹೋಗಿ, ಪೊಲೀಸಿನವರಿಗೆ ಈ ಸಂಗತಿ ತಿಳಿಸಿದನು. ಅದರ ವಿಚಾರ ನಡಿಯುತ್ತಾ ಅದೆ.

ಡಿಲ್ಲಿಯಲ್ಲಿ ವಿದ್ಯಾಶಾಲೆಯಲ್ಲಿ ಪ್ರೊಫೆಸ್ಸರ್ ಅಂದರೆ ಅಧ್ಯಾಪಕನಾಗಿದ್ದ ರಾಮಚಂದ್ರ ಎಂಬಾತನು ಪಟ್ಯಾಲ ಶೀಮೆಯ ಅಲ್ಪವಯಸ್ಕರಾದ ಮಹಾರಾಜರ ಉಪಾಧ್ಯಾಯನಾಗಿ ನೇಮಿಸಲ್ಪಟ್ಟಿದ್ಧಾನೆ. ಈ ಅಧ್ಯಾಪಕನು ಕ್ರೈಸ್ತನು.

ಕಳದ ಜೂನ್ ತಿಂಗಳಿನಲ್ಲಿ ಚೀನ ದೇಶದಲ್ಲಿ ಫೂಚಾ ಎಂಬಲ್ಲಿ ಚರ್ಚ ಮಿಶ್ಯನಿನ ಕ್ರೈಸ್ತರು ಆದಿತ್ಯವಾರ ದೇವಾಲಯದಲ್ಲಿ ದೇವರ ಭಕ್ತಿ ಮಾಡುವದಕ್ಕೆ ಕೂಡಿ ಬಂದಿದ್ದಾಗ್ಯೆ ಚೀನಿಯರು ಅಕಸ್ಮಾತ್ ಅವರ ಮೇಲೆ ಬಿದ್ದು, ತಂಟೆ ಮಾಡಿ, ನೀವು ಪುನಃ ಒತ್ತಟ್ಟು ಕೂಡಿ ಬಂದರೆ, ಇದಕ್ಕಿಂತ ಹೆಚ್ಚು ಮಾಡ್ಯೇವು ಎಂತ ಗದ್ದಲ ಮಾಡಿ ಹೋದರು. ಮಧ್ಯಾಹ್ನದ ಮೇಲೆ ಪ್ರಾರ್ಥನೆಯ ಹೊತ್ತಿಗೆ ಕ್ರೈಸ್ತರು ತಿರಿಗಿ ಕೂಡಿ ಬಂದಾಗ ಆ ದುಷ್ಟ ಜನರು ಬಂದು, ಹೊಡೆಯಲಿಕ್ಕೆ ಆರಂಭಿಸಿ, ಮೂವರಿಗೆ ಚನ್ನಾಗಿ ಪೆಟ್ಟು ಹಾಕಿ, ಒಬ್ಬನನ್ನು ಕೊಂದೇ ಬಿಟ್ಟರು. ಆ ಕ್ರೈಸ್ತರಿಗೆ ಹತ್ತರವಿರುವ ಪಟ್ಣಕ್ಕೆ ಹೋಗುವದಕ್ಕೂ ಅಡ್ಡಿ ಮಾಡಿ ಬಹು ದುಃಖ ಕೊಟ್ಟರು.

ಇಂಗ್ಲಿಷ ಪ್ರೆಸ್‌ಬಿಟೆರಿಯನ್ ಮಿಶ್ಯನವರು ಹನ್ನೆರಡು ವರುಷಗಳಿಂದ ಫೊರ್ಮೊಸಾ ದ್ವೀಪದಲ್ಲಿ ಸುವಾರ್ತಾಪ್ರಸಾರಣೆ ಮಾಡುತ್ತಿದ್ಧಾರೆ; ಈಗ ಅವರಿಗೆ ಅಲ್ಲಿಯ ಚೀನಿಯರೊಳಗೆ ಹದಿಮೂರು ಸಭೆಗಳೂ, ಮೂಲ ನಿವಾಸಿಗಳಲ್ಲಿ ಅಷ್ಟೇ ಸಭೆಗಳೂ ಸಾವಿರ ಮಂದಿ ಸ್ನಾನ ಹೊಂದಿದವರೂ ಮೂರು ಸಾವಿರ ಮಂದಿ ದೇವಾರಾಧನೆಗೆ ಬರುವವರೂ ಇದ್ಧಾರೆ.

ಚೀನ ದೇಶದ ಸರಕಾರದವರು ಹೀಗೆ ಅಪ್ಪಣೆ ಪ್ರಕಟಿಸಿದ್ಧಾರೆ; ಏನಂದರೆ: ಜನರು ಮುಖ್ಯತಾ ಸರಕಾರಿ ಉದ್ಯೋಗಸ್ಥರು ದಂಡಿನವರು ವಿದ್ಯಾರ್ಥಿಗಳು ಅಫೀಮು ಶೇದ ಬಾರದು. ಈ ಅಪ್ಪಣೆ ಮೂರು ವರ್ಷಗಳಲ್ಲಿ ಅಮಲಿಗೆ ಬಂದು, ಆ ರಾಜ್ಯದಲ್ಲಿ ನಡಿಯುವಂಥಾದ್ದಾಗುವದು. ಲಂಡನಿನಲ್ಲಿರುವ ಚೀನಿ ಸರಕಾರದ ರಾಯಭಾರಿ ಅಲ್ಲಿಯ ಪರೋಪಕಾರಿಗಳಾದ ಮತ್ತು ದುರ್ವ್ಯಸನಗಳನ್ನು ದ್ವೇಷ ಮಾಡುವ ಸಜ್ಜನರ ಉದ್ಯೋಗ ಮೊದಲಾದ್ದು ನೋಡಿ ತನ್ನ ಸರಕಾರಕ್ಕೆ ಅಫೀಮು ನಿಷೇಧ ಮಾಡುವ ವಿಷಯ ಸೂಚನೆ ಕೊಟ್ಟದರಿಂದ ಈ ಅಪ್ಪಣೆ ಹೊರಡುವಂಥಾದ್ದಾಯಿತಂತೆ.

ಜಾಪಾನ ದೇಶದ ಇನ್ನೊಬ್ಬ ರಾಜಪುತ್ರನು ವಿದ್ಯಾಭ್ಯಾಸ ಮಾಡುವದಕ್ಕೆ ಇಂಗ್ಲಾಂಡಿಗೆ ಹೋಗಿದ್ಧಾನೆ.

ಇದೇ ಕಳದ ಜೂಲಾಯಿ ತಿಂಗಳಲ್ಲಿ ಯೂನೈಟಡ್ ಸ್ಟೇಟ್ಸ್ ದೇಶದ ಟೆನೆಸಿ ಪ್ರಾಂತ್ಯದಲ್ಲಿ ಫ್ರಾಂಕ್ಲಿನ ಎಂಬ ಊರಿನಲ್ಲಿ ಅತಿಸೂಕ್ಷ್ಮ ಜೀವ ಜಂತುಗಳ ಮಳೆ ಬಿತ್ತು. ಈ ಜೀವಿಗಳು ನೀರಿನ ಒಂದು ಬಿಂದುವಿನಲ್ಲಿ ೫೦-೬೦ ವರೆಗೆ ಇದ್ದವು.

ಅಮೇರಿಕದಲ್ಲಿ ಈ ವರುಷ ಮಹಾ ಸುಭಿಕ್ಷೆ; ೩೨,೫೦,೦೦,೦೦೦ ಬುಶಲ್ (ಸುಮಾರು ೧ ಕೋಟಿ ೬೨ ಲಕ್ಷ ೫೦ ಸಾವಿರ ಖಂಡಿ) ಅಂದರೆ ಹೋದ ಕಾಲಕ್ಕಿಂತ ೨೪ತ್ತು ಲಕ್ಷ ಖಂಡಿ ಹೆಚ್ಚಿಗೆ ಧಾನ್ಯ ಉತ್ಪತ್ತಿಯಾದೀತು; ಅದರಲ್ಲಿ ೫೦ ಲಕ್ಷ ಖಂಡಿ ಪರದೇಶಗಳಿಗೆ ಕಳುಹಿಸಲಿಕ್ಕಾದೀತಂತೆ.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

ಜರ್ಮನ್ ದೇಶಕ್ಕೆ ಶೇರಿದ ಬವಾರ್ಯ ಎಂಬ ಶೀಮೆಯ ಪಸ್ಸಾ ಎಂಬ ಪಟ್ಣದಲ್ಲಿ ಇತ್ತಲಾಗೆ ೩೧ ದೊಡ್ಡ ಹಂದಿಗಳು ಕಸಾಯಿಗಾರರಿಗೆ ಮಾ

ರಾಟವಾದವು. ಸರಾಸರಿ ಲೆಖ್ಖದಲ್ಲಿ ಒಂದೊಂದು ಹಂದಿಗೆ ೧೧ ಮಣ ತೂಕವಿತ್ತಂತೆ. ಅದೇ ಸಂತೆಯಲ್ಲಿ ೨ ಖಂಡಿ ೩ ಮಣ ತೂಕವಿದ್ದಂಥ ಒಂದು ಎತ್ತು ಸಹ ಮಾರಾಟವಾಯಿತು.—ನಮ್ಮ ಕನ್ನಡ ಜಿಲ್ಲೆಯಲ್ಲಿ ಕಾಣುವ ಜಾನುವಾರುಗಳಿಗೂ ಆ ದೇಶದವುಗಳಿಗೂ ಅಜಗಜಾಂತರವದೆ. ಆ ದೇಶದವರು ಗೋವೃಷಭಗಳಿಗೆ ದೇವತೆಗೆಂತ ಪೂಜೆ ಮಾಡದೆ ಇದ್ದಾಗ್ಯೂ, ಅವನ್ನು ಚನ್ನಾಗಿ ಸಾಕಿ, ತಿನ್ನುತ್ತಾರೆ. ಈ ದೇಶದವರು ಅವುಗಳಿಗೆ ಪೂಜೆ ಮಾಡುವವರಾಗಿದ್ದಾಗ್ಯೂ, ಅವುಗಳನ್ನು ಚನ್ನಾಗಿ ಸಾಕದೆ, ಹಾಲು ಹಿಂಡಿ, ಭಂಡಿ ಹೂಡಿ, ಹೊಡದು, ಪೀಡಿಸಿ, ತಿನ್ನುತ್ತಾರೆ.—ಈ ಶೀಮೆಯ ಜಾನುವಾರುಗಳ ಅವಸ್ಥೆ ಹೆಚ್ಚು ಉತ್ಕೃಷ್ಟವಾಗಬೇಕೆಂತ ಚಂದಾವರ ಗಣಪಯ್ಯ ಎಂಬವರು "ಗೋವೃಷಭಾದಿಗಳ ಸಂರಕ್ಷಣಾ ವೈದ್ಯಾದಿಗಳ ಕ್ರಮವು" ಎಂಬದೊಂದು ಪುಸ್ತಕವನ್ನು ರಚಿಸಿ ಪ್ರಕಟಿಸಿದ್ಧಾರೆ. ವ್ಯವಸಾಯದವರೂ ಪಶುಪಾಲನೆಯಲ್ಲಿ ತಾತ್ಪರ್ಯವಿಡ ತಕ್ಕ ಗೃಹಸ್ಥರೆಲ್ಲರೂ ಬಹಳ ಕಾರ್ಯೋಚಿತವಾಗಿರುವ ಈ ಪುಸ್ತಕವನ್ನು (ಅದರ ಕ್ರಯವು ೬ ಆಣೆ) ದೊರಕಿಸಿಕೊಂಡು, ಒಳ್ಳೇ ಉಪಯೋಗ ಮಾಡಿ ಕೊಳ್ಳ ತಕ್ಕದ್ದು. ಆದರೆ "ಹುಚ್ಚು ಹೋಗದೆ, ಮದುವೆಯಾಗದು; ಮದುವೆಯಾಗದೆ, ಹುಚ್ಚು ಹೋಗದು" ಎಂತ ಹೇಳಲಿಕ್ಕಾಗುವಂತೆ, ಈ ದೇಶದ ಜನರುಗಳು ಹೆಚ್ಚು ಉತ್ಕೃಷ್ಟ ಸ್ಥಿತಿಗೆ ಬಾರದೆ, ಜಾನುವಾರುಗಳೂ ಹೆಚ್ಚು ಉತ್ಕೃಷ್ಟ ಸ್ಥಿತಿಗೆ ಬಾರವು; ಜಾನುವಾರುಗಳು ಹೆಚ್ಚು ಉತ್ಕೃಷ್ಟ ಸ್ಥಿತಿಗೆ ಬಾರದೆ, ಜನರುಗಳೂ ಉತ್ಕೃಷ್ಟ ಸ್ಥಿತಿಗೆ ಬಾರರು ಎಂಬದಾಗಿ ಹೇಳಲಾಗುವದು.

೧೮೭೮ನೇ ಕ್ರಿಸ್ತಶಕಾಬ್ದದ ಪಂಚಾಂಗವು ಛಾಪೆಯಾಗಿ ಮಾರಾಟಕ್ಕೆ ತಯಾರಾಗಲಿಕ್ಕಾಯಿತು. ಈ ಹೊಸ ಪಂಚಾಂಗದಲ್ಲಿ ಛಾಪೆಯಾದ ಬೇರೆ ಬೇರೆ ಪ್ರಸ್ತಾಪಗಳೂ ವಿಶೇಷವಾಗಿ ಈ ದೇಶದ ಕೈಸರಳಾದ ವಿಕ್ಟೋರಿಯ ಮಹಾರಾಣಿಯವರ ಚಿತ್ರವೂ ಮುಂತಾದ್ದೆಲ್ಲವೂ ಪಂಚಾಂಗಪತಕರಿಗೆ ಸಂತೋಷಕ್ಕೂ ಪ್ರಯೋಜನಕ್ಕೂ ಬಂದೀತು.

ಅಗೊಸ್ತು ತಿಂಗಳಿನಲ್ಲಿ ಬೆಳೆಯ ವಿಷಯದಲ್ಲಿ ಅನೇಕ ಕಡೆಗಳಲ್ಲಿ ಇನ್ನು ಬಹಳ ಭಯಾಸ್ಪದವಿತ್ತು. ಆದರೆ ಇತ್ತಲಾಗೆ ಸುಮಾರು ಎಲ್ಲೆಲ್ಲಿಯೂ ಒಳ್ಳೇ ಮಳೆ ಬಿದ್ದು ಬಂದದರಿಂದ ಬೆಳೆಯಾಗುವ ಆಶೆಗೆ ತಿರಿಗಿ ಆಧಾರವಾಗಿ, ಬಹು ಸಂತೋಷಕ್ಕೆ ಕಾರಣವಾಯಿತು.

ಅಗೊಸ್ತು ತಿಂಗಳಿನ ಅಂತ್ಯದ ವರೆಗೆ ಕೊಡಗು ಶೀಮೆಯಲ್ಲಿರುವ ಆನಂದಪುರವೆಂಬ ಮಿಶ್ಯನ್ ಠಾಣೆಗೆ ಶೇರಿರುವಷ್ಟು ಭೂಮಿಯನ್ನು ಹಾದು ಹೋಗುವ ರಸ್ತೆಯಲ್ಲಿ ಆಗಿಂದಾಗ್ಯೆ ಒಂದೊಂದಾಗಿ ಬಿದ್ದ ೩೫ ಹೆಣಗಳು ಶಿಕ್ಕಿದವಂತೆ. ಆ ಹೆಣಗಳು ಸ್ವದೇಶದಲ್ಲಿ ಹೊಟ್ಟೆಗಿಲ್ಲದ ಕಾರಣ ಕೊಡಗು ಶೀಮೆಗೆ ಬಂದ ಮೈಸೂರಿನವರವು. ಬರೇ ಸ್ವಲ್ಪ ಜಾಗದಲ್ಲಿ ಅಷ್ಟು ಜನರು ಮೈಗುಂದಿ ಬಿದ್ದು ಸತ್ತು ಹೋದ ಮೇಲೆ ಇಡೀ ಕೊಡಗು ಮೈಸೂರು ಮೊದಲಾದ ಶೀಮೆಗಳಲ್ಲಿ ಎಷ್ಟೋ ಜನರು ಹೊಟ್ಟೆಗಿಲ್ಲದೆ ಸತ್ತು ಹೋಗಿದ್ದಾರು!

ನಿವಾಸಿಗಳು ಬಹು ಕಡಿಮೆ ಇರುವ ಮೂಡಣ ಆಫ್ರಿಕಕ್ಕೆ ಬರ ಬಿದ್ದಂಥಾ ಈ ದೇಶದ ನಾಡುಗಳವರನ್ನು ಇಂಗ್ಲಿಷ್ ಸರಕಾರದವರು ವೈದು ಮುಟ್ಟಿಸಿ, ಅವರ ಕೈಯಿಂದ ಆ ಪ್ರದೇಶಗಳನ್ನು ಹಸನು ಮಾಡಿಸುವದಾದರೆ, ಈ ವಾಸಾಂತರಿಗಳಿಗೂ ಆ ದೇಶಕ್ಕೂ ಉಪಕಾರವಾದೀತೆಂಬದಾಗಿ ಯಾರೋ ಆಲೋಚನೆ ಹೇಳಿ ಕೊಟ್ಟಿದ್ಧಾನೆ.

ಬಡಗ ಆಫ್ರಿಕಕ್ಕೆ ಶೇರಿದ ತೂನಿಸ ಶೀಮೆಯಲ್ಲಿಯೂ ದುರ್ಭಿಕ್ಷೆಯ ಬಾಧೆ ಇರುತ್ತದಂತೆ.

ಅಮೇರಿಕದಲ್ಲಿ ಬಹು ಒಳ್ಳೇ ಬೆಳೆಯಾಯಿತೆಂಬದನ್ನು ಓದಿದ್ಧೀರಿ. ಜರ್ಮನ್ ದೇಶದಲ್ಲಿಯೂ ಓಸ್ತ್ರಿಯರಾಷ್ಟ್ರದಲ್ಲಿಯೂ ಬೆಳೆ ಬಹಳ ಒಳ್ಳೇದಾಯಿತು. ಓಸ್ತ್ರಿಯದ ಜರ್ಮಾನಿಕ ಮತ್ತು ಹುಂಗಾರಿಕ ಶೀಮೆಗಳಲ್ಲಿ ಸುಮಾರು ೧೫ ಕೋಟಿ ರೂಪಾಯಿಗಳಷ್ಟು ದವಸಗಳನ್ನು

ಉಳಿಸಿ, ಪರದೇಶಗಳಿಗೆ ರಫ್ತು ಮಾಡಲಿಕ್ಕಾಗು
ವಷ್ಟು ಬೆಳೆಯಾಯಿತಂತೆ.

ಚೀನ ದೇಶದಲ್ಲಿ ಮಿಡಿತೇ ದಂಡಿಳಿದು, ಬಹಳ
ಕ್ಷೋಭೆ ಪಡಿಸುವಂಥಾದ್ದಾಯಿತು.

ಒಳ್ಳೇ ಹೆಸರುವಾಶಿಯಿದ್ದಂಥಾ ಜರ್ಮನ್
ಸ್ತ್ರೀಯೊಬ್ಬಳಿಗೆ ಇತ್ತಲಾಗೆ, ಆಕೆ ಕೈಯಲ್ಲಿ
೧೧ ತಿಂಗಳಿನ ಮಗುವನ್ನು ಹಿಡುಕೊಂಡು, ಕೊ
ಟ್ಟಿಗೆಯ ಬಾಗಲಲ್ಲಿ ನಿಂತುಕೊಂಡಿದ್ದಾಗ, ಸಿಡಿಲು
ಬಡಿದು, ಅಸುವಳಿಸುವಂಥಾದ್ದಾಯಿತು; ಆದರೆ
ಮಗು ಏನೂ ಪೆಟ್ಟು ತಗಲದೆ ಸಜೀವವಾಗಿ ಉ
ಳಿಯಿತು. ಇದೊಂದು ಆಶ್ಚರ್ಯವಲ್ಲವೋ?
ದೇವದೂತರು ಚಿಕ್ಕವರ ಮೈಗಾವಲು ಎಂಬದಕ್ಕೆ
ಈ ಸಂಗತಿ ಸಹ ಒಂದು ದೃಷ್ಟಾಂತ.

ತುರ್ಕ್ಯಾ ಅರ್ಮೇನ್ಯದಲ್ಲಿ ರುಸ್ಯರು ಹಿಮ್ಮೆ
ಟ್ಟಿದ್ದ ಸಮಯದಲ್ಲಿ ತುರ್ಕರೂ ಕುರ್ದ್ಯರೂ
(ಕುರ್ದಿಸ್ಥಾನದವರು) ಕೂಡಿ, ಕ್ರೈಸ್ತ ಜನಪದಗ
ಳನ್ನು ಹಾಳು ಮಾಡಿ, ಮಹಾ ರಾಕ್ಷಸಕೃತ್ಯಗ
ಳನ್ನು ನಡಿಸಿ, ಅನೇಕಾನೇಕ ಕ್ರೈಸ್ತರನ್ನು ಸಂ
ಹಾರ ಮಾಡಿದರು. ಬುಲ್ಗಾರ್ಯದಲ್ಲಿ ಸಹ ಇ
ತ್ತಲಾಗೆ ಕ್ರೈಸ್ತರನ್ನು ತಿರಿಗಿ ಮಹಾ ಹಿಂಸೆಯಲ್ಲಿ
ಸಂಹಾರ ಮಾಡುವವರಾದರು. ತುರ್ಕರ ರಾಕ್ಷಸ
ಕೃತ್ಯಗಳು ಯಾವ ತರದವುಗಳೆಂದು ತೋರಿ
ಸಲಿಕ್ಕೆ ಒಂದೇ ದೃಷ್ಟಾಂತ ಸಾಕಾದೀತು. ತು
ರ್ಕರು ಚರ್ಮವನ್ನು ಸುಲಿದು ತೆಗೆದು, ಪಟ್ಟಿಗ
ಳಾಗಿ ಕತ್ತರಿಸಿ, ಆ ಪಟ್ಟಿಗಳಿಂದ ಕೈ ಕಾಲುಗಳ
ನ್ನು ಕಟ್ಟಿ ಬಿಟ್ಟ ಕ್ರೈಸ್ತನೊಬ್ಬನು ಇತ್ತಲಾಗೆ
ರುಸ್ಯರಿಗೆ ಶಿಕ್ಕಿದನಂತೆ.—ರುಸ್ಯರಿಗೂ ಬಹಳ
ದ್ರೋಹಾದಿಗಳನ್ನು ನಡಿಸುತ್ತಿದ್ದಾರೆ. ದೃಷ್ಟಾಂ
ತಕ್ಕೆ ಒಂದೇ ವೃತ್ತಾಂತ ಸಾಕು. ಬಿಳೀ ನಿಶಾ
ನಿಯನ್ನೇರಿಸುವದು ಕೌಲಿಗಿಳಿಯುವ ಗುರ್ತಾ
ಗಿದೆ. ಬಿಳೀ ನಿಶಾನಿ ಕಾಣುತ್ತಲೇ ಎದುರಾಳಿ
ಗಳು ಕಾದಾಡುವದನ್ನು ಬಿಡುವದು ಲೋಕಮ
ರ್ಯಾದೆಯಾಗಿದೆ. ಇತ್ತಲಾಗೆ ತುರ್ಕರು ಒಂ
ದು ಕಡೆಯಲ್ಲಿ ಕಾದಾಟದ ಉರುವಣಿಯಲ್ಲಿಯೇ
ಬಿಳೀ ನಿಶಾನಿಯನ್ನು ಘಾಳಿಗೆ ಏರಿಸಿ ಬಿಟ್ಟಲ್ಲಿ
ರುಸ್ಯರು ಅವರಿಗೆ ಕೌಲಿಗಿಳಿಯುವ ಮನಸ್ಸದೆ
ಎಂದು ನಂಬಿ ಕೊಂಡು, ಕಾದಾಟವನ್ನು ನಿಲ್ಲಿಸಿ
ಬಿಟ್ಟು, ಸಂತೋಷ ಪಟ್ಟು, ಕೂಡಿ ಕೊಂಡು,
ಅವರ ಕಡೆಗೆ ಸಮೀಪಿಸಲಿಕ್ಕೆ, ಅವರು ಕಾಳಗ
ಮಾಡದೆ, ಗುಂಪು ಕಟ್ಟಿ ಕೊಂಡ ರುಸ್ಯರ ಮೇಲೆ
ಅಕಸ್ಮಾತ್ತಾಗಿ ಫಿರಂಗಿಗಳನ್ನು ಸುಟ್ಟು, ಗುಂಡು
ಗಳ ಮಳೆಯನ್ನು ಸುರಿಸಿ ಬಿಟ್ಟು, ವಿಶ್ವಾಸಘಾ
ತಕರಾಗಿ ಅನೇಕರನ್ನು ಹೊಡದು ಕೊಂದರು.—
ರುಸ್ಯ ದಳದಲ್ಲಿಯೂ ತುರ್ಕ್ಯಾ ದಳದಲ್ಲಿಯೂ
ರೋಗದ ಉಪದ್ರುವಿರುತ್ತದಂತೆ.—ಜುಲೈ ತಿಂಗ
ಳಿನ ಕಡೇ ಎರಡು ಮೂರು ದಿನಗಳಲ್ಲಿಯೂ ಅ
ಗೊಸ್ತು ತಿಂಗಳಿನ ಆರಂಭದಲ್ಲಿಯೂ ರುಸ್ಯರಿಗೆ
ಕೆಲವು ಕಡೆಗಳಲ್ಲಿ ತುರ್ಕರ ಕೈಯಿಂದ ಚಿಟ್ಟು
ತಾಗಿತು; ಆದರೆ ರುಸ್ಯ ಕಾದಾಳುಗಳ ಶೂರತ
ನವು ಸಾಲದೆ, ಅವರು ಚನ್ನಾಗಿ ಕಾಳಗವಾಡದೆ
ಹೋದರೆಂತ ಹೇಳಲಿಕ್ಕಾಗದಂತೆ; ತುರ್ಕರು ಅ
ಲ್ಲ್ಯಲ್ಲಿ ಹೆಚ್ಚು ಮುಂದಿಯಾಗಿದ್ದದಲ್ಲದೆ, ಅವರು
ವ್ಯೂಹ ಕಟ್ಟಿ ಕೊಂಡು ನಿಂತು ಕಾದಾಡುತ್ತಿದ್ದ
ಠಾವುಗಳೂ ಅವರಿಗೆ ಬಹಳ ಅನುಕೂಲವಾಗಿದ್ದ
ವಂತೆ. ತುರ್ಕರು ಅಷ್ಟು ದೊಡ್ಡ ದಂಡುಗಳ
ನ್ನೆತ್ತಿ ಕೂಡಿಸಿ ಕೊಂಡಾರೆಂದು ರುಸ್ಯರು ನೆನ
ಸದೆ, ಆ ಕಾಳಗಗಳು ನಡೆದ ಠಾವುಗಳಿಗೆ ತಕ್ಕ
ಷ್ಟು ಸೇನಾಬಲವನ್ನು ಕೂಡಿಸಿ ಮುಟ್ಟಿಸಲಿಲ್ಲಾ.
ಇತ್ತಲಾಗೆ ಅವರ ದಳವು ಹೆಚ್ಚಿ, ಅವರು ತಿರಿಗಿ
ಮೇಲಾಡುವವರಾದರು—ಹಿಂದುಸ್ಥಾನದಿಂದಲಾದ
ರೂ ಸುಮಾರು ಮುಸಲ್ಮಾನರು ತುರ್ಕ್ಯಾ ದಂಡಿಗೆ
ಹೋಗುತ್ತೇವೆಂತ ಹೊರಟರಂತೆ. ಹಿಮಕಾಲದ
ಲ್ಲಿ ಅವರು ರುಸ್ಯರಿಗೆ ಎದುರ್ಗೊಂಡು, ಒಳ್ಳೇ
ಪುಣ್ಯಗಳನ್ನು ಸಾಧಿಸಿ ಕೊಳ್ಳಲಿಕ್ಕೆ ಸಾಕು. ತು
ರ್ಕರು ಇತ್ತಲಾಗೆ ಕೆಲವು ಸಾರಿ ಗೆದ್ದು, ಮತ್ತೂ
ಸೊಕ್ಕಿ ಹೋದದರಿಂದ ಈ ಜಯಗಳು ಅವರ
ರಾಜ್ಯವು ಮತ್ತಷ್ಟು ಪರಿಪೂರ್ಣವಾಗಿ ಬಿದ್ದು
ಹೋಗಲಿಕ್ಕೆ ಕಾರಣವಾಗಲಿಕ್ಕೆ ಸಾಕು ಎಂಬದಾಗಿ
ಬೇರೆ ಬೇರೆ ಜನರು ನಂಬಿದ್ದಾರಂತೆ. ಹೌದೋ?

ಅಮೇರಿಕದಲ್ಲಿ ಇತ್ತಲಾಗೆ ಪ್ರಜೆಗಳೊಳಗೆ ಮುಖ್ಯವಾಗಿ ಲೋಹಮಾರ್ಗದ ಕೆಲಸದವರ ಪ್ರೇರಣೆಯಿಂದ ಶಾನೆ ಕಲಹವೆತ್ತಿತು. ಅದರ ಸಂಬಂಧದಲ್ಲಿ ೪೦ಲಕ್ಷ ರೂಪಾಯಿಗಳಷ್ಟು ಲೋಹಮಾರ್ಗದ ಭಂಡಿ, ಸಾಮಾನು, ಮನೆ ಮುಂತಾದ್ದು ನಷ್ಟವಾಯಿತಂತೆ.

೯ನೇ ಪುಸ್ತಕದ ೧೧೧ನೇ ಪಾನಿನಲ್ಲಿ ಕರ್ಡಿನಾಲ ಅಂತೊನೆಲ್ಲಿಯ ವಿಷಯದಲ್ಲಿ ಸೂಚಿಸೋಣಾದ ಮಾತು ಈಗ ಹೆಚ್ಚು ತಿಳಿದು ಬಂದದೆ. ಅವನ ಸಂಬಂಧಿಕರ ಸಂಗಡ ವ್ಯವಹಾರ ನಡಿಸುವ ಸ್ತ್ರೀ ಅಂತೊನೆಲ್ಲಿ ಇಟ್ಟು ಕೊಂಡವಳು ಅಲ್ಲ, ೧೮೫೦ನೇ ಇಸವಿಯಲ್ಲಿ ಇಂಗ್ಲಿಷ ಯೌವನಸ್ಥ ಧೊರೆಸಾನಿಯೊಬ್ಬಳಲ್ಲಿ ಅವನಿಗೆ ಹುಟ್ಟಿದ ಖಾಸ ಮಗಳೇ. ಈ ಮಗಳನ್ನು ಹೆತ್ತಾಕೆ ಅನಂತರ ಒಬ್ಬ ಧೊರೆಗೆ ಮದುವೆಯಾದಳು. ಈ ಮಗಳು ಹುಟ್ಟಿದ ಕೂಡಲೇ ಬೇರೆ ಸ್ತ್ರೀಯ ಪರಾಂಬರಿಕೆಗೆ ಒಪ್ಪಿಸಿ ಕೊಡೋಣಾದಳು. ಅವಳ ಅಶನಾರ್ಥಕ್ಕೂ ವಿದ್ಯಾಭ್ಯಾಸಕ್ಕೂ ಅಂತೊನೆಲ್ಲಿ ವರುಷ. ವರುಷಕ್ಕೆ ಹಣ ಕೊಟ್ಟು ಸಹಾಯ ಮಾಡುತ್ತಿದ್ದನು.

ಇಂಗ್ಲಂದ ದೇಶದ ರಾಜಾಶ್ರಿತ ಕ್ರೈಸ್ತ ಸಭೆಯ ಆಡಳಿತವೆಲ್ಲಾ ಪಾಪಸ್ವಾಮಿ ಭಕ್ತ ರೋಮನ್ ಕಥೋಲಿಕ ಸಭೆಯ ಕಾರ್ಯಕ್ಕೆ ಉಚಿತವಾಗಿ, ಚನ್ನಾಗಿ ಅನುಕೂಲವಾಗಿದೆ. ಇದನ್ನು ಅರಿತು ಕೊಂಡು ಪಾಪನು ಇತ್ತಲಾಗೆ ಇಂಗ್ಲಿಷ ಸರಕಾರವನ್ನು ಹೊಗಳಿ ಹರಸಿದನಂತೆ.—ಪಾಪನು ಹೊಗಳಿ ಹರಸಿದರೆ, ಹೆಸರು ಹರಿಯುವದು ಸೈ.

ಫ್ರಾಂಚ ರಾಷ್ಟ್ರಕ್ಕೆ ಈಗ ರಾಜನಿಲ್ಲದಿದ್ದರೂ, ಆಳ್ವ ಧೊರೆ ಅದಕ್ಕೆ ಇದ್ದೇ ಇರುತ್ತಾನೆ; ಯಾರಂದರೆ: ಪಾಪನೇ. ಈತನ ಹೇಳಿಕೆಯಲ್ಲಿ ಸದ್ಯಕ್ಕೆ ಫ್ರಾಂಚ ರಾಷ್ಟ್ರದ ಎಲ್ಲಾ ಕಾರುಬಾರು ನಡೆಯುತ್ತದೆ; ಯಾಕಂದರೆ ಆಳುವ ಅಧಿಪತಿಗಳೂ ಮಂತ್ರಿಗಳೂ ಪಾಪನ ಅಂಕೆಯಲ್ಲಿದ್ದಾರೆ.

ಬೆರ್ಲೀನ ಪಟ್ಣದಲ್ಲಿ ತೋಮಸ್ ಎಂಬ ಮೊಚ್ಚೆಗಾರನು ಸವಾಲುಗಳಿಗೆ ಚೋದ್ಯ ಚಮತ್ಕಾರದ ಜವಾಬುಗಳನ್ನು ಕೊಡುವವನಾಗಿ, ಒಳ್ಳೇ ಹರುವುಗಾರನೆಂತ ಹೆಸರ್ಗೊಂಡಿದ್ದನು. ಒಂದಾನೊಂದು ದಿವಸ ಹೆರ್ಜ್ ಬೆರ್ಗ್ ಎಂಬ ಪ್ರಧಾನಿ ಅವನ ಕೈಯಿಂದ ಜೋಡು ಮಾಡಿಸಿ ಕೊಳ್ಳ ಬೇಕೆಂದು ಅವನನ್ನು ಕರಿಸಿದನು. ತೋಮಸ್ ಬಂದ ಹೊತ್ತಿಗೆ ಪ್ರಧಾನಿಯಲ್ಲಿ ಇತರ ರಾಜಮಂತ್ರಿಗಳು ಆಲೋಚನಾಸಭೆಯಾಗಿ ಕೂಡಿ ಬಂದಿದ್ದ ಕಾರಣ ಅವನು ಬಾಗಲಲ್ಲಿ ನಿಂತು ಕಾದು ಕೊಳ್ಳ ಬೇಕಾಯಿತು. ಗೋಷ್ಠಿ ಮುಗಿದ ಮೇಲೆ ಆ ಪ್ರಧಾನಿ ಬಂದ ಮೊಚ್ಚೆಗಾರನನ್ನು ನೋಡಿ, ಮಂತ್ರಿಗಳೊಳಗೆ ನಡೆದ ಗೋಷ್ಠಿಯಲ್ಲಿ ಅವನು ಏನಾದರೂ ಕೇಳಿ, ತಿಳಿದು ಕೊಂಡಿರಲಿಕ್ಕೆ ಸಾಕು ಎಂತ ಊಹಿಸಿ ಕೊಂಡು, ಅವನ ಹತ್ತರ—ನೀನು ನಮ್ಮ ಗೋಷ್ಠಿಯಲ್ಲಿ ಒಂದು ವೇಳೆ ಏನೊಂದನ್ನು ಕೇಳಿ, ಏನು ನೆನಸಿ ಕೊಂಡಿ? ಎಂತ ಪ್ರಶ್ನೆ ಕೇಳಿದ್ದಕ್ಕೆ ಆ ಮೊಚ್ಚೆಗಾರನು ಪ್ರತ್ಯುತ್ತರವಾಗಿ ಬಾಯಿಬಿಟ್ಟು ಹೇಳಿದ್ದೇನಂದರೆ: "ಖಾವಂದರೇ! ಅಂಥಾ ಗೋಷ್ಠಿಗಳಿಂದಲೂ ಮಂತ್ರಿಗಳಿಂದಲೂ ರಾಜ್ಯ ಪರಿಪಾಲನೆಯಾಗದು; ಅದು ಕಾರಣ ದೇವರು ಜಗನ್ನಾಯಕನಾಗಿ ಆಳಿ, ಲೋಕವನ್ನು ಪರಿಪಾಲಿಸುತ್ತಾ ಬರುವಂಥಾದ್ದು ಪ್ರಜೆಗಳಿಗೆ ಮಹೋಪಕಾರವೇ ಎಂತ ನಾನು ನೆನಸಿ ಕೊಂಡದನ್ನು ಖಾವಂದರು ಮನ್ನಿಸ ಬೇಕು."

ಅನೇಕ ದಿನ ನೆಲ ಹಿಡಿದ (ಏಳಲಿಕ್ಕೆ ಕೂಡದ) ರೋಗಿಗಳಿಗೆ ಬೆನ್ನಿನಲ್ಲಿಯೂ ಬಗಲುಗಳಲ್ಲಿಯೂ ವ್ರಣಗಳು (ಒಂದು ತರದ ಘಾಯಗಳು) ಬಿದ್ದು, ಬಹು ವೇದನೆ ಕೊಡುವಂಥಾದ್ದು ಉಂಟಲ್ಲಾ. ಇದಕ್ಕೆ ಇತ್ತಲಾಗೆ ಬಹು ಒಳ್ಳೇದೊಂದು ಚಿಕಿತ್ಸೆಯನ್ನು ಕಂಡು ಕೊಂಡರಂತೆ. Liebig's Extract of Meat ಅಂದರೆ ಲೀಬಿಗ್ ಪಂಡಿತರು ಹರುವು ಮಾಡಿದ ಮಾಂಸಸಾರವನ್ನು ಅಂಥ ವ್ರಣಗಳಿಗೆ ಪೂಸಿ ಕೊಂಡರೆ, ಅವು ಬೇಗ ವಾಸಿಯಾಗಿ, ಮಾದು ಬರುತ್ತವಂತೆ.

ನವಂಬರ ತಾರೀಖು ೧೫ಕ್ಕೆ "ಕನ್ನಡ ಜಿಲ್ಲಾ ಮಿಶ್ಯನ್ ಹಬ್ಬವು" ಮಂಗಳೂರಿನಲ್ಲಿ ಆಗುವದು.

Printed at the Basel Mission Press, Mangalore.

# ಕ್ರೈಸ್ತ ಸಭಾ ಪತ್ರ

ಪುಸ್ತಕ ೧೦. **NOVEMBER 1877.** ಅಂಕೆ ೫.

**ಅಡಕವು:** "ಸಂತೋಷಂ ಪರಮಂ ಧನಂ"—ಅದಶ್ಯವಾದ ಪೆಠಾರಿ—ಸನ್ಮಿತ್ರನಾದವನೊಬ್ಬನು—ಮುದಿ ಮೊಖಲ್—ವಿವಿಧ ವರ್ತಮಾನಗಳು.

## "ಸಂತೋಷಂ ಪರಮಂ ಧನಂ".

ಯೇಸು ಆ ಸ್ಥಳಕ್ಕೆ ಬಂದಾಗ, ಮೇಲಕ್ಕೆ ನೋಡಿ, ಜಕ್ಕಾಯನನ್ನು ಕಂಡು, ಕರದು, ಅವನಿಗೆ—ಜಕ್ಕಾಯನೇ! ಬೇಗ ಇಳಿದು ಬಾ! ನಾನು ಇಂದು ನಿನ್ನ ಮನೆಗೆ ಬರ ಬೇಕೆಂದಿದ್ದೇನೆ ಅಂದನು. ಆಗಲವನು ಬೇಗ ಇಳಿದು, ಆತನನ್ನು ಸಂತೋಷಭರಿತನಾಗಿ ತನ್ನ ಮನೆಗೆ ಕರಕೊಂಡು ಹೋದನು. ಲೂಕ. ೧೯, ೫. ೬.

ಯೇಸುವನ್ನು ಕಂಡು ಕೊಂಡು ಹೊಂದಿದವರಲ್ಲಿ ಒಬ್ಬೊಬ್ಬನೂ ಒಬ್ಬೊಬ್ಬಳೂ ತಾನು ತಾನು ಮಾನಸಾಂತರ ಪಟ್ಟು, ಯೇಸುವನ್ನು ಲಾಭ ಮಾಡಿ ಕೊಂಡ ಮಾರ್ಗವನ್ನೂ ಠಾವನ್ನೂ ಹೇಳಿ ತಿಳಿಸಿದರೆ, ಆಶ್ಚರ್ಯ ಪಡಲಿಕ್ಕೆ ಕಾರಣವಾದೀತು. ತಂದೆಯ ಮನೆಯನ್ನು ಬಿಟ್ಟು, ಪರದೇಶಕ್ಕೆ ಹೊರಟು ಹೋದ ಆ ಮಗನು ಹಂದೀ ಹಿಂಡನ್ನು ಮೇಯಿಸಿ ಕಾಯುವಲ್ಲಿ ಮಾನಸಾಂತರ ಪಟ್ಟನು; ಆ ಕಳ್ಳನು ಕ್ರೂಜೆಯಲ್ಲೇ, ಮತದ್ವೇಷೋದ್ರೇಕನಾಗಿದ್ದ ಸೌಲನು ದಮಸ್ಕಕ್ಕೆ ಹೋಗುವ ದಾರಿಯಲ್ಲಿ, ಐಥಿಯೋಪ್ಯರ ರಾಣಿಯಾದ ಕಂದಾಕೆಯ ಪ್ರಭು ರಥಾರೂಢನಾಗಿ ತನ್ನೂರಿಗೆ ಹೋಗುವ ದಾರಿಯಲ್ಲಿ, ಮತ್ತಾಯನು ಸುಂಕದ ಕಟ್ಟೆಯಲ್ಲಿ, ಜಕ್ಕಾಯನು ರಸ್ತೇ ಬದೀಲಿಯ ಮರದಲ್ಲಿ ಯೇಸುವನ್ನು ಲಾಭ ಮಾಡಿ ಕೊಂಡರು. ತನಗೆ ತಕ್ಕವರನ್ನು ಯೇಸು ಅರಿತು, ಅವರ ಹಾದಿಗೆ ಬಂದು, ಅವರನ್ನು ಇತರರಿಂದ ಆದು, ತನಗೆ ಹೊಂದಿಸಿ ಕೊಳ್ಳೋದರಲ್ಲಿ ಕಾಣಿಸುವ ಕೃಪೆ ಎಷ್ಟೋ ಆಶ್ಚರ್ಯದ್ದು! ಯೇಸುವಿನೊಡನೆ ದೊಡ್ಡ ಜನಸಮೂಹವು ಬರುತ್ತಾ ಇತ್ತು; ಆದರೆ ಆ ಸಮೂಹದಲ್ಲಿ ಯಾರಿಗಾದರೂ ಅಲ್ಲಾ ಮರವನ್ನು ಹತ್ತಿ ಕೊಂಡು, ಎಲೆಗೆಲ್ಲುಗಳ ಮರೆಯಲ್ಲಿ ಕುಳಿತಿದ್ದ ಆ ಗಿಡ್ಡನಿಗೆ ಮಾತ್ರವೇ ಯೇಸು—ನಿನ್ನಲ್ಲಿ ನಾನು ಬರ ಬೇಕೆಂದಿದ್ದೇನೆ ಎಂತ ಹೇಳಲಾಯಿತು. ಆ ಮರದ ಅಡಿಗೆ ಬಂದು, ಯೇಸು ನಿಂತು, ಮೇಲಕ್ಕೆ ನೋಡಿ, ಅವನನ್ನು ಕಾಣಲು, ಅವನಿಗೆ ಕರದನು. ಯೇಸುವಿಗೆ ನಿಲ್ಲಲಿಕ್ಕೆ ಎಡೆ ಶಿಕ್ಕ ಬೇಕಷ್ಟೇ. ತಾನು ಯೇಸುವನ್ನು ನೋಡ ಬೇಕು, ಆತನ ಒಂದು ಸುಳುವು ಆದರೂ ತನಗೆ ಶಿಕ್ಕ ಬೇಕು ಎಂದು ಮರವನ್ನು ಹತ್ತಿ ಕೊಂಡವನಿಗೆ ಯೇಸುವಿನ ಒಂದು ಸುಳುವು ಮಾತ್ರವಲ್ಲಾ, ಯೇಸುವಿನ ಭೇಟಿ ಶಿಕ್ಕಿತು, ಇಡೀ ಯೇಸು ತಾನೇ ಲಾಭವಾದನು.—ನೀನು ಸಹ ಯೇಸುವಿನ ಭೇಟಿಯನ್ನು ಅಪೇಕ್ಷಿಸಿದರೆ, ಅದು ನಿನಗೂ ಆಗ

ಬಹುದು. ನಿನ್ನಲ್ಲಿಯೂ ಆತನು ಬರ ಬೇಕೆಂದಿದ್ದಾನೆ. ನೀನು ಇರುವ ಠಾವು ವೃತ್ತಿಗಳು ಎಂಥ ವಾಗಿದ್ದರೂ, ಆತನು ನಿನ್ನಲ್ಲಿ ಬಂದಾನು; ಮತ್ತು ಆತನು ಬಂದರೆ, ನೀನು ದೇವಪ್ರಸಾದಿಯಾಗಿ, ಸಂತೋಷಭರಿತನಾಗಿ--"ಈ ಸ್ಥಳವು ದೈವಭಯಂಕರ! ನಿಶ್ಚಯವಾಗಿ ಸ್ವಾಮಿ ಈ ಸ್ಥಳದಲ್ಲಿ ಇದ್ದಾನೆ; ಇದು ನನಗೆ ಮೊದಲು ಗೊತ್ತಿದ್ದಿಲ್ಲಾ!" ಎಂದು ಅರಿಕೆ ಮಾಡುವಿ.

ಆದರೆ ಬರ ಬೇಕೆಂದಿದ್ದ ಯೇಸುವಿನ ಭೇಟಿಯ ಬಗ್ಯೆ ಜಕ್ಕಾಯನು ಮರದಿಂದ ಇಳಿದು ಬರ ಬೇಕಾಯಿತು. ಇಳಿದು ಬರಲಿಕ್ಕೆ ಸಂತೋಷ ಪಟ್ಟನು, ಯಾಕಂದರೆ ಮರದ ಗೊಡವೆ ಗೋಸ್ಕರವಲ್ಲಾ ಯೇಸುವಿನ ಗೊಡವೆಗೋಸ್ಕರ ಮರವನ್ನೇರಿ ಕೊಂಡಿದ್ದನು. ಇಳಿಯಲಿಕ್ಕೆ ಜಕ್ಕಾಯನು ಸಂತೋಷ ಪಟ್ಟಂತೆ ನಾವು ಸಹ ಹತ್ತಿ ಕೊಂಡಿರುವ ಎಲ್ಲಾ ಎತ್ತರಗಳಿಂದ ಸಂತೋಷ ವಾಗಿ ಇಳಿದರೆ, ಎಷ್ಟೋ ಒಳ್ಳೇದಾದೀತು! ನಾವು ಏರಿ ಕೊಂಡು ಇರುವಂಥಾದ್ದು ಗಿಡ ವೃಕ್ಷಾದಿ ಗಳಲ್ಲಾ: ಬಿಂಕದ ಬಗೆಗಳೂ ಅಭಿಮಾನಾದಿಗಳೂ; ಇವನ್ನು ನಾವು ಬಿಟ್ಟು ಬಿಟ್ಟು, ಇಳಿಯ ಬೇಕು. "ಏರಿದವನು ಇಳಿದಾನು" ಎಂಬ ಗಾದೆಯುಂಟು. ಮೇಲೆ ಇದ್ದು, ದೊಡ್ಡವರೆನ್ನಿಸಿ ಕೊಂಡು, ಸುಖವೈಭೋಗಗಳಲ್ಲಿ ಬದುಕುತ್ತಿದ್ದವರು ಇಳಿಗೆಯಾಗಿ ಬಡವರಾದರೆ, ಇತರರು ಆಶ್ಚರ್ಯ ಪಡುವದಾಗುತ್ತದೆ. ಆದರೆ ಇಳಿದು ಬಾ! ಎಂಬುವ ಕರ್ತನ ಅಪ್ಪಣೆಗೆ ಮೊದಲು ಮೇಲಿದ್ದು, ಸರ್ವರು ತನ್ನ ಅಡಿಯಲ್ಲಿ ಎಂಬ ಹಾಗೆ ಮದವೂ ಅಹಂಕಾರವೂ ಇದ್ದವನೊಬ್ಬನು ಇಳಿದು ಬಂದು, ತನ್ನನ್ನು ತಗ್ಗಿಸಿ ಕೊಳ್ಳುವ ಸಂಗತಿಯಾದರೆ, ಹೆಚ್ಚಿನ ಆಶ್ಚರ್ಯಕ್ಕೆ ಕಾರಣವಾಗುತ್ತದೆ. "ಆತನು (ಯೇಸು) ಬೆಳೆಯ ಬೇಕು: ನಾನು ಕಡಿಮೆಯಾಗ ಬೇಕು" ಎಂಬುವ ಮಾತು ನಮಗೂ ಆತನಿಗೂ ಆಗಿ ಇರ ತಕ್ಕ ಗೊಡವೆಯ ಪ್ರಮಾಣವಾಗಿರ ಬೇಕು. ಆದರೆ ಹೀಗೆ ಇಳಿತರ ವಾಗೋದಕ್ಕೆ ಒಪ್ಪಿ ಕೊಳ್ಳುವವರು ಕೊಂಚ ಜನ. ಆದರೆ ಲೋಕದಲ್ಲಿ ಮಾತ್ರವಲ್ಲಾ ಸಭೆಯಲ್ಲಿಯೂ ಕರ್ತನು ಇಳಿಸಿದಷ್ಟಕ್ಕೂ ತಗ್ಗಿಸಿದಷ್ಟಕ್ಕೂ ಸಂತೋಷವಾಗಿ ಒಪ್ಪಿ ಕೊಳ್ಳೋಣವು ನಿಜ ಪೂರ್ಣ ಮಾನಸಾಂತರದ ಲಕ್ಷಣವಾಗಿದೆ. ಇಳಿದು ಬರುವಂಥಾದ್ದೂ ತನ್ನನ್ನು ತಾನೇ ತಗ್ಗಿಸಿ ಕೊಳ್ಳುವಂಥಾದ್ದೂ ಎಷ್ಟಕ್ಕೆ ಮನಸ್ಸಿಗೆ ಶೇರಿ ನಿಜವಾಯಿತೋ, ಅಷ್ಟಕ್ಕೆ ಯೇಸು ಬಂದು ಉಳುಕೊಳ್ಳಲಿಕ್ಕೆ ಎಡೆಯಾಯಿತು. "ಗರ್ವಿಷ್ಟರನ್ನು ದೇವರು ಎದುರಿಸಿ, ದೀನರಿಗೆ ಕೃಪೆಯನ್ನು ಕೊಡುತ್ತಾನೆ." ಹತ್ತಿ ಕೊಂಡಿದ್ದ ಮರದಿಂದ ಇಳಿದು ಬಾರದೆ ಹೋದದಾದರೆ, ಗಿಡ್ಡನಾಗಿದ್ದವನು ಉದ್ದಾಳಾಗುತ್ತಿದ್ದನೇ? ಬಿಂಕದ ಬಗೆಗಳನ್ನು ಹಿಡುಕೊಂಡವನು ಅವನ್ನು ಬಿಟ್ಟು ಬಿಟ್ಟರೆ, ಮಾನಾದಿಗಳು ಕಡಿಮೆಯಾದಾವೇ? ಇಳಿದು ಬಂದರೆ, ನಷ್ಟವಾಗದೆ, ಮಹಾ ಲಾಭವೇ ಆಗುತ್ತದೆ: ಇಳಿದು ಬಾರದ ಪಕ್ಷಕ್ಕೆ ಮಹಾ ನಷ್ಟವಾಗುತ್ತದೆ, ಯಾಕಂದರೆ ಯೇಸುವಿನ ಭೇಟಿಯಾಗದೆ ಹೋಗುತ್ತದೆ. ಜಕ್ಕಾಯನು ಸಂತೋಷಭರಿತನಾದನು. ಒಡೆಯನ ಒಲುಮೆಯನ್ನು ಬಯಸುವವನು ಇತರವಾದ್ದೆಲ್ಲವನ್ನು ಲಕ್ಷಿಸದೆ ಹೋದಾನು. ನಾವು ಬಿಟ್ಟು ಬಿಟ್ಟದಕ್ಕೆ ಯೇಸು ನಮಗೆ ದೊಡ್ಡ ಬದಲು ಕೊಡ ಬಹುದು. "ಒಡೆಯನು ನಮಗೆ ಒಲೆಯಲು ಸುಖದಿ ಜೀವಿಸುತ್ತೇವೆ."

---

## ಅದಹ್ಯವಾದ ಪೆಠಾರಿ.

"ಅದಹ್ಯವಾದ (ಅಂದರೆ ದಹಿಸಿ ಹೋಗದ, ಸುಟ್ಟು ಹೋಗದ, ಬೆಂಕಿಗೆ ಬಂದೋಬಸ್ತಾದ) ಪೆಠಾರಿಯನ್ನು ಮೊದಲು ಕಲ್ಪಿಸಿ ಮಾಡಿದವನ ಬುದ್ಧಿಯೂ ಕುಶಲತೆಯೂ ಬಹಳ ಶ್ಲಾಘ್ಯವೂ ಸ್ತುತ್ಯವೂ ಆಗಿದೆ. ವಹವ್ವಾ! ಈ ಚಮತ್ಕಾರಕ್ಕೆ ಈಡಾಗುವಂಥಾದ್ದು ಇನ್ನೊಂದನ್ನು ನಾ ಕಾಣ

ಲಿಲ್ಲಾ! ನೀವು ನನ್ನ ಮಾತಿಗೆ ನೆಗಾಡುತ್ತೀರಿ; ಆದರೂ ನಾನು ಮತ್ತೂ ಹೇಳುತ್ತೇನೆ: ಅದರಷ್ಟು ಚಮತ್ಕಾರದ ಇತರ ಕೃತಿಯನ್ನು ನಾನರಿಯೆನು. ನೀವು ಸಹ ನಿಮ್ಮ ಹಣವನ್ನು ಬಂದೋಬಸ್ತು ಮಾಡಿಡಲಿಕ್ಕಾಗಿ ಅಂಥಾ ಪೆಟ್ಟಿಗೆಯನ್ನು ಮಾಡಿಸಿ ಕೊಂಡರಾದೀತು ಎಂತ ನನಗೆ ತೋರುತ್ತದೆ" ಎಂದು ಬೆರ್ಲೀನ್ ಪಟ್ಟದಲ್ಲಿ ಒಬ್ಬಾನೊಬ್ಬ ಗೃಹಸ್ಥನು ತನ್ನ ನೆರೆಹೊರೆಯವರಲ್ಲೊಬ್ಬನಿಗೆ ಹೇಳಿದ್ದಕ್ಕೆ ಈತನು—

"ಹೌದಯ್ಯಾ! ನನಗೆ ನಗೆ ಬರುತ್ತದೆ; ನನ್ನ ಹಣವನ್ನು ಮಡಗಿಡಲಿಕ್ಕೆ ಅಂಥಾ ಪೆಠಾರಿ ಬೇಕೆಂಬ ಮಾತು ನನಗೆ ಕೇವಲ ಚೋದ್ಯವೇ ಎಂದು ಕಾಣುತ್ತದೆ; ಬೆಂಕಿಗಂಡವಾಗಲಿ ಇತರ ಗಂಡವಾಗಲಿ ಬಂದರೆ, ನಾನು ನನ್ನ ಹಣವನ್ನು ಕಿಶೆಯಲ್ಲಿ ಹಾಕಿ, ಅಥವಾ ಬರೇ ಕೈಯಲ್ಲಿ ಹಿಡುಕೊಂಡು, ತೆಕ್ಕೊಂಡು ಹೋಗ ಬಹುದು; ಮತ್ತು ನನ್ನಲ್ಲಿರುವಷ್ಟು ಪತ್ರಗಳು ಹುಂಡೀ ಚೀಟುಗಳಾಗಿರದೆ, ಬರೇ ಯಾದಿಗಳೂ ರಸೀದಿಗಳೂ ಆಗಿರಲಾಗಿ, ಅವು ಸುಟ್ಟು ಅಥವಾ ಕಳದು ಹೋದರೂ, ವಿಶೇಷ ನಷ್ಟವೇನೂ ಆಗಲಿಕ್ಕಿಲ್ಲ ಅಂತಾದ ಮೇಲೆ ನನಗೆ ಅದಹ್ಯ ಪೆಠಾರಿ ಯಾತಕ್ಕೆ?" ಎಂಧೇಳಲು, ಅವನು—

"ಇದ್ದದು ಎಷ್ಟಾಗಲಿ, ಬಹಳವಾದರೂ ಸ್ವಲ್ಪವಾದರೂ, ಬಂದೋಬಸ್ತಾಗಿದ್ದರೆ, ಒಳ್ಳೇದು; ಸ್ವಲ್ಪವಾದದು ಬಹಳವಾಗ ಬಹುದು; ಹನಿಗೆ ಹನಿ ಕೂಡಿ ಹೊಳೆಯಾಗುತ್ತದೆ; ಆದರೆ ಬಂದೋಬಸ್ತು ಬೇಕು. ಅದಹ್ಯ ಪೆಠಾರಿಯಿಲ್ಲದ ರೊಕ್ಕವಂತರು ಹ್ಯಾಗೆ ನಿರ್ಭಯವಾಗಿ ಮಲಗಿ ಕೊಂಡು ನಿದ್ರೆಗೈಯ ಬಹುದು? ನನಗೆ ಹ್ಯಾಗೂ ನಿದ್ರೆ ಬರುತ್ತಿದ್ದಿಲ್ಲಾ" ಎಂಧೇಳಿದ್ದಕ್ಕೆ ಎರಡನೆಯವನು—

"ನನಗೆ ನಿದ್ರೆ ಬಂಧೋಗಲಿಕ್ಕೆ ಅಡ್ಡಿಯಿಲ್ಲಾ; ನಾನು ಪ್ರತಿ ರಾತ್ರಿ ನನ್ನ ತನುಮನಧನಗಳನ್ನು, ನನ್ನ ಸರ್ವಸ್ವವನ್ನೂ, ದೇವರ ಕೈಗೂ ದಯಕ್ಕೂ ಒಪ್ಪಿಸಿ ಕೊಟ್ಟು, ನಿರ್ಭಯದಲ್ಲಿ ಮಲಗಿ ಕೊಳ್ಳುತ್ತೇನೆ" ಅನ್ನಲು ಮೊದಲಿನವನು ಹೇಳಿದ್ದೇನಂದರೆ:

"ದೇವರ ಪಾಲನೆಗೆ ಒಪ್ಪಿಸಿ ಕೊಂಡು, ಮಲಗಿ ಕೊಳ್ಳುವಂಥಾದ್ದು ಸ್ವಲ್ಪ ವಿಪರೀತವೆಂತ ಕಂಡು, ಮೂಢಭಕ್ತಿಯ ಮಾತಾಗಿ, ಈಗಿನವರ ಭಾವನೆಗೆ ಸರಿಯಾಗದೆ, ನಮ್ಮ ಹಳೇಬರ ಬುದ್ಧಿಗೂ ಹಳ್ಳಿಗಾಡಿನವರ ಭಾವನೆಗೂ ಮಾತ್ರ ಒಪ್ಪಿಕೆಯಾಗಿದೆ; ದೇವರ ಕೈಯಲ್ಲಿದ್ದದಕ್ಕೆ ಬಡ್ಡಿ ಬರುತ್ತದೋ? ಅಡವುಚೀಟು ಹುಂಡೀಕಾಗದ ಮೊದಲಾದ ಪತ್ರಗಳನ್ನು ದೇವರ ಕೈಯಲ್ಲಿಡುವ ಮಾತು ನೆಗಿಸುವಂಥಾದ್ದೇ. ಶಿಟ್ಟು ಮಾಡ ಬೇಡಯ್ಯಾ! ನಿಮ್ಮ ವಿಶ್ವಾಸಬಲಕ್ಕೆ ನಾ ನೆಗಾಡದೆ ಇರಲಾರೆ."

ಈ ಪರಿಹಾಸ್ಯಕ್ಕೆ ಎರಡನೆಯವನು ಅಂದದೇನಂದರೆ: "ಇರಲಯ್ಯಾ! 'ಹಣವಿದ್ದಲ್ಲಿ ಗುಣವಿಲ್ಲಾ; ಗುಣವಿದ್ದಲ್ಲಿ ಹಣವಿಲ್ಲಾ'; 'ಶರಣನ ಗುಣ ಮರಣದಲ್ಲಿ ನೋಡ ಬೇಕು' ಎಂಬೀ ನೀತಿ ಮಾತುಂಟಷ್ಟೇ!"

ಇಷ್ಟರಲ್ಲಿ ಅವರಿಬ್ಬರ ಅಂದಿನ ಸಂಭಾಷಣೆ ಮುಗಿಯಿತು.—ಅದಹ್ಯ ಪೆಠಾರಿಯನ್ನು ಅಷ್ಟು ಹೊಗಳಿದ ಗೃಹಸ್ಥನು ಲಕ್ಷೇಶ್ವರನಾಗಿದ್ದನು. ಮೊದಲು ಬಡಿಗೆಯವನಾಗಿದ್ದು, ಸಾಧಾರಣ ಸ್ಥಿತಿಯಲ್ಲಿ ಬದುಕುತ್ತಿದ್ದನು. ಆದರೆ ಕೆಲವು ವರುಷಗಳ ಹಿಂದೆ ಬೆರ್ಲೀನ್ ಪಟ್ಟವು ಕೇವಲ ಅಪೂರ್ವ ಮಟ್ಟಿನಲ್ಲಿ ವೃದ್ಧಿಯಾಗಿ ಬೆಳೆದು ಹೋದ್ದರಿಂದ ಮನೆಗಳನ್ನು ಕಟ್ಟಲಿಕ್ಕೆ ತಕ್ಕ ಭೂಮಿಗಳು ಅತ್ಯಂತ ಪ್ರಿಯವಾಗಿ ಹೋದವು. ಆ ಬಡಿಗೆಯವನಿಗೆ ಅಂಥಾದೊಂದು ಪಿತ್ರಾರ್ಜಿತ ಭೂಮಿ ಇತ್ತು. ಅದನ್ನು ಬಹಳ ಕ್ರಯಕ್ಕೆ ಮಾರಿ ಬಿಡಲಿಕ್ಕೆ ಅನುವಾದಲ್ಲಿ ಒಮ್ಮೆಯೇ ಬಹಳ ರೊಕ್ಕವಂತನಾದನು. ಬಳಿಕ ಮತ್ತೂ ಧನಿಕನಾಗ ಬೇಕೆಂಬ ದ್ರವ್ಯಾಶಾವೇಶದಿಂದ ಬಡಿಗೇ ಕೆಲಸವನ್ನು ಬಿಟ್ಟು, ಹುಂಡೀ ವ್ಯಾಪಾರಕ್ಕೆ ಹತ್ತಿದನು. ಅದರಲ್ಲಿ ಬಹಳ ದಿವಸ ಹೋಗದೆ ರೂಪಾಯಿ ಒಂದು ಹತ್ತಾಗಿ, ಅವ

ನು ಲಕ್ಷೇಶ್ವರನಾಗುವಷ್ಟು ನಫೆ ಮಾಡಿ ಕೊಂಡನು. ಆದರೆ ಹಣವು ಹೆಚ್ಚಿದಷ್ಟಕ್ಕೆ ಅವನ ದ್ರವ್ಯಾಶೆಯೂ ಹೆಚ್ಚಿ ಮಿಗಿಲಾಯಿತು.

ಅಂದಿಗೆ ಮುಂಚೆ ಸಹ ಕೆಲವು ಸರ್ತಿ ಅವರಿಬ್ಬರೊಳಗೆ ಹಣದ ವಿಷಯದಲ್ಲಿ ಸಂಭಾಷಣೆ ನಡೆದಿತ್ತು; ಯಾಕಂದರೆ ಆ ಲಕ್ಷೇಶ್ವರನ ಬಾಯಿಯಲ್ಲಿ ರೊಕ್ಕಪ್ಪನ ಪ್ರಸ್ತಾಪವಲ್ಲದೆ ಇತರ ಮಾತು ಏನೊಂದು ಆದರೂ ಇದ್ದಿಲ್ಲಾ; ಆದರೆ ಅಂದಿನ ಸಂಭಾಷಣೆಯ ಮೇಲೆ ಇನ್ನೊಂದು ಇಬ್ಬರೊಳಗೆ ಆಗಲಿಲ್ಲಾ. ಕೆಲವು ದಿನಗಳ ಮೇಲೆ ಒಮ್ಮೆಯೇ ಕೆಲವು ದೊಡ್ಡ ದೊಡ್ಡ ವ್ಯಾಪಾರಿಗಳು ದಿವಾಳಿ ತೆಗೆಯುವ ಸಂಗತಿಯಾಯಿತು. ಅದರಲ್ಲಿ ಆ ಗೃಹಸ್ಥನಿಗೆ ಸಹ ಸುಮಾರು ೭ ಲಕ್ಷ ರೂಪಾಯಿ ಮುಳುಗಿ ಹೋಯಿತು. ಅಷ್ಟು ಲಾಭ ಮನೆಗೆ ಬಂದದಕ್ಕೆ ಅವನು ಮಹಾ ಚಿಂತಾಕ್ರಾಂತನಾಗಿ, ಮನೆಯಿಂದ ಹೊರಟು ಎಲ್ಲಿಗಾದರೂ ಹೋಗಲಿಕ್ಕೆ ಮನಸ್ಸಿಲ್ಲದೆ, ಹಗಲಿರುಳು ಕೂತು ಕೊಂಡು, ಬರೆಯೋದೂ ಲೆಖ್ಖ ನೋಡೋದೂ ಮಾಡುತ್ತಿದ್ದನು. ಅವನ ಆ ನೆರೆಯವನು ಅವನ ಹೆಂಡತಿಯನ್ನು ಒಮ್ಮೆ ಕಂಡು, ಅವಳ ಹತ್ತರ ಅವನ ಕ್ಷೇಮಸಮಾಚಾರವನ್ನು ವಿಚಾರಿಸಿ ಕೇಳಿದಲ್ಲಿ, ಆಕೆ ತನ್ನ ಗಂಡನಿಗೆ ಬಹಳ ಕೆಲಸವೂ ತೊಂದರೆಯೂ ಅಲ್ಲದೆ ಒಂದಿಷ್ಟು ಜಾಡ್ಯವೂ ಉಂಟೆಂದು ಹೇಳಿದಳು.

ಆಕೆಗೂ ಈತನಿಗೂ ಅಷ್ಟು ಸಂಭಾಷಣೆ ನಡೆದ ಮರುದಿವಸ ಮುಂಜಾನೆಗೆ ಮರಗಳ ಎಲೆಗಳ ಮೇಲೆಯೂ ತೃಣಾದಿಗಳ ಮೇಲೆಯೂ ಬಿದ್ದಿದ್ದ ಮಂಜಿನಲ್ಲಿ ಸೂರ್ಯನ ಕಿರಣಗಳು ಅತಿ ರಮ್ಯವಾಗಿ ಹೊಳಿದು ಪ್ರತಿಬಿಂಬಿಸಲೂ, ತೋಟ ಹೊಲ ಪೊಲಗಳಲ್ಲಿ ಸಸ್ಯಾದಿಗಳೂ ಪಕ್ಷಿಗಳೂ ತಮ್ಮ ನಿರ್ಮಾಣಕರ್ತನ ಒಲುಮೆಯನ್ನು ಸಾರಿ, ಆತನನ್ನು ಕೊಂಡಾಡುವಪ್ಪಂದ ಕಾಣಲೂ, ಫಕ್ಕನೆ ಒಂದು ಭೀಕರ ಕೂಗು ಆ ಲಕ್ಷೇಶ್ವರನ ಮನೆಯೊಳಗಿಂದ ಈತನ ಮನೆಯಲ್ಲಿ ಕೇಳ ಬರುವಂಥಾದ್ದಾಯಿತು. ಆ ಕೂಗು ಅವನ ಹೆಂಡತಿಯದೆಂತ ಈತನು ತಿಳಿದು, ಅವನ ಮನೆಗೆ ಓಡಿ ನುಗ್ಗಲು, ಅವನ ಹೆಂಡತಿ ಸ್ವಬೋಧವು ತಪ್ಪಿ ನೆಲಕ್ಕೆ ಬಿದ್ದದನ್ನೂ, ಅವನು ತನ್ನ ಅದಹ್ಯ ಪೆಠಾರೀ ಮೇಲೆ ನೇಣು ಹಾಕಿ ಕೊಂಡು ಸತ್ತು ಹೋಗಿದ್ದದನ್ನೂ ಕಂಡನು. ನೇಣು ಹಾಕಿ ಕೊಂಡು, ಮುಖವು ವಿಕಾರವಾಗಿ, ನಾಲಿಗೆ ಬಾಯಿಯಿಂದ ಜೋಲು ಬಿದ್ದು, ಗಂಡನು ಸತ್ತು ಹೋದ್ದನ್ನು ಹೆಂಡತಿ ನಿದ್ರೆ ತಿಳಿದೆದ್ದು ಕಾಣುತ್ತಲೇ, ಆ ಭೀಕರ ಕೂಗು ಬಿಟ್ಟು, ಮೂರ್ಛೆಗೊಂಡು ಬಿದ್ದಿದ್ದಳು.

ನೆರೆಯವರೂ ಪೊಲೀಸಿನವರೂ ಬಂದು, ಕಂಡದನ್ನು ಬರಕೊಂಡು, ಹಣದ ಪೆಠಾರಿಯನ್ನೂ ತನಖಿ ಮಾಡಿ, ಅದರಲ್ಲಿದ್ದ ಹುಂಡಿಗಳನ್ನೂ ಹಣಗಳನ್ನೂ ಲೆಖ್ಖ ಮಾಡಿ ನೋಡಿದಲ್ಲಿ, ೭ ಲಕ್ಷ ೫೦ ಸಾವಿರ ರೂಪಾಯಿಯಷ್ಟು ಸಂಚಿತ ದ್ರವ್ಯವನ್ನು ಕಂಡು ಕೊಂಡರು. ಸುಮಾರು ಈ ಬಾಕಿಯಷ್ಟು ಹಣವನ್ನು ದಿವಾಳಿಖೋರರು ಮುಳುಗಿಸಿ ಬಿಟ್ಟಿದ್ದರೂ, ಅವನು ಇನ್ನು ೭,೫೦,೦೦೦ ರೂಪಾಯಿಯಷ್ಟು ಮಡಗಿದ್ದ ಪೆಠಾರೀ ಮೇಲೆ ನೇಣು ಹಾಕಿ ಕೊಂಡು ಸತ್ತದನ್ನು ನೋಡಿ, ಬಂದವರೆಲ್ಲರು ಬೆಬ್ಬರ ಬಿದ್ದು, ತಲ್ಲಣಿಸಿ ಕೊಂಡರು.

ಈ ವಿವರವನ್ನು ಓದಿ ಕೊಂಡು ನೀವೂ ಆಶ್ಚರ್ಯ ಪಟ್ಟರಾಗಲಿಲ್ಲಾ! ಒಳ್ಳೇ ಬುದ್ಧೀ ಮಾತನ್ನು ಮನಸ್ಸಿಗೆ ತಂದುಕೋ ಬೇಕು; ಅದೇನಂದರೆ: "ತಾವು ಐಶ್ವರ್ಯವಂತರಾಗ ಬೇಕೆಂದಿರುವವರು ವಿಘ್ನ ವಿಲೋಭನಗಳಲ್ಲಿಯೂ, ಉರ್ಲುಗಳಲ್ಲಿಯೂ, ಬುದ್ಧಿಗೆಡಿಸಿ ನಷ್ಟಗೊಳಿಸುವ ಅನೇಕ ಆಶೆಗಳಲ್ಲಿಯೂ ಶಿಕ್ಕಿ ಬೀಳುತ್ತಾರೆ. ಅವುಗಳು ಮನುಷ್ಯನನ್ನು ನಾಶನಕ್ಕೂ ನರಕಕ್ಕೂ ಗುರಿಯಾಗ ಮಾಡಿ ಬಿಡುತ್ತವೆ. ಯಾಕಂದರೆ ದ್ರವ್ಯಾಶೆ ಎಲ್ಲಾ ಕೇಡಿನ ಬುಡವಾಗಿದೆ." ೧ ತಿಮೊ. ೬, ೯.

ಮತ್ತೊಂದು ತಿಳಿದಿರಲಿ! ಏನಂದರೆ: ಸಣಬಿನ ನಾರು ಮೊದಲಾದ ನಾರುಗಳಿಂದ ಮಾತ್ರವ

ಲ್ಲಾ, ಬಹಳ ತರದ ನಾರು ನೂಲು ತಂತಿಗಳಿಂದ ಶತತಂತ್ರಗಾರನಾದ ಕಲಿ (ಪಿಶಾಚನು) ನೇಣುಗಳನ್ನೂ ಪಾಶಗಳನ್ನೂ ಬಲೆಗಳನ್ನೂ ಬೇಡಿಗಳನ್ನೂ ಮಾಡಿ, ಕಟ್ಟಿ, ಶಿಕ್ಕಿಸಿ, ಕೊಲ್ಲುತ್ತಾನೆ.

ಮತ್ತು: "ನಿಷ್ಕಪಟವಾದ ಭಕ್ತಿಯೂ ಇದ್ದದು ಸಾಕೆಂಬುವ ಸಾಧು ಮನೋಭಾವವೂ ಮಹಾ ಲಾಭವೇ." ೧ ತಿಮೊ. ೬, ೬.

ಮತ್ತು: "ಬಹು ಸಮಾಧಾನವಾಗಿ ಮಲಗಿ ಕೊಂಡು, ನಿದ್ರೆ ಮಾಡುತ್ತೇನೆ; ಯಾಕಂದರೆ ನೀನೊಬ್ಬನೇ, ಯೆಹೋವಾ! ನನ್ನನ್ನು ನಿರ್ಭಯದಲ್ಲಿ ವಾಸವಾಗಿರ ಮಾಡುತ್ತೀ." ಕೀರ್ತ. ೪, ೮.

---

## ಸನ್ಮಿತ್ರನಾದವನೊಬ್ಬನು.

ವಿಲಾಯತಿಯ ಕ್ರೈಸ್ತ ದೇವಾಲಯಗಳಿಗೆ ಎತ್ತರವಾದ ಗೋಪುರಗಳು ಇರುತ್ತವೆ. ನೂರು ಅಡಿ ಮಾತ್ರವಲ್ಲಾ, ಇನ್ನೂರು, ಮುನ್ನೂರು, ನಾನ್ನೂರು ಆದರೂ, ಅಡಿ ಉದ್ದವಾದ ಗೋಪುರಗಳು ಇರುವಂಥ ದೇವಾಲಯಗಳು ಇದ್ದಾವೆ. ಆ ಗೋಪುರಗಳಲ್ಲಿ ಘಂಟೆಗಳನ್ನು ತೂಗಿಸಿಡುವದುಂಟು. ಈ ಘಂಟೆಗಳು ಸಮ್ಮೇಳವಾಗಿ ನಾದಿಸುವಂಥವು. ಒಂದೆರಡು ಮಾತ್ರವಲ್ಲಾ, ಹತ್ತೆಂಟಾದರೂ, ದೊಡ್ಡ ದೊಡ್ಡ ಘಂಟೆಗಳು ಒಂದೇ ಗೋಪುರದಲ್ಲಿ ಇರುವದುಂಟು. ಅಂಥಾ ಘಂಟೆಗಳ ನಾದವು (ಸ್ವರವು) ಒಂದೆರಡು, ಮೂರು ನಾಲ್ಕು ಆದರೂ, ಹರದಾರಿ ದೂರಕ್ಕೆ ಕೇಳಿಸುವದುಂಟು. [ಕ್ರೈಸ್ತಸಭಾಪತ್ರದ ೭ನೇ ಪುಸ್ತಕದ ೧೫೧ನೇ ಪಾನಿನಲ್ಲಿ (ಜರ್ಮನ್) "ಮಹಾರಾಜಘಂಟೆ" ಎಂಬದರ ವರ್ಣನೆ ಸ್ವಲ್ಪವಾಗಿ ಕೊಡೋಣಾಯಿತು. ಆ ಘಂಟೆಯ ಬರೇ ನಾಲಿಗೆ ಸುಮಾರು ೩ ಖಂಡಿ ಭಾರ. ನಾಲಿಗೆ ಇಲ್ಲದ ಬರೇ ಘಂಟೆಯ ತೂಕ ೯೨ ಖಂಡಿ. ಬಾರಿಸಲಿಕ್ಕೆ ೩೦ ಆಳು ಬೇಕು.] ಆ ಗೋಪುರಗಳ ಶಿಖರಕ್ಕೆ **ಜಾಗ್ರತೆಯ ಉಪಮೆಯಾಗಿರುವ** ಹುಂಜರಾಜನ ನಿಶಾನಿಯನ್ನು (ಹಿತ್ತಾಳಿಯದು) ಏರಿಸಿ ನಿಂತ್ರಿಸುವ ಮರ್ಯಾದೆ ಉಂಟು.

ಬೆಲ್ಗ್ಯವೆಂಬ ದೇಶದ ಒಂದಾನೊಂದು ಊರಿನಲ್ಲಿ ಇತ್ತಲಾಗೆ ಒಂದು ಹೊಸ ದೇವಾಲಯವು ಕಟ್ಟೋಣಾಯಿತು. ಐದಾರು ತಿಂಗಳಿನ ಹಿಂದೆ ಕಟ್ಟುವ ಕೆಲಸವು ಮುಗಿಯಲಿಕ್ಕಾದಾಗ, ಕಟ್ಟಕಡೇ ಕೆಲಸವಾಗಿ ಒಂದೇ ಮಾತ್ರ ಇನ್ನು ಉಳಿದಿತ್ತು, ಏನಂದರೆ: ಬಹು ದೊಡ್ಡ ಗೋಪುರದ ಶಿಖರಕ್ಕೆ ಹುಂಜರಾಜನ ನಿಶಾನಿಯನ್ನು ಏರಿಸಿರಿಸುವಂಥಾದ್ದೇ. ಆದರೆ ಕೆಲಸದವರು ಹತ್ತಿ ಕೊಂಡು, ನಿಂತು, ಇತರ ಕೆಲಸಗಳನ್ನೆಲ್ಲಾ ಮಾಡಿ ತೀರಿಸಿದ್ದ ಅಟ್ಟಳಿಗೆ (ಗೋಡೆಗಳನ್ನು ಕೈ ನಿಲಂಕದಷ್ಟು ಎತ್ತರಕ್ಕೆ ಕಟ್ಟಿಸಲಿಕ್ಕಾಗುವರೆ ಬಿದುರುಗಳನ್ನೂರಿಸಿ, ಹಲಿಗೆಗಳನ್ನು ಹಾಕಿ, ಹಂಗಾಮಿ ಏರೆತ್ತಿಕೇ ಅಂತಸ್ತುಗಳಿಗೆ ಅಟ್ಟಳಿಗೆಯೆಂದೂ ಅಟ್ಟೊಳಿಗೆಯೆಂದೂ ಹೇಳುತ್ತಾರೆ) ಅದಕ್ಕೆ ಸಾಲದಿದ್ದ ಕಾರಣದಿಂದಲೂ ಆ ಅಟ್ಟಳಿಗೆಯನ್ನು ಇನ್ನೊಂದು ಆಳುದ್ದದಷ್ಟು ಏರಿಸಲಿಕ್ಕೆ ಕೂಡದಿದ್ದ ಕಾರಣದಿಂದಲೂ ಕೆಲಸದವನೊಬ್ಬನ ಹೆಗಲ ಮೇಲೆ ಇನ್ನೊಬ್ಬ ಹತ್ತಿ ನಿಂತು ಕೊಳ್ಳುವದಲ್ಲದೆ, ಇತರೊಂದು ಉಪಾಯ ಕಾಣದೆ ಇತ್ತು. ಆದರೆ ಆ ಪ್ರಕಾರವಾಗಿ ಅಂಥಾ ಕೆಲಸವನ್ನು ಮಾಡಿ ಮುಗಿಸುವಂಥಾದ್ದು ಮಹಾ ಸಾಹಸವೂ ಧೈರ್ಯವೂ ಸ್ಥೈರ್ಯವೂ ಪರಸ್ಪರ ವಿಶ್ವಾಸವೂ ಇಲ್ಲದ ಜನರಿಂದ ಕೂಡೀತೇ? ಎಂದಿಗೂ ಕೂಡದು! ಆ ಕೆಲಸದವರಲ್ಲಿ ಇಬ್ಬರಿಗೆ ಈ ಗುಣಗಳು ಇದ್ದವು. ಅದಲ್ಲದೆ ಒಬ್ಬನಿಗೆ ಎರಡನೆಯವನನ್ನು ಹೊತ್ತು ಕೊಳ್ಳಲಿಕ್ಕೆ ತ್ರಾಣವೂ ಇತ್ತು; ಮತ್ತು ಎರಡನೆಯವನಿಗೆ ಅವನ ಹೆಗಲ ಹತ್ತಿ, ಒಂದಿಷ್ಟಾದರೂ ಆದರದೆ ನಿಂತು ಕೊಂಡು, ತ್ವರಿತವಾಗಿ ಆ ಕೆಲಸ ಮಾಡಿ ತೀರಿಸಲಿಕ್ಕೆ ತಕ್ಕ ಕೈಗುಣವೂ ಚಮತ್ಕಾರವೂ ಇತ್ತು. ಇಬ್ಬರು ಕೆಲಸಕ್ಕೆ ಬೇಕಾದ ಶಸ್ತ್ರಗಳನ್ನೂ ನಿಶಾನಿಯನ್ನೂ ಕರಗಿದ್ದ ಸೀಸ

ವೂ ಬೆಂಕಿಯೂ ಇದ್ದ ಮೂಸೆಯನ್ನೂ ಕೈಯಲ್ಲಿ ಹಿಡುಕೊಂಡು, ಗೋಪುರವನ್ನೇರಿದರು. ಅಟ್ಟಳಿಗೆಯ ತುದಿಯ ಹಲಿಗೆಗೆ ಮುಟ್ಟಿ, ಮೊದಲಿನವನು ಒಂದು ಕೈಯಿಂದ ಅಟ್ಟಳಿಗೆಯ ಒಂದು ಗಳುವನ್ನು ಬಿಮ್ಮಗೆ ಹಿಡುಕೊಂಡು, ಕಾಲಲ್ಲಿ ಚನ್ನಾಗಿ ಊರಿ ನಿಂತು ಕೊಂಡು, ಬೆನ್ನು ಸ್ವಲ್ಪ ಬಗ್ಗಿ ಕೊಂಡಾಗ, ಎರಡನೆಯವನು ಅವನ ಹೆಗಲ ಮೇಲೆ ಹತ್ತಿ ನಿಂತು ಕೊಂಡನು. ಮತ್ತವನು ಈತನಿಗೆ ಎರಡನೇ ಕೈಯಿಂದ ನಿಶಾನಿ ಮುಂತಾದ್ದನ್ನು ಏರಿಸಿ ಕೊಟ್ಟ ಬಳಿಕ ಈತನು ಆ ಹುಂಜವನ್ನು ಕಲಶದಲ್ಲಿ ಕುಂದ್ರಿಸುವ ಕೆಲಸವನ್ನು ತೊಡಗಿ ಕೈಲಾದಷ್ಟು ತ್ವರೆಯಲ್ಲಿ ಸಾಗಿಸಿದನು. ಊರಿನ ಜನರುಗಳು ಗೋಪುರದ ಅಡಿಯಲ್ಲಿ ನಿಂತು, ಸುಮಾರು ಉಸುರನ್ನು ಕಟ್ಟಿ ಕೊಂಡು, ಕಣ್ಣೆತ್ತಿ ಹೊಡದು ನೋಡುತ್ತಿದ್ದರು. ಬಹು ವಿಸ್ಮಿತರಾಗಿ ನೋಡುತ್ತಿದ್ದವರಲ್ಲಿ ಕೆಲವರಾದರೂ ಇಬ್ಬರಿಗೋಸ್ಕರ ದೇವರನ್ನು ಮನಸ್ಸಿನಲ್ಲಿ ಪ್ರಾರ್ಥಿಸಿ ಬೇಡಿ ಕೊಂಡರು. ಸುಮಾರು ಹೊತ್ತು (ಕೆಳಗೆ ನಿಂತು ನೋಡುತ್ತಿದ್ದವರಿಗೆ ಬಹಳ ಹೊತ್ತು ಎಂದು ಕಂಡಿತು) ಮೊದಲನೆಯವನು ಒಂದು ಬಂಡೆಯೋಪಾದಿಯಾಗಿ ಊರಿ ಕೊಂಡು ನಿಂತನು. ಅವನು ತುಸ ಮಾತ್ರ ಅಲ್ಲಾಡಿದ್ದಾದರೆ, ಎರಡನೆಯವನು ಹ್ಯಾಗೂ, ಒಂದು ವೇಳೆ ಇಬ್ಬರೂ, ಕೆಳಗೆ ಬೀಳುವ ಸಂಗತಿಯಾಗುತ್ತಿತ್ತು. ಎರಡನೆಯವನು ಆದಷ್ಟು ತ್ವರಿತವಾಗಿ ಸೀಸವನ್ನು ಕಲಶದಲ್ಲಿ ಎರದು, ನಿಶಾನಿಯನ್ನು ಕುಂದ್ರಿಸ ನೋಡಿದನು. ಕಡೆಗೆ ಕೆಲಸವು ಆಗಿ ತೀರಿದಾಗ ಬಹು ನಿಧಾನವಾಗಿ ತನ್ನನ್ನು ಹೊತ್ತವನ ಹೆಗಲಿನಿಂದ ಹಲಿಗೇ ಮೇಲೆ ಇಳಿದನು. ಕೆಳಗಣ ಜನರು ಅದನ್ನು ಕಂಡು ಹರ್ಷಿಸಿದರು. ಆದರೆ ಅವನು ಹಲಿಗೆಯಿಂದಲೂ ಇಳಿಯಲು, ಹೊತ್ತವನು ಬಿಮ್ಮಗೆ ಹಿಡುಕೊಂಡಿದ್ದ ಬಿದುರನ್ನು ಬಿಡದೆ, ನಿಂತಂತೆ ನಿಂತುಳಿದ್ದಕ್ಕೆ ಎಲ್ಲರಿಗೆ ಆಶ್ಚರ್ಯ ಹುಟ್ಟಿತು. ಯಾಕೆ ಇಳಿದು ಬಾರನು? ಮೈ ಮರಕಟ್ಟಿ ಹೋಯಿತೋ? ಎಂಬದಾಗಿ ತಮ್ಮೊಳಗೆ ಅಂದು ಕೊಂಡರು. ಕಡೆಗೆ ಅವನು ಸಹ ಬಹು ಮೆಲ್ಲಗೆ ಇಳಿಯಲಿಕ್ಕೆ ತ್ರಾಣ ಸಾಲದವನಂತೆ ಇಳಿಯ ತೊಡಗಿದನು. ಅಡಿಗೆ ಇಳಿದು ಮುಟ್ಟುತ್ತಲೇ ನೆಲಕ್ಕೆ ಬಿದ್ದನು. ಎಲ್ಲರು— ಏನು? ಏನು? ಎಂದು ಓಡಿ ಬಂದು ನೋಡಲು, ಅವನ ಹೆಗಲು ಎದೆ ತೋಳುಗಳು ಸುಟ್ಟ ಘಾಯಗಳಿಂದ ತುಂಬಿದ್ದವು. ಅವನು ಹೊತ್ತು ಕೊಂಡಿದ್ದ ಜತೆಕೆಲಸದವನು ನಿಶಾನಿಯನ್ನು ಕುಂದ್ರಿಸುವ ಬಗ್ಯೆ ಸೀಸವನ್ನು ಎರೆಯುವಾಗ್ಯೆ, ಸೀಸವು ಬೊಟ್ಟು ಬೊಟ್ಟಾಗಿ ಅವನ ಮೇಲೆ ಸುರಿದು ಬಿದ್ದಿತ್ತು. ಕರಗಿದ್ದ ಸೀಸ ಮಹಾ ವೇದನೆ ಕೊಟ್ಟು ಬಿದ್ದ ಬಿದ್ದಲ್ಲಿ ಘಾಯ ಸುಟ್ಟು ಬಿಟ್ಟಾಗ್ಯೂ, ಅವನು— ತಾನು ಏನೊಂದಿಷ್ಟು ಅಲ್ಲಾಡಿದರೆ, ಅಥವಾ ಬಾಯಿ ಬಿಟ್ಟರೆ, ತನ್ನನ್ನು ನಂಬಿ, ತನ್ನ ಹೆಗಲ ಹತ್ತಿ ಕೊಂಡ ಜತೆಯವನು ಕೆಳಗೆ ಬಿದ್ದು, ನಜ್ಜುಗುಜ್ಜಾಗಿ ಹೋದಾನು, ಆದರೆ ಅಂಥಾ ಪ್ರಸಂಗವಾಗ ಬಾರದು ಎಂತ ಒಂದು ಬೆರಳನ್ನಾದರೂ ಅಲ್ಲಾಡಿಸದೆ, ಒಂದು ಕಲ್ಲಿನ ಸ್ತಂಭದಂತೆ ಎಲ್ಲಾ ಸಹಿಸಿ ತಡೆದನು. ಜನರು ಮಹದಾಶ್ಚರ್ಯ ಪಟ್ಟು, ಮಹಾ ಪ್ರೀತಿ ಅವನ ಮೇಲಿಟ್ಟು, ಅವನನ್ನು ಆಸ್ಪತ್ರಿಗೆ ಹೊತ್ತು ಕೊಂಡು ಹೋದರು. ಅಲ್ಲಿ ಅವನು ಮೂರು ನಾಲ್ಕು ತಿಂಗಳು ಬಿದ್ದು, ಬಹು ಕಷ್ಟ ತಾಳಿದ ಕಡೆಗೆ ದೇವರ ದಯದಿಂದ ತಿರಿಗಿ ಸ್ವಸ್ಥನಾದನು. ಮಹಾ ವಿಶ್ವಾಸಪೂರಣವೂ ಸಾಹಸಕಾರ್ಯವೂ ಆಗಿರುವ ಆ ಕಾರ್ಯದ ಸುದ್ದಿ ಬೆಲ್ಗ್ಯ ದೇಶದಲ್ಲೆಲ್ಲಾ ಮಾತ್ರವಲ್ಲಾ ಇತರ ದೇಶಗಳಿಗೂ ಹಬ್ಬಿತು.

ಅವನಂಥ ಸನ್ಮಿತ್ರನು ಮಹಾ ಲಾಭವಲ್ಲವೋ? ಅಂಥಾ ಮಿತ್ರಲಾಭವು ನನಗೆ ಬೇಡ ಎಂತ ಹೇಳುವವರಿದ್ದಾರೇ? ಇರಲಿಕ್ಕಿಲ್ಲಾ! ಸರ್ವರಿಗೆ ಅಂಥ ಮಿತ್ರನ ಮೇಲೆ ಆಶೆಯೂ ಇಷ್ಟವೂ ಹುಟ್ಟೀತು. ಈ ಸಂಗತಿಯನ್ನು ಈಗ ಓದಿ ಕೊಂಡ ನೀನು ಯಾರಿಗೂ ಅಂಥಾ ಮಿತ್ರನಾಗಲಿ ಮಿತ್ರಿಯಾಗಲಿ ಆಗ ಬಾರದೋ? ನೀನೇ ಯಾರಿಗಾದರೂ, ಮೊದಾಲು ನಿನ್ನ ಹೆಂಡತಿಗಾಗಲಿ ಗಂಡನಿಗಾಗಲಿ,

ಮತ್ತು ನಿನ್ನ ಮಕ್ಕಳಿಗೆ, ಅನಂತರ ಬೇರೆ ಜನರಿಗೂ ಅಂಥ ಮಿತ್ರ ಅಥವಾ ಮಿತ್ರಳು ಆಗು! ಬಳಿಕ ನಿನಗೂ ಅಂಥಾ ಮಿತ್ರಲಾಭವು ಪ್ರಾಪ್ತಿಸುವದು. (ವಿಕೀರ್ಣ ಸುಭಾಷಿತ ಪ್ರಸಂಗಶತಕದಲ್ಲಿ ೭ನೇ ಮತ್ತು ೮ನೇ ಪಾನು ಇದಕ್ಕೆ ಸರಿ ನೋಡಿದರಾದೀತು.)

---

## ಮುದಿ ಮೊಖಲ್.

(೪೩ನೇ ಪಾನಿನಿಂದ ಮುಂದೆ.)

ರೈತನು ಗುಡುಗುಡಿ ಶೇದಿ, ಬಾಯಿ ಒಂದು ಹೊಗೇ ಖಂಡಿಯೋ? ಏನೋ? ಎಂತ ತೋರುವಂತೆ ಹೊಗೆ ಬಿಡುತ್ತಾ, ತನ್ನ ಹೆಂಡತಿಯ ಪ್ರಸಂಗವನ್ನು ಸುಮ್ಮನೆ ಕೇಳಿದನು. ಆಕೆ ಪ್ರಸಂಗವನ್ನು ಮುಗಿಸಿ, ಅವನ ಉತ್ತರವನ್ನು ಕಾದು ಕೊಳ್ಳುತ್ತಾ, ಅವನನ್ನು ನೋಡಲು, ಅವನು ಇನ್ನೊಂದು ಬಾಯಿ ತುಂಬ ಹೊಗೆ ಶೇದಿ ಬಿಟ್ಟು, ಬಹು ಖಂಡಿತವಾಗಿ ಅಂದದೇನಂದರೆ: “ನಾ ಹೋಗೆ, ಬೋನಯ್ಯನನ್ನು ನಾ ಕರಕೊಂಡು ಬಾರೆ; ಅವನ ಘಾಳಿ ನನಗಿನ್ನು ಸೋಕದು; ನನ್ನ ಮೊದಲನೇ ಹೆಂಡತಿ ಗ್ರೇಟ್ಲಿಯ ತಾಯಿ ರೋಗದಲ್ಲಿ ಬಿದ್ದಿದ್ದ ಸಮಯದಲ್ಲಿ ನಾನವನನ್ನು ಬಹಳ ಸರ್ತಿ ಕರಿಸುತ್ತಿದ್ದೆ. ಬಂದಷ್ಟು ಸರ್ತಿ ಅವನು—ಗುಣವಾಗುವದು, ಈಗ ಗುಣವಾಗುವದು, ಈ ಮಂತ್ರ ಆ ಮಂತ್ರ ಮಾಡಿ, ವಾಶಿ ಮಾಡುತ್ತೇನೆ ಎಂಥೇಳಿ, ನಂಬಿಸಿ, ಹಣ ತಿಂದು, ಹೋಗುತ್ತಿದ್ದನು; ಆದರೂ ವಾಶಿಯಾಗಲಿಲ್ಲಾ. ಗ್ರೇಟ್ಲಿಯ ತಾಯಿಗೆ ಅವನ ಮೇಲೆ ಏನೂ ಭರವಸವಿದ್ದಿಲ್ಲಾ; ಈಗ ಬೋನಯ್ಯನ ಉಪಕಾರ ಸಾಕು, ಸರಕಾರಿ ವೈದ್ಯನನ್ನು ಕರಿಸ ಬೇಕು ಎಂದು ಬಹಳ ಸರ್ತಿ ಬೇಡಿ ಕೊಳ್ಳುತ್ತಿದ್ದಳು; ಆದರೆ ಆಕೆಯ ಅತ್ತೆ ನನ್ನ ತಾಯಿಗೆ ಬೋನಯ್ಯನಲ್ಲಿ ಬಹಳ ವಿಶ್ವಾಸವಿದ್ದದರಿಂದ ಅವಳು ಒಪ್ಪಿ ಕೊಳ್ಳದೆ, ಬೋನಯ್ಯನನ್ನು ಮತ್ತೂ ಮತ್ತೂ ಕರಿಸುತ್ತಿದ್ದಳು. ಕಟ್ಟಕಡೆಯಲ್ಲಿ ನಾನು ಸರಕಾರಿ ವೈದ್ಯನನ್ನು ಕರಕೊಂಡು ಬಂದಲ್ಲಿ ಅವನು—ಸಮಯವು ಮಿಾರಿ ಹೋಯಿತು, ಇನ್ನು ಬದುಕಳು ಎಂಥೇಳಿ ಹೋದನು. ಕಾಲವು ಬಂದು, ಆಕೆಯು ದೈವಾಧೀನವಾಗಿ ಹೋದಳು. ನಾನು ಸರಕಾರಿ ವೈದ್ಯನನ್ನು ಮೊದಲು ಕರಿಸಿದ್ದಾದರೂ, ಹೋಗುತ್ತಿದ್ದಳೆಂದು ನಂಬುತ್ತೇನೆ, ಯಾಕಂದರೆ ಕಾಲ ಬಂದರೆ, ತಡಿಸುವವರಿಲ್ಲಾ, ‘ಮರಣಕಾಲಕ್ಕೆ ಮದ್ದು ಇಲ್ಲಾ,’ ಆದರೂ ಬೋನಯ್ಯನ ಮೇಲೆ ನನಗೆ ನಂಬಿಕೆ ಇಲ್ಲಾ. ನನ್ನ ಮನೆಗೆ ಇನ್ನು ಬಾರದಿರಲಿ ಅವ!” ಈ ಉತ್ತರವನ್ನು ಕೇಳಿ ಅವನ ಹೆಂಡತಿ—“ಬೋನಯ್ಯನಲ್ಲಿ ನಂಬಿಕಿಲ್ಲಾ, ಅವನನ್ನು ಕರಕೊಂಡು ಬಾರೆ ಎಂಥೇಳುತ್ತೀರಿ! ಇರಲಿ! ಆದರೆ ಈ ತಂಟೆ ತಪ್ಪಿಸುವ ಉಪಾಯವೇನು? ನನಗೆ ತಿಳಿದಷ್ಟು ನಾನು ಮಾಡಿದ್ದೇನೆ. ಈ ತಂಟೆ ತೀರುವ ಹಾಗೆ ನೋಡುವದು ಈಗ ನಿಮ್ಮ ಕೆಲಸವಷ್ಟೇ!” ಎಂಥೇಳಿದ್ದಕ್ಕೆ ರೈತನು ಅಂದದೇನಂದರೆ: “ಅವಸರ ಮಾತಾಡ ಬೇಡಪ್ಪ! ತಕ್ಕ ವೈನ ನಾ ಮಾಡ ಬಲ್ಲೆ; ಇದೇ ರಾತ್ರಿ ನಾನು ಸೊಂಟ ಕಟ್ಟಿ ಕೊಂಡು, ನಮ್ಮ ಕುದುರೆಯುವನನ್ನು ಕರಕೊಂಡು ಹೋಗಿ, ಆ ಮುದಿ ರಂಡೆಯ ಭೇಟಿ ಮಾಡುತ್ತೇನೆ. ಅವಳು ಹಾಕಿದ ಪಂಪು ತಾನೇ ತೆಗೆದು, ಪೊತ್ತಿಕಟ್ಟುವಂತೆ ಹೇಳಿ ಬೆದರಿಸುತ್ತೇನೆ. ಅವಳು ಕೇಳದಿದ್ದರೆ, ನಾವು ಆ ರಂಡೆಗೆ ಗುದ್ದಿ ಗುದ್ದಿ, ಸೊಂಟ ಮುರಿದು ಬರುತ್ತೇವೆ.” ಈ ಮಾತನ್ನು ಕೇಳಿ ಅವನ ಹೆಂಡತಿ ಘಾಬರಿಯಾಗಿ—“ಬೇಡಯ್ಯಾ, ಬೇಡಾ! ಇದಾಗದು! ಮುದುಕಿ ನಿಮ್ಮಿಬ್ಬರ ಕೈಯಲ್ಲಿ ನೆಟ್ಟಗಾಗಲಿಕ್ಕೆ ಸಾಕು; ಹಾಗೆ ಮೋಸವಾದರೆ, ದರ್ಯಾಪ್ತಿಯಾಗಿ, ಗಲ್ಲಿಗೆ ಹೋಗುವ ಸಂಗತಿಯಾದೀತು; ಬೇಡ ಈ ಆಲೋಚನೆ!” ಎಂಥೇಳಲು, ಅವನು—“ನೀನು ಮಾತಾಡ ಬೇಡ! ನಾ ಹೇಳಿದ್ದೇ ಮಾಡುತ್ತೇನೆ, ಏನೂ ಆಗಲಿ! ಆಗುವಂಥಾದ್ದು ಆಗು

ತ್ತದೆ" ಎಂದಂದು, ಉದ್ವೇಗವಾಗಿ ತಿರಿಗಿ ಗುಡುಗುಡಿ ಸೇದಿದನು. ಅವನ ಹೆಂಡತಿ ಗಂಡನಲ್ಲಿ ಎಂದೂ ಕಾಣದಿದ್ದ ಆಗ್ರಹವನ್ನೂ ಧಿಟ್ಟತನವನ್ನೂ ನೋಡಿ, ಸುಮ್ಮನಿದ್ದು, ಒಂದಿಷ್ಟು ಕಣ್ಣೀರು ಇಟ್ಟಳು.

ಗ್ರೇಟ್ಲೆ ತನ್ನ ತಂದೆಯ ಮಾತನ್ನು ಕೇಳಿ, ಕೇವಲ ವಿಸ್ಮಿತಳಾಗಿ ಕಳವಳಗೊಂಡಳು. ತೊನಿಯನ್ನು ಕೈಯಲ್ಲಿ ಇನ್ನು ಹಿಡಿಯಲಾರದೆ, "ಲೈಸಳು ಕರೆದಂತೆ ನನಗೆ ಕೇಳಿತು, ಹೋಗಿ ನೋಡುತ್ತೇನೆ" ಎಂಧೇಳಿ, ತೊನಿಯನ್ನು ತಾಯಿಯ ಕೈಯಲ್ಲಿ ಕೊಟ್ಟು, ತನ್ನ ಕೋಣೆಗೆ ಹೋಗಿ, ಮೊಣಕಾಲೂರಿ ಕೊಂಡು, ಮೊಖಲ್ ಮುದುಕಿಗೆ ಏನೂ ವಿಪತ್ತು ಆಗದಂತೆಯೂ, ತನ್ನ ತಂದೆ ಅಜ್ಞಾನದಿಂದ ಹೆಚ್ಚಿನ ಅನ್ಯಾಯ ಮಾಡದಂತೆಯೂ ದೇವರು ತಡಿಸಿ, ಕಾಪಾಡ ಬೇಕೆಂದೂ, ತಾನು ಇಷ್ಟು ದಿವಸ ನಿಜವನ್ನು ಹೇಳದೆ, ಡೊಂಕು ಮಾರ್ಗದಲ್ಲಿ ನಡಕೊಂಡ ಪಾಪವನ್ನು ಕ್ಷಮಿಸಿ ಬಿಡ ಬೇಕೆಂತಲೂ ಪ್ರಾರ್ಥಿಸಿದಳು. ಪ್ರಾರ್ಥಿಸಿ ಕೊಟ್ಟಿಗೆಗೆ ಹೋಗಿ, ಇನ್ನೊಮ್ಮೆ ಒಂದು ಬಟ್ಲು ತುಂಬ ಹಾಲು ಗರೆದು, ಒಂದು ಕೋಳೀ ಮೊಟ್ಟೆ ಅದರಲ್ಲಿ ಕಡದು ಕಲಸಿ, ತಾಯಿಯ ಹತ್ತರ ತಕ್ಕೊಂಡು ಬಂದಳು. ಬಂದವಳ ಕೈಯಲ್ಲಿ ಬಟ್ಲನ್ನು ಕಂಡ ತೊನಿ ಸಂತೋಷ ಪಟ್ಟು, ತನಗೆ ಉಣ್ಣಿಸ ಬೇಕೆಂಬ ಹಾಗೆ ಕಾಣಿಸಿದನು. ತಾಯಿ—"ಈ ಬಟ್ಲಲ್ಲಿ ಏನು ತಕ್ಕೊಂಡು ಬಂದಿ?" ಎಂದು ಕೇಳಿದ್ದಕ್ಕೆ ಗ್ರೇಟ್ಲೆ— "ತೊನಿಯ ಆಹಾರ! ಇದು ಅವನಿಗೆ ಎಷ್ಟೋ ಚನ್ನಾಗಿ ಸೇರುತ್ತದೆಂತ ನೀನು ನೋಡುವ ಹಾಗೆ ನೀನು ಈಗ ಉಣ್ಣಿಸ ಬೇಕೆಂದು ತಕ್ಕೊಂಡು ಬಂದಿದ್ದೇನೆ" ಎಂಧೇಳಿದ್ದಕ್ಕೆ ತಾಯಿ—"ಒಳ್ಳೇದು, ಈ ಸರ್ತಿ ನಾನು ಉಣ್ಣಿಸುತ್ತೇನೆ" ಎಂಧೇಳಿ, ಬಟ್ಲನ್ನು ಗ್ರೇಟ್ಲೆಯ ಕೈಯಿಂದ ತೆಗೆದು ಕೊಂಡಳು; ಆದರೆ ತೆಗೆದು ಕೊಳ್ಳುವಾಗಲೇ—"ಇದು ನಾನು ಅಟ್ಟು ಇಡುವ ಗಂಜಿಯೋ? ಅದು ದಪ್ಪ, ಇದು ಬರೇ ತೆಳವು; ಏನಿದು?" ಎಂದು ಕೇಳಲು, ಗ್ರೇಟ್ಲೆ,—"ಇದು ಗಂಜಿಯಲ್ಲಾ; ಆದರೂ ತೊನಿಗೆ ಹ್ಯಾಗೆ ಸೇರುತ್ತದೆಂತ ನೋಡು!" ಎಂಧೇಳಿ, ತಾಯಿಯ ಮುಂದೆ ಮೊಣಕಾಲೂರಿ ಕೊಂಡು, ತಾಯಿಯ ಅಂಕಪೀಠದಲ್ಲಿ ಕುಳಿತಿದ್ದ ತೊನಿಗೆ ಊಡಿಸ ತೊಡಗಿದಳು. ತೊನಿ ಬಟ್ಲಿಗೆ ಬಾಯಿ ಹಾಕಿ, ನಿಲಕಡೆ ಮಾಡದೆ, ಒಂದು ತಟಕು ಆದರೂ ಚಲ್ಲಿ ಹಾಕದೆ, ಎಲ್ಲ ಕುಡಿದು ಬಿಟ್ಟನು. ತಾಯಿ ತಂದೆಗಳಿಬ್ಬರು ತೊನಿಯನ್ನೂ ಗ್ರೇಟ್ಲೆಯನ್ನೂ ಮತ್ತು ಒಬ್ಬರನ್ನೊಬ್ಬರು ನೋಡುತ್ತಾ ಆಶ್ಚರ್ಯ ಪಟ್ಟರು. ಕಡೆಗೆ ಗ್ರೇಟ್ಲೆ ಬಾಯಿ ಬಿಟ್ಟು, "ನೀವು ಮನ್ನಿಸ ಬೇಕು, ನನಗೆ ಒಂದು ಅರಿಕೆಯುಂಟು" ಎಂಧೇಳಿ, ನಡೆದ ವಿವರವೆಲ್ಲವನ್ನು ಬುಡದಿಂದ ತುದೀ ವರೆಗೆ ತಿಳಿಸಿದಳು. ಗ್ರೇಟ್ಲೆ ಎಲ್ಲವನ್ನು ಇದ್ದ ಹಾಗೆ ಮಾಜದೆ ಹೇಳುವಾಗ್ಯೆ ತೊನಿ ಬಹು ಉಲ್ಲಾಸವಾಗಿ ಉಲಿಯುತ್ತಾ ಉಲಿಯುತ್ತಾ ಇದ್ದನು. ಮುದಿ ಮೊಖಲ್ ಬಂದು, ಮಾತಾಡಿ, ಹೇಳಿ ಹೋದ್ದನ್ನೆಲ್ಲಾ, ತಾನು ಅವಳ ಮಾತನ್ನು ನೆರವೇರಿಸಲಿಕ್ಕಾಗಿ ಮಾಡಿದ ವೈನಗಳನ್ನೂ ಸವಿಸ್ತಾರವಾಗಿ ಗ್ರೇಟ್ಲೆ ಹೇಳಿ ತಿಳಿಸಿದ್ದಕ್ಕೆ ತಂದೆ ತಾಯಿಗಳಿಬ್ಬರು ವಿಸ್ಮಿತರಾದರು. ಗ್ರೇಟ್ಲೆ ಎಲ್ಲವನ್ನು ತಿಳಿಸಿ ತೀರಿಸಿದ ಮೇಲೆ ರೈತನು ಮೂರು ನಾಲ್ಕು ಸಾರಿ ಬಾಯಿ ತುಂಬ ಹೊಗೆ ಸೇದಿ ಬಿಟ್ಟು, ಮನಸ್ಸು ಕರಗಿ ಹೋದವನಾಗಿ ಹೇಳಿದ್ದೇನಂದರೆ: "ಹಹಾ! ಈ ತಂಟೆಯ ಸಂಗತಿ ಹೀಗೆಯೋ? ಹಾಗಾದರೆ ಬೋನಯ್ಯನಾಗಲಿ, ಮಂತ್ರತಂತ್ರವಾಗಲಿ, ಪಂಪು ತೆಗೆದು, ಉಪದ್ರವ ನಿಲ್ಲಿಸಿ ಬಿಡುವಂತೆ ಮೊಖಲ್ ಮುದುಕಿಗೆ ಪ್ರಾಯಶ್ಚಿತ್ತವಾಗಲಿ ಬೇಕೆಂಬುವ ಹಾಗಿಲ್ಲಾ! ಗ್ರೇಟ್ಲೆ ತನ್ನ ತಾಯಿಯಂತೆ ಸೈ; ತಾಯಿಯ ಚಾಳಿ ಇದ್ದ ಹಾಗೆ ಮಗಳಲ್ಲಿ ಕಾಣುತ್ತದೆ; ಅವಳು ಹಾಗೆಯೇ ಅಂತರಂಗದಲ್ಲಿ ಒಳ್ಳೇದನ್ನು ಮಾಡ ನೋಡುತ್ತಿದ್ದಳು; ಮಂತ್ರತಂತ್ರಗಳಿಗೆ ನೆಚ್ಚುವದಾಗಲಿ ಬೆಚ್ಚುವದಾಗಲಿ ಅವಳಲ್ಲಿ ಇದ್ದಿಲ್ಲಾ."

(ಮುಂದಿನ ಅಂಕೆಯಲ್ಲಿ ಸಮಾಪ್ತಿ.)

# ವಿವಿಧ ವರ್ತಮಾನಗಳು.

ಮಂಗಳೂರಿನವರೊಬ್ಬರ ಕೈಯಿಂದ ಕ್ರೈ. ಸ. ಕರ್ತನಿಗೆ ಮಿಶ್ಯನ್ ಕಾರ್ಯವನ್ನು ಹೊಗಳುವ ಒಂದು ಕವನವು ತಲಪಿಸೋಣಾಯಿತು. ಈ ಕವನವನ್ನು ಕಟ್ಟಿದವರು ಮಿಶ್ಯನೇರಿಗಳನ್ನು, ಅಜ್ಞಾನಾಂಧಕಾರ ಹರಣ ಮಾಡಿ, ಮೋಕ್ಷ ಮಾರ್ಗವನ್ನು ಕಾಣಿಸುವವರು ಎಂಬದಾಗಿ ಸ್ತುತಿಸಿದ್ದು ಶುಷ್ಕೋಪಚಾರವಾಗಿರದೆ, ಯಥಾರ್ಥ ಮನಸ್ಸಿನ ಅರಿಕೆ ಎಂತ ಅವರು ಈ ಮೋಕ್ಷಮಾರ್ಗವನ್ನು ಶೇರಿ ಕಾಣಿಸುವವರಾಗಲಿ! ಸದರಿ ಕವನವು ಬರೇ ಸ್ತುತಿಭಾವದ್ದಾಗಿರುವದರಿಂದ ಅದನ್ನು ಸಭಾಪತ್ರದಲ್ಲಿ ಶೇರಿಸಲಿಕ್ಕೆ ನನ್ನ ಮನಸ್ಸಿಗೆ ಸ್ವಲ್ಪ ಶಂಕೆ ತೋರುತ್ತದೆ. ಹಿತವಾದ ಇತರ ಪ್ರಸ್ತಾಪದ ಕವನಗಳನ್ನಾಗಲಿ ಪ್ರಬಂಧಗಳನ್ನಾಗಲಿ ಸಂತೋಷದಿಂದ ಅಂಗೀಕರಿಸಿ ಶೇರಿಸ್ಯೇನು. ಕ್ಷಮೆಯಾಗಲಿ!

ಅಕ್ಟೋಬರ ೭ನೇ ತಾರೀಕಿನಲ್ಲಿ ಮಂಗಳೂರಿನಿಂದಲೂ ಬೇರೆ ಕಡೆಯಿಂದಲೂ ಮಲಬಾರ ಅತ್ತ ಕಡೆಗೆ ಅಕ್ಕಿ ಮುಂತಾದ ಜೀನಸು ತುಂಬಿಸಿ ಹೋಗುವಂಥ ಪತ್ತೆಮಾರಿಗಳು ತುಫಾನಿನ ಸಮ್ಮಂಧ ತಾವು ಹೋಗ ಬೇಕಾದಂಥ ರೇವುಗಳಿಗೆ ಹೋಗಲಿಕ್ಕಾಗದೆ, ಜೀನಸುಗಳನ್ನು ಸಮುದ್ರಕ್ಕೆ ಬಿಸಾಡುತ್ತಾ ಉತ್ತರ ದಿಕ್ಕಿಗೆ ಓಡ ಬೇಕಾಯಿತು.

ಒಂದು ಪತ್ತೆಮಾರಿಯು ಸ್ವಲ್ಪ ಕಿನಾರಿಯಲ್ಲಿದ್ದದರಿಂದ, ಉತ್ತರ ದಿಕ್ಕಿಗೆ ಓಡ ಉಪಾಯ ಕಾಣದೆ, ಮಂಗಳೂರ ಅಳುವೆಯ ಒಳನುಗ್ಗಿತು. ನದೀ ನೀರು ಬಹಳ ಜೋರಿನಿಂದ ಸಮುದ್ರಕ್ಕೆ ಹೋಗುವದರಿಂದಲೂ, ಘಾಳಿ ಸಮವಾಗಿ ಇಲ್ಲದ್ದರಿಂದಲೂ, ಆ ಪತ್ತೆಮಾರಿಯು ಒಳಗೆ (ನದಿಗೆ) ಬರ ಕೂಡದೆ, ಅಳುವೆಯ ಹತ್ತರವೇ ಲಂಗರು ಹಾಕ ಬೇಕಾಯಿತು. ಆದರೆ ಪತ್ತೆಮಾರಿಯು ಬಹಳ ಹೊರಳುತ್ತಾ ತೆರೇ ನೀರು ಅದರೊಳಗೆ ಬೀಳುತ್ತಾ ಇದ್ದದರಿಂದ ಒಂದು ತಾಸಿನೊಳಗೆ ಮುಣುಗಿ ಹೋಯಿತು. ಕೂಡಲೇ ಆ ಪತ್ತೆಮಾರಿಯಲ್ಲಿದ್ದ ಸಣ್ಣ ದೋಣೀ ಮೇಲೆ ತಂಡೆಲ್ ಮತ್ತು ೫ ಕಲಾಸಿಗಳು ಹತ್ತಿಕೊಂಡು, ತಮ್ಮ ಜೀವವನ್ನು ಬಚಾವು ಮಾಡ ನೋಡಿದರು. ಶುಮಾರು ಹತ್ತು ಗಜ ದೂರ ಹೋಗುವಷ್ಟರೊಳಗೆ ದೋಣಿ ಸಹ ತೆರೆಗಳಿಂದ ಕೌಚಿ ಬಿತ್ತು. ಆಗ ಕೌಚಿ ಬಿದ್ದ ದೋಣಿಯನ್ನಾದರೂ ಹಿಡುಕೊಂಡು, ತಮ್ಮ ಜೀವ ಬಚಾವು ಮಾಡಿಕೊಂಡರು. ಕೆಲವು ಖಾಲಿ ಪೀಪಗಳ ವಿನಹಾ ಬಾಕಿ ಇದ್ದ ಐದುವರೆ ಕೋರ್ಜಿ ಅಕ್ಕಿ ಹೆಸರು ಮುಂತಾದ್ದೆಲ್ಲಾ ನಷ್ಟವಾಗಿ ಹೋಯಿತು.

ಅದೇ ದಿವಸ ಸಾಯಂಕಾಲ ಮಂಗಳೂರಿನಿಂದ ಕೋಳಿಕೋಡಿಗೆ ಹೊರಟಂಥ ಒಂದು ದೊಡ್ಡ ಪತ್ತೆಮಾರಿಯು ತುಫಾನಿನ ನಿಮಿತ್ತ ಅಳಿವೆಯೊಳಗೆ ಬರುವಂಥ ಬೇರೆ ಪತ್ತೆಮಾರಿಗಳನ್ನು ಕಂಡು, ಅದು ಸಹ ಅಳಿವೆಯ ಒಳನುಗ್ಗಿತು. ಆದರೂ ಕಿಂಚಿತ್ತು ಮಾರ್ಗ ತಪ್ಪಿ ಪತ್ತೆಮಾರಿಯು ಹೊಯಿಗೆಗೆ ತಗಲಿ, ತತ್‌ಕ್ಷಣ ಒಡದು ಹೋಯಿತು. ಪತ್ತೆಮಾರಿಯಲ್ಲಿದ್ದ ೮ ಕಲಾಶಿಗಳು ತಂಡೆಲನ ಕೂಡ ಈಜುತ್ತಾ ಕಿನಾರೆಗೆ ಬರ ನೋಡಿದರು. ಅಷ್ಟರೊಳಗೆ ಸ್ವಲ್ಪ ದೂರದಲ್ಲಿದ್ದಂಥ ಮೊಗೇರ ದೋಣಿಗಾರರು ನಾಲ್ಕು ಜನ ಕಲಾಸಿಗಳನ್ನು ತಮ್ಮ ದೋಣಿಯಲ್ಲಿ ಶೇರಿಸಿ, ಬಚಾವು ಮಾಡಿದರು. ಕತ್ತಲೆ ಆದ್ದರಿಂದ, ಬೇರೆ ಕಲಾಶಿಗಳು ಎಲ್ಲಿ? ಎಂತ ನೋಡಲಿಕ್ಕೆ ಇವರಿಂದಾಗಲಿಲ್ಲ. ಆದರೂ ಮೂರು ಕಲಾಶಿಗಳು ಹಲಿಗೆತುಂಡುಗಳನ್ನು ಹಿಡುಕೊಂಡು, ಅದೇ ರಾತ್ರಿಯಲ್ಲಿ ಕಿನಾರಿಗೆ ಬಂದು ಶೇರಿದರು. ಉಳಿದ ಕಲಾಶಿಗಳಿಬ್ಬರ ವಿಷಯ ಏನೊಂದು ವರ್ತಮಾನ ಈ ವರೆಗೆ ಇಲ್ಲಾ. ಸದರಿ ಪತ್ತೆಮಾರಿಯಲ್ಲಿದ್ದ ೫೭೫ ಗೋಣಿ ಗೋಧಿ, ಬಾಜ್ರಿ ಮುಂತಾದ ಜೀನಸುಗಳೆಲ್ಲಾ ಮುಳುಗಿ ಹೋಯಿತು.

ಅಕಟೋಬರ ತಿಂಗಳ ಆರಂಭದಲ್ಲಿ ಮುಂಬಾಯಿಯಲ್ಲಿ ಮಳೆ ಘಾಳಿ ಬಹಳ ಬಲವಾಗಿ,

ರೇವಿನಲ್ಲಿದ್ದ ಸರಕು ತುಂಬಿದ್ದ ಐವತ್ತು ಅರವತ್ತು ಪತ್ತೆಮಾರಿಗಳೂ ಬೇರೆ ಸಣ್ಣಾ ನಗಗಳೂ ಮುಣುಗಿ ಹೋದವು. ಇದರಿಂದ ಒಂದು ಕಾಲು ಲಕ್ಷ ರೂಪಾಯಿ ನಷ್ಟವಾದ್ದಲ್ಲದೆ, ಕೆಲ ಪ್ರಾಣಗಳೂ ಅಳಿದು ಹೋದವು.

ಮುಂಬಾಯಿ ಸಂಸ್ಥಾನದಲ್ಲಿ ಬಹಳವಾಗಿ ಹಾರೈಸಿದ ಮಳೆ ಬಂದದರಿಂದ, ದುಷ್ಕಾಲದ ಬಾಧೆ ಉಪಶಮನವಾಗುವಂಥಾದ್ದಾಗಿದೆ. ಬೆಳೆ ಪಸಂದು ಅದೆ, ಕೆಲ ಕಡೆಗಳಲ್ಲಿ ಸುಭಿಕ್ಷೆಯೇ ಸರಿ ಎಂಬ ವರ್ತಮಾನ ಬರುತ್ತಾ ಅದೆ. ದಕ್ಷಿಣ ಹಿಂದುಸ್ಥಾನದಲ್ಲಿಯೂ ಸದ್ಯಾ ಬಂದ ಮಳೆಯಿಂದ ದೇಶಕ್ಕೆ ಮಹಾ ಕ್ಷೇಮಲಾಭವಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಬೇರೆ ಕಡೆಯಲ್ಲಿ ಸಹ ಇಂಥಾ ಬೆಳೆ ಐವತ್ತು ವರುಷಗಳಿಗೀಚೆ ಆಗಲಿಲ್ಲಾ ಎಂದು ಹೇಳುತ್ತಾರೆ. ಆದಾಗ್ಯೂ ದುರ್ಭಿಕ್ಷೆಯ ಧಾವತಿ ಅಧಿಕವಾಗಿದ್ದ ಪ್ರದೇಶಗಳವರಿಗೆ ಗೇಯುವದಕ್ಕೆ ಮೈಯಲ್ಲಿ ತ್ರಾಣವೂ ಇಲ್ಲಾ, ಕೊಳ್ಳುವದಕ್ಕೆ ಕೈಯಲ್ಲಿ ಕಾಸೂ ಇಲ್ಲಾ, ಇಂಥಾ ಅವಸ್ಥೆಯಾದ್ದರಿಂದ ಇನ್ನೂ ಸಹಾಯವು ಅವಶ್ಯವಾಗಿದ್ದೀತು.

ಕಳೆದ ನೂರು ವರುಷಗಳಿಂದ ಹಿಂದು ದೇಶದಲ್ಲಿ ಹದಿನಾರು ಸಾರಿ ಬರಗಾಲ ಬೀಳುವಂಥಾದ್ದಾಯಿತು; ಸರಾಸರಿ ಆರು ಕಾಲ ವರುಷಕ್ಕೊಂದು ಬರಗಾಲವಾಯಿತು; ಆದರೆ ಈ ಕಳೆದ ಇಪ್ಪತ್ತು ವರುಷಗಳಲ್ಲಿ ಐದು ಸಾರಿ ಬರಗಾಲ ಬಿದ್ದದರಿಂದ ನಾಲ್ಕು ವರುಷಕ್ಕೊಂದರ ಮೇರೆಗೆ ಆಯಿತು; ಈ ಐದು ಬರಗಾಲಗಳಲ್ಲಿ ಒಂದಕ್ಕಿಂತ ಒಂದು ಕಠಿಣವಾಗುತ್ತಾ ಬಂತಂತೆ.

ಜುಲಾಯಿ ತಿಂಗಳಲ್ಲಿ ಆದ ಲೆಖ್ಖದಲ್ಲಿ ದುಷ್ಕಾಲದ ಬಾಧೆ ಸಹನ ಮಾಡುವಂಥಾ ಮದ್ರಾಸ ಸಂಸ್ಥಾನದ ಪ್ರದೇಶಗಳಲ್ಲಿ ೧,೧೩,೪೮೪ ಜನರು ಸತ್ತರೆಂತ ತಿಳಿದು ಬರುತ್ತದೆ. ಕಳೆದ ಐದು ವರುಷಗಳಲ್ಲಿ ಸರಾಸರಿ ನೋಡಿದರೆ, ೩೩,೪೪೨ ಮಾತ್ರವೇ ಇರಲಾಗಿ ೮೦,೦೫೨ ಜನರು ಹೆಚ್ಚು ಸತ್ತು ಹೋದರು. ಮತ್ತು ಸರಕಾರದವರ ಗೊತ್ತಿಗೆ ಬಾರದೆ ಸತ್ತು ಹೋದವರು ಎಷ್ಟು ಮಂದಿ ಇದ್ದಾರೋ? ದಾರಿಯ ಬದಿಯಲ್ಲಿ ಸತ್ತವರು ಎಷ್ಟು ಮಂದಿ? ಅನ್ನಾಹಾರ ಹುಡುಕುತ್ತಾ ದೇಶಾಂತರಕ್ಕೆ ಹೋಗಿ ಸತ್ತವರು ಎಷ್ಟು ಮಂದಿಯಾರು ಬಲ್ಲ? ಮದ್ರಾಸ ಸಂಸ್ಥಾನದಲ್ಲಿಯೂ ಮುಂಬಾಯಿ ಸಂಸ್ಥಾನದಲ್ಲಿಯೂ ದಿನ ಒಂದಕ್ಕೆ ೫೦೦೦ ಮಂದಿ ಸಾಯುತ್ತಾರೆಂತ ಹೇಳಿದರೆ, ಅಧಿಕೋಕ್ತಿ ಎಂತ ನೆನಸ ಕೂಡದು.

ಬರಗಾಲದಲ್ಲಿ ಧಾವತಿ ಪಡುವ ಜನರಿಗೆ ಅನ್ನಕ್ಕೆ ಮಾರ್ಗವಾಗ ಬೇಕೆಂತಾ ಬೆಂಗಳೂರಿನಿಂದ ಮೈಸೂರು ವರೆಗೆ ಲೋಹಮಾರ್ಗ ಮಾಡುವಂಥಾ ಕೆಲಸ ಪ್ರಾರಂಭ ಮಾಡಿದ್ದಾರೆ.

ತಿರುವಾಂಕೋಡಿನ ಸುರಿಯನ ಕ್ರೈಸ್ತಸಭೆಯ ಮೆತ್ರೊಪೊಲಿತನ ಅಂದರೆ ಧರ್ಮಾಧ್ಯಕ್ಷನಾಗಿದ್ದ ಮಾರ್ ಅಥನಾಸಿಯುಸ್ ಎಂಬವನು ಕೆಲ ಕಾಲಕ್ಕೆ ಮುಂಚೆ ಮರಣ ಪಟ್ಟನು. ಅವನು ಸುಮಾರು ೪೦ ವರುಷಗಳ ಕೆಳಗೆ ಕೊಟಯಮ್ ಎಂಬಲ್ಲಿಯ ಚರ್ಚ ಮಿಶ್ಯನಿನ ವಿದ್ಯಾಶಾಲೆಯಲ್ಲಿ ದೇವರ ವಾಕ್ಯಾಭ್ಯಾಸ ಮಾಡಿದ್ದನು. ತರುವಾಯ ಅವನು ಸಣ್ಣಾಸ್ಯದ ಮರ್ದಿನ್ ಎಂಬಲ್ಲಿಗೆ ಹೋಗಿದ್ದಾಗ ಅಂತಿಯೋಕ್ಯದ ಪತ್ರಿಯರ್ಕ ಅಂದರೆ ಮುಖ್ಯ ಧರ್ಮಾಧಿಕಾರಿ ಅವನಿಗೆ ಬಿಶೊಪನ ದೀಕ್ಷೆ ಕೊಟ್ಟನು. ಅಲ್ಲಿಂದ ಹಿಂದಕ್ಕೆ ಬಂದ ಮೇಲೆ ಅವನಿಗೆ ಮೆತ್ರೊಪೊಲಿತನದ ಸ್ಥಾನವು ನೇಮಕವಾಯಿತು. ಅವನು ಚರ್ಚ ಮಿಶ್ಯನಿನ ಕೆಲಸಕ್ಕೆ ಅನುಕೂಲನಾಗಿದ್ದನು. ಅವನಿಗೆ ಇಲಿ ಕಚ್ಚಿ, ಅದರ ವಿಷದಿಂದ ಮರಣ ಪ್ರಾಪ್ತವಾಯಿತು.

ಮೊದಲು ತಿರುವಂಕೋಡು ರಾಜ್ಯದ ಮಂತ್ರಿಯಾಗಿದ್ದಂಥಾ, ಈಗ ಬಡೋದ ರಾಜ್ಯದ ಮಂತ್ರಿಯಾಗಿರುವ ಸರ್ ಮಾಧವರಾಯರಿಗೆ ಕೈಸರಳು ರಾಜಾ ಎಂಬ ಬಿರುದು ದಯ ಮಾಡಿದ್ದಾರೆ.

ಪಂಜಾಬಿನಲ್ಲಿ ಕಪುರ್ತಳದ ತರುಣ ಅರಸನಿಗೆ ದೇವಾಜ್ಞೆಯಾಯಿತು; ಈ ಅರಸನು ಮದ್ಯಪ್ರಾಶನೆಯ ದುರ್ವ್ಯಸನಕ್ಕೆ ಒಳಗಾದವನಾಗಿ

ಅಕಾಲಮೃತ್ಯು ಪಟ್ಟನು. ಅವನ ತರುವಾಯ ಪಟ್ಟಕ್ಕೆ ಬರ ತಕ್ಕವನು ನಾಲ್ಕೈದು ವರುಷದ ಹುಡುಗ. ಅವನು ಪ್ರಾಪ್ತನಾಗುವ ವರೆಗೆ ಬದುಕಿದರೆ ಒಳ್ಳೇದು; ಅಲ್ಲದಿದ್ದರೆ, ಗದ್ದಿಗೆಯ ಹಕ್ಕು ಅರಸನ ತಮ್ಮ ಕನುವರಹರನಾಮ ಸಿಂಗ್ ಎಂಬಾತನಿಗೆ ಶಿಕ್ಕುವದು. ಈತನು ಕ್ರೈಸ್ತನು.

ಅಮೇರಿಕದಿಂದ ಮಿ. ಬರ್ನೆಲ್ ಎಂತ ಒಬ್ಬರು, ಇಂಗ್ಲಾಂಡಿನಿಂದ ಮಿ. ಪಿಮ್ ಎಂತ ಒಬ್ಬರು, ಹೀಗೆ ಇಬ್ಬರು ನಾಮಾಂಕಿತ ಉಪದೇಶಕರು ಹಿಂದು ದೇಶದಲ್ಲಿ ನಾನಾ ಸ್ಥಳಗಳಲ್ಲಿ ಶುಭವರ್ತಮಾನ ಸಾರುವದಕ್ಕೋಸ್ಕರವಾಗಿ ಬರುವರು.

ಚರ್ಚ ಮಿಶ್ಯನ ಸಂಘದ ಸಂಬಂಧದಲ್ಲಿ ಮುಂಬಾಯಿಯಲ್ಲಿ ನಡಿಯುತ್ತಿದ್ದ ಹಿಂದುಸ್ಥಾನಿ ಮಿಶ್ಯನು ಹಾಂಗೂ ಹಿಂದುಸ್ಥಾನಿ ಜನಾನಾ ಮಿಶ್ಯನು ಇವೆರಡನ್ನೂ ಆ ಸಂಘದವರು ಬಿಟ್ಟರು.

ಚರ್ಚ ಮಿಶ್ಯನೆರಿ ಸಂಘದವರು ಈ ವರುಷ ೨೪ ಮಂದಿ ಹೊಸ ಮಿಶ್ಯನೆರಿಗಳನ್ನು ನಾನಾ ದೇಶಗಳಿಗೆ ಕಳುಹಿಸುತ್ತಾರೆ. ಅವರಲ್ಲಿ ದೀಕ್ಷೆ ಹೊಂದದ ಹತ್ತು ಮಂದಿ ಅಫ್ರಿಕಕ್ಕೆ ಹೋಗುವವರು; ಉಳಿದ ೧೪ ಮಂದಿ ದೀಕ್ಷಿತರಾದವರು.

ಮುಂಬಾಯಿಯಲ್ಲಿ ಚೋರಶಾಲೆ ಅಂದರೆ ದುರ್ಗುಣಿಗಳಾದ ಹುಡುಗರನ್ನು ತಿದ್ದಿ ಸನ್ಮಾರ್ಗಕ್ಕೆ ತರುವದಕ್ಕೆ ಇಟ್ಟಂಥಾ ಒಂದು ಶಾಲೆ ಅದೆ; ಇದನ್ನು ಸರ್ ದಾವಿದ ಸಸ್ಸೂನ್ ಎಂಬವರು ಸ್ಥಾಪಿಸಿದವರು. ಅಲ್ಲಿ ಆ ಹುಡುಗರಿಗೆ ಜೋಪಾಸನೆಯೂ ಸುಶಿಕ್ಷೆಯೂ ಅಭ್ಯಾಸವೂ ಚನ್ನಾಗಿ ನಡಿಯುತ್ತದೆ. ಮುಂದಕ್ಕೆ ಅವರು ಸ್ವಂತ ಕಷ್ಟದಿಂದ ತಮ್ಮ ನಿರ್ವಾಹ ಮಾಡಲಿಕ್ಕಾಗುವಂತೆ ಅವರಿಗೆ ಛಾಪಖಾನೆಯಲ್ಲಿ ಅಕ್ಷರ ಕೂಡಿಸುವದು, ಪುಸ್ತಕ ಕಟ್ಟುವದು, ಬಡಗಿ ಕೆಲಸ ಮುಂತಾದ್ದು ಕಲಿಸುತ್ತಾರೆ. ಈಗ ಆ ಶಾಲೆಯಲ್ಲಿರುವ ೧೪೪ ಮಂದಿಯಲ್ಲಿ ಮುಸಲ್ಮಾನರು ೬೦, ಹಿಂದುಗಳು ೫೭, ಪಾರಶಿಗಳು ೧೫, ಯೆಹೂದ್ಯರು ೬, ಕ್ರೈಸ್ತರು ೬.

ಸರ್ವದೇಶದ ಯೌವನಸ್ಥರು ನೀತಿವಂತರೂ ಭಕ್ತಿವಂತರೂ ಆದ ಕ್ರೈಸ್ತರಾಗ ಬೇಕಾಗಿ ನವಂಬರ ತಿಂಗಳಿನ ೨೫ನೇ ತಾರೀಕಿನಿಂದ ದಶಂಬರ ತಿಂಗಳ ೨ನೇ ತಾರೀಕಿನ ವರೆಗೆ ಪ್ರಾರ್ಥನೆ ಮಾಡ ಬೇಕೆಂತಾ ಆಸ್ಟ್ರೇಲಿಯದ ಮೆಲ್‌ಬೋರ್ನಿನಲ್ಲಿರುವ ಕ್ರೈಸ್ತ ಸಹೋದರರು ಸರ್ವ ಪೃಥ್ವಿಯಲ್ಲಿರುವ ಕ್ರೈಸ್ತರಿಗೆ ವಿನಂತಿ ಮಾಡಿದ್ದಾರೆ. ಹಾಂಗೂ ಚೀನ ದೇಶದಲ್ಲಿ ಶುಭವರ್ತಮಾನವು ಅಧಿಕವಾಗಿ ಪ್ರಸಿದ್ಧಿಯಾಗ ಬೇಕೆಂತಾ ಸರ್ವ ಭೂಮಂಡಲದ ಕ್ರೈಸ್ತಭಕ್ತರು ಅಕ್ಟೋಬರ ತಿಂಗಳ ಮೊದಲನೇ ಆದಿತ್ಯವಾರ ಏಕಚಿತ್ತದಿಂದ ಪ್ರಾರ್ಥನೆ ಮಾಡ ಬೇಕೆಂತ ವಿಲಾಯತಿಯ ಒಂದು ಸಭೆಯಿಂದ ಪತ್ರ ಬಂದಿತ್ತು.

"ಮೂರು 'ಇಂಚು' ಉದ್ದ ನಾಲಿಗೆ ಆರು ಅಡಿ ಉದ್ದ ಆಳಿಗೆ ಜೀವ ಬಿಡಿಸ ಬಹುದು" ಎಂಬುವ ಗಾದೆ ಜಾಪಾನ ದೇಶದಲ್ಲಿ ಉಂಟಂತೆ. ಆ ದೇಶದಲ್ಲಿ ಮಾತುಗಾರಿಕೆಯಲ್ಲಿ ಬಹು ಘಟ್ಟಿಗರಾದವರು ಇರ ಬೇಕು. ಬಹುಪತ್ನಿತ್ವವೆಂಬದು ಆ ದೇಶದ ಕಾಯಿದೆಯಲ್ಲಿ ನಿಷೇಧಿಸಿ ಅದೆ, ಅಂದರೆ ಒಮ್ಮೆ ಮದುವೆಯಾದನಂತರ ಯಾವ ಪುರುಷನಾದರೂ ತನ್ನ ಹೆಂಡತಿಯನ್ನು ಪರಿತ್ಯಾಗ ಮಾಡದೆ, ಅಥವಾ ಆಕೆ ಸತ್ತು ಹೋಗದೆ, ಇನ್ನೊಬ್ಬಳನ್ನು ಮದುವೆ ಮಾಡಿ ಕೊಳ್ಳಲಿಕ್ಕೆ ಕೂಡದು. ಕಾನೂನು ಸ್ತ್ರೀಪರಿತ್ಯಾಗಕ್ಕೆ ಏಳು ನ್ಯಾಯಗಳನ್ನು ನಿರೂಪಿಸಿ ಹೇಳುತ್ತದೆ. ಈ ನ್ಯಾಯಗಳಲ್ಲಿ ಬಹುಮಾತುಗಾರಿಕೆ ಎಂಬದು ಸಹ ಒಂದಾಗಿದೆ—ಬಹುಮಾತುಗಾರಿಕೆ (ವಾಚಾಲತನವು) ಹಿಂದುಸ್ಥಾನದಲ್ಲಿಯೂ ಪರಿತ್ಯಾಗಕ್ಕೆ ಒಂದು ನ್ಯಾಯವಾಗಿದ್ದರೆ, ಎಷ್ಟೋ ಜನ ಮುತ್ತೈದೆಯರು ತ್ಯಾಗಪತ್ರ ಕೈಯಲ್ಲಿ ಹಿಡುಕೊಂಡು ದೇಶಸಂಚಾರ ಮಾಡ ಬೇಕಾದೀತು!

ಈಗಿನ ಪೋಪಸ್ವಾಮಿಯ ಅಪ್ಪ ಅಜ್ಜರಿಬ್ಬರ ಆಯುಷ್ಯವು ನೂರು ವರುಷದ ಮೇಲೆ ಆಯಿತಂತೆ. ಅಂಥ ದೀರ್ಘಾಯುಷ್ಯವನ್ನು ಹೊಂದಿದವರ ಮಗನೂ ಮೊಮ್ಮಗನೂ ಆಗಿ, ಅವನು

ಇನ್ನು ಹತ್ತೆಂಟು ವರುಷ ಬದುಕಲಿಕ್ಕೆ ಸಾಕು ಎಂದು ನೆಚ್ಚುವವರಿದ್ಧಾರೆ.

ಈಗ ರುಸ್ಯರಿಗೂ ತುರ್ಕರಿಗೂ ನಡಿಯುತ್ತಿರುವ ಯುದ್ಧದಲ್ಲಿ ತುರ್ಕರು ಅವರಿಗೆ ಸಮವಾಗಿ ಕಾದಾಡಿ ಜಯಶಾಲಿಗಳಾಗುವದಕ್ಕೆ ಅಮೇರಿಕದಿಂದ ಅವರು ಯಥೇಷ್ಟವಾಗಿ ತರಿಸಿದ ಒಂದು ತರದ ಕೋವಿಗಳು ಕಾರಣವಂತೆ. ಆ ಕೋವಿಗಳ ವಿಚಿತ್ರವೇನಂದರೆ: ಮದ್ದನ್ನು ಬಾರು ಮಾಡುವದು ಬಹು ಸುಲಭವಾಗಿರುತ್ತದೆ. ಮತ್ತೊಂದು ತರದ ತೋಫು ಅವರ ಹತ್ತರ ಉಂಟಂತೆ; ಅದರಿಂದ ಒಂದು ನಿಮಿಷಕ್ಕೆ ಒಂದು ರಾತಲಿನ ೮೦ ಗುಂಡುಗಳನ್ನು ಹಾರಿಸ ಬಹುದು. ಒಂದು ಗುಂಡು ಎರಡು ಮೈಲು ದೂರ ಹೋಗಿ, ೨೪ ತುಂಡಾಗಿ ಒಡಿಯುತ್ತದೆ.

ಬಲ್ಕಾನ ಅಥವಾ ಹೇಮು ಎಂಬ ಪರ್ವತ ಶ್ರೇಣಿಯನ್ನು ಹತ್ತಿ ದಾಟಿದ ರುಸ್ಯರು ಮುಖ್ಯವಾಗಿ "ಶಿಪ್ಕ ಕಣಿವೆ" ಎಂಬ ಬೆಟ್ಟದ ಸಂದಿನಲ್ಲಿ ದಾಟಿದರು. ರುಸ್ಯರು ಆ ಪರ್ವತಾವಳಿಯ ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿಗೆ ತಿರಿಗಿ ಹಿಮ್ಮೆಟ್ಟ ಬೇಕಾದ ಸಮಯದಲ್ಲಿ ತುರ್ಕರು ಅವರನ್ನು ಆ ಶಿಪ್ಕ ಕಣಿವೆಯಿಂದಲೂ ಓಡಿಸಿ ಬಿಡಬೇಕೆಂತ ಹತ್ತಿ, ಆ ಕಡೆಯಲ್ಲಿ ೬-೭ ದಿವಸ ಬಿಡದೆ ಹೋರಾಡಿದರು. ೪೦-೫೦ ಸಾವಿರ ಕಾದಾಳುಗಳು ಇದ್ದ ತುರ್ಕ್ಯ ದಳದ ಜೋರನ್ನು ಆರಂಭದಲ್ಲಿ ಸುಮಾರು ಬರೇ ೩ ಸಾವಿರ ರುಸ್ಯ ದಂಡಾಳುಗಳು ತಡಿಸಿ ನಿಂತರು. ಅನಂತರ ಇವರ ಸಹಾಯಕ್ಕೆ ೧೩ ಸಾವಿರ ಆಳುಗಳಾಗುವಷ್ಟು ರುಸ್ಯರು ಬಂದು ಕೂಡಿದರಂತೆ. ೩-೪ ದಿವಸ ರುಸ್ಯರಿಗೆ ಅಡಿಗೆ ಮಾಡಲಿಕ್ಕೆ ಮಾತ್ರವಲ್ಲ, ಏನಾದರೂ ಉಣ್ಣಲಿಕ್ಕೂ ತಿನ್ನಲಿಕ್ಕೂ ಪುರಸತ್ತು ಶಿಕ್ಕದಷ್ಟು ಜೋರು ಹೋರಾಟವಿತ್ತು. ರುಸ್ಯರು ಹಗಲಿರುಳು ಎಡೆ ಬಿಡದೆ ಮಹಾ ಶೂರತನದಿಂದ ಎದೆಗೊಟ್ಟು ಕಾದಾಡುತ್ತಾ ಬಂದಲ್ಲಿ ಸುಮಾರು ೧೫ ಸಾವಿರ ತುರ್ಕರು ಹತವಾದ ಬಳಿಕ ಇವರು ಆ ಕಣಿವೆಯನ್ನು ರುಸ್ಯರಿಗೆ ತಪ್ಪಿಸಲಿಕ್ಕೆ ಕೂಡದು ಎಂತ ತಿಳಿದು ಬಿಟ್ಟು ಹೋದರು.—ಪ್ಲೆವ್ನ ಎಂಬ ಪಟ್ಣದ ನೆರೆಯಲ್ಲಿ ರುಸ್ಯರಿಗೆ ತುರ್ಕರ ಕೈಯಿಂದ ಬಹು ದೊಡ್ಡ ಪೆಟ್ಟು ಬಿದ್ದನಂತರ ರುಸ್ಯರು ಆ ಕಡೆಯ ತುರ್ಕ್ಯ ದಂಡನ್ನೂ ಆ ಪಟ್ಣವನ್ನೂ ಮುತ್ತಿಗೆ ಹಾಕ ಶಕ್ತರಾದರು. ಆ ಕಡೆಯ ತುರ್ಕ್ಯ ದಳಬಲವು ಸುಮಾರು ೬೦ ಸಾವಿರ ಆಳು. ಆ ದಳವೂ ಪಟ್ಣವೂ ರುಸ್ಯರ ಕೈಯಲ್ಲಿ ಬಿದ್ದರೆ, ತುರ್ಕರು ಸೋತು ಹೋದಂತಾದೀತು. ಲೊವ್ಚ ಎಂಬ ಪಟ್ಣದ ನೆರೆಹೊರೆಯಲ್ಲಿಯೂ ರುಸ್ಯರು ತುರ್ಕರಿಗೆ ಇತ್ತಲಾಗೆ ಒಳ್ಳೇ ಪೂಜೆ ಮಾಡಿ, ಬಂದ ದಾರಿ ತೋರಿಸಿ ಕೊಟ್ಟರಂತೆ.—ಮೊಂತೆನಿಗ್ರೊ ಎಂಬ ಶೀಮೆಯಲ್ಲಿ ತುರ್ಕರು ನಿಕ್ಸಿಕ್ ಎಂಬ ಕೋಟೆಯನ್ನು ಕಟ್ಟಿಸಿ ಕೊಂಡಿದ್ದರು. ಈ ಕೋಟೆ ಆ ಶೀಮೆಯವರಿಗೆ ಅಡಿಗೆ ಹೆಟ್ಟಿದ ಮುಳ್ಳಿನಂತಾಗಿತ್ತು. ಮೊನ್ನೆ ಆ ಕೋಟೆಯೂ ಅದರಲ್ಲಿದ್ದ ದಂಡೂ ಮುಸ್ತೈದೆಗಳೂ ಆ ಶೀಮೆಯವರಿಗೆ ವಶವಾದವು.—ತುರ್ಕ್ಯ ಅರ್ಮೇನ್ಯದಲ್ಲಿ ಸಹ ರುಸ್ಯರಿಗೆ ದೊಡ್ಡ ಜಯವಾಯಿತಂತೆ. ೭ ಮಂದಿ ಪಾಷೆರನ್ನೂ ಅವರ ಕೆಳಗಣ ದಳವನ್ನೂ ಶೆರೆ ಹಿಡಿದರಂತೆ.

ಯಂತ್ರಗಳನ್ನು ಪ್ರಯೋಗಿಸುವದರಿಂದ ಕೆಲಸದವರೂ ಕಡಿಮೆ, ಖರ್ಚೂ ಕಡಿಮೆ ಆಗುತ್ತದೆಂಬದನ್ನು ಕೆಳಗೆ ಬರುವ ಲೆಖ್ಖದಿಂದ ತಿಳಿಯ ಬಹುದು. ಅಮೇರಿಕದ ಮಸ್ಸಚ್ಯುಸೆಟ್ಸ ಶೀಮೆಯಲ್ಲಿ ೧೮೫೫ನೇ ಇಸವಿಯಲ್ಲಿ ೭೭,೮೨೭ ಕೆಲಸಗಾರರು ೪,೫೦,೬೬,೮೨೮ ಮೊಚ್ಚೆಗಳನ್ನು ಮಾಡಿದರು. ೧೮೭೫ನೇ ಇಸವಿಯಲ್ಲಿ ೫,೯೭,೬೨,೮೬೬ ಜೋಡು ಮೊಚ್ಚೆಗಳು ಮಾಡಲ್ಪಟ್ಟವು, ಆದರೆ ಕೆಲಸಗಾರರು ೪೮,೦೯೦ ಮಾತ್ರ; ಅದೇ ಶೀಮೆಯಲ್ಲಿ ೧೮೬೫ನೇ ಇಸವಿಯಲ್ಲಿ ೨೯,೯೧೪ ಕೆಲಸಗಾರರು ೨,೪೨,೩೫,೮೬೨ ಡೊಲ್ಲರ್ ಮೌಲ್ಯವಾಗುವ ಜವಳಿ ಮಾಡಿದರು. (೧ ಡೊಲ್ಲರ್ ೨ ರೂಪಾಯಿ.) ಹತ್ತು ವರುಷಗಳನಂತರ ಕೆಲಸಗಾರರು ೧೩,೭೦೨ ಮಾತ್ರವಿರಲಾಗಿ, ಜವಳೀ ಮೌಲ್ಯ ೨,೯೩,೪೦,೯೬೨ ಡೊಲ್ಲರಾಯಿತು.

Printed at the Basel Mission Press, Mangalore.

# ಕ್ರೈಸ್ತ ಸಭಾ ಪತ್ರ

ಪುಸ್ತಕ ೧೦. **DECEMBER 1877.** ಅಂಕೆ ೬

**ಅಡಕವು:** ಕ್ರಿಸ್ತನ ಜನ್ಮೋತ್ಸವಕ್ಕೆ—"ಸಂತೋಷಂ ಪರಮಂ ಧನಂ"—ಸಂಭಾಷಣೆ—ಜ್ಞಾನಿಯಾಗಿದ್ದ ಒಕ್ಕಲಿಗನು—ಮುದಿ ಮೊಖಲ್—ಒಂದು ವಿಪರೀತ ಪರೀಕ್ಷೆ—ಒಳ್ಳೇ ಪರೋಪಕಾರಿಯಾದ ಒಕ್ಕಲಿಗನೊಬ್ಬನು—ದುಸ್ಸಂಗತಿ—ಉತ್ತರಗಳು—ಹೊಸ ಪ್ರಶ್ನೆಗಳು—ವಿವಿಧ ವರ್ತಮಾನಗಳು.

## ಕ್ರಿಸ್ತನ ಜನ್ಮೋತ್ಸವಕ್ಕೆ.

Heilige, geweihte Nacht (Männerchöre or Can. Tune-Book 104.)

೧. ಅತಿ ಶುಭ ರಾತ್ರೀಲಿ
ಆದ ಕಾರ್ಯ ಕೇಳಿರಿ!
ದೇವಪುತ್ರ ನರನಾಗಿ
ಹುಟ್ಟಿದನೀ ಕಾರ್ಯಕ್ಕಾಗಿ
ದೂತಸೈನ್ಯದೊಡನೇ
ಹಾಡಿರೆಲ್ಲಾ ಕ್ರೈಸ್ತರೇ!

೨. ಪಾಪೀ, ಆತಂ ಶೇರಿಕೋ!
ರಕ್ಷಾಕರ್ತ ಬೇಡವೋ?
ನಿಂಗೆ ಆತ ಬಂದನಲ್ಲ!
ನಿತ್ಯಜೀವ ಕೊಡ ಬಲ್ಲ.
ಆತನಲ್ಲಿ ನಂಬಿರು!
ನಿನ್ನ ರಾತ್ರಿ ಹೋಗೋದು.

೩. ದೇವರಿಗೆ ಮಹಿಮೆ!
ಸಮಾಧಾನ ಭೂಮಿಗೆ!
ನರಪುತ್ರರಲ್ಲಿ ದಯ!
ಪರದಲ್ಲಿ ನಿತ್ಯ ಜಯ
ದೊರ್ಕುವಷ್ಟು ದೊಡ್ಡದು
ಇದೇ ರಾತ್ರೀ ಫಲವು.

(A. M.)

---

## "ಸಂತೋಷಂ ಪರಮಂ ಧನಂ".

ಎಲ್ಲರು ಅದನ್ನು ನೋಡಿ, ಆತನು ಪಾಪಿಯಾದ ಮನುಷ್ಯನಲ್ಲಿ ಶೇರಿದ್ಧಾನೆಂದು ಗುಣುಗುಟ್ಟಿದರು. ಲೂಕ. ೧೯, ೭.

ಯಾರೊಬ್ಬ ಪಾಪಿ ಯೇಸುವನ್ನು ಆಶ್ರಯಿಸಿ ಕೊಳ್ಳುವದಾಗಲಿ ಯಾರೊಬ್ಬರಲ್ಲಿ ಯೇಸು ಬಂದು ಶೇರುವದಾಗಲಿ ಕಾಣುತ್ತಲೇ ಲೋಕವು ಹುಬ್ಬುಗಂಟು ಹಾಕಿ, ಗುಣುಗುಟ್ಟಿ, ಬೊಗಳಿ, ದೂರುವದು. ಯೇಸುವಿಗೆ ಶೇರುವದು ಲೋಕಕ್ಕೆ ತೊಲಗಿ ದೂರವಾಗುವದೇ ಆಗಿರುವ ಕಾರಣ

ಲೋಕವು ಈ ಪ್ರಕಾರವಾಗಿ ನಡಿಸುವಂಥಾದ್ದು ಸಹಜವಾದ್ದಾಗಿದೆ. ಯೇಸುವನ್ನು ಲಾಭ ಮಾಡಿ ಕೊಂಡವರು ಮಹಾ ಮಹತ್ತಾದ ಲಾಭವನ್ನು ಮಾಡಿ ಕೊಂಡವರಾಗಿ, ಬರೇ ಹೊಟ್ಟು, ಬರೇ ಮಣ್ಣು, ಬರೇ ಕಸವೇ ಆಗಿರುವ ಲೋಕದ್ದನ್ನು ಬಿಟ್ಟು ಬಿಡಲಿಕ್ಕೆ ಮಹಾ ಸಂತೋಷ ಪಡುವ ಕಾರಣ ಲೋಕವು ಹೊಟ್ಟೆಕಿಚ್ಚಿನಿಂದಲೂ ಶಿಟ್ಟಿನಿಂದಲೂ ಪ್ರತಿಯಾಗಿ ದೂಷಿಸುತ್ತಾ ಪರಿಹಾಸ್ಯಗಳನ್ನು ಮಾಡುತ್ತಾ ಇರುತ್ತದೆ. ಜಕ್ಕಾಯನ ಹೃದಯದಲ್ಲಿ ನಡೆದದೂ ಅವನು ಅನುಭವಿಸಿದ್ದೂ ತಿಳಿಯದೆ ಹೋದದರಿಂದ ಅವನ ಮನೆಯನ್ನು ಹಾದು ಹೋದ ಭವಜನರುಗಳು ಶೇರಿದ ಯೇಸುವನ್ನೂ ಶೇರಿಸಿ ಕೊಂಡ ಜಕ್ಕಾಯನನ್ನೂ ಗೇಲಿಟ್ಟು ಹೀನೈಸಿದರು. ಇನ್ನು ಸದ್ಯಕ್ಕೂ ಯಾರಲ್ಲ್ಯಾದರೂ ಸುಳ್ಳಿಗಾಗಲೀ ಕಳ್ಳತನಕ್ಕಾಗಲೀ ಹಾದರಕ್ಕಾಗಲೀ ದುಂದಾಟ ಪುಂಡಾಟಕ್ಕಾಗಲೀ ಇತರ ಅನ್ಯಾಯಗಳಿಗಾಗಲೀ ಮನಸ್ಸಿಲ್ಲದೆ ಹೋಗುವ ಸಂಗತಿಯಾದರೆ, ಭೇದವೂ ಪರಿಹಾಸ್ಯವೂ ದೂಷಣೆಯೂ ಆಗದೆ ಹೋಗದು. ಆದರೆ ಜಕ್ಕಾಯನು ದೂರಿ ದೂಷಿಸಿದವರ ಹರಟೆಗೆ ಕಿವಿ ಕೊಟ್ಟು, ವೈಮನಸ್ಯ ಪಟ್ಟು ತೊಂದರೆ ಗೊಳ್ಳಲಿಲ್ಲಾ. ಅಂಥಾ ಸಮಯದಲ್ಲಿ ಮನೋವಾಕ್ಕಾಯಗಳು ಖಂಡಿತವೂ ನೆಟ್ಟಾನವೂ ಆಗಿದ್ದರೆ, ಕುಚೋದ್ಯಗಾರರ ಬಾಯಿ ಮುಚ್ಚಿ ಹೋಗುತ್ತದೆ. ಕುಚೋದ್ಯಗಾರರಿಗೆ ಭಯ ಪಟ್ಟು, ಪ್ರಪಂಚಬುದ್ಧಿವಂತರ ದಾಕ್ಷಿಣ್ಯ ನೋಡುವವರಿಗೆ ಕುಚೋದ್ಯಗಾರರೂ ಪ್ರಪಂಚಬುದ್ಧಿಶಾಲಿಗಳೂ ಅವಸಾನದಲ್ಲಿ ಏನು ಸಮಾಧಾನ ಕೊಟ್ಟಾರು? ಮತ್ತು ಎರಡು ಕಡೆಗೆ ನೋಡುವವರು ದೇವರನ್ನಾಗಲೀ ಲೋಕವನ್ನಾಗಲೀ ಮೆಚ್ಚಿಸಿ ಒಡಂಬಡಿಸಲಾರದೆ, ಮನಸ್ಸಾಕ್ಷಿಯ ಪೀಡೆಗಳಿಗೆ ಗುರಿಯಾಗುವರಷ್ಟೇ. ಆದರೆ ಯೇಸುವಿನ ನಿಮಿತ್ತವಾಗಿ ಏನಾದರೂ ತಡೆದು ತಾಳಿ ಕೊಳ್ಳುವವರು ಮಹಾ ಮಹತ್ತಾದ ಪ್ರತಿಫಲವನ್ನು ಹೊಂದುವರು. ಅವರಿಗೆ ಆತನು ಪರಮ ಪದವಿಯನ್ನು ಕೊಟ್ಟು, ನಿತ್ಯಾನಂದ ಪಡಿಸುವನು. ಆತನ ಮಮತೆ ಪ್ರೀತಿ ಕೃಪೆ ಅವರಿಗೆ ಇಚ್ಛಾಪೂರ್ತಿ ಪ್ರಾಪ್ತಿಯೇ ಆಗಿ, ಅವರನ್ನು ಆನಂದಾಬ್ಧಿಮಗ್ನರಾಗಿ ಬಾಳಲೀಸುವದು. "ಬನ್ನಿ, ಬನ್ನಿ! ಉಂಬೋಣಾ! ತಿಂಬೋಣಾ! ಕುಡಿಯೋಣಾ! ಭೋಗವೇ ಮಾಡೋಣಾ! ಯಾಕಂದರೆ ನಾಳೆ ಕಾಲವು ಬಂದು, ಎಲ್ಲಾ ತೀರುತ್ತದೆ" ಎಂಬದಾಗಿ ಭವರೋಗಗ್ರಸ್ತಭ್ರಾಂತರು ಕರೆಯುತ್ತಿರುವಾಗ್ಯೆ, ಯೇಸು ಕರದು ಹೇಳುವದೇನಂದರೆ: "ಕಷ್ಟ ಪಟ್ಟು, ಹೊರೆ ಹೊರುವವರೆಲ್ಲರೇ! ನನ್ನ ಬಳಿಗೆ ಬನ್ನಿರಿ! ನಾನು ನಿಮಗೆ ವಿಶ್ರಾಂತಿ ಕೊಟ್ಟು, ಸದ್ಗತಿಗೆ ಮಾರ್ಗವನ್ನು ಕಾಣಿಸಿ ಕೊಡುತ್ತೇನೆ!"

---

## ಸಂಭಾಷಣೆ.

ನಾಲಿಗೆ ಎಂಬದು ಆಶ್ಚರ್ಯವಾದ ಇಂದ್ರಿಯ; ಅದರಿಂದ ಆಗುವ ಕಾರ್ಯಗಳು ಅನೇಕ. ಬುದ್ಧಿ ಉಪದೇಶ ಮಾಡುವದಕ್ಕೆ, ವ್ಯವಹಾರಾದಿಗಳನ್ನು ನಡಿಸುವದಕ್ಕೆ, ಆಶೀರ್ವದಿಸುವದಕ್ಕೆ, ಮನೋರಂಜಕ ಸಂಭಾಷಣೆಗಳನ್ನು ಮಾಡುವದಕ್ಕೆ ಅದರ ಸಹಾಯವು ಅವಶ್ಯವೆಂತ ಸರ್ವರೂ ಬಲ್ಲರಷ್ಟೇ. ಯಾವಾಗ್ಯೆ ಬೇಕೋ ಆವಾಗ್ಯೆ ತನ್ನ ಚಾಕರಿಗೆ ಕರಿಯುವ ಹಾಗೆ ಅದು ಮನುಷ್ಯನ ಅವಯವಗಳಲ್ಲೇ ಅದೆ. ಅದು ಎಷ್ಟಕ್ಕೆ ಅವಶ್ಯವಾಗಿದೆಯೋ ಅಷ್ಟಕ್ಕೆ ಪ್ರಯೋಗಿಸುವಂತೆ ಎಲ್ಲರೂ ಜಾಗ್ರತರಾಗಿರ ಬೇಕು. ವೈದ್ಯನು ನಾಲಿಗೆ ನೋಡಿ, ರೋಗಿಯ ದೇಹಸ್ಥಿತಿ ತಿಳುಕೊಳ್ಳುತ್ತಾನೆ; ಒಬ್ಬನ ನಾಲಿಗೆಯ ಉಚ್ಚಾರದಿಂದ ಅವನು ಇಂಥಾ ಊರಿನವನೆಂದು ಗೊತ್ತು ಮಾಡುತ್ತಾರೆ; ತದೋಪಾದಿ ಒಬ್ಬನ ಮಾತುಕಥೆಯಿಂದಲೇ ಅವನ ಗುಣಸ್ವಭಾವ ಇಂಥಾದ್ದೆಂದು ತಿಳಿಯ ಬಹುದು. "ಹೃದಯದಲ್ಲಿ ತುಂಬಿದ್ದದನ್ನು ಬಾಯಿ ಮಾತಾಡಿ ಕಾಣಿಸುವದು." ಬಾಯಿಯ ಪಾಪಗಳಿಗೆ

ಎಚ್ಚರಿಕೆಯಾಗಿರುವದು ಬಹು ಪ್ರಯಾಸ; "ಒಬ್ಬನು ವಾಕ್ಯದಲ್ಲಿ ತಪ್ಪದಿದ್ದರೆ, ಅವನು ಶರೀರಕ್ಕೆಲ್ಲಾ ಕಡಿವಾಣ ಹಾಕಿ ನಡಿಸ ಸಮರ್ಥನಾಗಿರುವ ಸಂಪೂರ್ಣನಾದ ಮನುಷ್ಯನಾಗಿದ್ದಾನೆ. ಸ್ವಲ್ಪ ಬೆಂಕಿ ಎಷ್ಟು ದೊಡ್ಡ ಅಡವಿಯನ್ನು ಹೊತ್ತಿಸುತ್ತದೆ? ನಾಲಿಗೆ ಸಹ ಬೆಂಕಿ; ನಾಲಿಗೆ ಶರೀರವನ್ನೆಲ್ಲಾ ಕಳಂಕ ಮಾಡುವಂಥಾದ್ದು." ಹೀಗಿರುವದರಿಂದ ನಮ್ಮ ಮಾತುಕಥೆಯ ವಿಷಯದಲ್ಲಿ ನೆನವರಿಕೆ ಮಾಡ ತಕ್ಕ ಕೆಲವು ವಿಚಾರಗಳು ಯಾವವಂದರೆ:

೧. ಅತಿರೇಕವಾಗಿ ಮಾತಾಡ ಬೇಡ; ಮಾತು ಬೆಳ್ಳಿ, ಮೌನ ಭಂಗಾರವೆಂತ ದಚ್ಚರ ಗಾದೆ; "ಕೇಳುವದಕ್ಕೆ ತೀವ್ರವಾಗಿಯೂ ಮಾತಾಡುವದಕ್ಕೆ ನಿಧಾನವಾಗಿಯೂ ಇರ್ರಿ". "ಎಲ್ಲಾ ಕಷ್ಟದಲ್ಲಿ ಲಾಭ ಉಂಟು; ಆದರೆ ತುಟಿಗಳ ಮಾತು ಕೊರತೆಯನ್ನೇ ಮಾಡುತ್ತದೆ". ತಕ್ಕ ಮಿತಿಯಲ್ಲಿ ಸಂಭಾಷಣೆ ಮಾಡಿ, ಮನಸ್ಸಿಗೆ ವಿಶ್ರಾಂತಿ ಕೊಡುವದು ವಿಹಿತವೇ; ಆದರೆ ಮಿತಿ ತಪ್ಪಿ ಅತಿಯಾದರೆ, ಕೆಟ್ಟದು. ನಾಲ್ಕು ಮಂದಿ ಕೂಡಿರುವಾಗ್ಯೆ ನೀನೇ ಬಹಳ ಹೊತ್ತು ಮಾತಾಡುತ್ತಾ ಇರ ಬೇಡ, ಮತ್ತೊಬ್ಬರಿಗೂ ಮಾತಾಡುವದಕ್ಕೆ ನ್ಯಾಯ ಉಂಟು. ಬಹಳ ಮಾತಾಡುವವನು ಆಡಿದ್ದೇ ಆಡುವವನಾಗಿ, ಕೇಳುವವರಿಗೆ ವಿರಸ ಹುಟ್ಟಿಸುತ್ತಾನೆ. ಮುಖ್ಯತಾ ಒಬ್ಬನು ಮಾತಾಡುವಾಗ್ಯೆ ಫಕ್ಕನೆ ಅಡ್ಡ ಬರ ಬಾರದು, ಅದು ಮಹಾ ಅಪಮರ್ಯಾದೆ.

೨. ಪರಿಹಾಸ್ಯ ಚೇಷ್ಟೆ ವರ್ಜಿಸು. ಆಗಾಗ್ಯೆ ನಗಿಸುವ ಮಾತುಗಳು ಬೇಡವೆಂತಲ್ಲಾ. ಕೆಲವರ ಅಭ್ಯಾಸವೇನಂದರೆ: ಕೇಳಿದ್ದಕ್ಕೆಲ್ಲಾ, ಮಾತುಮಾತಿಗೆ ಪರಿಹಾಸ್ಯ ಮಾಡುವದು. ಈ ದುರಭ್ಯಾಸದಿಂದ ಘನ ಬುದ್ಧಿ ಘನ ವಿಚಾರ ಕೆಡುತ್ತವೆ. ಅಣಕಿಸೋಣ ನಕಲಿ ಇವು ಅಲ್ಪಬುದ್ಧಿಗಳ ವಿನೋದ; ನಾವದನ್ನು ಮಾಡಲೂ ಬಾರದು, ಮಾಡುವವರಿಗೆ ಶಾಭಾಸನ್ನಲೂ ಬಾರದು. ಮುಖ್ಯತಾ ಎರಡನೆಯವರ ಮನಸ್ಸನ್ನು ನೋಯಿಸುವ ಚೇಷ್ಟೆ ಇರಲೇ ಬಾರದು. ಪರರ ಮನಸ್ಸಿನ ಕಡೆಗೆ ಲಕ್ಷ್ಯವಿಡದೆ ಇರುವದು ಮಹಾ ದೋಷ.

೩. ಪರರ ವಿಷಯ ಬೆನ್ನಿನ ಹಿಂದೆ ಕೆಟ್ಟದು ಆಡ ಬೇಡ; ಅದೀಗ ಚಾಡಿ. "ಅವನು ಇಂಥವ, ಅಂಥವ, ಮೆಂತೆ ಕದ್ದವ" ಎಂದು ನೆರೆಯವರ ದೋಷಗಳನ್ನು ಹೇಳುವದೂ ಕೇಳುವದೂ ಅನೇಕರಿಗೆ ಸಂತೋಷ; ಅಂಥಾ ಪ್ರಸ್ತಾಪ ಮಾಡಲೇ ಬಾರದು. ಔಗುಸ್ತೀನನೆಂಬ ಒಬ್ಬ ಪೂರ್ವಿಕ ದೇವಭಕ್ತನಿಗೆ ಅದು ಮಹಾ ವಿರೋಧವಾಗಿತ್ತು. ಪರರ ದೋಷಗಳನ್ನಾಡುವವನು ಇಲ್ಲಿಗೆ ಬರ ಬಾರದೆಂದು ಅವನು ಎರಡು ಗೆರೆಗಳನ್ನು ಬರದು, ಮೇಜಿನ ಮೇಲೆ ಇಟ್ಟಿರುತ್ತಿದ್ದನು. ಒಂದು ದಿನ ಸಂಗಡ ಕೂತವರಲ್ಲಿ ಒಬ್ಬನು ಅಲ್ಲಿಲ್ಲದ ಒಬ್ಬನ ವಿಷಯ ಚಾಡಿಮಾತು ಆಡುವದಕ್ಕೆ ಆರಂಭಿಸಿದಾಗ, ಔಗುಸ್ತೀನನು ಅವನ ಕೈ ಹಿಡಿದು, ಆ ಗೆರೆಗಳನ್ನು ತೋರಿಸಿ, "ಒಂದೇ ಈ ಗೆರೆಗಳನ್ನು ಅಳಿಸಬೇಕು, ಇಲ್ಲವೆ ನಾನು ಇಲ್ಲಿಂದ ಹೋಗ ಬೇಕು" ಎಂದು ಹೇಳಿದವನಾದನು. ನ್ಯಾಯಸ್ಥಾನದಲ್ಲಿ ಉಭಯಪಕ್ಷದವರನ್ನು ವಿಚಾರಿಸುತ್ತಾರೆ. ತಪ್ಪು ಸ್ಥಾಪಿತನಾದವನೂ ತನ್ನ ನಿರಪರಾಧ ತೋರಿಸುವದಕ್ಕೆ ಅಪ್ಪಣೆ ಪಡಕೊಳ್ಳುತ್ತಾನೆ. ಒಂದೇ ಪಕ್ಷದವರ ಮಾತು ಕೇಳಿ, ತೀರ್ಪು ಕೊಡಲಾಗದು. ಹಾಗೆಯೇ ನಾವು ಯಾರ ಚಾಡಿ ಹೇಳುತ್ತೇವೋ ಆ ಮನುಷ್ಯ ಅಲ್ಲಿರುತ್ತಿದ್ದರೆ, ತನ್ನ ಒಳ್ಳೇತನ ಸ್ಥಾಪಿಸುತ್ತಿದ್ದ. ಅವನು ಅಲ್ಲಿ ಇಲ್ಲದಿರುವದರಿಂದ ಅವನ ಸದ್ಗುಣಗಳನ್ನು ಒತ್ತಟ್ಟೆಟ್ಟು, ದುರ್ಗುಣಗಳನ್ನೇ ಹೊರಘಾಕುವದರಿಂದ ಕೇಳುವವರಲ್ಲಿ ಅವನ ವಿಷಯ ಅಬದ್ಧ ಅಭಿಪ್ರಾಯ ಉಂಟಾಗುತ್ತದೆ. ಚಾಡಿಗಾರನು ಬಹಳ ಸರ್ತಿ ಸುಳ್ಳುಗಾರನು ಆಗುತ್ತಾನೆ. ಚಾಡಿ ಅಂತನ್ನಿಸಿ ಕೊಳ್ಳುವದಕ್ಕೆ ಒಬ್ಬನ ವಿಷಯ ಆಡಿದ್ದು ಸುಳ್ಳಾಗಿರುವದು ಬೇಡ. ನಾನು ಹೇಳುವದೆಲ್ಲಾ ವಾಸ್ತವ್ಯವೆಂತ ನೆವನ ಮಾಡಿ, ಹಿಂದಿನಿಂದ ಒಬ್ಬನ ವಿಷಯ ಕೆಟ್ಟದಾಡ ಬೇಡ. ಒಬ್ಬರ ದೋಷಗಳನ್ನು

ನಮಗೆ ತಿಳಿದಷ್ಟು ಹೇಳುವದೂ ಆಗಾಗ್ಯೆ ಅವಶ್ಯವಾಗಿರುತ್ತದೆ ಖರೆ, ಒಬ್ಬನು ನಿಜ ಸ್ವಭಾವವರಿಯದೆ ಘಟಿಂಗನ ಸಂಗತಿ ಮಾಡುತ್ತಾನಾದರೆ, ಅವನನ್ನು ಎಚ್ಚರಿಸುವದು ನಮ್ಮ ಧರ್ಮವೇ. ಒಬ್ಬನ ವಿಷಯ ಕೆಟ್ಟದೇನಾದರೂ ಹೇಳುವದಕ್ಕೆ ನಿನಗೆ ಮನಸ್ಸು ಉಕ್ಕುವಾಗ, ನಾನು ಹೇಳುವದು ಖರೆಯೋ? ಯುಕ್ತವೋ? ಯಾಕೆ ಹೇಳುತ್ತೇನೆ? ಎಂಬದಾಗಿ ನಿನ್ನೊಳಗೆ ವಿಚಾರಿಸಿಕೋ. "ಚಾಡಿಗಾರನಾಗಿ ನಿನ್ನ ಜನರಲ್ಲಿ ನಡದು ಕೊಳ್ಳ ಬೇಡ." ಚಾಡಿಮಾತಿಗೆ ಕಿವಿ ಕೊಡ ಬೇಡ. ಎಲ್ಲರೂ ಹೀಗೆ ಮಾಡಿದರೆ, ಚಾಡಿಗಾರರು ಕಮ್ಮಿಯಾದಾರು. "ಮರೆಯಾಗಿ ನೆರೆಯವನ ಮೇಲೆ ಚಾಡಿ ಹೇಳುವವನನ್ನು ಸಂಹರಿಸುವೆನು." "ಕ್ಷುದ್ರ ನಾಲಿಗೆ ರೋಷಮುಖವನ್ನು ಹುಟ್ಟಿಸುತ್ತದೆ." ಪರರ ಸದ್ಗುಣಗಳ ವಿಷಯ ಹೆಚ್ಚಾಗಿ ಪ್ರಸ್ತಾಪ ಮಾಡು.

೪. ಸಂಭಾಷಣೆ ಒಳ್ಳೇ ಪ್ರಯೋಜನವುಳ್ಳ ಪ್ರಸ್ತಾಪಕ್ಕೆ ತಿರುಗಿಸಲಿಕ್ಕೆ ನೋಡು. ಮನೋರಂಜಕವಾದ ಸಂಭಾಷಣೆ ಮಾಡುತ್ತಾ ಆಗಾಗ್ಯೆ ನಗುವದು ದೋಷವಲ್ಲಾ. ಮಾತ್ರ ಕಿಸಬಾಕಿ ಪ್ರಸ್ತಾಪ ಹಿಡುಕೊಂಡು ಹೊತ್ತು ಕಳಿಯ ಬೇಡ. ಕೂಡಿರುವ ಜನರನ್ನು ನೋಡಿ ಎಲ್ಲರಿಗೂ ಪ್ರಯೋಜನ ಬರುವ ಉಚಿತವಾದ ಯಾವದಾದರೊಂದು ಪ್ರಸ್ತಾಪ ಶೇರಿಸು. ಬೀಜಗಣಿತ ತಿಳಿಯದವರ ಮುಂದೆ ಅದರ ಪ್ರಸ್ತಾಪ ಮಾಡುವದು ಎಡವಟ್ಟು. ಜ್ಞಾನಿಯಾಗಿರುವವನು ಸಂಭಾಷಣೆ ಯೋಗ್ಯವಾಗಿ ಪ್ರಯೋಗಿಸಿ, ಜ್ಞಾನಸಂಗ್ರಹ ಮಾಡಿ ಕೊಳ್ಳುವನು. ತನಗೆ ಯಾರು ಭೇಟಿಯಾಗುತ್ತಾರೋ, ಅವರಿಗೆ ಗೊತ್ತಿರುವಂಥಾದ್ದು ಅವರಿಂದ ತೆಗದು ಕೊಳ್ಳುತ್ತಾನೆ; ತನಗೆ ಗೊತ್ತಿರುವಂಥಾದ್ದು ಅವರಿಗೆ ಹಿತವಾಗಿದ್ದರೆ, ಕೊಡುತ್ತಾನೆ. ಒಕ್ಕಲಿಗ ಶಿಕ್ಕಿದರೆ ಬೇಸಾಯದ ವಿಷಯವಾಗಿ, ವರ್ತಕ ಶಿಕ್ಕಿದರೆ ವ್ಯಾಪಾರದ ವಿಷಯವಾಗಿ ಮಾತಾಡುವನು. ಹೀಗೆ ಜ್ಞಾನಿಗೆ ತಿಳುವಿಕೆ ಹೆಚ್ಚುತ್ತದೆ. ಅವನ ಸಂಗಡ ಸಂಭಾಷಣೆ ಮಾಡುವವರೂ ತಮಗೆ ಇಷ್ಟವಾದ ಸಂಗತಿಗಳನ್ನು ಪ್ರಸ್ತಾಪಿಸಿ, ತಮಗೆ ತಿಳಿಯದ್ದನ್ನು ಅವನಿಂದ ತಿಳುಕೊಂಡು, ಸಂತೋಷವನ್ನೂ ಲಾಭವನ್ನೂ ಪಡುವವರಾಗುತ್ತಾರೆ.

ನಾಲಿಗೆಯನ್ನು ಬಹು ಜಾಗ್ರತೆಯಾಗಿ ಆಳ ಬೇಕು. ಮಾತು ಆಡಿದರೆ, ಹೋಯಿತು; ಮುತ್ತು ಒಡದರೆ, ಹೋಯಿತು. ಆಡಿದ್ದು ಹಿಂತೆಗಿಯಲಿಕ್ಕೆ ಆಗೋದಿಲ್ಲಾ. ಅದು ನಿತ್ಯಕ್ಕೂ ನಮಗೆ ಸಾಕ್ಷಿಯಾಗಿ ಉಳಿಯುತ್ತದೆ. "ಯೆಹೋವನೇ, ನನ್ನ ಬಾಯಿಗೆ ಕಾವಲಿಡು, ನನ್ನ ತುಟಿಗಳ ಕದವನ್ನು ಕಾಯಿ" ಎಂತ ಪ್ರಾರ್ಥನೆ ಮಾಡುವದು ಸರ್ವರಿಗೆ ಅಗತ್ಯವಾಗಿದೆ.

---

## ಜ್ಞಾನಿಯಾಗಿದ್ದ ಒಕ್ಕಲಿಗನು.

ಸ್ವೀಚರ್‌ಲಂದದಲ್ಲಿ ಷಿಂತ್ಸನಖ್ ಎಂಬ ಊರು ಅದೆ. ಕಳದ ಶತಮಾನದಲ್ಲಿ ಬೇರೆ ಬೇರೆ ವಿದ್ವಾಂಸರು ಆ ಊರಿನಲ್ಲಿ ನೆರೆದು ಕೊಂಡ ಸಭೆಗೆ ವಿರ್ತೆಂಬೆರ್ಗೆಂಬ ಶೀಮೆಯ ಯುವರಾಜನೂ ಬಂದನು. ಆ ಊರಿಗೆ ಕೆಲವು ಹರದಾರಿ ದೂರವಾದ ಒಂದು ಹಳ್ಳಿಯಲ್ಲಿ ಕ್ಲಿಯೊಗ್ ಎಂಬ ಒಕ್ಕಲಿಗರವನು ಇದ್ದನು. ಈತನು ಒಳ್ಳೇ ತತ್ವಜ್ಞಾನಿಯೆಂತಲೂ ವರಜ್ಞಾನಿಯೆಂತಲೂ ಕೀರ್ತಿ ಹರಿದವನಾಗಿದ್ದನು. ಈತನನ್ನು ತಾನು ನೋಡ ಬೇಕೆಂತ ಕರಕೊಂಡು ಬರುವ ಹಾಗೆ ಆ ಯುವರಾಜನು ಒಬ್ಬ ಪರಿಚರನನ್ನು ಕಳುಹಿಸಿದನು. ಕ್ಲಿಯೊಗ್ ಆ ದೂತನ ಸಂಗಡ ಬಂದು ಕಾಣಲು, ಯುವರಾಜನು ಅವನನ್ನು ಎದುರ್ಗೊಂಡು, ಅಪ್ಪಿ ಕೊಂಡು, ಅವನಿಗೆ— "ನೀನು ಬಂದದಕ್ಕೆ ನನಗೆ ಬಹು ಸಂತೋಷ. ನಿನ್ನ ಕೀರ್ತಿಯನ್ನು ಕೇಳಿ, ಯಾವಾಗಾದರೂ ನಿನ್ನ ಭೇಟಿಯಾಗಿ ನಿನ್ನ ಪರಿಚಿತಿ ನನ

ಗಾಗ ಬೇಕೆಂದು ನಾನು ಬಹಳ ಅಪೇಕ್ಷೆಗೊಂಡಿದ್ದೆ" ಎಂಥೇಳಿದ್ದಕ್ಕೆ ಕ್ಲಿಯೊಗ್—"ನಿಮ್ಮ ಭೇಟಿಗೆ ನನಗೂ ಬಹು ಸಂತೋಷವೇ. ನಿಮ್ಮಂಥಾ ಖಾವಂದರು ನನ್ನಂಥ ಒಕ್ಕಲಮಕ್ಕಳನ್ನು ಪ್ರೀತಿಸಿ ನೋಡುವ ಬಗ್ಯೆ ತಮ್ಮನ್ನು ತಗ್ಗಿಸಿ ಕೊಳ್ಳುವಂಥಾದು ಬಹು ದಯವೇ" ಎಂದನ್ನಲು, ಯುವರಾಜನು—"ನಿನ್ನ ಭೇಟಿಗಾಗಿ ನಾನು ನನ್ನನ್ನು ತಗ್ಗಿಸಿ ಕೊಂಡ ಮಾತು ಇಲ್ಲವೇ ಇಲ್ಲಾ, ಯಾಕಂದರೆ ನೀನು ನನಗಿಂತ ಪಾತ್ರನು" ಎಂಥೇಳಿದನು. ಅದಕ್ಕೆ ಕ್ಲಿಯೊಗ್ ಅಂದದೇನಂದರೆ: "ನೀವು ನಿಮ್ಮ, ನಾನು 'ನನ್ನ ಋಣಧರ್ಮವನ್ನು ಕೈಕೊಂಡು, ಕರ್ತವ್ಯಾಂಶವನ್ನು ಸಲ್ಲಿಸಿದರೆ, ನಾವಿಬ್ಬರೇ ಪಾತ್ರರು."

ಅವರಿಬ್ಬರೊಳಗೆ ಬಹು ಹೊತ್ತು ಸಂಭಾಷಣೆ ನಡೆದ ಬಳಿಕ ಕ್ಲಿಯೊಗ್ ಎದ್ದು, ತಿರಿಗಿ ಹೋಗುವ ಅಪ್ಪಣೆ ತೆಗೆದು ಕೊಳ್ಳುವಂತೆ ಯುವರಾಜನಿಗೆ ಸ್ವಸ್ತಿ ಹೇಳಿ, ಅವನ ಕೈಯನ್ನು ಅಪ್ಪಿ ಕೊಳ್ಳುವಲ್ಲಿ ಯುವರಾಜನು ಒಂದು ಭಂಗಾರದ ನಾಣ್ಯವನ್ನು ಅವನ ಕೈಯಲ್ಲಿ ಕೊಟ್ಟು ಬಿಡಲು, ಕ್ಲಿಯೊಗ್ ಮುಗುಳುನಗುವೊಗ ಮಾಡಿ, "ಯಾತಕ್ಕಿದು?" ಎಂದು ಕೇಳಿದ್ದಕ್ಕೆ ಯುವರಾಜನು—"ನಿನ್ನ ಭೇಟಿಗೆ ನನಗಾದ ಸಂತೋಷದ ಗುರ್ತಿಗೆ, ನೆನಪಿಗೆ" ಎಂಥೇಳಲು, ಕ್ಲಿಯೊಗ್ ಆ ಚಿನ್ನವನ್ನು ನೋಡಿ, ಅಂದದೇನಂದರೆ: "ನನಗೇನಾದರೂ ಇನಾಮ್ ಬೇಕೆಂಬುವ ಹಾಗಿಲ್ಲಾ; ನನ್ನ ವ್ಯವಸಾಯದಲ್ಲಿ ನನಗೆ ಬೇಕಾದಷ್ಟು ಆದಾಯವುಂಟು; ಮತ್ತು ಭೇಟಿಗೆ ನಿಮಗೆ ಮಾತ್ರವಲ್ಲಾ, ನನಗೂ ಸಂತೋಷವಾಯಿತು. ದಾರೀ ಖರ್ಚಿಗಂದರೆ, ನನಗೇನೂ ಬೇಡ, ಯಾಕಂದರೆ ದಾರಿಗೆ ಕಟ್ಟಿ ಕೊಂಡು ಬಂದ ಬುತ್ತಿ ನನ್ನ ಕೈಯಲ್ಲಿ ಉಂಟು; ನನ್ನ ಮೇಲೆ ನಿಮಗೆ ಪ್ರೀತಿ ಇದ್ದರೆ ಸೈ; ಪ್ರೀತಿ ಇರಲಿ!" ಮತ್ತು ಬಹು ಗಂಭೀರ ಮುಖನಾಗಿ, "ನಿಮ್ಮ ಹೊನ್ನು ನಿಮಗಿರಲಿ! ಯಾರಾದರೂ ತನ್ನ ವ್ಯವಸಾಯದಲ್ಲಾದ್ಯಾಗಲೀ ವ್ಯಾಪಾರದಲ್ಲಾದ್ಯಾಗಲೀ ಉದ್ಯೋಗದಲ್ಲಾದ್ಯಾಗಲೀ ಮಾಡ ತಕ್ಕ ಕಷ್ಟದಿಂದಲ್ಲದೆ, ಇತರವಾದೊಂದು ಬಗೆಯಿಂದ ಹಣ ಸಂಪಾದಿಸಿ ಕೊಳ್ಳಲಿಕ್ಕೆ ಹತ್ತಿದಾಕ್ಷಣ ನೀತಿಗತಿಗೆಟ್ಟಂತಾಯಿತು" ಎಂಥೇಳಿ, ಆ ಚಿನ್ನವನ್ನು ಯುವರಾಜನಿಗೆ ವಾಪಸು ಮಾಡಿದನು. ಅನಂತರ ಆ ಯುವರಾಜನು ಆ ವಿದ್ವಾಂಸರ ಸಭೆಯಲ್ಲಿ ಕ್ಲಿಯೊಗನನ್ನು ಬಹಳವಾಗಿ ಹೊಗಳಿ, ಇನಾಮ್ ಕೊಡ ಬೇಕೆಂದಿದ್ದ ತಾನು ಬರೇ ಅಲ್ಪನೇ, ಇನಾಮ್ ತೆಗದು ಕೊಳ್ಳದ ಕ್ಲಿಯೊಗ್ ಮಹಾತ್ಮನೇ ಎಂತ ತಾನು ತಿಳಿದು ಕೊಂಡು, ಚಂದ್ರನು ಸೂರ್ಯನ ಎದುರಿನಲ್ಲಿ ನಾಚಿ ಕೊಂಡು ಕಾಣದೆ ಹೋಗುವಂತೆ ತಾನು ಕ್ಲಿಯೊಗನ ಮುಂದೆ ನಾಚಿ ಕೊಳ್ಳ ಬೇಕಾಯಿತೆಂದು ಅರಿಕೆ ಮಾಡಿದನು.

ಯುವರಾಜನು ಅಷ್ಟು ಗಣನೆಗೆ ತಂದು ಕೊಂಡ ಕ್ಲಿಯೊಗನ ಮಾತನ್ನು ಓದುವ ನೀನು ಸಹ ಗಣನೆಗೆ ತಂದು ಕೊಳ್ಳ ತಕ್ಕದು. ಆ ಮಾತು ಬಹು ಖರೆಯೂ ಗಣ್ಯವೂ ಆಗಿರುವ ಕಾರಣ ಅದನ್ನು ದೊಡ್ಡ ಅಕ್ಷರದಲ್ಲಿ ಇನ್ನೊಮ್ಮೆ ಓದುವವರ ಕಣ್ಣೆದುರಿಗೆ ತಂಥಾಕ ತಕ್ಕದೆಂತ ಕಾಣುತ್ತದೆ.

**"ಯಾರಾದರೂ ತನ್ನ ಬೇಸಾಯದಲ್ಲಾದ್ಯಾಗಲೀ ವ್ಯಾಪಾರದಲ್ಲಾದ್ಯಾಗಲೀ ಉದ್ಯೋಗದಲ್ಲಾದ್ಯಾಗಲೀ ಮಾಡ ತಕ್ಕ ಕಷ್ಟದಿಂದಲ್ಲದೆ, ಇತರವಾದೊಂದು ಬಗೆಯಿಂದ ಹಣ ಸಂಪಾದಿಸಿ ಕೊಳ್ಳಲಿಕ್ಕೆ ಹತ್ತಿದಾಕ್ಷಣವೇ ನೀತಿ ಗತಿಗೆಟ್ಟಂತಾಯಿತು."**

---

## ಮುದಿ ಮೊಖಲ್.

(೫೬ನೇ ಪಾನಿನಿಂದ ಮುಂದೆ.)

ಅಷ್ಟರ ವರೆಗೂ ಮಲತಾಯಿಯ ಅಡಿಯಲ್ಲಿ ಮೊಣಕಾಲೂರಿ ಕೊಂಡಿದ್ದ ಗ್ರೇಟ್ಲೆಯನ್ನು ತಾಯಿ ಎತ್ತಿ, ತಬ್ಬಿ ಕೊಂಡು, ಮುದ್ದಿಟ್ಟು, ಹೇಳಿದ್ದೇನಂದರೆ: "ಪಾಪ! ನನ್ನ ಗಂಜಿ ಕಷಾಯಗಳ

ಪುಣ್ಯದಿಂದ ಜೀವಶವವೇ ಆಗಿ ಹೋಗಿದ್ದ ನನ್ನ ಮಗುವನ್ನು ನೀನು ಉಳಿಸಿ ಬೆಳಿಸುವರೆ ಎಷ್ಟೋ ಚಿಂತಿಸಿ, ತೊಂದರೇ ಕೆಲಸ ಮಾಡುತ್ತಾ ಬಂದಿ! ಮುದ್ದವ್ವಾ! ನಿನ್ನ ಉಪಕಾರಕ್ಕೆ ದೇವರು ಪ್ರತ್ಯುಪಕಾರ ಮಾಡುವಾತನಾಗಲಿ! ನೀನು ಒಳ್ಳೇ ಕಾರ್ಯದಲ್ಲಿ ಕಳ್ಳೆಯಂತೆ ಮಾಡ ಬೇಕಾಯಿತು. ಇದು ನಿನ್ನ ತಪ್ಪಲ್ಲಾ, ನನ್ನ ತಪ್ಪು; ನಾನು ಅನ್ಯಾಯ ಮಾಡಿದ್ಧೇನೆ; ಬುದ್ಧಿಯಿಲ್ಲದೆ ನಾನು ಯಂತ್ರ ತಂತ್ರಮಂತ್ರಗಳಲ್ಲಿ ಭಯವನ್ನೂ ನಂಬಿಕೆಯನ್ನೂ ಇಟ್ಟಿದ್ದೆ. ದೇವರಿಗೂ ಮೊಖಲ್ ಮುದುಕಿಗೂ ನಾನು ಬಹಳ ಅನ್ಯಾಯ ಮಾಡಿದ್ಧೇನೆ. ಈ ಅನ್ಯಾಯವನ್ನು ದೇವರು ಮನ್ನಿಸಲಿ! ಆದರೆ ನಾಳೆ ಹೊತ್ತಾರೆ ಎದ್ದು, ಹಿಟ್ಟು ಹಾಲು ತುಪ್ಪ ಮೊದಲಾದ್ದನ್ನು ದೊಡ್ಡ ಪುಟ್ಟಿಯಲ್ಲಿ ತುಂಬಿಸುತ್ತೇನೆ. ನೀವು (ಗಂಡನಿಗೆ ಹೇಳಿದ್ದು) ಮೂರು ನಾಲ್ಕು ರೂಪಾಯಿ ಅದಕ್ಕೆ ಕೂಡಿಸಿ ಹಾಕ ಬೇಕು. ತೊನಿ ನಿದ್ದೆ ತಿಳಿದೆದ್ದ ಕೂಡಲೇ ಅವನಿಗೆ ಹಾಲೂಡಿಸಿ, ಶುಭ್ರ ವಸ್ತ್ರ ಹೊದ್ದಿಸಿ, ಮುದುಕಿಯ ಭೇಟಿಗೆ ತಕ್ಕೊಂಡು ಹೋಗ ಬೇಕು. ಹುಡುಗಿ ಪುಟ್ಟಿಯನ್ನು ಹೊತ್ತು ಕೊಂಡು ನನ್ನ ಸಂಗಡ ಬರ ಬೇಕು; ನಾನು ತೊನಿಯನ್ನು ಹಿಡುಕೊಂಡು ಹೋಗುತ್ತೇನೆ. ಮಗುವನ್ನು ನಾನು ಅವಳಿಗೆ ತೋರಿಸಿ, ಕೃತಜ್ಞಳಾಗಿ ಕೈಕೊಟ್ಟು, ಹರಸಲೂ ಕ್ಷಮೆ ಬೇಡಿ ಕೊಳ್ಳಲೂ ಬೇಕು. ನಮ್ಮ ಗ್ರಾಮದವರೆಲ್ಲರಿಗೆ ಕಾಣುವ ಹಾಗೆ ನಾನು ನಮ್ಮ ತೋಟವನ್ನು ದಾಟುವ ಒಳಹಾದಿಯಿಂದ ಹೋಗದೆ, ಇಡೀ ಗ್ರಾಮದ ಮೇಲೆ ಹಾದು ಹೋಗುವ ಬೀದಿಯಲ್ಲಿ ಹೋಗುತ್ತೇನೆ. ನಾನು ಮೊಖಲ್ ಮುದುಕಿಯ ಭೇಟಿಗೆ ಹೋಗಿ ಬಂದದು ಎಲ್ಲಾ ಗ್ರಾಮಕ್ಕೆ ಸುದ್ದಿಯಾಗಿ ಹಬ್ಬಿ, ಜನರಿಗೆ ಆಶ್ಚರ್ಯ ಹುಟ್ಟಿ ಹೋಗ ಬೇಕು. ಬಡ ಮುದುಕಿಗೆ ಇನ್ನು ಯಾರೂ ಕುಟಿಲಗಿತ್ತಿಯೆಂತಲೂ ಮಾಟಗಾತಿಯೆಂತಲೂ ಹೇಳಿ, ದೂಷಿಸಿ, ಮನ ನೋಯಿಸಲಿಕ್ಕೆ ಧೈರ್ಯ ಪಡದ ಹಾಗೆ ಮಾಡ ಬೇಕು. ಮತ್ತು ಅವಳಿಗೆ ಏನಾದರೂ ಕಟ್ಟಿಗೆ, ತುಪ್ಪ, ಹಾಲು, ಹಿಟ್ಟು ಬೇಕಾದರೆ, ಅವಳು ನಮ್ಮಲ್ಲಿ ಬಂದು ತಕ್ಕೊಂಡು ಹೋಗುವ ಹಾಗೆ ಹೇಳುತ್ತೇನೆ."

ಮರು ದಿನದ ಬೆಳಿಗ್ಯೆ (ದೊಡ್ಡ ವರ್ಗದಾರನಾಗಿದ್ದ) ರೈತನ ಹೆಂಡತಿ ತಾನು ಹೇಳಿದಂತೆ ಮಾಡಿ, ಮೊಖಲ್ ಮುದುಕಿಯ ಭೇಟಿಗೆ ಹೋದಳು. ಆಕೆ ತನ್ನ ಚಿಕ್ಕ ಮಗನನ್ನು ಕೊಂಕುಳಲ್ಲಿ ಕುಂಡ್ರಿಸಿ ಕೊಂಡು, ಗ್ರೇಟ್ಲಿಯ ಸಂಗಡ ಬೀದಿಯಲ್ಲಿ ಹೋಗುವದನ್ನೂ ಬರುವದನ್ನೂ ನೋಡಿ ಗ್ರಾಮದವರೆಲ್ಲರು ಬೆರಗಾಗಿ ಹೋದರು. ಮೊಖಲ್ ಸಹ ತಮ್ಮ ಭೇಟಿಗೆ ಬೆರಗಾಗುವಳು ಎಂತ ಗ್ರೇಟ್ಲಿ ನೆನಸಿ ಕೊಂಡಿದ್ದಳು; ಆದರೆ ಅವಳು ಅವರು ಬಂದದಕ್ಕೆ ಸಂತೋಷ ಪಟ್ಟರೂ, ಬೆರಗಾಗಿ ಹೋಗಲಿಲ್ಲಾ. ಮುಗುಳುನಗುಮೊಗ ಮಾಡಿ ಅವಳು—"ನೀವು ನನ್ನಲ್ಲಿ ದಯ ಮಾಡಿದ್ದು ದೊಡ್ಡ ಉಪಕಾರವೇ ಸರಿ" ಎಂದಂದು, "ಸ್ವಾಮಿ ದೇವರು ಮುದುಕಿಯನ್ನು ಬಲ್ಲನು; ಜನರು ಹೇಳುವಂತೆ ನಾನು ಕೆಡಕಳೂ ಕುಟಿಲಗಿತ್ತಿಯೂ ಅಲ್ಲಾ, ಯಾರಿಗಾದರೂ ನಾನು ಕೇಡು ಬಗೆಯುವವಳಲ್ಲಾ ಎಂತ ಆತನು ಬಲ್ಲನೆಂದು ನಾನು ಅಂದು ಹೇಳಿದೆನಲ್ಲಾ ಗ್ರೇಟ್ಲೀ!" ಎಂಧೇಳಿದಳು. ಗ್ರೇಟ್ಲಿಯ ತಾಯಿ ಅವಳಿಗೆ—"ನೀನು ನಮ್ಮ ಮನೆಗೆ ಬರುತ್ತಾ ಹೋಗುತ್ತಾ ಇರ ಬೇಕು. ನಿನಗೆ ಏನಾದರೂ ಅವಶ್ಯವಿದ್ದರೆ, ನೀನು ಬಂದು ನಮಗೆ ಹೇಳ ಬೇಕು; ನಾವು ಕಾಳು ಕಡ್ಡಿ ತುಪ್ಪ ಹಾಲು ಏನಾದರೂ ಕೊಟ್ಟು, ನಿನಗೆ ಸಹಾಯ ಮಾಡಲಿಕ್ಕೆ ಅನುವಾದರೆ, ನಮಗೆ ಬಹಳ ಸಂತೋಷವಾಗುತ್ತದೆ" ಎಂಧೇಳಿದ್ದಕ್ಕೆ ಮೊಖಲ್ ತನ್ನ ನರೆತಲೆಯನ್ನಲ್ಲಾಡಿಸಿ, "ಮುದಿ ಬಡವೆ ನನಗೆ ಇನ್ನು ಬಹಳ ಬೇಕೆಂಬುವ ಹಾಗಿಲ್ಲಾ; ನನ್ನ ಒಡೆಯನು ನನ್ನನ್ನು ನೆನಸಿ ಕೊಂಡು, ಹೆಚ್ಚು ದಿವಸ ಹೋಗಗದೆ ಮೇಲ್ಲೋಕಕ್ಕೆ ಕರಕೊಂಡಾನು" ಎಂದು ಹೇಳಿದಳು.

ಮುದುಕಿಯ ಮಾತು ನಿಜವಾಯಿತು. ಶರತ್ಕಾಲವು ಪೂರ್ಣ ಗತಿಸಿ ಹೋಗದೆ ಅವಳು

ವಾಸಾಂತರವಾಗಿ, ಶೀತೋಷ್ಣಗಳಾಗಲೀ ಕ್ಷುದ್ರ ಕ್ಷುಧೆ ದಾಹ ತಾಪಗಳಾಗಲೀ ಇಲ್ಲದಂಥಾ, ದುಃಖ ಶೋಕಾದಿಗಳು ಬೆರೆಯದ ನಿತ್ಯ ಪರಮಾನಂದವಿರುವಂಥಾ ಪರದಲ್ಲಿ ಶೇರಿದಳು. ಕೆಲವು ವಾರಗಳು ವಳು ಅಸ್ವಸ್ಥವಾಗಿ ಹಾಸಿಕೇ ಮೇಲೆ ಬಿದ್ದಿರ ಬೇಕಾಯಿತು. ಆ ಸಮಯದಲ್ಲಿ ರೈತನ ಮನೆಯವರು ಬರುತ್ತಾ ಹೋಗುತ್ತಾ ಅವಳಿಗೆ ಬಹಳ ಉಪಕಾರ ಮಾಡುತ್ತಿದ್ದರು. ಮತ್ತವರನ್ನು ನೋಡಿ ಇತರ ಗ್ರಾಮದವರಲ್ಲಿ ಸಹ ಕೆಲವರು ಮುದುಕಿಯ ಮೇಲೆ ಕನಿಕರವುಳ್ಳವರಾಗಿ, ಅವಳ ಸುಖ ದುಃಖವಿಚಾರಕ್ಕೆ ಮನಸ್ಸಿಕ್ಕಿದರು. ಈ ಪ್ರೀತಿಯನ್ನು ನೋಡಿ ಮುದಿ ಮೊಖಲ್ ಬಹು ಸಮಾಧಾನಗೊಂಡಳು. ಮತ್ತು ಗ್ರೇಟ್ಲೆ ತೊನಿಯನ್ನು ಹೊತ್ತು ಕೊಂಡು ಭೇಟಿಗೆ ಬಂದಷ್ಟು ಸರ್ತಿ ತೊನಿ ಅವಳಿಗೆ ಏನೂ ಅಂಜಿ ಕೊಳ್ಳದೆ, ಬಹಳ ಸಲಿಗೆಯಿಂದ "ಅಜ್ಜಿ! ಅಜ್ಜಿ!" ಎಂತ ಕರೆಯುತ್ತಿದ್ದದಕ್ಕೆ ಮೊಖಲ್ ಅತಿ ಸಂತೋಷ ಪಡುತ್ತಿದ್ದಳು. ಅಷ್ಟು ಸ್ನೇಹವನ್ನು ಮೊದಲು ಎಂದೂ ಅನುಭವ ಮಾಡದಾಕೆ ತನ್ನನ್ನು ಮರೆಯದೆ, ಕೈ ಬಿಡದೆ ಸಲುಹಿದ ಒಡೆಯನನ್ನು ಕಡೇ ಉಸುರನ್ನು ಬಿಡುವನಕ ಕೊಂಡಾಡುತ್ತಿದ್ದಳು.

ಜನರುಗಳು ಸಾಧಾರಣವಾಗಿ ತಂತ್ರ ಮಂತ್ರ ಯಂತ್ರಾದಿ ಉಪಾಯಗಳಲ್ಲಿ ಹುಚ್ಚು ನಂಬಿಕೆಯನ್ನೂ, ದೇವರಲ್ಲಿಯೂ ಇತರರಲ್ಲಿಯೂ ಅಪನಂಬಿಕೆಯನ್ನೂ ಇಟ್ಟಿರುವಂಥಾದ್ದು ದೊಡ್ಡ ಆಶ್ಚರ್ಯಗಳಲ್ಲಿಯೂ ಮಹಾ ದೊಡ್ಡ ಅನ್ಯಾಯಗಳಲ್ಲಿಯೂ ಒಂದಾಗಿದೆ. ಈ ಅನ್ಯಾಯದ ಸಂಬಂಧದಿಂದ ದೊಡ್ಡ ಬಾಧೆಗಳು ಒದಗಿ ಬೀಳುವದುಂಟು. ಕ್ರೈಸ್ತಸಭಾಪತ್ರಪಠಕರು ಆ ಬಾಧೆಗಳಿಗೆ ಗುರಿಯಾಗದಂತೆ ಈ ಅನ್ಯಾಯಕ್ಕೆ ತೊಲಗಿ ದೂರವಾಗಿರಲಿ!

---

## ಒಂದು ವಿಪರೀತ ಪರೀಕ್ಷೆ.

ಬರ್ಮ ದೇಶದ ದಕ್ಷಿಣ ದಿಕ್ಕಿನಲ್ಲಿ ಸುಮಾತ್ರ ಎಂಬ ದ್ವೀಪವದೆ. ಅಲ್ಲಿ ವಾಸವಾಗಿರುವ ಬತ್ತ್ರಸ್ ಎಂಬ ಜನರಲ್ಲಿ ಮೊದಲಿನಲ್ಲಿ ಸುವಾರ್ತೆಯನ್ನು ಸಾರುತ್ತಿದ್ದ ಬೋಧಕರು "ಶಾಂತರು ಭಾಗ್ಯವಂತರು, ಯಾಕಂದರೆ ಅವರು ಭೂಮಿಯನ್ನು ಬಾಧ್ಯವಾಗಿ ಹೊಂದುವರು" (ಮತ್ತಾ. ೫, ೫.) ಎಂಬ ವೇದವಾಕ್ಯದ ವಚನವನ್ನು ಒಮ್ಮೆ ಓದಿ ಪ್ರಸಂಗಿಸಿದರು. ಆ ಪ್ರಸಂಗವನ್ನು ಕೇಳಿ ಆ ಶೀಮೆಯ ಮುಖ್ಯಸ್ಥರಲ್ಲಿ ಒಬ್ಬನು ಮಾರಣೆ ದಿವಸ ಆ ಬೋಧಕರ ಬಿಡಾರಕ್ಕೆ ಬಂದು, ಬೋಧಕರನ್ನು ಕಾಣದೆ, "ಧೊರೆ ಎಲ್ಲಿ"? ಎಂತ ಗಂಟುಮೋರೆ ಮಾಡಿ ಕೊಂಡು, ಧೊರೆಸಾನಿಯ ಹತ್ತರ ಕೇಳಿದನು. "ಅವರಿಗೆ ಬರೆಯುವ ಕೆಲಸ ಬಹಳ ಉಂಟು, ಆದದರಿಂದ ಪುರುಸತ್ತು ಇಲ್ಲ" ಎಂದು ಧೊರೆಸಾನಿ ಹೇಳಿದ್ದಕ್ಕೆ ಅವನು ಕೋಣೆಯಲ್ಲಿದ್ದ ಒಂದು ಕುರುಚಿಯನ್ನು ಹಿಡಿದು, ಅತ್ತಿತ್ತ ಎಳದು, ಮೇಜಿನ ಮೇಲೆ ಇದ್ದ ಸಾಮಾನುಗಳನ್ನು ಕೆಳಗೆ ದೂಡಿ, ಧೊರೆಸಾನಿಯ ಹತ್ತರ ಕೂತು, ಏನೂ ಮರ್ಯಾದೆ ಇಲ್ಲದವನಂತೆ ಅವರನ್ನು ಕಣ್ಣಿಟ್ಟು, ದೃಷ್ಟಿಸಿ, ಬಹಳ ತೊಂದರೆ ಕೊಟ್ಟನು. ಧೊರೆಸಾನಿ ಅದಕ್ಕೆ ಬೇಸರವಾಗದೆ, ನಿಧಾನವಾಗಿ ಎದ್ದು, ಅವನನ್ನು ಸ್ವಲ್ಪ ಸಂತೋಷ ಪಡಿಸ ಬೇಕೆಂದು ಸ್ವರಮಂಡಲಿಯನ್ನು ತೆಗೆದು ಬಾರಿಸಿದರು. ಆಗ ಆ ಮನುಷ್ಯನು ಹೊರಗೆ ಹೋಗಿ, ನೀರು ತುಂಬಿಸಿಟ್ಟಿದ್ದ ದೊಡ್ಡ ಮಡಿಕೆಯನ್ನು ಎತ್ತಿ, ನೀರು ಚೆಲ್ಲಿ ಹಾಕಿದನು. ಆದರೆ ಧೊರೆಸಾನಿಗೆ ಇನ್ನು ಶಿಟ್ಟೇರಲಿಲ್ಲವೆಂದು ನೋಡಿ, ತಿರಿಗಿ ಅವರ ಹತ್ತರ ಕೂತು ಕೊಂಡು, ತನ್ನ ಕಾಲಿನಿಂದ ಅವರ ದುಸ್ತನ್ನು ತುಳಿದನು. ಆಗ ಧೊರೆಸಾನಿ ಹೊಲಿಗೇ ಸಾಮಾನು ತೆಗೆದು ಕೊಂಡು, ಹೊಲಿಯ ತೊಡಗುವದನ್ನು ನೋಡಿ, ಅವನು ಅವರ ಮುಂದಿದ್ದ ಕುಕ್ಕೆಯನ್ನು ತೆಗೆದು, ಅದರಲ್ಲಿದ್ದ ಹೊಲಿಗೇ ಸಾಮಾನುಗಳನ್ನು ಮೇಲಕ್ಕೆ ಹಾರಿಸಿ ಬಿಟ್ಟನು. ಅಷ್ಟು ತಂಟೆ ನಡೆದ ತರುವಾಯ ಧೊರೆಸಾನಿ ಶಿಟ್ಟೇರದೆ ಶಾಂತಳಾಗಿ,

"ನಿಮ್ಮ ಈ ಹೊತ್ತಿನ ಮರ್ಯಾದೆ ಏನು?" ಎಂದು ಕೇಳಿದ್ದಕ್ಕೆ ಅವನು—"ಅಮ್ಮಾ, ಮನ್ನಿಸಿರಿ! ತಾವಾಗಲೀ ಬೋಧಕರಾಗಲೀ ನಮಗೆ ಬೋಧಿಸುವ ಪ್ರಕಾರ ನಡಕೊಳ್ಳುತ್ತೀರೋ ಏನೋ ಎಂತ ಪರೀಕ್ಷೆ ಮಾಡಿ, ತಿಳುಕೊಳ್ಳುವಂತೆ ನಾನು ಈ ಹೊತ್ತು ಬಂದೆನು. ಆದರೆ ನಿಮ್ಮ ನಡತೆ ನೀವು ಕೊಡುವ ಬೋಧನೆಗೆ ಒಪ್ಪುತ್ತದೆಂದು ನಾನು ಈಗ ತಿಳುಕೊಂಡು, ಕ್ರೈಸ್ತನಾಗ ಬೇಕೆಂದು, ನಿಶ್ಚಯ ಮಾಡಿಕೊಂಡಿದ್ದೇನೆ." ಮತ್ತು ಅನಂತರದಲ್ಲಿ ಅವನು ಸ್ನಾನ ಹೊಂದಿ, ಕ್ರೈಸ್ತನಾದ್ದರಲ್ಲಿ ಕೊಟ್ಟ ಮಾತನ್ನು ನೆರವೇರಿಸಿದನು.

---

## ಒಳ್ಳೇ ಪರೋಪಕಾರಿಯಾದ ಒಕ್ಕಲಿಗನೊಬ್ಬನು.

ಪ್ರುಸ್ಯ ದೇಶದ ಪ್ಲಾವೆನ್ ಎಂಬ ಊರಿನಿಂದ ಬ್ರಂದೆನ್‍ಬುರ್ಗೆಂಬ ಊರಿಗೆ ಹೋಗುವ ರಸ್ತೆ ಹಾಫಲ್ ಎಂಬ ನದಿಯನ್ನು ದಾಟಿ ಹೋಗುತ್ತದೆ. ದಾಟಲಿಕ್ಕಾಗಿ ಒಂದು ಸಂಕವು (ಸೇತುವೆ) ಕಟ್ಟಿ ಅದೆ; ಆದರೆ ಕಾಲಾಡಿಗಳಾದರೂ ಆ ಸಂಕವನ್ನು ದಾಟಲಿಕ್ಕೆ ಜನ ಒಂದಕ್ಕೆ ಎರಡು ದುಡ್ಡು ಸುಂಕ ಕೊಡ ಬೇಕು. ಒಂದಾನೊಂದು ದಿವಸ ಒಬ್ಬ ಪರದೇಶಿ ನಡೆದು, ದಾಟಲಿಕ್ಕೆ ಬಂದನು; ಆದರೆ ಸುಂಕವನ್ನು ಕೊಡಲಿಕ್ಕೆ ಕೈಯಲ್ಲಿ ಒಂದು ಕಾಸಾದರೂ ಇಲ್ಲದ ಕಾರಣ ಗುತ್ತಿಗೆದಾರನ ಹತ್ತರ ತನ್ನನ್ನು ಸುಂಕ ಕೊಡದೆ ದಾಟಿ ಹೋಗ ಬಿಡ ಬೇಕೆಂತ ಬಹಳವಾಗಿ ಬೇಡಿ ಕೊಂಡನು. ಆದರೆ 'ಸುಂಕದವನ ಕೂಡೆ ಸುಖ ದುಃಖವೇ?' ಮತ್ತು 'ಸುಂಕದವನ ಕೂಡೆ ಸುಖ ದುಃಖ ಹೇಳಿದರೆ, ಕಂಕುಳಲ್ಲಿ ಏನು? ಅಂದನಂತೆ' ಎಂಬುವ ಗಾದೆಯುಂಟಲ್ಲಾ! ಆ ಗುತ್ತಿಗೆದಾರನಿಗೂ ಪರದೇಶಿಯ ಬಿನ್ನಹಕ್ಕೆ ಕಿವಿಯಿದ್ದಿಲ್ಲಾ. ಅಷ್ಟರಲ್ಲಿ ಒಬ್ಬ ಒಕ್ಕಲಿಗನು ದಾಟಲಿಕ್ಕೆ ನಡದು ಬಂದನು. ಈತನು ಅವರಿಬ್ಬರೊಳಗಣ ಪ್ರಸಂಗವನ್ನು ತಿಳಿದು ಕೊಂಡು, ಸುಂಕದವನ ಹತ್ತರ—"ಯಾರೊಬ್ಬನು ಒಂದು ಹೊರೆ ಹೊತ್ತು ಕೊಂಡು ದಾಟಿದರೆ, ಹೊರೆಗೇನು ಸುಂಕ ಕೊಡ ಬೇಕು?" ಎಂದು ಕೇಳಿದ್ದಕ್ಕೆ ಸುಂಕದವನು—"ಆಳಿಗೆ ಸುಂಕವಿರುವದಲ್ಲದೆ ಹೊರೆಗೆ ಸುಂಕವಿಲ್ಲಾ" ಎಂಧೇಳಲು, ಆ ಒಕ್ಕಲ ಮಗನು ತನಗೆ ಬಿದ್ದ ಸುಂಕ ಕೊಟ್ಟು, ಆ ಪರದೇಶಿಗೆ—"ಬಾ! ನನ್ನ ಹೆಗಲ ಹತ್ತಿ ಕೂತುಕೋ! ನಿನ್ನನ್ನು ಹೊತ್ತು ದಾಟಿಸುತ್ತೇನೆ" ಎಂಧೇಳಿ, ಅವನನ್ನು ತನ್ನ ಹೆಗಲಿನ ಮೇಲೆ ಹೇರಿಸಿ ಕೊಂಡು, ದಾಟಿಸಿದನು.

---

## ದುಸ್ಸಂಗತಿ.

ಒಬ್ಬ ಭಕ್ತಿವಂತನ ಮಗಳನ್ನು ಒಂದು ದಿನ ಅವಳ ಸ್ನೇಹಿತನು ಊಟಕ್ಕೆ ಕರದಿದ್ದನು. ಅಂದು ಆ ಸ್ನೇಹಿತನ ಮನೆಗೆ ಊಟಕ್ಕೆ ಬರುವವರಲ್ಲಿ ದೇವಕಾರ್ಯಗಳನ್ನು ಪರಿಹಾಸ್ಯ ಮಾಡುವ ಒಬ್ಬ ನಾಸ್ತಿಕನು ಬರುವವನಿದ್ದನು. ಆಗ್ಯೆ ಅಪ್ಪನು ಮಗಳಿಗೆ ಹೇಳಿದನು—"ಅವನಲ್ಲಿ ಒಬ್ಬ ನಾಸ್ತಿಕನೂ ಬರುವವನಿದ್ಧಾನೆಂತ ಕೇಳುತ್ತೇನೆ. ನೀನು ಅಲ್ಲಿಗೆ ಹೋಗ ಬಾರದು." ಮಗಳು ಹೇಳಿದ್ದು: "ಅಪ್ಪಾ, ಆ ಮನುಷ್ಯ ಕೆಟ್ಟವನಾಗಿದ್ದರೇನು? ನಾನು ಒಂದೆರಡು ಘಳಿಗೆ ಅಲ್ಲಿ ಕೂತಾಕ್ಷಣ ನನಗೇನೂ ಅವಘಡ ಬಾರದು." ಆಗ್ಯೆ ತಂದೆ ಒಂದು ಇದ್ದಲಿ ತಂದು, "ಇಗೋ, ಈ ಇದ್ದಲಿ ಕೈಯಲ್ಲಿ ಹಿಡಿ!" ಅಂದನು. ಅವಳು ಹಿಡಿದಾಗ, ಇದರಿಂದ ನಿನ್ನ ಕೈ ಸುಟ್ಟಿತೋ?" ಎಂತ ತಂದೆ ಕೇಳಲು, "ಇಲ್ಲಪ್ಪಾ, ಇದ್ದಲಿಯಿಂದ ಕೈ ಸುಡಲಿಲ್ಲಾ, ಮಲಿನವಾಯಿತಷ್ಟೇ" ಎಂತ ಮಗಳು ಹೇಳಿದ್ದಕ್ಕೆ ತಂದೆ ಹೇಳಿದ್ದೇನಂದರೆ: "ನೋಡು, ಕೆಟ್ಟ ಮನುಷ್ಯರ ಸಂಗತಿ ಮಾಡುವದರಿಂದ ತತ್ಕಾಲದಲ್ಲಿ ಏನೂ ಅವಘಡ ಬಾರದಿದ್ದಾಗ್ಯೂ, ಮಲಿನವಾಗ ಮಾಡದಿರದು. "ಕೆಟ್ಟ ಸಂಭಾಷಣೆಗಳು ಒಳ್ಳೇ ಮರ್ಯಾದೆಗಳನ್ನು ಕೆಡಿಸುತ್ತವೆ."

---

## ಉತ್ತರಗಳು.

(೪೬ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

41. ಯೆರೆಮಿಯಾ. ೩೮, ೬—೧೩.

42. ಯೋನನು. ಯೋನ. ೩, ೧೦—೪, ೪.

43. ಯೇಸು ಕ್ರಿಸ್ತನು. ಇಬ್ರಿ. ೩, ೧.

44. ಕೈಯಲ್ಲಿ ಬಿಚ್ಚುಗತ್ತಿಯನ್ನು ಹಿಡುಕೊಂಡಿದ್ದ "ಯೆಹೋವನ ದೂತನ" ದರ್ಶನವು. ಅಂಕೆ. ೨೨, ೩೧; ಯೆಹೋಶು. ೫, ೧೩—೧೫.

45. ಯೋಬ. ೨೯, ೩—೩೦, ೯.

## ಹೊಸ ಪ್ರಶ್ನೆಗಳು.

46. ಅದೇ ತಪ್ಪು ಯೋಬನಲ್ಲಿಯೂ ಯೆರೆಮೀಯನಲ್ಲಿಯೂ ಕಾಣುತ್ತದೆ. ಯಾವದು?

47. ದನ ಕರು ಮೊದಲಾದ ಸೊತ್ತೆಲ್ಲವೂ ಯೋಬನಿಗೆ ತಿರಿಗಿ ಇಮ್ಮಡಿಯಾಗಿ ದೊರಕಿದಲ್ಲಿ ಮಕ್ಕಳ ಸಂಖ್ಯೆ ಯಾಕೆ ಇಮ್ಮಡಿಯಾಗಲಿಲ್ಲಾ?

48. ಒಂದೇ ರಾತ್ರಿಯಲ್ಲಿ ಮೂರು ಅದ್ಭುತಗಳನ್ನು ಕಂಡ ಸಮುದ್ರದ ಹೆಸರೇನು? ಆ ಅದ್ಭುತಗಳೇನು?

49. ನೀರೇ ಒಬ್ಬನಿಗೆ ಆಹಾರವಾಯಿತು. ಎಂಥ ನೀರು?

50. ರೋಗವಿಲ್ಲದಿದ್ದಾಗ್ಯೂ, ಸುಮಾರು ಇಡೀ ೧೩ ತಿಂಗಳು ಒಂದೇ ಬಗಲಲ್ಲಿ, ಮತ್ತೂ ೪೦ ದಿವಸ ಎರಡನೇ ಬಗಲಲ್ಲಿ ನೆಲ ಹಿಡಿದು ಮಲಗಿ ಕೊಂಡಿದ್ದವನ್ಯಾರು?

---

## ವಿವಿಧ ವರ್ತಮಾನಗಳು.

ಉತ್ತರದಲ್ಲಿ ಶೂಜಿಯಾಬಾದ ಪಟ್ಣದಲ್ಲಿ ೨೬ ತಾಸುಗಳಲ್ಲಿ ೨೨ ಅಂಗುಲ ಮಳೆ ಬಿತ್ತಂತೆ. ಇದು ಬಹಳ ವಿಪರೀತವೇ.

ಮದ್ರಾಸ ಸಂಸ್ಥಾನದಲ್ಲಿ ಕಳೆದ ವರುಷ ೬,೮೬೮ ಕಾಡ ಮೃಗಗಳು ಹತ ಮಾಡಲ್ಪಟ್ಟವು; ಇವುಗಳಲ್ಲಿ ಇನ್ನೂರರ ಮೇಲೆ ಹುಲಿಗಳು, ಐನೂರರ ಮೇಲೆ ಹಾವುಗಳು, ಎಂಟು ನೂರರ ಮೇಲೆ ಚಿರತೆಗಳು ಇದ್ದವು.

ಮೈಸೂರು ಶೀಮೆಯ ಮುಂಚಿನ ಧೊರೆಗಳಾಗಿದ್ದ ಮಹಾರಾಜ ಕೃಷ್ಣರಾಜ ಒಡೆಯರ ಪತ್ನಿಯಾಗಿದ್ದ ಹಿರೇ ರಾಣಿಯವರು ವೃದ್ಧಾಪ್ಯದಲ್ಲಿ ಮೃತ ಪಟ್ಟರು.

ವಿಶಾಖಪಟ್ಣದಲ್ಲಿ ಕಠಿಣ ತರದ ವಾಂತಿಭೇದಿ ರೋಗವು ಪ್ರಬಲವಾಗಿ, ಬಹು ಜನರು ಬಿದ್ದು ಹೋದರಂತೆ.

ಬರಗಾಲ ಬಿದ್ದರೆ ಹೊಟ್ಟೆಗಿಲ್ಲದೆ ಸತ್ತು ಪ್ರಜೆಗಳು ಕಡಿಮೆಯಾಗುವದು ಒಂದೇ ಅಲ್ಲಾ, ಜನನಗಳು ಸಹ ಕಡಿಮೆಯಾಗುವದೂ ಅದರ ಫಲವಾಗಿದೆ. ಉತ್ತರ ಆರ್ಕಾಡಿನಲ್ಲಿ ಮಾಡಿದ ಲೆಖ್ಖದಿಂದ ಕಳೆದ ಐದು ವರುಷಗಳ ಅಗೊಸ್ತು ತಿಂಗಳ ಜನನಗಳ ಸರಾಸರಿ ಸಂಖ್ಯೆ ೪,೫೫೨ ಆಗಿರಲಾಗಿ ಈ ವರುಷದಲ್ಲಿ ೨,೪೬೭ ಮಾತ್ರವೇ ಎಂತ ತಿಳಿದು ಬರುತ್ತದೆ; ಹಾಗಾದರೆ ಆ ತಿಂಗಳಲ್ಲಿ ೨,೦೮೫ ಜನನಗಳು ಕಮ್ಮಿಯಾದವು.

ಹೊಟ್ಟೆಗಿಲ್ಲದ ಜನರು ಮುಂಬೈ ಟೆಂಕಶಾಲೆಗೆ ಮಾರಿ ಕೊಟ್ಟ ಬೆಳ್ಳಿಯ ಆಭರಣಗಳ ಮೌಲ್ಯವು ಕಳೆದ ಮೇ ತಿಂಗಳಲ್ಲಿ ೮೩೬,೦೩೪ ರೂಪಾಯಿ 'ಆಗಿತ್ತು. ಇದು ಸಪ್ತಂಬರ ತಿಂಗಳ ವರೆಗೆ ಏರುತ್ತಾ ೧,೮೯೬,೯೫೦ ರೂಪಾಯಿ ಆಯಿತು; ಈಗ ಕಡಿಮೆಯಾಗುತ್ತಾ ಬರುತ್ತದೆ;

ಸದರಿ ಆಭರಣಗಳಲ್ಲಿ ಕೆಲ ದೇವತೆಗಳ ಪ್ರತಿಮೆಗಳೂ ಇದ್ದವಂತೆ.

ಡಿಲ್ಲಿಯಲ್ಲಿ ಇಬ್ಬರು ವಾಣೇರು ಅಂದರೆ ಮಾರವಾಡಿಗಳು ಯಥೇಚ್ಛ ಲಾಭವಾಗ ಬೇಕೆಂಬ ಆಶೆಯಿಂದ ಪುಷ್ಕಳ ಧಾನ್ಯವನ್ನು ಸಾಚಿ ಮಾಡಿ ಇಟ್ಟಿದ್ದರು. ಆದರೆ ಅವರ ಅಪೇಕ್ಷೆ ಅನುಕೂಲವಾಗದೆ, ಅನಾವೃಷ್ಟಿ ಹೋಗಿ ಧಾನ್ಯ ದವಸದ ಧಾರಣೆ ಏರದೆ, ವಾಯುವ್ಯ ಪ್ರಾಂತದಲ್ಲಿ ಮಳೆ ಬರುವಂಥಾದ್ದಾಯಿತು. ಅದರಿಂದ ಅವರಿಗೆ ಅತಿರೇಕ ದುಃಖವಾಗಿ ಅವರು ತಮ್ಮ ಪ್ರಾಣ ತಾವೇ ಕಳಕೊಂಡರು. ಮರೀ ಎಂಬಲ್ಲಿ ಒಬ್ಬ ವಾಣಿ ಇದೇ ಕಾರಣದಿಂದ ಭಾವಿಯಲ್ಲಿ ಹಾರಿ, ಆತ್ಮಹತ್ಯ ಮಾಡಿ ಕೊಂಡನು. ಇನೊಬ್ಬ ವಾಣೇರನಿಗೆ ಅದೇ ಕಾರಣದಿಂದ ದುಃಖವಾಯು ಉತ್ಪನ್ನವಾಗಿ ಹುಚ್ಚು ಹಿಡಿಯಿತು. ಅತಿ ಲೋಭವು ನಾಶನದ ಮೂಲವಾಗಿದೆ. ಈ ರೀತಿಯಿಂದ ತಮ್ಮ ಪೆಟ್ಟಿಗೆ ತುಂಬಿಸುವವರು ತಮ್ಮ ದೇಶಕ್ಕೆ ಶತ್ರುಗಳಲ್ಲದೆ ಮಿತ್ರರಲ್ಲಾ.

ಕಲ್ಕತದಲ್ಲಿ ಬಾಬು ಮಹೇಂದ್ರಲಾಲ್‌ದಾಸ್ ಎಂಬವನೊಬ್ಬನೂ ಬಾಬು ನೀಲಾಂಬರ ಗಂಗುಳಿ ಎಂಬವನೊಬ್ಬನೂ ಕ್ರೈಸ್ತ ಸಭೆಯನ್ನು ಸೇರಿದರು.

ಲಾಹೋರ್ ಪಟ್ಣದಲ್ಲಿ ಹೊಸದೊಂದು ಅಧ್ಯಕ್ಷಸ್ಥಾನ ನೇಮಕವಾಗಿದೆ, ಈ ಸ್ಥಾನವನ್ನು ಚರ್ಚ್ ಮಿಶ್ಯನಿನಲ್ಲಿ ಅನೇಕ ವರುಷ ಮಿಶ್ಯನೆರಿಯಾಗಿದ್ದ ಫ್ರೆಂಚ ಧೊರೆಗೆ ಕೊಡುವದಕ್ಕೆ ಚಕ್ರವರ್ತಿನಿಯವರು ಒಪ್ಪಿದ್ಧಾರೆ.

ನಮ್ಮ ದೇಶದಲ್ಲಿ ಬೇರೆ ಬೇರೆ ಮಿಶ್ಯನುಗಳ ಮತ್ತು ಸಂಘಗಳ ಸಂಬಂಧದಲ್ಲಿ ೧೧೬ ಮಂದಿ ದೊರೆಸಾನಿಗಳು ಸುವಾರ್ತೆ ಪ್ರಸಿದ್ಧಿ ಮಾಡುವ ಉದ್ಯೋಗದಲ್ಲಿದ್ಧಾರೆ.

ಅದವಾನಿ ತಾಲೂಕಿನಲ್ಲಿ ಒಬ್ಬ ಮಣಿಗಾರನೂ ಅವನ ಮಗನೂ ದುಷ್ಕಾಲದಿಂದ ಕಷ್ಟ ಪಡುವ ಬಡ ಜನರ ಸಹಾಯಾರ್ಥವಾಗಿ ಸರಕಾರದವರು ನೇಮಿಸಿದ ಹಣದಲ್ಲಿ ವಂಚನೆ ಮಾಡಿ, ಅಪಹರಿಸಿದ್ದರಿಂದ, ಅವನಿಗೆ ಒಂದು ವರುಷ ಬಂದಿಖಾನೆ ಒಂದು ಸಾವಿರ ರುಪಾಯಿ ಜುಲುಮಾನೆ, ಅವನ ಮಗನಿಗೆ ಮೂರು ತಿಂಗಳ ಕಠಿಣ ಫಿತುವೆ ಸಹ ನೇಮಕವಾಯಿತು. ಮದ್ರಾಸ್ ಸಂಸ್ಥಾನದಲ್ಲಿ ಇಂಥಾ ಮಣಿಗಾರರು ಎಷ್ಟು ಮಂದಿ ಇದ್ಧಾರೋ? ಗಡ್ಡಕ್ಕೆ ಬೆಂಕಿ ತಾಗಿದಾಗ ಹಪ್ಪಳ ಸುಡಲಿಕ್ಕೆ ಬಂದಂತೆ.

ಇದೇ ಎಪ್ರಿಲ್ ತಿಂಗಳಲ್ಲಿ ಮುಂಬಾಯಿಯಲ್ಲಿ ಸಿದ್ಧವಾದಂಥಾ, ಪರದೇಶಗಳಿಗೆ ಕಳುಹಿಸಿದ ಜವಳಿ ವಿವರ—ಕೋರಾ ಮತ್ತು ಬಿಳೇ ವಸ್ತ್ರ ೧,೬೪೨,೬೩೩ ಗಜ, ರಂಗು ಹಾಕಿದ ವಸ್ತ್ರ ೧೯೩,೭೪೪ ಗಜ.

ಬ್ರಹ್ಮಸಮಾಜವೆಂಬದರಲ್ಲಿ ಜನರು ಮೊದಲು ಪಡುತ್ತಿದ್ದ ಆತುರವು ಕುಂದುತ್ತಾ ಬರುತ್ತದೆ. ಅದರ ಅಗ್ರೇಸರನಾಗಿದ್ದವನು ಏಕಾಂತವಾಸಕ್ಕೆ ಹೋದವನಾಗಿ, ಬಹಿರಂಗಕ್ಕೆ ಬರುವದು ಕಡಿಮೆ ಮಾಡಿದ್ಧಾನೆ. ಎಲ್ಲಾ ದೊಡ್ಡ ದೊಡ್ಡ ಶಾಲೆಗಳ ಸಣ್ಣ ಶಾಲೆಗಳ ಯೌವನಸ್ಥರು ನಮ್ಮ ಪಕ್ಷದವರಷ್ಟೆ ಎಂತ ಬ್ರಹ್ಮಸಮಾಜದವರು ಜಲ್ಲಿ ಕೊಚ್ಚುವ ಕಾಲ ಹೋಯಿತು; ಈಗಿನ ಯೌವನಸ್ಥರು ಅದರಲ್ಲಿ ಮನಸ್ಸೇ ಇಡುವದಿಲ್ಲಾ. ಕಲ್ಕತ್ತ ಪಟ್ಣದಲ್ಲಿ ಅವರ ಸಮಾಜದ ಕೆಲಸ ನಿಂತು ಹೋಗಿದೆ; ಮೊದಲು ಆ ಸಮಾಜದವರಲ್ಲಿದ್ದ ಚುರುಕು, ಆಸಕ್ತಿ, ಪ್ರಸಂಗ, ಬೋಧನೆ ಯಾವತ್ತೂ ಕಡಿಮೆಯಾಗಿದೆ. ಈ ಸ್ಥಿತಿಗೆ ನಾವು ಆಶ್ಚರ್ಯ ಪಡ ಬಾರದು. ಆತ್ಮಗಳಿಗೆ ಸಮಾಧಾನವೂ ನೀತಿಜೀವನಕ್ಕೆ ಬಲವೂ ಯೇಸು ಕ್ರಿಸ್ತನಲ್ಲಿ ಆತನ ರಕ್ಷಣೆಯಲ್ಲಿ ಹೊರ್ತು ಮತ್ತೆಲ್ಲಿಯೂ ದೊರಕಲಾರದು.

ಆದೇನ್ ಪಟ್ಣದಿಂದ ಬಂದ ವರ್ತಮಾನದಿಂದ ಅರಾಬ್ಯದ ಅನೇಕ ಗೋತ್ರಗಳು ತುರ್ಕ ಸರಕಾರದ ಮೇಲೆ ದಂಗೆ ತೆಗಿಯಲಿಕ್ಕಿದ್ಧಾರೆಂತ ತಿಳಿದು ಬರುತ್ತದೆ.

ಈಗ ನಡಿಯುವ ಯುದ್ಧದಲ್ಲಿ ಇಂಗ್ಲಿಷರು ತುರ್ಕರ ಮೇಲೆ ಸ್ನೇಹಭಾವದವರೂ, ಅಮೇರಿಕ

ದವರು ರುಸ್ಯರ ಮೇಲೆ ಒಲಿಯುವವರೂ ಆಗಿದ್ದರೂ, ರುಸ್ಯರು ಇಂಗ್ಲಿಷ ದೇಶದಲ್ಲಿ ಮಾಡಿದ ಆಯುಧಗಳ್ಳನ್ನೂ ತುರ್ಕರು ಅಮೇರಿಕದಲ್ಲಿ ಮಾಡಿದ ಆಯುಧಗಳನ್ನೂ ಪ್ರಯೋಗ ಮಾಡುವವರಾಗಿದ್ದಾರೆ.

ಇತ್ತಲಾಗಿನ ದಿನಗಳಲ್ಲಿ ತುರ್ಕರಿಗೆ ಮತ್ತೂ ಮತ್ತೂ ಪೆಟ್ಟು ಬೀಳುವದಾಯಿತು. ಮೊಂತೆನಿಗ್ರೊ ಶೀಮೆಯವರು ಕೆಲವು ತುರ್ಕ್ಯ ಠಾಣೆಗಳನ್ನೂ ಕಿಲ್ಲೆಗಳನ್ನೂ ಸಾಧಿಸಿ ಹಿಡುಕೊಂಡರು. ಮತ್ತು ರುಸ್ಯ ಸೈನ್ಯದಲ್ಲಿ ಜರ್ಮನ್ ವಂಶದವರಾದ ಸೇನಾಧಿಪರಿಗೆ ಹೆಚ್ಚು ಅಧಿಕಾರವ್ಯಾಪ್ತಿ ದೊರಕಿದ ಈಚೆಯಲ್ಲಿ ರುಸ್ಯರು ಚನ್ನಾಗಿ ಮೇಲಾಡುತ್ತಾ ಬಂದು, ಕೆಲವು ಕಡೆಗಳಲ್ಲಿ ಜಯಪ್ರದರಾಗಿ ಮುಂದೆ ಕೂಚು ಮಾಡ ಶಕ್ತರಾದರು.

ತುರ್ಕ್ಯ ಅರ್ಮೇನ್ಯದಲ್ಲಿ ರುಸ್ಯರು ಕಾರ್ಸ್ ಎಂಬ ದೊಡ್ಡ ಕೋಟೆಯನ್ನು ಸಾಧಿಸಿ ಕೊಂಡು, ೭೦೦೦ ಮಂದಿಯ ದಳವನ್ನೂ ೩೦೦ ತೋಫುಗಳನ್ನೂ ಹಿಡಿದರು.

ಈ ಪುಸ್ತಕದ ೭೧ನೇ ಪಾನಿನಲ್ಲಿ ಎರಡು ಬೈಬಲ್ ಸಂಘಗಳ ಪ್ರಸ್ತಾಪವಾಯಿತು. ಬೆಂಗಳೂರ ಬೈಬಲ್ ಸಂಘಕ್ಕೋಸ್ಕರ ಮಂಗಳೂರಲ್ಲಿ ರೂಪಾಯಿ ೨೦, ಕಾರ್ಕಳದಲ್ಲಿ ರೂ. ೧, ಗುಳೆದಗುಡ್ಡದಲ್ಲಿ ರೂ. ೨, ಹೊನ್ನಾವರದಲ್ಲಿ ರೂ. ೬ ಆ. ೨ ಪೈ ೩, ಹುಬ್ಬಳ್ಳಿಯಲ್ಲಿ ರೂ. ೧೬, ಬೆಟ್ಟಿಗೇರಿಯಲ್ಲಿ ರೂ. ೧೦ ಕೂಡಿಸೋಣಾಯಿತು. ಮದ್ರಾಸ್ ಬೈಬಲ್ ಸಂಘಕ್ಕೋಸ್ಕರ ಮಂಗಳೂರಲ್ಲಿ ರೂ. ೧೦೮ ಆ. ೧೪ ಪೈ ೧, ಮೂಲ್ಕಿಯಲ್ಲಿ ರೂ. ೩ ಆ. ೧೦ ಪೈ ೨, ಉಡ್ಪಿಯಲ್ಲಿ ರೂ. ೬ ಆ. ೧೨ ಪೈ ೩, ಕಾರ್ಕಳದಲ್ಲಿ ರೂ. ೨, ಬಸರೂರಿನಲ್ಲಿ ರೂ. ೫, ಗುಳೆದಗುಡ್ಡದಲ್ಲಿ ರೂ. ೨ ಕೂಡಿಸೋಣಾಯಿತು.

ಈ ಭೂಗೋಳದಲ್ಲಿ ಸರಾಸರಿ ಒಂದರ್ಬುದ ನಾಲ್ವತ್ತು ಕೋಟಿ ಮನುಷ್ಯರಿದ್ದಾರೆ. ಈ ಮಹಾ ಸಂಖ್ಯೆಗೆ ಒಂದು ಕೋಟಿ ಅರವತ್ತು ಲಕ್ಷ ಸತ್ಯವೇದಪ್ರತಿಗಳು ಮಾತ್ರ ಛಾಪೆಯಾಗಿವೆ. ಇಷ್ಟು ಪುಸ್ತಕಗಳಲ್ಲಿ ನಾಲ್ಕರಲ್ಲಿ ಮೂರಂಶ ಬೈಬಲ್ ಸಂಘದವರೂ, ಅಮೇರಿಕದಲ್ಲಿಯೂ ವಿಲಾಯತಿಯಲ್ಲಿಯೂ ಇರುವ ಬೇರೆ ಸಂಘದವರೂ ಒದಗಿಸಿ ಕೊಟ್ಟಿದ್ದಾರೆ. ಆ ಸತ್ಯವೇದಗ್ರಂಥಗಳಲ್ಲಿ ಒಂದುವರೆ ಅಂಶ ಸುವಾರ್ತಾ ಪಕ್ಷದ ಕ್ರೈಸ್ತರಿಗೆ ಸರಿಯಾದವು. ಹೆಚ್ಚುಕಡಿಮೆ ನೂರು ಕೋಟಿ ಇರುವ ಮೂರ್ತಿಪೂಜಕರು ಯೆಹೂದ್ಯರು ಮುಸಲ್ಮಾನರು ಇವರಿಗೆ ತೊಂಭತ್ತು ಲಕ್ಷ ಪ್ರತಿಗಳು ಮಾತ್ರ ಕೊಡಲಾದವು. ಈ ಮಹಾ ಕೆಲಸದಲ್ಲಿ ಬ್ರಿಟಿಷ್ ಎಂಡ್ ಫೊರಿನ್ ಸೊಸೈಟಿ ಎಂಬ ಸಂಘದವರು ಈ ಕಳೆದ ಎಪ್ಪತ್ತು ವರುಷಗಳಲ್ಲಿ ಏಳು ಕೋಟಿ ಅರವತ್ತು ಲಕ್ಷ ಪ್ರತಿಗಳನ್ನು ಇನ್ನೂರ ಹನ್ನೊಂದು ಭಾಷೆಗಳಲ್ಲಿ ಛಾಪಿಸಿ ಕೊಟ್ಟು ಸಹಾಯ ಮಾಡುವದಕ್ಕೆ ಶಕ್ತರಾದರು.

ಬಹು ಸೂಕ್ಷ್ಮವಾಗಿ ಮಾಡಿದ ಸರಾಸರಿ ಲೆಖ್ಖದಲ್ಲಿ ಹತ್ತು ಲಕ್ಷಕ್ಕಿಂತ ಹೆಚ್ಚು ಸತ್ಯವೇದದ ಪ್ರತಿಗಳು ವರುಷಂಪ್ರತಿ ಛಾಪೆಯಾಗುತ್ತವೆ, ಒಂದು ಇಂಗ್ಲಿಷು ಸತ್ಯವೇದಗ್ರಂಥವು ಅಥವಾ ಹೊಸ ಒಡಂಬಡಿಕೇ ಗ್ರಂಥವು ಹನ್ನೆರಡು ಸೆಕುಂದಗಳಿಗೊಮ್ಮೆ ಛಾಪಿಸಲ್ಪಡುತ್ತದೆ. ಪ್ರತಿ ನಿಮಿಷಕ್ಕೆ ಐದು ಸತ್ಯವೇದಗ್ರಂಥಪುಸ್ತಕಗಳಾಗಲಿ ಹೊಸ ಒಡಂಬಡಿಕೇ ಪುಸ್ತಕಗಳಾಗಲಿ ಲೋಕಕ್ಕೆ ಕೊಡಲ್ಪಡುತ್ತವೆ. ದೇವರ ವಾಕ್ಯಕ್ಕೆ ವಿರೋಧವಾಗಿರುವ ಪುಸ್ತಕಗಳು ಸ್ವಲ್ಪ ಕಾಲ ಮೆರೆಯುತ್ತವೆ, ಹೌದು, ಅದೇ ತರದ ಹೊಸ ಪುಸ್ತಕಗಳು ಪ್ರಸಿದ್ಧಿಯಾಗುವಾಗ್ಯೆ ಹಳೆಯವುಗಳು ಮರೆತು ಹೋಗುತ್ತವೆ. ಮತ್ತು ಒಂದು ಸ್ಥಳದಲ್ಲಿ ಹೊಸ ವಿಧದ ಪಾಷಂಡವು ಎದ್ದು ಬಂದಲ್ಲಿ ಅದನ್ನು ಖಂಡಿಸಿ, ಮನುಷ್ಯಜ್ಞಾನದ ಮೌಢ್ಯವನ್ನು ತೋರಿಸಿ, ರಕ್ಷಕನಾದ ದೇವರಲ್ಲಿಯ ವಿಶ್ವಾಸವನ್ನು ಪ್ರಬಲ ಪಡಿಸುವವನೊಬ್ಬನೂ ಮತ್ತೊಂದು ಸ್ಥಳದಲ್ಲಿ ಏಳುತ್ತಾನೆ.

ಸರ್ವ ಪೃಥ್ವಿಯಲ್ಲಿ ೭,೦೦೦,೦೦೦ ಯೆಹೂದ್ಯರು ಇದ್ದಾರಂತೆ.

ಲಂಡನ ಪಟ್ಣದಲ್ಲಿ ೧೮೪೯ನೇ ವರ್ಷದಿಂದ ೧೮೭೪ನೇದರ ವರೆಗೆ ೨೬೦,೦೦೦ ಹೊಸ ಮನೆಗಳು ಕಟ್ಟಲ್ಪಟ್ಟವು; ಹಾಗಾದರೆ ಆ ನಗರದಲ್ಲಿ ವರ್ಷಕ್ಕೆ ಸರಾಸರಿ ೧೦,೮೦೦ ಹೊಸ ಮನೆಗಳನ್ನು ಕಟ್ಟುತ್ತಾರೆಂದು ತೋರುತ್ತದೆ. ವ್ಯಾಪಾರ ಬಹುಶಾ ಮೆರೆಯುತ್ತಿದ್ದ ಒಂದು ವರುಷದಲ್ಲಿ ೧೮,೦೦೦ ಹೊಸ ಮನೆಗಳನ್ನು ಕಟ್ಟಿದರು.

ಇಂಗ್ಲಾಂಡಿನ ಪರ್ಥ್‍ಶೈರ್ ಪ್ರಾಂತದಲ್ಲಿ ಒಬ್ಬನಿಗೆ ಲೋಕಪ್ರಸಿದ್ಧವಾದ ಕೊಹಿನೂರ್ ಎಂಬ ಮಹಾ ಪ್ರಭೆಯುಳ್ಳ ವಜ್ರವು ಶಿಕ್ಕಿಯದೆ; ಅದರ ಮೌಲ್ಯ ೧೯೫,೦೦೦ ರೂಪಾಯಿ.

ಯುನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ಒಬ್ಬನು ನೀರಿನಿಂದ ಗಾಸ್ ಮಾಡುವ ಯುಕ್ತಿ ಕಂಡಿದ್ಧಾನೆ. ಈ ಗಾಸಿನಿಂದ ದೀಪ ಹಚ್ಚಿದರೆ, ಮಹಾ ಪ್ರಕಾಶ ಬೀಳುತ್ತದೆ.

ಅಮೇರಿಕದಲ್ಲಿ ೧೨,೦೦೦ ದಂತವೈದ್ಯರಿದ್ಧಾರೆ. ಜನರ ಹಲ್ಲು ಕೂಡ್ರಿಸುವ ಕೆಲಸಕ್ಕೆ ಅವರು ವರುಷಂಪ್ರತಿ ಅರ್ಧ ಟನ್ ಅಂದರೆ ಎರಡು ಖಂಡಿ ಭಂಗಾರ ಖರ್ಚು ಮಾಡುತ್ತಾರೆ.

ಫೀಜಿ ದ್ವೀಪಗಳಲ್ಲಿ ಈಗ ಆದಿತ್ಯವಾರದ ಶಾಲೆಗಳಿಗೆ ಬರುವ ಮಕ್ಕಳು ೪೦,೦೦೦ ಇದ್ಧಾರೆ; ನಾಲ್ವತ್ತು ವರುಷಗಳ ಹಿಂದೆ ಆ ದ್ವೀಪಗಳವರು ಮನುಷ್ಯಮಾಂಸ ತಿನ್ನುವವರಾಗಿದ್ದರು.

ಔಸ್ಟ್ರೇಲ್ಯ ದ್ವೀಪದ ಮುಖ್ಯ ಪಟ್ಣವಾದ ಸಿಡ್ನಿಯಲ್ಲಿ ಸರಕಾರಿ ಜ್ಯೋತಿಷ್ಯನಾದ ರಸಲ್ ಎಂಬವನನ್ನು ಕೊಲ್ಲುವದಕ್ಕೆ ಕೆಲವರು ಪ್ರಯತ್ನ ಮಾಡಿದ್ದು ಹ್ಯಾಗಂದರೆ: ಒಂದು ಪೆಟ್ಟಿಗೆ ಮಾಡಿ, ಅದರಲ್ಲಿ ಬಾರು ಆಗಿ ಹಾರುವ ಪದಾರ್ಥ ತುಂಬಿಸಿ, ಆ ಪೆಟ್ಟಿಗೆಯ ಬಾಯಿ ತೆರಿಯುವಾಗಲೇ ಆ ಪದಾರ್ಥಕ್ಕೆ ಬೆಂಕಿ ತಾಗಿ, ಭಗ್ಗನೆ ಹಾರಿ, ತತ್ಕಾಲವೇ ಕೊಲ್ಲುವ ಹಾಗೆ ಯುಕ್ತಿ ಮಾಡಿದ್ದರು. ಆ ಜ್ಯೋತಿಷ್ಯನಿಗೆ ಆ ಕೃತ್ರಿಮ ಬೇಗನೇ ತಿಳಿದು ಬಂದದು ಒಳ್ಳೇದಾಯಿತು; ಇಲ್ಲವಾದರೆ, ಅವನ ಜೀವಕ್ಕೆ ಹಾನಿ ಬರುತ್ತಿತ್ತು. ಈ ಪೆಟ್ಟಿಗೆ ಮಾಡಿದವನು ಎಂಥಾ ಬುದ್ಧಿವಂತನಾಗಿದ್ದಾನು! ಆದರೆ ದುಷ್ಕೃತದಿಂದ ತನ್ನ ಬುದ್ಧಿಯನ್ನು ಕೆಡಿಸಿ ಕೊಂಡನು. ದೇವರು ಕೊಟ್ಟ ವರಗಳನ್ನು ದುರುಪಯೋಗ ಮಾಡಿ, ಕೆಟ್ಟ ಕೆಲಸಕ್ಕೆ ಹಚ್ಚುವದು ಮಹಾ ಪಾಪ. ದೇವರು ಆಗಾಗ್ಯೆ ದುಷ್ಟರ ದುರ್ಯುಕ್ತಿಗಳನ್ನು ಪೂರ್ಣವಾಗುವದಕ್ಕೆ ಬಿಡುವದಿಲ್ಲಾ ಎಂಬದೂ ಈ ಸಂಗತಿಯಿಂದ ಕಂಡು ಬರುತ್ತದೆ.

ತಗಣೇ ಉಪದ್ರ ಈ ದೇಶದಲ್ಲಿ ಬಹಳ. ಕುರ್ಚಿ ಮಂಚ ಮೊದಲಾದ ಸಾಮಾನಿಗೆ (ಮುಖ್ಯವಾಗಿ ಸಂದುಗಳಲ್ಲಿ) ಕಾಯುವ ಪಟಿಕಾರದ ನೀರನ್ನು (Alum Water) ಹೊಯಿದರೆ, ತಗಣಿ ಸತ್ತು ಹೋಗುವದಲ್ಲದೆ, ಸದರಿ ಸಾಮಾನಿಗೆ ಇನ್ನು ಬೀಳಲಿಕ್ಕಿಲ್ಲವಂತೆ. ಹಾಗೂ ಆ ನೀರು ಕಲಸಿದ ಸುಣ್ಣದ ನೀರನ್ನು ಮನೆಯ ಗೋಡೆಗಳಿಗೆ ತೆಗಿಸಿದರೆ (ಸಾರಿಸಿದರೆ), ತಗಣಿಯೂ ನೊಣಗಳೂ ಇನ್ನು ಕೂತು ಕೊಳ್ಳದೆ ಹೋಗುತ್ತವೆ.

ಅಕ್ಟೋಬರ್ ತಿಂಗಳಿನ ಮಧ್ಯದಲ್ಲಿ ಇಂಗ್ಲಂಡದಲ್ಲಿ ಮಹಾ ಭೀಕರ ತುಫಾನಾಗಿ, ಹೇರಳ ಧನ ನಗಗಳು ನಷ್ಟವಾಗಿ ಹೋಗಲಿಕ್ಕೆ ಕಾರಣವಾಯಿತಂತೆ.

ಅಕ್ಟೋಬರ್ ೨೫ರಲ್ಲಿ ಹೊಸ ಮಿಶ್ಯನ್ ಶಾಖೆಯಾದ ಬಸರೂರಿನಲ್ಲಿ ಒಂದು ದೇವಸ್ಥಾನವೂ ಪೂಜೇಭಟ್ಟರು ವಾಸವಾಗಿದ್ದ ನಾಲ್ಕು ಮನೆಗಳೂ ಬೆಂಕಿ ಹೊತ್ತಿ, ಅಗ್ನೀಶ್ವರನ ಪಾಲಾಗಿ ಹೋದವಂತೆ.

ಅಕ್ಟೋಬರ್ ೧೮ರಲ್ಲಿ ನಮ್ಮ ಬಾಸಲ್ ಮಿಶ್ಯನಿನ ಕಮಿಟಿಯೆಂಬ ನಾಯಕಸಭೆಯ ಅಗ್ರಸ್ಥರು ಪರವನ್ನೈದಿದರು.

Printed at the Basel Mission Press, Mangalore.

# ... ಪತ್ರವು.

(...ಕಟವಾಗುವಂಥಾದ್ದು.)

...ಪುಸ್ತಕವು.

K. UNIV. BIBL. TÜBINGEN

...ALORE ...soever ... are true ... TRACT DEPOSITORY

...ALORE
...k & Tract Depository
...87?

Ci XIV 114